ಹೊಸ ಶತಮಾನದ ಕನ್ನಡ ವಿಮರ್ಶೆಯ ಪ್ರವೃತ್ತಿಗಳು

(ಕ್ರಿ.ಶ. ೨೦೦೦ದಿಂದ ೨೦೧೦ರವರೆಗೆ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ದಿನೇಶ್ ಕೆ. ಎಸ್.

ಮಾರ್ಗದರ್ಶಕರು

ಡಾ. ಬಿ. ಪಿ. ಸಂಪತ್ ಕುಮಾರ

ಪ್ರಾಧ್ಯಾಪಕರು

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು

ಉಜಿರೆ - 574240

ಭಾಷಾನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩೨೭೬

೨೦೧೮

ಹೊಸ ಶತಮಾನದ ಕನ್ನಡ ವಿಮರ್ಶೆಯ ಪ್ರವೃತ್ತಿಗಳು

(ಕ್ರಿ.ಶ. ೨೦೦೦ದಿಂದ ೨೦೧೦ರವರೆಗೆ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ದಿನೇಶ್ ಕೆ. ಎಸ್.

ಮಾರ್ಗದರ್ಶಕರು

(ಡಾ. ಬಿ. ಪಿ. ಸಂಪತ್ ಕುಮಾರ)

ಪ್ರಾಧ್ಯಾಪಕರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ – ೫೭೪೨೪೦

ಭಾಷಾನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩೨೭೬
೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಹೊಸ ಶತಮಾನದ ಕನ್ನಡ ವಿಮರ್ಶೆಯ ಪ್ರವೃತ್ತಿಗಳು (ಕ್ರಿ. ಶ. ೨೦೦೦ದಿಂದ ೨೦೧೦ರವರೆಗೆ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ದಿನೇಶ್ ಕೆ. ಎಸ್.** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್. ಡಿ. ಪದವಿಗಾಗಿ ಸಿದ್ಧಪಡಿಸಿದ್ದು, ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ: ೧೬.೦೧.೨೦೧೮

ಸ್ಥಳ: ಉಜಿರೆ

(ಡಾ. ಬಿ. ಪಿ. ಸಂಪತ್ ಕುಮಾರ)

ಪ್ರಾಧ್ಯಾಪಕರು

ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು

ಉಜಿರೆ – ೫೭೪೨೪೦

ಡಾ. ಬಿ. ಪಿ. ಸಂಪತ್ ಕುಮಾರ
ಮುಖ್ಯಸ್ಥ, ಕನ್ನಡ ವಿಭಾಗ
ಧರ್ಮಸ್ಥಳ ಮಂಜುನಾಥೇಶ್ವರ ಕಾಲೇ
ಉಜಿರೆ - ೫೭೪ ೨೪೦

ಪ್ರಮಾಣ ಪತ್ರ

ಹೊಸ ಶತಮಾನದ ಕನ್ನಡ ವಿಮರ್ಶೆಯ ಪ್ರವೃತ್ತಿಗಳು (ಕ್ರಿ.ಶ. ೨೦೦೦ದಿಂದ ೨೦೧೦ರವರೆಗೆ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಬಿ. ಪಿ. ಸಂಪತ್ ಕುಮಾರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್. ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ದಿನೇಶ್ ಕೆ. ಎಸ್)
ಸಂಶೋಧನಾ ವಿದ್ಯಾರ್ಥಿ
ಡಾ. ಹಾಮಾನಾ ಸಂಶೋಧನ ಕೇಂದ್ರ
ಉಜಿರೆ – ೫೭೪೨೪೦

ದಿನಾಂಕ: ೧೬.೦೧.೨೦೧೮
ಸ್ಥಳ: ಉಜಿರೆ

ಹೊಸ ಶತಮಾನದ ಕನ್ನಡ ವಿಮರ್ಶೆಯ ಪ್ರವೃತ್ತಿಗಳು

(ಕ್ರಿ. ಶ. ೨೦೦೦ದಿಂದ ೨೦೧೦ರವರೆಗೆ)

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ದೇಶದಲ್ಲಿನ ವಾತಾವರಣ ಬದಲಾದಾಗ ಜನರ ಜೀವನ ಶೈಲಿ ಮತ್ತು ಆಲೋಚನೆಗಳಲ್ಲಿ ಗಂಭೀರವಾದ ಪಲ್ಲಟಗಳು ಗೋಚರಿಸುತ್ತವೆ. ಮಾನವನ ಬದುಕನ್ನೆ ಪ್ರಧಾನವಾಗಿ ಗ್ರಹಿಸಿ ಅಭಿವ್ಯಕ್ತಿಸುವ ಸಾಹಿತ್ಯ ಈ ಬದಲಾವಣೆ ಮತ್ತು ಬೆಳವಣಿಗೆಗಳಿಗೆ ಒಂದು ಸೂಕ್ತ ಚೌಕಟ್ಟನ್ನು ನಿರ್ಮಿಸಲು ಯತ್ನಿಸುತ್ತಿರುತ್ತದೆ. ಇಂತಹ ಸಾಹಿತ್ಯವನ್ನು ವಿಶ್ಲೇಷಿಸುವ, ವ್ಯಾಖ್ಯಾನಿಸುವ ಮತ್ತು ಮೌಲ್ಯಮಾಪನ ಮಾಡುವ ವಿಮರ್ಶೆಯು ಒಂದು ನಿರ್ದಿಷ್ಟ ಕಾಲ, ದೇಶ, ಸಮುದಾಯ ಮತ್ತು ಸಂಸ್ಕೃತಿಗಳ ಮೊತ್ತವಾಗಿ ಸಾಹಿತ್ಯ ಏನನ್ನು ಹೇಳುತ್ತಿದೆ ಎಂಬುದನ್ನು ನಮಗೆ ಮನದಟ್ಟು ಮಾಡಿಕೊಡುತ್ತದೆ.

ಆದರೆ ಇಂತಹ ಸಾಹಿತ್ಯ ವಿಮರ್ಶೆ ಸಾವಿರ ವರ್ಷಗಳಿಗೂ ಹೆಚ್ಚು ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯದಲ್ಲಿ ಇವತ್ತಿನ ರೂಪದಲ್ಲಿ ಇರಲಿಲ್ಲ. ಆದರೆ ಆಗ ರೂಪುಗೊಳ್ಳುತ್ತಿದ್ದ ಕಾವ್ಯ ಮೀಮಾಂಸೆ ಮತ್ತು ಆ ಕಾಲದಲ್ಲಿ ಕಾವ್ಯ ರಚಿಸುತ್ತಿದ್ದ ಕವಿಗಳು ತಮ್ಮ ಕೃತಿಯ ಆರಂಭ ಮತ್ತು ಅಂತ್ಯಭಾಗಗಳಲ್ಲಿ ಮಾಡುತ್ತಿದ್ದ ಪ್ರಾರ್ಥನೆ, ಸುಕವಿ ಪ್ರಶಂಸೆ, ಕುಕವಿ ನಿಂದನೆ ಮತ್ತು ತಮ್ಮ ಕಾವ್ಯ ಶೈಲಿಯನ್ನು ಕುರಿತು ಹೇಳುತ್ತಿದ್ದ ಪದ್ಯಗಳಲ್ಲಿಯೆ ಕೊಂಚ ಮಟ್ಟಿಗಿನ ವಿಮರ್ಶೆಯ ಹೊಳಹುಗಳನ್ನು ಕಾಣಬಹುದು. ಆದರೆ ವಿಮರ್ಶೆಯು ನಮ್ಮಲ್ಲಿ ಹೆಚ್ಚು ನಿಖರವಾಗಿ ಮತ್ತು ಶಾಸ್ತ್ರಬದ್ಧವಾಗಿ ಬೆಳೆಯಲಾರಂಭಿಸಿದ್ದು ನಾವು ಆಂಗ್ಲ ಭಾಷೆ ಮತ್ತು ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡತೊಡಗಿದಾಗಿನಿಂದಲೇ.

ಅಂದರೆ, ಆಧುನಿಕ ಕನ್ನಡ ಸಾಹಿತ್ಯ ಪಶ್ಚಿಮದ ಆಧುನಿಕ ಸಾಹಿತ್ಯದಿಂದ ಪ್ರೇರಣೆ ಹೊಂದಿದಂತೆ ಕನ್ನಡ ಸಾಹಿತ್ಯ ವಿಮರ್ಶೆ ಕೂಡಾ ಅಲ್ಲಿಂದಲೇ ಪ್ರಭಾವಿತಗೊಂಡಿದೆ. ಆಧುನಿಕ ಕನ್ನಡ ಸಾಹಿತ್ಯ ನವೋದಯ, ಪ್ರಗತಿಶೀಲ, ನವ್ಯ ಮತ್ತು ನವ್ಯೋತ್ತರ ಸಾಹಿತ್ಯ (ದಲಿತ, ಬಂಡಾಯ, ಸ್ತ್ರೀ ಮೊದಲಾದ ಸಂವೇದನೆಗಳ) ರೂಪದಲ್ಲಿ ಹೊರಹೊಮ್ಮಿದಂತೆ ವಿಮರ್ಶೆ ಕೂಡಾ ನವೋದಯ, ನವ್ಯ ಮತ್ತು ನವ್ಯೋತ್ತರ ಧಾರೆಗಳಲ್ಲಿ ಚಾಲ್ತಿಗೆ ಬಂದಿತು. ನವೋದಯ ವಿಮರ್ಶೆ ಆರಂಭದಲ್ಲಿ ಹೆಚ್ಚಾಗಿ ಪರಿಚಯಾತ್ಮಕ ರೂಪದ್ದಾಗಿದ್ದು ಸಹೃದಯ ವಿಮರ್ಶೆಯಾಗಿತ್ತು. ಆದರೆ ಮಾಸ್ತಿ, ಕುವೆಂಪು, ಬೇಂದ್ರೆ, ವಿ. ಸೀ., ಎ. ಆರ್. ಕೃಷ್ಣಶಾಸ್ತ್ರಿ ಮೊದಲಾದವರು ಪಾಶ್ಚಾತ್ಯ ವಿಮರ್ಶಾ ತತ್ವಗಳೊಂದಿಗೆ ಭಾರತೀಯ ಕಾವ್ಯ ಮೀಮಾಂಸೆಯ ತತ್ವಗಳನ್ನು ಮೇಳೈಸಿ ಕನ್ನಡಕ್ಕೆ ವಿಭಿನ್ನವೆನಿಸುವ ವಿಮರ್ಶಾ ಮಾರ್ಗ ರೂಪಿಸಿಕೊಂಡರು.

ಆದರೆ ನವ್ಯ ವಿಮರ್ಶೆ ಕನ್ನಡದಲ್ಲಿ ಶಾಸ್ತ್ರೀಯವೆನ್ನಬಹುದಾದ ವಿಮರ್ಶಾ ವಿಧಾನವನ್ನು ಹುಟ್ಟು ಹಾಕಿತು. ಆದರೆ ಈ ವಿಮರ್ಶಾ ಪ್ರಕಾರ ಕೂಡಾ ರಷ್ಯಾ, ಅಮೆರಿಕ ಮತ್ತು ಯುರೋಪಿನ ನವ್ಯ ವಿಮರ್ಶಕರಿಂದ ನೇರವಾಗಿ ಪ್ರಭಾವಿತಗೊಂಡಿತ್ತು. ಆದರೂ ನವ್ಯ ವಿಮರ್ಶೆ ಕನ್ನಡದಲ್ಲಿ ಪಠ್ಯಕೇಂದ್ರಿತ ವಿಮರ್ಶೆ ಮತ್ತು ಪ್ರಾಯೋಗಿಕ ವಿಮರ್ಶೆಯನ್ನು ಹೆಚ್ಚು ಹೆಚ್ಚು ಬಳಕೆಗೆ ತಂದಿತು. ಆದರೆ ಎಪ್ಪತ್ತರ ದಶಕದ ನಂತರ ಬಂದ ನವ್ಯೋತ್ತರ ಸಾಹಿತ್ಯವನ್ನು ಕುರಿತ ವಿಮರ್ಶೆ ಹಿಂದಿನವುಗಳಂತೆ ಶುದ್ಧ ಸಾಹಿತ್ಯಿಕ ಹಿನ್ನೆಲೆಗಳಿಂದ ಕೂಡಿದುದಾಗಿರದೆ ಹೊಸ ಮಾರ್ಗ ಹಿಡಿದಿತ್ತು. ಅದಕ್ಕೆ ಕಾರಣ ನವ್ಯೋತ್ತರ ಸಾಹಿತ್ಯವು ಪ್ರಧಾನವಾಗಿ ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಲೋಹಿಯವಾದ ಮತ್ತು ಸ್ತ್ರೀವಾದಿ ಚಿಂತನೆಗಳಿಂದ ಹಾಗೂ ಸಮಕಾಲೀನ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಚಳುವಳಿಗಳು, ತೆಲುಗು ಮತ್ತು ಮರಾಠಿ ಭಾಷೆಗಳ ಸಾಹಿತ್ಯದಲ್ಲಿ ಸಂಭವಿಸಿದ್ದ ಹೊಸತನಗಳ ಪ್ರಭಾವದಿಂದ 'ಕಲೆ ಕಲೆಗಾಗಿ ಅಲ್ಲ; ಬದುಕಿಗಾಗಿ' ಎಂಬ ಮನೋಧರ್ಮ ರೂಢಿಸಿಕೊಂಡಿತು. ಇಂತಹ ಸಾಹಿತ್ಯವನ್ನು ವಿಮರ್ಶಿಸಲು ನವ್ಯೋತ್ತರ ವಿಮರ್ಶೆ ಹೊಸ ರೀತಿಯ ವಿಮರ್ಶಾ ಮಾದರಿಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಯಿತು.

ಹಾಗೆಯೇ ತೊಂಬತ್ತರ ದಶಕದ ನಂತರ ದೇಶದಲ್ಲಿ ಮಹತ್ತರವಾದ ಬದಲಾವಣೆಗಳು ಸಂಭವಿಸಲಾರಂಭಿಸಿದವು. ಆರ್ಥಿಕ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದಿಂದಾಗಿ ಹೊಸ ರೀತಿಯ ತಲ್ಲಣಗಳಿಗೆ ಸಮಾಜ ಮುಖಾಮುಖಿಯಾಗಲಾರಂಭಿಸಿತು. ದಲಿತ ಬಂಡಾಯ ಸಾಹಿತ್ಯದ ನಂತರ ಯಾವ ಸಾಹಿತ್ಯಿಕ ಪಂಥವೂ ಅಧಿಕೃತವಾಗಿ ಆರಂಭವಾಗದೆ ಸಾಹಿತ್ಯಿಕ ವಲಯದಲ್ಲಿ ಒಂದು ರೀತಿಯ ಪಂಥ ರಹಿತ ಸ್ಥಿತಿ ಉಂಟಾಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ವಸಾಹತೋತ್ತರ ಚಿಂತನೆಗಳು ಆರಂಭವಾಗಿ ವಿವಿಧ ರೀತಿಯಲ್ಲಿ ದೇಶಿ ಸಾಹಿತ್ಯ ಮತ್ತು ವಿಮರ್ಶೆಗಳನ್ನು ಆವರಿಸಿಕೊಳ್ಳತೊಡಗಿದವು. ಈ ಹಂತದಲ್ಲಿ ಸಾಹಿತ್ಯ ನಿರ್ಮಾಣ ಮತ್ತು ವಿಮರ್ಶೆಯಲ್ಲಿ ಮೊದಲಿನಂತೆ ಕೇವಲ ಸಾಹಿತ್ಯ ಓದುವವರು ಮತ್ತು ಬೋಧಿಸುವವರು ಮಾತ್ರವಲ್ಲದೆ ಇತರೆ ವೃತ್ತಿಯವರೂ ಈ ಕ್ಷೇತ್ರದಲ್ಲಿ ಹಿಂದೆಂದಿಗಿಂತ ಹೆಚ್ಚಾಗಿ ಭಾಗವಹಿಸತೊಡಗಿದರು. ಈ ಹಂತದಲ್ಲಿ ಸಾಹಿತ್ಯ ವಿಮರ್ಶೆ ಬಹುಮುಖಿ ಆಯಾಮಗಳನ್ನು ಮೈಗೂಡಿಸಿಕೊಂಡು ಅಂತರ್‌ಶಿಸ್ತೀಯ, ಬಹುಶಿಸ್ತೀಯ ಹಿನ್ನೆಲೆಗಳನ್ನು ಒಳಗೊಂಡು ವೈವಿಧ್ಯಮಯವಾಗಿ ಬೆಳವಣಿಗೆ ಸಾಧಿಸಲಾರಂಭಿಸಿತು. ಹೀಗೆ ಹೊಸ ಹಾದಿ ಹಿಡಿದ ಸಾಹಿತ್ಯ ವಿಮರ್ಶೆಯ ಗೊತ್ತುಗುರಿಗಳನ್ನು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಉದ್ದೇಶ

"ಸಾಹಿತ್ಯ ಕೇವಲ ಬದುಕಿನ ಪ್ರತಿಬಿಂಬವಲ್ಲ, ಬದಲಿಗೆ ಗತಿಬಿಂಬ" ಎಂದು ಜಿ. ಎಸ್. ಎಸ್. ಹೇಳುತ್ತಾರೆ. ಮನುಷ್ಯ ಬದುಕಿನ ವಾಸ್ತವ ಮತ್ತು ಭವಿಷ್ಯಗಳೆರಡನ್ನೂ ಬಿಂಬಿಸುವ ಸಾಹಿತ್ಯದ ಒಳಗನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡುವುದು ವಿಮರ್ಶೆಯ

ಕರ್ತವ್ಯ. ಇಪ್ಪತ್ತೊಂದನೆ ಶತಮಾನ ಇದುವರೆವಿಗೂ ಜಗತ್ತು ಕಂಡು ಕೇಳಿ ಅರಿಯದ ವೇಗದಲ್ಲಿ ಬೆಳವಣಿಗೆಯನ್ನು, ಬದಲಾವಣೆಯನ್ನು ಸಾಧಿಸುತ್ತಿದೆ. ಈ ರೀತಿಯ ವೇಗದ ಬದುಕಿನ ಗುಣಾವಗುಣಗಳು ಮನುಷ್ಯನ ಮುಖ್ಯ ಅಭಿವ್ಯಕ್ತಿಗಳಲ್ಲಿ ಒಂದಾದ ಸಾಹಿತ್ಯದ ಮೂಲಕ ಅಭಿವ್ಯಕ್ತಿಗೊಳ್ಳುತ್ತವೆ. ಇಂತಹ ಸಾಹಿತ್ಯಾಭಿವ್ಯಕ್ತಿಯನ್ನು ವಿಮರ್ಶೆ ಹೇಗೆ ಗ್ರಹಿಸಿ ಇವತ್ತಿನ ಸಾಮಾಜಿಕ ಬದುಕನ್ನು ನಿರ್ವಚಿಸುತ್ತದೆ ಎಂದು ಅಭ್ಯಸಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಸಾಹಿತ್ಯ ವಿಮರ್ಶೆ ಇಂದು ತನ್ನ ಸ್ವರೂಪದಲ್ಲಿ ಬಹುಮುಖಿ ಆಯಾಮಗಳನ್ನು ಪಡೆದುಕೊಂಡಿದೆ. ಇಂದು ಏಕಕಾಲಕ್ಕೆ ಪ್ರಾಚೀನ ಪಠ್ಯಗಳ ವಿಶ್ಲೇಷಣೆಯಿಂದ ವಿಮರ್ಶೆಯು ಸ್ವತಂತ್ರ ಜೀವನ ದರ್ಶನದ ವೇದಿಕೆಯಾಗಿ, ಸೃಜನಶೀಲ ಶಿಸ್ತಾಗಿ ಬೆಳೆಯುತ್ತಿದೆ. ಸಂಶೋಧನೆ, ಮೀಮಾಂಸೆ, ವೈಚಾರಿಕತೆ ಇಂತಹ ಭಿನ್ನ ಶಿಸ್ತು ವಲಯಗಳನ್ನು ವಿಮರ್ಶೆ ತನ್ನಲ್ಲಿ ಧಾರಣೆ ಮಾಡುತ್ತಿದೆ. ಒಂದು ಸಾಹಿತ್ಯ ಪ್ರಕಾರ ಮಾತ್ರವಾಗಿ ಅಲ್ಲದೆ ಒಂದು ಅಧ್ಯಯನ ಶಿಸ್ತಾಗಿ ಬೆಳೆಯುತ್ತಿದೆ.

ಯಾವುದೇ ಭಾಷೆಯ ಸಾಹಿತ್ಯ ಆ ನಾಡಿನ ಪರಂಪರೆ, ಅದರ ಸಾಂಸ್ಕೃತಿಕ ಸಂವೇದನೆ, ಅಲ್ಲಿನ ಸಮುದಾಯಗಳ ಜೀವನ ಕ್ರಮ, ಬದುಕಿನ ದೃಷ್ಟಿಕೋನಗಳನ್ನು ಕುರಿತು ಮಾತನಾಡುತ್ತವೆ. ಎಮ್. ಜಿ. ಕೃಷ್ಣಮೂರ್ತಿಯವರು "ಸಾಹಿತ್ಯ ವಿಮರ್ಶೆಯ ಮೂಲಕ ಒಂದು ನಿರ್ದಿಷ್ಟ ಸಂಸ್ಕೃತಿಯ ಚೌಕಟ್ಟಿನಲ್ಲಿ ಏನಾಗುತ್ತಿತ್ತೆಂದು ತಿಳಿದುಕೊಳ್ಳಲು ಸಾಧ್ಯ"[1] ಎನ್ನುತ್ತಾರೆ. ಅಂದರೆ ಒಂದು ನಿರ್ದಿಷ್ಟ ಭಾಷಿಕ ಸಮುದಾಯದ ಸಾಂಸ್ಕೃತಿಕ ಸಾಧ್ಯತೆಗಳು ಮತ್ತು ತಳಮಳಗಳು ಸಾಹಿತ್ಯದ ಮೂಲಕ ಅಭಿವ್ಯಕ್ತಿಗೊಂಡರೆ ಅದನ್ನು ಅರ್ಥಪೂರ್ಣವಾಗಿ ನಿರ್ವಚಿಸುವ ಕೆಲಸವನ್ನು ವಿಮರ್ಶೆಯು ವ್ಯವಸ್ಥಿತವಾಗಿ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಇತ್ತೀಚಿನ ಕನ್ನಡ ಸಾಹಿತ್ಯ ಮತ್ತು ಸಮುದಾಯಗಳ ನಡೆಯನ್ನು ಗುರುತಿಸಲು ಸಾಹಿತ್ಯ ವಿಮರ್ಶೆಯ ಮೂಲಕ ಪ್ರಯತ್ನಿಸುವ ಉದ್ದೇಶ ಈ ಅಧ್ಯಯನದ ಹಿನ್ನೆಲೆಯಲ್ಲಿದೆ.

ಇದೇ ರೀತಿಯಲ್ಲಿ ಇವತ್ತಿನ ಕನ್ನಡ ಸಾಹಿತ್ಯದ ಸ್ವರೂಪದಲ್ಲಿಯೂ ಕೂಡಾ ಗಂಭೀರವಾದ ಬದಲಾವಣೆಗಳು ಕಾಣಿಸಿಕೊಳ್ಳುತ್ತಿವೆ. ಇವತ್ತಿನ ಸಾಹಿತ್ಯ ರಚನೆಯಾಗುತ್ತಿರುವ ಸಂದರ್ಭಕ್ಕೂ ಅದನ್ನು ಓದುತ್ತಿರುವ ಸಂದರ್ಭ ಮತ್ತು ಸಮುದಾಯಗಳಿಗೂ ಒಂದು ಗಂಭೀರವಾದ ಅಂತರ ಸೃಷ್ಟಿಯಾಗುತ್ತಿದೆ. ಸಾವಿರ ವರ್ಷಗಳ ಅಂತರದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ಹಲವು ಗಂಭೀರ ಬದಲಾವಣೆಗಳು ಮತ್ತು ಬೆಳವಣಿಗೆಗಳನ್ನು ಸಾಧಿಸಿದರೆ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇಪ್ಪತ್ತನೇ ಶತಮಾನವೊಂದರಲ್ಲಿಯೇ ಆ ಎಲ್ಲ ಬದಲಾವಣೆಗಳು, ಬೆಳವಣಿಗೆಗಳು ಕಾಣಿಸಿಕೊಂಡವು. ಕಾಲದ ಮಾನದಂಡದಿಂದ ಹೇಳುವುದಾದರೆ ಹಿಂದೆ ಒಂದು ಸಾವಿರ ವರ್ಷಗಳ ಅಂತರದಲ್ಲಿ ಘಟಿಸಿದ್ದು ಆಧುನಿಕ ಕಾಲದಲ್ಲಿ ಒಂದು ಶತಮಾನದ ಅವಧಿಯಲ್ಲಿಯೇ ಸಂಭವಿಸಿತು. ಇದನ್ನು ಇವತ್ತಿನ ಹಿನ್ನೆಲೆಯಲ್ಲಿ ಗ್ರಹಿಸುವುದಾದರೆ ಕಾಲದ ಅವಧಿ ಮತ್ತೂ

ಕಡಿಮೆಯಾಗುತ್ತಿದ್ದು ಎಲ್ಲ ಬದಲಾವಣೆ, ಬೆಳವಣಿಗೆ ಮತ್ತು ವೈಪಲ್ಯಗಳು ಒಂದು ದಶಕದ ಅವಧಿಯಲ್ಲಿಯೇ ಕಾಣಿಸಿಕೊಳ್ಳುತ್ತಿವೆ. ಆದ್ದರಿಂದ ಇವತ್ತಿನ ಕನ್ನಡ ಸಾಹಿತ್ಯದ ಸ್ವರೂಪವನ್ನು ವಿಮರ್ಶೆ ಹೇಗೆ ಗ್ರಹಿಸುತ್ತಿದೆ ಎಂಬುದನ್ನು ಶೋಧಿಸುವ ಉದ್ದೇಶವೂ ಈ ಅಧ್ಯಯನದ ಹಿನ್ನೆಲೆಯಲ್ಲಿದೆ.

ಒಟ್ಟಿನಲ್ಲಿ ಇವತ್ತಿನ ಕನ್ನಡ ವಿಮರ್ಶಾ ವ್ಯವಸಾಯ ಕನ್ನಡ ಸಾಹಿತ್ಯದ ಪರಂಪರೆ ಮತ್ತು ಕರ್ನಾಟಕದ ಚರಿತ್ರೆಯನ್ನು ಗ್ರಹಿಸುತ್ತಿರುವ ಕ್ರಮವನ್ನೂ, ವೇಗದ ಮತ್ತು ಪ್ರತಿಕ್ಷಣ ಬದಲಾವಣೆಯ ನೆಲೆಯಲ್ಲಿ ನಿಲ್ಲುವ ಕನ್ನಡ ಸಂವೇದನೆಯ ಸ್ವರೂಪವನ್ನು ಮರುರೂಪಿಸುತ್ತಿರುವ ಬಗೆಯನ್ನೂ, ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತಿರುವ ಕನ್ನಡ ಸಾಹಿತ್ಯ ಸ್ವರೂಪವನ್ನು ಗ್ರಹಿಸಲು ಮತ್ತು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಮುದಾಯಗಳ ನಡೆಯನ್ನು ಅರ್ಥೈಸಿಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ಸಮಸ್ಯೀಕರಣ

ಮೇಲೆ ತಿಳಿಸಿದಂತೆ ತೊಂಭತ್ತರ ದಶಕದ ನಂತರ ದೇಶದಲ್ಲಿ ಬಹಳಷ್ಟು ಬದಲಾವಣೆಗಳು ವೇಗವಾಗಿ ಘಟಿಸತೊಡಗಿದವು. ಆರ್ಥಿಕ ಉದಾರೀಕರಣ, ಅಪಾರ ಮಟ್ಟದ ಖಾಸಗೀಕರಣ, ಮತ್ತು ಜಾಗತೀಕರಣಗಳಿಂದಾಗಿ ಮೇಲ್ನೋಟಕ್ಕೆ ದೇಶದ ಸಂಪತ್ತು ವೃದ್ಧಿಯಾಗುತ್ತಿದೆ ಎನಿಸಿದರೂ ಅದರ ಜೊತೆಗೆ ಸಾಮಾಜಿಕ ಏರುಪೇರುಗಳು ಕೂಡಾ ಹೆಚ್ಚಾಗತೊಡಗಿದವು. ಅಭಿವೃದ್ಧಿಯ ಹೆಸರಿನಲ್ಲಿ ವಿಶೇಷ ಆರ್ಥಿಕ ವಲಯಗಳನ್ನು ನಿರ್ಮಿಸಲು, ಅಣೆಕಟ್ಟು ನಿರ್ಮಿಸಲು ಮೀಸಲು ಅರಣ್ಯಗಳಿಗಾಗಿ ಅಪಾರ ಪ್ರಮಾಣದ ಭೂಮಿ ವಶಪಡಿಸಿಕೊಂಡು ಹಳ್ಳಿಗಳ ಅಸ್ತಿತ್ವವನ್ನೆ ಅಳಿಸಿ ಹಾಕಲಾಗುತ್ತಿದೆ. ಇದರಿಂದಾಗಿ ಅಸಂಖ್ಯಾತ ಜನ ನೆಲೆ ಕಳೆದುಕೊಳ್ಳುತ್ತಿದ್ದಾರೆ, ಆ ಮೂಲಕ ಮತ್ತೊಂದು ರೀತಿಯ ವಸಾಹತುಕರಣಕ್ಕೆ ಭಾರತದ ರೈತ ಸಮುದಾಯ ಮತ್ತು ಆದಿವಾಸಿಗಳು ತುತ್ತಾಗುತ್ತಲಿದ್ದಾರೆ. ಮತ್ತೊಂದೆಡೆ ಮಾಹಿತಿ ತಂತ್ರಜ್ಞಾನದ ಅಗಾಧ ಬೆಳವಣಿಗೆಯಿಂದ ದೈನಂದಿನ ಬದುಕಿನಲ್ಲಿ ಅವಸರ ಮತ್ತು ಅತಿಯಾದ ಮಹತ್ವಾಕಾಂಕ್ಷೆಯಿಂದ ಕೌಟುಂಬಿಕ ಮೌಲ್ಯಗಳು ವಿಘಟನೆಯಾಗಲಾರಂಭಿಸಿವೆ. ವ್ಯಕ್ತಿವಾದ, ಸ್ವಾರ್ಥ ತಲೆಯೆತ್ತುತ್ತಿವೆ. ಇವುಗಳ ಜೊತೆಗೆ ಬಹುರಾಷ್ಟ್ರೀಯ ಕಂಪನಿಗಳಿಂದ ಇನ್ನೊಂದು ಬಗೆಯ ವಸಾಹತುಕರಣಕ್ಕೆ ದೇಶ ತುತ್ತಾಗುತ್ತಲಿದ್ದು, ಇದು ನಮ್ಮ ಪರಂಪರೆಯ ಅಸ್ತಿತ್ವವನ್ನೆ ಅಳಿಸಿ ಹಾಕುವ ಸಾಮರ್ಥ್ಯ ಪ್ರದರ್ಶಿಸುತ್ತಿದೆ. ಪಶ್ಚಿಮದ ಹಿಡಿತದಿಂದ ಪಾರಾಗಲು ಭಾರತವೂ ಸೇರಿದಂತೆ ತೃತೀಯ ಜಗತ್ತಿನ ಮನಸ್ಸುಗಳು ಹೊಸಹೊಸ ತತ್ವಗಳನ್ನು ರೂಪಿಸಿಕೊಳ್ಳುವ ತಯಾರಿಯಲ್ಲಿವೆ. ಇಲ್ಲಿಯ ಸೃಜನಶೀಲ ಮನಸ್ಸುಗಳು ಈ ಹೊಸ ಬೆಳವಣಿಗೆಯನ್ನು ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ನೆಲೆಯಲ್ಲಿ ಗ್ರಹಿಸುವ ಪ್ರಯತ್ನ ನಡೆಸಿವೆ. ಆದರೆ ಸಾಗುತ್ತಿರುವ ದಾರಿಯ ಗಮ್ಯದ ಬಗ್ಗೆ ಮಾತ್ರ ಯಾರಲ್ಲೂ ಸ್ಪಷ್ಟತೆ ವ್ಯಕ್ತವಾಗಿಲ್ಲ.

ಮೇಲಿನ ಗಂಭೀರ ಸಮಸ್ಯೆಗಳ ಜೊತೆಗೆ ಇವತ್ತಿನ ರಾಜಕಾರಣದಲ್ಲಿ ಸಂಸ್ಕೃತಿ - ಪರಂಪರೆಯ ಹೆಸರಿನಲ್ಲಿ ದೇಶದ ತಳಸಮುದಾಯಗಳನ್ನು ಕೋಮುಸೂಕ್ಷ್ಮ ವಿಚಾರಗಳೆಡೆಗೆ ಸೆಳೆಯಲಾಗುತ್ತಿದೆ. ಮೂಲಭೂತ ಸೌಕರ್ಯಗಳಿಗಿಂತ ಧರ್ಮಸೂಕ್ಷ್ಮಗಳೇ ಬಹು ಮುಖ್ಯ ಎಂಬಂತೆ ಬಿಂಬಿಸಲಾಗುತ್ತಿದೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ಸಾಹಿತ್ಯ, ಸಮಾಜ, ಸಂಸ್ಕೃತಿ ಇವುಗಳನ್ನೆಲ್ಲಾ ವಿಮರ್ಶಿಸುವ ಮನಸ್ಸುಗಳ ಹಿಂದಿನ ಉದ್ದೇಶಗಳನ್ನು ಅರಿತುಕೊಳ್ಳುವ, ಅವುಗಳ ಸಾಗುವ ಗಮ್ಯವನ್ನು ಕುರಿತು ವಿಶ್ಲೇಷಿಸುವ ಅಗತ್ಯದಿಂದ ಈ ಅಧ್ಯಯನ ನಡೆಸಲಾಗಿದೆ.

ಅಧ್ಯಯನದ ಪರಿಕಲ್ಪನೆಗಳಾಗಿ 'ಹೊಸ ಶತಮಾನ' ಮತ್ತು 'ಪ್ರವೃತ್ತಿಗಳು'

ಹೊಸ ಶತಮಾನ

ಹೊಸ ಶತಮಾನವೆಂದರೆ ಇಲ್ಲಿ ಇಪ್ಪತ್ತೊಂದನೆ ಶತಮಾನವೆಂದು ಗ್ರಹಿಸಲಾಗಿದೆ. ಮಾನವ ಬದುಕಿನ ಎಲ್ಲಾ ಕ್ಷೇತ್ರಗಳ ಮೇಲೂ ಗಂಭೀರ ಪ್ರಭಾವ ಬೀರುತ್ತಿರುವ ಈ ಶತಮಾನ ನಿಸ್ಸಂಶಯವಾಗಿ ಹಿಂದಿನ ಶತಮಾನಗಳಿಗಿಂತ ಭಿನ್ನವಾಗಿರಲಿದೆ. ಜೊತೆಗೆ ಈ ಶತಮಾನದಿಂದ ಮೂರನೇ ಸಹಸ್ರಮಾನವೂ ಆರಂಭವಾಗುತ್ತಿದ್ದು, ಮನುಷ್ಯ ನಾಗರೀಕತೆಯು ಅದರ ಅಪಾರ ವಿಜ್ಞಾನ - ತಂತ್ರಜ್ಞಾನಗಳ ಆವಿಷ್ಕಾರದೊಂದಿಗೆ ಮತ್ತೊಂದು ಜಿಗಿತಕ್ಕೆ ಸಜ್ಜಾಗುತ್ತಿದೆ. ಇಪ್ಪತ್ತೊಂದನೆ ಶತಮಾನ ವಿಪರೀತ ವೇಗಬದ್ಧವಾಗಿದೆ. ಆ ವೇಗವು ಅಭಿವೃದ್ದಿ ಎಂಬ ಮಾಯಾಜಾಲದಲ್ಲಿ ಒಳಿತು ಕೆಡುಕು ಎರಡನ್ನು ಸಮ ಪ್ರಮಾಣದಲ್ಲಿ ಮಾಡಬಲ್ಲದು. ಜಾಗತಿಕ ಜಾಲದಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಇದರ ಒಳಿತುಗಳೆಲ್ಲ ಕೆಲವೇ ಜನರಿಗೆ, ಕೆಡುಕುಗಳು ಬಹುಸಂಖ್ಯಾತ ಜನರಿಗೆ ಆಗುತ್ತಿರುವದೇ ದೊಡ್ಡ ಸಮಸ್ಯೆಯಾಗಿದೆ.

ವಿಜ್ಞಾನ-ತಂತ್ರಜ್ಞಾನಗಳ ಅಗಾಧ ಬೆಳವಣಿಗೆಯಿಂದ ಇಪ್ಪತ್ತೊಂದನೇ ಶತಮಾನ – ಮೂರನೇ ಸಹಸ್ರಮಾನದಲ್ಲಿ ಮಾನವ ಬದುಕು ಗಂಭೀರವಾದ ಪಲ್ಲಟಗಳನ್ನು ಕಾಣುತ್ತಿದೆ. ಸಾಹಿತ್ಯ-ಕಲೆಗಳಿಗೆ ಇದುವರೆವಿಗೂ ಇದ್ದ ಮಾನ್ಯತೆ ಕುಂದಿ ಜ್ಞಾನ-ವಿಜ್ಞಾನಗಳೇ ಮೇಲೆ ಬರುತ್ತಿವೆ. ಜೊತೆಗೆ ಇದೇ ಸಂದರ್ಭದಲ್ಲಿ ಸಮಾಜದಲ್ಲಿ ಮಾನವನ ನೈತಿಕ ಮಟ್ಟ ಕುಸಿಯುತ್ತಿದೆ. ಬಹುಸಂಖ್ಯಾತ ನಾಗರೀಕರಿಗೆ ಆರೋಗ್ಯಕರ ಜೀವನ ನಡೆಸಲಾಗುತ್ತಿಲ್ಲ. ಕೆಲವೇ ಕೆಲವು ಜನರ ಹಿತಾಸಕ್ತಿ ಕಾಪಾಡುವ ಬಂಡವಾಳಶಾಹಿ ಮತ್ತು ಕೋಮುವಾದಗಳಿಂದ ಇವತ್ತಿನ ಸಾಮಾನ್ಯ ಜನರ ಬದುಕು ಬಿಕ್ಕಟ್ಟಿನಲ್ಲಿದೆ. ಆದ್ದರಿಂದಲೇ "ಬಂದೂಕು, ಬಾಂಬುಗಳನ್ನು ತನ್ನೊಡಲೊಳಗೆ ತುಂಬಿಕೊಂಡಿರುವ ಇಪ್ಪತ್ತೊಂದನೆಯ ಶತಮಾನ ಅಪಾಯದ ಹಂತದಲ್ಲಿದೆ. ಸಾಹಿತ್ಯ ಮಾತ್ರ ಮನುಷ್ಯರನ್ನು ಇಂಥ ಬಿಕ್ಕಟ್ಟಿನಿಂದ ಪಾರು ಮಾಡಬಲ್ಲದು."[3] ಎಂಬ ಅಭಿಪ್ರಾಯ ರೂಪುಗೊಳ್ಳುತ್ತಿದೆ.

"ಇಪ್ಪತ್ತನೆಯ ಶತಮಾನದ ಬಹುಮುಖ್ಯವಾದೊಂದು ಧ್ಯೇಯ ಕಾರ್ಲ್‌ಮಾರ್ಕ್ಸನ 'ಜಗತ್ತಿನ ಶ್ರಮಜೀವಿಗಳೇ ಎಲ್ಲ ಒಂದಾಗಿ' ಎನ್ನುವ ಕರೆಯನ್ನು ಪ್ರತಿಧ್ವನಿಸುವಂತದ್ದಾಗಿತ್ತು. ಈಗ ಅದೇ ಶತಮಾನದ ಅಂತ್ಯಭಾಗದಲ್ಲಿ ಈ ಧ್ಯೇಯ 'ಜಗತ್ತಿನ ಪ್ರತಿಷ್ಠಿತರೇ, ಪ್ರಬಲರೇ ಎಲ್ಲ ಒಂದಾಗಿ' ಎಂದು ತಿರುಚಿ ಹೋಗಿರುವಂತೆ ತೋರುತ್ತಿದೆ. ಜಾಗತೀಕರಣದ ಒಂದು ಅಕಲ್ಪಿತ ಫಲವೆಂಬಂತೆ ಜಗತ್ತಿನ ಅಧಿಕಾರಸ್ಥರೆಲ್ಲ ಹೀಗೆ ಸಂಘಟಿತರಾಗಿರುವಂತಿದೆ".[೪] ಎಂಬ ಅಭಿಪ್ರಾಯದಲ್ಲಿ ಹೊಸ ಶತಮಾನ ಹಿಡಿಯುತ್ತಿರುವ ಹಾದಿಯ ಹೊಳಹುಗಳಿವೆ. ಇಪ್ಪತ್ತೊಂದನೆಯ ಶತಮಾನ ತಂದೊಡ್ಡುತ್ತಿರುವ ಸವಾಲುಗಳನ್ನು ಎದುರಿಸಲು ಹಲವು ರೀತಿಯ ಚಳುವಳಿಗಳು ನಡೆಯುತ್ತಿದ್ದರೂ ಆಧುನೀಕರಣದ ದೈತ್ಯ ಬಲದೆದುರು ಅವು ಬಹುಕಾಲ ನಿಲ್ಲುವಂತೆ ಕಾಣುತ್ತಿಲ್ಲ. ಕಾರಣ ಈ ಚಳುವಳಿಗಳಿಗೆಲ್ಲ ಬೇರೆ ಬೇರೆ ಹಿನ್ನಲೆಯಿಂದ ಬಂದ ದುರ್ಬಲ ವರ್ಗಗಳು ಹೂಡಿದ ಹೋರಾಟಗಳಾಗಿಯಷ್ಟೆ ಕಾಣಿಸಿಕೊಳ್ಳುತ್ತಿವೆಯೆ ಹೊರತು ಅವು ಇಂದಿನ ಬಲಿಷ್ಠ ವರ್ಗಗಳೂ ಬೆಂಬಲಿಸಿ ಪಾಲ್ಗೊಳ್ಳುವಂತಹ ಹೋರಾಟಗಳಾಗಿಲ್ಲ.

ಸಾಹಿತ್ಯ ಮತ್ತು ಕಲೆಗಳು ಯಾವಾಗಲೂ ಮಾನವ ಜನಾಂಗದ ಒಳಿತಿನ ಬಗ್ಗೆಯೇ ಆಲೋಚಿಸುತ್ತವೆ. ಸಾಹಿತ್ಯ ಮತ್ತು ಕಲೆಗಳ ಸಮೃದ್ಧತೆ ಅಥವಾ ಅವುಗಳ ಅಪಾರ ಬೆಳವಣಿಗೆಯ ಪರಿಣಾಮ ವಿಜ್ಞಾನ-ತಂತ್ರಜ್ಞಾನಗಳ ಬೆಳವಣಿಗೆಯಂತೆ ತಟ್ಟನೆ ಗೋಚರವಾಗುವುದಿಲ್ಲವಾದರೂ ದೀರ್ಘಕಾಲದಲ್ಲಿ ಸಾಹಿತ್ಯದಿಂದ ಸಮಾಜದ ಮೇಲಾಗಿರುವ ಒಳಿತನ್ನು ನಾವು ಇತಿಹಾಸದಲ್ಲಿ ಕಾಣಬಹುದು.

ಇಪ್ಪತ್ತೊಂದನೇ ಶತಮಾನ ವಿಜ್ಞಾನ-ತಂತ್ರಜ್ಞಾನಗಳ ಅಗಾಧ ಬೆಳವಣಿಗೆಯಿಂದಾಗಿ ಮಾನವ ಬದುಕಿನಲ್ಲಿ ಆಗಿರುವ ಪಲ್ಲಟವನ್ನು ಸಾಹಿತ್ಯ ಹೇಗೆ ಗ್ರಹಿಸಿ ಅಭಿವ್ಯಕ್ತಿಸುತ್ತದೆ ಎಂಬುದು ಶೋಧನೆಯ ಒಂದು ನೆಲೆಯಾದರೆ, ಹೊಸ ರೀತಿಯ ಆವಿಷ್ಕಾರಗಳಿಂದ ಮಾನವ ಜನಜೀವನದಲ್ಲಿ ಉಂಟಾಗಿರುವ ವ್ಯತ್ಯಾಸಗಳನ್ನು ಸಾಹಿತ್ಯವು ಯಾವ ಯಾವ ಹಿನ್ನೆಲೆಯಲ್ಲಿ ಗ್ರಹಿಸುತ್ತದೆ ಮತ್ತು ಅಭಿವ್ಯಕ್ತಿಸುತ್ತದೆ ಎಂಬುದನ್ನು ಶೋಧಿಸುವುದು ಈ ಅಧ್ಯಯನದ, ಶೋಧದ ಮತ್ತೊಂದು ನೆಲೆ. ಆದ್ದರಿಂದ ಅರ್ಥಪೂರ್ಣ ಸಮಾಜಕ್ಕಾಗಿ ಸಾಹಿತ್ಯ ಮತ್ತು ಕಲೆಗಳ ಬೆಳವಣಿಗೆ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ಇಲ್ಲಿನ ಅಧ್ಯಯನ ಸಮಾಜದಲ್ಲಿ ಜನರ ಜೀವನದ ನೈತಿಕಮಟ್ಟವನ್ನು ಗ್ರಹಿಸಲು ಮತ್ತು ಅದು ಅಭಿವ್ಯಕ್ತಿ ಪಡೆದಿರುವ ಪರಿಯನ್ನು ಅಭ್ಯಸಿಸಲು ಯತ್ನಿಸುತ್ತದೆ.

ಪ್ರವೃತ್ತಿಗಳು

'ಪ್ರವೃತ್ತಿ' ಎಂಬ ಪದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ ನಡೆ, ಓಟ, ಪ್ರಾರಂಭ, ಉಪಕ್ರಮ, ಆಸಕ್ತಿ, ಅಭ್ಯಾಸ, ಹೊನಲು, ಪ್ರವಾಹ, ಲಹರಿ ಮೊದಲಾದ ಅರ್ಥಗಳಿವೆ. ಇಲ್ಲಿ ಪ್ರವೃತ್ತಿ ಪದವನ್ನು ಇವತ್ತಿನ ಕನ್ನಡ ವಿಮರ್ಶೆಯ ನಡೆ, ಉಪಕ್ರಮ ಅಥವಾ ಅಭ್ಯಾಸವು ಯಾವ ದಿಶೆಯಲ್ಲಿ ಸಾಗುತ್ತಿದೆ ಎಂದು ನೋಡುವ

ಕ್ರಮವಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯವು ಚಂಪೂ, ವಚನ, ಷಟ್ಪದಿ, ಕೀರ್ತನೆ ಮೊದಲಾದ ಧಾರೆಗಳಲ್ಲಿ ಕಾಲಕಾಲಕ್ಕೆ ಮೂಡಿಬಂತು. ಆಧುನಿಕ ಸಂದರ್ಭದಲ್ಲಿಯೂ ಕನ್ನಡ ಸಾಹಿತ್ಯ ವಿವಿಧ ಚಳುವಳಿಯ ಘಟ್ಟಗಳಲ್ಲಿ, ವಿವಿಧ ಪ್ರಕಾರಗಳಲ್ಲಿ ಮೂಡಿಬಂದಿತು. ಇಂಥವುಗಳನ್ನು ಮೌಲ್ಯಮಾಪನ ಮಾಡುವ ವಿಮರ್ಶೆ ಕೂಡಾ ಕಾಲಕಾಲಕ್ಕೆ ಹೊಸ ಹೊಸ ಮಾನದಂಡಗಳನ್ನು ರೂಪಿಸಿಕೊಂಡು ತನ್ನ ವಿಮರ್ಶಾ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ.

ಹಾಗೆಯೆ ಮನುಷ್ಯನ ಆಲೋಚನಾ ಕ್ರಮದಲ್ಲಿಯೂ ಕೂಡಾ ಕಾಲಕಾಲಕ್ಕೆ ತನ್ನ ಓದು ಮತ್ತು ಅನುಭವಗಳ ಆಧಾರದ ಮೇಲೆ ಆಲೋಚನೆಗಳಲ್ಲಿ ಪಲ್ಲಟಗಳು ಸಂಭವಿಸುತ್ತಿರುತ್ತವೆ. ಅದರಲ್ಲೂ ಇವತ್ತಿನ ಕನ್ನಡ ಸಾಹಿತ್ಯ ಯಾವುದೇ ಪಂಥ ಅಥವಾ ಚಳುವಳಿಗಳಿಂದ ನೇರ ಪ್ರಭಾವ ಪಡೆಯದೆ ಏಕಕಾಲಕ್ಕೆ ಜಗತ್ತಿನೆಲ್ಲ ಜ್ಞಾನ ಮತ್ತು ಹೊಸರೀತಿಯ ಅನುಭವಗಳ ಮೂಲಕ ಮೂಡಿಬರುತ್ತಿದೆ. ಇಂತಹ ವೈವಿಧ್ಯಮಯ ಹಿನ್ನೆಲೆಯ ಸಾಹಿತ್ಯವನ್ನು ಇವತ್ತಿನ ವಿಮರ್ಶೆ ಹೇಗೆ ಗ್ರಹಿಸುತ್ತಿದೆ, ಇದರ ನಡೆ, ಒಲವು, ಆಸಕ್ತಿ ಯಾವ ಕಡೆಗಿದೆ ಎಂಬುದನ್ನು ಶೋಧಿಸುವುದು ಈ ಅಧ್ಯಯನದ ಮುಖ್ಯ ನಿಲುವಾಗಿದೆ.

ಅಧ್ಯಯನದ ಮಹತ್ವ

"ಸಾಹಿತ್ಯ ವಿಮರ್ಶೆ ಕೂಡಾ ಈಗ ಅತ್ಯಂತ ಮುಖ್ಯವಾದ ಜ್ಞಾನರೂಪ. ಈಗಿನ ಜಾಗತಿಕ ವ್ಯವಸ್ಥೆಯನ್ನು ಅರ್ಥೈಸುವಲ್ಲಿ, ಟೀಕಿಸುವಲ್ಲಿ ಸಾಹಿತ್ಯ ವಿಮರ್ಶೆಗೆ ಅನನ್ಯ ಸ್ಥಾನವಿದೆ."[3] ವಿಶ್ವವೇ ಒಂದು ಗ್ರಾಮವಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಸಾಹಿತ್ಯದ ಮೂಲ ಸ್ವರೂಪದಲ್ಲಿಯೇ ಗಂಭೀರವಾದ ಬದಲಾವಣೆಗಳಾಗುತ್ತಿವೆ. ಮಾನವ ಬದುಕಿನ ಪ್ರಮುಖ ಅಭಿವ್ಯಕ್ತಿಯಾಗಿದ್ದ ಸಾಹಿತ್ಯದ ಅಸ್ತಿತ್ವಕ್ಕೆ ಟಿವಿ, ಇಂಟರ್‌ನೆಟ್, ಫೇಸ್‌ಬುಕ್ ಮೊದಲಾದ ಸೋಷಿಯಲ್ ಮೀಡಿಯಾಗಳಂತಹ ವಿವಿಧ ಸಂವಹನ ಮಾಧ್ಯಮಗಳು ಪ್ರತಿಸ್ಪರ್ಧಿಗಳಾಗಿ ಬೆಳೆಯುವ ಮೂಲಕ ಗಂಭೀರವಾದ ಅಪಾಯವನ್ನು ತಂದೊಡ್ಡುತ್ತಿವೆ. ಜೊತೆಗೆ ಇವತ್ತಿನ ವಿಮರ್ಶೆ ಸಾಹಿತ್ಯ ವಿಮರ್ಶೆಗಷ್ಟೆ ಮೀಸಲಾಗಿರದೆ, ಬದುಕಿನ ಸರ್ವರಂಗಗಳನ್ನೂ ತನ್ನ ವ್ಯಾಪ್ತಿಯಲ್ಲಿ ಒಳಗೊಂಡಿರುತ್ತದೆ. ಆದ್ದರಿಂದ ಇತ್ತೀಚೆಗೆ ಕನ್ನಡದಲ್ಲಿ ಬಂದಿರುವ ವಿಮರ್ಶೆಯನ್ನು ಅಧ್ಯಯನ ಮಾಡುವುದರಿಂದ ಸಮಕಾಲೀನ ಸಮಾಜದ ವೈಲಕ್ಷಣಗಳೇನು, ಇದು ಯಾವ ದಿಶೆಯಲ್ಲಿ ಮುನ್ನೆಡೆಯುತ್ತಿದೆ, ಅದರ ಬಿಕ್ಕಟ್ಟುಗಳೇನು, ಸಮಕಾಲೀನ ಪ್ರಪಂಚದ ಮನೋಧರ್ಮ, ಜೀವನಶೈಲಿ ಮೊದಲಾದವುಗಳನ್ನು ಗ್ರಹಿಸುವುದಕ್ಕೆ ಈ ಅಧ್ಯಯನ ನೆರವಾಗುತ್ತದೆ.

ಕನ್ನಡದಲ್ಲಿ ದಲಿತ ಬಂಡಾಯ ಸಾಹಿತ್ಯ ಆರಂಭವಾದಾಗ ಇದ್ದ ಲಕ್ಷಣಗಳಿಗಿಂತ ಈಗ ತುಂಬಾ ಭಿನ್ನವಾದ ಸಮಸ್ಯೆಗಳಿವೆ. ಅಂದಿನಂತೆ ಯಾವ ಸಾಹಿತ್ಯಿಕ ಗುಂಪುಗಳೂ ಈಗ ಕ್ರಿಯಾಶೀಲವಾಗಿಲ್ಲ. ಸಾಹಿತ್ಯ ರಚನೆಗೆಂದೇ ಯಾವ ಮ್ಯಾನಿಫೆಸ್ಟೋಗಳೂ ಈಗ

ಲಭ್ಯವಿಲ್ಲ. ಎಪ್ಪತ್ತರ ದಶಕದಲ್ಲಿದ್ದ ಸಾಮಾಜಿಕ ಸಮಸ್ಯೆಗಳಿಗೂ ಸಮಕಾಲೀನ ಸಾಮಾಜಿಕ ಸಮಸ್ಯೆಗಳಿಗೂ ಕೆಲವು ಮೂಲಭೂತವಾದ ವ್ಯತ್ಯಾಸಗಳಿವೆ. ಇಂದು ಕನ್ನಡದಲ್ಲಿ ತಾಂತ್ರಿಕ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಬಹಳಷ್ಟು ಮಂದಿ ಹಾಗೂ ಹೊರದೇಶಗಳಲ್ಲಿದ್ದುಕೊಂಡು ಕನ್ನಡ ಸಾಹಿತ್ಯ ರಚನೆಯಲ್ಲಿ ತೊಡಗಿರುವವರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ಆ ಮೂಲಕ ಹೊಸ ರೀತಿಯ ಆಶೋತ್ತರಗಳನ್ನು ಒಳಗೊಂಡ ಸಾಹಿತ್ಯ ರಚನೆಯು ಅಗಾಧವಾಗಿ ನಡೆಯುತ್ತಿದೆ. ಇಂದಿನ ಕನ್ನಡ ಸಾಹಿತ್ಯದಲ್ಲಿ ಅಧ್ಯಯನಕ್ಕಿಂತ ಅನುಭವದ ಬಲದ ಮೇಲೆ ಸಾಹಿತ್ಯ ಕೃಷಿಯಲ್ಲಿ ತೊಡಗಿರುವವರೆ ಹೆಚ್ಚಾಗಿದ್ದಾರೆ. ಎಪ್ಪತ್ತರ ದಶಕದಲ್ಲಿ ವಿರೋಧಿಸಿದ್ದ ಸಂಪ್ರದಾಯ ಮನೋಧರ್ಮವನ್ನು ಇಂದು ಮತ್ತೆ ಅನುಸರಿಸುವ ಒಂದು ವರ್ಗವೇ ಸೃಷ್ಟಿಯಾಗಿದೆ.

ಇಂದು ವಿಮರ್ಶೆಯೆನ್ನುವುದು ಶುದ್ಧ ಸಾಹಿತ್ಯ ವಿಮರ್ಶೆಯಾಗಿ ಉಳಿದಿಲ್ಲ. ರಹಮತ್ ತರೀಕೆರೆ ತಮ್ಮ 'ಕತ್ತಿಯಂಚಿನ ದಾರಿ' ಕೃತಿಯಲ್ಲಿ ಹೇಳುವಂತೆ "...ಈಗ ವಿಮರ್ಶೆ ಎಂಬುದು ರಾಜಕಾರಣ, ಧರ್ಮ, ಸಮಾಜ, ಫಿಲಾಸಫಿ ಹೀಗೆ ಲೋಕದ ಹತ್ತೆಂಟು ವಿಷಯಗಳನ್ನು ಮೈಮೇಲೆ ಎಳೆದುಕೊಂಡು ಚರ್ಚಿಸುತ್ತಿದೆ. ಈ ಹಲವು ವಿಷಯಗಳಲ್ಲಿ ಸಾಹಿತ್ಯವು ಮುಖ್ಯವಾಗಿದ್ದರೂ, ಅದೇ ಎಲ್ಲವೂ ಅಲ್ಲ."[1] ಎಂಬಲ್ಲಿ ಇವತ್ತಿನ ಕನ್ನಡ ವಿಮರ್ಶೆ ಹೊಂದುತ್ತಿರುವ ರೂಪಾಂತರವನ್ನು ನಾವು ಗ್ರಹಿಸಬೇಕಾಗುತ್ತದೆ. ಹಾಗೆಯೇ ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ವಿಮರ್ಶೆಯ ವಿಮರ್ಶೆ' ಕೃತಿಯ ಮುನ್ನುಡಿಯಲ್ಲಿ ಪ್ರಕಾಶಕರು ತೇಜಸ್ವಿಯವರ ವಿಮರ್ಶೆಯನ್ನು ಕುರಿತು ಹೀಗೆ ಹೇಳುತ್ತಾರೆ. "ಇಲ್ಲಿರುವ ವಿಮರ್ಶಾ ಲೇಖನಗಳು ಸಾಹಿತ್ಯ ವಿಮರ್ಶೆಯಾಗಿಯೂ, ಜಾತಿ, ಧರ್ಮ ವಿಮರ್ಶೆಯಾಗಿಯೂ, ಅರ್ಥವ್ಯವಸ್ಥೆಯ ವಿಮರ್ಶೆಯಾಗಿಯೂ, ಭಾಷೆ, ರೈತ, ಮಾರುಕಟ್ಟೆ ನಿಯಂತ್ರಣ ಶಕ್ತಿಗಳ ಹಾಗೂ ಜಾಗತೀಕರಣದ ವಿಮರ್ಶೆಯಾಗಿಯೂ ಕಾಣುತ್ತದೆ."[2] ಎನ್ನುವಲ್ಲಿ ಕನ್ನಡ ವಿಮರ್ಶೆಯು ಒಂದೆಡೆ ಶುದ್ಧ ಅಕಡೆಮಿಕ್ ರೀತಿಯಲ್ಲಿ ಸಾಗುತ್ತಿದ್ದರೆ ಮತ್ತೊಂದೆಡೆ ನಾಡಿನ ಸಾಂಸ್ಕೃತಿಕ ವಿಮರ್ಶೆಯೇ ಸಾಹಿತ್ಯ ವಿಮರ್ಶೆಯಾಗಿರುವ ಪರಿಯನ್ನು ಕಾಣಬಹುದು.

ಹಾಗೆಯೇ ಜಾಗತಿಕ ಮಟ್ಟದಲ್ಲಿ ಕ್ರಿಯಾಶೀಲವಾಗಿರುವ ಆಧುನಿಕೋತ್ತರ, ವಸಾಹತೋತ್ತರ ಚಿಂತನೆಗಳು, ಪೌರಾತ್ಯವಾದ, ವಿಸ್ಮೃತಿ ಪರಿಕಲ್ಪನೆ ಮತ್ತು ಭಾಷಾವಿಜ್ಞಾನದಲ್ಲಿ ಸೃಷ್ಟಿಯಾಗುತ್ತಿರುವ ಸಾಂಸ್ಕೃತಿಕ ಪುನಾರಚನೆ ಮೊದಲಾದ ಹೊಸ ಬಗೆಯ ತಾತ್ವಿಕತೆಗಳು ಹೊಸ ಶತಮಾನದ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯನ್ನು ಹೇಗೆ ಪ್ರಭಾವಿಸುತ್ತಿವೆ ಮತ್ತು ಈ ಪ್ರಭಾವದ ಹಿನ್ನೆಲೆಯಲ್ಲಿ ಇವತ್ತಿನ ವಿಮರ್ಶೆಯ ನೂತನ ರೂಪುರೇಷೆಗಳೇನು ಮತ್ತು ವಿಮರ್ಶಕರು ಯಾವ ಹೊಸ ವಿಮರ್ಶಾ ಮಾನದಂಡಗಳನ್ನು ರೂಪಿಸಿಕೊಂಡು ಪ್ರಯೋಗಿಸಿದ್ದಾರೆ? ಇವರ ಚಿಂತನಾ ಕ್ರಮಗಳೇನು? ಇವರು ಸಾಹಿತ್ಯವನ್ನು ಓದುವ, ಅರ್ಥೈಸುವ ಕ್ರಮಗಳಾವುವು? ಇವರ ಚಿಂತನಾಧಾರೆಗಳು,

ಸೈದ್ಧಾಂತಿಕ ನೆಲೆಗಳು, ತಲುಪುವ ತೀರ್ಮಾನಗಳು ಮೊದಲಾದವುಗಳನ್ನು ಅರಿಯಲು ಇವತ್ತಿನ ವಿಮರ್ಶೆಯನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ನವ್ಯೋತ್ತರ ಸಾಹಿತ್ಯ ವಿಮರ್ಶೆಯ ನಂತರದ ದಿನಗಳಲ್ಲಿ ಕನ್ನಡ ವಿಮರ್ಶೆ ಹಿಡಿದಿರುವ ಹಾದಿಯನ್ನು ಗುರುತಿಸುವುದೇ ಈ ಸಂಶೋದನೆಯ ಮುಖ್ಯ ಉದ್ದೇಶವಾಗಿದೆ. ಆದ್ದರಿಂದ ಕ್ರಿ. ಶ. ೨೦೦೦ದಿಂದ ೨೦೧೦ ರವರೆಗಿನ, ಹೊಸ ಶತಮಾನದ ಮೊದಲ ದಶಕದಲ್ಲಿ ಬಂದ ವಿಮರ್ಶಾ ಕೃತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಸಮಾಜದಲ್ಲಿನ ಬದಲಾವಣೆಗಳು ಸೃಜನಶೀಲ ಮನಸ್ಸನ್ನು ತಾಕಿ ಅಕ್ಷರ ರೂಪದಲ್ಲಿ ಹೊರಬರಲು ಕೊಂಚ ಸಮಯ ಬೇಕಾಗುವುದರಿಂದ ಈ ಕಾಲಘಟ್ಟವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಸಾಹಿತ್ಯ ಯಾವ ಕಾಲದ್ದಾಗಿರಲಿ ಇಪ್ಪತ್ತೊಂದನೇ ಶತಮಾನದಲ್ಲಿ ನಿಂತ ಕನ್ನಡ ವಿಮರ್ಶೆ ಅದನ್ನು ಹೇಗೆ ಗ್ರಹಿಸಿದೆ ಎಂಬುದೇ ಮುಖ್ಯ ಮತ್ತು ಆ ಗ್ರಹಿಕೆಯ ಹಿನ್ನೆಲೆಗಳನ್ನು ಶೋಧಿಸುವುದೆ ಈ ಸಂಶೋಧನೆಯ ಪ್ರಧಾನ ಉದ್ದೇಶವಾಗಿದೆ. ತೊಂಬತ್ತರ ದಶಕದ ನಂತರ ದೇಶದಲ್ಲಿನ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಹಾಗೂ ತಂತ್ರಜ್ಞಾನ ಮತ್ತು ವಿದ್ಯುನ್ಮಾನ ಉಪಕರಣಗಳ ಅಭಿವೃದ್ಧಿಯಿಂದಾಗಿ ಸಮಾಜದ ಮೇಲಾಗುತ್ತಿರುವ ಗಣನೀಯ ಬದಲಾವಣೆಗಳನ್ನು ಕಂಡುಕೊಳ್ಳುವುದರ ಜೊತೆಗೆ ಆಧುನಿಕ ಸಾಹಿತ್ಯಾಭಿವ್ಯಕ್ತಿಯಲ್ಲಿ ಮುಖ್ಯ ಪಾತ್ರ ವಹಿಸುತ್ತಿರುವ ಸಂವಹನ ಮಾಧ್ಯಮವು ಹಿಂದೆಂದಿಗಿಂತ ಇಂದು ಹೆಚ್ಚು ಆಕ್ರಮಣಕಾರಿ ಹಾದಿ ಹಿಡಿದಿರುವುದರಿಂದ ಇವತ್ತಿನ ಸಾಹಿತ್ಯ ಮತ್ತು ವಿಮರ್ಶೆ ಇವುಗಳಿಂದ ಹೇಗೆ ಪ್ರಭಾವಿತಗೊಂಡಿವೆ ಎಂಬುದನ್ನು ಬಹುಮುಖಿ ಶಿಸ್ತಿನ ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವೈಧಾನಿಕತೆ

ಹೊಸ ಶತಮಾನದ ಕನ್ನಡ ವಿಮರ್ಶೆಯ ಪ್ರವೃತ್ತಿಗಳನ್ನು ಗುರುತಿಸಲು ಕ್ರಿ.ಶ. ೨೦೦೦ ದಿಂದ ೨೦೧೦ ರವರೆಗೆ ಬಂದಿರುವ ಎಲ್ಲಾ ವಿಮರ್ಶಾ ಕೃತಿಗಳನ್ನು ಅಧ್ಯಯನ ಮಾಡಲಾಗುವುದು. ಕನ್ನಡ ಸಾಹಿತ್ಯ ಪ್ರಕಾರಗಳಾದ ಕಾವ್ಯ, ನಾಟಕ, ಕತೆ, ಕಾದಂಬರಿ ಸೇರಿದಂತೆ ಎಲ್ಲಾ ಪ್ರಕಾರಗಳನ್ನು ಕುರಿತು ಬಂದಿರುವ ವಿಮರ್ಶೆಯನ್ನು ಪ್ರತ್ಯೇಕವಾಗಿ ಮತ್ತು ಒಟ್ಟು ಅಭಿಪ್ರಾಯ ರೂಪಿಸಿಕೊಳ್ಳಲು ಸಮಗ್ರವಾಗಿ ಅಧ್ಯಯನ ನಡೆಸಲಾಗುವುದು. ಸಾಹಿತ್ಯ ವಿಮರ್ಶೆಯಲ್ಲಿ ಕೆಲವೊಮ್ಮೆ ಕಾವ್ಯ ವಿಮರ್ಶೆ ಮಾಡಿದ ರೀತಿಯಲ್ಲಿ ಕತೆ ಕಾದಂಬರಿಗಳನ್ನು ವಿಮರ್ಶಿಸಲಾಗುವುದಿಲ್ಲ. ಕಥನ ಸಾಹಿತ್ಯದ ವಿಮರ್ಶೆಗೆ ನಾವು ಪ್ರತ್ಯೇಕ ಮಾನದಂಡಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಆ ಕಾರಣದಿಂದ ಸಾಹಿತ್ಯ ಪ್ರಕಾರಗಳನ್ನೇ

ಪ್ರಧಾನವಾಗಿಟ್ಟುಕೊಂಡು ಬಂದಿರುವ ವಿಮರ್ಶೆಯನ್ನು ಅಧ್ಯಯನ ಮಾಡಲು ಒಂದು ಪ್ರತ್ಯೇಕ ಅಧ್ಯಾಯವನ್ನು ರೂಪಿಸಿಕೊಳ್ಳಲಾಗಿದೆ.

ಹಾಗೆಯೇ ವಿಮರ್ಶೆಯ ಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳುವ ಸಲುವಾಗಿ ಎಲ್ಲಾ ಸಾಹಿತ್ಯ ವಿಮರ್ಶಾ ಕೃತಿಗಳನ್ನು ಹಿರಿಯ ಮತ್ತು ಕಿರಿಯ ವಿಮರ್ಶಕರ ಕೃತಿಗಳೆಂದು ವಿಂಗಡಿಸಿಕೊಂಡು, ಹಿರಿಯ ವಿಮರ್ಶಕರ ಕೃತಿಗಳಲ್ಲಿ ಹೊಸ ಕಾಲಮಾನದಲ್ಲಿ ಉಂಟಾಗಿರುವ ಬದಲಾವಣೆಗಳನ್ನು, ಬೆಳವಣಿಗೆಗಳನ್ನು ಗುರುತಿಸುವುದು ಹಾಗೂ ಇತ್ತೀಚೆಗೆ ವಿಮರ್ಶಾ ಕ್ಷೇತ್ರ ಪ್ರವೇಶಿಸಿದವರ ಕೃತಿಗಳ ಹಿಂದಿನ ತಾತ್ವಿಕತೆ, ಆಲೋಚನಾ ಕ್ರಮ, ಸೈದ್ಧಾಂತಿಕ ನೆಲೆಗಟ್ಟು ಮೊದಲಾದವನ್ನು ಅರಿಯುವ ಪ್ರಯತ್ನ ಮಾಡುವುದು. ಹಿರಿಯ ಮತ್ತು ಕಿರಿಯ ವಿಮರ್ಶಕರ ಕೃತಿಗಳನ್ನು ತೌಲನಿಕ ಅಧ್ಯಯನ ನಡೆಸಿ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಪರಿಶೀಲಿಸಿ ಅದರ ಕಾರಣ ಮತ್ತು ಪರಿಣಾಮಗಳನ್ನು ಶೋಧಿಸುವ ಮತ್ತು ಒಂದೇ ಕಾಲಮಾನ ಭಿನ್ನ ವಯೋಮಾನದವರಲ್ಲಿ ಉಂಟುಮಾಡಿರಬಹುದಾದ ಬೆಳವಣಿಗೆಗಳನ್ನು ಗ್ರಹಿಸುವ ಮೂಲಕ ಹೊಸ ಶತಮಾನದ ಕನ್ನಡ ವಿಮರ್ಶೆಯ ಪ್ರವೃತ್ತಿಗಳನ್ನು ಗ್ರಹಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಹಾಗೆಯೆ ಈಗಾಗಲೇ ಜನಪ್ರಿಯವಾಗಿರುವ ಕೃತಿ ಕೇಂದ್ರಿತ ವಿಮರ್ಶೆ, ಕರ್ತೃ ಕೇಂದ್ರಿತ ವಿಮರ್ಶೆ, ಸಮಾಜ ಕೇಂದ್ರಿತ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ, ಸಂಸ್ಕೃತಿ ವಿಮರ್ಶೆ ಮೊದಲಾದ ವಿಮರ್ಶಾ ಪದ್ಧತಿಗಳು ಈ ಅವಧಿಯಲ್ಲಿ ಹೇಗೆ ಬಳಕೆಯಾಗಿವೆ ಎಂಬುದನ್ನು ಮತ್ತು ಈ ರೀತಿಯ ವಿಮರ್ಶಾ ಪ್ರಕಾರಗಳಿಗೆ ಕಾರಣವಾಗಿರಬಹುದಾದ ಬಾಹ್ಯ ಪ್ರೇರಣೆಗಳನ್ನು ಕುರಿತು ಅಧ್ಯಯನ ನಡೆಸಲಾಗಿದೆ.

ಕೊನೆಯದಾಗಿ, ಇಪ್ಪತ್ತೊಂದನೆ ಶತಮಾನದ ಮೊದಲ ದಶಕದಲ್ಲಿ ಕಾಣಿಸಿಕೊಂಡಿರುವ ಕನ್ನಡ ಸಾಹಿತ್ಯ ವಿಮರ್ಶೆಯ ಪ್ರವೃತ್ತಿಗಳೇನು? ಅದರ ಗಮನ ಎತ್ತ ಕಡೆಗೆ ಸಾಗಿದೆ? ಪರಂಪರೆಯ ಜೊತೆಗೆ ಅದರ ಅನುಸಂಧಾನ ಎಂತಹದು ಮತ್ತು ನಾಳೆಗಳನ್ನು ಕುರಿತು ಅದರ ನಿಲುವುಗಳೇನು? ಎಂಬುದನ್ನು ಸೋದಾಹರಣವಾಗಿ ಚರ್ಚಿಸಲಾಗುತ್ತದೆ.

ಅಡಿಟಿಪ್ಪಣಿಗಳು

೧. ಶಿವರುದ್ರಪ್ಪ ಜಿ. ಎಸ್., ಸಮಗ್ರ ಗದ್ಯ – ಸಂಪುಟ ೨, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ಪುಟ – ೩೪
೨. ಕೃಷ್ಣಮೂರ್ತಿ ಎಮ್. ಜಿ., ಕೃತಿ ಸಂಸ್ಕೃತಿ, ರುಜುವಾತು ಪ್ರಕಾಶನ, ಮೈಸೂರು ೧೯೮೩, ಪುಟ – ೧೦೯
೩. ಮರುಳಸಿದ್ದಪ್ಪ ಕೆ., 'ಬಂದೂಕು, ಬಾಂಬುಗಳ ಕಾಲ' ವಿಜಯ ಕರ್ನಾಟಕ ದಿನಪತ್ರಿಕೆ, ೧೬–೧೨–೨೦೧೨
೪. ಅನಂತಮೂರ್ತಿ ಯು. ಆರ್., ಯುಗಪಲ್ಲಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪, ಪುಟ – ೩೩೬
೫. ನಾಗರಾಜ ಡಿ. ಆರ್., ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು – ೫೭೭೪೧೭, ೨೦೧೧, ಪುಟ – ೧೩
೬. ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬, ಮುನ್ನುಡಿ
೭. ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು, ೨೦೧೨, ಮುನ್ನುಡಿ

ಅಧ್ಯಾಯ – ಎರಡು

ಕನ್ನಡ ವಿಮರ್ಶೆ ಬೆಳೆದು ಬಂದ ದಾರಿ

ವಸಾಹತುಶಾಹಿ ಸಂದರ್ಭದಲ್ಲಿ ವಿಕಸನಗೊಂಡ ಆಧುನಿಕ ಕನ್ನಡ ಸಾಹಿತ್ಯವು, ಸಾಹಿತ್ಯದ ವಸ್ತು ಮತ್ತು ಪ್ರಕಾರಗಳಲ್ಲಿ ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತಗೊಂಡಿತು. ಬಹುತೇಕ ಯೂರೋಪಿನಲ್ಲಿ ಅಂದು ಚಾಲ್ತಿಯಲ್ಲಿದ್ದ ಎಲ್ಲಾ ಪ್ರಮುಖ ಸಾಹಿತ್ಯ ಪ್ರಕಾರಗಳನ್ನೂ ಕ್ರಮೇಣವಾಗಿ ಕನ್ನಡವು ತನ್ನದೇ ರೀತಿಯಲ್ಲಿ ದುಡಿಸಿಕೊಂಡಿತು. ಅದರಲ್ಲಿ ವಿಮರ್ಶಾ ಪ್ರಕಾರವೂ ಒಂದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾವ್ಯ, ಕತೆ, ಕಾದಂಬರಿ, ನಾಟಕ ಮೊದಲಾದ ಪ್ರಕಾರಗಳು ಸಮೃದ್ಧವಾಗಿ ಬೆಳೆದಿರುವಂತೆ ವಿಮರ್ಶೆ ಕೂಡಾ ಇಂದು ಹುಲುಸಾಗಿ ಬೆಳೆದು ನಿಂತಿದೆ.

ವಸಾಹತುಶಾಹಿ ಸಂದರ್ಭದಲ್ಲಿ ವಿಕಾಸಗೊಂಡ ಮಾತ್ರಕ್ಕೆ ಆಧುನಿಕ ಕನ್ನಡ ಸಾಹಿತ್ಯವು ಪಶ್ಚಿಮದ ನಕಲು ಎಂದು ಭಾವಿಸಬೇಕಿಲ್ಲ. ಕನ್ನಡದಲ್ಲಿ ಆಧುನಿಕ ಸಾಹಿತ್ಯ ಹುಟ್ಟುವುದಕ್ಕಿಂತ ಸಾವಿರ ವರ್ಷಗಳ ಮುಂಚೆಯಿಂದಲೂ ಸಮೃದ್ಧವಾದ ಸಾಹಿತ್ಯ ಪರಂಪರೆ ಇತ್ತು. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿಯೂ ಕಾಲಕಾಲಕ್ಕೆ ಹೊಸ ರೀತಿಯ ಸಾಹಿತ್ಯ ಪ್ರಕಾರಗಳು ಆವಿಷ್ಕಾರಗೊಂಡು ತಮ್ಮ ಉತ್ಕರ್ಷವನ್ನು ತಲುಪಿದ್ದವು. ಆದರೆ ಬ್ರಿಟೀಷರು ನಮ್ಮ ನಾಡನ್ನು ಆಕ್ರಮಿಸಿ ಅವರ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಾಗ ನಮ್ಮ ಸಾಹಿತ್ಯ ಮತ್ತು ಶಿಕ್ಷಣ ಪದ್ಧತಿಗಳು ಸಹಜವಾಗಿಯೆ ಮರೆಗೆ ಸರಿದವು. ಆಂಗ್ಲ ಭಾಷೆಯಲ್ಲಿ ಹೊಸ ಶಿಕ್ಷಣ ಮತ್ತು ಸಾಹಿತ್ಯದ ಸಂಪರ್ಕ ಪಡೆದ ತಲೆಮಾರು ಕ್ರಮೇಣವಾಗಿ ಅಲ್ಲಿನ ಹೊಸತನಕ್ಕೆ ಮಾರುಹೋಗಿ ಅದನ್ನು ತನ್ನ ಭಾಷೆಯಲ್ಲಿ ನಿರ್ಮಿಸಿಕೊಳ್ಳುವ ಪ್ರಯತ್ನ ಮಾಡಿತು. ಆ ದಿಶೆಯಲ್ಲಿ ಕನ್ನಡ ವಿಮರ್ಶೆ ಭಾರತೀಯ ಕಾವ್ಯಮೀಮಾಂಸೆಯ ಅರಿವಿಟ್ಟುಕೊಂಡು ಪಾಶ್ಚಾತ್ಯ ಶೈಲಿಯ ವಿಮರ್ಶಾ ಪ್ರಕಾರವನ್ನು ರೂಢಿಸಿಕೊಂಡಿತು.

೨.೧ ಕನ್ನಡ ವಿಮರ್ಶೆ: ಬೆಳವಣಿಗೆಯ ಹಂತಗಳು

'ವಿಮರ್ಶೆ' ಎಂದರೆ ಉಜ್ಜಿ ನೋಡುವುದು, ಒರೆಹಚ್ಚಿ ನೋಡುವುದು ಎಂದರ್ಥ. ಯಾವುದೇ ಕಲಾಕೃತಿಯ ಗುಣದೋಷಗಳ ವಿವೇಚನೆ ನಡೆಸುವುದು, ಅನುಭವಗಳ ಅಭಿವ್ಯಕ್ತಿಯ ಸಾಚಾತನವನ್ನು ಪರೀಕ್ಷಿಸುವುದು ವಿಮರ್ಶೆಯ ಕಾರ್ಯವಾಗುತ್ತದೆ. ವಿಮರ್ಶೆಯು ಮನುಷ್ಯನ ಆಲೋಚನಾ ಶಕ್ತಿಯ ಜೊತೆಗೆ ರೂಪುಗೊಂಡಿದ್ದು, ವ್ಯಕ್ತಿಯ ಗ್ರಹಿಕೆ, ಸಂವೇದನೆ, ಪರಿಶೀಲನೆ ಮತ್ತು ವಿಶ್ಲೇಷಣೆಯ ನೆಲೆಯಲ್ಲಿ ಮುಂದುವರೆಯುತ್ತದೆ. ಸಾಹಿತ್ಯವು ಭಾವಪ್ರಧಾನ ನೆಲೆಯಲ್ಲಿ ರಚನೆಗೊಂಡರೆ ಸಾಹಿತ್ಯ ವಿಮರ್ಶೆಯು ಅದನ್ನು ಬುದ್ಧಿಪೂರ್ವಕವಾಗಿ ಗ್ರಹಿಸಿ ನಿರೂಪಿಸುತ್ತದೆ. ವಿಮರ್ಶಾ ಪ್ರವೃತ್ತಿ ಎಲ್ಲೆಡೆ ಸಾಮಾನ್ಯವಾಗಿ

ಅಸ್ತಿತ್ವದಲ್ಲಿರುತ್ತದೆಯಾದರೂ ಕನ್ನಡದಲ್ಲಿ ಆಧುನಿಕ ವಿಮರ್ಶೆ ವಿಕಾಸಗೊಳ್ಳಲು ಕೆಲ ಐತಿಹಾಸಿಕ ಕಾರಣಗಳಿವೆ.

ಯುರೋಪಿನಲ್ಲಿ ಸಾಹಿತ್ಯ ವಿಮರ್ಶೆಯು ಹುಟ್ಟಿದ್ದು ಪುನರುಜ್ಜೀವನದ ಸಂದರ್ಭದಲ್ಲಿ. ಅಲ್ಲಿ ವಿಮರ್ಶೆಯು ಅಧಿಕಾರ ವ್ಯವಸ್ಥೆಯ ಜೊತೆಗಿನ ಅನುಸಂಧಾನದಲ್ಲಿ ಒಂದು ಸಾರ್ವಜನಿಕವೆನ್ನಬಹುದಾದ ಪ್ರತಿಕ್ರಿಯೆಯಾಗಿತ್ತು. ಹಾಗೆಯೇ ಕನ್ನಡದಲ್ಲಿಯೂ ಆಧುನಿಕ ಸಾಹಿತ್ಯ ಅವತರಿಸಿದ್ದು ಹೊಸ ತಿಳುವಳಿಕೆಯಿಂದಲೇ. ಆದ್ದರಿಂದ ಕನ್ನಡದಲ್ಲಿ ಆರಂಭದ ವಿಮರ್ಶೆಯು ಜನಮುಖಿಯಾಗುವ ಆಸಕ್ತಿ ತೋರಿತು. ವಸಾಹತು ದೇಶವಾಗಿದ್ದ ನಮ್ಮಲ್ಲಿ, "ಇಂಗ್ಲೆಂಡಿನಲ್ಲಿ ಸಾಹಿತ್ಯ ವಿಮರ್ಶೆಯು ಹುಟ್ಟಿಕೊಂಡು ವ್ಯಾಪಕ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದ ಹಾಗೆಯೇ ನಮ್ಮಲ್ಲಿಯೂ ಅದು ವಿಶಿಷ್ಟ ಪ್ರಕಾರವಾಗಿ ರೂಪುಗೊಂಡಿತು. ಒಂದರ್ಥದಲ್ಲಿ ವಸಾಹತುಕಾಲದ ಮಧ್ಯಮವರ್ಗದ ಬುದ್ಧಿಜೀವಿಗಳ ಸಾಂಸ್ಕೃತಿಕ ಪಾತ್ರಕ್ಕೂ, ಅವರ ಅಭಿವ್ಯಕ್ತಿ ಕ್ರಮಕ್ಕೂ ಹಾಗೂ ಸಾಹಿತ್ಯ ವಿಮರ್ಶೆಯ ಕ್ರಮಕ್ಕೂ ಅಂತರಾಳದ ಪರಸ್ಪರ ಸಂಬಂಧವಿರುವಂತೆ ತೋರುತ್ತದೆ."[೧] ಇಂಗ್ಲಿಷ್ ಮಾದರಿಯ ಶಿಕ್ಷಣ ಕ್ರಮದಿಂದ ಸ್ಫೂರ್ತಿಗೊಂಡ ಹೊಸ ರೀತಿಯ ಚಿಂತನೆಯು ಕನ್ನಡದಲ್ಲಿ ವಿವಿಧ ಸಾಹಿತ್ಯ ರೂಪಗಳ ಆವಿರ್ಭಾವಕ್ಕೆ ಕಾರಣವಾದ ಹಾಗೆಯೇ ಸಾಹಿತ್ಯ ವಿಮರ್ಶೆಯೂ ಆ ರೀತಿಯ ಸಾಂಸ್ಕೃತಿಕ ರಂಗದ ಹೊಸ ಅಭಿವ್ಯಕ್ತಿಯ ಸಾಧ್ಯತೆಯಾಗಿತ್ತು. ಹೊಸದಾಗಿ ಶಿಕ್ಷಣ ಪಡೆದ ವರ್ಗದ ಬೌದ್ಧಿಕ ಪ್ರತಿಕ್ರಿಯೆಗಳಲ್ಲಿ ಸಾಹಿತ್ಯ ವಿಮರ್ಶೆಯೂ ಒಂದು ಪ್ರಮುಖ ಸಾಧನವಾಯಿತು.

ಇಪ್ಪತ್ತನೆ ಶತಮಾನದ ಆರಂಭದೊಂದಿಗೆ ಕನ್ನಡ ಸೇರಿದಂತೆ ಬಹುತೇಕ ಭಾರತದ ಎಲ್ಲಾ ಭಾಷೆಗಳಲ್ಲೂ ಹೊಸ ರೀತಿಯ ಸಾಹಿತ್ಯ ರಚನೆಯಾಗಲು ಆರಂಭಿಸಿತು. ಆದರೆ ಒಟ್ಟು ಭಾರತೀಯ ಆಧುನಿಕ ಸಾಹಿತ್ಯದ ಮೇಲೆ ಪಾಶ್ಚಾತ್ಯ ಸಾಹಿತ್ಯ ಮತ್ತು ಶಿಕ್ಷಣ ಪದ್ಧತಿಗಳು ಗಂಭೀರ ಪ್ರಭಾವ ಬೀರಿದವಾದರೂ ತನ್ನ ಪ್ರಾಚೀನ ಸಾಹಿತ್ಯದೊಂದಿಗಿನ ಸಂಬಂಧವನ್ನು ಯಾವ ಭಾಷೆಯ ಸಾಹಿತ್ಯಗಳೂ ಸಂಪೂರ್ಣವಾಗಿ ಕಡಿದುಕೊಳ್ಳಲಿಲ್ಲ. ಬದಲಿಗೆ ತಮ್ಮ ಸಾಹಿತ್ಯ ಪರಂಪರೆಯ ಜೊತೆಗೆ ಪಾಶ್ಚಾತ್ಯ ಸಾಹಿತ್ಯವನ್ನು ಅನುಸಂಧಾನ ಮಾಡಿಕೊಂಡವು. ಬಿ. ಎಂ. ಶ್ರೀ. ಯವರ 'ಕಾಣಿಕೆ' ಪದ್ಯದಲ್ಲಿ ಹೇಳುವಂತೆ

> "ಇವಳ ತೊಡುಗೆ ಅವಳಿಗಿಟ್ಟು ನೋಡಬಯಸಿದೆ
> ಅವಳ ತೊಡುಗೆ ಇವಳಿಗಿಟ್ಟು ಹಾಡಬಯಸಿದೆ"[೨]

ಎನ್ನುವ ಕ್ರಿಯೆ ನಡೆಯಿತು.

ಇಷ್ಟಾದರೂ ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳು ಸ್ವರೂಪ ಮತ್ತು ವಸ್ತುವಿನ ದೃಷ್ಟಿಯಿಂದ ಪಶ್ಚಿಮವನ್ನು ಅನುಸರಿಸಿದಂತೆ ವಿಮರ್ಶೆಯೂ ತನ್ನ ಮೂಲ ಸ್ವರೂಪ ಮತ್ತು ಉದ್ದೇಶಗಳನ್ನು ಅಲ್ಲಿಂದಲೇ ಪಡೆದುಕೊಂಡಿತು. ವಿಮರ್ಶೆಯು ಕೃತಿಯೊಂದರ ವಿಶ್ಲೇಷಣೆ ಮತ್ತು ಮೌಲ್ಯಮಾಪನ ಕಾರ್ಯವನ್ನು ಪ್ರಧಾನವಾಗಿಟ್ಟುಕೊಂಡು

ಚಾಲ್ತಿಗೆ ಬಂದ ಒಂದು ಪ್ರಕಾರ. ಆ ಹಿನ್ನೆಲೆಯಲ್ಲಿ ಕೃತಿಯ ವಿಶ್ಲೇಷಣೆ ಮತ್ತು ಮೌಲ್ಯಮಾಪನ ಕ್ರಿಯೆಯು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಾವ್ಯದ ಉಪೋದ್ಘಾತಗಳಲ್ಲಿ, ಕಾವ್ಯಮೀಮಾಂಸೆಯ ನೆಪದಲ್ಲಿ ಕ್ವಚಿತ್ತಾಗಿ ನಡೆಯುತ್ತಿದ್ದವು. ಆದರೆ ಆಧುನಿಕ ಸಂದರ್ಭದಲ್ಲಿ ವಿಮರ್ಶೆಯ ನೆಲೆಯಲ್ಲಿ ಮೌಲ್ಯಮಾಪನ ಕ್ರಿಯೆಗಳು ಬಹು ಗಂಭೀರವಾಗಿ ಪ್ರಕಟಗೊಳ್ಳತೊಡಗಿದವು.

ಪ್ರಾಚೀನ ಕೃತಿಗಳಲ್ಲಿ ಮೌಲ್ಯವಿವೇಚನೆ

ಕನ್ನಡ ಭಾಷೆ, ಸಾಹಿತ್ಯಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಇಂದಿಗೆ ಸುಮಾರು ಒಂದೂವರೆ ಸಾವಿರ ವರ್ಷಗಳ ದೀರ್ಘ ಅವಧಿಯ ಇತಿಹಾಸವಿದೆ. ಇಂತಹ ಸುದೀರ್ಘವಾದ ಸಾಹಿತ್ಯ ಪರಂಪರೆಯಲ್ಲಿ ಕನ್ನಡ ಸಾಹಿತ್ಯವು ಸಮೃದ್ಧವಾಗಿ ಬೆಳೆದಿದೆ. ಆರಂಭದಿಂದ ಆಧುನಿಕ ಸಾಹಿತ್ಯದವರೆಗೆ ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ಅನ್ನುವ ರೂಪವು ಪ್ರತ್ಯೇಕವಾಗಿ ಇರಲಿಲ್ಲ. ಆದರೆ ಭಾರತೀಯ ಕಾವ್ಯಮೀಮಾಂಸೆಯು ಭಾರತೀಯ ಸಾಹಿತ್ಯಗಳಲ್ಲಿ ವಿಮರ್ಶೆಯ ಕೆಲಸವನ್ನು ಮಾಡುತ್ತಾ ಬಂದಿದ್ದು, ಕನ್ನಡ ಸಾಹಿತ್ಯವನ್ನು ಇಂತಹ ಮೀಮಾಂಸೆಗಳಿಗೆ ಅನ್ವಯಿಸಿ ನೋಡುವ ಪ್ರಯತ್ನಗಳು ನಡೆದಿವೆ. ನಮ್ಮ ಪ್ರಾಚೀನ ಕನ್ನಡ ಕವಿಗಳು ತಮ್ಮ ಕಾವ್ಯಗಳ ಆರಂಭದ ಭಾಗಗಳಲ್ಲಿ ವಿಮರ್ಶೆಯ ರೂಪದ ವಿಚಾರಗಳನ್ನು ವ್ಯಕ್ತಪಡಿಸಿರುವುದು ಕಂಡು ಬರುತ್ತದೆ. ಆದರೆ ಈಗಿನಂತೆ ಸುವ್ಯವಸ್ಥಿತವಾದ ಕೃತಿಗಳ ಮೌಲ್ಯಮಾಪನ ಮಾಡಿ ಬರೆಯುವಂಥ ಪದ್ಧತಿ ಆಗ ಇರಲಿಲ್ಲ.

ಪ್ರಾಚೀನ ಸಾಹಿತ್ಯದಲ್ಲಿ ವಿಮರ್ಶೆ ಅನ್ನುವಂಥದ್ದು, ಲಿಖಿತ ಪರಂಪರೆಯಾಗಿ ಇರದಿದ್ದರೂ, ಮೌಖಿಕವಾಗಿ ಅದು ಸಾಹಿತ್ಯ ನಿರ್ಮಾಣಕ್ಕೆ ಸಹಾಯಕವಾಗಿತ್ತು ಎಂಬ ಅಂಶಗಳನ್ನು ನಾವು ಕಾಣಲು ಸಾಧ್ಯವಿದೆ. "ರಾಜರ ಆಸ್ಥಾನಗಳಲ್ಲಿ ವಿರಾಜಿಸುತ್ತಿದ್ದ ಪಂಡಿತರೇ ಅಂದಿನ ಕಾಲದ ವಿಮರ್ಶಕರು. ಅವರ ಪ್ರೇರಣೆ, ಪ್ರಚೋದನೆ, ಮನ್ನಣೆಗಳಿಂದ ಕಾವ್ಯಗಳನ್ನು ಪ್ರಕಟಿಸುವುದು ಆ ಕಾಲದ ಸಂಪ್ರದಾಯವಾಗಿದ್ದಿತು"[೩] ಎಂಬುದನ್ನು ಗಮನಿಸಿದಾಗ ಯಾವ ಕಾಲದಲ್ಲಿಯೆ ಆಗಲಿ ಸಾಹಿತ್ಯ ಸೃಷ್ಟಿಗೆ ವಿಮರ್ಶೆಯು ಬಹು ಅಗತ್ಯ ಎಂಬುದನ್ನು ತಿಳಿಯಬಹುದು.

ಕನ್ನಡದ ಆದಿಕವಿ ಪಂಪ ತನ್ನೆರಡೂ ಕೃತಿಗಳು 'ಮುನ್ನಿನ ಕಬ್ಬಮನೆಲ್ಲಮನ್ ಇಕ್ಕಿ ಮೆಟ್ಟಿದವು' ಎಂದು ಹೇಳುವ ಸಂದರ್ಭದಲ್ಲಿ ವಿಮರ್ಶೆಯ ಛಾಯೆ ಕಂಡುಬರುತ್ತದೆ. ತನ್ನ ವಿಕ್ರಮಾರ್ಜುನ ವಿಜಯ ಕೃತಿಯಲ್ಲಿ

> ಕತೆ ಪಿರಿದಾದೊಡೆ ಕತೆಯ ಮೆಯ್ ಕೆಡಲೀಯದೆ ಮುಂ ಸಮಸ್ತ ಭಾ
> ರತಮನಪೂರ್ವಮಾಗೆ ಸಲೆ ಪೇಳ್ದ ಕವೀಶ್ವರರಿಲ್ಲ ವರ್ಣಕಂ
> ಕತೆಯೊಳೊಡಂಬಡಂ ಪಡೆಯೆ ಪೇಳ್ವೆಡೆ ಪಂಪನೆ ಪೇಳ್ಗುಮೆಂದು ಪಂ
> ಡಿತರೆ ತಗುಳ್ದು ಬಿಚ್ಚಳಿಸೆ ಪೇಳಲೊಡರ್ಚಿದೆನೀ ಪ್ರಬಂಧಮಂ[೪]

ಎಂದು ಆಸ್ಥಾನ ಪಂಡಿತರು ಪಂಪನ ಪ್ರತಿಭೆಯನ್ನು ಗುರುತಿಸಿ, ಸಮಸ್ತ ಭಾರತವನ್ನು ಬರೆಯುವ ಸಾಮರ್ಥ್ಯ ಪಂಪನಿಗೆ ಮಾತ್ರ ಇದೆ ಎಂದು ಹೇಳುವಲ್ಲಿಯೇ ವಿಮರ್ಶನ ಪ್ರಜ್ಞೆ ಅಡಗಿರುವುದನ್ನು ನಾವು ಕಾಣಬಹುದು. ಹಿಂದಿನ ಕಾಲದಲ್ಲಿ ಕವಿಗಳು ರಚಿಸಿದ ಕಾವ್ಯಗಳು ಪಂಡಿತರ ಸಮ್ಮುಖದಲ್ಲಿ ಪರೀಕ್ಷೆಗೊಳಪಡುತ್ತಿದ್ದವು. ಆಗ ಅರಸರು ಅದನ್ನು ಗಮನಿಸಿ ಆಶ್ರಯವನ್ನೂ, ಬಹುಮಾನಗಳನ್ನೂ ನೀಡುತ್ತಿದ್ದರು.

ರನ್ನ ಕವಿಯು ತನ್ನ ಗದಾಯುದ್ಧವನ್ನು ಪರೀಕ್ಷಿಸುವವನಿಗೆ "ರನ್ನನ ಕೃತಿರತ್ನಮಮಂ ಪರೀಕ್ಷಿಪಂಗೆಂಟೆರ್ದೆಯೆ"[೫] ಎಂದು ಸವಾಲು ಹಾಕುತ್ತಾನೆ. ಹೀಗೆ ಹೇಳಿರುವಲ್ಲಿ ರನ್ನನು ತನ್ನ ಕಾವ್ಯದ ಗಟ್ಟಿತನವನ್ನು, ತನ್ನ ಪ್ರತಿಭೆಯನ್ನು ಕುರಿತು ಆತ್ಮಪ್ರತ್ಯಯದ ಮಾತುಗಳನ್ನು ಆಡುತ್ತಾನೆ. ವಿಮರ್ಶಕರಾದವರು ತನ್ನ ಕೃತಿ ಪರಿಶೀಲಿಸಲು ಯೋಗ್ಯ ಪಾಂಡಿತ್ಯವನ್ನು ಗಳಿಸಿಕೊಂಡಿರಬೇಕೆಂಬುದೇ ರನ್ನನ ಉದ್ದೇಶವಾಗಿದೆ. ಹಾಗೆಯೇ ಕೇಶಿರಾಜನು ತನ್ನ ಶಬ್ದಮಣಿದರ್ಪಣಂ ರಚನೆಗೆ ಪಂಡಿತರ ಆಗ್ರಹವೇ ಕಾರಣವೆಂದು ಹೇಳುತ್ತಾನೆ. ಇಲ್ಲಿಯ ಪಂಡಿತರನ್ನು ಸ್ಥೂಲವಾಗಿ ಇವತ್ತಿನ ವಿಮರ್ಶಕರಿಗೆ ಹೋಲಿಸಬಹುದು.

ಗುಣಮಮರೆ ಶಬ್ದಮಣಿ ದ
ರ್ಪಣ ನಾಮಮನಿಟ್ಟು ನೆರೆಯೆ ಕರ್ಣಾಟಕ ಲ
ಕ್ಷಣ ಶಬ್ದಶಾಸ್ತ್ರಮಂ ಲಾ
ಕ್ಷಣಿಕರ್ ಪೇಳೆಂದು ಬೆಸಸೆ ಬಗೆವುಗೆ ಪೇಳ್ವೆಂ[೬]

ಎಂದು ಹೇಳುವ ಮೂಲಕ ಆ ಕಾಲದಲ್ಲಿಯೂ ಕವಿಯ ಪ್ರತಿಭೆ ಹಾಗೂ ಕಾವ್ಯದ ಮಹತ್ವವನ್ನು ಗುರುತಿಸುವ ಕಾರ್ಯ ನಡೆಯುತ್ತಿತ್ತು. ಆಗಿನ ಆಸ್ಥಾನ ಪಂಡಿತರೆನಿಸಿಕೊಂಡವರು, ಒಬ್ಬ ಕವಿಯ ಕಾವ್ಯದ ಸಾಹಿತ್ಯಿಕ ಸತ್ವ, ಕವಿಯ ಕಾವ್ಯ ರಚನಾ ಸಾಮರ್ಥ್ಯಗಳನ್ನು ಒರೆಗೆ ಹಚ್ಚುವ ಮೂಲಕ ಆತನ ಬೆಳವಣಿಗೆಗೆ ಕಾರಣರಾಗುತ್ತಿದ್ದರು. "ಆದಿಕವಿ ಪಂಪನಿಂದ ಷಡಕ್ಷರ ದೇವನವರೆಗಿನ ಕಾವ್ಯಗಳನ್ನು ಪರಿಶೀಲಿಸಿದರೆ ಕಾವ್ಯ ವಿಮರ್ಶೆ ಆ ಕಾಲದಲ್ಲಿ ಆಗಾಗ ನಡೆಯುತ್ತಾ ಬಂದಂತೆ ವಿದಿತವಾಗುತ್ತದೆ. ಆ ವಿಮರ್ಶೆಯ ರೂಪುರೇಷೆಗಳೆಲ್ಲ ಇಂದು ಸರಳವಾಗಿ ದೊರೆಯುವಂತಿಲ್ಲ. ಪಂಡಿತರ ಅಭಿಪ್ರಾಯ ತಮ್ಮ ಕೃತಿಗಳ ಬಗೆಗೆ ಹೀಗಿತ್ತೆಂದು ಕವಿಗಳೇ ಸಂಗ್ರಹಿಸಿ ಕಾವ್ಯಾರಂಭದಲ್ಲಿ ಹೇಳಿರುವಷ್ಟು ಮಾತ್ರ ನಮಗೆ ದೊರೆಯುತ್ತವೆ."[೭] ಶಾಸ್ತ್ರಗ್ರಂಥಗಳನ್ನು ಕುರಿತು ಬರುತ್ತಿದ್ದ ಟೀಕು, ವ್ಯಾಖ್ಯಾನ ಗ್ರಂಥಗಳು ಕಾವ್ಯಗಳನ್ನೂ ಕುರಿತು ಬಂದಿದ್ದರೆ ನಾವು ಅವುಗಳನ್ನು ವಿಮರ್ಶೆಯ ವ್ಯಾಪ್ತಿಗೆ ಸೇರಿಸಬಹುದಿತ್ತು. ಒಟ್ಟಿನಲ್ಲಿ ಕನ್ನಡದ ಕವಿಗಳು ತಮ್ಮ ಕೃತಿಯನ್ನು ಕುರಿತು ಪಂಡಿತರು ತಾಳಿರುವ ನಿಲುವುಗಳನ್ನು ತಮ್ಮ ಕಾವ್ಯಗಳಲ್ಲಿ ದಾಖಲಿಸುವ ಮುಖಾಂತರ ಮತ್ತು ಕಾವ್ಯದ ಬಗ್ಗೆ ತಮ್ಮ ನಿಲುವುಗಳನ್ನು ಹೇಳುವ ಸಂದರ್ಭದಲ್ಲಿ ಕಾವ್ಯ ಮೀಮಾಂಸೆ ಮತ್ತು ಕಾವ್ಯ ವಿಮರ್ಶೆಯ ಹೊಳಹುಗಳಿರುವುದನ್ನು ಕಾಣಬಹುದು.

ಹೊಸಗನ್ನಡದ ಪುನರುಜ್ಜೀವನದ ಕಾಲ

ಕರ್ನಾಟಕದ ಹಲವು ಭಾಗಗಳು ಬ್ರಿಟೀಷರ ವಸಾಹತುವಾದ ಮೇಲೆ ಯುರೋಪಿನಿಂದ ಬಂದ ಮಿಷನರಿಗಳು ಕ್ರೈಸ್ತ ಧರ್ಮ ಪ್ರಚಾರ ಮಾಡುವ ಉದ್ದೇಶದಿಂದ ಇಲ್ಲಿಯ ಭಾಷೆ ಮತ್ತು ವ್ಯಾಕರಣ ಕಲಿಯುವ ಸಂದರ್ಭದಲ್ಲಿ ಕನ್ನಡದಲ್ಲಿದ್ದ ಸಾಹಿತ್ಯವನ್ನೂ ಅರಿತು ಅದರಲ್ಲಿ ಉತ್ಕೃಷ್ಟವಾದುದನ್ನು ಪ್ರಕಟಿಸಿದರು. ಆ ಸಂದರ್ಭದಲ್ಲಿ ಅವುಗಳಿಗೆ ಬರೆದ ಮುನ್ನುಡಿಗಳು ಕನ್ನಡ ಸಾಹಿತ್ಯದ ಮೊದಲ ವಿಮರ್ಶೆಗಳಾಗಿ ದಾಖಲಾಗುತ್ತವೆ.

ಈ. ಪಿ. ರೈಸ್ ಅವರ 'ಹಿಸ್ಟರಿ ಆಫ್ ಕ್ಯಾನರೀಸ್ ಲಿಟರೇಚರ್', ಆರ್. ಎಫ್. ಕಿಟ್ಟೆಲ್‌ರು ಶಬ್ದಮಣಿದರ್ಪಣಕ್ಕೆ ಬರೆದ ಮುನ್ನುಡಿ, ಆರ್. ನರಸಿಂಹಾಚಾರ್ಯರ ಕರ್ನಾಟಕ ಕವಿಚರಿತೆಯ ಸಂಪುಟಗಳು, ಫ್ಲೀಟ್‌ರ ಜನಪದ ಸಾಹಿತ್ಯ ಸಂಗ್ರಹ ಮತ್ತು ಶಾಸನಗಳ ಅಧ್ಯಯನ ಇವು ಅದುವರೆಗಿನ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಹೊಸ ತಿಳಿವಳಿಕೆಯಲ್ಲಿ ನೋಡಲು ಪ್ರಯತ್ನಿಸಿದವುಗಳಾಗಿವೆ. ಯುರೋಪಿನಲ್ಲಿ ಚಾಲ್ತಿಗೆ ಬರುತ್ತಿದ್ದ ವಿಮರ್ಶಾ ವಿಧಾನಗಳ ಹಿನ್ನೆಲೆಯಲ್ಲಿ ಮೊದಲ ಬಾರಿಗೆ ದೇಶಿ ಸಾಹಿತ್ಯವನ್ನು ನೋಡಿ ಮೌಲ್ಯಮಾಪನ ಮಾಡಿದ ಶ್ರೇಯ ಇವರಿಗೆ ಸಲ್ಲುತ್ತದೆ. ಇವರ ಈ ಮುನ್ನುಡಿಗಳಿಂದಾಗಿ ನಂತರದ ತಲೆಮಾರು ಕನ್ನಡ ಪರಂಪರೆಯನ್ನು ಅರ್ಥೈಸಲು ಇವರು ಅಡಿಪಾಯ ನಿರ್ಮಿಸಿದರು ಎಂದರೂ ತಪ್ಪಾಗುವುದಿಲ್ಲ. ಬಿ. ಎಮ್. ಶ್ರೀಕಂಠಯ್ಯನವರು ಕನ್ನಡ ಕೈಪಿಡಿಗಾಗಿ ರಚಿಸಿದ ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತೆಯನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಸಾಹಿತ್ಯ ಪತ್ರಿಕೆಗಳು ಮತ್ತು ದಿನಪತ್ರಿಕೆಗಳು

ಭಾರತದಲ್ಲಿ ಮುದ್ರಣ ವ್ಯವಸ್ಥೆ ಜಾರಿಗೆ ಬಂದು ದಿನಪತ್ರಿಕೆಗಳು, ನಿಯತಕಾಲಿಕಗಳು ಪ್ರಕಟಗೊಳ್ಳಲು ಆರಂಭಿಸಿದಾಗ ಪ್ರಾಚೀನ ಕನ್ನಡ ಸಾಹಿತ್ಯದ ಹಲವಾರು ಉತ್ತಮ ಕೃತಿಗಳ ಆಯ್ದ, ರಸವತ್ತಾದ ಭಾಗಗಳು ಉತ್ತಮ ಮುನ್ನುಡಿಗಳೊಂದಿಗೆ ಪ್ರಕಟವಾಗಲಾರಂಭಿಸಿದವು. ಕರ್ಣಾಟಕ ಗ್ರಂಥಮಾಲ, ಕರ್ಣಾಟಕ ಭಾಷಾ ಸೇವಕ, ಕರ್ಣಾಟಕ ಕಾವ್ಯ ಮಂಜರಿ, ವಾಗ್ಭೂಷಣ, ಸುವಾಸಿನಿ, ಸದ್ಬೋಧ ಚಂದ್ರಿಕೆ ಮೊದಲಾದ ಪತ್ರಿಕೆಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯ ಮೊಳೆಯಲಾರಂಭಿಸಿತು. ಆನಂತರ ಮೈಸೂರಿನಿಂದ ಹೊರಡುತ್ತಿದ್ದ 'ಪ್ರಬುದ್ಧ ಕರ್ನಾಟಕ', ಮತ್ತು ಉತ್ತರ ಕರ್ನಾಟಕದಿಂದ ಹೊರಡುತ್ತಿದ್ದ 'ಜಯಕರ್ನಾಟಕ' ಈ ಎರಡೂ ನಿಯತಕಾಲಿಕಗಳು ಸಾಹಿತ್ಯವನ್ನು ಕುರಿತ ಲೇಖನಗಳಿಗೆ ಮತ್ತು ಸಾಹಿತ್ಯ ಪ್ರಕಟಣೆಗಳ ವಿಮರ್ಶೆಗೆ ಅವಕಾಶ ಮಾಡಿಕೊಟ್ಟವು. ಆನಂತರದಲ್ಲಿ ನವ್ಯ ಸಾಹಿತ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಪ್ರಕಟವಾಗತೊಡಗಿದ ಮನ್ವಂತರ, ಸಂಕ್ರಮಣ, ಸಾಕ್ಷಿ ಹಾಗೂ ದಲಿತ–ಬಂಡಾಯ ಸಾಹಿತ್ಯ ಚಳುವಳಿಗಳು ಆರಂಭವಾದಾಗ ಪ್ರಕಟಗೊಳ್ಳಲಾರಂಭಿಸಿದ ಶೂದ್ರ, ರುಜುವಾತು, ಸಾಧನೆ,

ಸಂಚಯ, ಅಂಕಣ, ಸಂವಾದ, ದೇಶಕಾಲ, ಅರುಹು–ಕುರುಹು ಮೊದಲಾದ ಸಾಹಿತ್ಯ ಪತ್ರಿಕೆಗಳು ಕನ್ನಡದಲ್ಲಿ ವ್ಯಾಪಕವಾಗಿ ವಿಮರ್ಶೆ ಬೆಳೆಯಲು ಸಹಾಯಕವಾದವು.

ಆರಂಭದ ಸಾಹಿತ್ಯ ಪತ್ರಿಕೆಗಳು ಹೊಸ ಚಿಂತನೆಯ ಫಲವಾದ ನಮ್ಮ ಸಂಸ್ಕೃತಿಯ ಬೇರುಗಳನ್ನು ಹುಡುಕುವುದು, ನಮ್ಮ ಅಸ್ಥಿತ್ವವನ್ನು ಹೊಸ ಬೆಳಕಿನಲ್ಲಿ ಕಟ್ಟಿಕೊಳ್ಳುವುದು, ಅನ್ಯಭಾಷೆಯಲ್ಲಿ ಆಗುತ್ತಿದ್ದ ಬೆಳವಣಿಗೆಗಳನ್ನು ಅರಿಯುವುದು, ಹೊಸ ಹೊಸ ಚಿಂತನೆಗಳನ್ನು ನಮ್ಮ ಭಾಷೆಗೆ ತಂದುಕೊಳ್ಳುವುದು ಇತ್ಯಾದಿ ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ನಂತರದ ಪತ್ರಿಕೆಗಳು ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮುಖ್ಯ ವಾಗ್ವಾದಗಳನ್ನು ಹುಟ್ಟುಹಾಕುವ ಮೂಲಕ ನಮ್ಮ ಚಿಂತನೆಯನ್ನು ನಿರ್ದೇಶಿಸುವ ಕಾರ್ಯವನ್ನು ಅವು ಮಾಡಿದವು. ಅದರಲ್ಲೂ ನವೋದಯ ಸಂದರ್ಭದಲ್ಲಿ ಮಾಸ್ತಿಯವರು ಆರಂಭಿಸಿದ 'ಜೀವನ' ಪತ್ರಿಕೆಯಲ್ಲಿ ನಡೆದ ಕುವೆಂಪು ಅವರ 'ಶೂದ್ರತಪಸ್ವಿ' ನಾಟಕ ಕುರಿತ ಚರ್ಚೆ ಕನ್ನಡದಲ್ಲಿ ಹೊಸ ಸಾಂಸ್ಕೃತಿಕ ಚರ್ಚೆಗೆ, ಚಿಂತನೆಗೆ ದಾರಿಮಾಡಿಕೊಟ್ಟಿತು.

ಹಾಗೆಯೇ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಪ್ರಕಟವಾಗುತ್ತಿದ್ದ ವಿವಿಧ ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು ಕನ್ನಡದ ವಿವಿಧ ಸಾಹಿತ್ಯ ಪ್ರಕಾರಗಳು ಮತ್ತು ಪುಸ್ತಕ ವಿಮರ್ಶೆ ಬೆಳೆಯಲು ಅನುವು ಮಾಡಿಕೊಟ್ಟವು. ಮುಖ್ಯವಾಗಿ ಸಣ್ಣಕಥೆ, ಅಂಕಣಸಾಹಿತ್ಯ, ಪ್ರಬಂಧ, ಕವಿತೆ ಮೊದಲಾದ ಸಾಹಿತ್ಯ ಪ್ರಕಾರಗಳು ಪತ್ರಿಕೆಗಳಿಂದಾಗಿ ಅಪಾರ ಮೊತ್ತದಲ್ಲಿ ಸೃಷ್ಟಿಯಾದವು. ಅದರಲ್ಲೂ ನವ್ಯ ಸಾಹಿತ್ಯ ಕನ್ನಡದಲ್ಲಿ ಯಶಸ್ವಿಯಾಗುವಲ್ಲಿ ಪತ್ರಿಕೆಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕನ್ನಡದಲ್ಲಿ ವಿಮರ್ಶೆ ವೃತ್ತಿಪರತೆಯನ್ನು ಪಡೆದುಕೊಂಡಿದ್ದು ನವ್ಯದ ಕಾಲಘಟ್ಟದಲ್ಲಿ. ಅದಕ್ಕೆ ಕಾರಣ ಆಗ ಪ್ರಕಟವಾದ ಪ್ರಮುಖ ಕೃತಿಗಳಿಗೆ ತಕ್ಷಣದ ವಿಮರ್ಶೆ ಪ್ರಕಟವಾಗಿ ಅದು ಸಂವಾದದ ರೂಪದಲ್ಲಿ ಬೆಳೆಯುವಂತೆ ಪತ್ರಿಕೆಗಳು ಮತ್ತು ಸಾಹಿತ್ಯದ ನಿಯತಕಾಲಿಕಗಳು ಆಸಕ್ತಿ ವಹಿಸುತ್ತಿದ್ದವು. ಕನ್ನಡ ಸಾಹಿತ್ಯದಲ್ಲಿ ನಡೆದಿರುವ ಕೆಲ ವಾಗ್ವಾದಗಳಿಗೆ ವೇದಿಕೆ ಒದಗಿಸಿದ ಶ್ರೇಯಸ್ಸೂ ಕೆಲ ದಿನಪತ್ರಿಕೆಗಳಿಗೆ ಸಲ್ಲಬೇಕಾಗಿದೆ. (ಅವುಗಳಲ್ಲಿ ಇತ್ತೀಚೆಗೆ ಪ್ರಜಾವಾಣಿ ಪತ್ರಿಕೆಯಲ್ಲಿ ನಡೆದ 'ವಚನಗಳು ಜಾತಿ ವಿರೋಧಿ ರಚನೆಗಳೇ' ಎಂಬುದು ಅತ್ಯುತ್ತಮ ಉದಾಹರಣೆ.) ಆ ಮೂಲಕ ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ರೂಪುಗೊಂಡು ಅಭಿವೃದ್ಧಿ ಹೊಂದುವಲ್ಲಿ ಸಹಾಯಕವಾಗಿ ಕೆಲಸ ಮಾಡಿವೆ.

ವಿಶ್ವವಿದ್ಯಾಲಯಗಳ ಚಟುವಟಿಕೆಗಳು

ದೇಶೀಯ ಸಂಸ್ಥಾನಗಳಲ್ಲಿ ಸ್ಥಾಪನೆಯಾದ ಮೊದಲ ವಿಶ್ವವಿದ್ಯಾಲಯ ಎಂದು ಹೆಸರಾದ ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿದೆ. ೧೯೨೮ರಲ್ಲಿ ಮೊದಲ ಕನ್ನಡ ಸ್ನಾತಕೋತ್ತರ ತರಗತಿಗಳನ್ನು ಆರಂಭಿಸಿ ಕುವೆಂಪು, ಡಿ. ಎಲ್. ಎನ್., ತೀ. ನಂ. ಶ್ರೀ. ಮೊದಲಾದ ಕನ್ನಡದ ಶ್ರೇಷ್ಠ ವಿದ್ವಾಂಸರು

ಮತ್ತು ಸಾಹಿತಿಗಳು ಅಲ್ಲಿ ನೆಲೆಗೊಳ್ಳುವಂತಾಯಿತು. ಹಳಗನ್ನಡ ಕೃತಿಗಳ ಸಂಪಾದನೆ, ವಿಶ್ಲೇಷಣೆ, ಪಠ್ಯಪುಸ್ತಕಗಳ ರಚನೆ, ಪರಾಮರ್ಶನ ಗ್ರಂಥಗಳ ರಚನೆ ಮೊದಲಾದ ಚಟುವಟಿಕೆಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆ ವಿಕಾಸಗೊಳ್ಳಲು ವಿಶ್ವವಿದ್ಯಾಲಯದ ಚಟುವಟಿಕೆಗಳು ನೆರವಾದವು. ಅದರಲ್ಲೂ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳು ಮತ್ತು ಸಾಹಿತ್ಯ ಪ್ರಚಾರೋಪನ್ಯಾಸ ಗ್ರಂಥಮಾಲೆಗಳ ಮೂಲಕ ಆರಂಭದಲ್ಲಿ ಕನ್ನಡ ವಿಮರ್ಶೆ ಭದ್ರವಾಗಿ ನೆಲೆಗೊಳ್ಳಲು ಕಾರಣವಾಯಿತು.

ಸ್ವಾತಂತ್ರ್ಯಾನಂತರ ಶಿಕ್ಷಣ ಪಡೆಯುವವರ ಸಂಖ್ಯೆ ಹೆಚ್ಚಾದಂತೆ ವಿಶ್ವವಿದ್ಯಾಲಯಗಳ ಸಂಖ್ಯೆ ಕೂಡಾ ಹೆಚ್ಚಾದವು. ಅವುಗಳಲ್ಲಿ ವಿದ್ಯಾರ್ಥಿಗಳಿಗೆ ನಿಗದಿಪಡಿಸುತ್ತಿದ್ದ ಪಠ್ಯ ಮತ್ತು ಅವುಗಳಿಗೆ ಪೂರಕವಾಗಿ ಪಠ್ಯ ವಿಶ್ಲೇಷಣೆ ನಡೆಸಬೇಕಾದ ಸಂದರ್ಭದಲ್ಲಿ ವಿಮರ್ಶಾ ಕಾರ್ಯಕ್ಕೆ ಹೆಚ್ಚಿನ ಆಸ್ಪದ ಉಂಟಾಯಿತು. 'ಕರ್ಣಾಟಕ ಸಂಘ'ದಿಂದ ಪ್ರಕಟವಾಗುತ್ತಿದ್ದ 'ಪ್ರಬುದ್ಧ ಕರ್ಣಾಟಕ' ಪತ್ರಿಕೆಯು ನಂತರ ಮೈಸೂರು ವಿಶ್ವವಿದ್ಯಾಲಯದಿಂದ ನಿಯಮಿತವಾಗಿ ಪ್ರಕಟಗೊಳ್ಳತೊಡಗಿತು. ಜೊತೆಗೆ ಹೊಸ ಪುಸ್ತಕಗಳನ್ನು ಕುರಿತು ಮಾಹಿತಿ ನೀಡುವ ಸಲುವಾಗಿ 'ಗ್ರಂಥಲೋಕ' ಪತ್ರಿಕೆ ಕೂಡಾ ಇಲ್ಲಿಂದಲೇ ಪ್ರಕಟಗೊಳ್ಳುತ್ತಿತ್ತು. ನಂತರದ ದಿನಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ 'ಕರ್ನಾಟಕ ಭಾರತಿ' ಪ್ರಕಟವಾದರೆ, ಗುಲ್ಬರ್ಗಾ ವಿಶ್ವವಿದ್ಯಾಲಯವು 'ಕಲಾ ಗಂಗಾ' ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಕುವೆಂಪು ವಿಶ್ವವಿದ್ಯಾಲಯವು 'ಸುವರ್ಣ ಕರ್ನಾಟಕ' ಪ್ರಕಟಿಸಿದರೆ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರತಿ ವಿಭಾಗಗಳಿಂದಲೂ ನಿಯತಕಾಲಿಕಗಳು ಪ್ರಕಟವಾಗುತ್ತಿವೆ. ಮುಖ್ಯವಾಗಿ ಅರ್ಧವಾರ್ಷಿಕವಾದ 'ಕನ್ನಡ ಅಧ್ಯಯನ', 'ಚೆಲುವ ಕನ್ನಡ', 'ನಮ್ಮ ಕನ್ನಡ', 'ಮಹಿಳಾ ಅಧ್ಯಯನ', 'ದ್ರಾವಿಡ ಅಧ್ಯಯನ', 'ಜಾನಪದ ಕರ್ನಾಟಕ', 'ಹಸ್ತಪ್ರತಿ ಅಧ್ಯಯನ', 'ಚರಿತ್ರೆ ಅಧ್ಯಯನ', 'ಶಾಸನ ಅಧ್ಯಯನ' ಮೊದಲಾದ ಪತ್ರಿಕೆಗಳನ್ನು ತರುವ ಮೂಲಕ ಸಾಹಿತ್ಯಿಕ ಸಂವಾದಗಳಿಗೆ ವೇದಿಕೆಯಾಗಿ ವಿಮರ್ಶೆ ಬೆಳೆಯಲು ಅನುಕೂಲ ವಾತಾವರಣ ನಿರ್ಮಿಸುತ್ತಿವೆ. ಇವುಗಳ ಜೊತೆಗೆ ವಿವಿಧ ವಿಷಯಗಳ ಮೇಲೆ ಸೆಮಿನಾರ್‌ಗಳನ್ನು ಏರ್ಪಡಿಸುವ ಮೂಲಕ ಮತ್ತು ಕನ್ನಡ ಸಾಹಿತ್ಯ ಮತ್ತು ಸಾಹಿತಿಗಳನ್ನು ಕುರಿತ ಎಮ್.ಫಿಲ್. ಮತ್ತು ಪಿಎಚ್.ಡಿ. ಅಧ್ಯಯನಗಳಿಗೆ ಅವಕಾಶ ಕಲ್ಪಿಸುವ ಮೂಲಕ ವಿಶ್ವವಿದ್ಯಾಲಯಗಳು ತಮ್ಮ ವ್ಯಾಪ್ತಿಯಲ್ಲಿ ಕನ್ನಡ ವಿಮರ್ಶೆ ಬೆಳವಣಿಗೆ ಹೊಂದಲು ಸಹಾಯಕವಾಗಿವೆ. ಅದರಲ್ಲೂ ಜಿ. ಎಸ್. ಶಿವರುದ್ರಪ್ಪನವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿದ್ದಾಗ ನಡೆಸುತ್ತಿದ್ದ ಸೆಮಿನಾರುಗಳು ಕನ್ನಡ ವಿಮರ್ಶಾ ಪರಂಪರೆಯ ಮುಖ್ಯ ಕೊಂಡಿಗಳಾಗಿವೆ. ಜೊತೆಗೆ ಹೊಸ ಶತಮಾನದಲ್ಲೂ ಯುಜಿಸಿ ಪ್ರಾಯೋಜಿತ ಸೆಮಿನಾರ್‌ಗಳ ಪರಂಪರೆ ಅತ್ಯಂತ ಚಟುವಟಿಕೆಯಿಂದ ನಡೆಯುತ್ತಿದ್ದು ಇವತ್ತಿನ ವಿಮರ್ಶೆ ರೂಪುತಳೆಯುವಲ್ಲಿ ಇವು ಮಹತ್ವದ ಪಾತ್ರವಹಿಸುತ್ತಿವೆ.

ಸಾಹಿತ್ಯ ಸಮ್ಮೇಳನ/ಸಮಾವೇಶಗಳು

ಕನ್ನಡ ಸಾಹಿತ್ಯ ಪರಿಷತ್ತು ನಾಡು-ನುಡಿಯ ಬೆಳವಣಿಗೆಗಾಗಿ ಏರ್ಪಡಿಸುವ ಅಖಿಲ ಭಾರತೀಯ ಸಮ್ಮೇಳನಗಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮ್ಮೇಳನಗಳು ಮತ್ತು ದಲಿತ, ಬಂಡಾಯ ಮತ್ತು ಮಹಿಳಾ ಲೇಖಕಿಯರ ಸಮಾವೇಶಗಳು ಕನ್ನಡ ವಿಮರ್ಶಾ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿವೆ. ಹಾಗೆಯೇ ಸರ್ಕಾರದ ವಿವಿಧ ಅಕಾಡೆಮಿಗಳು ಸಾಹಿತ್ಯ ವಾರ್ಷಿಕಗಳನ್ನು, ಸಾಹಿತ್ಯ ಪಾರಿಭಾಷಿಕ ಮಾಲೆಗಳನ್ನು ಪ್ರಕಟಿಸುವ, ವಿಚಾರ ಸಂಕಿರಣಗಳನ್ನು ಏರ್ಪಡಿಸುವ ಮೂಲಕ ಕನ್ನಡ ವಿಮರ್ಶೆಯ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸುತ್ತಿವೆ. ಉದಾ: ೧೯೭೪ರಲ್ಲಿ ಮೈಸೂರಿನಲ್ಲಿ ನಡೆದ ಲೇಖಕರ ಮತ್ತು ಕಲಾವಿದರ ಸಮಾವೇಶವು ಸಾಹಿತ್ಯವನ್ನು ಭಿನ್ನವಾಗಿ ನೋಡಲು ಉತ್ತೇಜಿಸಿತು. ೧೯೭೯ರಲ್ಲಿ ಧರ್ಮಸ್ಥಳದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಕುರಿತ ಚರ್ಚೆಗೆ ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕೆ ಪ್ರತಿಯಾಗಿ ಬೆಂಗಳೂರಿನಲ್ಲಿ ನಡೆದ ಸಮ್ಮೇಳನಗಳೂ ಸೇರಿದಂತೆ ಕನ್ನಡದಲ್ಲಿ ನವ್ಯೋತ್ತರ ಸಾಹಿತ್ಯ ಪಂಥಗಳಲ್ಲಿ ಪ್ರಧಾನವಾಗಿರುವ ದಲಿತ, ಬಂಡಾಯ ಮತ್ತು ಸ್ತ್ರೀವಾದಿ ಸಾಹಿತ್ಯ ಪಂಥಗಳು ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಿಕೊಂಡು ಮುನ್ನಡಿದಿದ್ದು ಇಂತಹ ಸಮ್ಮೇಳನ ಸಮಾವೇಶಗಳಿಂದಲೇ ಎಂಬುದು ಇತಿಹಾಸ ನೋಡಿದರೆ ತಿಳಿದುಬರುತ್ತದೆ. ಇವೆಲ್ಲವೂ ಕನ್ನಡ ವಿಮರ್ಶೆ ಕಾಲಕಾಲಕ್ಕೆ ರೂಪಾಂತರ ಹೊಂದಲು ಕಾರಣವಾಗಿದೆ.

ಜಾನಪದ ಸಾಹಿತ್ಯ ಸಂಗ್ರಹ ಮತ್ತು ಮೌಲ್ಯಮಾಪನ

ಪ್ರಾಚೀನ ಕನ್ನಡ ಸಾಹಿತ್ಯದಂತೆ ಜಾನಪದ ಸಾಹಿತ್ಯ ಸಂಗ್ರಹವೂ ಆರಂಭದಲ್ಲಿ ಕ್ರೈಸ್ತ ಮಿಷನರಿಗಳ ಮೂಲಕವೇ ಆರಂಭವಾಯಿತು. ಫ್ಲೀಟರು ಸಂಗ್ರಹಿಸಿದ ಲಾವಣಿಗಳು ಈ ದಿಶೆಯಲ್ಲಿ ಮೊದಲ ಪ್ರಯತ್ನ. ಆದರೆ ಅವರು ನಾಡಿನ ಇತಿಹಾಸ ರಚನೆಯ ದೃಷ್ಟಿಯಿಂದ ಜಾನಪದ ಸಾಹಿತ್ಯವನ್ನು ಗ್ರಹಿಸಲು ಪ್ರಯತ್ನಿಸಿದರು. ೧೯೨೩ರಲ್ಲಿ ನಡೆದ ಒಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಧುರಚೆನ್ನರು ಓದಿದ 'ಹಳ್ಳಿಯ ಹಾಡುಗಳು' ಎಂಬ ಪ್ರಬಂಧ ಕನ್ನಡ ಜನಪದ ಸಾಹಿತ್ಯ ಕುರಿತ ಅಧ್ಯಯನಕ್ಕೆ ಚಾಲನೆ ನೀಡಿತು. ನಂತರ ಧಾರವಾಡದ ಹಲಸಂಗಿ ಗೆಳೆಯರ ಬಳಗ ೧೯೩೧ ರಲ್ಲಿ ಪ್ರಕಟಿಸಿದ 'ಗರತಿಯ ಹಾಡು' ಕೃತಿಯಿಂದ ಕನ್ನಡ ಜನಪದ ಸಾಹಿತ್ಯ ಸಂಗ್ರಹ ಮತ್ತು ವಿಶ್ಲೇಷಣೆ ಶುರುವಾಯಿತು. ಇತ್ತ ಮೈಸೂರು ಭಾಗದಲ್ಲಿ ಎಲ್. ಗುಂಡಪ್ಪನವರು 'ನಾಡಪದಗಳು' ಎಂಬ ಸಂಗ್ರಹವನ್ನು ಹೊರತಂದರು. ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಹಳ್ಳಿಯ ಹಾಡುಗಳು' ಸೇರಿದಂತೆ ಜೀ. ಶಂ. ಪರಮಶಿವಯ್ಯ, ಮತಿಘಟ್ಟ ಕೃಷ್ಣಮೂರ್ತಿ, ಎಚ್. ಎಲ್. ನಾಗೇಗೌಡ, ಗೊ. ರು. ಚನ್ನಬಸಪ್ಪ ಮೊದಲಾದವರಿಂದ ಜನಪದ ಸಾಹಿತ್ಯ ಸಂಗ್ರಹ ಮತ್ತು ವಿಶ್ಲೇಷಣೆ ವ್ಯಾಪಕ ಮಟ್ಟದಲ್ಲಿ ನಡೆಯಲಾರಂಭಿಸಿತು. ನಂತರದ ತಲೆಮಾರಿನಲ್ಲಿ ಅಂಬಳಿಕೆ ಹಿರಿಯಣ್ಣ, ಕೃಷ್ಣಮೂರ್ತಿ ಹನೂರು, ಪಿ. ಕೆ. ರಾಜಶೇಖರ, ರಾಮೇಗೌಡ ಮೊದಲಾದವರು ಅಗಾಧವಾದ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ

ವಿಶ್ಲೇಷಣೆ ನಡೆಸಿದ್ದಾರೆ. ಆನಂತರ ಕನ್ನಡದಲ್ಲಿ ಜಾನಪದ ಸಾಹಿತ್ಯದ ಸಂಗ್ರಹದ ಹಂತ ದಾಟಿ ಅದನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವ ಪ್ರಯತ್ನ ನಡೆಯಿತು.

ನವೋದಯ ಸಂದರ್ಭದಲ್ಲಿ 'ಕೆರೆಗೆ ಹಾರ' ಮತ್ತು 'ಗೋವಿನ ಹಾಡು' ಗೀತೆಗಳು ವಿಶೇಷ ಅಧ್ಯಯನಕ್ಕೆ ಒಳಗಾದವು. ಭಾರತೀಯ ಕಾವ್ಯಮೀಮಾಂಸೆಯನ್ನು ಪರಿಚಯಿಸಿದ್ದ ತೀ. ನಂ. ಶ್ರೀ. ಯವರೆ ಜನಪದ ಗೀತೆಗಳನ್ನೂ ವಿಶ್ಲೇಷಿಸಿದರು. ಆದರೆ ದಲಿತ-ಬಂಡಾಯ ಚಳುವಳಿ ಸಂದರ್ಭದಲ್ಲಿ ಅವುಗಳನ್ನೆ ಭಿನ್ನವಾಗಿ ಅಭಿವ್ಯಕ್ತಿಸುವ ಪ್ರಯತ್ನ ನಡೆದಿದೆ. ಕಳೆದ ದಶಕದಲ್ಲಿ ಹೊಸ ತಲೆಮಾರಿನ ಮೊಗಳ್ಳಿ ಗಣೇಶ್, ವೀರಣ್ಣ ದಂಡೆ, ಮಹದೇವ ಶಂಕನಪುರ ಮೊದಲಾದವರು ಜನಪದ ಸಾಹಿತ್ಯವನ್ನು ಪುನರ್ ವ್ಯಾಖ್ಯಾನ ಮತ್ತು ಚಾರಿತ್ರಿಕ ವಿಶ್ಲೇಷಣೆ ನಡೆಸುತ್ತಿದ್ದಾರೆ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಜಾನಪದ ವಿಭಾಗಗಳನ್ನು ತೆರೆಯುವ ಮೂಲಕ ಮತ್ತು ಇತ್ತೀಚೆಗೆ ಜಾನಪದ ವಿಶ್ವವಿದ್ಯಾಲಯವೇ ಆರಂಭವಾಗಿರುವುದರಿಂದ ಕನ್ನಡದಲ್ಲಿ ಜಾನಪದ ಸಾಹಿತ್ಯವನ್ನು ಹೊಸ ಹೊಸ ತತ್ವ, ಸಿದ್ಧಾಂತ, ವಿಚಾರಗಳ ಮೂಲಕ ವಿಶ್ಲೇಷಿಸುವ, ವ್ಯಾಖ್ಯಾನಿಸುವ ಪ್ರಯತ್ನಗಳು ನಡೆಯುತ್ತಿವೆ. ಆ ಮೂಲಕ ಕನ್ನಡದಲ್ಲಿ ಜಾನಪದ ವಿಮರ್ಶಾ ಪ್ರಕಾರ ಬಲಗೊಳ್ಳುತ್ತಿದೆ.

೨.೨ ಕನ್ನಡ ವಿಮರ್ಶೆ ಮುಖ್ಯ ಘಟ್ಟಗಳು

ನವೋದಯ ವಿಮರ್ಶೆ

ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಹೆಜ್ಜೆಗುರುತುಗಳನ್ನು ನವೋದಯದಲ್ಲೇ ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಡಾ. ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರು ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ಗುರುತಿಸುವಂತೆ "ಕನ್ನಡ ವಿಮರ್ಶೆ ಬೆಳೆಯಲು ಪ್ರಾರಂಭಿಸಿದ್ದು ಸಹಜವಾಗಿಯೆ ಸಂಸ್ಕೃತ ಕೃತಿಗಳನ್ನೂ, ಪ್ರಾಚೀನ ಕನ್ನಡ ಗ್ರಂಥಗಳನ್ನೂ ಪರಿಚಯ ಮಾಡಿಕೊಡಲು ಪ್ರಾರಂಭ ಮಾಡಿದ್ದರಿಂದ. ಈ ದಿಕ್ಕಿನಲ್ಲಿ ಬಹುಶ: ಮೊಟ್ಟ ಮೊದಲ ಕೃತಿ ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಬಂದ ಮಂ.ಆ. ರಾಮಾನುಜ ಅಯ್ಯಂಗಾರರ 'ಕವಿ ಚಕ್ರವರ್ತಿ ರನ್ನನ ಜೀವನ ಚರಿತ್ರೆ, ಗ್ರಂಥ ವಿಮರ್ಶೆ ಇತ್ಯಾದಿ'. ಈ ಗ್ರಂಥದಲ್ಲಿ ಲೇಖಕರು ರನ್ನನ ಜೀವನ ಚರಿತ್ರೆಯ ಜೊತೆಗೆ ಅವನ ಕೃತಿಗಳ ಪರಿಚಯಾತ್ಮಕ ವಿಮರ್ಶೆಯನ್ನು ಒದಗಿಸಿದ್ದಾರೆ."[೮] ಎಂಬ ಹೇಳಿಕೆಯಲ್ಲಿ ನವೋದಯ ಸಾಹಿತ್ಯದ ಆರಂಭಕ್ಕೂ ಮುನ್ನ ವಿಮರ್ಶೆಯ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತಿದ್ದವು ಎಂಬುದನ್ನು ಗ್ರಹಿಸಲು ಸಾಧ್ಯವಾಗುತ್ತದೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಆಧುನಿಕ ಕನ್ನಡ ಸಾಹಿತ್ಯ ಸೃಷ್ಟಿಯಾಗತೊಡಗಿದ ಬೆನ್ನಲ್ಲಿಯೇ ಅಂದರೆ ೧೯೨೦ ರಿಂದ ೨೫ರ ನಡುವೆ ಸಾಹಿತ್ಯ ವಿಮರ್ಶೆ ಆರಂಭವಾಯಿತು. ೧೯೨೦ರಲ್ಲಿ ಬಂದ ಡಿವಿಜಿಯವರ 'ಸಾಹಿತ್ಯ ಮತ್ತು ಜನಜೀವನ' ಎಂಬ ಉಪನ್ಯಾಸ ಮಾಲೆ ಈ ದಿಶೆಯಲ್ಲಿ ಮೊದಲನೆಯದು. ೧೯೨೨ರಲ್ಲಿ

ಮಾಸ್ತಿಯವರು 'ಸಾಹಿತ್ಯ' ಎಂಬ ಪ್ರಬಂಧದಲ್ಲಿ ಸಾಹಿತ್ಯಕ್ಕೆ ಅನುಷಂಗಿಕವಾಗಿ ವಿಮರ್ಶೆಯನ್ನು ಚರ್ಚಿಸಿದರು. ೧೯೨೩ ರಲ್ಲಿ ಬೇಂದ್ರೆಯವರ 'ನಮಗೆ ಬೇಕಾದ ಕಾವ್ಯ' ಎಂಬ ಲೇಖನ ಪ್ರಕಟವಾಯಿತು. ಇದೇ ವರ್ಷ ಬಿ. ಕೃಷ್ಣಪ್ಪನವರ 'ರಾಮಚಂದ್ರ ಚರಿತ ಪುರಾಣ ವಿಮರ್ಶೆ' ಪ್ರಕಟವಾಯಿತು. ಆದರೆ ೧೯೨೪ ರಲ್ಲಿ ಮಾಸ್ತಿಯವರು ಬರೆದ 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ಲೇಖನ ಕನ್ನಡದಲ್ಲಿ ಅಧಿಕೃತ ವಿಮರ್ಶಾ ಪರಂಪರೆಗೆ ನಾಂದಿ ಹಾಡಿತು ಎನ್ನಬಹುದು. ಒಟ್ಟಿನಲ್ಲಿ ಬಿ.ಎಂ.ಶ್ರೀ, ಮಾಸ್ತಿ, ಬೇಂದ್ರೆ, ಡಿ. ವಿ. ಜಿ., ವಿ. ಸೀ. ಮೊದಲಾದ ಹಿರಿಯ ಸಾಹಿತಿಗಳು ನಾಡಿನ ಬೇರೆ ಬೇರೆ ಭಾಗಗಳಲ್ಲಿ ಸಾಹಿತ್ಯ ಮತ್ತು ಅದರ ಕಾರ್ಯ ಕುರಿತು ಮಾತನಾಡಿದರು. ಉತ್ತರ ಕರ್ನಾಟಕದಲ್ಲಿ 'ಜಯ ಕರ್ನಾಟಕ' ದಕ್ಷಿಣ ಕರ್ನಾಟಕದಲ್ಲಿ 'ಪ್ರಬುದ್ಧ ಕರ್ನಾಟಕ' ಪತ್ರಿಕೆಗಳು ಹೊಸಗನ್ನಡ ಸಾಹಿತ್ಯ ಮತ್ತು ವಿಮರ್ಶಾ ಬರಹಗಳನ್ನು ಪ್ರಕಟಿಸತೊಡಗಿದವು. ಹೀಗೆ ೧೯೨೫ರ ಸುಮಾರಿಗೆ ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಗೆ ಭದ್ರವಾದ ತಳಪಾಯ ಬಿದ್ದಿತೆನ್ನಬಹುದು.

ನಮ್ಮಲ್ಲಿ ವಿಮರ್ಶೆ ಆರಂಭವಾದ ದಿನಗಳಲ್ಲಿ ಅದರ ಸ್ವರೂಪ ಈಗಿನದಕ್ಕಿಂತ ಭಿನ್ನವಾಗಿತ್ತು. ಭಾರತೀಯ ಕಾವ್ಯಮೀಮಂಸೆಯ ಮುಖ್ಯ ಪ್ರಸ್ಥಾನಗಳಾಗಿದ್ದ ಅಲಂಕಾರ, ಗುಣ, ರೀತಿ, ಔಚಿತ್ಯ, ಧ್ವನಿ, ರಸ ಮೊದಲಾದ ಪರಿಕಲ್ಪನೆಗಳನ್ನು ಬಳಸುವುದರ ಜೊತೆಗೆ ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆ ಮತ್ತು ವಿಮರ್ಶೆಯ ವಿಚಾರಗಳನ್ನೂ ಸೇರಿಸಿಕೊಂಡಿತು. ಹೊಸ ಕಾವ್ಯ ತತ್ವಗಳ ಶೋಧಕ್ಕಿಂತ ಇರುವ ಸಿದ್ಧಾಂತಗಳನ್ನೇ ಬಳಸಿ ನಮ್ಮ ಸಾಹಿತ್ಯ ಪರಂಪರೆಯನ್ನು ವಿಧವಿಧವಾಗಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಪ್ರಯತ್ನ ಅಂದು ನಡೆಯಿತು. ಈ ಸಂದರ್ಭದಲ್ಲಿ ಡಿ.ವಿ.ಜಿ, ಬೇಂದ್ರೆ ಮೊದಲಾದವರು ಭಾರತೀಯ ಕಾವ್ಯ ಮೀಮಾಂಸೆಯ ತತ್ವಗಳನ್ನು ಪ್ರಧಾನವಾಗಿ ಆಧರಿಸಿ ವಿಮರ್ಶೆ ರಚಿಸಿದರೆ ಮಾಸ್ತಿ, ವೀ.ಸಿ. ಮೊದಲಾದವರು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ತತ್ವಗಳನ್ನು ಮುಖ್ಯವಾಗಿ ಆಶ್ರಯಿಸಿದರು.

ಹಾಗೆಯೇ ಬಿ.ಎಂ.ಶ್ರೀ.ಯವರು 'ಇಂಗ್ಲಿಷ್ ಗೀತೆಗಳು' ಮತ್ತು 'ಅಶ್ವತ್ಥಾಮನ್' ಮೊದಲಾದ ನಾಟಕಗಳ ಮೂಲಕ ಕನ್ನಡದಲ್ಲಿ ಭಾವಗೀತೆ ಮತ್ತು ನಾಟಕ ಪ್ರಕಾರಗಳಲ್ಲಿ ಹೊಸತನ ತಂದಂತೆ ಕನ್ನಡ ಕೈಪಿಡಿಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಕುರಿತು ಬರೆಯುವಾಗ ಕಾವ್ಯಗಳನ್ನು ಅರ್ಥೈಸಲು ಅದುವರೆವಿಗೂ ಚಾಲ್ತಿಯಲ್ಲಿದ್ದ ಕಾವ್ಯಮೀಮಾಂಸೆಗಿಂತ ಭಿನ್ನವಾದ ರೀತಿಯಲ್ಲಿ ಕೃತಿಗಳ ವಿಶ್ಲೇಷಣೆ ನಡೆಸಿದರು. ಇದಕ್ಕೂ ಮುಂಚೆಯೆ ೧೯೧೧ರಲ್ಲಿ ಬಿ. ಎಂ. ಶ್ರೀ. ಯವರು ಧಾರವಾಡದ ಕರ್ನಾಟಕ ಸಂಘದಲ್ಲಿ ಮಾಡಿದ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ಭಾಷಣದಲ್ಲಿ ಆಧುನಿಕ ಕನ್ನಡ ವಿಮರ್ಶೆಯ ಹೊಳಹುಗಳಿವೆ. ಈ ಸಂದರ್ಭದಲ್ಲಿ ಅವರ ಆಂಗ್ಲ ಸಾಹಿತ್ಯದ ಅಭ್ಯಾಸ ಪ್ರಭಾವ ಬೀರಿದೆ. ಶ್ರೀಯವರ ವಿಮರ್ಶೆಯನ್ನು ಕೆ. ವಿ. ನಾರಾಯಣ ಅವರು ಗುರುತಿಸುವಂತೆ "ಈ ಹೊತ್ತು 'ವಿಮರ್ಶೆ' ಎಂಬ ಪದ ಪಡೆದಿರುವ ಸಾಂಸ್ಕೃತಿಕ ನೆಲೆಗಳು ಶ್ರೀಯವರಲ್ಲೂ ಗುರುತಿಸಲು ಸಿಗುತ್ತವೆಯಾದರೂ ಇಂದಿನ ವಿಮರ್ಶೆಯ ಪರಿಕರಗಳನ್ನು ಅವರಲ್ಲಿ

ನಿರೀಕ್ಷಿಸಲಾಗದು. ಆದ್ದರಿಂದ ಕನ್ನಡ ವಿಮರ್ಶೆಯ ಮೊದಲ ಹೆಜ್ಜೆಗಳು ಮಾತ್ರ ಶ್ರೀಯವರಲ್ಲಿ ಕಾಣಸಿಗುತ್ತವೆ. ಅವರು ರೂಢಿಸಿದ ಚಿಂತನೆಗಳು ನಾಲ್ಕು ದಶಕಗಳ ಕಾಲವಾದರೂ ಕನ್ನಡ ವಿಮರ್ಶಾ ಚಿಂತನೆಯ ಒಂದು ಪ್ರವಾಹವನ್ನು ಪ್ರಭಾವಿಸಿತ್ತು ಎಂಬುದು ಗಮನಾರ್ಹ" ಎಂಬ ಮಾತುಗಳು ಆರಂಭದ ಕನ್ನಡ ವಿಮರ್ಶೆಯ ಮೇಲೆ ಶ್ರೀಯವರು ಬೀರಿದ ಪ್ರಭಾವವನ್ನು ಸೂಚಿಸುತ್ತವೆ.

ಇದೇ ಸಂದರ್ಭದಲ್ಲಿ ಮಾಸ್ತಿ, ಡಿ. ವಿ. ಜಿ., ಎ. ಆರ್. ಕೃಷ್ಣಶಾಸ್ತ್ರೀ, ಬೇಂದ್ರೆ, ಕುವೆಂಪು, ವಿ. ಸೀ., ಪು. ತಿ. ನ. ಮೊದಲಾದವರು ವಿಮರ್ಶೆಯನ್ನು ಗಂಭೀರವಾಗಿ ಪರಿಗಣಿಸಿ ಅದರ ರಚನೆಯಲ್ಲಿ ತೊಡಗಿದರು. ೧೯೨೪ರಲ್ಲಿಯೇ ಮಾಸ್ತಿಯವರು 'ಸಾಹಿತ್ಯದಲ್ಲಿ ವಿಮರ್ಶೆಯ ಪಾತ್ರ' ಎಂಬ ಲೇಖನ ಮತ್ತು 'ಸಾಹಿತ್ಯ' ಎಂಬ ಕೃತಿಯ ಮೂಲಕ ಅನುಕ್ರಮವಾಗಿ ಸಾಹಿತ್ಯ ಮತ್ತು ವಿಮರ್ಶೆ, ಸಾಹಿತ್ಯ ಮತ್ತು ಮೀಮಾಂಸೆ ಎಂಬ ವಿಷಯಗಳನ್ನು ಗಂಭೀರವಾಗಿ ಚರ್ಚಿಸಿದರು. ಹಾಗೆಯೇ ಬೇಂದ್ರೆಯವರ 'ನಮಗೆ ಬೇಕಾದ ಕಾವ್ಯ', ಕುವೆಂಪು, ಪು.ತಿ.ನ ಮೊದಲಾದವರೆಲ್ಲರೂ ಭಾರತೀಯ ಕಾವ್ಯ ಮೀಮಾಂಸೆ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆಗಳನ್ನು ಅನುಸಂಧಾನಗೊಳಿಸಿ ಹೊಸ ಬಗೆಯ ವಿಶ್ಲೇಷಣಾ ಕ್ರಮವನ್ನು ರೂಢಿಸಿಕೊಂಡರು. ಆದರೆ ವಸಾಹತುಶಾಹಿ ಸಂದರ್ಭದ ಆ ಕಾಲಘಟ್ಟದಲ್ಲಿ ವಿಮರ್ಶೆ ಕೇವಲ ಸಾಹಿತ್ಯ ಕ್ಷೇತ್ರಕ್ಕಷ್ಟೆ ಸೀಮಿತವಾಗದೆ ನಾಡಿನ ಸಂಸ್ಕೃತಿಯ ಬಗ್ಗೆ ತನ್ನ ಅಭಿಪ್ರಾಯಗಳ ಮಂಡಿಸುವುದರ ಜೊತೆಗೆ ಸಾರ್ವಜನಿಕರ ಅಭಿರುಚಿಯನ್ನು ತಿದ್ದುವುದು ಹಾಗೂ ಸಾಂಸ್ಕೃತಿಕ ಪುನರುಜ್ಜೀವನವನ್ನು ಕೈಗೊಳ್ಳುವ ಹಾದಿಯಲ್ಲಿದ್ದವು. ಆದ್ದರಿಂದ ನವೋದಯ ವಿಮರ್ಶೆ ಹೆಚ್ಚು ಸಾಹಿತ್ಯಮುಖಿಯಾಗಿತ್ತು ಎನ್ನುವುದಕ್ಕಿಂತ ಸಮಾಜಮುಖಿಯಾಗಿತ್ತು ಎನ್ನುವುದು ಸೂಕ್ತ.

ಕನ್ನಡದ ಪ್ರಾರಂಭಿಕ ವಿಮರ್ಶೆಯಲ್ಲಿ ಕೆಲವು ಸಮಾನವೆನ್ನಬಹುದಾದ ಸೂತ್ರಗಳಿವೆ. ಕಾವ್ಯದ ಬಗೆಗಿನ ಕಾಳಜಿ, ಪ್ರಾದೇಶಿಕ ಸಂಸ್ಕೃತಿಯ ಬಗೆಗಿನ ಕಾಳಜಿ, ಸಾಹಿತ್ಯದ ಬಗೆಗಿನ ನಿಲುವುಗಳಲ್ಲಿ ಸಮಾನವೆನ್ನಬಹುದಾದ ಅಂಶಗಳಿವೆ. ಕನ್ನಡದ ಪ್ರಾರಂಭಿಕ ವಿಮರ್ಶೆಗಳು ಮೂಲತ: ರಾಜಕೀಯ ಮತ್ತು ಸಾಂಸ್ಕೃತಿಕ ಅರಿವಿನಿಂದ ಹುಟ್ಟಿವೆ. ವಿ. ಸೀ. ಯವರ 'ಪ್ರಾಚೀನ ಸಾಹಿತ್ಯ'ದಂಥ ಕೃತಿಗಳಾಗಲಿ; ಕುವೆಂಪು ಅವರ 'ತಪೋನಂದನ', ದ್ರೌಪದಿಯ 'ಶ್ರೀಮುಡಿ'ಯಂಥ ಕೃತಿಗಳನ್ನು ಇದಕ್ಕೆ ಉದಾಹರಣೆಯಾಗಿ ಗಮನಿಸಬಹುದು. ಈ ರೀತಿಯ ಕೃತಿಗಳು ನವೋದಯ ಕಾಲದ ವಿಮರ್ಶಕರ ಪ್ರಾಚೀನ ಕೃತಿಗಳ ಒಂದು ಬಗೆಯ ಓದು ಎಂದು ಗ್ರಹಿಸುವುದು ಎಷ್ಟು ಮುಖ್ಯವೋ, ಅದೇ ರೀತಿಯಲ್ಲಿ ಅವುಗಳು ಕೃತಿಯೊಂದಿಗೆ ನಾವು ನಡೆಸಬೇಕಾದ ಅನುಸಂಧಾನದ ಕ್ರಮವನ್ನು ಕೂಡಾ ತಿಳಿಯ ಹೇಳುತ್ತವೆ.

ನವೋದಯ ವಿಮರ್ಶೆಯ ಪ್ರಧಾನ ಉದ್ದೇಶಗಳನ್ನು ಕೇಶವಶರ್ಮ ಅವರು ಗುರುತಿಸುವಂತೆ "ಸಾಹಿತ್ಯ ವಿಮರ್ಶೆಯು ಸಹೃದಯತೆಯಿಂದ ಕೃತಿಯನ್ನು ಪರಿಶೀಲಿಸುವಂತಿರಬೇಕು. ಕೃತಿಯನ್ನು ಜನಸಾಮಾನ್ಯರಿಗೆ ಮುಟ್ಟುವಂತೆ ವಿವರಿಸಲು

ಶಕ್ತವಾಗಿರಬೇಕು. ಜೀವನಕ್ಕೆ ಕಾವ್ಯವು ಏನನ್ನು ಮಾಡುವುದೋ ಅದನ್ನೇ ಸಾಹಿತ್ಯ ವಿಮರ್ಶೆಯೂ ಮಾಡಬೇಕು"[೧೦] ಎಂಬ ಆಲೋಚನೆಗಳೇ ಅಂದಿನ ವಿಮರ್ಶೆಯನ್ನು ಪ್ರಭಾವಿಸಿದ್ದವು ಎನ್ನಬಹುದು. ಒಟ್ಟಾರೆ ವಸಾಹತು ಕಾಲದ ಶಿಕ್ಷಣದಿಂದ ಪರಿಚಯವಾದ ಇಂಗ್ಲಿಷ್ ಸಾಹಿತ್ಯ, ಹೊಸದಾಗಿ ಮತ್ತು ವ್ಯಾಪಕವಾಗಿ ಬಳಕೆಗೆ ಬಂದ ಸಂಸ್ಕೃತ ಸಾಹಿತ್ಯ ಮೀಮಾಂಸೆ ಹಾಗೂ ಕನ್ನಡದ ಪಾರಂಪರಿಕ ಜ್ಞಾನ ಇವು ನವೋದಯ ವಿಮರ್ಶೆಯನ್ನು ಪ್ರಭಾವಿಸಿದ ಅಂಶಗಳಾಗಿವೆ.

ಯುರೋಪಿನ ಸಾಹಿತ್ಯ ಮೀಮಾಂಸೆ ಮತ್ತು ವಿಮರ್ಶೆಯನ್ನು ಚೆನ್ನಾಗಿ ಅರಿತಿದ್ದ ಮಾಸ್ತಿಯವರು ಅಂತಹ ಗುಣಮಟ್ಟದ ಸಾಹಿತ್ಯ ಮತ್ತು ವಿಮರ್ಶೆ ನಮ್ಮಲ್ಲೂ ಬರಬೇಕೆಂದು ಬಯಸಿದ್ದರು. ಆದರೆ ಕನ್ನಡದ ಸಂದರ್ಭದಲ್ಲಿ ಇಂತಹ ಗುಣಮಟ್ಟ ನಿರೀಕ್ಷೆ ಕೊಂಚ ಅತಿಯಾಗುತ್ತದೇನೋ ಎಂಬ ಅವರ ನಿಲುವನ್ನು ನೋಡಬಹುದು. 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ೧೯೨೪ರ ತಮ್ಮ ಪ್ರಬಂಧದಲ್ಲಿ "ನಮ್ಮಲ್ಲಿ ಇಂಗ್ಲಿಷನ್ನು ಕಲಿತು ಕನ್ನಡವನ್ನು ನೋಡುವವರು ಹೊಸದರಲ್ಲಿ ಇಂಗ್ಲಿಷಿನ ಉತ್ತಮ ಕೃತಿಗಳಿಗೆ ಸಮಾನವಾದ ಕೃತಿಗಳು ಕನ್ನಡದಲ್ಲಿ ಬರದೇ ಇದ್ದರೆ ಬಹಳ ಅಸಮಾಧಾನ ಪಡುವೆವು. ಆದರೆ ಹೀಗೆ ಮಾಪನ ಮಾಡುವಲ್ಲಿ ಯಾವ ಭಾಷೆಯಲ್ಲಾಗಲಿ, ಬಹು ಜನರು ಬರೆದು ಬರಹದ ಸಂಪ್ರದಾಯಗಳು ಏರ್ಪಟ್ಟ ಮೇಲೆ ಉತ್ತಮ ಕಾವ್ಯ ಬಂದೀತಲ್ಲದೆ ಒಮ್ಮೆಗೆ ಬರಲಾರದು ಎಂಬುದನ್ನು ನಾವು ಮರೆತಂತಾಗುತ್ತದೆ. ಒಂಬತ್ತು ವರ್ಷದ ಹಿಂದೆ ಸತೀ ಹಿತೈಷಿಣಿ ಗ್ರಂಥ ಮಾಲೆಯನ್ನು ಕುರಿತು ವಿಮರ್ಶೆ ಮಾಡುವಲ್ಲಿ ಈ ಭಾವಕ್ಕೆ ನಾನು ಸಾಕಾದಷ್ಟು ಗಮನ ಕೊಡಲಿಲ್ಲ".[೧೧] ಮಾಸ್ತಿಯವರ ಈ ಮಾತುಗಳಲ್ಲಿ ಕೆಲವು ಅಂಶಗಳು ಬಹಳ ಸ್ಪಷ್ಟವಾಗಿ ತಿಳಿಯುತ್ತದೆ. ಮೊದಲನೆಯದಾಗಿ ಇಂಗ್ಲಿಷ್ ಕಲಿತು ಕನ್ನಡವನ್ನು ನೋಡುವ ಕ್ರಮದ ಬಗೆಗೆ ಮಾಸ್ತಿಯವರಿಗೆ ಅಸಮಾಧಾನವೇನೋ ಇಲ್ಲ. ಅವರ ಪ್ರಕಾರ ಅವರ ಹಿಂದಿರುವ ಆಶಯವು ಉಚ್ಚವಾದುದು. ಎರಡನೆಯದಾಗಿ, ಉತ್ತಮ ಕಾವ್ಯವು ಹುಟ್ಟಿಕೊಳ್ಳುವುದೇ ಬರಹದ ಸಂಪ್ರದಾಯಗಳು ಹುಟ್ಟಿಕೊಂಡ ಮೇಲೆ. ಇಲ್ಲಿ ಮಾಸ್ತಿಯವರು ಬರಹದ ಸಂಪ್ರದಾಯ ಉತ್ತಮ ಕಾವ್ಯ ಎಂಬುದನ್ನು ಇಂಗ್ಲಿಷಿನ ಕಾವ್ಯದ ರೀತಿಯ ಸಮೃದ್ಧ ಪರಂಪರೆ ಒಮ್ಮೆಗೆ ಬರಲಾರದು ಎನ್ನುವುದು ಮಾಸ್ತಿಯವರ ಅಭಿಪ್ರಾಯವಾಗಿದೆ.

ಮಾಸ್ತಿಯವರು ಈ ಕುರಿತು ಹೇಳುವಾಗ ಮಾಪನ ಎಂಬ ಪದವನ್ನು ವಿಮರ್ಶೆಯ ಗುಣಕ್ಕೆ ಸಂಬಂಧಿಸಿ ಹೇಳಿರುವುದೂ ಗಮನಾರ್ಹ. ಮಾಸ್ತಿಯವರ ಕಾವ್ಯದ ಮೂಲ ಮತ್ತು ವಿಮರ್ಶೆಯ ಮೂಲಕ್ಕೆ ಅಂಥ ಪ್ರಧಾನ ವ್ಯತ್ಯಾಸವೇನೂ ಇಲ್ಲ. ಕಾವ್ಯ ಬೇರೆ ವಿಮರ್ಶೆಯು ಬೇರೆಯೆಂಬ ವರ್ಗೀಕರಣದ ನಿಲುವುಗಳು ಮಾಸ್ತಿಯವರ ವಿಮರ್ಶೆಯಲ್ಲಿಲ್ಲ. ವಿಮರ್ಶೆಯಿಲ್ಲದೆ ಕಾವ್ಯ ರಚನೆಯೇ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯವು ಮಾಸ್ತಿಯವರದ್ದು. ಸಾಹಿತ್ಯ ವಿಮರ್ಶೆಯ ಬಗೆಗೆ ಪೂರ್ಣವಾದ ಕಾಳಜಿಯನ್ನು ಹೊಂದಬೇಕು ಮತ್ತು ವಿಮರ್ಶೆಯ ಮುಖ್ಯ ಲಕ್ಷಣ ಸಹಾನುಭೂತಿ ಎನ್ನುವ

ಮಾಸ್ತಿಯವರು ಕವಿಯ ಮೂಲಭಾವ ಮತ್ತು ಕಾವ್ಯದ ಭಾವದ ನಡುವಣ ಸಂಬಂಧದ ವಿವೇಚನೆಯು ಅತ್ಯಗತ್ಯವೆಂದು ಪ್ರತಿಪಾದಿಸುತ್ತಾರೆ. ಕವಿಯ ಮೂಲ ಭಾವದ ಗ್ರಹಿಕೆ ಮತ್ತು ಕಾವ್ಯದ ಭಾವದ ಗ್ರಹಿಕೆಯ ಸಂಬಂಧಗಳು ಮುಖ್ಯವಾಗುತ್ತವೆ ಮತ್ತು ಕಾವ್ಯ ಸೃಜನಶೀಲ; ವಿಮರ್ಶೆಯು ಸೃಜನಶೀಲವಲ್ಲ ಎಂಬ ಅಪಕಲ್ಪನೆಯು ಅವರ ಸಾಹಿತ್ಯ ವಿಮರ್ಶೆಯಲ್ಲಿಲ್ಲ ಎನ್ನುವುದೇ ಗಮನಾರ್ಹ. ಸಾಹಿತ್ಯ ವಿಮರ್ಶೆಯು ಜನಾಂಗದ ಅಭಿರುಚಿಯನ್ನು ತಿದ್ದುತ್ತದೆಂಬ ಮಾಸ್ತಿಯವರ ವಾದವೂ ಕೂಡಾ ಗಮನಾರ್ಹ.

“ಕವಿಗಿಂತಲೂ ವಿಮರ್ಶಕನು ತನ್ನ ಶಕ್ತಿಯ ವಿಷಯದಲ್ಲಿ ಅಧಿಕವಾದ ಯೋಜನೆಯುಳ್ಳವನಾಗಿರಬೇಕು. ತಾನು ಹೇಳುವುದು ಸರಿಯೇ ತಾನು ಮಾಡುವುದು ಸರಿಯೇ, ಎಂದು ಪರಾಮರ್ಶನವುಳ್ಳವನಾಗಿರಬೇಕು ಎಂಬುವುದೇ ಇದರಿಂದ ತಿಳಿಯಬೇಕಾದುದು”[೧೨] ಎನ್ನುವ ಮಾಸ್ತಿಯವರ ಈ ರೀತಿಯ ಚಿಂತನಾ ಕ್ರಮವು ಸಾಹಿತ್ಯ ವಿಮರ್ಶೆಯ ಕಾರ್ಯವನ್ನು ಯೋಚಿಸುವ ಹಾಗೆಯೇ ಅದು ತಳೆಯುವ ನಿಲುವನ್ನು ಆ ಹೊತ್ತಿನ ವಿಮರ್ಶೆಯ ಹಿಂದಿರುವ ಮುಖ್ಯ ಪರಿಕರವನ್ನು ಸೂಚಿಸುತ್ತದೆ. ಮಾಸ್ತಿಯವರ ಬರಹಗಳಲ್ಲಿ ತಿಳಿದುಬರುವ ಪ್ರಮುಖ ಅಂಶಗಳನ್ನು ಕ್ರೋಢೀಕರಿಸಿ ಹೀಗೆ ಹೇಳಬಹುದು. ಅದನ್ನು ಒಟ್ಟು ನವೋದಯಕ್ಕೆ ಅನ್ವಯಿಸಿ ಹೇಳುವುದಾದರೆ ಸಾಹಿತ್ಯ ವಿಮರ್ಶೆಗೆ ಜನರ ಅಭಿರುಚಿಯನ್ನು ತಿದ್ದುವ ಜವಾಬ್ದಾರಿಯಿದೆ. ಹಾಗೆಯೆ ಸಾಹಿತ್ಯ ವಿಮರ್ಶೆಯಲ್ಲಿ ಪ್ರಮುಖವಾಗಿ ಕವಿಯ ಭಾವದ ಬಗೆಗಿನ ಹಾಗೂ ಕಾವ್ಯದ ಭಾವದ ಬಗೆಗಿನ ತಿಳುವಳಿಕೆಯೂ ಅಗತ್ಯ ಹಾಗಾದಾಗ ಮಾತ್ರ ಸಾಹಿತ್ಯ ವಿಮರ್ಶೆಯು ವಿವೇಚನಾ ಪೂರ್ಣವಾದ ಕೆಲಸವಾಗುತ್ತದೆ ಹಾಗೂ ಜೀವನಕ್ಕೆ ಕಾವ್ಯವು ಏನನ್ನು ಮಾಡುವುದೋ ಅದೇ ಕಾರ್ಯವನ್ನು ವಿಮರ್ಶೆಯೂ ಮಾಡುವುದರಿಂದ ಸಾಹಿತ್ಯ ವಿಮರ್ಶೆಯ ಕಾರ್ಯ ಅತ್ಯಂತ ಮಹತ್ವದ್ದೆಂದು ಸ್ಪಷ್ಟವಾಗುತ್ತದೆ.

ಬೇಂದ್ರೆಯವರ ‘ಸಾಹಿತ್ಯದ ವಿರಾಟ್ ಸ್ವರೂಪ’(೧೯೭೪) ಎಂಬ ಲೇಖನ ಸಂಕಲನದಲ್ಲಿ ನಮಗೆ ಬೇಕಾದ ಕಾವ್ಯ, ವಿಮರ್ಶೆಯ ವಿವರ, ನವರಸ ವಿಚಾರ ಮುಂತಾದ ಪ್ರಬಂಧಗಳ ಮೂಲಕ ಕಾವ್ಯ ಸ್ವರೂಪದ ಬಗ್ಗೆ ಅವರ ಚಿಂತನೆಗಳನ್ನು ಪ್ರಕಟಿಸುತ್ತಾರೆ. ನವರಸಗಳಲ್ಲದೆ ನವ ಎಂದರೆ ನವೀನರಸಗಳೂ ಉಂಟು ಎನ್ನುವ ವರಕವಿಗಳು ಭಕ್ತಿರಸದ ಮಹತ್ವವನ್ನು ಸಾರುತ್ತಾರೆ. ನವೋದಯ ಸಂದರ್ಭದ ಇತರ ಸಾಹಿತಿಗಳಂತೆ ಬೇಂದ್ರೆಯವರು ವಿಮರ್ಶಾ ಕಾರ್ಯದಲ್ಲಿ ಹೆಚ್ಚು ಗಂಭೀರವಾಗಿ ತೊಡಗಿಸಿಕೊಳ್ಳಲಿಲ್ಲವಾದರೂ ಕವಿ ಲಕ್ಷ್ಮೀಶನ ಕುರಿತ ಲೇಖನದಲ್ಲಿ ತಮ್ಮ ವಿಮರ್ಶೆಯ ಮೊನಚನ್ನು ಕಾಯ್ದುಕೊಂಡಿದ್ದಾರೆ. ಬಿ. ಎಂ. ಶ್ರೀ. ಯವರ ಪ್ರಭಾವಲಯದಲ್ಲಿ ರನ್ನನ ದುರ್ಯೋಧನ ‘ಮಹಾನುಭಾವ’ ಎಂಬ ಅಭಿಪ್ರಾಯ ರೂಪುತಳೆಯುತ್ತಿದ್ದಾಗ, ಭಾರತೀಯ ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಅದು ಎಷ್ಟು ಅಸಂಗತ ಎಂಬುದನ್ನು ಬೇಂದ್ರೆ ಸೋದಾಹರಣವಾಗಿ ತೋರುವ ಮೂಲಕ ಪೂರ್ಣವಾಗಿ ಪಶ್ಚಿಮಕ್ಕೆ ಮಾರುಹೋಗುವ ಅಗತ್ಯ ಕನ್ನಡಕ್ಕಿಲ್ಲ. ಮತ್ತು ಕನ್ನಡ ಸಂಸ್ಕೃತಿಯನ್ನು ಭಾರತೀಯ

ಹಿನ್ನಲೆಯಲ್ಲಿ ಗ್ರಹಿಸುವುದು ಸೂಕ್ತ ಎಂದು ಪ್ರತಿಪಾದಿಸಿದರು. ಬೇಂದ್ರೆಯವರ ನಿಲುವಿಗೆ ಹೋಲಿಸಬಹುದಾದ ಮತ್ತೊಬ್ಬ ನವೋದಯ ವಿಮರ್ಶಕರೆಂದರೆ ಪು.ತಿ.ನ. ಅವರು. ತಮ್ಮ ಕಾವ್ಯ ಕೂತೂಹಲ ಕೃತಿಯ ಮೂಲಕ ಭಾರತೀಯ ಕಾವ್ಯ ಮೀಮಾಂಸೆಯ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯವನ್ನು ಎದುರುಗೊಂಡರು.

ನವೋದಯ ವಿಮರ್ಶೆ ಭಾರತೀಯ ಕಾವ್ಯ ಮೀಮಾಂಸೆಯ ತತ್ವಗಳನ್ನು ಒಳಗೊಂಡು ರೂಪುಗೊಳ್ಳುವಲ್ಲಿ ಕುವೆಂಪು ಅವರದೂ ಮುಖ್ಯ ಪಾತ್ರವಿದೆ. ತಮ್ಮ ಕಾವ್ಯ ವಿಹಾರ, ತಪೋನಂದನ, ದ್ರೌಪದಿಯ ಶ್ರೀಮುಡಿ, ರಸೋವೈಸ: ಮೊದಲಾದ ಕೃತಿಗಳಲ್ಲಿ ಭಾರತೀಯ ಸಂಸ್ಕೃತಿ, ಆಧ್ಯಾತ್ಮದ ಜೊತೆಗೆ, ಪಾಶ್ಚಾತ್ಯ ಕವಿಗಳ, ವಿಮರ್ಶಕ ವಿಚಾರ ಸರಣಿಯನ್ನು ಅಷ್ಟೇ ಆಸಕ್ತಿಯಿಂದ ಗ್ರಹಿಸುತ್ತಿದ್ದರು. ಕನ್ನಡದಲ್ಲಿ 'ದರ್ಶನ ವಿಮರ್ಶೆ' ಎಂಬ ಪರಿಕಲ್ಪನೆಯನ್ನು ಚಾಲ್ತಿಗೆ ತಂದ ಕುವೆಂಪು ಅವರು ಕಾವ್ಯದಲ್ಲಿ ಪ್ರತಿಮೆ, ಪ್ರತಿಕೃತಿ, ಪೂರ್ಣದೃಷ್ಟಿ ಮೊದಲಾದ ಪರಿಕಲ್ಪನೆಗಳನ್ನು ತಮ್ಮ ವಿಮರ್ಶೆಯಲ್ಲಿ ಗಂಭೀರವಾಗಿ ಶೋಧಿಸಿದರು. ಆದರೆ ಇವರ ಇತರೆ ಗದ್ಯದಲ್ಲಿ, ವೈಚಾರಿಕ ಬರಹಗಳಲ್ಲಿ ಆಧುನಿಕ ಸಮಾಜ, ಸಾಹಿತ್ಯದ ಬಗ್ಗೆ ಚರ್ಚೆಗಳಿದ್ದರೆ, ಕಾವ್ಯವಿಹಾರ ಮೊದಲಾದ ಕೃತಿಗಳಲ್ಲಿ ಮೀಮಾಂಸೆ ಪರವಾದ ಲೇಖನಗಳಿವೆ. ಜೊತೆಗೆ ಇವರ ವಿಮರ್ಶೆಯಲ್ಲಿ ರಸಗ್ರಹಣದ ಬಗೆಗೆ ಒಲವಿರುವುದನ್ನು ಕಾಣಬಹುದು.

ನವೋದಯ ಸಾಹಿತ್ಯದಲ್ಲಿ ವಿಮರ್ಶೆಗೆಂದೇ ಮೀಸಲಾದ ಲೇಖಕರ ಸಂಖ್ಯೆ ಇಲ್ಲವೆನ್ನುವಷ್ಟು ಕಡಿಮೆ. ಸೃಜನಶೀಲ ಸಾಹಿತ್ಯ ಕೃಷಿಯ ಜೊತೆಗೆ ಅನುಷಂಗಿಕವಾಗಿ ವಿಮರ್ಶಾ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದರು. ಆದರೆ ಇದಕ್ಕೆ ಅಪವಾದವೆನ್ನುವಂತೆ ಎಸ್. ವಿ. ರಂಗಣ್ಣನವರು ಸಂಪೂರ್ಣವಾಗಿ ತಮ್ಮನ್ನು ವಿಮರ್ಶಾ ಕ್ಷೇತ್ರಕ್ಕೆ ಅರ್ಪಿಸಿಕೊಂಡಿದ್ದರು. ಕನ್ನಡ ಸಾಹಿತ್ಯವನ್ನು ವಿಮರ್ಶಿಸುವುದರ ಜೊತೆಗೆ ಕನ್ನಡದಲ್ಲಿ ಸಂಸ್ಕೃತ ಸಾಹಿತ್ಯ ಮತ್ತು ಪಾಶ್ಚಾತ್ಯ ಸಾಹಿತ್ಯವನ್ನು ವಿಮರ್ಶಿಸಿದ್ದಾರೆ. 'ಶೈಲಿ'ಯ ಮೂರು ಸಂಪುಟಗಳು, 'ಪಾಶ್ಚಾತ್ಯ ಗಂಭೀರ ನಾಟಕಗಳು', 'ಹೊನ್ನಶೂಲ' ಮೊದಲಾದ ಕೃತಿಗಳು ಅವರ ವಿಮರ್ಶಾ ಕ್ರಮವನ್ನು ಅರಿಯಲು ನಮಗೆ ನೆರವಾಗುತ್ತವೆ. ತಾವು ಆಯ್ದುಕೊಂಡ ಕೃತಿಯಲ್ಲಿ ಪಾತ್ರ ಸೃಷ್ಟಿ, ಶೈಲಿ, ಕಥಾ ರಚನೆ, ಕಾವ್ಯ ಕಲೆ ಮತ್ತು ಕೊನೆಗೆ ಕವಿ ಅಥವಾ ಲೇಖಕರ ವ್ಯಕ್ತಿತ್ವದ ಪರಿಶೀಲನೆ ಮಾಡುವ ಮೂಲಕ ವಿಮರ್ಶೆಗೆ ತೊಡಗುತ್ತಿದ್ದ ರಂಗಣ್ಣನವರು ಕನ್ನಡದಲ್ಲಿ ವಿಶ್ವಸಾಹಿತ್ಯವನ್ನು ಪ್ರತಿಫಲಿಸಿದ್ದಾರೆ.

ಕ್ರಮೇಣ ವಿಮರ್ಶೆಯನ್ನು ಒಬ್ಬ ಕವಿಯ ಅಧ್ಯಯನಕ್ಕೆ ವಿಶಿಷ್ಟವಾಗಿ ಬಳಸಿರುವುದನ್ನು ಕಾಣಬಹುದು. ೧೯೩೧ ರಲ್ಲಿ ಹೊರಬಂದ ಜಿ. ಪಿ. ರಾಜರತ್ನಂ ಅವರ 'ಶ್ರೀ ಕವಿ ಪಂಪ', ೧೯೩೮ ರಲ್ಲಿ ಬಂದ ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ', ೧೯೩೯ ರಲ್ಲಿ ತೀ. ನಂ. ಶ್ರೀ. ಯವರು ಹೊರತಂದ 'ಪಂಪ' ಪುಸ್ತಕಗಳು ಆ ದಶಕದಲ್ಲಿ ಪಂಪನನ್ನು ಕುರಿತು ಪ್ರಕಟಗೊಂಡ ಪ್ರಮುಖ ವಿಮರ್ಶಾ ಗ್ರಂಥಗಳು. ಪ್ರಾಚೀನ

ಕನ್ನಡ ಸಾಹಿತ್ಯ ಮತ್ತು ಕವಿಗಳನ್ನು ಕುರಿತು ಲೇಖನ ವ್ಯವಸಾಯವನ್ನು ಮೀರಿ ಗ್ರಂಥ ರಚನೆಯಾಗುವ ಮಟ್ಟಿಗೆ ವಿಮರ್ಶೆ ಶುರುವಾಗಿದ್ದಕ್ಕೆ ಇವೆಲ್ಲ ಮಾದರಿ ಎನಿಸುತ್ತವೆ.

ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ನವೋದಯ ವಿಮರ್ಶೆ ಮಹತ್ವಪೂರ್ಣ ಕೃತಿಗಳನ್ನು ಕೊಟ್ಟಿದೆ. ತೀ.ನಂ.ಶ್ರೀಕಂಠಯ್ಯನವರ 'ಭಾರತೀಯ ಕಾವ್ಯ ಮೀಮಾಂಸೆ' (೧೯೫೯) ಒಂದು ಆಚಾರ್ಯ ಕೃತಿ. ಸಂಸ್ಕೃತ ಲಾಕ್ಷಣಿಕರ ಚಿಂತನೆಗಳನ್ನು ವಿವರಿಸುವಾಗ ತೀ. ನಂ. ಶ್ರೀ ಅವುಗಳನ್ನು ಇಂದಿನ ಸಾಹಿತ್ಯ ಸಂದರ್ಭದಲ್ಲಿ ಗ್ರಹಿಸುತ್ತಾರೆ ಎನ್ನುವುದೇ ಇದರ ವೈಶಿಷ್ಟ್ಯ. ಆಧುನಿಕ ಸಾಹಿತ್ಯದಿಂದ ಅವರು ಆರಿಸುವ ನಿದರ್ಶನಗಳು ಹೇಗೆ ಆ ಚಿಂತನೆಗಳು ಇಂದಿನ ಸಾಹಿತ್ಯಾನುಭವಕ್ಕೂ ಪ್ರಸ್ತುತ ಎನ್ನುವುದನ್ನು ದೃಢೀಕರಿಸುತ್ತವೆ. ಹಿಂದಿನ ಸಾಹಿತ್ಯದಿಂದಲೂ, ಇಂದಿನ ಸಾಹಿತ್ಯದಿಂದಲೂ; ಅದರಲ್ಲಿಯೂ ಜಾನಪದ ಸಾಹಿತ್ಯದಿಂದಲೂ ಅವರು ಉದ್ಧರಿಸುವ ಕವಿತೆಗಳ ಸಾಲುಗಳು ನಮ್ಮ ಸಂಪ್ರದಾಯದ ಸಾತತ್ಯವನ್ನು ಸಾಬೀತು ಮಾಡುತ್ತವೆ. ಆಳವಾಗಿ ಗ್ರಹಿಸಿ ಸ್ಫುಟವಾಗಿ ಹೇಳುವ ಅವರ ಬರವಣಿಗೆಯ ಮೇಲೆ ಎಲ್ಲೆಡೆಯೂ ತೀ.ನಂ.ಶ್ರೀ. ಅವರ ರಸಿಕ ವ್ಯಕ್ತಿತ್ವದ ಛಾಪು ಬೀಳುತ್ತದೆ. ಶಿಷ್ಟಸಾಹಿತ್ಯದಷ್ಟೇ ಜನಪದ ಸಾಹಿತ್ಯವೂ ಶ್ರೇಷ್ಠ ಎನ್ನುವ ಮನೋಧರ್ಮ ನವೋದಯ ವಿಮರ್ಶೆಯದು. ತಮ್ಮ 'ಸಮಾಲೋಕನ' (೧೯೫೮) ದಲ್ಲಿ ತೀ. ನಂ. ಶ್ರೀ. 'ಕೆರೆಗೆ ಹಾರ' ಎಂಬ ಜಾನಪದ ಕಥನ ಕವನದ ಧ್ವನಿತಾರ್ಥದ ಸೊಗಸನ್ನು ಮೆಚ್ಚಿಗೆಯಿಂದ ತೋರಿಸಿಕೊಡುವ ರೀತಿಗಿಂತ ಈ ನಿಲುವಿಗೆ ಬೇರೆ ದೃಷ್ಟಾಂತ ಬೇಕಿಲ್ಲ ಎನಿಸುತ್ತದೆ. ಆದರೆ ಇಲ್ಲಿ ಆಸ್ವಾದನೆಯೇ ಮುಖ್ಯವಾಗಿದೆ ಎಂಬುದನ್ನು ಮರೆಯಬಾರದು.

"ಇಂದು ಪೂರ್ವ ಪಶ್ಚಿಮ ಎರಡರ ಮಾರ್ಗಗಳನ್ನೂ ಸೇರಿಕೊಂಡೇ ಆಸ್ವಾದನೆ, ರುಚಿನಿರ್ಣಯ, ವಿಮರ್ಶೆಯ ತೀರ್ಮಾನಗಳು ಆಗಬೇಕಾಗಿವೆ"[೧೩] ಎನ್ನುವುದು ವಿ. ಸೀತಾರಾಮಯ್ಯನವರ ಅಭಿಪ್ರಾಯವಾದರೂ ಅವರು ತಮ್ಮ 'ಕವಿ ಕಾವ್ಯ ದೃಷ್ಟಿ' (೧೯೫೫) ಹಾಗೂ 'ಸಾಹಿತ್ಯ ವಿಮರ್ಶೆಯಲ್ಲಿ ಅರ್ಥ ಮತ್ತು ಮೌಲ್ಯ' (೧೯೬೨) ಕೃತಿಗಳಲ್ಲಿ ಹೆಚ್ಚಾಗಿ ಪಾಶ್ಚಾತ್ಯ ವಿಮರ್ಶಾ ಮಾರ್ಗವನ್ನೇ ಅನುಸರಿಸುತ್ತಾರೆ. ಹಾಗೆಯೆ, ತಮ್ಮ 'ಕವಿಕಾವ್ಯ ಮಹೋನ್ನತಿ' ಕೃತಿಯಲ್ಲಿ ಗೋಕಾಕರೂ ವೀಸೀಯವರನ್ನೆ ಅನುಸರಿಸಿರುವುದು ಕಂಡುಬರುತ್ತದೆ. ಅಂದರೆ ಒಂದೆಡೆ ಭಾರತೀಯ ಕಾವ್ಯ ಮೀಮಾಂಸೆಯನ್ನು ಸಮರ್ಥಿಸಿಕೊಳ್ಳುತ್ತಲೇ ಪಶ್ಚಿಮದ ತತ್ವಗಳೆಡೆಗೆ ಮನಸ್ಸು ನೀಡಿರುವುದು ಇಲ್ಲೆಲ್ಲಾ ಕಂಡುಬರುತ್ತದೆ.

ಕೃತಿಗಳ ವಿಶ್ಲೇಷಣೆ ಮತ್ತು ಮೌಲ್ಯಮಾಪನಗಳ ಕ್ಷೇತ್ರದಲ್ಲಿಯೂ ನವೋದಯ ವಿಮರ್ಶೆ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಮಹತ್ವದ ಕೊಡುಗೆಗಳನ್ನು ನೀಡಿದೆ. ಸಂಸ್ಕೃತ ಸಾಹಿತ್ಯವನ್ನು ವಿಮರ್ಶಿಸುವ ಕೃತಿಗಳಲ್ಲಿ ಎ. ಆರ್. ಕೃಷ್ಣಶಾಸ್ತ್ರಿಗಳ 'ಸಂಸ್ಕೃತ ನಾಟಕ', ಮಾಸ್ತಿ ಅವರ 'ಭಾರತ ತೀರ್ಥ'(೧೯೫೨), ವಿ. ಸೀ. ಅವರ 'ವಾಲ್ಮೀಕಿ ರಾಮಾಯಣ'(೧೯೭೭), ಮಹಾಭಾರತದ ಕೃಷ್ಣಚಾರಿತ್ರ್ಯ (೧೯೭೮) ಡಿ. ವಿ. ಜಿ. ಅವರ

ಕಾವ್ಯಸ್ವಾರಸ್ಯ (೧೯೭೫), ಎ. ಎನ್. ಮೂರ್ತಿರಾಯರ 'ಸೀತಾ ಪರಿತ್ಯಾಗ ಪ್ರಸಂಗ' (೧೯೭೭) ಹಾಗೂ ಎಸ್. ವಿ. ರಂಗಣ್ಣನವರ 'ಕಾಳಿದಾಸನ ನಾಟಕಗಳ ವಿಮರ್ಶೆ'(೧೯೬೯) – ಇವುಗಳು ನವೋದಯ ಸಂದರ್ಭದಲ್ಲಿ ವ್ಯಕ್ತಿ ಮತ್ತು ಕೃತಿಗಳನ್ನು ಕೇಂದ್ರೀಕರಿಸಿ ನಡೆದ ಅಧ್ಯಯನಗಳಾಗಿವೆ.

ನವೋದಯ ಕಾಲದಲ್ಲಿ ಸಾಹಿತ್ಯ ವಿಮರ್ಶೆ ಬರೆದವರೆಲ್ಲ ಸಾಮಾನ್ಯವಾಗಿ ಕವಿಗಳಾಗಿಯೂ ಪ್ರಸಿದ್ಧರಾಗಿದ್ದರಿಂದ ಕಾವ್ಯ ರಚನೆಯ ದೃಷ್ಟಿಯ ಪ್ರಕ್ರಿಯೆಯಲ್ಲಿ ವಿಮರ್ಶೆಯ ಅಂಶ ಸೇರಿದೆ. ಕಾವ್ಯ ಸೃಷ್ಟಿಯಾಗುತ್ತಿರುವಾಗಲೂ ಅವರ ವಿಮರ್ಶಾ ಪ್ರಜ್ಞೆ ಎಚ್ಚೆತ್ತಿರುತ್ತದೆ. ಸಾಮಾನ್ಯವಾಗಿ ಈ ಯುಗದ ವಿಮರ್ಶಕರಲ್ಲಿ ಎರಡು ಅಂಶಗಳು ಕಾಣುತ್ತವೆ. "ಮೊದಲನೆಯದಾಗಿ, ಬರಹಗಾರನ ಸಾಮಾಜಿಕ ಹೊಣೆಯ ಮತ್ತು ಓದುವವರ ಮನಸ್ವಾಸ್ಥ್ಯದ ಪ್ರಶ್ನೆ ಇವರಲ್ಲಿ ಸದಾ ಎಚ್ಚರವಾಗಿತ್ತು. ಎರಡನೆಯದಾಗಿ, ಈ ಪ್ರಶ್ನೆಗೆ ಉತ್ತರಿಸುವುದರಲ್ಲಿ ಇವರು ವಾಸ್ತವಿಕತೆಯನ್ನು ಸರಳವಾಗಿ ಕಂಡರು. ಮನೋವಿಜ್ಞಾನ, ಮನುಷ್ಯನ ನಾಗರೀಕತೆಯ ಚರಿತ್ರೆ, ಜೀವನದಲ್ಲಿ ಆರ್ಥಿಕ ಪ್ರಶ್ನೆಯ ಮಹತ್ವ – ಇವನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿರಲಿಲ್ಲ ನಿಜ. ಆದರೆ ಕೃತಿರಚನೆ, ಕೃತಿ ವಿಮರ್ಶೆಗಳಲ್ಲಿ ಬರಹಗಾರನ ಕಾಲದ ಸಾಹಿತ್ಯ ವಿಮರ್ಶೆ ಬಹುಮಟ್ಟಿಗೆ ವಿವರಣಾತ್ಮಕವಾದದ್ದು. ಈ ವಿಮರ್ಶಕರು ತಮ್ಮ ಸಂತೋಷವನ್ನು ಓದುಗರೊಂದಿಗೆ ಹಂಚಿಕೊಂಡು ತೃಪ್ತಿಪಟ್ಟರು. ಸೂಕ್ಷ್ಮ ವಿಶ್ಲೇಷಣೆ ಇವರಲ್ಲಿ ವಿರಳ, ನಿಜ. ಆದರೆ ತಾವು ಬರೆಯುವುದು ಸಾಮಾನ್ಯ ಓದುಗನಿಗೂ ಅರ್ಥವಾಗಬೇಕೆಂಬ ಕಾಳಜಿಯಿಂದ ಬರೆದರು. ಸಾಹಿತ್ಯಕ್ಕೂ ಸಾಮಾನ್ಯ ಓದುಗನಿಗೂ ನಡುವೆ ಸೇತುವೆಯಾದರು."[೧೪] ಎಂದು ಹೇಳುವಲ್ಲಿ ನವೋದಯ ವಿಮರ್ಶೆಯ ಆಶಯ ಮತ್ತು ಉದ್ದೇಶಗಳು ಸ್ಪಷ್ಟವಾಗುತ್ತವೆ.

ಇಷ್ಟಾದರೂ ನವೋದಯ ಸಾಹಿತ್ಯ ಸಂದರ್ಭ ವಿಮರ್ಶೆಗಿಂತಲೂ ಮುಖ್ಯವಾಗಿ ಸೃಜನಶೀಲ ಸಾಹಿತ್ಯದ ಯುಗವಾಗಿತ್ತು. ಅದರೂ ಪ್ರಾಸಂಗಿಕವಾಗಿ ಬರೆದ ಅವರ ವಿಮರ್ಶೆಯ ಮುಖ್ಯ ಲಕ್ಷಣಗಳು, ಮೊದಲನೆಯದಾಗಿ, ಸಂಸ್ಕೃತ ಕಾವ್ಯಮೀಮಾಂಸೆಯ ಹಾಗೂ ಪಾಶ್ಚಾತ್ಯ ವೈಚಾರಿಕ ಅಭ್ಯಾಸದಿಂದ ವಿಮರ್ಶೆಯ ಸಿದ್ಧಾಂತಗಳನ್ನು ರೂಪಿಸುವ ಕೆಲಸ ಈ ಕಾಲದಲ್ಲಿ ನಡೆಯಿತು. ಎರಡನೆಯದಾಗಿ, ಪ್ರಾಚೀನ ಕನ್ನಡ ಹಾಗೂ ಸಂಸ್ಕೃತ ಕವಿಶ್ರೇಷ್ಠರ ಶೋಧ ಹಾಗೂ ಗುಣಗ್ರಹಣಕ್ಕೆ ವಿಶೇಷ ಪ್ರಾಶಸ್ತ್ಯ ದೊರೆಯಿತು. ಕೊನೆಯದಾಗಿ, ಸಮಕಾಲೀನ ಸಾಹಿತ್ಯದ ಮೌಲ್ಯಮಾಪನವೂ ಕೆಲಮಟ್ಟಿಗೆ ನಡೆಯಿತು. ನವೋದಯ ವಿಮರ್ಶೆಯಲ್ಲಿ ವಾಸ್ತವವಾಗಿ ಪ್ರಾಚೀನ ಕನ್ನಡ ಸಾಹಿತ್ಯವನ್ನು ಕುರಿತು ಸಾಮಾನ್ಯ ಓದುಗರಲ್ಲಿ ಅಭಿರುಚಿ ಬೆಳಸುವ ಸಲುವಾಗಿ ಹೇರಳ ಸಾಹಿತ್ಯ ವಿಮರ್ಶೆ ಸೃಷ್ಠಿಯಾಯಿತು. ಇದಕ್ಕೆ ಪೂರಕವಾಗಿ ಮೈಸೂರು ವಿಶ್ವವಿದ್ಯಾಲಯದ 'ಪ್ರಚಾರೋಪನ್ಯಾಸ ಗ್ರಂಥಮಾಲೆ' ಕೂಡ ಶುರುವಾಯಿತು. ಇದರ ಅಡಿಯಲ್ಲಿ ಪ್ರಾಚೀನ ಕನ್ನಡ ಕವಿಗಳನ್ನು ಕುರಿತು ಅನೇಕ ಕಿರು ಹೊತ್ತಗೆಗಳು ಸಾಲಾಗಿ ಪ್ರಕಟವಾಗಿ ಜನಕ್ಕೆ ಸುಲಭವಾಗಿ ಲಭ್ಯವಾದವು. ಇದರಿಂದಾಗಿ ನಮ್ಮ ಪರಂಪರೆಯ ಶ್ರೇಷ್ಠ ಕವಿಗಳಾದ ಪಂಪ, ರನ್ನ,

ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ, ಮುದ್ದಣ ಮೊದಲಾದವರ ಬಗ್ಗೆ ತೀ. ನಂ. ಶ್ರೀ, ಡಿ. ಎಲ್. ಎನ್., ಎಸ್. ವಿ. ಪರಮೇಶ್ವರ ಭಟ್ಟ, ಅನಂತರಂಗಾಚಾರ್, ತ. ಸು. ಶಾಮರಾಯ ಮೊದಲಾದವರು ಕೃತಿಗಳನ್ನು ರಚಿಸುವ ಮೂಲಕ ವಿಮರ್ಶೆಯ ಬೆಳವಣಿಗೆಗೆ ಕಾರಣರಾದರು.

ನವೋದಯ ಕಾಲದ ಸಾಹಿತ್ಯ ವಿಮರ್ಶೆಯಲ್ಲಿ 'ಅಭಿನಂದನಾ ಗ್ರಂಥಗಳ ಪಾಲೂ ದೊಡ್ಡದಿದೆ. ಹಿರಿಯ ಕವಿ ಅಥವಾ ವಿದ್ವಾಂಸರು ಕನ್ನಡ ನಾಡು-ನುಡಿಗೆ ಸಲ್ಲಿಸಿದ ಸೇವೆಗಾಗಿ ಅವರನ್ನು ಅಭಿನಂದಿಸಲು ಅವರ ಹೆಸರಿನಲ್ಲಿ ಗ್ರಂಥಗಳನ್ನು ತರಲಾಯಿತು. ಈ ದಿಶೆಯಲ್ಲಿ ಬಂದ ಮೊದಲ ಗ್ರಂಥವೆಂದರೆ ಬಿ. ಎಂ. ಶ್ರೀ. ಯವರಿಗೆ ೧೯೪೧ರಲ್ಲಿ ಅವರ ಶಿಷ್ಯರು, ಮಿತ್ರರು ಸೇರಿ ತಂದ ಕೃತಿ 'ಸಂಭಾವನೆ'. ಈ ಪರಂಪರೆ ಮುಂದುವರೆದು ಆ ಕಾಲದ ದೊಡ್ಡ ಲೇಖಕರಾದ ಕುವೆಂಪು, ಬೇಂದ್ರೆ, ಎ. ಆರ್. ಕೃಷ್ಣಶಾಸ್ತ್ರಿ, ಟಿ. ಎಸ್. ವೆಂಕಣ್ಣಯ್ಯ, ಶಂಬಾ ಜೋಶಿ, ಫ. ಗು. ಹಳಕಟ್ಟಿ, ಎಸ್. ವಿ. ರಂಗಣ್ಣ, ತ. ಸು. ಶಾಮರಾಯ ಮೊದಲಾದವರಿಗೆ ತಂದ ಅಭಿನಂದನಾ ಗ್ರಂಥಗಳಲ್ಲಿ ಅನೇಕ ವಿದ್ವಾಂಸರ ಶ್ರೇಷ್ಠ ಲೇಖನಗಳಿವೆ. ಒಟ್ಟಿನಲ್ಲಿ ಅಭಿನಂದನಾ ಗ್ರಂಥಗಳು ಕನ್ನಡ ವಿಮರ್ಶೆಯ ಬೆಳವಣಿಗೆಯಲ್ಲಿ ತನ್ನದೇ ಪ್ರಭಾವ ಬೀರಿವೆ.

ನವೋದಯ ವಿಮರ್ಶೆ ಸಮಕಾಲೀನ ಸಾಹಿತ್ಯದ ವಸ್ತುನಿಷ್ಠ ವಿಮರ್ಶೆಯನ್ನು ಸಾಕಾದಷ್ಟು ಪ್ರಮಾಣದಲ್ಲಿ ನಡೆಸಲಿಲ್ಲ. ಹೆಚ್ಚಾಗಿ ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಮತ್ತು ಹಳಗನ್ನಡ, ನಡುಗನ್ನಡ ಸಾಹಿತ್ಯದ ಹಾಗೂ ಸಂಸ್ಕೃತ ಸಾಹಿತ್ಯದ ಸಮೀಕ್ಷೆಯಲ್ಲಿ ಅದು ಶ್ರೇಷ್ಠ ಫಲಗಳನ್ನು ಕೊಟ್ಟಿದೆ. ಸಮಕಾಲೀನ ಕನ್ನಡ ಸಾಹಿತ್ಯವನ್ನು ವಿಮರ್ಶಿಸುವಾಗಲೂ ನವೋದಯ ವಿಮರ್ಶಕರು ಹಿರಿಯ ಲೇಖಕರ ಬಗ್ಗೆ ಆರಾಧನಾ ಭಾವವನ್ನು, ಕಿರಿಯರ ಬಗ್ಗೆ ಬೆನ್ನುತಟ್ಟಿ ಪ್ರೋತ್ಸಾಹಿಸುವ ಮನೋಭಾವವನ್ನು ಪ್ರದರ್ಶಿಸಿರುವುದು ಸರ್ವೆಸಾಮಾನ್ಯ.

"ಡಿ. ವಿ. ಜಿ. ಯವರ 'ಜೀವನ ಮತ್ತು ಸೌಂದರ್ಯ', ಮಾಸ್ತಿಯವರ 'ಆದಿಕವಿ ವಾಲ್ಮೀಕಿ', 'ಸಾಹಿತ್ಯ', ಬೇಂದ್ರೆಯವರ 'ಸಾಹಿತ್ಯ ಮತ್ತು ವಿಮರ್ಶೆ', 'ಸಾಹಿತ್ಯ ಮತ್ತು ಸಂಶೋಧನೆ', ವೀಸಿಯವರ 'ಈಗಿನ ಕವಿಕಾವ್ಯ ದೃಷ್ಟಿ', ಕುವೆಂಪು ಅವರ 'ಸಾಹಿತ್ಯ ಪ್ರಚಾರ', ಕಾವ್ಯ ವಿಹಾರ', 'ತಪೋನಂದನ', 'ದ್ರೌಪದಿಯ ಶ್ರೀಮುಡಿ', 'ವಿಭೂತಿ ಪೂಜೆ', ಗೋಕಾಕರ 'ಕವಿಕಾವ್ಯ ಮಹೋನ್ನತಿ', ತೀ. ನಂ. ಶ್ರೀ. ಯವರ 'ಕಾವ್ಯ ಸಮೀಕ್ಷೆ', 'ಸಮಾಲೋಕನ', ಮತ್ತು ಎಸ್. ವಿ. ರಂಗಣ್ಣನವರ 'ಶೈಲಿ' ಸಂಪುಟಗಳು ನವೋದಯ ಕಾಲದ ವಿಮರ್ಶೆಯ ಪ್ರಾತಿನಿಧಿಕ ಹಾಗೂ ಮೌಲಿಕ ಕೃತಿಗಳು"[೧೫] ಎಂಬ ಅಭಿಪ್ರಾಯದ ಜೊತೆಗೆ ದನಿಗೂಡಿಸಬಹುದು.

ಒಟ್ಟಾರೆ ಜಿ. ಎಸ್. ಶಿವರುದ್ರಪ್ಪನವರು ಅಭಿಪ್ರಾಯ ಪಡುವಂತೆ "ನವೋದಯದಲ್ಲಿ ಒಂದು ಕೃತಿಯ ಸಮಗ್ರ ವಿಶ್ಲೇಷಣೆ ಹೊರಬರಲಿಲ್ಲ. ಮಾತ್ರವಲ್ಲ ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ಹೊರಬಂದ ಅನೇಕ ಲೇಖನಗಳು, ಗ್ರಂಥಗಳು ಕೂಡಾ

ಇಂತಹ ವೈಜ್ಞಾನಿಕ ದೃಷ್ಟಿಗೆ ಹೊರತಾಗಿ ಬಿಟ್ಟವು."[೧೬] ಎಂಬ ಹೇಳಿಕೆಯನ್ನು ಅನುಮೋದಿಸಬಹುದು. ಇಷ್ಟಾದರೂ, ಜನಸಾಮಾನ್ಯರಿಗೆ ತಾವು ಬರೆದದ್ದು ಅರ್ಥವಾಗಬೇಕೆಂಬುದು ನವೋದಯ ವಿಮರ್ಶಕರ ಬಹುಮುಖ್ಯ ಕಾಳಜಿಯಾಗಿತ್ತು. ಆದ್ದರಿಂದ ಕತೆ, ಕಾದಂಬರಿಗಳಂತೆ ಅವರ ವಿಮರ್ಶಾ ಕೃತಿಗಳೂ ಓದುಗರಲ್ಲಿ ಆಸಕ್ತಿ ಮೂಡಿಸುತ್ತಿದ್ದವು. ಒಣ ಪಾಂಡಿತ್ಯ, ಯಾಂತ್ರಿಕತೆ, ಕೃತಿಯೊಂದರ ರೂಪ – ಆಕಾರಗಳಿಗಿಂತ ಸರಳ, ನೇರ, ಸ್ಪಷ್ಟತೆಗೆ, ಸಹೃದಯತೆಗೆ, ರಸಾಸ್ವಾದನೆಗೆ ಪ್ರಾಮುಖ್ಯತೆ ಕೊಟ್ಟರು. ನವೋದಯ ವಿಮರ್ಶೆ ಹಳಗನ್ನಡ – ನಡುಗನ್ನಡ ಸಾಹಿತ್ಯದ ಸಾಧ್ಯತೆಗಳನ್ನು ಶ್ರಮವಹಿಸಿ ಕಟ್ಟಿಕೊಡುವ ಮೂಲಕ ಹಾಗೂ ಸ್ವಲ್ಪಮಟ್ಟಿಗೆ ಸಂಸ್ಕೃತ ಸಾಹಿತ್ಯವನ್ನೂ ಪರಿಚಯಿಸುವ ಮೂಲಕ ಕನ್ನಡದಲ್ಲಿ ಒಟ್ಟು ಆತ್ಮೀಯ ಸಹೃದಯನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿತು.

ಪ್ರಗತಿಶೀಲ ವಿಮರ್ಶೆ

ನವೋದಯ ಸಾಹಿತ್ಯದ ಸಮೃದ್ಧಿಯ ಕಾಲದಲ್ಲೇ ಕಾಣಿಸಿಕೊಂಡ ಪ್ರಗತಿಶೀಲ ಸಾಹಿತ್ಯವು, ಆ ಕಾಲದ ಜಾಗತಿಕ ಚಟುವಟಿಕೆಗಳಿಂದ ಉತ್ತೇಜನಗೊಂಡಿತ್ತು. ಇಪ್ಪತ್ತನೆ ಶತಮಾನದ ಉತ್ತರಾರ್ಧದಲ್ಲಿ ಕಾಣಿಸಿಕೊಂಡ ಸಮತಾವಾದ ಮತ್ತು ಸಮಾಜವಾದಗಳು ಜಗತ್ತಿನ ಚಹರೆಯನ್ನೆ ಬದಲಾಯಿಸತೊಡಗಿದವು. ಆ ಕಾಲದ ಸಾಹಿತ್ಯ ಮತ್ತು ಕಲೆಗಳು ಆ ತತ್ವಗಳನ್ನು ಅನುಕರಿಸಲಾರಂಭಿಸಿದವು. ಅದನ್ನು ಕನ್ನಡದಲ್ಲೂ ತರುವ ಪ್ರಯತ್ನ ನಡೆದವು. ಅ.ನ.ಕೃ., ತ.ರಾ.ಸು., ನಿರಂಜನ ಮೊದಲಾದವರು ಆ ಚಳುವಳಿಯ ಮುಂಚೂಣಿಯಲ್ಲಿ ಕಾಣಿಸಿಕೊಂಡರು. ಈ ಚಳುವಳಿ ಶೋಷಿತರ ಪರವಾಗಿರುವ ಕತೆ, ಕಾದಂಬರಿಗಳನ್ನು ಹೇರಳವಾಗಿ ಸೃಜಿಸಿತು. ಆದರೆ ಸಾಹಿತ್ಯದ ಕಲಾತ್ಮಕತೆ ಮತ್ತು ವಿಮರ್ಶಾತ್ಮಕತೆಗೆ ಹೆಚ್ಚು ಗಮನ ಕೊಡದಿದ್ದರಿಂದ ಕನ್ನಡದಲ್ಲಿ ಅದು ಗಂಭೀರವಾದಂತಹ ಸಾಧನೆ ತೋರಲಾಗಲಿಲ್ಲ. ಆದರೂ ಇಲ್ಲಿಂದ ಕನ್ನಡ ವಿಮರ್ಶೆಯ ಮೇಲೆ ಮಾರ್ಕ್ಸ್‌ವಾದದ ಪ್ರಭಾವ ಕಾಣಿಸಿಕೊಳ್ಳಲಾರಂಭಿಸಿತು.

ಪ್ರಗತಿಶೀಲ ಸಾಹಿತ್ಯಕ್ಕೆ ವಿಮರ್ಶೆ ಏಕೆ ಬೇಕು? ಅದು ಹೇಗಿರಬೇಕು? ಎಂಬಂತಹ ಪ್ರಶ್ನೆಗಳನ್ನೆತ್ತಿಕೊಂಡು ಅ.ನ.ಕೃ. ಅವರು ಹಲವಾರು ಲೇಖನಗಳನ್ನು ಬರೆದಿದ್ದಾರೆ. ರವಿ ಕಾಣದ್ದನ್ನು ಕವಿ ಕಂಡರೆ, ಕವಿ ಕಾಣದ್ದನ್ನು ವಿಮರ್ಶಕ ಕಾಣಬಲ್ಲನೆಂದು ಅಭಿಪ್ರಾಯ ಪಟ್ಟಿರುವ ಅ.ನ.ಕೃ ಅವರು ವಿಮರ್ಶಕನನ್ನು ಶಿಲ್ಪಿಗೆ ಹೋಲಿಸಿದ್ದಾರೆ. ಜಡ ಶಿಲೆಯಲ್ಲಿದ್ದ ಅನವಶ್ಯಕ ಭಾಗಗಳನ್ನು ಕೆತ್ತಿ ಹೇಗೆ ಶಿಲ್ಪಿ ಮೂರ್ತಿ ಮಾಡುತ್ತಾನೋ, ಹಾಗೆಯೇ ವಿಮರ್ಶಕ ಓದುಗರ ಮನಸ್ಸನ್ನು ರೂಪಿಸುತ್ತಾನೆಂದು ಅವರು ತಮ್ಮ ಲೇಖನಗಳಲ್ಲಿ ಅಭಿಪ್ರಾಯಪಡುತ್ತಾರೆ.

"ಒಂದಿನ ಕವಿಗಳು ಸುಕವಿ ವಂದನೆ ಕುಕವಿ ನಿಂದನೆಯೆಂದು ತಮ್ಮ ವಿಮರ್ಶನಾ ನೈಪುಣ್ಯವನ್ನು ಹೊರತೋರುತ್ತಿದ್ದರು. ಇಂದಿನ ಪತ್ರಿಕೆಗಳಲ್ಲಿ ಬೇಕಾದವರ ಮನ್ನಣೆ

ಬೇಡಾದವರ ಖಂಡನೆ ಮಾಡುವ ವ್ಯೂಹವನ್ನು ನಮ್ಮ ವಿಮರ್ಶಕರು ಇನ್ನೂ ದಾಟಿಲ್ಲ. ವಿಮರ್ಶಕರು ಗ್ರಂಥವನ್ನು ವಿಮರ್ಶಿಸುವುದರ ಬದಲು ಗ್ರಂಥಕರ್ತನನ್ನು ವಿಮರ್ಶಿಸುತ್ತಾರೆ. ಕವಿಯ ದೃಷ್ಟಿಯನ್ನು ತಾವು ಅರಿಯುವುದರ ಬದಲು ತಮ್ಮ ದೃಷ್ಟಿಯನ್ನು ಕವಿಯು ಪ್ರತಿಪಾದಿಸಲಿಲ್ಲ ಎಂದು ಆಕ್ಷೇಪಿಸುತ್ತಾರೆ. ವಿಮರ್ಶಕನ ಸಂಬಂಧ ಯಾವಾಗಲೂ ತನ್ನ ಮುಂದಿರುವ ಜನತೆಯೊಂದಿಗಿರಬೇಕೇ ವಿನಾ ಕವಿಗಳೊಂದಿಗಲ್ಲ... ಜ್ಞಾನ ಅಂತ:ಕರಣಗಳ ಪ್ರಕ್ರಿಯೆಗಳನ್ನು ಯಾವನು ಚೆನ್ನಾಗಿ ಮನನ ಮಾಡಿಕೊಂಡು ಕ್ರಿಯಾವಂತರು ಮುಟ್ಟಿರುವ ಆಸೆ ಆಶಯಗಳನ್ನು ಬಿಚ್ಚಿ ಹೇಳಬಲ್ಲನೋ ಅವನು ವಿಮರ್ಶಕನೆಂದೆನಿಸಿಕೊಳ್ಳುತ್ತಾನೆ.”[೧೭] ಎಂದು ವ್ಯಾಖ್ಯಾನಿಸುವ ಅನಕೃ, “ನವೋದಯ ಕಾಲದ ಆಚಾರ್ಯರ ಮತಕ್ಕೆ ಸೇರದ ಕವಿಗಳ ಕೃತಿಗಳನ್ನು ತೀರ ಕನಿಷ್ಠವೆಂದು ಕಾಣುವುದು ಚಾಳಿಯಾಯಿತು. ವಿಮರ್ಶಕರ ಈ ಪಕ್ಷ ಮನೋಭಾವ ಪ್ರತಿ ಪಕ್ಷಗಳ ಹುದ್ದೆಗೆ ಕಾರಣವಾಗಿ ಘರ್ಷಣೆಯಾಗತೊಡಗಿತ್ತು. ಸಾಹಿತ್ಯ ಸಾಗರದ ಮಂಥನದಿಂದ ಅಮೃತದ ಬದಲು ವಿಷ ಹುಟ್ಟಿತು.”[೧೮] ಎಂದು ನವೋದಯ ವಿಮರ್ಶೆಯನ್ನು ಟೀಕಿಸುತ್ತಾರೆ.

ಇಂತಹ ಕಡೆಗಳಲ್ಲಿ ಅನಕೃ ಸೇರಿದಂತೆ ಪ್ರಗತಿಶೀಲ ಲೇಖಕರಿಗೆ ವಿಮರ್ಶೆಯ ಕಾರ್ಯದ ಬಗ್ಗೆ ಖಚಿತ ನಿಲುವಿತ್ತು ಎಂದು ತಿಳಿಯುತ್ತದೆ. ಆದರೆ ಕಥೆ, ಕಾದಂಬರಿ ಪ್ರಕಾರಗಳ ರಚನೆಗೆ ತೋರಿದ ಆಸಕ್ತಿಯನ್ನು ಇವರು ವಿಮರ್ಶಾ ಪ್ರಕಾರಕ್ಕೆ ತೋರಲಿಲ್ಲ. ಜೊತೆಗೆ ಆ ಕಾಲದಲ್ಲಿ ಅನಕೃ, ತರಾಸು ಮೊದಲಾದ ಲೇಖಕರ ಕಾದಂಬರಿಗಳಿಗೆ ಪತ್ರಿಕೆಗಳಲ್ಲಿ ಅಪಾರ ಬೇಡಿಕೆ ಇದ್ದಿದ್ದರಿಂದ ಇವರು ವಿಮರ್ಶಾ ವ್ಯವಸಾಯದಿಂದ ವಿಮುಖರಾದರು ಎನಿಸುತ್ತದೆ. ಇಷ್ಟಾದರೂ ಟಿ. ಪಿ. ಕೈಲಾಸಂ ಅವರನ್ನು ಕುರಿತು ಅನಕೃ ಬರೆದ ಕೃತಿ, ಅನಕೃ ಅವರನ್ನು ಕುರಿತು ತ. ರಾ. ಸು. ಬರೆದ ಕೃತಿಗಳು ವ್ಯಕ್ತಿ ಅಧ್ಯಯನದಲ್ಲಿ ತುಂಬಾ ಗಂಭೀರವಾದ ಪ್ರಯತ್ನಗಳಾಗಿವೆ.

ಒಟ್ಟಿನಲ್ಲಿ, ಗಿರಡ್ಡಿ ಗೋವಿಂದರಾಜ ಅವರು ಅಭಿಪ್ರಾಯಪಡುವಂತೆ ಪ್ರಗತಿಶೀಲ ವಿಮರ್ಶೆ "ಕನ್ನಡದಲ್ಲಿ ಭದ್ರವಾದ ಸಾಹಿತ್ಯಿಕ ಸಿದ್ಧಾಂತಗಳನ್ನು ರೂಪಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಈ ಸಂಪ್ರದಾಯ ತನ್ನದೇ ಆದ ಸಾಹಿತ್ಯ ವಿಮರ್ಶಾ ಪ್ರಕಾರವೊಂದನ್ನು ರೂಪಿಸಿಕೊಳ್ಳುವಲ್ಲಿ ವಿಫಲವಾಯಿತು”[೧೯] ಎಂಬಲ್ಲಿ ಅದರ ಮಿತಿಗಳು ಸ್ಪಷ್ಟಗೊಳ್ಳುತ್ತವೆ.

ನವ್ಯ ವಿಮರ್ಶೆ

ಸ್ವಾತಂತ್ರ್ಯಾನಂತರ ಆಧುನಿಕ ಶಿಕ್ಷಣ ಪಡೆದ ಎರಡನೆಯ ತಲೆಮಾರು ಸಾಹಿತ್ಯ ವಿಮರ್ಶೆ ಮತ್ತು ಮೀಮಾಂಸೆಯ ದೃಷ್ಟಿಯಿಂದ ಪಶ್ಚಿಮದಿಂದ ನವೋದಯ ಕಾಲದ ಲೇಖಕರಿಗಿಂತ ಭಿನ್ನ ರೀತಿಯ ಪ್ರಭಾವ-ಪ್ರೇರಣೆಗಳನ್ನು ಪಡೆದುಕೊಂಡರು. ಇದಕ್ಕೆ ಅಂದಿನ ಸಾಮಾಜಿಕ ಸಂದರ್ಭಗಳೂ ಪೂರಕವಾಗಿದ್ದವು. ಮೊದಲಿಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವ್ಯತೆ, ನವ್ಯಕಾವ್ಯ ಪ್ರಯೋಗವನ್ನು ವಿ. ಕೃ. ಗೋಕಾಕ್ ಆರಂಭ

ಮಾಡಿದರು. ಕಾವ್ಯದಲ್ಲಿನ ಬಳಕೆ ಮಾತು, ಛಂದಸ್ಸಿನಲ್ಲಿಯ ನವೀನ ಪ್ರಯೋಗ, ಪ್ರತಿಮಾ ಪ್ರಧಾನತೆ, ವಾಸ್ತವಿಕ ಚಿತ್ರ ಸೃಷ್ಟಿ, ಪಾರಿಭಾಷಿಕ ಶೈಲಿ, ವಸ್ತುವಿನ ಆಯ್ಕೆಯಲ್ಲಿ ಸ್ವಾತಂತ್ರ್ಯ, ಬುದ್ಧಿ ಪ್ರಧಾನತೆ, ವ್ಯಕ್ತಾತೀತ ಮೌಲ್ಯಗಳಿಗೆ ಪ್ರಧಾನತೆ ನೀಡುವುದೇ ನವ್ಯ ಕಾವ್ಯದ ಲಕ್ಷಣಗಳೆಂದು ಗೋಕಾಕರು ಪಟ್ಟಿ ಮಾಡಿ ವಿವರಿಸಿದರು. ಆದರೆ ಅವರು ಹೇಳುವ ನವ್ಯಕಾವ್ಯ ನವೋದಯ ಕಾವ್ಯಕ್ಕಿಂತ ಸ್ಪಷ್ಟವಾದ ಭಿನ್ನತೆಯನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಲಿಲ್ಲ.

ಆದರೆ ಅದೇ ಸಂದರ್ಭದಲ್ಲಿ ನವೋದಯಕ್ಕಿಂತ ಪೂರ್ಣ ಭಿನ್ನವಾಗಿದ್ದ ಸಾಹಿತ್ಯ ಸೃಜಿಸಿದ ಶ್ರೇಯ ಗೋಪಾಲಕೃಷ್ಣ ಅಡಿಗರಿಗೆ ಸಲ್ಲುತ್ತದೆ. ಜೊತೆಗೆ ನವ್ಯ ಸಾಹಿತ್ಯದ ಪ್ರತಿಭಾವಂತ ಲೇಖಕರೆಲ್ಲರೂ ಕಾವ್ಯ ರಚಿಸುವುದರ ಜೊತೆಗೆ ಉತ್ತಮ ವಿಮರ್ಶಕರೂ ಆಗಿದ್ದರಿಂದ ಈ ಸಂದರ್ಭದಲ್ಲಿ ಶಿಸ್ತುಬದ್ಧವಾದ ವಿಮರ್ಶೆ ಕಾಣಿಸಿಕೊಂಡಿತು. ನವ್ಯಕಾವ್ಯದ ಸೂಕ್ತ ವಿಶ್ಲೇಷಣೆಗೆಂದು "ಸಾಕ್ಷಿ" ಪತ್ರಿಕೆಯನ್ನು ಆರಂಭಿಸಿದ ಅಡಿಗರು ಮುಂದಿನ ಕನ್ನಡ ವಿಮರ್ಶೆ ಹೊಂದಬೇಕಾದ ಬದಲಾವಣೆಗಳನ್ನು ಈ ಕೆಳಗಿನಂತೆ ಸೂಚಿಸುತ್ತಾರೆ. "ವಿಮರ್ಶೆಯ ಮೊದಲನೆ ಕೆಲಸ ಕೃತಿಯ ಆಮೂಲಾಗ್ರವಾದ ಅಭ್ಯಾಸ. ಆ ಅಭ್ಯಾಸಕ್ಕೆ ತಕ್ಕ ಊಹಾಶಕ್ತಿ, ಭಾಷಾಜ್ಞಾನ, ವಿನಯ ಮತ್ತು ತಾಳ್ಮೆ ಅತ್ಯಗತ್ಯ. ಕೃತಿ ಒಂದು ಸ್ವತಂತ್ರ ವಸ್ತು. ಈವರೆಗಿನ ನಮ್ಮ ವಿಮರ್ಶೆ ಸ್ನೇಹಿತರ ಬಗ್ಗೆ ದಾಕ್ಷಿಣ್ಯ, ದೊಡ್ಡವರ ಬಗ್ಗೆ ಭಯ, ಮೂರನೆಯವರ ಬಗ್ಗೆ ಔದಾಸೀನ್ಯ ಅಥವಾ ನಿಷ್ಕಾರಣ ವಿರೋಧ ಇವುಗಳಿಂದ ಸಾಮಾನ್ಯವಾಗಿ ಮಲಿನವಾಗಿದೆ. ಎಂದರೆ ವಿಮರ್ಶಕನ ಕಾರ್ಯ ವ್ಯಕ್ತಿನಿಷ್ಠವಾಗಿತ್ತೆ ಹೊರತು ಕೃತಿನಿಷ್ಠವಾಗಿರಲಿಲ್ಲ."[೨೦] ಎಂಬ ಮಾತುಗಳಲ್ಲಿ ಕನ್ನಡ ವಿಮರ್ಶೆ ಹೇಗೆ ಆಶಯದಿಂದ ಆಕೃತಿಗೆ, ವ್ಯಕ್ತಿಯಿಂದ ಕೃತಿಗೆ ಹೊರಳಿತು ಎಂಬುದನ್ನು ಕಾಣಬಹುದು.

ನವ್ಯ ವಿಮರ್ಶೆ ಕನ್ನಡದಲ್ಲಿ ಮೊದಲ ಬಾರಿಗೆ ಬಂದ ಒಂದು ಸ್ವಯಂಪೂರ್ಣವಾಗಿ ಬೆಳೆದ ಅಧ್ಯಯನ ಶಿಸ್ತು. ವಿಮರ್ಶೆಯ ತಾತ್ವಿಕ ಗಟ್ಟಿತನ, ನಿಷ್ಠೂರತೆ, ನಿರ್ಭಿಡೆಯಿಂದ ವ್ಯಕ್ತವಾದ ಅಭಿವ್ಯಕ್ತ ಕ್ರಮ – ಇವುಗಳಿಂದ ಆ ಶಿಸ್ತು ಮೂಡಲು ಕಾರಣವಾಯಿತು. ಕಾವ್ಯದಂತೆ ವಿಮರ್ಶೆಯ ಭಾಷೆಯು ವಿಶಿಷ್ಟವಾಗಿರುತ್ತದೆ, ಅದು ಜನರಾಡುವ ಭಾಷೆಗಿಂತ ಬೇರೆ ಮಾದರಿಯದಾಗಿದ್ದು ಕಲಾತ್ಮಕ ಸಾಧ್ಯತೆಯನ್ನು ಹೊಂದಿರುತ್ತದೆ. ಆ ಕಾರಣದಿಂದಾಗಿ ಇಂತಹ ಭಾಷೆಯ ವಿಶಿಷ್ಟ ಲಯವು ವ್ಯಾವಹಾರಿಕ ಭಾಷೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ: ಬದಲಿಗೆ ಕಲಾಕೃತಿಯಲ್ಲಿ ಬಳಕೆಯಾಗುವ ಭಾಷೆಯು ಅದರಷ್ಟಕ್ಕೆ ಅನನ್ಯವಾಗಿರುತ್ತದೆ ಎಂಬುದು ನವ್ಯದವರ ನಿಲುವಾಗಿತ್ತು.

ರಮ್ಯವಾದದ ಅತಿಯಾದ ಆದರ್ಶಮಯತೆ, ಆಧ್ಯಾತ್ಮ ಪರವಾದ ಕಾಳಜಿ ನವ್ಯವಾದದ ಹುಟ್ಟಿಗೆ ಕಾರಣ ಎನ್ನಬಹುದು. ವಾಸ್ತವಿಕತೆ ಅಥವಾ ಅಥೆಂಟಿಸಿಟಿ ಸಾಹಿತ್ಯದಲ್ಲಿ ಬಹು ಮುಖ್ಯ ಎಂದು ಪ್ರತಿಪಾದಿಸಿದ ನವ್ಯ ಸಾಹಿತ್ಯ ಆರಂಭವಾದಾಗ ಅಲ್ಲಿಯವರೆಗಿದ್ದ ಮುಖ್ಯ ಸಾಹಿತ್ಯ ಪಂಥಗಳಾದ ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯಗಳು ತಮ್ಮ ತುರೀಯಾವಸ್ಥೆಯನ್ನು ತಲುಪಿರಲಿಲ್ಲ. ನವ್ಯದ ಜೋರುಕಾಲದ

ನಂತರವೂ ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯಗಳ ತಾತ್ವಿಕ ಮೂಲದಿಂದಲೆ ಕನ್ನಡದ ಶ್ರೇಷ್ಠ ಕೃತಿಗಳು ಬಂದವು. ಕನ್ನಡದಲ್ಲಿ ನವ್ಯ ಸಾಹಿತ್ಯ ಮತ್ತು ವಿಮರ್ಶೆಗೆ ದೇಶಿ ಸಾಹಿತ್ಯದ ಪ್ರಭಾವಗಳಿಗಿಂತ ಹೆಚ್ಚಾಗಿ ಸಾಹಿತ್ಯೇತರವಾದ ರಾಜಕೀಯ ಕಾರಣಗಳೇ ಮುಖ್ಯವಾದವು. ಜೊತೆಗೆ ಪಶ್ಚಿಮದಲ್ಲಿ ಇಲಿಯಟ್ ಮೊದಲಾದವರು ಆರಂಭಿಸಿದ್ದ ನವ್ಯ ವಿಮರ್ಶೆಯೂ ಕಾರಣವಾಗಿತ್ತು. ನವ್ಯ ಲೇಖಕರು ಇದರ ಬಗ್ಗೆ ವಿಭಿನ್ನವಾದ ಮಾತುಗಳನ್ನು ಆಡಿದ್ದಾರೆ.

ನವ್ಯ ಸಾಹಿತ್ಯ ಒಂದು ಪಂಥವಾಗಿ, ಆಂದೋಲನವಾಗಿ ಆರಂಭಗೊಂಡಾಗ ಅದರ ಸೃಷ್ಟಿಶೀಲ ಸಾಹಿತ್ಯದಂತೆ ವಿಮರ್ಶಾ ಧೋರಣೆಯಲ್ಲೂ ಹೊಸ ಬಗೆಯ ಚಟುವಟಿಕೆಗಳು ಕಾಣಿಸಿಕೊಂಡವು. "ಪ್ರಚಲಿತ ಸಾಹಿತ್ಯ ಸಂಪ್ರದಾಯದಿಂದ ಅನೇಕ ರೀತಿಯಲ್ಲಿ ಭಿನ್ನವಾಗಿದ್ದ ನವ್ಯ ಸಾಹಿತ್ಯ ಅನೇಕರಿಗೆ ಅರ್ಥ ಮಾಡಿಕೊಳ್ಳಲು ಕ್ಲಿಷ್ಟವೆನಿಸಿದ್ದರಿಂದ ಅದರ ಸೂಕ್ಷ್ಮಗಳ ವಿಶ್ಲೇಷಣೆ ಅವಶ್ಯವೆನಿಸಿ ಆ ಮೂಲಕ ವಿಮರ್ಶಕನ ಮಹತ್ವ ಎಂದಿಗಿಂತ ಈಗ ಹೆಚ್ಚಾಗಿ ಕಂಡು ಬಂದಿತೆನ್ನಬಹುದು."[೨೧] ಈ ಕಾರಣಕ್ಕಾಗಿಯೇ ಬಹುಶಃ ನವ್ಯದ ಸಂದರ್ಭದಲ್ಲಿ ವಿಮರ್ಶೆ ಗಂಭೀರವಾಗಿ ಪ್ರಕಟಗೊಳ್ಳಲು ಕಾರಣವಾಗಿರಬಹುದು.

ವೈಯಕ್ತಿಕವಾದವೆ ನವ್ಯ ಸಾಹಿತ್ಯ ರಚನೆ ಮತ್ತು ಸಾಹಿತ್ಯ ವಿಮರ್ಶೆಯ ಹಿಂದಿರುವ ಮುಖ್ಯ ವಿಚಾರ. ಆಧುನಿಕ ಮನಸ್ಸಿನ ಮೂಲ ಗುಣ ಅದರ ಆತ್ಮಪ್ರಜ್ಞೆ, ಹಾಗಾಗಿ ನವ್ಯ ವಿಮರ್ಶೆಯ ಪ್ರಧಾನ ಆಸಕ್ತಿ ವೈಯಕ್ತಿಕ ಮೌಲ್ಯ; ಅದರ ಅವಿರತ ಶೋಧನೆ ಮತ್ತು ಅದರ ಮೌಲ್ಯ ಮಾಪನವೇ ನವ್ಯದ ಮುಖ್ಯ ಉದ್ದೇಶವಾಗಿದೆ. ಅಲ್ಲಿ ಸಾಮಾಜಿಕ ಸಮಸ್ಯೆಗಿಂತ ವೈಯಕ್ತಿಕ ಸಮಸ್ಯೆಗಳು ಮುಖ್ಯವಾಗುತ್ತವೆ. ಎಲ್ಲ ಕಲೆಯ ಮೂಲದ್ರವ್ಯವೂ ಕಲೆಗಾರನ ವೈಯಕ್ತಿಕ ಅನುಭವವೇ ಹೊರತು ಬೇರೆ ಅಲ್ಲ. ನವೋದಯ ಸಾಹಿತ್ಯ ವ್ಯಕ್ತಿಯನ್ನು ಸಮಾಜ ಜೀವಿ ಎಂದು ನೋಡಿದರೆ, ನವ್ಯ ಸಾಹಿತ್ಯವು ಸಮಾಜವನ್ನು ವ್ಯಕ್ತಿಯ ಪ್ರಜ್ಞೆಯ ಮೂಲಕ ತಿಳಿಯುವ ಪ್ರಯತ್ನ ಮಾಡುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ವ್ಯಕ್ತಿ ಕೇಂದ್ರಿತವಾದ ಸಾಹಿತ್ಯ ಮತು ವಿಮರ್ಶೆ ಹೆಚ್ಚಾಗಿ ಪ್ರಕಟಗೊಂಡವು.

ನವ್ಯ ವಿಮರ್ಶೆಯಲ್ಲಿ ಕೃತಿಯೇ ಸರ್ವಸ್ವವಾದುದರಿಂದ ಕೃತಿಕಾರ ಏನನ್ನೇ ಹೇಳಬೇಕಾದರೂ ಭಾಷೆಯ ಮೂಲಕ ಮಾತ್ರ ಹೇಳಬಲ್ಲ ಎಂಬ ನಂಬಿಕೆ ಬಲವಾಯಿತು. "ನವ್ಯ ವಿಮರ್ಶೆಯೆಂದರೆ ಮೂಲತಃ ಶಾಬ್ಧಿಕ ವಿಮರ್ಶೆ. ಅಂದರೆ ಈ ವಿಮರ್ಶಕರಿಗೆ ಸಾಹಿತ್ಯವೆಂದರೆ ವಿಶೇಷವಾದ ಭಾಷೆ ಅಷ್ಟೇ. ವಿಶೇಷವಾದ ಭಾಷೆ ದಿನನಿತ್ಯದ ಸಾಮಾನ್ಯ ಮಾತಿಗಿಂತ ವಿಜ್ಞಾನದ ಭಾಷೆಗಿಂತ ಭಿನ್ನವಾದದ್ದು ಮತ್ತು ವಿರುದ್ದವಾದದ್ದು. ನವ್ಯ ವಿಮರ್ಶೆಯ ಮೂಲಭೂತ ಪರಿಕಲ್ಪನೆಗಳು, ಅರ್ಥ, ಪದಗಳ ಆಂತರಿಕ ಸಂಬಂಧಗಳು, ಸಂಕೇತ, ಉಪಮಾನ, ರೂಪಕ ಇವುಗಳನ್ನು ಕುರಿತದ್ದು ಆಗಿರುವುದರಿಂದ ಸಾಹಿತ್ಯ ಪ್ರಕಾರಗಳ ಭಿನ್ನತೆಗೆ ಇಲ್ಲಿ ಬೆಲೆ ಇಲ್ಲ."[೨೨] ಎಂಬ ಭಾವ ಪ್ರಬಲವಾಗಿ ಕೃತಿಯೊಂದರ ಯಶಸ್ಸಿನಲ್ಲಿ ಅದು ಬಳಸಿರುವ ಭಾಷೆಯೂ ಒಂದು ಪ್ರಮುಖ ಸಾಧನವಾಗುತ್ತದೆಂಬ ವಿಚಾರ ಮುನ್ನೆಲೆಗೆ ಬಂತು.

ಈ ಮೇಲಿನ ಕಾರಣಗಳಿಗಾಗಿ ನವ್ಯ ಸಾಹಿತ್ಯ ಸಂದರ್ಭದಲ್ಲಿ ವಿಮರ್ಶೆ ಪ್ರಧಾನವಾದ ಆಸಕ್ತಿಯ ಕೇಂದ್ರವಾಯಿತು. ಹಾಗಾಗಿ ವಿಮರ್ಶಕ/ಓದುಗರ ಜವಾಬ್ದಾರಿಯು ಹೆಚ್ಚಾಯಿತು. ವಿಮರ್ಶೆ–ವಿಮರ್ಶಕ–ಓದುಗ ಇವರನ್ನು ಸಮಾನವಾಗಿ ಕಂಡರು. ಅಡಿಗರು ಹೆಚ್ಚು ವಿಮರ್ಶೆ ಬರೆಯದಿದ್ದರೂ ನವ್ಯ ವಿಮರ್ಶಕರ ಮೇಲೆ ಮೊದಲಿಗೆ ಪ್ರಭಾವ ಬೀರಿದ್ದಾರೆ. ತನಗೆ ಅನಿಸಿದ್ದನ್ನು ಕಾರಣಸಹಿತ ಮಂಡಿಸಬಲ್ಲವನು ಮಾತ್ರ ವಿಮರ್ಶಕ. ಅವನಿಗೆ ತಕ್ಕ ತರಬೇತಿ ಬೇಕು. ಪ್ರತಿಯೊಂದು ಸಂಗತಿಯನ್ನು ಆತ ವಿವೇಕದ ಒರೆಗೆ ಹಚ್ಚುವವನು ಎಂದು ಅಡಿಗರು ಪ್ರತಿಪಾದಿಸಿದ್ದರು. ಜೊತೆಗೆ ಓದುವಿಕೆಗೆ ವಿಶೇಷ ಅರ್ಥ ಪ್ರಾಪ್ತಿಯಾಯಿತು. ವಿಮರ್ಶಕನೆಂದರೆ ಪರಿಪೂರ್ಣ ಓದುಗ, ಕವಿಯಲ್ಲಿ ಅನುಭವ ಮತ್ತು ಅಭಿವ್ಯಕ್ತಿ ಎರಡಕ್ಕೂ ಸ್ವಂತದ್ದಾದ ಛಾಪು ಮೊಹರು ಇರುತ್ತದೆ. ಆಗ ಕಾವ್ಯದಲ್ಲಿ ಅನುಭವ ಮತ್ತು ಅಭಿವ್ಯಕ್ತಿಗೆ ಎಂದೂ ಬೇರ್ಪಡಿಸಲಾಗದ ಒಪ್ಪಂದಕ್ಕೆ ಓದುಗ ಪ್ರತಿಸ್ಪಂದಿಸುವಂತಾಗುತ್ತದೆ ಎಂದು ಭಾವಿಸುವ ಮೂಲಕ ಕೃತಿ ಸ್ವಾಮ್ಯಕ್ಕೆ ನವ್ಯ ವಿಮರ್ಶೆ ಒಡ್ಡಿಕೊಳ್ಳುತ್ತದೆ. ಈ ಸಂದರ್ಭದಲ್ಲಿ ವಿಮರ್ಶೆ ಎಷ್ಟೇ ತೀವ್ರವಾಗಿ ಬೆಳೆದರೂ ಅದಕ್ಕೆ ಸ್ವತಂತ್ರ ವ್ಯಕ್ತಿತ್ವ ಇಲ್ಲದೆ ಹೋಯಿತು. ಬದಲಿಗೆ ಸೃಜನಶೀಲ ಕೃತಿಯ ವಿವರಣೆಗೆ ಪೂರಕವಾದುದಷ್ಟೇ ಎನ್ನುವಂತಾಯಿತು.

ಸಾಹಿತ್ಯಕ್ಕೂ ವಿಮರ್ಶೆಗೂ ಅವಿನಾಭಾವದಷ್ಟು ಅನ್ಯೋನ್ಯ ಸಂಬಂಧ ಇರುತ್ತದೆ. ಉತ್ತಮವಾದ ಪ್ರತಿ ಕೃತಿಯಲ್ಲೂ ವಿಮರ್ಶೆಯ ಒಂದಂಶ ಸೇರಿ ಅದು ಹೇಗೆ ಕೃತಾರ್ಥವಾಗುತ್ತದೋ, ಅದೇ ರೀತಿ ವಿಮರ್ಶೆಯೂ ಕೃತಿಯನ್ನು ಬಿಟ್ಟು ಬೇರೆ ನಿಲ್ಲದು. ವಿಮರ್ಶೆ ಎನ್ನುವುದು ವಸ್ತು ಆವಿಷ್ಕಾರಗೊಳ್ಳುವ, ಚಲಿಸುವ, ಪ್ರವಹಿಸುವ ವಿಶಿಷ್ಟವಾದ ಪಾತಳಿಯ ಅಧ್ಯಯನ ಎಂದು ತಿಳಿದ ನವ್ಯ ವಿಮರ್ಶಕರು ಸಾಹಿತ್ಯವನ್ನು ಸ್ವಾಯತ್ತವಾದುದು, ಸ್ವತಂತ್ರವಾದುದು ಎಂದು ಭಾವಿಸಿ ಅದರ ಮೂಸೆಯಲ್ಲಿಯೇ ವಿಮರ್ಶೆಯನ್ನು ಬೆಳೆಸಿದರು. ಕಾವ್ಯವನ್ನು ಕಾವ್ಯವೆಂದೇ ಪರಿಗಣಿಸಬೇಕಲ್ಲದೇ ಮತ್ತೇನೂ ಆಗಿ ಅಲ್ಲ, ಕೃತಿಯ ವಿಮರ್ಶೆ ಎಂದರೆ ಅದರ ಅಂಗಾಂಗಗಳು ಅದರ ಯೋಜಿತ ಕ್ರಮ, ಸಮಗ್ರೀಕರಣ ಮುಂತಾದ ತಾಂತ್ರಿಕ ಅಥವಾ ಆಕೃತಿ ಪ್ರಧಾನವಾದ ದೋರಣೆಯನ್ನು ಬಿಂಬಿಸುತ್ತದೆ. ಎಲ್ಲವೂ ಏಕಕೇಂದ್ರಕ್ಕೆ ಪೋಷಕ, ವಿಮರ್ಶೆ ಕೃತಿಗೆ ನಿಷ್ಠವಾದಷ್ಟೂ ಶ್ರೇಷ್ಠ ಎನ್ನುವುದರಿಂದ, ವಿಮರ್ಶಕರಿಗೆ ಕೃತಿ ರಚನೆಯ ಹಿನ್ನೆಲೆ, ಚರಿತ್ರೆ, ಲೇಖಕನ ಆಶಯ, ಅಂದಿನ ಸಾಮಾಜಿಕ ಒತ್ತಡ, ಓದುಗರ ಅಪೇಕ್ಷೆ ಇವೆಲ್ಲ ಅಮುಖ್ಯವಾದವು. ಒಂದು ಕಲಾಕೃತಿ ಪರಿಪೂರ್ಣ ರೂಪ ತಳೆದ ಬಳಿಕ ಅದರ ಕರ್ತನನ್ನು ನಾವು ಮರೆಯಬೇಕು ಎಂಬ ಕೃತಿನಿಷ್ಠ ವಿಮರ್ಶೆಯನ್ನೆ ಅಂತಿಮವಾಗಿ ನವ್ಯ ವಿಮರ್ಶೆ ಸ್ವೀಕರಿಸಿತು.

ನವ್ಯ ಸಂದರ್ಭದಲ್ಲಿ ಕನ್ನಡ ವಿಮರ್ಶೆಯನ್ನು ಒಂದು ಮುಖ್ಯ ಪ್ರಕಾರವಾಗಿ ಬೌದ್ಧಿಕ ಶಿಸ್ತಾಗಿ, ಅಧ್ಯಾಪನಕ್ಕೆ ಅನುಕೂಲವಾಗಿ ಬೆಳೆಸುವಲ್ಲಿ ನವ್ಯ ವಿಮರ್ಶಕರ ಪಾತ್ರ ವಿಶೇಷವಾದುದು. ಸಾಹಿತ್ಯ ರಚನೆಯಷ್ಟೆ ಆಸಕ್ತಿಯಿಂದ ಸಾಹಿತ್ಯ ವಿಮರ್ಶೆಯಲ್ಲೂ ತೊಡಗಿಸಿಕೊಂಡು ವಿಮರ್ಶೆ ಕೃತಿಯ ಬೇರೆ ಬೇರೆ ವೈಚಾರಿಕ ಆಕೃತಿಗಳನ್ನು

ಬಳಸಿಕೊಂಡು ವಿಸ್ತಾರವಾಗುವಲ್ಲಿ ಸಹಕಾರಿಯಾಯಿತು. ನವ್ಯ ವಿಮರ್ಶೆ ಮುಖ್ಯವಾಗಿ ಕೃತಿ ಕೇಂದ್ರವಾಗಿ ಅದರ ಆಕೃತಿ, ಬಂಧ, ಶಿಲ್ಪ ಮೌಲ್ಯವನ್ನು ಕುರಿತು ಚರ್ಚಿಸಿತು. ಕಲಾಕೃತಿಯನ್ನು ಭಾಷಿಕ ಕೃತಿ ಎಂದು ಬಿಂಬಿಸಿ ಭಾಷೆಯ ಅತ್ಯುನ್ನತೆಯನ್ನು ಎತ್ತಿ ಹಿಡಿಯಿತು. ಜೊತೆಗೆ ವಿಮರ್ಶೆಯ ಭಾಷೆಯೊಂದನ್ನು ರೂಪಿಸುವ ಪ್ರಯತ್ನ ನಡೆಯಿತು.

ನವ್ಯ ವಿಮರ್ಶೆಯ ಮತ್ತೊಂದು ಸಾಧ್ಯತೆ ಪ್ರಾಯೋಗಿಕ ವಿಮರ್ಶೆ. ಇದರಲ್ಲಿ ಕೃತಿಯ ನಿಕಟ ಓದು, ಅಪರೂಪವಾಗಿ ನಿರ್ವಹಿಸಿದ ಪ್ರಾಚೀನ ಕನ್ನಡ ಸಾಹಿತ್ಯ–ವಚನಗಳ ವಿಮರ್ಶೆ, ಭಾಷಾಭ್ಯಾಸದ ದೃಷ್ಟಿಯಿಂದ ಬಹಳ ಗಂಭೀರವಾದ ವಿಮರ್ಶೆ ಮೂಡಿಬಂದಿತು. (ಉದಾಹರಣೆಗೆ; ಜಿ. ಹೆಚ್. ನಾಯಕ್, ತೇಜಸ್ವಿ, ಪೋಲಂಕಿ ರಾಮಮೂರ್ತಿ ಮುಂತಾದವರ ಪ್ರಾಚೀನ ಕನ್ನಡ ಪದ್ಯಗಳ ಓದು–ವಿಮರ್ಶೆ, ಎಂ. ಜಿ. ಕೆ. ಯವರ ವಚನಗಳ ವಿಮರ್ಶೆ ಮೊದಲಾದವು.) ಪ್ರಾಯೋಗಿಕ ವಿಮರ್ಶೆಯಲ್ಲಿ ಅನೇಕ ಹೊಸ ಪರಿಕಲ್ಪನೆಗಳನ್ನು ಬಳಕೆಗೆ ತಂದು, ಭಿನ್ನ ರೀತಿಯಲ್ಲಿ ಪ್ರಾಚೀನ ಸಾಹಿತ್ಯವನ್ನು ವಿವರಿಸುವ, ವಿಶ್ಲೇಷಿಸುವ ಪ್ರಯತ್ನ ಮಾಡಿದರು. ಇದಕ್ಕೆ ಸಾಕ್ಷಿ, ಮನ್ವಂತರ, ಸಂಕ್ರಮಣ, ಕವಿತಾ, ಲಹರಿ, ಸಂಕೀರ್ಣ ಮುಂತಾದ ಸಾಹಿತ್ಯ ಪತ್ರಿಕೆಗಳು, ನಿಯತಕಾಲಿಕೆಗಳು ಪೂರಕವಾದ ವಾತಾವರಣ ನಿರ್ಮಿಸಿಕೊಟ್ಟವು. ಹಾಗೆಯೇ ನವ್ಯ ವಿಮರ್ಶೆಯ ಹುಲುಸಾದ ಬೆಳೆಗೆ ಆ ಕಾಲದ ದಿನಪತ್ರಿಕೆಗಳೂ ಕಾರಣವಾಗಿವೆ. ಆ ಸಂದರ್ಭದಲ್ಲಿ ಬಹುತೇಕ ದಿನಪತ್ರಿಕೆಗಳು ಕೃತಿ ಪರಿಚಯವನ್ನು ಪ್ರಕಟಿಸಲು ಆರಂಭಿಸಿದವು.

ನವ್ಯ ಸಾಹಿತ್ಯದಂತೆಯೇ, ನವ್ಯ ವಿಮರ್ಶೆಯ ಪರಂಪರೆಯಲ್ಲಿ ಯು. ಆರ್. ಅನಂತಮೂರ್ತಿಯವರಿಗೆ ಪ್ರಮುಖ ಸ್ಥಾನವಿದೆ. ಅವರ 'ಪ್ರಜ್ಞೆ ಮತ್ತು ಪರಿಸರ' ಈ ದಿಶೆಯಲ್ಲಿ ಗಮನಿಸಬೇಕಾದ ಕೃತಿ. ಅವರು ಅಡಿಗರ ಭೂಮಿಗೀತ ಕವನ ಸಂಕಲನಕ್ಕೆ ಬರೆದ ಮುನ್ನುಡಿ ಕೂಡಾ ನವ್ಯದ ಪ್ರಾತಿನಿಧಿಕ ವಿಮರ್ಶೆಯೆಂಬಂತೆ ಬಳಕೆಯಾಗಿದೆ. ಎಂ. ಜಿ. ಕೃಷ್ಣಮೂರ್ತಿಯವರ ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು ಹಾಗೂ ಕೃತಿ–ಸಂಸ್ಕೃತಿ ಎಂಬ ಕೃತಿಗಳೂ ಕನ್ನಡದಲ್ಲಿ ಕೃತಿನಿಷ್ಠ ವಿಮರ್ಶೆಯ ಆಶಯದ ಹಿನ್ನೆಲೆಯಲ್ಲಿ ಮೂಡಿಬಂದ ಮುಖ್ಯ ಕೃತಿಗಳು. ಕೀರ್ತಿನಾಥ ಕುರ್ತುಕೋಟಿಯವರ ನವ್ಯ ಕಾವ್ಯ ಪ್ರಯೋಗ, ಅಸಂಗತ ನಾಟಕಗಳು ನವ್ಯ ವಿಮರ್ಶೆಗೆ ಹೊಸ ಆಯಾಮವನ್ನು ಒದಗಿಸಿದ ಕೃತಿಗಳಾಗಿವೆ.

ಮೂಲತಃ ಇಂಗ್ಲಿಷ್ ಅಧ್ಯಾಪಕರಾದ ಗಿರಡ್ಡಿ ಗೋವಿಂದರಾಜು, ಜಿ. ಎಸ್. ಆಮೂರ, ಸಿ. ಎನ್. ರಾಮಚಂದ್ರನ್ ಮೊದಲಾದವರು ನವ್ಯದ ಕಾವ್ಯ ಮತ್ತು ಕಥನ ಸಾಹಿತ್ಯಕ್ಕೆ ಬಹು ವಸ್ತು ನಿಷ್ಠ ವಿಮರ್ಶೆಯನ್ನು ಸೃಜಿಸಿದರು. ಆಮೂರ ಕೃತಿ ಪರೀಕ್ಷೆ, ಅರ್ಥಲೋಕ, ಗಿರಡ್ಡಿಯವರ ಸಮಗ್ರ ವಿಮರ್ಶೆ ಸಂಪುಟಗಳನ್ನು ಉದಾಹರಣೆಯಾಗಿ ಹೆಸರಿಸಬಹುದು. ತಾವು ಪ್ರವೇಶಿಸುವ ಕೃತಿಯ ಬಂಧ, ಸಂವಿಧಾನ, ಕಥಾತಂತ್ರ, ಅವುಗಳಿಂದ ಮೂಡಿಬರುತ್ತಿರುವ ಆಶಯ, ಜೀವನ ದೃಷ್ಟಿಗಳನ್ನು ಇವರ ವಿಮರ್ಶೆಗಳು ವಿಶ್ಲೇಷಿಸುತ್ತವೆ.

ಹಾಗೆಯೇ ಜಿ. ಎಚ್. ನಾಯಕ, ಟಿ. ಪಿ. ಅಶೋಕ, ಎಚ್. ಎಸ್. ರಾಘವೇಂದ್ರರಾವ್ ಮೊದಲಾದ ನವ್ಯ ವಿಮರ್ಶಕರು ವಿಮರ್ಶಾಪರಿಕರಗಳನ್ನು ಸಾಧ್ಯವಾದಷ್ಟು ಹೊರಗಿನಿಂದ ತರದೆ, ಕೃತಿಯೊಳಗಿನ ವಿವರಗಳಿಂದಲೇ ಅವರ ವಿಮರ್ಶಾ ಮಾನದಂಡಗಳನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದರು. ಈ ದಿಶೆಯಲ್ಲಿ ಜಿ.ಎಚ್.ನಾಯಕರ ಅನಿವಾರ್ಯ, ನಿಜದನಿ, ಟಿ. ಪಿ. ಅಶೋಕರ ಸಾಹಿತ್ಯ ಸಂದರ್ಭ, ಪುಸ್ತಕ ಪ್ರೀತಿ, ಎಚ್. ಎಸ್. ಆರ್ ಅವರ ನಿಲುವು, ವಿಶ್ಲೇಷಣೆ, ಪ್ರಗತಿಶೀಲತೆ ಮೊದಲಾದವು ಮುಖ್ಯ ಕೃತಿಗಳಾಗಿವೆ. ಓ. ಎಲ್. ನಾಗಭೂಷಣ ಸ್ವಾಮಿಯವರ ವಿಮರ್ಶೆಯ ಪರಿಭಾಷೆ ಕೃತಿ ಕೂಡಾ ನವ್ಯ ವಿಮರ್ಶೆಯ ಮುಖ್ಯ ಉತ್ಪನ್ನಗಳಲ್ಲಿ ಒಂದು ಎನ್ನಬಹುದು.

ನವ್ಯ ವಿಮರ್ಶೆಯು ಸುಮಾರು ಮೂರು ದಶಕಗಳ ಕಾಲ ಪ್ರಭಾವಿತವಾಗಿತ್ತು. ನಂತರವೂ ನವ್ಯ ವಿಮರ್ಶೆಯು ಮುಂದಿನ ವಿಮರ್ಶಾ ಪ್ರಕಾರಗಳಿಗೆ ಹೊಸ ನೋಟವನ್ನು ಕೊಡುತ್ತಲೇ ಬಂದಿದೆ. ಇದರೊಂದಿಗೆ ಕನ್ನಡ ಸಾಹಿತ್ಯ ಸಂಸ್ಕೃತಿಯ ಅಧ್ಯಯನದಲ್ಲಿ ನವ್ಯ ವಿಮರ್ಶೆ ಕೆಲವು ಸಮಸ್ಯೆಗಳನ್ನು ತಂದಿತು. ಕೃತಿಯ ಅಧ್ಯಯನದ ಸಂದರ್ಭದಲ್ಲಿ ಅದರ ಕಾಲ, ದೇಶ ಸಾಂಸ್ಕೃತಿಕ ಪರಿಸರದಿಂದ ಪಲ್ಲಟಗೊಳಿಸುವ ಕ್ರಮ ಕೃತಿಯ ಅರ್ಥಸಾಧ್ಯತೆಯನ್ನು ಕುಂಟಿತಗೊಳಿಸಿತು, ಕೃತಿಯ ಆಶಯವನ್ನು ಕಡೆಗಣಿಸಿತು.

ಮಾನವನ ಬದುಕು ನಿಂತ ನೀರಲ್ಲ. ಅದು ವಿಕಾಸಶೀಲವಾದುದು. ಬದುಕು ಬೆಳೆದಂತೆ ಬದಲಿಸಿದಂತೆ ಅದರ ಅಭಿವ್ಯಕ್ತಿಯಾದ ಸಾಹಿತ್ಯವೂ ಅನಿವಾರ್ಯವಾಗಿ ಬೆಳೆಯುತ್ತದೆ. ಬದಲಾಗುತ್ತದೆ, ಹೊಸತನವನ್ನು ಅಳವಡಿಸಿಕೊಳ್ಳುತ್ತದೆ. ಹೀಗಾಗಿ ಯಾವುದೇ ಸಾಹಿತ್ಯದ ಚರಿತ್ರೆ ನಿರಂತರವಾದ ಕ್ರಾಂತಿ, ಚಳುವಳಿಗಳ, ಪ್ರಯೋಗಗಳ ಕತೆಯೇ ಆಗಿರುತ್ತದೆ. ನವ್ಯವೂ ಈ ಮಾತಿಗೆ ಅಪವಾದವಲ್ಲ. ಪರೋಕ್ಷವಾಗಿಯಾದರೂ ನವ್ಯ ವಿಮರ್ಶೆಯು ಬಂಡವಾಳಶಾಯಿ ವ್ಯವಸ್ಥೆಯ ಕೂಸಾಗಿದ್ದು ಕನ್ನಡದ ನವ್ಯ ವಿಮರ್ಶಕರು ಕನ್ನಡ ಸಾಹಿತ್ಯವನ್ನು ವಿಮರ್ಶಿಸಲು ಯುರೋಪಿಯನ್ ನವ್ಯ ವಿಮರ್ಶೆಯ ಪರಿಕರವನ್ನೇ ಅನ್ವಯಗೊಳಿಸಿದರು. ಆದ್ದರಿಂದ ಸಾಮಾಜಿಕ ವಾಸ್ತವ ಮತ್ತು ಚರಿತ್ರೆಯನ್ನು ನವ್ಯ ವಿಮರ್ಶೆಯಲ್ಲಿ ಗಣಿಸಲಿಲ್ಲ. ಜೊತೆಗೆ ಅದರ ಹಿಂದೆ ವಸಾಹತುಶಾಹಿ ಅನುಭವ ಸಿದ್ಧಾಂತಗಳ ಬೆಂಬಲವಿರಲಿಲ್ಲ, ಬದಲಿಗೆ ವಸ್ತುನಿಷ್ಠತೆ ಹೆಸರಲ್ಲಿ ಕೆಲವೊಮ್ಮೆ ಹಾದಿ ತಪ್ಪಿಸುತ್ತಿತ್ತು ಮತ್ತು ಇದಕ್ಕೊಂದು ಸರಿಯಾದ ಸಾಮಾಜಿಕ ಆಯಾಮವಿರಲಿಲ್ಲವಾದ್ದರಿಂದ ಅದು ಜನ ವಿಮುಖವಾಯಿತು. ಆ ಕಾರಣದಿಂದ ಕನ್ನಡ ಸಾಹಿತ್ಯ ಉದ್ದಕ್ಕೂ ಪರಂಪರೆಯ ನೆಲೆಗಟ್ಟಿನ ಮೇಲೆ ನಿಂತೇ ಹೊಸತನವನ್ನು ಸ್ವಾಗತಿಸುತ್ತ, ಅರಗಿಸಿಕೊಳ್ಳುತ್ತ ಸಮನ್ವಯದ ಹಾದಿಯಲ್ಲಿ ಸಾಗಿ ಬಂದಿದೆ.

ಕಾವ್ಯ, ನಾಟಕ, ಕಾದಂಬರಿ ಮೊದಲಾದ ಸಾಹಿತ್ಯ ಪ್ರಕಾರಗಳಿಗೆ ಸುದೀರ್ಘ ಇತಿಹಾಸವಿದೆಯಾದರೂ ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ಯ ಪ್ರಕಾರಗಳನ್ನೆ ವಿಶೇಷವಾಗಿ ಗ್ರಹಿಸಿ ವಿಮರ್ಶಿಸುವ ವಿಧಾನ ಅಷ್ಟಾಗಿ ಚಾಲನೆಯಲ್ಲಿಲ್ಲ. ಆದರೂ ನಿರ್ದಿಷ್ಟ ಸಾಹಿತ್ಯ ಪ್ರಕಾರ ಕೇಂದ್ರಿತ ವಿಮರ್ಶೆ ತನ್ನ ವಿಶ್ಲೇಷಣೆ ಮತ್ತು ವ್ಯಾಖ್ಯಾನದಲ್ಲಿ ಹೆಚ್ಚು ನಿಖರತೆಯನ್ನು

ಸಾಧಿಸಲು ಸಾಧ್ಯವಾಗುತ್ತದೆ. ಕನ್ನಡದಲ್ಲಿ 'ಅಥೆಂಟಿಕ್' ಆದ ವಿಮರ್ಶೆಯನ್ನು ಶುರು ಮಾಡಿದ ನವ್ಯ ವಿಮರ್ಶೆ ಭಾವಗೀತ ಪ್ರಕಾರವನ್ನಷ್ಟೇ ಪ್ರಧಾನವಾಗಿ ಗ್ರಹಿಸಿ ಇತರ ಪ್ರಕಾರಗಳನ್ನು ನಿರ್ಲಕ್ಷಿಸಿತು. ನಂತರ ಸಂರಚನಾವಾದ, ನವ್ಯೋತ್ತರವಾದ ವಿಮರ್ಶಾ ವಿಧಾನಗಳು ಸಾಹಿತ್ಯ ಕೃತಿಗಳನ್ನು ಇಡಿಯಾಗಿ ಗ್ರಹಿಸುವ ಪ್ರಯತ್ನ ನಡೆಸಿದ್ದರಿಂದ ಪ್ರಕಾರಗಳ ವಿಶಿಷ್ಟತೆ ಅವುಗಳಿಗೆ ಮುಖ್ಯವಾಗಲಿಲ್ಲ.

ಈ ಸಾಹಿತ್ಯ ವಿಮರ್ಶೆಯಲ್ಲಿ ಕೃತಿಯೇ ಸರ್ವಸ್ವವಾದ್ದರಿಂದ ಕೃತಿಕಾರ ಏನನ್ನೇ ಹೇಳಬೇಕಾದರೂ ಭಾಷೆಯ ಮೂಲಕ ಮಾತ್ರ ಹೇಳಬಲ್ಲ ಎಂಬ ನಂಬಿಕೆಯಿಂದ ಕೃತಿಯ ವಿವರವಾದ, ಸೂಕ್ಷ್ಮವಾದ ಅಧ್ಯಯನ ಮುಖ್ಯವಾಯಿತು. ಮನುಷ್ಯನ ಅಂಗಾಂಗಗಳಿಂದ ದೇಹವಾಗುವಂತೆ ಸಾಹಿತ್ಯ ಕೃತಿಯೊಂದರ ವಸ್ತು, ಪಾತ್ರ, ತಂತ್ರ, ಭಾಷೆ ಎಲ್ಲ ಸೇರಿ ಉತ್ತಮ ಕೃತಿಯೊಂದು ರೂಪುಗೊಳ್ಳಲು ಸಾಧ್ಯ ಎಂಬುದು ಇವರ ಅಭಿಪ್ರಾಯ. ಆದರೆ ಈ ವಿಮರ್ಶಾ ಪರಂಪರೆ ಪಶ್ಚಿಮದ 'ನ್ಯೂ ಕ್ರಿಟಿಸಿಸಂ' ಎಂದು ಪ್ರಸಿದ್ಧವಾದ ವಿಮರ್ಶಾ ಪಂಥದಿಂದ ಪ್ರಭಾವಿತವಾಗಿದೆ ಎಂಬುದು ಎಲ್. ಎಸ್. ಶೇಷಗಿರಿರಾವ್ ಅವರ ಅಭಿಪ್ರಾಯ. "ಸಾಹಿತ್ಯ ಕೃತಿಯ ಸಾವಯವ ಸ್ವರೂಪ, ಭಾಷೆಯ ಪ್ರಾಧಾನ್ಯ ಇವನ್ನು ಕುರಿತ ಕಲ್ಪನೆಗಳು ಅಲ್ಲಿಂದ ಬಂದವು. ನವ್ಯ ವಿಮರ್ಶೆಯನ್ನು ಓದುವಾಗ ಮತ್ತೆ ಮತ್ತೆ ಡಿ. ಎಚ್. ಲಾರೆನ್ಸ್, ಎಫ್. ಆರ್. ಲೀವಿಸ್, ಕ್ಲಿಯಾಂತ್ ಬ್ರೂಕ್ಸ್, ಐ. ಎ. ರಿಚರ್ಡ್ಸ್ ಮೊದಲಾದವರ ಧ್ವನಿಗಳು ಕೇಳುತ್ತವೆ."[೨೩] ಎಂಬ ಅಭಿಪ್ರಾಯವಿದ್ದರೂ ನವ್ಯ ವಿಮರ್ಶೆ ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳಿಂದ ಕೂಡಿದ ಶಿಸ್ತುಬದ್ಧ ವಿಮರ್ಶೆ ಬೆಳೆಯಲು ಕಾರಣವಾಯಿತು.

ಗೋಪಾಲಕೃಷ್ಣ ಅಡಿಗರ ಮಣ್ಣಿನ ವಾಸನೆ, ಅನಂತಮೂರ್ತಿಯವರ ಪ್ರಜ್ಞೆ ಮತ್ತು ಪರಿಸರ, ಜಿ. ಎಚ್. ನಾಯಕರ ನಿಜದನಿ, ನಿರಪೇಕ್ಷ, ಅನಿವಾರ್ಯ, ಎಲ್. ಎಸ್. ಶೇಷಗಿರಿರಾವ್ ಅವರ ಕಾದಂಬರಿ – ಸಾಮಾನ್ಯ ಮನುಷ್ಯ, ಜಿ. ಎಸ್. ಆಮೂರರ ಕೃತಿ ಪರೀಕ್ಷೆ, ಅರ್ಥಲೋಕ, ಗಿರಡ್ಡಿ ಗೋವಿಂದರಾಜರ ನವ್ಯ ವಿಮರ್ಶೆ, ಕುರ್ತುಕೋಟಿಯವರ ನವ್ಯ ಕಾವ್ಯ ಪ್ರಯೋಗ, ನರಹಳ್ಳಿ ಬಾಲಸುಬ್ರಮಣ್ಯ, ಪಿ. ಲಂಕೇಶ್, ಎಚ್. ಎಸ್. ಆರ್., ಎಚ್. ಎಸ್. ವಿ., ಕೆ. ನರಸಿಂಹಮೂರ್ತಿ ಮೊದಲಾದ ಲೇಖಕರ ಕೃತಿಗಳು ಕನ್ನಡದಲ್ಲಿ ನವ್ಯವಿಮರ್ಶೆ ವ್ಯವಸ್ಥಿತವಾಗಿ ನೆಲೆಗೊಳ್ಳಲು ಕಾರಣವಾದವು. ನವ್ಯ ವಿಮರ್ಶೆ ಮುಖ್ಯವಾಗಿ ಗೋಪಾಲಕೃಷ್ಣ ಅಡಿಗರ 'ನಡೆದು ಬಂದ ದಾರಿ' ಕವನ ಸಂಕಲನಕ್ಕೆ ಬರೆದ ಮುನ್ನುಡಿಯಿಂದ ಆರಂಭವಾಯಿತೆನ್ನಬಹುದು. ಆನಂತರ ಯು.ಆರ್.ಅನಂತಮೂರ್ತಿ, ಎಂ. ಜಿ. ಕೃಷ್ಣಮೂರ್ತಿ, ಪಿ. ಲಂಕೇಶ್, ಗಿರಡ್ಡಿ ಗೋವಿಂದರಾಜು ಮೊದಲಾದವರು ಇದನ್ನು ಯಶಸ್ವಿಯಾಗಿ ಮುಂದುವರೆಸಿದರು. ನಂತರ ಸಿ. ಎನ್. ರಾಮಚಂದ್ರನ್, ಶಾಂತಿನಾಥ ದೇಸಾಯಿ, ಜಿ. ಎಚ್. ನಾಯಕ್, ಜಿ. ಎಸ್. ಅಮೂರ, ಎಚ್. ಎಸ್. ರಾಘವೇಂದ್ರರಾವ್, ಟಿ. ಪಿ. ಅಶೋಕ್, ಶಂಕರ ಮೊಕಾಶಿ ಪುಣೇಕರ್ ಮೊದಲಾದವರು ಇದನ್ನು ತಮ್ಮ ಬರಹದ ಶಿಸ್ತಾಗಿ ಬಳಸಿಕೊಂಡಿದ್ದಾರೆ.

ಒಟ್ಟಿನಲ್ಲಿ ಯು. ಆರ್. ಅನಂತಮೂರ್ತಿಯವರ ಪ್ರಜ್ಞೆ ಮತ್ತು ಪರಿಸರ, ನವ್ಯಾಲೋಕ, ಎಂ.ಜಿ.ಕೃಷ್ಣಮೂರ್ತಿಯವರ ಕೃತಿಪರೀಕ್ಷೆ, ಜಿ. ಎಚ್. ನಾಯಕರ ಸಮಕಾಲೀನ, ಶಾಂತಿನಾಥ ದೇಸಾಯಿಯವರ ನವ್ಯ ಸಾಹಿತ್ಯ ದರ್ಶನ, ಕೀರ್ತಿನಾಥ ಕುರ್ತುಕೋಟಿಯವರ ನವ್ಯಕಾವ್ಯ ಪ್ರಯೋಗ, ಗಿರಡ್ಡಿ ಗೋವಿಂದರಾಜರ ಸಣ್ಣಕತೆಗಳ ಒಲವು, ನವ್ಯ ವಿಮರ್ಶೆ ಮೊದಲಾದವು ನವ್ಯ ವಿಮರ್ಶೆಯ ಪ್ರಾತಿನಿಧಿಕ ಕೃತಿಗಳೆನ್ನಬಹುದು.

ನವ್ಯೋತ್ತರ ವಿಮರ್ಶಾ ಪ್ರಸ್ಥಾನಗಳು

ಎಪ್ಪತ್ತರ ದಶಕದ ನಂತರ ನವ್ಯ ಚಳುವಳಿಯ ವ್ಯಕ್ತಿನಿಷ್ಠ ಸಾಹಿತ್ಯಕ್ಕೆ ಸಮಾಜದ ಸಮಷ್ಠಿ ಹಿತಚಿಂತನೆ ಸಾಧ್ಯವಿಲ್ಲವೆಂದು ಬಗೆದು, ಹೊಸ ಸಂವೇದನೆಯ ಸಾಹಿತ್ಯ ಮೊದಲಾಯಿತು. ಇದಕ್ಕೆ ಪೂರಕವಾಗಿ ಸ್ವತಂತ್ರ ಭಾರತದಲ್ಲಿ ಆರಂಭಗೊಂಡಿದ್ದ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಸೌಲಭ್ಯದಿಂದ ಶತಶತಮಾನಗಳಿಂದ ವಿದ್ಯೆ ಮತ್ತು ಉತ್ತಮ ಸ್ಥಾನಮಾನಗಳಿಂದ ವಂಚಿತವಾಗಿದ್ದ ಒಂದು ವರ್ಗವೇ ಆಧುನಿಕ ಶಿಕ್ಷಣ ಪಡೆದು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿತು. ಸಾಹಿತ್ಯದ ಬಗ್ಗೆ ಅದುವರೆವಿಗೂ ಇದ್ದ ಮಡಿವಂತಿಕೆಯನ್ನು ಹೋಗಲಾಡಿಸಿ, ಸಾಹಿತ್ಯದ ಭಾಷೆ, ಬಂಧ, ಶೈಲಿ ಮೊದಲಾದವುಗಳಿಗಿಂತ ವಸ್ತುವೇ ಮುಖ್ಯವೆನಿಸಿ ತಮ್ಮ ಬದುಕು ಮತ್ತು ಸಮುದಾಯದ ಅನುಭವಗಳನ್ನು ಹೆಚ್ಚು ವಾಸ್ತವತೆಯಿಂದ ಅಭಿವ್ಯಕ್ತಿಸತೊಡಗಿತು.

ಇದೇ ಸಂದರ್ಭದಲ್ಲಿ ತೇಜಸ್ವಿಯವರು ತಮ್ಮ ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನಕ್ಕೆ ಬರೆದ 'ಹೊಸದಿಗಂತದೆಡೆಗೆ' ಎಂಬ ಮುನ್ನುಡಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಹೊಸತನದ ಅಗತ್ಯವನ್ನು ಪ್ರತಿಪಾದಿಸಿದರು. "ನವ್ಯ ಸಾಹಿತ್ಯ ಸಂಪೂರ್ಣ ನಿಸ್ತೇಜಗೊಂಡಿದೆ. ಬದಲಾಗುತ್ತಿರುವ ಪರಿಸರದ ಹೊಸ ಜವಾಬ್ದಾರಿಗಳನ್ನು ಅದು ಹೊರಲಾರದುದೇಕೇಂದರೆ, ಮೊದಲನೆಯದಾಗಿ, ಯಾಂತ್ರಿಕವಾಗಿರುವ ಅದರ ಸಾಂಕೇತಿಕ ಶೈಲಿ, ತಂತ್ರಗಳು, ಕೇವಲ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿ ವರ್ಗ ಮತ್ತು ಕೇವಲ ಸಾಹಿತ್ಯದ ಮಟ್ಟಿಗೇ ಸೀಮಿತಗೊಂಡ ಅದರ ಕ್ರಾಂತಿಕಾರತನ"[೨೪] ಈ ಕಾರಣಗಳಿಂದಾಗಿ ಕನ್ನಡ ಸಾಹಿತ್ಯ ಮತ್ತು ವಿಮರ್ಶೆ ಹೊಸತನಕ್ಕೆ ತೆರೆದುಕೊಳ್ಳಬೇಕಾದ ಅನಿವಾರ್ಯತೆಯನ್ನು ಮನಗಂಡರು.

ಇವುಗಳ ಜೊತೆಗೆ ಅಂಬೇಡ್ಕರ್‌ವಾದ, ಮಾರ್ಕ್ಸ್‌ವಾದ ಮತ್ತು ಲೋಹಿಯಾವಾದ ಮತ್ತು ಪೆರಿಯಾರ್ ಚಳುವಳಿ ಸೇರಿದಂತೆ ಆ ಕಾಲದ ಸಾಮಾಜಿಕ ಚಳುವಳಿಗಳು ನವ್ಯೋತ್ತರ ಸಾಹಿತ್ಯ ಮತ್ತು ವಿಮರ್ಶೆಯ ಮೇಲೆ ಗಂಭೀರವಾದ ಪ್ರಭಾವ ಬೀರಿದವು. ಬರಗೂರು ರಾಮಚಂದ್ರಪ್ಪ, ಡಿ. ಆರ್. ನಾಗರಾಜ್, ಕೆ. ವಿ. ನಾರಾಯಣ್, ಸಿ. ವೀರಣ್ಣ, ರಹಮತ್ ತರೀಕೆರೆ, ರಾಜೇಂದ್ರ ಚೆನ್ನಿ, ಪುರುಷೋತ್ತಮ ಬಿಳಿಮಲೆ, ಓ. ಎಲ್. ನಾಗಭೂಷಣ ಸ್ವಾಮಿ, ಮ. ನ. ಜವರಯ್ಯ, ದೇವಯ್ಯ ಹರವೆ, ಅರವಿಂದ ಮಾಲಗತ್ತಿ,

ಮೊಗಳ್ಳಿ ಗಣೇಶ, ಸಿದ್ದಲಿಂಗಯ್ಯ, ಚಂದ್ರಶೇಖರ ನಂಗಲಿ, ಜಿ. ರಾಜಶೇಖರ, ಬಸವರಾಜ ಕಲ್ಗುಡಿ, ರಂಗರಾಜ ವನದುರ್ಗ, ಪೂರ್ಣಚಂದ್ರ ತೇಜಸ್ವಿ, ಆರ್ಕೆ ಮಣಿಪಾಲ, ಬಿ. ಎನ್. ಸುಮಿತ್ರಾಬಾಯಿ ಮೊದಲಾದ ಲೇಖಕರು ಕನ್ನಡದಲ್ಲಿ ನವ್ಯೋತ್ತರ ಸಾಹಿತ್ಯ ವಿಮರ್ಶೆ ದೃಢವಾಗಿ ನೆಲೆಗೊಳ್ಳಲು ಕಾರಣರಾದರು. ಆದರೆ ನವ್ಯೋತ್ತರ ವಿಮರ್ಶೆಯ ಮೂಲ ಉದ್ದೇಶ ಒಂದೆ ಆಗಿದ್ದರೂ ಅದು ದಲಿತ, ಬಂಡಾಯ ಮತ್ತು ಸ್ತ್ರೀ ಸಂವೇದನೆಗಳ ರೂಪದಲ್ಲಿ ಪ್ರಕಟಗೊಂಡಿತು.

"ಕನ್ನಡಕ್ಕಾದರೂ ಅರ್ಥಪೂರ್ಣವಾದ ಬದಲಾವಣೆ ಆಗಬೇಕಾಗಿದೆ. ದಲಿತರಲ್ಲಿ ಆತ್ಮವಿಶ್ವಾಸ ಹುಟ್ಟಿಸುವ, ಅಶಿಕ್ಷಿತ ಜನಕೋಟಿಗೆ ಆತ್ಮಗೌರವದ ಪ್ರಜ್ಞೆ ಮೂಡಿಸುವ, ಕೊಳೆತು ಹೋಗಿರುವ ಸಾಮಾಜಿಕ ರಾಜಕೀಯ ವ್ಯವಸ್ಥೆಗಳ ವಿರುದ್ಧ ಸಿಡಿದೇಳುವಂತೆ ಮಾಡುವ ಕೆಲಸದಲ್ಲಿ ಸಾಹಿತ್ಯವೂ ಭಾಗವಹಿಸಬೇಕಾಗಿದೆ. ಅಂದರೆ ನಮ್ಮ ಸಾಹಿತ್ಯ ವಿಮರ್ಶೆ ಕೇವಲ ಪಾಶ್ಚಿಮಾತ್ಯ ವಿಮರ್ಶೆಯ ಪಡಿನೆಳಲಿನಲ್ಲಿ ಬೆಳೆಯದೆ ಅದು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಜನ ಸಮ್ಮುಖವಾಗಿರಬೇಕು. ಸಾಮಾಜಿಕ ಕಾಳಜಿ–ಕಳಕಳಿಗಳು ಅದರ ಪ್ರಮುಖ ಆಶಯವಾಗಬೇಕೆಂಬ ಧೋರಣೆ ಈ ದಲಿತ–ಬಂಡಾಯ ವಿಮರ್ಶೆಯಲ್ಲಿ ಪ್ರಮುಖವಾಯಿತು."[೨೫] ಎನ್ನುವಲ್ಲಿ ನವ್ಯೋತ್ತರ ವಿಮರ್ಶೆಯ ಉದ್ದೇಶ ಮತ್ತು ಧೋರಣೆಗಳು ಸ್ಪಷ್ಟಗೊಳ್ಳುತ್ತವೆ.

ಬಂಡಾಯ ವಿಮರ್ಶೆ

ಬಂಡಾಯ ಸಾಹಿತ್ಯ ವಿಮರ್ಶೆಯು ನವ್ಯ ವಿಮರ್ಶೆಯ ಬಗ್ಗೆ ತೀವ್ರ ನಿಷ್ಠೂರತೆ ವ್ಯಕ್ತಪಡಿಸುತ್ತಲೇ ಸಮಾಜವಾದಿ ನಿಲುವು ಮತ್ತು ಆಶಯಗಳ ಹಿನ್ನೆಲೆಯಲ್ಲಿ 'ಬಂಡಾಯ ವಿಮರ್ಶೆ' ಶುರುವಾಯಿತು. ಬಂಡಾಯ ಸಾಹಿತಿಗಳಲ್ಲಿ ಬಹಳಷ್ಟು ಮಂದಿ ಎಡಪಂಥೀಯರಾಗಿದ್ದು ಸಾಮಾಜಿಕ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಕೃತಿಯ ಆಶಯವನ್ನೆ ಪ್ರಮುಖವಾಗಿ ಗ್ರಹಿಸುತ್ತಿದ್ದ ಅವರು ಅದರಲ್ಲಿನ ಸಾಮಾಜಿಕ ನಿಲುವುಗಳ ಬಗ್ಗೆ ಆಸಕ್ತರಾಗಿರುತ್ತಿದ್ದರು. ಸಾಹಿತ್ಯ ಎಂಬ ಸೀಮಿತ ಚೌಕಟ್ಟಿನಿಂದ ಆಚೆಬಂದು ಸಂಸ್ಕೃತಿ ಎಂಬ ವಿಶಾಲ ಪರಿಕಲ್ಪನೆಯಡಿ ತನ್ನ ವಿಮರ್ಶಾ ಮಾನದಂಡಗಳನ್ನು ರೂಪಿಸಿಕೊಳ್ಳಲು ಬಂಡಾಯ ಸಾಹಿತ್ಯ ವಿಮರ್ಶೆ ಪ್ರಯತ್ನಿಸಿತು. ಸಾಹಿತ್ಯ ಸಂಸ್ಕೃತಿಯ ಒಂದಂಗ ಮಾತ್ರವಾಗಿದ್ದು ಇತರೆ ಕಲೆಗಳೂ ಕೂಡಾ ಸಮಾಜದಲ್ಲಿನ ಬಂಡಾಯ ಮನೋಧರ್ಮದ ವಾಹಕವಾಗಿವೆ ಎಂಬ ಅಭಿಪ್ರಾಯ ಮೂಡಿತು.

ಅಧಿಕೃತವಾಗಿ ಬಂಡಾಯ ಸಾಹಿತ್ಯ ಸಂಘಟನೆ ಪ್ರಾರಂಭವಾದದ್ದು ೧೯೭೯ರಲ್ಲಿ. ಇದು ಶುರುವಾದ ಮೇಲೆ ಸಾಹಿತ್ಯದ ಬಗೆಗೆ ಚರ್ಚೆಯ ಬೇರೊಂದು ರೀತಿಯಲ್ಲಿ ಮಂಡಿತವಾಯಿತು. ಸಾಹಿತ್ಯದ ವ್ಯಾಖ್ಯಾನವು ಸಮಾಜದ ಮೂಲದಿಂದ ಹೊರಡಬೇಕೆಂಬ ವಾದವು ಪ್ರಾರಂಭವಾಗಿದ್ದು ಈ ಕಾಲಘಟ್ಟದಲ್ಲಿ. ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ಸಾಹಿತ್ಯವೆಂಬುದು ಜನಪರವಾಗಿರಬೇಕೆಂಬ ವಾದವು ಚಾಲ್ತಿಗೆ ಬಂತು. ಸಾಹಿತ್ಯ

ಜನಪರವೋ ಅಲ್ಲವೋ ಎಂಬ ವಾದವು ಬಹಳ ಮಟ್ಟಿಗೆ ದೊಡ್ಡ ವಾಗ್ವಾದವನ್ನೇ ಸೃಷ್ಟಿಸಿತು. ಸಾಹಿತ್ಯವು ಜನಪರವಾಗಿರಬೇಕೆಂಬ ಮಾತು ಹೊಸ ಚಾರಿತ್ರಿಕ ದೃಷ್ಟಿಕೋನಕ್ಕೆ ಅವಕಾಶವನ್ನು ಕಲ್ಪಿಸಿತು. ಕನ್ನಡ ಸಾಹಿತ್ಯದಲ್ಲಿ ವಚನಯುಗವನ್ನು ಹೊರತುಪಡಿಸಿದರೆ ಯಾವತ್ತೂ ಸಾಹಿತ್ಯವು ಜನಪರವಾಗಿರಬೇಕೆಂಬ ಮಾತು ಬಂದಿರಲಿಲ್ಲ. ಬಂಡಾಯ ಸಂಘಟನೆಯು ಪ್ರಾರಂಭವಾದಾಗ ಬಂದ ಅನೇಕ ಮಾತುಗಳು ಚಾರಿತ್ರಿಕವಾಗಿ ಮಹತ್ವವಾದವು. ಹಾಗೆಯೇ ಬಂಡಾಯ ಸಾಹಿತ್ಯಕ್ಕೂ ಚಾರಿತ್ರಕ ಕಾರಣವಿರುತ್ತದೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಚಾರಿತ್ರಿಕ ಕಾರಣಗಳು ಹೊಸ ರೀತಿಯ ಸಂವೇದನೆಗೆ ಮುಖ್ಯವಾಗಿರುತ್ತದೆ. ಸಂವೇದನೆಯು ಹೊಸ ರೀತಿಯಲ್ಲಿ ಕಾಣಿಸಿಕೊಳ್ಳುವುದು ಸಾಹಿತ್ಯದ ಸಂದರ್ಭದಲ್ಲಿ ಆಕಸ್ಮಿಕವಲ್ಲ. ಅದಕ್ಕೆ ಕಾರ್ಯ – ಕಾರಣ ಸಂಬಂಧವಿರುತ್ತದೆ. ಬಂಡಾಯ ಸಾಹಿತ್ಯದ ಸಂವೇದನೆಯು ಹೊಸ ರೀತಿಯಲ್ಲಿ ಕಾಣಿಸಿಕೊಳ್ಳಲು ಕೆಲವು ಪ್ರಮುಖ ಕಾರಣಗಳಿವೆ. ಸಾಹಿತ್ಯದಲ್ಲಿಯೂ ಜೀವಪರವಾದ ಚಿಂತನೆಯ ಕ್ರಮಗಳು ಆಕಸ್ಮಿಕವಾಗಿ ಸಂಭವಿಸಲಾರವು. ಬದಲಾದ ಸಾಮಾಜಿಕ ಮತ್ತು ಆರ್ಥಿಕ ಸನ್ನಿವೇಶದಲ್ಲಿ ಬಂಡಾಯ ಸಾಹಿತ್ಯವು ಹುಟ್ಟಿಕೊಂಡಿತು ಎಂಬುದು ಬಂಡಾಯ ವಿಮರ್ಶೆಯ ತಾತ್ವಿಕತೆಯಾಗಿದೆ.

'ಬಂಡಾಯ ವಿಮರ್ಶೆಯ ದಿಕ್ಕು' ಎಂಬ ಲೇಖನದಲ್ಲಿ ಎಸ್.ಎಸ್. ಹೀರೇಮಠ ಅವರು “ಬಂಡಾಯ ವಿಮರ್ಶೆಯ ಮೊದಲ ಮಾನದಂಡವೆಂದರೆ, ಬಂಡಾಯ ಸಾಹಿತ್ಯವು ಬಂಡಾಯ ಸಂಸ್ಕೃತಿಯ ಕಲಾತ್ಮಕ ಅಭಿವ್ಯಕ್ತಿಯಾಗಿದೆಯೆ ಇಲ್ಲವೆ ಎಂಬುದು. ಬಂಡಾಯ ಸಂಸ್ಕೃತಿಯನ್ನು ಒಪ್ಪಿಕೊಳ್ಳುವುದಾದರೆ, ಸಂಸ್ಕೃತಿಯಲ್ಲಿಯ ಕಲೆಯ ಭಾಗಗಳಾದ ಚಿತ್ರ, ಸಂಗೀತ, ಶಿಲ್ಪ, ನೃತ್ಯ, ಸಾಹಿತ್ಯಗಳಲ್ಲಿ ಬಂಡಾಯವನ್ನು ಸೃಜಿಸುವುದು; ಸಾಮಾಜಿಕ ಮತ್ತು ಪ್ರಾಕೃತಿಕ ವಿಜ್ಞಾನಗಳಲ್ಲಿ ಬಂಡಾಯ ಮನೋಭಾವವನ್ನು ಬೆಳೆಸುವುದೂ ಅಗತ್ಯವಾಗುತ್ತದೆ”[೨೬] ಎಂದು ಹೇಳುವಲ್ಲಿ ಸಾಹಿತ್ಯ ಯಾವಾಗಲೂ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳೊಡನೆ ತಳುಕು ಹಾಕಿಕೊಂಡಿರುತ್ತದೆಂಬುದು ಬಂಡಾಯ ವಿಮರ್ಶೆಯ ತಾತ್ವಿಕತೆಯಾಗಿದೆ ಎಂಬುದನ್ನು ಅರಿತುಕೊಳ್ಳಬಹುದು. ಕೃತಿ ಗ್ರಹಿಕೆಯಲ್ಲಿ ಕೃತಿಯ ಕಾಲ ಮತ್ತು ಅದನ್ನು ಸೃಷ್ಟಿ ಮಾಡಿದ ಸಮಾಜ ಮುಖ್ಯ. ವಿಮರ್ಶಕನಿಗೆ ಸೂಕ್ಷ್ಮತೆಯು ಅಗತ್ಯ. ಹಾಗೆಂದು, ವಿಮರ್ಶಕನು ಜಾತಿವಾರು ವಿಭಜಿಸುವ ಪ್ರವೃತ್ತಿಗೆ ಗುರಿಯಾಗಬಾರದು. ಸಾಂಸ್ಕೃತಿಕ ಪರಂಪರೆಯ ಅರಿವು ಅಗತ್ಯ. ಹಾಗೆಂದು, ಸಂಸ್ಕೃತಿಯ ಸರಳೀಕರಣದಿಂದ ಉಪಯೋಗವಿಲ್ಲ. ವಿಮರ್ಶಕರಿಗೆ ಸಾಮೂಹಿಕ ಪ್ರಜ್ಞೆಯು ಅತ್ಯಗತ್ಯ. ಆದ್ದರಿಂದ ಸಾಹಿತ್ಯ ಕೃತಿಯ ವಿಮರ್ಶೆಯನ್ನು ಅದರ ಆಕೃತಿಯ ಒಳಗಿನಿಂದ ಗ್ರಹಿಸಬೇಕು.

ಆದರೆ ಮಾರ್ಕಿಸ್ಟ್ ವಿಮರ್ಶೆ ಆರಂಭದಿಂದಲೂ ಪ್ರತಿಯೊಂದು ಸಾಹಿತ್ಯ ಪ್ರಕಾರಕ್ಕೆ ವಿಶಿಷ್ಟವಾದ ಹಾಗೂ ವಾಸ್ತವಿಕವಾದ ನಿಯಮಗಳಿರುತ್ತವೆ ಎಂದು ನಂಬುವುದರಿಂದ ಅದನ್ನು ಕಡೆಗಣಿಸಿ ನಡೆಯುವ ವಿಮರ್ಶೆ ದಾರಿ ತಪ್ಪಿಸಬಹುದು ಎನ್ನುತ್ತದೆ. ಇದಕ್ಕೆ ಕಾರಣ ಮಾರ್ಕಿಸ್ಟ್ ವಿಮರ್ಶೆ ರೂಪಿಸುವ ವಿಶ್ಲೇಷಣೆ ಹಾಗೂ ಐತಿಹಾಸಿಕ ಮತ್ತು

ಸಾಮಾಜಿಕ ಸಂದರ್ಭಗಳ ವಿವೇಚನೆಯ ಸಮನ್ವಯದಲ್ಲಿ ತನ್ನ ವಿಶಿಷ್ಟತೆಯನ್ನು ಪಡೆಯುವುದರಿಂದ ಪ್ರಕಾರಗಳ ಕಲ್ಪನೆ ಅದಕ್ಕೆ ಅವಶ್ಯಕವೆನಿಸುತ್ತದೆ. ೧೯೮೦ರ ದಶಕದಲ್ಲಿ ಬಂದ ದಲಿತ–ಬಂಡಾಯ ವಿಮರ್ಶಾ ಮುಖ್ಯಾಂಶಗಳನ್ನು ಆರ್. ಕೆ. ಮಣಿಪಾಲರು ವಿಶ್ಲೇಷಿಸುತ್ತಾ, "ಸಾಹಿತ್ಯ ತತ್ವಕ್ಕೆ ಸಂಬಂಧಿಸಿದ ವೈಚಾರಿಕ ಗ್ರಂಥಗಳು ಹಾಗೂ ಲೇಖನಗಳು ಎಪ್ಪತ್ತರ ದಶಕಕ್ಕಿಂತ ಹೆಚ್ಚಾಗಿ ೮೦ರ ದಶಕದಲ್ಲಿ ಬಂದಿರುವುದನ್ನು ದಾಖಲಿಸುವುದು ಅಗತ್ಯ. ಇವುಗಳಲ್ಲಿ ಹೆಚ್ಚಿನವು ಸಮಾಜವಾದಿ ಸೈದ್ಧಾಂತಿಕ ನೆಲೆಯವು. ಈ ನಿಟ್ಟಿನಲ್ಲಿ ವಿಶೇಷವಾಗಿ ತೊಡಗಿಸಿಕೊಂಡವರೆಂದರೆ ಜಿ. ರಾಮಕೃಷ್ಣ, ಬರಗೂರು, ಜಿ. ರಾಜಶೇಖರ, ಆರ್ಕೆ ಮಣಿಪಾಲ್, ರಂಜಾನ್ ದರ್ಗಾ, ಡಿ. ಅರ್. ನಾಗರಾಜ, ಬಿ. ಕೃಷ್ಣಮೂರ್ತಿ ಮುಂತಾದವರು. ಇವರ ಬರಹಗಳಲ್ಲಿ ಸಮಾಜವಾದಿ ವಾಸ್ತವದ ಸಿದ್ದಾಂತಗಳ ತಾತ್ವಿಕ ಮಟ್ಟದ ಚರ್ಚೆ ಗಹನವಾಗಿಯೇ ನಡೆದಿದ್ದರೂ ಎಲ್ಲರಲ್ಲೂ ಒಂದೇ ಮಟ್ಟದ ಅನ್ವಯಿಕತೆ ಫಲಿಸಿದೆ ಎನ್ನುವಂತಿಲ್ಲ"[೨೭] ಈ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿಯೊಂದು ಅರ್ಥಪೂರ್ಣವಾಗುವುದು ಅದರಲ್ಲಿನ ಅನುಭವ ದ್ರವ್ಯದಿಂದಲೇ ಹೊರತು ಬರೆದವರು ಯಾರು ಅವರ ಹಿನ್ನೆಲೆ ಏನು ಎಂಬುದರಿಂದ ಅಲ್ಲ. ವಿಮರ್ಶೆಯಲ್ಲಿ ಅನ್ಯಭಾಷಾ ಪ್ರಭಾವದ ಪರಿಚಯ ವಿಮರ್ಶಕನಿಗಿರಬೇಕು.

ಕನ್ನಡ ವಿಮರ್ಶೆಯು ರೂಪಾರಾಧಕರ ಕೈಯಿಂದ ಇನ್ನೂ ಪಾರಾಗಿಲ್ಲ. ನವ್ಯ ವಿಮರ್ಶಕರು ಇನ್ನೂ ತಮ್ಮ ಬಂಧದ ಅನುಬಂಧದಿಂದ, ವ್ಯಕ್ತಿನಿಷ್ಠತೆಯಿಂದ ಸಾಹಿತ್ಯ ಕೃತಿಗಳನ್ನು ವಿಮರ್ಶಿಸುವ ತಮ್ಮ ಲಾಗಾಯ್ತಿನ ಪರಿಪಾಠ ಬಿಟ್ಟಿಲ್ಲ. ಇವೊತ್ತು ಸಾಹಿತ್ಯದ ಬಗ್ಗೆ ಮಾತಾಡುವಾಗ ಸಾಂಸ್ಕೃತಿಕವಾಗಿ ಸಾಹಿತ್ಯ ಕೃತಿಯ ವಸ್ತುವಿನ ಪರಿಧಿಯೊಳಗೆ ಲೇಖಕ ಚಿತ್ರಿಸುವ ಸಂಸ್ಕೃತಿಯ ಸ್ವರೂಪ ಎಂಥಾದ್ದು, ಈ ಚಿತ್ರಣ ಹೇಗೆ ಪೂರ್ಣಾಂಗವಾಗಿ ಪೋಷಿತವಾಗಿದೆ ಎಂಬುದನ್ನು ವಿಮರ್ಶಕ ವಿಶ್ಲೇಷಿಸಬೇಕೇ ವಿನಾ ಸಂಸ್ಕೃತಿಯ ಸಮಗ್ರ ವಿವರ ಸಾಹಿತ್ಯ ಕೃತಿಯಲ್ಲಿ ಚಿತ್ರಿತವಾಗತಕ್ಕದ್ದು ಎಂದು ಮೊಂಡು ಹೂಡಬಾರದು. ಜನ ಸಂಸ್ಕೃತಿಯ ಬಗ್ಗೆ ಮಾತಾಡುವವರು ಸಂಸ್ಕೃತಿಯ ಸಂವರ್ಧನೆಗೂ ಜನರ ಜೀವನ ಮಟ್ಟಕ್ಕೂ ಸಂಬಂಧವಿದೆಯೆಂಬ ಅಂಶವನ್ನು ಮರೆಯಬಾರದು. ಬಂಡಾಯ ವಿಮರ್ಶೆಯ ಬಹುಮುಖ್ಯ ಉತ್ಪನ್ನ ಡಿ. ಆರ್. ನಾಗರಾಜರ 'ಅಮೃತ ಮತ್ತು ಗರುಡ'. ಸಾಮಾಜಿಕ, ಸಾಂಸ್ಕೃತಿಕ ವಿಮರ್ಶಾ ಕ್ಷೇತ್ರಕ್ಕೆ ಭದ್ರ ಬುನಾದಿ ಹಾಕಿದ ಈ ಕೃತಿಯು ಕನ್ನಡದಲ್ಲಿ ಎಡಪಂಥೀಯ ವಿಮರ್ಶೆಗೆ ಒಂದು ಚಿಂತನಾತ್ಮಕ ನೆಲೆಗಟ್ಟು ಕಟ್ಟಿದ ಮಹತ್ವದ ಕೃತಿಗಳಲ್ಲಿ ಒಂದು.

ಕನ್ನಡದಲ್ಲಿ ಬಂಡಾಯ ವಿಮರ್ಶೆಯ ಒಂದು ಮಗ್ಗುಲಾಗಿ ಮಾರ್ಕ್ಸ್‌ವಾದಿ ವಿಮರ್ಶೆ ಕಾಣಿಸಿಕೊಂಡಿದೆ. ಇದರಲ್ಲಿ ಮಾರ್ಕ್ಸ್ ಮತ್ತು ಏಂಗಲ್ಸ್‌ರ ಕಲೆಯಲ್ಲಿ ವಾಸ್ತವವಾದದ ಕೊಡುಗೆಯನ್ನು ತುಂಬಾ ಗಂಭೀರವಾಗಿ ಪರಿಗಣಿಸುತ್ತಾರೆ. ಕಲಾ ಜಗತ್ತಿನಲ್ಲಿ ಅದರ ಕೊಡುಗೆಯು ತುಂಬಾ ಮಹತ್ವದೆಂದು ಪ್ರತಿಪಾದಿಸುತ್ತಾರೆ. ವಾಸ್ತವತಾವಾದಿ ಪ್ರಾತಿನಿಧಿಕರಣವೆಂದರೆ ವಾಸ್ತವವನ್ನು ಹಾಗೆಯೇ ಯಥಾವತ್ತಾಗಿ

ಚಿತ್ರಿಸುವುದು ಎಂದರ್ಥವಲ್ಲ. ಒಂದು ನಿರ್ದಿಷ್ಟ ಕಾಲಘಟ್ಟದ ವಿಶಿಷ್ಟ ಚಹರೆಗಳನ್ನು ಸಾಹಿತ್ಯದಲ್ಲಿ ರೂಪಿಸುವುದು ಎಂದರ್ಥ. ಒಂದೊಂದು ಕಾಲಘಟ್ಟಕ್ಕೆ ಒಂದೊಂದು ರೀತಿಯ ವಿಶಿಷ್ಟ ಚಹರೆಗಳಿರುತ್ತವೆ. ಅದನ್ನು ಕಲಾವಿದ ತನ್ನ ಕಲೆಯಲ್ಲಿ ದಾಖಲಿಸಿದಾಗ ಮಾತ್ರ ಅಲ್ಲಿ ವಾಸ್ತವತಾವಾದ ರೂಪುಗೊಳ್ಳುತ್ತದೆ.

ಮಾರ್ಕ್ಸ್‌ವಾದಿ ವಿಮರ್ಶಕರಲ್ಲಿ ಒಬ್ಬರಾದ ಶಿವರಾಮ ಪಡಿಕ್ಕಲ್ ಅವರು ವಾಸ್ತವಿಕತೆಯನ್ನು ಕುರಿತು ಚರ್ಚಿಸಿದ್ದಾರೆ. ಅವರ ಪ್ರಕಾರ ಭೌತಿಕ ಜಗತ್ತನ್ನು 'ಸತ್ಯ'ವೆಂದೂ, ಕಾರ್ಯಕಾರಣ ಸಂಬಂಧದಿಂದ ಕೂಡಿದುದೆಂದೂ ನಾವೆಲ್ ನಂಬುತ್ತದೆ. ವಾಸ್ತವವಾದದಲ್ಲಿ ನಂಬಿಕೆ ಇರುವ ನಾವೆಲ್ ಲೇಖಕರಿಗೆ ಸತ್ಯದ ಗ್ರಹಿಕೆಯೆಂದರೆ ಒಂದು ವೈಯಕ್ತಿಕವಾದ ಮತ್ತು ತಾರ್ಕಿಕ ಕ್ರಿಯೆ ಮತ್ತು ವಾಸ್ತವವಾದದಲ್ಲಿ ಜೀವನದ ವಿಮರ್ಶೆಯೂ ಇರುತ್ತದೆ. ಕಾದಂಬರಿಯ ಸಂಬಂಧವಾಗಿ ನಾವು ಸಾಹಿತ್ಯ ವಿಮರ್ಶೆಯಲ್ಲಿ ವಾಸ್ತವವಾದಿ ಪರಂಪರೆಯನ್ನು ಗಮನಿಸುವಾಗ ಅದು ಇಡೀ ಜೀವನಕ್ರಮದ ಮೌಲ್ಯಮಾಪನವನ್ನು ಕೈಗೆತ್ತಿಕೊಳ್ಳುತ್ತಿರುವುದನ್ನು ಗಮನಿಸಬೇಕಾಗುತ್ತದೆ. ವಾಸ್ತವವಾದ ಒಂದು ಸಾಹಿತ್ಯ ತಂತ್ರವೆಂದು ಪರಿಗಣಿಸಬೇಕು. ಶಿವರಾಮ ಪಡಿಕ್ಕಲ್ ಅವರು 'ನಾಡು-ನುಡಿಯ ರೂಪಕ' ಕೃತಿಯನ್ನು ಬರೆದಿರುವುದು ಮಾರ್ಕ್ಸ್‌ವಾದಿ ಚಿಂತನಾ ಕ್ರಮದಿಂದ. ಕಾದಂಬರಿಯನ್ನು ಗ್ರಹಿಸಲು ಅವರು ಮಾರ್ಕ್ಸ್‌ವಾದಿ ವಿಮರ್ಶೆಯ ಪರಿಕರವನ್ನು ಬಳಸಿರುವುದು ಗಮನಾರ್ಹ. ಕನ್ನಡದಲ್ಲಿ ಮಾರ್ಕ್ಸ್‌ವಾದಿ ವಿಮರ್ಶೆಯನ್ನು ಅಭ್ಯಸಿಸುವವರಿಗೆ ಹೇಗೆ ಈ ಕೃತಿಯು ಮುಖ್ಯವೋ ಅದೇ ರೀತಿ ಕಾದಂಬರಿಯನ್ನು ಅಭ್ಯಸಿಸುವವರಿಗೆ ಈ ಕೃತಿಯು ಮುಖ್ಯವಾಗಿದೆ.

ಒಟ್ಟಾರೆಯಾಗಿ ಬಂಡಾಯ ವಿಮರ್ಶೆಗೆ ಕೃತಿಯೊಂದರ ಸಾಮಾಜಿಕ ನಿಲುವು ಮುಖ್ಯವಾಗುತ್ತದೆ. ಬಂಡಾಯಕ್ಕೆ ಪರಂಪರೆ ಎನ್ನುವುದು ಕೇವಲ ವಿಮರ್ಶನಾ ಅವಶ್ಯಕತೆಯಾಗಿ ಉಳಿದಿಲ್ಲ. ಅದೊಂದು ಚಾರಿತ್ರಿಕ ಅವಶ್ಯಕತೆಯಾಗಿದೆ. ಬಂಡಾಯ ವಿಮರ್ಶೆಯು ಡೆಮಾಕ್ರಸಿಯನ್ನು ನಂಬುತ್ತದೆ. ಆದರೆ ಅದು ಕೇವಲ ಶುದ್ಧ ಸಾಹಿತ್ಯವಾದಿ ನಿಲುವಾಗಿ ಉಳಿದಿಲ್ಲ. ಬಂಡಾಯ ವಿಮರ್ಶೆಯಲ್ಲಿ ಪರಿಭಾಷೆಗಳ ಅಬ್ಬರವಿಲ್ಲ. ಬದಲಿಗೆ ಸಮಾಜಶಾಸ್ತ್ರಜ್ಞರನ್ನು ಮಾನವ ಶಾಸ್ತ್ರಜ್ಞರನ್ನು ತನ್ನ ವಿಶ್ಲೇಷಣೆಗೆ ಬಳಸಿಕೊಳ್ಳುತ್ತದೆ. ಡಿ. ಆರ್. ನಾಗರಾಜು, ಬರಗೂರು ರಾಮಚಂದ್ರಪ್ಪ, ಚೆನ್ನಣ್ಣ ವಾಲೀಕಾರ, ಸಿ. ವೀರಣ್ಣ, ಕಿ. ರಂ. ನಾಗರಾಜು, ಜಿ. ಎಸ್. ಅವಧಾನಿ, ಪುರುಷೋತ್ತಮ ಬಿಳಿಮಲೆ, ಬಸವರಾಜ ಸಬರದ ಮೊದಲಾದವರು ಬಂಡಾಯ ವಿಮರ್ಶೆಯ ತಾತ್ವಿಕ ನೆಲೆಗಳನ್ನು ಕೃತಿ ವಿಮರ್ಶೆಯನ್ನು ಭದ್ರಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸಿದರು.

ದಲಿತ ವಿಮರ್ಶೆ

ಕನ್ನಡದ ದಲಿತ ವಿಮರ್ಶೆಯ ಬೆಳವಣಿಗೆಯ ಕ್ರಮವನ್ನು ಗಮನಿಸಿದರೆ ಒಟ್ಟಾರೆಯಾಗಿ ಕಂಡುಬರುವ ಕೆಲವು ಅಂಶಗಳನ್ನು ನಾವು ಹೀಗೆ ಗುರುತಿಸಬಹುದು. ದಲಿತ

ವಿಮರ್ಶೆಯು ಸಾಹಿತ್ಯ ಕೃತಿಗಳ ಪ್ರಧಾನ ಆಶಯವು ದಲಿತರ ಪರವಾಗಿದೆಯೇ, ಇಲ್ಲವೇ ಎಂಬುದರ ಶೋಧನೆಯಾಗಿದ್ದು, ಸಾಹಿತ್ಯ ಕೃತಿಗಳ ಪಾತ್ರ ಚಿತ್ರಣದಲ್ಲಿ ದಲಿತರ ವಿವೇಚನೆ ನಡೆದಿದೆಯೇ ಎಂದು ಪರಿಶೀಲಿಸುತ್ತದೆ. ದಲಿತ ಎನ್ನುವುದು ವರ್ಗ/ಜಾತಿಗಳ ಸಮಸ್ಯೆಯಾಗಿರುವುದು ಸಾಮಾಜಿಕ ವಾಸ್ತವದ ಮುಖೇನವೇ ಅದರತ್ತ ಪ್ರವೇಶಿಸುತ್ತದೆ. ಆ ಮೂಲಕ ದಲಿತರು ಎದುರಿಸುತ್ತಿರುವ ಸಮಸ್ಯೆ, ಕೆಳ ತುದಿಯಲ್ಲಿರುವ ದಲಿತರು ಸಾಹಿತ್ಯಕ್ಕೆ ಪ್ರತಿಕ್ರಿಯಿಸುವ ಕ್ರಮ ಮೊದಲಾದವುಗಳ ಬಗ್ಗೆ ಗಂಭೀರವಾಗಿ ಚಿಂತಿಸುತ್ತದೆ.

ಹೀಗಾಗಿ ಕನ್ನಡ ನಾಡಿನಲ್ಲಿರುವ ದಲಿತರ ಪ್ರಶ್ನೆಯನ್ನು ದಲಿತ ವಿಮರ್ಶೆಯು ಅನನ್ಯವಾಗಿ ನೋಡಲು ಬಯಸುತ್ತದೆ. ದಲಿತ ಪ್ರಶ್ನೆಯೆನ್ನುವುದು ಮೂಲತ: ಸೌಂದರ್ಯ ಶಾಸ್ತ್ರದ ಅಥವಾ ಸಾಹಿತ್ಯ ಪ್ರಶ್ನೆಯಲ್ಲಿ 'ದಲಿತ ಸಮಸ್ಯೆ'ಯು ಅನೇಕ ರೀತಿಯ ಮಗ್ಗುಲುಗಳನ್ನು ಹೊಂದಿದೆ ಎನ್ನುವುದು ಕೂಡ ಅಷ್ಟೇ ಗಮನಾರ್ಹ. ನಾವದನ್ನು ಸಾಮಾಜಿಕ ಸಂದರ್ಭದಲ್ಲಿರಿಸಿಕೊಂಡು ನೋಡಬೇಕು. ಯಾಕೆಂದರೆ ದಲಿತ ಸಮಸ್ಯೆ ಎನ್ನುವುದು ಸಾಮಾಜಿಕ ವಾಸ್ತವದ ಗಂಭೀರ ಪ್ರಶ್ನೆಯಾಗಿ ಆರಂಭಗೊಂಡ ದಲಿತ ಮತ್ತು ಬಂಡಾಯ ಸಾಹಿತ್ಯಗಳು ಅಸ್ಪೃಶ್ಯತೆ, ಶೋಷಣೆ, ಅಸಮಾನತೆಗಳನ್ನೆ ಪ್ರಧಾನವಾಗಿಟ್ಟುಕೊಂಡು ಸಾಹಿತ್ಯ ರಚನೆಗೆ ತೊಡಗಿದವು. ಈ ಎರಡು ಸಾಹಿತ್ಯ ಚಳುವಳಿಗಳ ಉದ್ದೇಶ ಹೆಚ್ಚು ಕಡಿಮೆ ಒಂದೇ ಆಗಿದ್ದರೂ ದಲಿತ ಸಾಹಿತ್ಯ ವರ್ಣ ಸಮಸ್ಯೆಯನ್ನ ಪ್ರಧಾನವಾಗಿ ಆಧರಿಸಿದರೆ, ಬಂಡಾಯ ಸಾಹಿತ್ಯದ ಚಿಂತನೆ ವರ್ಗಸಮಸ್ಯೆಯನ್ನು ಕುರಿತದ್ದಾಗಿತ್ತು. ಇದೇ ಅವಧಿಯಲ್ಲಿ ದಲಿತ–ಬಂಡಾಯ ಸಾಹಿತ್ಯ ಪಂಥದ ಜೊತೆಜೊತೆಯೆ ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಶೆ ಕೂಡಾ ಈ ಸಂದರ್ಭದಲ್ಲಿ ಮುಖ್ಯವಾಗಿ ಬೆಳೆದು ಬಂದಿತು. ಆದರೆ ಸ್ತ್ರೀವಾದಿ ಸಾಹಿತ್ಯ ಮತ್ತು ಪರಂಪರೆಗೆ ಪಶ್ಚಿಮದಲ್ಲೆ ಈಗಾಗಲೇ ಚಾಲ್ತಿಗೆ ಬಂದಿದ್ದ ಪರಂಪರೆಯ ಹಿನ್ನೆಲೆ ಇತ್ತು. ಆದರೆ ದಲಿತ–ಬಂಡಾಯ ಸಾಹಿತ್ಯಗಳು ದೇಶದ ವಿಶಿಷ್ಟ ಸಾಮಾಜಿಕ ಸನ್ನಿವೇಶದಿಂದಾಗಿ ಆರಂಭಗೊಂಡಿದ್ದವು.

ದಲಿತ ಸಾಹಿತ್ಯ ವಿಮರ್ಶೆಯ ಉದ್ದೇಶವನ್ನು ಕುರಿತು ಹೇಳುವಾಗ ದೇವಯ್ಯ ಹರವೆಯವರು "ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಇಂಡಿಯಾದ ಸಂಪ್ರದಾಯಬದ್ಧ ಧಾರ್ಮಿಕ ನೀತಿಯನ್ನಿಟ್ಟುಕೊಂಡು ಸಾಹಿತ್ಯವನ್ನು ವಿಮರ್ಶಿಸುವ ಸಂಪ್ರದಾಯಶರಣ ವಿಮರ್ಶೆಯಿದೆ; ರಸಾನಂದದ ಹೆಸರಿನಲ್ಲಿ ಆಹಾ! ಓಹೋ! ಉದ್ಗಾರಗಳ ರಸವಿಮರ್ಶೆಯಿದೆ, ಶುದ್ಧಕಲೆ ಮತ್ತು ಶುದ್ಧ ಸಾಹಿತ್ಯದ ಹೆಸರಿನಲ್ಲಿ ಪದಗಳ ಡಂಭಾಚಾರದೊಂದಿಗೆ ಮಾಡಿದ ಪ್ರಾಯೋಗಿಕ ವಿಮರ್ಶೆಯಂಥ ಮಾನದಂಡಗಳಿವೆ. ಆದರೆ ಇವಾವೂ ಮನುಷ್ಯನೆನಿಸಿ ಕೊಂಡವನ ಹತ್ತಿರಕ್ಕೆ ಹೋಗುವ ಸಾಹಿತ್ಯವನ್ನು ಸೃಷ್ಟಿಸಲು ಸಮರ್ಥವಾಗಲಿಲ್ಲ. ದಲಿತ ಸಾಹಿತ್ಯದಲ್ಲಿ ಮನುಷ್ಯ ಮತ್ತು ಆತನ ನೋವುಗಳು ಕೇಂದ್ರ ಬಿಂದುವಾಗುತ್ತವೆ."[36] ಎಂದು ಹೇಳುತ್ತಾ ನವೋದಯ ಮತ್ತು ನವ್ಯ ವಿಮರ್ಶೆಗಳನ್ನು ನಿರಾಕರಿಸಿ ಕನ್ನಡ ಸಾಹಿತ್ಯಕ್ಕೆ ಹೊಸ ರೀತಿಯ ವಿಮರ್ಶೆಯ ಅಗತ್ಯವನ್ನು

ಪ್ರತಿಪಾದಿಸುತ್ತಾರೆ. ಆದರೆ ಅರವಿಂದ ಮಾಲಗತ್ತಿ ಮೊದಲಾದ ನಂತರದ ದಲಿತ ಸಾಹಿತಿಗಳು ಹೀಗೆ ಸಾರಾಸಗಟಾಗಿ ಪರಂಪರೆಯನ್ನು ನಿರಾಕರಿಸಲು ವಿರೋಧ ವ್ಯಕ್ತಡಿಸುತ್ತಾರೆ. ಪರಂಪರೆಯ ಜೊತೆಗೆ ಅನುಸಂಧಾನ ಮಾಡುವ ಮೂಲಕ ನಮ್ಮತನವನ್ನು ಕಾಪಿಟ್ಟುಕೊಳ್ಳಬೇಕು ಎನ್ನುತ್ತಾರೆ. ಪರಂಪರೆಯ ಸಾಹಿತ್ಯವನ್ನು ಓದುವ, ಅರ್ಥೈಸಿಕೊಳ್ಳುವ, ತಮ್ಮತನವನ್ನು ಅದರಲ್ಲಿ ಕಂಡುಕೊಳ್ಳುವ ರೀತಿಯೇ ಪ್ರಧಾನವಾದುದಾಗಿದ್ದು, ಇಂತಹ ಸಾಹಿತ್ಯ ಪರಂಪರೆಯನ್ನು ನಿರಾಕರಿಸಿದರೆ ಅಥವಾ ವೈಭವೀಕರಿಸಿದರೆ ನಾವು ಅದರಿಂದ ಪಾಠ ಕಲಿಯುವ ಸುಸಂದರ್ಭದಿಂದ ವಂಚಿತರಾದಂತೆ ಆಗುತ್ತದೆ ಎಂಬುದು ಇಂಥವರ ಅಭಿಪ್ರಾಯ.

ದಲಿತ ಸಾಹಿತ್ಯ ವಿಮರ್ಶೆಯ ಮತ್ತೊಂದು ಮಜಲನ್ನು ಯಶಸ್ವಿಯಾಗಿ ನಿರ್ವಹಿಸಿದ ಅರವಿಂದ ಮಾಲಗತ್ತಿಯವರು "ದಲಿತ ವಿಮರ್ಶೆಗೆ ಮಾನವೀಯತೆಯೇ ಕೇಂದ್ರ ಆಸಕ್ತಿ. ದಲಿತ ವಿಮರ್ಶೆಯ ನಿಲುವು ಸಮಾಜಪರವಾದುದು. ನವೋದಯ ವಿಮರ್ಶೆಯಲ್ಲಿ ವಿವರಣಾತ್ಮಕ ಗುಣಗಳಿವೆ. ಅದು ರಸಗ್ರಹಣವನ್ನೆ ಕೇಂದ್ರವಾಗಿರಿಸಿಕೊಂಡಿದೆ. ಕಾವ್ಯದಲ್ಲಿ ಕವಿಯು ಹೇಗೆ ರಸಾತ್ಮಕವಾದ; ಧ್ವನಿಪೂರ್ಣವಾದ ಮಾತುಗಳನ್ನು ಬಳಸಿದ್ದಾನೆ ಎಂಬುದನ್ನು ವಿವರಿಸುವಲ್ಲಿ 'ಭಾವಗಮ್ಯ' ನೆಲೆಯ ನವೋದಯ ವಿಮರ್ಶೆಯು ತನ್ನ ಕೌಶಲವನ್ನು ಬಳಸಿಕೊಳ್ಳುತ್ತದೆ. 'ಬೌದ್ಧಿಕ ಏಕಾಂತವಾದಿ'ಗಳಾದ ನವ್ಯ ವಿಮರ್ಶಕರು ಕೃತಿಯೊಂದು ಕಲಾತ್ಮಕವಾಗಿ ರೂಪು ತಳೆದಿದೆಯೇ? ಅದು ತಾಂತ್ರಿಕವಾಗಿ ಎಷ್ಟು ಯಶಸ್ವಿಯಾಗಿದೆ? ಎಂಬ ಬೌದ್ಧಿಕ ಕುಶಲತೆಯನ್ನೆ ಅರಸುವ ಅದಕ್ಕೆ ಸಾಮಾಜಿಕ ತಾರತಮ್ಯಗಳು, ಸಾಮಾಜಿಕ ವಾಸ್ತವಗಳು ಮುಖ್ಯವಾಗುವುದಿಲ್ಲ. ಆದರೆ ದಲಿತ ವಿಮರ್ಶೆಗೆ ಸಾಮಾಜಿಕ ವಾಸ್ತವವೇ ಕೃತಿಯೊಂದನ್ನು ಪ್ರವೇಶಿಸುವ, ವಿರಮಿಸುವ ಹಾದಿಯಾಗಿದ್ದು, ಪ್ರಾದೇಶಿಕ ಸಂಸ್ಕೃತಿ, ಭಾಷೆ, ಚಿಂತನೆಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ಸಮಾಜ ಮತ್ತು ಕೃತಿಯ ನಡುವಿನ ಸಂಬಂಧಗಳನ್ನು ಗ್ರಹಿಸಲು ಯತ್ನಿಸುತ್ತದೆ."[೨೯] ಜ್ವಲಂತ ಸಾಮಾಜಿಕ ವಾಸ್ತವವನ್ನು ಗಂಭೀರವಾಗಿಟ್ಟುಕೊಂಡು ಕೃತಿ ಪ್ರವೇಶಿಸುವ ದಲಿತ ವಿಮರ್ಶೆಯು ಕಾವ್ಯ ಮೀಮಾಂಸೆಯ 'ವಾಕ್ಯಂ ರಸಾತ್ಮಕಂ ಕಾವ್ಯಂ', 'ಕಾವ್ಯಾಸ್ಯಾತ್ಮ ಧ್ವನಿ:' ಮುಂತಾದ ಸಾಂಸ್ಥಿಕ ಯಜಮಾನಿಕೆಯನ್ನು ವಿರೋಧಿಸಿ ಎಲ್ಲರನ್ನೂ, ಎಲ್ಲವನ್ನೂ ಸಮಾನವಾಗಿ ಕಾಣಲು ಯತ್ನಿಸುತ್ತದೆ. ಅದು ಸಾಮಾನ್ಯ ಜನರ ಅನುಭವದ ದೃಷ್ಟಿಯಲ್ಲಿ ಕೃತಿಗಳನ್ನು ಗ್ರಹಿಸಲು, ವಿಮರ್ಶಿಸಲು ಯತ್ನಿಸುತ್ತದೆ.

ಕಲಾಕೃತಿಯೊಂದು ಯಾವ ಸೌಂದರ್ಯಾತ್ಮಕ ಅನುಭವವನ್ನು ಕೊಡುತ್ತದೆಯೆಂದು ವಿವರಿಸುವುದಕ್ಕಿಂತ ಸಾಹಿತ್ಯದ ಮೂಲಕ ದಲಿತಾನುಭವ ಹೇಗೆ ಅನುಸಂಧಾನಗೊಂಡಿದೆ ಎಂಬುದು ದಲಿತ ವಿಮರ್ಶೆಗೆ ಮುಖ್ಯವಾಗುತ್ತದೆ. ಕೃತಿಯ ಆಕೃತಿಗಿಂತ ಆಶಯದ ಬಗ್ಗೆ ಆಸಕ್ತಿ ತಾಳುವ ಇದು, ಕೃತಿಯಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಪ್ರತಿಪಾದನೆಯನ್ನು ಬಹಳ ಮುಖ್ಯವಾಗಿ ಪರಿಶೀಲಿಸುತ್ತದೆ. ಆದ್ದರಿಂದಾಗಿಯೆ ಇದರಲ್ಲಿ ವಿಮರ್ಶಾತ್ಮಕ ಪರಿಭಾಷೆಗಳ ಸಂಕೀರ್ಣತೆಗಳನ್ನು ನಾವು ಹೆಚ್ಚಾಗಿ ಕಾಣುವುದಿಲ್ಲ.

ದಲಿತ ಸಾಹಿತ್ಯದಂತೆ ದಲಿತ ವಿಮರ್ಶೆಯು ಒಂದು ಚಾರಿತ್ರಿಕ ಅನಿವಾರ್ಯತೆಯಿಂದ ಹುಟ್ಟಿದೆ ಮತ್ತು ಚಾರಿತ್ರಿಕ ಪ್ರಕ್ರಿಯೆಯ ಜೊತೆಗೆ ಅದು ಮುಖಾಮುಖಿಯಾಗುತ್ತದೆ. ಆದ್ದರಿಂದಲೇ ಕುವೆಂಪು ಅವರು ತಮ್ಮ ಕೃತಿಗಳಲ್ಲಿ "ತಮಗಿಂತ ಮೇಲಿರುವ ಬ್ರಾಹ್ಮಣಶಾಹಿಯನ್ನು ಪ್ರತಿಭಟಿಸುವ ಭರದಲ್ಲಿ ಕುವೆಂಪು ಅವರಿಗೆ ಶೂದ್ರರಿಗಿಂತ ಕೆಳಮಟ್ಟದಲ್ಲಿರುವ ದಲಿತರು ಕಾಣದೆ ಹೋದರು. ಒಂದು ಕಡೆ ಶೋಷಣೆಯನ್ನು ಪ್ರತಿಭಟಿಸಿದ ಕವಿ ಮತ್ತೊಂದು ಕಡೆ ಶೋಷಣೆಯನ್ನು ಮೌನವಾಗಿ ಒಪ್ಪಿಕೊಂಡರು"[೩೦] ಎಂಬಲ್ಲಿ ಸಾಮಾಜಿಕ ಶ್ರೇಣೀಕರಣದ ಶೋಷಣೆಯ ಸ್ಪಷ್ಟ ಅರಿವು ಪ್ರಕಟಗೊಂಡರೆ ಅವರ ಕಾದಂಬರಿಗಳನ್ನು ಕುರಿತು ಬಂದಿರುವ 'ಕುವೆಂಪು ಅವರ ಕಥನಸಾಹಿತ್ಯ ಮತ್ತು ಸಾಮಾಜಿಕ ಚಿಂತನೆ' ಎಂಬ ಲೇಖನದಲ್ಲಿ "ಎರಡೂ ಕಾದಂಬರಿಗಳ ಈ ಎರಡು ಕೇಂದ್ರ ಪ್ರಕರಣಗಳು ಸ್ಪಷ್ಟಪಡಿಸುವುದೇನೆಂದರೆ ಶೂದ್ರರು ಬೌದ್ಧಿಕವಾಗಿ ಬೆಳೆಯದಿರುವುದರಿಂದ ಪೌರೋಹಿತ್ಯದ ಬೌದ್ಧಿಕ ತಂತ್ರಕ್ಕೆ ಬಲಿಯಾಗುತ್ತಾರೆ. ಶೂದ್ರರು ಆರ್ಥಿಕವಾಗಿ ಸಬಲರಾಗಿರುವುದರಿಂದ ಕೆಳವರ್ಗದವರನ್ನು ಸದಾಕಾಲ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಹವಣಿಸುತ್ತಾರೆ. ಹೀಗಾಗಿ ಗುತ್ತಿ – ತಿಮ್ಮಿಯಂಥವರಿಗೆ ಬದುಕುವ ಮಾರ್ಗವನ್ನು ಸೂಚಿಸಿದಂತೆ, ಶೂದ್ರರಿಗೂ ಕೂಡಾ ಹೂವಯ್ಯ, ಮುಕುಂದನಂತಹ ನಾಯಕರೇ ಮಾರ್ಗದರ್ಶಕರಾಗಿ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುತ್ತಾರೆ"[೩೧] ಎಂಬಲ್ಲಿ ದಲಿತ ವಿಮರ್ಶಕರು ಸಾಹಿತ್ಯ ಕೃತಿಗಳನ್ನ ಮತ್ತು ಅವುಗಳು ಪ್ರತಿಪಾದಿಸುವ ನಿಲುವುಗಳನ್ನು ಹೇಗೆ ಭಿನ್ನವಾಗಿ ಗ್ರಹಿಸುತ್ತಾರೆ ಎಂಬುದನ್ನು ಇಂತಹ ವಿಶ್ಲೇಷಣೆಗಳಿಂದ ತಿಳಿದುಕೊಳ್ಳಬಹುದು.

ಹೀಗೆಂದ ಮಾತ್ರಕ್ಕೆ ದಲಿತ ವಿಮರ್ಶೆ ಕೇವಲ ಜನಾಂಗೀಯ ದೃಷ್ಟಿಕೋನವನ್ನು ಹೊಂದಿದೆ ಎಂದು ಭಾವಿಸುವಂತಿಲ್ಲ. ಕೃತಿಗಳನ್ನು ನೋಡುವಾಗ ಅದೂ ಒಂದು ಸಲಕರಣೆಯಾಗಿ ಬಳಕೆಯಾಗುತ್ತದೆಯಷ್ಟೆ. ವಾಸ್ತವವಾಗಿ ದಲಿತ ವಿಮರ್ಶೆ ದಲಿತ ಸಾಹಿತ್ಯದಂತೆ ಒಂದು ಚಾರಿತ್ರಿಕ ಅನಿವಾರ್ಯತೆಯಿಂದ ಹುಟ್ಟಿದೆ ಮತ್ತು ಚಾರಿತ್ರಿಕ ಘಟನೆಗಳು – ವಿಚಾರಗಳಿಗೆ ಮುಖಾಮುಖಿಯಾಗುತ್ತದೆ. ಹಾಗೆಯೆ ದಲಿತ ವಿಮರ್ಶೆ ಏಕ ರೂಪದಲ್ಲಿಯೆ ಪ್ರಕಟಗೊಳ್ಳುತ್ತಿದೆ ಎಂದು ಹೇಳುವಂತಿಲ್ಲ. ಅರವಿಂದ ಮಾಲಗತ್ತಿ, ಮ. ನ. ಜವರಯ್ಯ, ಎಲ್. ಹನುಂತಯ್ಯ, ಕೆ. ಆರ್. ದುರ್ಗಾದಾಸ್, ಮೊಗಳ್ಳಿ ಗಣೇಶ್ ಮೊದಲಾದವರು ಪರಸ್ಪರ ಭಿನ್ನವೆನಿಸುವ ಹಿನ್ನೆಲೆಗಳೊಂದಿಗೆ ತಮ್ಮ ವಿಮರ್ಶೆಗಳನ್ನು ಪ್ರಕಟಿಸುತ್ತಿದ್ದಾರೆ. ಅರವಿಂದ ಮಾಲಗತ್ತಿ ಮೊದಲಾದವರು ಜಾಗತೀಕರಣದಿಂದ ದಲಿತರ ಬದುಕು ಮತ್ತೂ ದುಸ್ಥಿತಿಗೆ ಹೋಗುತ್ತಿದೆ ಎಂದು ವಾದಿಸಿದರೆ, ಮೊಗಳ್ಳಿ ಗಣೇಶ್ ಮೊದಲಾದವರು ಜಾಗತೀಕರಣದಿಂದ ದಲಿತರ ವಿಮುಕ್ತಿ ಸಾಧ್ಯ, ಅವರ ಆರ್ಥಿಕ ಬದುಕು ಸುಧಾರಿಸುತ್ತದೆಂದು ವಾದಿಸುತ್ತಾರೆ.

ದಲಿತ ಲೇಖಕರಿಗೆ ಸಾಹಿತ್ಯವಾಗಲೀ, ಸಾಹಿತ್ಯ ವಿಮರ್ಶೆಯಾಗಲೀ ಅದು ಬಿಡುವಿನ ಸಂದರ್ಭದ ಉಪಕಸುಬಲ್ಲ. ಬದಲಿಗೆ ಅವರ ಜೀವನ ಕ್ರಮದ ತುರ್ತು

ಅಗತ್ಯವೆಂಬಂತೆ ತೊಡಗಿಕೊಳ್ಳುತ್ತಾರೆ. ಆದುದರಿಂದ ಅವರ ವಿಮರ್ಶೆಗಳಲ್ಲಿ ಸಮೂಹ ಜೀವನಾನುಭವದ ಅನುಸಂಧಾನಗಳು ತೆರೆದುಕೊಳ್ಳುತ್ತವೆ. ವೈಯಕ್ತಿಕ ಹಿತಾಸಕ್ತಿಗಿಂತ ಸಮುದಾಯದ ಒಳಿತು ಮತ್ತು ಭವಿಷ್ಯ ಇವರ ಬರವಣಿಗೆಗಳಲ್ಲಿ ಮುಖ್ಯವಾಗುತ್ತವೆ.

ಆದ್ದರಿಂದಲೇ "ಕೃತಿಯ ವಿಮರ್ಶೆ ಒಂದು ಸಮಾಜದ, ರಾಜ್ಯದ, ರಾಷ್ಟ್ರದ ವಿಮರ್ಶೆಯೂ ಹೌದು. ವರ್ತಮಾನದಲ್ಲಿರುವ ವಿಮರ್ಶಕರು ಭೂತವನ್ನು ಗ್ರಹಿಸಿ, ಭವಿಷ್ಯತ್ ಕಟ್ಟಿಕೊಡಬೇಕು. ವಿಮರ್ಶೆ ಒಕ್ಕಣ್ಣ ಆಗಬಾರದು. ವಿಮರ್ಶೆಯ ಅಸ್ತಿತ್ವ ಕೃತಿಯ ಒಳಗಡೆಯೇ ಇರುತ್ತದೆ. ನವೋದಯ ಮತ್ತು ನವ್ಯ ವಿಮರ್ಶೆಗಳಿಗೆ ಹೋಲಿಸಿದರೆ ದಲಿತ-ಬಂಡಾಯದ ಚಿಂತನ ಕ್ರಮವೇ ಕನ್ನಡ ಸಾಹಿತ್ಯ ವಿಮರ್ಶಾ ಕ್ಷೇತ್ರಕ್ಕೆ ಸ್ವತಂತ್ರದ ಅಸ್ತಿತ್ವವನ್ನು ತಂದುಕೊಟ್ಟಿದೆ"[೩೨] ಎಂಬ ಮಾತುಗಳು ದಲಿತ ವಿಮರ್ಶೆಯ ಆಶಯಗಳನ್ನು ಸರಿಯಾಗಿ ಅಭಿವ್ಯಕ್ತಿಸುತ್ತವೆ ಎನ್ನಬಹುದು.

ಸ್ತ್ರೀವಾದಿ ವಿಮರ್ಶೆ

ಹತ್ತೊಂಬತ್ತನೆ ಶತಮಾನದಿಂದ ಜಗತ್ತಿನಲ್ಲಿ ಕಾಣಿಸಿಕೊಂಡ ಸಾಮಾಜಿಕ ಸುಧಾರಣೆಗಳ ಹಿನ್ನೆಲೆಯಲ್ಲಿ ಮಹಿಳೆಯರು ಸಮಾಜದಲ್ಲಿ ಎದುರಿಸುತ್ತಿರುವ ಭೌತಿಕ ಶೋಷಣೆಗಳನ್ನು ಅವುಗಳಿಗೆ ಕಾರಣವಾಗಿರುವ ವ್ಯವಸ್ಥೆಯನ್ನು ಸಂಘಟಿತ ಸಾಮಾಜಿಕ ರಾಜಕೀಯ ಹೋರಾಟಗಳ ಮೂಲಕ ಪ್ರತಿಭಟಿಸುವ ಕಾರಣಕ್ಕಾಗಿ ಸ್ತ್ರೀವಾದ ಚಾಲ್ತಿಗೆ ಬಂದಿತು. ಸಾಹಿತ್ಯ ಕ್ಷೇತ್ರದಲ್ಲಿ ಐವತ್ತರ ದಶಕದ ನಂತರ ಪಶ್ಚಿಮದಲ್ಲಿ ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಶೆ ಚಾಲ್ತಿಗೆ ಬಂದಿತ್ತು. ಎಪ್ಪತ್ತು-ಎಂಬತ್ತರ ದಶಕದ ನಂತರ ಕನ್ನಡದಲ್ಲೂ ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಶೆಯು ಹುಲುಸಾಗಿ ಬೆಳೆಯಿತು. 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ'ಯ ಸಂಪಾದಕರಾದ ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ ಅವರು ಅಭಿಪ್ರಾಯಪಡುವಂತೆ ಸ್ತ್ರೀವಾದಿ ವಿಮರ್ಶೆಯು ಸಾಮಾಜಿಕ ಬೌದ್ಧಿಕ ಪರಂಪರೆಗಳನ್ನೇ ಪರೀಕ್ಷಿಸುವ ಒಂದು ದೃಷ್ಟಿಕೋನ; ಮಹಿಳೆಯರ ಅಧೀನತೆಯಿಂದ ಮತ್ತು ಈ ಪರಿಸ್ಥಿತಿಯನ್ನು ಬದಲಾಯಿಸುವ ಅವಶ್ಯಕತೆಯಿಂದ ಹುಟ್ಟುವ ದೃಷ್ಟಿಕೋನ. ಅಧಿಕಾರ ಸಂಬಂಧಗಳ ಮೇಲೆ ಮತ್ತು ಲಿಂಗಭೇದ ಸಂಬಂಧಗಳ ಸಾಮಾಜಿಕ ಅರ್ಥಕಲ್ಪನೆಯು ಹೇಗೆ ಕಟ್ಟಲ್ಪಟ್ಟಿದೆ ಎನ್ನುವುದರ ಮೇಲೆ ಒತ್ತು ಕೊಡುವುದೇ ಸ್ತ್ರೀವಾದಿ ವಿಮರ್ಶೆಯ ವೈಶಿಷ್ಟ್ಯವಾಗಿದೆ. ಈ ಹಿನ್ನೆಲೆಯಲ್ಲಿ ಇದುವರೆಗಿನ ಕನ್ನಡ ಸಾಹಿತ್ಯವನ್ನು ಮಹಿಳಾ ದೃಷ್ಟಿಕೋನದಿಂದ ನೋಡಿರುವ ವಿಭಿನ್ನ ಬಗೆಗಳನ್ನು ನಾವಿಲ್ಲಿ ಕಾಣಬಹುದು.

ಸ್ತ್ರೀವಾದಿ ವಿಮರ್ಶೆಯಲ್ಲಿ ಎರಡು ವಿಶಿಷ್ಟ ಪರಿಕ್ರಮಗಳನ್ನು ನಾವು ನೋಡಬಹುದು. ಮೊದಲನೆಯದಾಗಿ, ಓದುಗಳಾಗಿ ಪಠ್ಯವನ್ನು, ಅದರಲ್ಲಿ ಬಂದಿರುವ ಸಾಂಕೇತಿಕತೆಯನ್ನು ಅದರಲ್ಲಿರುವ ಪ್ರತಿಮಾತ್ಮಕತೆಯನ್ನು ಅಧ್ಯಯನ ಮಾಡುವುದು. ಎರಡನೆಯದಾಗಿ ಸ್ತ್ರೀವಾದವೂ ಒಂದು ಗ್ರಹಿಕೆ. ಇದನ್ನು ಬೌದ್ಧಿಕವಾಗಿಯೂ ಗ್ರಹಿಸಿ ಪುನರ್ ನಿರ್ಮಿತ ಮಾಡುವುದು ಕೂಡಾ ಸ್ತ್ರೀ ದೃಷ್ಟಿಕೋನದಲ್ಲಿ ಮುಖ್ಯವಾದುದು ಎಂದು

ಸಾಂಡ್ರಾ ರಾಬರ್ಟ್ ಹೇಳುತ್ತಾಳೆ. ಒಟ್ಟಾರೆಯಾಗಿ ಸ್ತ್ರೀವಾದಿ ವಿಮರ್ಶೆಯ ನಿಲುವು ಧರ್ಮ ಮತ್ತು ಸಿದ್ಧಾಂತಗಳ ನಡುವಿನ ಪುನರ್ ವಿಮರ್ಶೆಯೇ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ಕೃತಿಗೆ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಿರುತ್ತದೆ. ಕೃತಿಕಾರ ತಾನು ನಂಬಿದ ಜೀವನ ಮೌಲ್ಯವನ್ನು ಕೃತಿಯಲ್ಲಿಯೂ ಬಿಂಬಿಸುತ್ತಾನೆ. ಆದ್ದರಿಂದ ಕೃತಿಯ ಸಾಹಿತ್ಯಿಕ ಅಂಶಗಳು-ಕೃತಿಯು ತಳೆಯುವ ಸಾಮಾಜಿಕ ಧೋರಣೆಗೆ ಸಂಬಂಧಿಸಿದಂತೆ ರೂಪುಗೊಳ್ಳುತ್ತದೆ. ಆಗ ಕೃತಿಯನ್ನು ಅರ್ಥವಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಚಾರಿತ್ರಿಕ, ಸಾಮಾಜಿಕ ದೃಷ್ಟಿ ಮೂಡುತ್ತದೆ. ಯಾವಾಗಲೂ ಕೃತಿಯ ವಿಶ್ಲೇಷಣೆಯನ್ನು ಕೃತಿಯ ಒಳಗಿಂದ ವಿಶ್ಲೇಷಣೆ ಮಾಡುವುದು ಸರಿಯಲ್ಲ. ಸಾಹಿತ್ಯ ಕೃತಿರಚನೆಯಲ್ಲಿ ಜೀವನಧರ್ಮ ಮುಖ್ಯ ಮತ್ತು ಕಾಲಧರ್ಮ ಸಾಹಿತ್ಯದ ರೂಪವನ್ನು ನಿರ್ಧರಿಸುತ್ತದೆ.

ಕನ್ನಡದ ಮುಖ್ಯ ಸ್ತ್ರೀವಾದಿ ವಿಮರ್ಶಕಿಯರಾಗಿ ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ (ಸ್ತ್ರೀವಾದಿ ಸಾಹಿತ್ಯ ವಿಮರ್ಶೆ), ಬಿ. ಎನ್. ಸುಮಿತ್ರಾಬಾಯಿ (ಸ್ತ್ರೀವಾದಿ ಪ್ರವೇಶಿಕೆ, ಸ್ತ್ರೀವಾದ), ಗಾಯತ್ರಿ ನಾವಡ (ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು), ವಿಜಯಾ ದಬ್ಬೆ, ಡಾ. ವಿಜಯಾ, ಎಚ್. ಎಸ್. ಶ್ರೀಮತಿ, ನೇಮಿಚಂದ್ರ, ಎನ್. ಗಾಯತ್ರಿ, ಶಾಂತಾ ಇಮ್ರಾಪುರ, ಸಬಿಹಾ ಭೂಮಿಗೌಡ, ಮಲ್ಲಿಕಾ ಘಂಟಿ, ಶೈಲಜಾ ಹಿರೇಮಠ, ಎಂ. ಉಷಾ, ಪ್ರೀತಿ ಶುಭಚಂದ್ರ, ತಾರಿಣಿ ಶುಭದಾಯಿಣಿ, ಕೆ. ಆರ್. ಸಂಧ್ಯಾರೆಡ್ಡಿ, ಎಮ್. ಎಸ್. ಆಶಾದೇವಿ, ಕವಿತಾ ರೈ, ನೇಮಿಚಂದ್ರ ಮೊದಲಾದವರು ಕನ್ನಡದಲ್ಲಿ ವ್ಯವಸ್ಥಿತವಾದ ಸ್ತ್ರೀವಾದಿ ವಿಮರ್ಶೆ ರೂಪುಗೊಳ್ಳಲು ಕಾರಣರಾಗಿದ್ದಾರೆ. ಕಳೆದ ದಶಕದ ಆರಂಭದಲ್ಲಿ ಗಾಯತ್ರಿ ನಾವಡ ಅವರ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು ೧೯೯೯ ಮುಖ್ಯ ಕೃತಿಯಾದರೆ ಎಲ್. ಜಿ. ಮೀರಾ ಅವರ 'ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ-೨೦೦೪' ಕಥಾಸಾಹಿತ್ಯದಲ್ಲಿ ಮುಖ್ಯವಾದುದು. ಹೇಮಾ ಪಟ್ಟಣಶೆಟ್ಟಿಯವರ 'ಕನ್ನಡ ನಾಟಕಗಳಲ್ಲಿ ಸ್ತ್ರೀ ಲೋಕ' ೨೦೦೬ರ ಕೃತಿ ನಾಟಕ ಕುರಿತದ್ದಾಗಿದ್ದರೆ, ರಾಮಲಿಂಗಪ್ಪ ಬೇಗೂರು ಮಹಿಳಾ ಕಾವ್ಯದ ಬಗ್ಗೆ ಬರೆದಿದ್ದಾರೆ.

ಸ್ತ್ರೀವಾದಿ ವಿಮರ್ಶೆಯ ಮಾನದಂಡಗಳನ್ನು ಪರಿಶೀಲಿಸುವಾಗ ಸಾಮಾನ್ಯವಾಗಿ ಕೇಳಿಬರುವ ಆರೋಪಗಳೆಂದರೆ, ಕನ್ನಡ ವಿಮರ್ಶೆ ಕಾಲಕಾಲಕ್ಕೆ ಪಶ್ಚಿಮದ ಸಿದ್ಧಾಂತಗಳಿಂದ ಪ್ರೇರಣೆ ಪಡೆದಿದೆ. ಆದರೆ ಕೆಲವೊಮ್ಮೆ ಆಮದಾದ ವಿಚಾರಗಳನ್ನು ಹೇಗೆ ಬಳಸಬೇಕೆಂಬುದರ ವಿವೇಚನೆ ಇಲ್ಲದೆ ಕುರುಡಾಗಿ ಇದ್ದಕ್ಕಿದ್ದಂತೆ ಬಳಸಲಾಗುತ್ತದೆ. ಒಂದು ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸಿದ್ದಾಂತಗಳು, ವಿಮರ್ಶಾ ಪರಿಕ್ರಮಗಳು, ಭಿನ್ನ ಸಂಸ್ಕೃತಿಯಲ್ಲಿ ಹುಟ್ಟಿಕೊಂಡ ಸಾಹಿತ್ಯ ಕೃತಿಯನ್ನು ಪರಿಣಾಮಕಾರಿಯಾಗಿ ಅಳೆಯಲಾರದು. ಜೊತೆಗೆ ಒಂದು ಕೃತಿಯ ಸಮಗ್ರ ಅನುಭವಗಳನ್ನು ದಕ್ಕಿಸಿಕೊಳ್ಳಬೇಕಾದರೆ ಅದು ರೂಪುತಳೆದ ಸಮಾಜದಿಂದಲೇ ನಾವು ವಿಮರ್ಶಾ ಮಾನದಂಡಗಳನ್ನು ಕೃತಿ ಪ್ರವೇಶದ ಮುನ್ನ ಮಾಡದೇ ಹೋದರೆ, ಕೃತಿ ನೆಪವಾಗಿ

ವಿಮರ್ಶಕನ ಪಾಂಡಿತ್ಯವೇ ವಿಜೃಂಭಿಸುತ್ತದೆ. ಅದು ಸ್ತ್ರೀವಾದಿ ದೃಷ್ಟಿಕೋನದಲ್ಲಿಯೂ ಮಿಳಿತವಾಗಿದೆ ಎಂಬುದು ಆರೋಪ.

ಹಾಗೆಯೇ ಪಾಶ್ಚಾತ್ಯ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಇಲ್ಲಿನ ಕೃತಿಗಳನ್ನು ವಿಶ್ಲೇಷಿಸ ಹೊರಟಾಗ ಭಾಷೆ ಊನಾಗುತ್ತದೆ. ಮತ್ತು ಕೃತಿಯ ವಿಶ್ಲೇಷಣೆ ಗೊಂದಲಕ್ಕೊಳಗಾಗುವುದು ಉಂಟು. ಇಂಥ ವಿಮರ್ಶಕರ ಬಗ್ಗೆ "ಇವರಿಗೆ ಭಾಷೆಯ ಬಳಕೆ ಬಗ್ಗೆ ಅವಜ್ಞೆ ಇದೆ. ಭಾಷೆಯ ಶುದ್ಧ ಹಾಗೂ ಸೂಕ್ಷ್ಮ ರೂಪದ ಬಳಕೆ ಇಂದು ಮರೀಚಿಕೆಯಾಗುತ್ತಿದೆ. ಆ ಕಡೆಗೆ ದಿವ್ಯ ನಿರ್ಲಕ್ಷ್ಯ ಹಾಗೂ ಹೇಗೆ ಬರೆದರು ತಪ್ಪಲ್ಲ ಎನ್ನುವ ಉಡಾಫೆಯ ಸಮರ್ಥನೆ ತುಂಬಾ ಆತಂಕ ಪಡುವಂತದ್ದು. ಅನೇಕ ಸಂದರ್ಭದಲ್ಲಿ ಇಂಗ್ಲಿಷ್‌ನಲ್ಲಿ ಯೋಚಿಸಿ ಅದನ್ನು ಕನ್ನಡಕ್ಕೆ ಅನುವಾದಿಸಿ ಬರೆಯುತ್ತಾರೇನೋ ಅನ್ನಿಸಿದೆ, ಅದನ್ನು ತಪ್ಪೆನ್ನಲಾಗದು. ಇಂಗ್ಲಿಷನ ದಾಸ್ಯ ನಮ್ಮನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ ಎಂಬುದಂತೂ ನಿಜ"[೩೩] ಎಂಬ ಅಭಿಪ್ರಾಯಗಳು ಹುಟ್ಟಿಕೊಂಡಿವೆ. ಆದರೆ ಸಾರಾಸಗಟಾಗಿ ನಾವು ನಮ್ಮ ತಿಳುವಳಿಕೆಯನ್ನು ವಿಸ್ತರಿಸುವ ವಿಚಾರಗಳಿಂದ ವಿಮುಖರಾಗಿ ಸ್ವಂತಕ್ಕೆ ಅಂಟಿಕೊಳ್ಳುವುದು ಮತ್ತೊಂದು ಅಪಾಯವೆನಿಸಿದರೂ ಹೊರಗಿನಿಂದ ಪಡೆದುಕೊಂಡಿದ್ದನ್ನು ಸ್ವಂತದ್ದನ್ನಾಗಿ ಮಾಡಿಕೊಂಡು ರೂಢಿಸಿಕೊಳ್ಳಬೇಕಾದುದು ಬಹುಮುಖ್ಯವಾಗುತ್ತದೆ. ಇದಕ್ಕೆ ನಿದರ್ಶನವಾಗಿ ಬಿ. ಎಂ. ಶ್ರೀ. ಯವರು ಇಂಗ್ಲಿಷ್ ಗೀತೆಗಳನ್ನು ಅನುವಾದ ಮಾಡಿದರೂ ಅದನ್ನು ಕನ್ನಡದ ಸಹಜ ಲಹರಿಗಳಲ್ಲಿ ಬಿಡಿಸಿಟ್ಟಿದ್ದನ್ನು ನಾವು ಸ್ಮರಿಸಬಹುದು.

"ವಿಮರ್ಶಕಿಯು ಸಾಹಿತ್ಯ, ಸಂಗೀತ, ಶಿಲ್ಪ ಮುಂತಾದ ಕಲಾಕೃತಿಗಳನ್ನು ಒಳಗೊಳ್ಳುತ್ತಿರುವಂತೆ ಅವುಗಳ ಸಂಗಡ ಮಾತಾಡುತ್ತಿರುವಂತೆ ಕಂಡರೂ ವಾಸ್ತವದಲ್ಲಿ ಅವಳು ಆ ಕೃತಿಗಳನ್ನು ತಾನು ಬಲ್ಲ ಅನುಭವ, ವಿಚಾರ, ಭಾವನೆ ಮತ್ತು ನಿಲುವುಗಳೊಂದಿಗೆ ತಾಳೆಹಾಕುತ್ತಿರುತ್ತಾಳೆ. ತಾನು ಬಳಸುವ ಕಲಾಕೃತಿಗಳ ಅಂತರಂಗಗಳನ್ನು ರೂಪಿಸುವ ಸಾಹಿತ್ಯ ತತ್ವ ಮತ್ತು ಅವುಗಳ ಆಶಯಗಳನ್ನು ರೂಪಿಸುವ ಜೀವನತತ್ವ ಮತ್ತು ಅಷ್ಟೇ ಮುಖ್ಯವಾಗಿ ಇವೆರಡನ್ನು ಒಂದಾಗಿ ಬೆಸೆಯಬಲ್ಲ ಕೌಶಲ ಅವಳ ತಿಳುವಳಿಕೆಯ ವ್ಯಾಪಿಯಲ್ಲಿ ಬರುತ್ತವೆ."[೩೪] ವಿಮರ್ಶೆಯು ಮೀಮಾಂಸೆ ಮತ್ತು ಸಂಶೋಧನೆಗಳ ಜೊತೆ ಬಹಳ ನಿಕಟವಾದ ಸಂಬಂಧ ಹೊಂದಿದೆ. ವಿಮರ್ಶೆ ಪರಿಪೂರ್ಣವಾಗಬೇಕಾದರೆ ಇವುಗಳ ಜೊತೆಗೆ ಒಡನಾಡಬೇಕು. ಇಲ್ಲವಾದರೆ ಜಡತೆ, ಹುಸಿತನ ಮತ್ತು ಅರ್ಧಸತ್ಯಗಳ ಮೆರವಣಿಗೆ ನಡೆಸಬೇಕಾಗುತ್ತದೆ.

ಇವತ್ತಿನ ವಿಮರ್ಶೆಯ ಮತ್ತೊಂದು ಲಕ್ಷಣ ಎಲ್ಲವನ್ನೂ ಮಹಿಳೆಯರ ದೃಷ್ಟಿಯಿಂದ ನೋಡುವ ಪ್ರಯತ್ನಗಳಾಗುತ್ತಿವೆ. ಹಿಂದೆ ವರ್ಣ-ವರ್ಗಗಳಿಗೆ ಕೊಡುತ್ತಿದ್ದ ಮಹತ್ವವನ್ನು ಲಿಂಗ ಸಂಬಂಧಿ ವಿಚಾರಗಳಿಗೆ ಕೊಡುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇತರೆಲ್ಲ ಚಳುವಳಿಗಿಂತ ಮಹಿಳಾ ಚಳುವಳಿ ಜಾಗೃತವಾಗಿರುವುದರಿಂದ ಮತ್ತು ಮಹಿಳೆಯರು ಹೆಚ್ಚೆಚ್ಚು ಬರೆಯುತ್ತಿರುವುದರಿಂದ ಮಹಿಳಾ ದೃಷ್ಟಿಕೋನ ಹೆಚ್ಚಾಗಿದೆ ಎನ್ನಬಹುದು.

ಹೀಗೆ ದಲಿತ ಬಂಡಾಯ ಮತ್ತು ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಶೆಗಳು ಒಂದು ಹಂತವನ್ನು ತಲುಪುತ್ತಿರಬೇಕಾದರೆ ತೊಂಬತ್ತರ ದಶಕದ ನಂತರ ದೇಶದ ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ ವ್ಯಾಪಕವಾದ ಬದಲಾವಣೆಗಳು ಕಾಣಿಸಿಕೊಳ್ಳಲಾರಂಭಿಸಿದವು. ಅರೆಸಮಾಜವಾದಿಯಾಗಿದ್ದ ಭಾರತ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಕ್ಕೆ ತನ್ನನ್ನು ತಾನು ತೆರೆದುಕೊಳ್ಳುವ ಮೂಲಕ ದೇಶದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವ್ಯಾಪಕವಾದ ಬದಲಾವಣೆಗಳು ವೇಗವಾಗಿ ಕಾಣಿಸಿಕೊಳ್ಳಲಾರಂಭಿಸಿದವು. ಇದೇ ಸಂದರ್ಭದಲ್ಲಿ ದೇಶದಲ್ಲಿ ಆಸ್ಫೋಟಗೊಂಡ ಕೋಮುವಾದದಿಂದ ಜಾತಿ–ಧರ್ಮಗಳು ಪ್ರಖರಗೊಂಡು ಜನಜೀವನವನ್ನು ಪ್ರಭಾವಿಸಲಾರಂಭಿಸಿದವು. ಹಾಗೆಯೇ, ಜಾಗತಿಕ ಮಟ್ಟದಲ್ಲಿ ಕಾಣಿಸಿಕೊಂಡ ವಸಾಹತೋತ್ತರ ಚಿಂತನೆಗಳು ಭಾರತೀಯ ಸಾಹಿತ್ಯ ಮತ್ತು ವಿಮರ್ಶೆಯನ್ನು ಪ್ರಭಾವಿಸಲಾರಂಭಿಸಿದವು.

ಇವತ್ತಿನ ಸ್ತ್ರೀವಾದ ಹೊಸ ಹೊಸ ಅಧಿಕಾರ ಕೇಂದ್ರಗಳನ್ನು ಗುರುತಿಸುವ ಪ್ರಯತ್ನದಲ್ಲಿದೆ. ಇಂದು ದಲಿತ ಸ್ತ್ರೀವಾದ ಬರುತ್ತಿದೆ. ಪರಿಸರಕ್ಕೆ ಸಂಬಂಧಿಸಿದ ಸ್ತ್ರೀವಾದ ಬರುತ್ತಿದೆ. ಭಾರತೀಯ ನೆಲದಲ್ಲೇ ದಲಿತ, ಹಿಂದುಳಿದ ವರ್ಗಗಳ ಮಹಿಳೆಯರ ಕಷ್ಟಗಳು ಬೇರೆ ಬೇರೆ ರೀತಿ ಇದೆ. ಅದಕ್ಕೆ ತಕ್ಕಂತೆ ಸ್ತ್ರೀವಾದವೂ ವಿಸ್ತರಿಸುತ್ತಿದೆ. ದುಡಿಯುವ ವರ್ಗದ ಬಡ ಮಹಿಳೆಯರ ದೃಷ್ಟಿಯಿಂದ ಸ್ತ್ರೀವಾದವನ್ನು ವ್ಯಾಖ್ಯಾನಿಸುವ ಅಗತ್ಯವೂ ಇದೆ. ಐವತ್ತರ ದಶಕದಲ್ಲಿ ಸ್ತ್ರೀವಾದ ಹೇಗಿತ್ತೋ ಅದೇ ರೀತಿ ಇಂದು ಇಲ್ಲ.

ಸಾಂಸ್ಕೃತಿಕ ವಿಮರ್ಶೆ

ಡಿ. ಆರ್. ನಾಗರಾಜ್, ರಹಮತ್ ತರೀಕೆರೆ, ರಾಜೇಂದ್ರ ಚೆನ್ನಿ ಮೊದಲಾದವರು ವಸಾಹತೋತ್ತರ ಚಿಂತನೆಗಳಿಗೆ ಕನ್ನಡದಲ್ಲಿ ತೀವ್ರವಾಗಿ ಪ್ರತಿಕ್ರಿಯಿಸಿದರು. ತೃತೀಯ ಜಗತ್ತಿನ ದೇಶಗಳ ಸಂಸ್ಕೃತಿ ಮೇಲೆ ಪಶ್ಚಿಮ ತನ್ನ ಯಜಮಾನಿಕೆ ಸ್ಥಾಪಿಸಿರುವುದರ ವಿರುದ್ಧ ವಿಸ್ಮೃತಿ ಪರಿಕಲ್ಪನೆಯೊಂದಿಗೆ ಕನ್ನಡದಲ್ಲಿ ನಿರ್ವಸಾಹತೀಕರಣ ವಿಮರ್ಶೆಯನ್ನು ಡಿ.ಆರ್. ಎನ್. ಅವರು ಚಾಲನೆಗೆ ತಂದರು. ಅಕ್ಷರ ಚಿಂತನದ ಮೂಲಕ ದೇಶಿಜ್ಞಾನದ ಮೂಲಗಳನ್ನು ಶೋಧಿಸುವ ಪ್ರಯತ್ನ ಮಾಡಿದ ಅವರು "ಸಮಾಜಗಳಿಗೆ ವಿಚಿತ್ರ ರೀತಿಯ ಮರೆವು ಆವರಿಸುತ್ತದೆ. ಅದರಲ್ಲೂ ತಾನು ಚಿಂತಿಸುತ್ತಿದ್ದ, ಪ್ರತಿಕ್ರಿಯಿಸುತ್ತಿದ್ದ, ಭಾವಿಸುತ್ತಿದ್ದ ಕ್ರಮಗಳು ಮರೆತು ಹೋಗುವುದು ದೊಡ್ಡ ದುರಂತವೇ ಸರಿ. ವಸಾಹತುಶಾಹಿ ಅನಂತರದ ಭಾರತೀಯ ಸಮಾಜಕ್ಕೆ ಈ ರೀತಿಯ ವಿಸ್ಮೃತಿ ಈಗ ಆವರಿಸಿಬಿಟ್ಟಿದೆ. ನಮ್ಮ ಸಮಾಜದೊಳಗೆ ಅಂತರ್ಗತವಾಗಿದ್ದ ವೈವಿಧ್ಯಮಯ ವೈಚಾರಿಕ ರಚನೆಗಳು ಮರೆತು ಹೋಗಿರುವುದರಿಂದ ಈಗ ಲಭ್ಯವಿರುವ ಚಿಂತನಕ್ರಮಗಳು ಪೂರ್ಣವಾಗಿ ಪಶ್ಚಿಮಮುಖಿಯಾಗಿಬಿಟ್ಟಿವೆ. ನಮ್ಮನ್ನು ಕಾಡುತ್ತಿರುವ ಬಿಕ್ಕಟ್ಟುಗಳನ್ನು ಅವುಗಳ ಮೂಲಕ ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈಗ ಪ್ರತಿಷ್ಠಿತವಾಗಿರುವ. ಅಧಿಕಾರಸ್ಥವಾಗಿರುವ. ಬಲಿಷ್ಠವಾಗಿರುವ ಚಿಂತನಕ್ರಮಗಳಿಗಿಂತ ಬೇರೆಯದನ್ನು

ಹುಡುಕುವ"[೩೫] ಪ್ರಯತ್ನವನ್ನು ಮಾಡಿದರು. ಆದರೆ ನಾಗರಾಜರ ಈ ಆಲೋಚನೆ ಕೂಡಾ ಪಶ್ಚಿಮದ ಆಧುನಿಕೋತ್ತರ ಚಿಂತನೆಗಳಿಂದ ಪ್ರಭಾವಿತವಾದದ್ದು ಎಂಬುದನ್ನು ಮರೆಯುವಂತಿಲ್ಲ. ಆದರೆ ಇವರ ಚಿಂತನೆಯಿಂದ ಉತ್ತೇಜನಗೊಂಡ ಕೆ.ವಿ. ಅಕ್ಷರ, ಮನು ಚಕ್ರವರ್ತಿ, ರಾಜಾರಾಮ ಹೆಗಡೆ ಮೊದಲಾದವರು ಈ ಹಿನ್ನೆಲೆಯ ವಿಮರ್ಶೆಯಲ್ಲಿ ತೊಡಗಿದ್ದಾರೆ.

ಈ ಸಂದರ್ಭದಲ್ಲಿ ರಹಮತ್ ಅವರು 'ಪ್ರತಿಸಂಸ್ಕೃತಿ' ಕೃತಿಯ ಮೂಲಕ ಈವರೆಗೆ ಆದರ್ಶವೆಂದು ಸ್ವೀಕೃತವಾಗಿದ್ದ ಸಂಸ್ಕೃತಿಯನ್ನು ನಿರಾಕರಿಸಿ, ಶ್ರೇಷ್ಠವೆಂದು ಮಾನ್ಯವಾಗಿರುವುದರ ಪಾವಿತ್ರ್ಯ ನಾಶಗೈಯುವುದು; ತಿರಸ್ಕೃತವೆನಿಸಿರುವ ದುಡಿವ ವರ್ಗದ ಸಂಸ್ಕೃತಿಯನ್ನು ಹಠತೊಟ್ಟು ಮೌಲ್ಯೀಕರಿಸುವ ಪ್ರಯತ್ನವನ್ನು ಮಾಡಿದರು. ಆದರೆ ಯಾರ ಮನಸ್ಸೂ ಮುರಿಯದ ಯಾರ ಬದುಕೂ ಬಾಡದ, ಜನಪರವಾದ ಹೊಸ ಸಮಾಜವಾದಿ ಮಿಥ್ ಒಂದನ್ನು ನೆಲೆಗೊಳಿಸುವ ಪ್ರಯತ್ನ ಸಂಸ್ಕೃತಿ ವಿಮರ್ಶೆಯ ಉದ್ದೇಶವಾಗಿರುವಂತೆ ಭಾಸವಾಗುತ್ತದೆ. ಜೊತೆಗೆ ಇದುವರೆವಿಗೂ ನಾವು ಭಾರತೀಯ ಸಂಸ್ಕೃತಿ ಎಂದ ಕೂಡಲೇ ಆರ್ಯ–ವೈದಿಕ–ಹಿಂದೂ–ಶಿಷ್ಟ ಸಂಸ್ಕೃತಿ ಎಂದು ಭಾವಿಸಿದ್ದೇವೆಯೇ ಹೊರತು, ಇಲ್ಲಿರುವ ತಳಸಮುದಾಯಗಳ, ಬುಡಕಟ್ಟು ಸಂಸ್ಕೃತಿಗಳ ಬಗೆ ಅಧ್ಯಯನಗಳೇ ನಡೆದಿಲ್ಲ. ಆದ್ದರಿಂದ ಸಂಸ್ಕೃತಿ ವಿಮರ್ಶೆಯಲ್ಲಿ ಸಾಹಿತ್ಯ ಕೃತಿಯೊಂದು ಯಾರ ಸಂಸ್ಕೃತಿಯನ್ನು ಪ್ರತಿಪಾದಿಸಿ ಮಾನ್ಯ ಮಾಡುತ್ತಿದೆ ಮತ್ತು ಸಮಕಾಲೀನ ಸಾಂಸ್ಕೃತಿಕ ಒತ್ತಡಗಳು ಹೇಗೆ ಪ್ರಭಾವಬೀರಿವೆ ಎಂಬುದನ್ನು ನೋಡಲು ಈ ವಿಮರ್ಶೆ ಪ್ರಯತ್ನಿಸುತ್ತದೆ.

ಹೀಗೆ ಕನ್ನಡ ವಿಮರ್ಶಾ ಪರಂಪರೆ ವಿಶಾಲವಾಗಿದೆ. ನವೋದಯ ಕಾಲದಲ್ಲಿ ವಿಮರ್ಶೆ ಸಾಹಿತ್ಯ ಮೀಮಾಂಸೆಯ ವಿಶಿಷ್ಟ ಕೊಡುಗೆಯನ್ನು ನೀಡಿತು. ಪ್ರಗತಿಶೀಲ ಸಂದರ್ಭದಲ್ಲಿ ಸಾಹಿತ್ಯ ಕೃತಿಯ ಮೌಲ್ಯವನ್ನು ನಿರ್ಧರಿಸುವಾಗ ಸಮಾಜದ ಹಾಗೂ ಇಡೀ ಜೀವನ ಸಂದರ್ಭದ ಹಿನ್ನೆಲೆಯನ್ನು ತನ್ನ ನಿಲುವನ್ನಾಗಿಸಿಕೊಂಡಿತು. ಕನ್ನಡದಲ್ಲಿ ನವ್ಯ ಕಾಣಿಸಿಕೊಂಡಾಗ ವಿಮರ್ಶೆಯ ಕ್ಷೇತ್ರ ಇನ್ನೂ ವ್ಯಾಪಕವಾಯಿತು. ಇದು ಹಿಂದಿನ ವ್ಯಕ್ತಿನಿಷ್ಠ ವಿಮರ್ಶೆಯಿಂದ ಕೃತಿನಿಷ್ಠತೆಯ ಕಡೆಗೆ ವಾಲಿತು.

ಇಂದಿನ ವಿಮರ್ಶೆ ವಸ್ತುನಿಷ್ಠತೆ ಮತ್ತು ಸಾಂಸ್ಕೃತಿಕ ಆಶಯಗಳನ್ನು ತನ್ನದಾಗಿಸಿಕೊಂಡಿದೆ. ಇಂದಿನ ವಿಮರ್ಶಕರೂ ಕೂಡಾ ತಮ್ಮ ಸುತ್ತಲಿನ ಬದುಕು ಹಾಗೂ ಕೃತಿ ಮತ್ತು ಕೃತಿಕಾರನ ಪರಸ್ಪರ ಸಂಬಂಧವನ್ನು ಅತ್ಯಂತ ಕಾಳಜಿಯಿಂದ ವಿಶ್ಲೇಷಿಸುತ್ತಿದ್ದಾನೆ. ವಿಮರ್ಶೆಯ ಕೃಷಿಗಾಗಿ ತಮ್ಮ ಪ್ರತಿಭೆ, ಪಾಂಡಿತ್ಯಗಳನ್ನು ನಿರಂತರವಾಗಿ ಕ್ರಿಯಾಶೀಲವಾಗಿಸಿರುವ, ಜಿ. ಎಸ್. ಅಮೂರ, ಗಿರಡ್ಡಿ ಗೋವಿಂದರಾಜು, ಟಿ. ಪಿ. ಅಶೋಕ, ಎಚ್. ಎಸ್. ರಾಘವೇಂದ್ರರಾವ್, ಸಿ. ಎನ್. ರಾಮಚಂದ್ರನ್, ರಹಮತ್ ತರೀಕೆರೆ, ರಾಜೇಂದ್ರ ಚೆನ್ನಿ ಮೊದಲಾದ ವಿಮರ್ಶಕರ ವಿಚಾರಧಾರೆಗಳು, ನಿಲುವುಗಳು ಕನ್ನಡ ವಿಮರ್ಶಾ ದೃಷ್ಟಿಯಿಂದ ಆಶಾದಾಯಕವಾಗಿವೆ.

ಅಡಿಟಿಪ್ಪಣಿಗಳು:

೧. ಕೇಶವಶರ್ಮ ಕೆ. : ನೀಲನಕ್ಷೆ (ಕನ್ನಡ ವಿಮರ್ಶೆ: ಇಟ್ಟ ಹೆಜ್ಜೆ ತೊಟ್ಟ ರೂಪ), ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೨, ಪುಟ – ೦೩

೧. ಶ್ರೀಕಂಠಯ್ಯ ಬಿ. ಎಮ್., ಇಂಗ್ಲೀಷ್ ಗೀತೆಗಳು, ಬಿಎಮ್‌ಶ್ರೀ ಪ್ರತಿಷ್ಠಾನ, ಬೆಂಗಳೂರು. ೧೯೯೯, ಪುಟ – ೦೧

೨. ಹಿರೇಮಠ ಆರ್. ಸಿ., ಸಾಹಿತ್ಯ ಸಂಸ್ಕೃಷ್ಟಿ, ಶೋಭಾ ಗ್ರಂಥಮಾಲಾ, ಬೆಳಗಾವಿ, ೧೯೫೧, ಪುಟ – ೪೭

೩. ಅನಂತರಂಗಾಚಾರ್ ಎನ್. (ಸಂ), ಪಂಪ ಮಹಾಕವಿ ವಿರಚಿತ ಪಂಪಭಾರತಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯, ಪುಟ – ೭೦

೪. ಶ್ರೀಕಂಠಯ್ಯ ತೀ. ನಂ. (ಸಂ), ರನ್ನನ ಗದಾಯುದ್ಧ, ಕಾವ್ಯಾಲಯ ಪ್ರಕಾಶನ, ಮೈಸೂರು, ೨೦೧೧, ಪುಟ – ೧೯

೫. ಶಾಮರಾಯ ತ. ಸು. ಮತ್ತು ಎಚ್ ನಂಜೇಗೌಡ (ಸಂ), ಶಬ್ದಮಣಿದರ್ಪಣ, ಪುಸ್ತಕಾಲಯ ಪ್ರಕಾಶನ, ಮೈಸೂರು, ೧೯೮೮, ಪುಟ – ೦೨

೬. ಹಿರೇಮಠ ಆರ್. ಸಿ., ಸಾಹಿತ್ಯ ಸಂಸ್ಕೃಷ್ಟಿ, ಶೋಭಾ ಗ್ರಂಥಮಾಲಾ, ಬೆಳಗಾವಿ, ೧೯೫೧, ಪುಟ – ೪೮

೭. ಲಕ್ಷ್ಮೀನಾರಾಯಣ ಭಟ್ಟ ಎನ್., ಕನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಬೆಂಗಳೂರು, ೨೦೧೪, ಪುಟ – ೩೬೧

೮. ವಿದ್ಯಾಶಂಕರ ಎಸ್. ಮತ್ತು ಡಾ. ಜಿ. ಎಂ. ಹೆಗಡೆ (ಸಂ) : ಸಹೃದಯ ಸಂವಾದ (ಕನ್ನಡ ವಿಮರ್ಶೆಯ ಪರಂಪರೆ) ಜಿ.ಎಸ್. ಅಮೂರ ಅಭಿನಂದನ ಗ್ರಂಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೫, ಪುಟ ೩೮

೯. ಕೇಶವಶರ್ಮ ಕೆ. : ನೀಲನಕ್ಷೆ (ಕನ್ನಡ ವಿಮರ್ಶೆ: ಇಟ್ಟ ಹೆಜ್ಜೆ ತೊಟ್ಟ ರೂಪ), ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೨ ಪುಟ – ೫೮

೧೦.ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿಮರ್ಶೆ ಸಮಗ್ರ ಸಂಪುಟ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು, ೨೦೦೦, ಪುಟ – ೨೭

೧೧. ಅದೇ, ಪುಟ – ೨೯

೧೨.ಸೀತಾರಾಮಯ್ಯ ವಿ., ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೭೧ ಪುಟ – ೦೯

೧೩.ಶೇಷಗಿರಿ ರಾವ್ ಎಲ್. ಎಸ್. : ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಬಸವನ ಗುಡಿ, ಬೆಂಗಳೂರು ೨೦೧೧ ಪುಟ – ೧೮೭

೧೪.ಅದೇ ಪುಟ – ೨೮೧

೧೫. ಶಿವರುದ್ರಪ್ಪ ಜಿ. ಎಸ್., ಕಾವ್ಯಾರ್ಥ ಚಿಂತನ, ಶಾರದ ಪ್ರಕಾಶನ, ಬೆಂಗಳೂರು, ೧೯೮೩. ಪುಟ – ೧೫

೧೬.ಕೃಷ್ಣರಾಯ ಅ. ನ., ಸಾಹಿತ್ಯ ಮತ್ತು ಜೀವನ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೭, ಪುಟ – ೪೯

೧೭.ಅದೇ, ಪುಟ – ೭೪

೧೮.ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ ೨, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩ ಪುಟ – ೪೩೩

೧೯.ಗೋಪಾಲಕೃಷ್ಣ ಅಡಿಗ ಎಂ., ಅಡಿಗರ ಸಮಗ್ರ ಕಾವ್ಯ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೮, 'ನಡೆದು ಬಂದ ದಾರಿ' ಕವನ ಸಂಕಲನದ ಮುನ್ನುಡಿ

೨೦.ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ ೨, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩ ಪುಟ – ೫೬೦

೨೧.ನಾಗಭೂಷಣಸ್ವಾಮಿ ಓ. ಎಲ್., ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೮. ಪುಟ ೧೨೫

೨೨.ಶೇಷಗಿರಿರಾವ್ ಎಲ್. ಎಸ್. : ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಬಸವನ ಗುಡಿ, ಬೆಂಗಳೂರು ೨೦೧೧ ಪುಟ – ೧೯೧

೨೩.ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು, ೨೦೧೩, ಮುನ್ನುಡಿ ಪುಟ – ೧೩

೨೪.ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ ೨, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩ ಪುಟ – ೫೬೩

೨೫.ಹಿರೇಮಠ ಎಸ್. ಎಸ್., ಬಂಡಾಯ ವಿಮರ್ಶೆಯ ದಿಕ್ಕು, ಸಂಕ್ರಮಣ, ಮಾರ್ಚ್ ೧೯೮೯ , ಪುಟ ೧೩

೨೬.ಮಣಿಪಾಲ್ ಆರ್. ಕೆ., ಸಾಹಿತ್ಯ, ಸಿದ್ಧಾಂತ ಮತ್ತು ಹೋರಾಟ, ನವಕರ್ನಾಟಕ ಪ್ರಕಾಶನ, ಬೆಂಗಳೂರು ೧೯೮೬. ಪುಟ – ೩೨

೨೭.ದೇವಯ್ಯ ಹರವೆ, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೯೧ ಪುಟ – ೧೭

೨೮.ಅರವಿಂದ ಮಾಲಗತ್ತಿ : ದಲಿತ ಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್ ಹೌಸ್, ಮೈಸೂರು ೧೯೯೯, ಪುಟ – ೬೧

೨೯.ಕೃಷ್ಣಪ್ಪ ಬಿ., ಕುವೆಂಪು ಅವರ ಕಾದಂಬರಿಗಳಲ್ಲಿ ದಲಿತರ ಪಾತ್ರಚಿತ್ರಣ, ನೆಲದನಿ ಪ್ರಕಾಶನ, ಬೆಂಗಳೂರು ೧೯೮೮, ಪುಟ – ೩೮

೩೦.ಅದೇ, ಪುಟ – ೪೦

೩೧.ಅರವಿಂದ ಮಾಲಗತ್ತಿ (ಸಂ) :: ಕನ್ನಡ ವಿಮರ್ಶೆಯ ಮಾರ್ಗ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ೨೦೦೪. ಮುನ್ನುಡಿ

೩೨.ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ : ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಬೆಂಗಳೂರು ೧೯೯೪, ಮುನ್ನುಡಿ

೩೩.ರಾಘವೇಂದ್ರರಾವ್ ಎಚ್. ಎಸ್., 'ವಿಮರ್ಶೆಯ ಪಲ್ಲಟಗಳು', ಪ್ರಜಾವಾಣಿ, ನವೆಂಬರ್ ೧೨– ೨೦೧೨

೩೪.ಮನು ಚಕ್ರವರ್ತಿ ಎನ್. \ಅನು: ಎಲ್. ಈ. ಮೀರಾ, ಬಹುಮುಖಿ, ಡಿ. ಆರ್. ನಾಗರಾಜ್ ನೆನಪಿನ ಅಕ್ಷರ ಚಿಂತನ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೯ ಮುನ್ನುಡಿ

ಅಧ್ಯಾಯ – ಮೂರು

ವಿವಿಧ ಸಾಹಿತ್ಯ ಪ್ರಕಾರಗಳ ಕುರಿತ ವಿಮರ್ಶೆಯ ಅಧ್ಯಯನ

ಯಾವುದೇ ಲೇಖಕ ತಾನು ಬರೆಯುವ ಪ್ರಕಾರದ ಬಗ್ಗೆ ವಿಶಿಷ್ಟ ಅರಿವುಳ್ಳವನಾಗಿರುತ್ತಾನೆ. ಇಲ್ಲದಿದ್ದರೆ ಅದನ್ನಾತ ಸರಿಯಾಗಿ ನಿರ್ವಹಿಸಲಾರ. ಹಾಗೆಯೇ ಪ್ರಜ್ಞಾವಂತ ಓದುಗ ತಾನು ಓದುವ ಸಾಹಿತ್ಯ ಕೃತಿಯ ಪ್ರಕಾರ ಮತ್ತು ವೈಶಿಷ್ಟತೆ ಬಗ್ಗೆ ಜಾಗೃತನಾಗಿರುತ್ತಾನೆ. ಕೆಲವೊಮ್ಮೆ ಸಾಹಿತ್ಯ ಪ್ರಕಾರವೇ ಓದುಗನ ಆಯ್ಕೆಯನ್ನು ನಿಯಂತ್ರಿಸುತ್ತದೆ. ಇಂತಹ ಸಂದರ್ಭದಲ್ಲಿ ಸಾಹಿತ್ಯ ಕೃತಿಯೊಂದರ ಮೌಲ್ಯಮಾಪನ ಕ್ರಿಯೆ ನಡೆಯುವಾಗ ಅದು ರೂಪು ತಳೆದಿರುವ ಪ್ರಕಾರ ಕೂಡಾ ಒಂದು ಮುಖ್ಯ ಮಾನದಂಡವಾಗಿ ಚಲಾವಣೆಯಾಗಿರುತ್ತದೆ.

ಕನ್ನಡ ವಿಮರ್ಶೆಯ ಮುಖ್ಯವಾದ ಒಂದು ಚಹರೆಯೆಂದರೆ ಇದು ಯಾವುದೇ ಒಂದು ನಿರ್ದಿಷ್ಟ ಸಿದ್ಧಾಂತ ಅಥವಾ ಮಾನದಂಡದ ಚಟುವಟಿಕೆ ಅಲ್ಲ ಎನ್ನುವುದು. ಹಲವು ಸಿದ್ಧಾಂತ, ಹಲವು ಮಾನದಂಡ, ಹಲವು ದೃಷ್ಟಿಕೋನಗಳನ್ನು ಯಾದೃಚ್ಛಿಕವಾಗಿ ಬಳಸುತ್ತಾ ತಮ್ಮದೇ ನಿರ್ಣಯ, ಅಭಿಪ್ರಾಯ, ರುಚಿ ಮಂಡನೆಗಳಿಗೆ ತೊಡಗುವುದೇ ನಮ್ಮ ವಿಮರ್ಶೆಯ ಬಹು ಮುಖ್ಯ ಲಕ್ಷಣವಾಗಿದೆ. ವಿವಿಧ ಸಿದ್ಧಾಂತಗಳ ಪ್ರಯೋಗ, ಪರೀಕ್ಷೆ, ಪ್ರಾತ್ಯಕ್ಷಿಕೆಗಳಾಗಿ ಒಂದೊ ಎರಡೊ ಸಿದ್ಧಾಂತವಾದಿ ವಿಮರ್ಶೆಗಳು ನಮ್ಮಲ್ಲಿ ನಡೆದಿರಬಹುದಾದರೂ ಯಾವುದೇ ಒಂದು ಸಿದ್ಧಾಂತ, ಮಾರ್ಗಕ್ಕೆ ಕಟ್ಟುಬಿದ್ದ ಕೇವಲ ಪಂಥವಾದಿ ವಿಮರ್ಶೆ ಎಂಬುದು ನಮ್ಮಲ್ಲಿಲ್ಲ. ಹಾಗೆ ಇದ್ದರೂ ಅವುಗಳ ಸಂಖ್ಯೆ ತುಂಬಾ ಕಡಿಮೆ.

ಸಮಾಜವು ಹೇಗೆ ನಿತ್ಯ ಚಲನಶೀಲವಾದುದೋ ಹಾಗೆಯೆ ವಿಮರ್ಶೆಯು ಕೂಡ ನಿತ್ಯ ಚಲನಶೀಲವಾದುದು. ಸಾಹಿತ್ಯವು ಹೊಸಹೊಸತಾಗಿ ಸಂಭವಿಸುವಂತೆಯೆ ಅದರ ಅನುಸಂಧಾನವೂ ಹೊಸತಾಗುತ್ತಿರುತ್ತದೆ. ಇದರಿಂದ ವಿಮರ್ಶೆಯಲ್ಲಿ ಹೊಸ ಹೊಸ ಪರಿಭಾಷೆಗಳು, ವಿಧಾನಗಳು ಹುಟ್ಟುತ್ತಲೆ ಇರುತ್ತವೆ. ಹಳೆಯ ವಿಧಾನ, ಪರಿಕಲ್ಪನೆ, ಪರಿಭಾಷೆಗಳು ರೂಪಾಂತರಗೊಳ್ಳುತ್ತಲೂ, ಹೊಸ ಹೊಸ ಪರಿಭಾಷೆಗಳು ಜನ್ಮ ತಳೆಯುತ್ತಲೂ ಇರುತ್ತವೆ.

ನಮ್ಮ ವಿಮರ್ಶೆಯಲ್ಲಿ ಲೇಖಕ ಕೇಂದ್ರಿತ ವಿಮರ್ಶೆ, ಕೃತಿ ಕೇಂದ್ರಿತ ವಿಮರ್ಶೆ, ಮತ್ತು ಪ್ರಕಾರ ಕೇಂದ್ರಿತ ವಿಮರ್ಶೆಗಳಲ್ಲಿ ಒಂದು ಅನ್ಯೋನ್ಯವಾದ ಅಂತಃಸಂಬಂಧ ಇದೆ. ವೀ. ಸೀ. ಅವರ 'ಸಾಹಿತ್ಯ ಸಂಪ್ರದಾಯ ಹೊಸ ಮಾರ್ಗ' ಎಂಬ ಕೃತಿಯಲ್ಲಿ ಪ್ರಕಾರಕೇಂದ್ರಿತ ಸಾಹಿತ್ಯ ಚಿಂತನೆಯೆ ಇದ್ದರೂ ಅಲ್ಲಿ ಲೇಖಕ ಮತ್ತು ಕೃತಿ ಹಾಗೂ

ಸಂವೇದನಾಕೇಂದ್ರಿತ ದೃಷ್ಟಿಗಳೂ ಮಿಳಿತಗೊಂಡಿವೆ. ಹಾಗೇ ಕುರ್ತಕೋಟಿಯವರ 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ' ಪ್ರಕಾರ ಕೇಂದ್ರಿತ ಸಾಹಿತ್ಯ ಚರಿತ್ರೆಯ ಅವಲೋಕನವಾದರೂ ಆಂತರ್ಯದಲ್ಲಿ ಅದು ಲೇಖಕ ಕೇಂದ್ರಿತ ಮತ್ತು ಕೃತಿಕೇಂದ್ರಿತ ದೃಷ್ಟಿಗಳನ್ನು ಮೇಳೈಸಿಕೊಂಡೇ ಬೆಳೆದಿದೆ. ಆಮೂರರ ಅಭಿನಂದನಾ ಗ್ರಂಥ 'ಸಹೃದಯ ಸಂವಾದ' ಕನ್ನಡ ವಿಮರ್ಶೆಯ ಪರಂಪರೆಯನ್ನು ಶೋಧಿಸುವ ಗ್ರಂಥವಾದರೂ ಇಲ್ಲಿ ಲೇಖಕ ಕೇಂದ್ರಿತ ದೃಷ್ಟಿ ಪ್ರಧಾನವಾಗಿದೆ. ಅಂದರೆ ಇದು ನಮ್ಮ ಪ್ರಕಾರಕೇಂದ್ರಿತ ವಿಮರ್ಶೆಯ ದೌರ್ಬಲ್ಯವಲ್ಲ, ಬದಲಿಗೆ ನಮ್ಮ ವಿಮರ್ಶೆಯ ಸ್ವರೂಪವೇ ಅಂತದ್ದು. ಪ್ರಕಾರವನ್ನು ಚರ್ಚಿಸುವಾಗ ಅದರಲ್ಲೂ ಪ್ರಕಾರದ ಪರಂಪರೆ, ಇತಿಹಾಸಗಳನ್ನು ಚರ್ಚಿಸುವಾಗ ಆಯಾ ಪ್ರಕಾರಗಳಲ್ಲಿನ ಮುಖ್ಯ ಲೇಖಕರ ಮತ್ತು ಮುಖ್ಯ ಕೃತಿಗಳ ಅಜಮಾಸು ಮೌಲ್ಯಮಾಪನ ಸಹಜವೆಂಬಂತೆ ಇಲ್ಲಿ ಜರುಗುತ್ತದೆ. ಹಾಗಾಗಿಯೆ ನಮ್ಮ ಬಹುಪಾಲು ಸಾಹಿತ್ಯ ಚರಿತ್ರೆ ರಚನೆಗಳು ಸಾಹಿತ್ಯ ಪ್ರಕಾರ, ಲೇಖಕರ ಪರಂಪರೆ ಮತ್ತು ಕೃತಿ – ಈ ಮೂರರಿಂದ ಮುಪ್ಪುರಿಗೊಂಡ ವಿಮರ್ಶೆಯಾಗುತ್ತದೆ.

ಆರಂಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ನಾಟಕ ಪತ್ರಿಕೆಗಳು ಗ್ರಂಥ ಪರೀಕ್ಷಣ, ಗ್ರಂಥ ವಿಮರ್ಶೆ ಎಂಬ ಖಾಯಂ ಪುಸ್ತಕಾವಲೋಕನಕ್ಕೆ ಸಾಕಷ್ಟು ಪ್ರಾಶಸ್ತ್ಯ ನೀಡಿದ್ದುವು. ಈ ಗ್ರಂಥ ವಿಮರ್ಶೆಗಳೆಲ್ಲ ಬಹುಪಾಲು ಪ್ರಕಾರಕೇಂದ್ರಿತ ಕೃತಿಪರೀಕ್ಷೆಗಳೇ ಆಗಿದ್ದುವು. ಕೃತಿಕೇಂದ್ರಿತ, ಕರ್ತೃ ಕೇಂದ್ರಿತ, ಪ್ರಕಾರ ಕೇಂದ್ರಿತ ಈ ಮೂರೂ ದೃಷ್ಟಿಗಳೂ ಇಲ್ಲಿ ಮುಪ್ಪುರಿಗೊಂಡೇ ಇರುತ್ತಿದ್ದವು. ಈಗಿನ ಬಹುತೇಕ ಪುಸ್ತಕ ವಿಮರ್ಶೆಗಳೂ ಹೀಗೇ ಇವೆ.

ಸಾಹಿತ್ಯ ಕೃತಿಯೊಂದನ್ನು ಕೃತಿನಿಷ್ಠ ಇಲ್ಲವೆ ಪ್ರಕಾರನಿಷ್ಠವಾಗಿ ವಿಮರ್ಶಿಸುವಾಗ ಅದನ್ನು ಅದರ ತಾಂತ್ರಿಕ ವಿವರಗಳ ಮೂಲಕ; ಪ್ರಕಾರ ತತ್ವಗಳ ಮೂಲಕ ಮಾತ್ರ ವಿಮರ್ಶಿಸಿದರೆ ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ಲಕ್ಷಿಸಿದಂತೆಯೆ ಸರಿ. ಕೃತಿಯ ಬಂಧ, ಶಿಲ್ಪ, ಸಾವಯವ ಶಿಲ್ಪದ ಸಮಗ್ರೀಕರಣ, ಭಾಷೆ, ಕೇಂದ್ರಪ್ರಜ್ಞೆ, ಆಕೃತಿ ಈ ಅಂಶಗಳೇ ಕೃತಿಯ ಮೌಲ್ಯಮಾಪನದ ಮಾನದಂಡಗಳಾದಾಗ, ಕೇವಲ ಸೌಂದರ್ಯಾತ್ಮಕ ಅಥವಾ ಕೃತಿಯ ರಚನೆಯ ಅಂಶಗಳಿಗೆ ಮಾತ್ರ ಗಮನ ಕೊಟ್ಟಂತೆ ಆಗುತ್ತದೆ. ಸಾಹಿತ್ಯವು ಎತ್ತಿ ಹಿಡಿಯಬಹುದಾದ ಸಾಂಸ್ಕೃತಿಕ ಮೌಲ್ಯ, ಸಾಮಾಜಿಕ ನ್ಯಾಯಗಳ ಬಗ್ಗೆ ವಿಮರ್ಶೆ ಮಾತಾಡಿದಂತೆಯೇ ಆಗುವುದಿಲ್ಲ. ಇಂತಲ್ಲಿ ಹೂರಣವು ಹಿನ್ನೆಲೆಗೆ ಸರಿದು ಸಿಪ್ಪೆ ಮಾತ್ರವೆ ಮುನ್ನೆಲೆಗೆ ಬರುತ್ತದೆ. ಸಾಮಾಜಿಕ ಅಸಮಾನತೆ, ದುಃಖ, ಶೋಷಣೆ, ಪ್ರತಿರೋಧದ ಪ್ರತಿನಿಧೀಕರಣಗಳೆಲ್ಲ ಗೌಣವಾಗುತ್ತವೆ. ಆದ್ದರಿಂದ ಪ್ರಕಾರ ಕೇಂದ್ರಿತ ವಿಮರ್ಶೆಯನ್ನು ಒಂದು ಆತ್ಯಂತಿಕ ವಿಮರ್ಶಾ ವಿಧಾನ ಎಂದು ಗ್ರಹಿಸುವಂತಿಲ್ಲ.

ಜಿ. ಎಸ್. ಆಮೂರ, ಗಿರಡ್ಡಿ ಗೋವಿಂದರಾಜ, ಟಿ. ಪಿ. ಅಶೋಕ ಮೊದಲಾದವರು ನಿರ್ಧಿಷ್ಟವಾಗಿ ಕಾದಂಬರಿ ಮತ್ತು ಸಣ್ಣ ಕತೆಗಳ ಪ್ರಕಾರ ತತ್ವಗಳನ್ನು, ಪ್ರಕಾರಕೇಂದ್ರಿತ ಮೀಮಾಂಸೆಯನ್ನು ಶೋಧಿಸಲು ಯತ್ನಿಸುತ್ತಿದ್ದಾರೆ. 'ಕನ್ನಡ ಕಥನ

ಸಾಹಿತ್ಯ: ಕಾದಂಬರಿ', 'ಕನ್ನಡ ಕಥನ ಸಾಹಿತ್ಯ: ಸಣ್ಣ ಕತೆ', 'ಕನ್ನಡ ಸಣ್ಣ ಕತೆಯ ಹೊಸ ಒಲವುಗಳು', 'ಕನ್ನಡ ಕಾದಂಬರಿಯ ಸ್ವರೂಪ' ಮೊದಲಾದ ಗ್ರಂಥಗಳಲ್ಲಿ ಈ ಪ್ರಕಾರ ಮೀಮಾಂಸೆಯ ಶೋಧವನ್ನು ನಾವು ಕಾಣಬಹುದು. ಚರಿತ್ರೆ ರಚನೆ, ಮೌಲ್ಯಮಾಪನ ಮತ್ತು ಒಳನೋಟವಾದಿ ವಿಶ್ಲೇಷಣೆ ಹಾಗೂ ಪ್ರಕಾರತತ್ವಗಳ ಮಂಡನೆ ಇದೆಲ್ಲವು ಇಲ್ಲಿ ಏಕಕಾಲಕ್ಕೆ ಮಂಡಿತವಾಗುತ್ತಿದೆ. ನಮ್ಮ ಕಾವ್ಯಮೀಮಾಂಸೆಯು ತನ್ನ ಹೆಸರಿನಲ್ಲಿ ಕಾವ್ಯಕ್ಕೆ ಮಾತ್ರ ಸೀಮಿತವಾಗಿದೆ ಎಂದು ತಿಳಿದು ರಹಮತ್ ತರೀಕೆರೆ ಅವರು ಕನ್ನಡ ಸಾಹಿತ್ಯ ಮೀಮಾಂಸೆ ಎಂಬ ಸಂಕಲನವನ್ನು ಪ್ರಕಟಿಸಿದ್ದಾರೆ. ಏಕಕಾಲಕ್ಕೆ ಮೀಮಾಂಸೆ ಮತ್ತು ವಿಮರ್ಶೆಗಳೆರಡನ್ನು ಸಮ್ಮೇಳಗೊಳಿಸುವ ಯತ್ನ ಇದಾಗಿದೆ. ಕನ್ನಡಕ್ಕೆ ಬೇಕು ಕನ್ನಡದ್ದೆ ವ್ಯಾಕರಣ ಎಂಬ ವೇದಿಕೆಯನ್ನು ಡಿ. ಎನ್. ಶಂಕರಭಟ್ಟರು ನಿರ್ಮಿಸಿಕೊಟ್ಟ ನಂತರದಲ್ಲಿ ಕನ್ನಡದ್ದೆ ಮೀಮಾಂಸೆಯ ಚರ್ಚೆಯು ಸಾಕಷ್ಟು ನಡೆಯುತ್ತಿದೆ.

ಕನ್ನಡದ್ದೆ ತನವನ್ನು ಮೀಮಾಂಸೆ, ವ್ಯಾಕರಣ, ಛಂದಸ್ಸು, ಸ್ತ್ರೀವಾದ ಮೊದಲಾದ ವಲಯಗಳಲ್ಲಿ ಕಂಡುಕೊಳ್ಳುವ ಯತ್ನಗಳೂ ನಡೆಯುತ್ತ ಬಂದಿವೆ. ಇವೆಲ್ಲವೂ ಇಂದು ಹೆಚ್ಚು ಹೆಚ್ಚು ಪ್ರಕಾರ ಕೇಂದ್ರಿತ ಆಗುತ್ತಿವೆ. ವಿಮರ್ಶೆಯ ತತ್ವ, ಕಾವ್ಯ ತತ್ವ, ಪ್ರಬಂಧ, ಕಾದಂಬರಿ, ಕತೆಯ ತತ್ವಗಳು ಹೀಗೆ ಆಧುನಿಕವಾದ ಮುಖ್ಯ ಪ್ರಕಾರಗಳ ಬಗ್ಗೆ ಈಗಾಗಲೇ ಸಾಕಷ್ಟು ತತ್ವಜಿಜ್ಞಾಸೆ ನಡೆದಿದೆ. ಜಾನಪದ ಮತ್ತು ಪ್ರಾಚೀನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಜಿ. ಎಸ್. ಎಸ್., ಬಸವರಾಜ ಸಬರದ, ವೀರಣ್ಣ ದಂಡೆ ಮೊದಲಾದವರು ಕನ್ನಡದ್ದೆ ಮೀಮಾಂಸೆಯ ಕ್ರೋಢಿಕರಣದ ನೆಲೆಯಲ್ಲಿ ಈಗಾಗಲೆ ಕೆಲಸ ಮಾಡಿದ್ದಾರೆ. ಸಂಸ್ಕೃತ ಮತ್ತು ಇಂಗ್ಲಿಶಿನ ಹಲವು ತತ್ವಗಳ ಹಿನ್ನೆಲೆಯಲ್ಲೆ ಈ ಮೀಮಾಂಸೆಯ ಜಿಜ್ಞಾಸೆ ನಡೆಯುತ್ತ ಬಂದಿದೆ. ಆದರೆ ಕನ್ನಡದ ದೃಷ್ಟಾಂತಗಳ ಮೂಲಕ ಇಲ್ಲಿನವೆ ತತ್ವಗಳನ್ನು ಕಂಡುಕೊಳ್ಳುವ ಅಥವಾ ಕನ್ನಡ ಸಾಹಿತ್ಯ ಪ್ರಕಾರಗಳಿಂದಲೇ ಹೊರಡುವ ಪ್ರಕಾರ ತತ್ವಗಳನ್ನು ಕ್ರೋಢಿಕರಿಸಿಕೊಳ್ಳುವ ಕೆಲಸ ಇನ್ನೂ ಆಗಬೇಕಾಗಿದ್ದು, ಕೆಲಮಟ್ಟಿಗೆ ರಹಮತ್ ತರೀಕೆರೆಯವರ 'ಇಲ್ಲಿ ಯಾರೂ ಮುಖ್ಯರಲ್ಲ' ಕೃತಿ ಈ ಕಡೆಗೆ ಪ್ರಯತ್ನ ನಡೆಸಿದೆ.

ಆಧುನಿಕ ಕನ್ನಡ ಸಾಹಿತ್ಯದ ಆರಂಭದಲ್ಲಿ ಕೃತಿಯೊಂದರ ಕಥಾವಸ್ತು, ಸನ್ನಿವೇಶ, ಪಾತ್ರಗಳನ್ನು ಕುರಿತು ಚರ್ಚೆ ನಡೆಸುವಾಗ ಸಾಹಿತ್ಯ ಪ್ರಕಾರವೂ ಪ್ರಾಸಂಗಿಕವಾಗಿ ಬಳಕೆಯಾಗಿದೆ. ಉದಾ:ಗೆ ಬೇಂದ್ರೆಯವರು ಲಕ್ಷ್ಮೀಶನ ಜೈಮಿನಿ ಭಾರತವನ್ನು ವಿಮರ್ಶಿಸುವಾಗ, ಅದು ಒಂದು 'ಪೌರಾಣಿಕ ಕಾದಂಬರಿ' ಎಂದು ಕರೆಯುತ್ತಾರೆ. ಹಾಗೆಯೇ ಕುವೆಂಪು 'ಶ್ರೀ ರಾಮಾಯಣ ದಿವ್ಯಶಿಲ್ಪಿ' ಎಂಬ ಲೇಖನದಲ್ಲಿ ವಾಲ್ಮೀಕಿಯ ಬಗ್ಗೆ ಬರೆಯತ್ತಾ 'ಅದರ ಸೂತ್ರ ಭಾವಗೀತೆಯದ್ದು, ಗಾತ್ರ ಪುರಾಣದ್ದು' ಎಂದು ಹೇಳುತ್ತಾರೆ. ಅಂದರೆ ಆಧುನಿಕ ಸಾಹಿತ್ಯ ಪ್ರಕಾರ ಪ್ರಜ್ಞೆ ನಮ್ಮ ಮೊದಲ ತಲೆಮಾರಿನ ಲೇಖಕರನ್ನು ಪ್ರಭಾವಿಸಿದೆ. ಒಟ್ಟಿನಲ್ಲಿ ಸಾಹಿತ್ಯ ವಿಮರ್ಶೆ ನಡೆಯುವಾಗ ಸಾಹಿತ್ಯ ಪ್ರಕಾರವನ್ನೂ ಮುಖ್ಯವಾಗಿ ಪರಿಗಣಿಸುವ ಕ್ರಿಯೆ ನಡೆದಿದೆ. ಆ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಪ್ರಕಾರ ವಿಮರ್ಶೆಯನ್ನು ಶೋಧಿಸುವ ಕೆಲಸ ಈ ಭಾಗದಲ್ಲಿ ನಡೆದಿದೆ.

ಆಧುನಿಕ ಕನ್ನಡ ವಿಮರ್ಶಾ ಚರಿತ್ರೆಯ ಆರಂಭದ ಮುಖ್ಯ ಕೃತಿಗಳಲ್ಲಿ ಒಂದಾದ ಕುರ್ತುಕೋಟಿಯವರ 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ' ಕೃತಿಯಲ್ಲಿ ಪ್ರಕಾರ ಕೇಂದ್ರಿತ ವಿಮರ್ಶೆ ಮುಖ್ಯವಾಗಿದೆ. ಅವರು ಅನುಕ್ರಮವಾಗಿ ಕಾವ್ಯ, ಕತೆ, ಕಾದಂಬರಿ, ನಾಟಕ ಮತ್ತು ವಿಮರ್ಶೆಗಳೆಂಬ ವಿಭಾಗಗಳಡಿಯಲ್ಲಿ ತಮ್ಮ ನಿಲುವುಗಳನ್ನು ಪ್ರಕಟಿಸುತ್ತಾರೆ. ಹೊಸಗನ್ನಡ ಸಾಹಿತ್ಯ ಚರಿತ್ರೆ ಬರೆದ ಎಲ್.ಎಸ್. ಶೇಷಗಿರಿರಾವ್ ಅವರೂ, ಮೊದಲಿಗೆ ಸಾಹಿತ್ಯ ಪ್ರಕಾರಗಳನ್ನಿಟ್ಟುಕೊಂಡು ಚರ್ಚಿಸಿ, ನಂತರ, ಕನ್ನಡದ ಮುಖ್ಯ ಲೇಖಕರನ್ನು ಕುರಿತು ಬರೆಯುತ್ತಾರೆ, ಹಳಗನ್ನಡ ಸಾಹಿತ್ಯ ಚರಿತ್ರೆಯ ಕೆಲವು ರಚನೆಗಳು ಸಾಹಿತ್ಯ ಪ್ರಕಾರಗಳನ್ನು ಆಧರಿಸಿ ರಚನೆಗೊಂಡಿವೆ. ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಿಸಿದ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಕೂಡಾ ಇದೇ ಹಿನ್ನೆಲೆಯಲ್ಲಿ ರೂಪುತಳೆದಿರುವುದನ್ನು ಗಮನಿಸಬಹುದು. ಹಾಗೆಯೇ ಕನ್ನಡದ ವೃತ್ತಿಪರ ವಿಮರ್ಶಕರು ಎಂದು ಗುರುತಿಸಬಹುದಾದ ಜಿ.ಎಸ್ ಅಮೂರ, ಗಿರಡ್ಡಿ ಗೋವಿಂದರಾಜ, ಟಿ.ಪಿ. ಅಶೋಕ ಮೊದಲಾದ ವಿಮರ್ಶಕರು ಸಾಹಿತ್ಯ ಪ್ರಕಾರಗಳನ್ನು ಆಧರಿಸಿಯೇ ತಮ್ಮ ವಿಮರ್ಶಾ ಕೃತಿಗಳನ್ನು ಪ್ರಕಟಿಸುತ್ತಿರುವುದನ್ನು ಕಾಣಬಹುದು.

ಆದರೆ ಆಧುನಿಕ ಸಂದರ್ಭದಲ್ಲಿ ಸಾಮಾನ್ಯವಾಗಿ ಸಾಹಿತ್ಯ ಪ್ರಕಾರವನ್ನೇ ಪ್ರಮುಖವಾಗಿಟ್ಟುಕೊಂಡು ಸಾಹಿತ್ಯ ವಿಮರ್ಶೆ ಮಾಡುವ ಪರಿಕಲ್ಪನೆ ಈಗ ಹೆಚ್ಚು ಜಾರಿಯಲ್ಲಿಲ್ಲ. ಆದರೆ ಸಾಹಿತ್ಯ ವಿಮರ್ಶೆಗೆ ಅಸ್ತಿಭಾರ ಹಾಕಿದ ಅರಿಸ್ಟಾಟಲ್, ಮಹಾಕಾವ್ಯ ಮತ್ತು ದುರಂತ ನಾಟಕಗಳ ವಿಶ್ಲೇಷಣೆಗೆ ಪ್ರತ್ಯೇಕ ಮಾನದಂಡಗಳನ್ನು ಬಳಸುತ್ತಾನೆ. ಮಹಾಕಾವ್ಯದಲ್ಲಿ ಭಾವಶೋಧ ಮುಖ್ಯವಾಗಿದ್ದು ನಾಟಕದಲ್ಲಿ ಅನುಕರಣೆ ಪ್ರಧಾನವಾಗಿರುತ್ತದೆಂದು ಅಭಿಪ್ರಾಯಪಡುತ್ತಾನೆ. ಆದ್ದರಿಂದ ಸಾಹಿತ್ಯ ಪ್ರಕಾರವನ್ನೆ ಕೇಂದ್ರವಾಗಿಟ್ಟುಕೊಂಡು ನಡೆಸಿದ ವಿಮರ್ಶೆಗಳು ಮಾಮೂಲಿ ವಿಮರ್ಶೆಗಳಿಗಿಂತ ಹೆಚ್ಚು ಒಳನೋಟಗಳನ್ನು ನೀಡಿರುವುದನ್ನು ಗಮನಿಸಬಹುದು. "ಪ್ರತಿಯೊಂದು ಸಾಹಿತ್ಯ ಪ್ರಕಾರವೂ ಗ್ರಹಿಸುವ ಜೀವನದ ಸ್ವರೂಪ ಭಿನ್ನವಾಗಿರುತ್ತದೆ. ಮತ್ತು ಅದು ಜೀವನವನ್ನು ಗ್ರಹಿಸುವ ರೀತಿ ಕೂಡಾ ಅದಕ್ಕೇ ವಿಶಿಷ್ಟವಾದ ಸ್ಥಾಪಿತ ರೂಢಿಗಳಿರುತ್ತವೆ. ಪ್ರತಿಯೊಂದು ಸಾಹಿತ್ಯಕೃತಿಯೂ ತಾನು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದ್ದೆಂದು ಗುರುತಿಸಿಕೊಳ್ಳುವ ಮೂಲಕವೇ ಓದುಗರು ಆ ರೂಢಿಗಳನ್ನು ಸಹಜವೆಂದು ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತದೆ."[7] ಆದ್ದರಿಂದ ಕೃತಿಯೊಂದರ ಓದು ಮತ್ತು ವ್ಯಾಖ್ಯಾನವನ್ನು ಅದರ ಸಾಹಿತ್ಯ ಪ್ರಕಾರ ಪ್ರತ್ಯಕ್ಷವಾಗಿಯೊ, ಪರೋಕ್ಷವಾಗಿಯೊ ನಿಯಂತ್ರಿಸಿರುತ್ತದೆ.

ಹಾಗೆಯೇ ಆಧುನಿಕ ಕಾಲದಲ್ಲಿ ಮಾರ್ಕ್ಸ್‌ವಾದಿ ವಿಮರ್ಶೆ ಮಾತ್ರ ಪ್ರಕಾರ ವಿಮರ್ಶೆಯನ್ನು ಹೆಚ್ಚಾಗಿ ಬೆಂಬಲಿಸುತ್ತದೆ. ಇಪ್ಪತ್ತನೇ ಶತಮಾನದ ಪ್ರಮುಖ ಮಾರ್ಕ್ಸ್‌ವಾದಿ ಚಿಂತಕರಲ್ಲಿ ಒಬ್ಬರಾದ ಜಾರ್ಜ್ ಲುಕಾಕ್ಸ್ "ಮಾರ್ಕ್ಸಿಸ್ಟ್ ಸಿದ್ಧಾಂತದಲ್ಲಿ ಪ್ರತಿಯೊಂದು ಸಾಹಿತ್ಯ ಪ್ರಕಾರಕ್ಕೆ ವಿಶಿಷ್ಟವಾದ ಹಾಗೂ ವಾಸ್ತವಿಕವಾದ ನಿಯಮಗಳಿರುತ್ತವೆ. ಈ ನಿಯಮಗಳನ್ನು ಮೀರಿದಾಗ ಕಲಾವಿದ ಪೇಚಿಗೆ

ಸಿಲುಕಿಕೊಳ್ಳುತ್ತಾನೆ"[3] ಎಂದು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಸಾಹಿತ್ಯ ರಚನೆ ಮತ್ತು ವಿಶ್ಲೇಷಣೆಯ ಹಿಂದೆ ಸಾಹಿತ್ಯದ ಪ್ರಕಾರವು ಸೂಕ್ಷ್ಮವಾಗಿ ತನ್ನ ಪಾತ್ರ ನಿರ್ವಹಿಸುತ್ತಿರುತ್ತದೆ. ಜೊತೆಗೆ ಸಾಹಿತ್ಯ ಪ್ರಕಾರಗಳ ಸ್ವರೂಪಗಳನ್ನು ನಾವು ಕೇವಲ ಸಾಹಿತ್ಯಿಕ ಹಿನ್ನೆಲೆಯಿಂದಲೇ ಗ್ರಹಿಸಲಾಗುವುದಿಲ್ಲ. ಬದಲಿಗೆ ವಿಮರ್ಶೆಗೆ ತೊಡಗುವಾಗ ವಿಮರ್ಶಾ ಮಾನದಂಡಗಳಿಗೆ ಅನುಗುಣವಾದ ಸಾಂಸ್ಥಿಕ ಹಿನ್ನೆಲೆಯೂ ಮುಖ್ಯವಾಗುತ್ತದೆ. ಮಾರ್ಕ್ಸ್‌ವಾದಿ ವಿಮರ್ಶೆ ಮುಖ್ಯವಾಗಿ ರೂಪನಿಷ್ಠ ವಿಶ್ಲೇಷಣೆ ಹಾಗೂ ಐತಿಹಾಸಿಕ ಮತ್ತು ಸಾಮಾಜಿಕ ಸಂದರ್ಭಗಳ ವಿವೇಚನೆಯನ್ನೇ ಗಂಭೀರವಾಗಿ ಪರಿಗಣಿಸುವುದರಿಂದ ಅದಕ್ಕೆ ಪ್ರತಿ ಸಾಹಿತ್ಯ ಪ್ರಕಾರಗಳ ವಿಕಾಸ ಕ್ರಮ ಮತ್ತು ಉದ್ದೇಶಗಳು ಮುಖ್ಯವಾಗುತ್ತವೆ. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಕಾವ್ಯವನ್ನೆ ಪ್ರಧಾನವಾಗಿಟ್ಟುಕೊಂಡು ನಡೆಸಿದ ಅಧ್ಯಯನಗಳಾದ ಡಿ. ಆರ್. ನಾಗರಾಜರ 'ಶಕ್ತಿ ಶಾರದೆಯ ಮೇಳ', ಎಚ್. ಎಸ್. ರಾಘವೇಂದ್ರರಾವ್‌ರ 'ಹಾಡೇ ಹಾದಿಯ ತೋರಿತು' ಮೊದಲಾದ ಕೃತಿಗಳು ಕನ್ನಡ ಕಾವ್ಯಲೋಕದ ಬಗ್ಗೆ ತುಂಬ ಅಥೆಂಟಿಕ್ ಅಭಿಪ್ರಾಯಗಳನ್ನು ರೂಪಿಸಿದವು. ಆದ್ದರಿಂದ ಈ ರೀತಿ ಪ್ರಕಾರವನ್ನೆ ಪ್ರಧಾನವಾಗಿ ನೆಚ್ಚಿ ವಿಮರ್ಶೆಯಲ್ಲಿ ತೊಡಗಿರುವ ವಿಮರ್ಶಕರ ಕೃತಿಗಳನ್ನು ಅಧ್ಯಯನ ಮಾಡುವುದರ ಮೂಲಕ ಕನ್ನಡ ವಿಮರ್ಶೆಯಲ್ಲಿ ದಾಖಲಾಗಿರುವ ಹೊಸ ಪ್ರವೃತ್ತಿಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

ವಿಮರ್ಶೆ ಕೃತಿಯೊಂದರ ಮೌಲ್ಯಮಾಪನವೆಂದರೂ ಕೃತಿಯ ಸ್ವರೂಪ ಅಥವಾ ಆ ಕೃತಿ ರೂಪತಳೆದ ಸಮಾಜದ ಸ್ವರೂಪ ಆ ಕೃತಿಯ ವಿಮರ್ಶೆ ಮೇಲೆ ಪ್ರಭಾವ ಬೀರಿರುತ್ತದೆ. ಈ ಅಧ್ಯಾಯದಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ರೂಪುತಳೆದ ವಿಮರ್ಶೆಯನ್ನು ಗ್ರಹಿಸಲು ಮತ್ತು ಆ ಮೂಲಕ ಅವರು ರೂಪಿಸಿಕೊಂಡ ಸಿದ್ಧಾಂತಗಳ ಪರಿಶೀಲನೆಯನ್ನು ಇಲ್ಲಿ ನಡೆಸಲಾಗುತ್ತದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಪ್ರಕಾರ ವಿಮರ್ಶೆ ಕ್ವಚಿತ್ತಾಗಿ ಬಳಕೆಯಾಗುತ್ತಿದೆ. ಲೇಖಕರೊಬ್ಬರ ಒಟ್ಟು ಸಾಹಿತ್ಯವನ್ನು ವಿಮರ್ಶಿಸುವಾಗ ಕೆಲವು ಮಾನದಂಡಗಳನ್ನು ಅನುಸರಿಸಿದರೆ ಅದೇ ಲೇಖಕರ ಕಾವ್ಯ, ಕತೆ, ಕಾದಂಬರಿ, ಪ್ರಬಂಧ, ನಾಟಕ ಮೊದಲಾದ ಪ್ರಕಾರಗಳನ್ನೇ ಕೇಂದ್ರವಾಗಿಟ್ಟುಕೊಂಡು ವಿಮರ್ಶಿಸುವಾಗ ಆ ಪ್ರಕಾರಗಳಿಗೆ ಸೂಕ್ತವಾಗಿರುವ ಕೆಲವು ಮಾನದಂಡಗಳನ್ನಿಟ್ಟುಕೊಂಡು ವಿಮರ್ಶೆ ನಡೆಸುತ್ತಾರೆ.

ಕನ್ನಡದಲ್ಲಿ ಸಾಹಿತ್ಯ ಪ್ರಕಾರವೊಂದನ್ನೆ ಮುಖ್ಯವಾಗಿಟ್ಟುಕೊಂಡು ವಿಮರ್ಶಿಸುವ ಪದ್ಧತಿ ಕಳೆದ ಶತಮಾನದ ಮಧ್ಯಭಾಗದಲ್ಲಿ ಆರಂಭವಾಯಿತು. ಎಸ್. ಅನಂತನಾರಾಯಣ ಅವರ 'ಕಾರಂತರ ಕಾದಂಬರಿಗಳು' (೧೯೪೮) ಈ ದಿಶೆಯ ಮೊದಲ ಪ್ರಯತ್ನವೆನ್ನಬಹುದು. ನಂತರ ಎಲ್.ಎಸ್. ಶೇಷಗಿರಿರಾವ್ ಅವರ 'ಕಾದಂಬರಿ – ಸಾಮಾನ್ಯ ಮನುಷ್ಯ' (೧೯೫೩) ಸೇರಿದಂತೆ ಇತರ ಕೃತಿಗಳು ರಚನೆಗೊಂಡವು. ಅದನ್ನು ಜಿ. ಎಸ್. ಆಮೂರ, ಗಿರಡ್ಡಿ ಗೋವಿಂದರಾಜ ಮೊದಲಾದವರು ಮುಂದುವರೆಸುತ್ತಿದ್ದಾರೆ. ಆದರೆ ಕನ್ನಡದಲ್ಲಿ ಪ್ರಕಾರ ವಿಮರ್ಶೆಯು ಹೆಚ್ಚಾಗಿ ಆಂಗ್ಲ

ಪ್ರಾಧ್ಯಾಪಕರಿಂದಲೇ ರಚನೆಗೊಳ್ಳುತ್ತಿದೆ.

ಕನ್ನಡ ಸಾಹಿತ್ಯ ವಿಮರ್ಶೆ ಮುಖ್ಯ ಲಕ್ಷಣವೆಂದರೆ ನವೋದಯ ಮತ್ತು ನವ್ಯ ಸಾಹಿತ್ಯ ಪಂಥಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕಾವ್ಯ ವಿಮರ್ಶೆ ಹೆಚ್ಚು ಚಲಾವಣೆಯಲ್ಲಿತ್ತು. ಹಾಗೆಯೆ ಪ್ರಗತಿಶೀಲ ಮತ್ತು ದಲಿತ, ಬಂಡಾಯ ಹಾಗೂ ಸ್ತ್ರೀವಾದಿ ಸಾಹಿತ್ಯ ಚಳುವಳಿಗಳು ಹೆಚ್ಚು ಕ್ರಿಯಾಶೀಲವಾಗಿದ್ದಾಗ ಕಥೆ–ಕಾದಂಬರಿಗಳನ್ನೊಳಗೊಂಡ ಗದ್ಯ ಸಾಹಿತ್ಯ ವಿಮರ್ಶೆ ಹುಲುಸಾಗಿ ನಡೆದಿರುವುದನ್ನು ಕಾಣಬಹುದು. ಈ ಪ್ರಕ್ರಿಯೆ ಕಳೆದ ದಶಕದಲ್ಲೂ ಮುಂದುವರೆದಿದ್ದು ಇದನ್ನು ಸವಿಸ್ತಾರವಾಗಿ ವಿವರಿಸಲಾಗಿದೆ. ಇದಕ್ಕೆ ಕಾರಣ, ಸಾಮಾನ್ಯವಾಗಿ ಕಾವ್ಯ/ಪದ್ಯ ವಿಮರ್ಶೆಯಲ್ಲಿ ವ್ಯಾಖ್ಯಾನಕ್ಕೆ, ವಿಶ್ಲೇಷಣೆಗೆ ಅವಕಾಶವಿರುತ್ತದೆ. ಆದ್ಧರಿಂದಲೇ ಆ ವಿಮರ್ಶೆ ಕೃತಿಯ ರೂಪ, ಭಾಷೆ, ಕಲಾತ್ಮಕತೆಯ ಕಡೆಗೆ ಹೆಚ್ಚು ಗಮನ ನೀಡುತ್ತದೆ. ಆದರೆ ಗದ್ಯ, ಸಾಹಿತ್ಯ, ಸ್ವಾಭಾವಿಕವಾಗಿಯೇ ವಿವರಣಾತ್ಮಕವಾಗಿರುವುದರಿಂದ ಮತ್ತು ಓದುಗರಿಗೂ ಸಲೀಸಾಗಿ ಅರ್ಥವಾಗುವುದರಿಂದ ಇಲ್ಲಿನ ವಿಮರ್ಶೆಗೆ ವ್ಯಾಖ್ಯಾನ, ವಿಶ್ಲೇಷಣೆಗೆ ಹೆಚ್ಚು ಅವಕಾಶವಿರುವುದಿಲ್ಲ. ಆದ್ದರಿಂದ ಗದ್ಯ ಸಾಹಿತ್ಯವನ್ನು ವಿಮರ್ಶಿಸುವಾಗ ತುಲನಾತ್ಮಕತೆ, ವಿವಿಧ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕೃತಿಯ ಕಥಾವಸ್ತುವನ್ನಿಟ್ಟುಕೊಂಡು ವಿಶ್ಲೇಷಣೆ ನಡೆಸುವುದು ಕಂಡು ಬರುತ್ತದೆ. ನವೋದಯ ಮತ್ತು ನವ್ಯ ಸಾಹಿತ್ಯ ಚಳವಳಿಯ ಸಂದರ್ಭದಲ್ಲಿ ಕಾವ್ಯದ ಬೆಳೆ ಹುಲುಸಾಗಿದ್ದರೆ, ಪ್ರಗತಿಶೀಲ ಮತ್ತು ನವ್ಯೋತ್ತರ ಸಾಹಿತ್ಯಗಳಲ್ಲಿ ಗದ್ಯ ಕೃತಿಗಳೇ ಹೆಚ್ಚಾಗಿ ರಚನೆಗೊಂಡಿದ್ದರಿಂದ ವಿಮರ್ಶೆಯಲ್ಲಿಯೂ ಈ ಲಕ್ಷಣಗಳನ್ನು ನಾವು ಕಾಣಬಹುದಾಗಿದ್ದು, ನವ್ಯೋತ್ತರ ವಿಮರ್ಶೆಯು ಸಾಮಾನ್ಯವಾಗಿ ಗದ್ಯ ಪ್ರಕಾರವನ್ನೆ ಹೆಚ್ಚಾಗಿ ವಿಮರ್ಶಿಸಲು ಆಯ್ಕೆ ಮಾಡಿಕೊಂಡಿರುವುದನ್ನು ನಾವು ಗಮನಿಸಬಹುದು.

ವಾಸ್ತವವಾಗಿ ಕನ್ನಡ ಸಾಹಿತ್ಯ ವಿಮರ್ಶೆಯು ಸಾಹಿತ್ಯ ಪ್ರಕಾರಗಳನ್ನು ಮುಖ್ಯವಾಗಿಟ್ಟುಕೊಂಡು ನಡೆಸಿದ ವಿಮರ್ಶೆಯಲ್ಲಿಯೂ ವಿವಿಧ ರೀತಿಯ ಐಡಿಯಾಲಜಿಗಳು, ಪ್ರಾದೇಶಿಕತೆ, ಜಾತಿ ಮತ್ತು ಲಿಂಗಾಧಾರಿತ ಯೋಚನೆಗಳ ಹಿನ್ನೆಲೆಯಲ್ಲಿ ಒಟ್ಟು ಕನ್ನಡ ವಿಮರ್ಶೆಯ ಸ್ವರೂಪ ರೂಪುತಳೆದಿದೆ. ಅದರಲ್ಲೂ ಹೊಸ ಶತಮಾನದ ಕನ್ನಡ ವಿಮರ್ಶೆ ಒಂದು ಚೌಕಟ್ಟಿಗೆ ಸಿಗದೆ ವಿಭಿನ್ನವಾಗಿ ರೂಪುಗೊಳ್ಳುತ್ತಿದೆ. ವಿಮರ್ಶೆಯ ಮೇಲೆ ಸಾಹಿತ್ಯ ಪ್ರಕಾರಗಳು ಉಂಟುಮಾಡುವ ಪ್ರಭಾವ ಮತ್ತು ಪ್ರೇರಣೆಗಳ ಬಗ್ಗೆ "ನವೋದಯ ಕಾಲದಲ್ಲಿ ಸಾಹಿತ್ಯ ವಿಮರ್ಶೆ ಬರೆದವರೆಲ್ಲ ಸಾಮಾನ್ಯವಾಗಿ ಕವಿಗಳಾದ್ದರಿಂದ, ಕಾವ್ಯ ದೃಷ್ಟಿಯ ಪ್ರಕ್ರಿಯೆಯಲ್ಲಿ ವಿಮರ್ಶೆಯ ಅಂಶ ಸೇರಿದ್ದು, ಕಾವ್ಯ ಸೃಷ್ಟಿಯಾಗುತ್ತಿರುವಾಗಲೂ ವಿಮರ್ಶಾ ಪ್ರಜ್ಞೆ ಎಚ್ಚೆತ್ತಿರುತ್ತದೆ"[3] ಎನ್ನುತ್ತಾರೆ. ಅಂದರೆ ಸೃಜನಶೀಲ ಸಾಹಿತಿಗಳು ಬರೆಯುವ ಪ್ರಕಾರ ವಿಮರ್ಶೆಗೂ, ಕೇವಲ ವಿಮರ್ಶೆಯನ್ನಷ್ಟೆ ರಚಿಸುವ ಲೇಖಕ ಬರೆಯುವ ಪ್ರಕಾರ ವಿಮರ್ಶೆಗೂ ವ್ಯತ್ಯಾಸವಿರುತ್ತದೆ. ಈ ಎಲ್ಲಾ ಕಾರಣಗಳಿಂದ, ಕಳೆದ ದಶಕದಲ್ಲಿ ಕನ್ನಡದಲ್ಲಿ ಕಾಣಿಸಿಕೊಂಡಿರುವ ಪ್ರಕಾರ ವಿಮರ್ಶೆಯನ್ನು ಈ ಕೆಳಗಿನಂತೆ ವಿಂಗಡಿಸಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಕಾವ್ಯ ಕೇಂದ್ರಿತ ವಿಮರ್ಶೆ

ಪ್ರಾಚೀನ ಕಾವ್ಯ ಕೇಂದ್ರಿತ ವಿಮರ್ಶೆ

ಸಾಹಿತ್ಯ ಪರಂಪರೆ ವಿಸ್ತಾರಗೊಂಡಂತೆ ವಿಮರ್ಶಕ ಎದುರುಗೊಳ್ಳುವ ಸಾಹಿತ್ಯದ ಪ್ರಮಾಣ ಕೂಡಾ ಹೆಚ್ಚಾಗುತ್ತದೆ. ಹಾಗೆಯೇ ಆತ ವಿಮರ್ಶಾ ಮಾನದಂಡಗಳನ್ನು ನಿರ್ಮಿಸಿಕೊಳ್ಳಲು ಒಂದು ನಿರ್ದಿಷ್ಟ ಸಾಹಿತ್ಯ ಪರಂಪರೆ ಪ್ರೇರಣೆ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ವಿಮರ್ಶಕನು ತನ್ನ ಪರಂಪರೆಗೆ ಪ್ರತಿಕ್ರಿಯಿಸಿಯೆ ಮುಂದಡಿಯಿಡುವುದು ಸಹಜ. ಆದ್ದರಿಂದ ಕಳೆದ ಶತಮಾನದ ಕನ್ನಡ ವಿಮರ್ಶೆ ಕೂಡಾ ತನ್ನ ಪ್ರಾಚೀನ ಕಾವ್ಯಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸಿದೆ ಮತ್ತು ಹೊಸ ತಿಳಿವಿನಲ್ಲಿ ಪರಂಪರೆಯನ್ನು ಪುನರ್ ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಕಳೆದ ಶತಮಾನದಲ್ಲಿ ಹಳಗನ್ನಡ ಮತ್ತು ನಡುಗನ್ನಡ ಕೃತಿಗಳ ಸಂಪಾದನೆ, ಮರು ಸಂಪಾದನೆ ಮತ್ತು ಅಧ್ಯಯನ ನಡೆದಿದ್ದರೆ, ಈ ಶತಮಾನದಲ್ಲಿ ಅವುಗಳ ದೀಪಿಕೆಗಳು, ಸರಳ ಗದ್ಯಾನುವಾದಗಳು, ಆಯ್ದ ಭಾಗಗಳು ವಾಚಿಕೆಯ ರೂಪದಲ್ಲಿ ಪ್ರಕಟವಾಗುತ್ತಿವೆ. ಜೊತೆಗೆ ಆಧುನಿಕ ಜ್ಞಾನಮಾರ್ಗಗಳನ್ನು ಬಳಸಿಕೊಂಡು ವಿವಿಧ ರೀತಿಯಲ್ಲಿ ಅವುಗಳನ್ನು ಅಧ್ಯಯನ ಮಾಡಲಾಗುತ್ತಿದೆ. ಕನ್ನಡ ವಿಶ್ವವಿದ್ಯಾಲಯದಿಂದ ಸಾಂಸ್ಕೃತಿಕ ಮುಖಾಮುಖಿ ಮಾಲೆಯಲ್ಲಿ ಬಂದ ವಡ್ಡಾರಾಧನೆ, ನಯಸೇನನ ಧರ್ಮಾಮೃತ, ಜೈಮಿನಿ ಭಾರತ, ವಚನಕಾರರ ಮೇಲಿನ ಅಧ್ಯಯನಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಸಾಹಿತ್ಯ ಪರಂಪರೆ ವಿಸ್ತಾರಗೊಂಡಂತೆ ವಿಮರ್ಶಕನಿಗೆ ಲಭ್ಯವಾಗುವ ಸಾಹಿತ್ಯದ ಪ್ರಮಾಣ ಕೂಡಾ ಹೆಚ್ಚಾಗುತ್ತದೆ. ಆದ್ದರಿಂದ ಆತ ವಿಮರ್ಶಾ ಮಾನದಂಡಗಳನ್ನು ರೂಪಿಸಿಕೊಳ್ಳಲು ಇಂತಹ ಒಂದು ನಿರ್ದಿಷ್ಟ ಸಾಹಿತ್ಯ ಪರಂಪರೆ ಪ್ರಚೋದನೆ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ವಿಮರ್ಶಕನೂ ತನ್ನ ಪರಂಪರೆಗೆ ಪ್ರತಿಕ್ರಿಯಿಸಿಯೇ ಮುಂದುವರೆಯುತ್ತಾನೆ. ಆದ್ದರಿಂದ ಕಳೆದ ದಶಕದ ವಿಮರ್ಶೆ ತನ್ನ ಪ್ರಾಚೀನ ಕಾವ್ಯ ಸಮೂಹಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸುವ ಮೂಲಕ ಹೊಸ ತಿಳುವಳಿಕೆಯಲ್ಲಿ ಪರಂಪರೆಯನ್ನು ಪುನರ್ ರೂಪಿಸಿಕೊಳ್ಳಲು ಯತ್ನಿಸುತ್ತಿದೆ.

ಪ್ರಾಚೀನ ಕನ್ನಡ ಸಾಹಿತ್ಯವನ್ನು ಹೊಸತಲೆಮಾರಿನ ಸಾಹಿತಿಗಳು ಮತ್ತು ಓದುಗರು ಸರಿಯಾಗಿ ಗ್ರಹಿಸುತ್ತಿಲ್ಲ ಎಂಬ ಆಪಾದನೆಯಿದೆ. ಅದರಲ್ಲೂ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಬಂದ ಮೇಲೆ ಈ ದೂರು ಇನ್ನು ಹೆಚ್ಚಾಗಿದೆ. ಆದರೆ ಇದು ಪೂರ್ಣ ಸತ್ಯವಲ್ಲ. ಪ್ರಾಚೀನ ಕನ್ನಡ ಸಾಹಿತ್ಯವನ್ನು ಹಳೆಯ ನುಡಿಗಟ್ಟುಗಳಲ್ಲಿ ನಿರರ್ಗಳವಾಗಿ ಓದಿ ಸಾಮಾನ್ಯ ಅರ್ಥ ಹೇಳಬೇಕೆಂಬ ನಿರೀಕ್ಷೆ ಇಂತಹ ಕಡೆ ಕಂಡುಬರುತ್ತದೆ. ಇನ್ನೂ ಸ್ಪಷ್ಟಪಡಿಸುವುದಾದರೆ ಆರಂಭದಲ್ಲಿ ಹಳಗನ್ನಡವನ್ನು ಓದಿ ಅರ್ಥೈಸುವ ಪಂಡಿತ

ಪರಂಪರೆಯ ಜನ ಹೆಚ್ಚಾಗಿದ್ದರು. ಆದರೆ ಸದ್ಯ ಹಳಗನ್ನಡ ಸಾಹಿತ್ಯವನ್ನು ಆ ನೆಲೆಯಲ್ಲಿ ಓದಿ ಅರ್ಥೈಸುವವರು ಸಮಕಾಲೀನ ಸಂದರ್ಭದಲ್ಲಿ ಬಹು ವಿರಳ ಎಂಬುದು ಒಂದು ಆಪಾದನೆ. ಆದರೆ ಹಳಗನ್ನಡ ಸಾಹಿತ್ಯಕ್ಕೆ ಸಿಗುತ್ತಿರುವ ವಿಮರ್ಶೆಯ ಹಿನ್ನೆಲೆಯಲ್ಲಿ ಈ ಅಭಿಪ್ರಾಯವನ್ನು ಪರಿಶೀಲಿಸುವುದಾದರೆ ಪ್ರಾಚೀನ ಕನ್ನಡ ಸಾಹಿತ್ಯದ ಪಂಪ, ರನ್ನ, ಜನ್ನ, ವಚನಕಾರರು, ಕುಮಾರವ್ಯಾಸ ಮೊದಲಾದವರು ಹಿಂದೆಂದಿಗಿಂತಲೂ ಇಂದು ಹೆಚ್ಚು ಚರ್ಚೆಗೆ ಮೌಲ್ಯಮಾಪನಕ್ಕೆ ಒಳಗಾಗುತ್ತಿದ್ದಾರೆ.

"ಒಂದು ರೀತಿಯಲ್ಲಿ ಕಳೆದ ೧೦ ವರ್ಷಗಳ ಸಾಹಿತ್ಯ ವಿಮರ್ಶೆ ಕಳೆದ ೬೦ ವರ್ಷಗಳ ಸಾಹಿತ್ಯ ವಿಮರ್ಶೆಯ ಒಂದು ವೈವಿಧ್ಯಮಯ ಮತ್ತು ಗುಣಾತ್ಮಕ ವಿಸ್ತರಣೆ ಅನ್ನೋ ತರಹ ಕಾಣುತ್ತದೆ. ಈ ಸಾಹಿತ್ಯ ವಿಮರ್ಶೆ ಪುಸ್ತಕಗಳನ್ನು ಸುಮ್ಮನೆ ಕುತೂಹಲಕ್ಕಾಗಿ ಯಾವ ವಿಷಯಗಳ ಬಗ್ಗೆ ಸಂಬಂಧಪಟ್ಟಂತೆ ಈ ವಿಮರ್ಶೆ ಬಂದಿದೆ ಅಂತ ನೋಡಿದಾಗ, ಒಂದು ಕುತೂಹಲಕಾರಿ ಅಂಶವನ್ನು ನಾನು ಗಮನಿಸಿದೆ. ಅಂಕಿ ಅಂಶದ ನೋಟ ಅಂತಾನೆ ಹೇಳಬಹುದು. ಈ ಸಾಹಿತ್ಯ ವಿಮರ್ಶೆ ತನ್ನ ಗಮನವನ್ನು ಬಹಳ ಕೇಂದ್ರೀಕರಿಸಿರುವುದು ಯಾತಕ್ಕೋ, ತನ್ನ ಇಂದಿನ ಸಾಹಿತ್ಯದ ಬಗ್ಗೆ ವಿಶೇಷವಾಗಿ ಸ್ವಲ್ಪ ಸುಮಾರಾದ ಅಂಕಿ ಅಂಶಗಳ ಲೆಕ್ಕದಲ್ಲೇ ಹೇಳೋದಾದರೆ ಶೇಕಡ ೪೦ ರಷ್ಟು ಬರೀ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೇನೇ ಬಂದಿದೆ. ಇತ್ತೀಚಿನ ಹೊಸಬರು ಕೂಡ ಇದರ ಬಗ್ಗೆ ಬರಿತಾಇದ್ದಾರೆ. ಪಂಪ, ರನ್ನ, ಕುಮಾರವ್ಯಾಸ, ರಾಘವಾಂಕ, ಹರಿಹರ, ವಚನಕಾರರು, ದಾಸ ಸಾಹಿತ್ಯ, ಜನಪದಕ್ಕೆ ಬಂದರೆ ತತ್ವಪದಗಳ ಸಾಹಿತ್ಯ ಶಿಶುನಾಳಷರೀಫರು ಇವರ ಬಗ್ಗೆ ಗಣನೀಯವಾದ ವಿಮರ್ಶೆ ಬಂದಿದೆ."[೬] ಈ ಮೇಲಿನ ಅಭಿಪ್ರಾಯ ಸಮಕಾಲೀನ ವಿಮರ್ಶೆ ಪ್ರಾಚೀನ ಕನ್ನಡ ಸಾಹಿತ್ಯವನ್ನು ಎಷ್ಟರಮಟ್ಟಿಗೆ ಎದುರುಗೊಳ್ಳುತ್ತದೆ ಎಂಬುದನ್ನು ತೋರುತ್ತದೆ.

ಇನ್ನು ವಿಮರ್ಶೆಯು ಪ್ರಾಚೀನ ಕಾವ್ಯ ಪರಂಪರೆಯನ್ನು ಹೇಗೆ ಗ್ರಹಿಸುತ್ತದೆ ಎಂಬ ಹಿನ್ನೆಲೆಯನ್ನು ನೋಡುವುದಾದರೆ, ಡಿ. ಎಲ್. ಎನ್., ಬಿ. ಎಸ್. ಸಣ್ಣಯ್ಯ ಮೊದಲಾದ ಪಂಡಿತರಂತೆ ಹಳಗನ್ನಡವನ್ನು ತಪ್ಪಿಲ್ಲದಂತೆ ಓದಿ ಹೊಸಗನ್ನಡದಲ್ಲಿ ಅರ್ಥ ಹೇಳುವ ಕುಶಲತೆಯನ್ನು ಇವರಲ್ಲಿ ನಾವು ಕಾಣಲಾಗದು. ಬದಲಿಗೆ ಹಳಗನ್ನಡ ಸಾಹಿತ್ಯವನ್ನು ಸಮಕಾಲೀನ ಒತ್ತಡದ ಹಿನ್ನೆಲೆಯಲ್ಲಿ ಅನುಸಂಧಾನ ಮಾಡುವ ದೃಷ್ಟಿಕೋನ ಕಂಡು ಬರುತ್ತದೆ. ಉದಾಹರಣೆಗೆ ಡಾ. ಕೆ. ವೈ. ನಾರಾಯಣಸ್ವಾಮಿ ಅವರು ಪಂಪಭಾರತವನ್ನು ಆಧುನಿಕ ಸಂವೇದನೆಯ ನಾಟಕ ರೂಪಕ್ಕೆ ಅಳವಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಇದೊಂದು ಸೃಜನಶೀಲ ರೂಪಾಂತರ ಎನಿಸಿದರೂ ಇಂಥಲ್ಲೂ ಕೂಡಾ ವಿಮರ್ಶಾತ್ಮಕತೆ ಕೆಲಸ ಮಾಡಿರುತ್ತದೆಂಬುದನ್ನು ನಾವು ಊಹಿಸಬಹುದು.

ಆರಂಭದ ಹಳೆಗನ್ನಡ ಅಧ್ಯಯನದಲ್ಲಿ ಕೃತಿಯ ವಸ್ತುವಿನ ಬಗ್ಗೆ, ಅದರ ಹಿನ್ನೆಲೆ, ಶೈಲಿ ಮೊದಲಾದವುಗಳ ಬಗ್ಗೆಯೇ ಹೆಚ್ಚು ಗಮನ ನೀಡಿವೆ. ಆದರೆ ಇತ್ತೀಚಿನ ವಿಮರ್ಶೆ ಭಾಷೆಯ ಜೊತೆಗೆ ಭಾಷೆಗಿಂತ ಮುಖ್ಯವಾಗಿ ಕೃತಿಯ ವಸ್ತುವಿಗೂ, ಅದರ ನಿರ್ವಹಣೆ

ಮತ್ತು ಬೆಳವಣಿಗೆ ಬಗ್ಗೆಯೂ ಹೆಚ್ಚು ಕುತೂಹಲದಿಂದ ನೋಡುತ್ತದೆ. ಉದಾಹರಣೆಗೆ ಹಳಗನ್ನಡ ಸಾಹಿತ್ಯವನ್ನು ನಿರ್ವಚಿಸುವುದರಲ್ಲಿ ಬಹುಮುಖ್ಯರೆನಿಸಿರುವ ಡಾ. ಎಂ. ಚಿದಾನಂದಮೂರ್ತಿಯವರು ಹಳಗನ್ನಡ ಸಾಹಿತ್ಯವನ್ನು ಇಂದು ಪ್ರತಿಪಾದಿಸುತ್ತಿರುವ ನೆಲೆಗೂ, ಮಹಿಳಾ ಲೇಖಕಿಯರು ಹಳಗನ್ನಡ ಸಾಹಿತ್ಯವನ್ನು ಸಮಕಾಲೀನ ಹಿನ್ನೆಲೆಯಲ್ಲಿ ನಿರ್ವಹಿಸುತ್ತಿರುವ ಹಿನ್ನೆಲೆಗೂ ಇರುವ ವ್ಯತ್ಯಾಸಗಳನ್ನು ಗಮನಿಸಿದರೆ ಇವತ್ತಿನ ವಿಮರ್ಶೆ ನಮ್ಮ ಹಳಗನ್ನಡ ಸಾಹಿತ್ಯವನ್ನು ಗ್ರಹಿಸುತ್ತಿರುವ ರೀತಿ–ನೀತಿಗಳು ಗೊತ್ತಾಗುತ್ತದೆ.

ಕಳೆದ ಶತಮಾನದಲ್ಲಿ ಹಳಗನ್ನಡ ಮತ್ತು ನಡುಗನ್ನಡ ಕೃತಿಗಳ ಸಂಪಾದನೆ, ಮರುಸಂಪಾದನೆ ಮತ್ತು ಅಧ್ಯಯನಗಳು ಹೆಚ್ಚಾಗಿ ನಡೆದಿದ್ದರೆ, ಈ ಶತಮಾನದಲ್ಲಿ ಆ ಕೃತಿಗಳ ವಿಭಿನ್ನ ವಾಚಿಕೆಗಳು ಅಂದರೆ ದೀಪಿಕೆಗಳು, ಸರಳ ಅನುವಾದಗಳು, ಗದ್ಯಾನುವಾದಗಳು, ಆಯ್ದ ಭಾಗಗಳ ವಾಚಿಕೆಗಳು ಪ್ರಕಟಗೊಳ್ಳುತ್ತಿವೆ. ಜೊತೆಗೆ ಆಧುನಿಕ ಜ್ಞಾನಮಾರ್ಗಗಳನ್ನು ಬಳಸಿಕೊಂಡು ವಿವಿಧ ರೀತಿಯಲ್ಲಿ ಅವುಗಳ ಅಧ್ಯಯನ ಮಾಡಲಾಗುತ್ತಿದೆ. ಉದಾಹರಣೆಗೆ ಬಿ. ಎನ್. ಸುಮಿತ್ರಾಬಾಯಿ ಅವರ 'ಪಂಪನ ಆದಿಪುರಾಣದಲ್ಲಿ ಸ್ತ್ರೀ ಪ್ರಪಂಚದ ಬಳಕೆ' ಲೇಖನ, ಎಂ. ಎಸ್. ಆಶಾದೇವಿಯವರ 'ನಡುವೆ ಸುಳಿವ ಆತ್ಮ', ತಾರಿಣಿ ಶುಭದಾಯಿನಿಯವರ 'ದಾಸ ಸಾಹಿತ್ಯ' ಕುರಿತ ಲೇಖನಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಇವರ ವಿಶ್ಲೇಷಣೆಯಲ್ಲಿ ಸಾಂಪ್ರದಾಯಿಕ ಶೈಲಿಯ ನೋಟಗಳಿಗಿಂತ ಆ ಕಾಲದಲ್ಲಿ ಮಹಿಳೆಯರ ಅಸ್ಮಿತೆ ಬಗ್ಗೆ ಪುರುಷ ಸಂವೇದನೆ ಹೇಗೆ ಗ್ರಹಿಸುತ್ತಿತ್ತು ಎಂಬುದರ ಚರ್ಚೆಯನ್ನು ಕಾಣಬಹುದು.

ಕಳೆದ ದಶಕದಲ್ಲಿ ಪ್ರಾಚೀನ ಕಾವ್ಯವನ್ನು ಕುರಿತು ಬಂದ ಮುಖ್ಯ ಕೃತಿಗಳನ್ನು ಈ ರೀತಿ ಸಂಗ್ರಹಿಸಬಹುದು.

೧. ಕೆ. ವಿ. ಸುಬ್ಬಣ್ಣನವರ ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು.

೨. ಡಾ. ಎಂ. ಎಸ್. ಶೇಖರ್ ಅವರ ಕನ್ನಡ ಸಾಹಿತ್ಯ ಪರಂಪರೆ ಮತ್ತು ಮಹಿಳಾ ಪರ ಕಾಳಜಿಗಳು

೩. ಸಿ. ವೀರಣ್ಣನವರ ಕನ್ನಡ ಸಾಹಿತ್ಯ – ಚಾರಿತ್ರಿಕ ಬೆಳವಣಿಗೆ,

೪. ಸುರೇಶ ನಾಗಲಮಡಿಕೆಯವರ 'ಮುತ್ತು ಬಂದಿದೆ ಕೇರಿಗೆ'

೫. ಎಸ್. ಚಂದ್ರಕಿರಣ ಅವರ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮಾನವೀಯ ಮೌಲ್ಯಗಳು,

೬. ಲಕ್ಷ್ಮಣ ತೆಲಗಿಯವರ 'ಮದ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು; ಒಂದು ಚಾರಿತ್ರಿಕ ಅಧ್ಯಯನ,

೭. ಜ್ಯೋತಿ ಪಾಟೀಲರ ಅಕ್ಕಮಹಾದೇವಿ ವಚನಗಳಲ್ಲಿ ಪ್ರತಿಮಾ ವಿಧಾನ,

೮. ವೃಷಭೇಂದ್ರಾಚಾರ್ ಅವರ ಸರ್ವಜ್ಞನ ವಚನಗಳು; ಜಾನಪದೀಯ ಅಧ್ಯಯನ,

೯. ಬಿ. ಜಿ. ಹರೀಶರ ದೇವಚಂದ್ರನ ರಾಜಾವಳಿ ಕಥಾಸಾರ; ಸಾಹಿತ್ಯಿಕ ಮತ್ತು ಐತಿಹಾಸಿಕ ಅಧ್ಯಯನ,

೧೦. ಎಚ್. ಎನ್. ಮುರುಳೀಧರ ಅವರ ಪುರಂದರದಾಸರ ಕೃತಿಗಳು ಛಂದಸ್ಸು ಮತ್ತು ಶೈಲಿಗಳ ಅಧ್ಯಯನ,

೧೧. ಜಿ. ನಾರಾಯಣ ಸ್ವಾಮಿಯವರ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ ಒಂದು ಅಧ್ಯಯನ,

೧೨. ಕೆ. ಎಚ್. ಸರಸ್ವತಿಯವರ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಪ್ರಕೃತಿ ವರ್ಣನೆ,

೧೩. ವಿದ್ಯಾವತಿ ಬಿ. ಪಾಟೀಲರ ವಚನ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು,

೧೪. ಕೆ. ನಾಗಭೂಷಣರವಚನಕಾರರ ಶಬ್ಧ ಮತ್ತು ಅರ್ಥ ಮೀಮಾಂಸೆ,

೧೫. ಆರ್. ಮಾಲಿನಿಯವರ ಹರಿದಾಸ ಸಾಹಿತ್ಯದ ಕಾವ್ಯ ಸ್ವರೂಪ,

೧೬. ಎಚ್. ಹನುಮಂತರಾಯಪ್ಪನವರ ಪ್ರಾಚೀನ ಕನ್ನಡ ಕಾವ್ಯದಲ್ಲಿ ಧರ್ಮ ಮತ್ತು ಕಾವ್ಯಧರ್ಮ

೧೭. ಜೆ. ರೋಜಾ ಅವರ ಕನ್ನಡ ದಾಸ ಸಾಹಿತ್ಯ ಮತ್ತು ಸಾಂಸ್ಕೃತಿಕ ಪಲ್ಲಟ,

೧೮. ಕೆ. ಎಸ್. ನಳಿನಿಯವರ ರನ್ನನ ಮೇಲೆ ಪಂಪನ ಪ್ರಭಾವ–ಒಂದು ಅಧ್ಯಯನ,

೧೯. ಎ. ಡಿ. ಬಾಗಲಕೋಟೆಯವರ ಪ್ರಭುಲಿಂಗಲೀಲೆ; ಒಂದು ಅಧ್ಯಯನ,

೨೦. ಹಂಪಿಯ ಕನ್ನಡ ವಿವಿಯಿಂದ ಹೊರತಂದಿರುವ ಸಾಂಸ್ಕೃತಿಕ ಮುಖಾಮುಖಿಗಳು

ಹೀಗೆ ಕಳೆದ ದಶಕದಲ್ಲಿ ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯದ ಮೇಲೆ ಹಲವಾರು ಅಧ್ಯಯನಗಳು ನಡೆದಿವೆ. ಇವೆಲ್ಲವುಗಳನ್ನು ವಿಮರ್ಶೆ ಎಂದು ಕರೆಯಬಹುದೇ ಎಂದರೆ ನಿಸ್ಸಂಶಯವಾಗಿ ಇವು ವಿಮರ್ಶಾತ್ಮಕ ಅಧ್ಯಯನಗಳೇ. ಇಂದು ಹೇಗೆ ಸಾಹಿತ್ಯದಲ್ಲಿ ಪ್ರಕಾರಗಳೇ ಕಲಸಿಕೊಂಡು ಸಂಕರಗೊಳ್ಳುತ್ತಿವೆಯೋ ಹಾಗೆಯೇ ಸಾಹಿತ್ಯ ಸಂಶೋಧನೆಯಲ್ಲಿ ವಿಮರ್ಶೆ, ವಿಚಾರ ಚಿಂತನೆ, ತತ್ವಶಾಸ್ತ್ರ ಚಿಂತನೆಗಳು ಕಾಣಿಸಿಕೊಳ್ಳುತ್ತಿವೆ. ಹಾಗೆಯೇ ವಿಮರ್ಶೆಯಲ್ಲಿ ಅನುವಾದ, ಸಂಪಾದನೆ, ವಿಚಾರ ಚಿಂತನೆಗಳು ಕಾಣಿಸಿಕೊಳ್ಳುತ್ತಿವೆ. ಸಂಶೋಧನೆ – ವಿಮರ್ಶೆ ಎರಡೂ ಕ್ರಮೇಣ ಏಕಾಕಾರಗಳನ್ನು ಪಡೆದುಕೊಳ್ಳುತ್ತಿವೆ. ಪಂಪನ ಕುರಿತ ಸಂಶೋಧನೆ ಪಂಪನ ಕೃತಿಗಳ ವಿಮರ್ಶೆಯು ಹೇಗಾಗುತ್ತದೋ ಹಾಗೆ. ಉದಾಹರಣೆಗೆ ಕನ್ನಡ ಹಿರಿಯ ವಿಮರ್ಶಕರಾದ ಡಾ.ಜಿ. ಎಸ್. ಅಮೂರ ಅವರು, ಗಿರೀಶ್ ಕಾರ್ನಾಡರ 'ಮಾನಿಷಾದ'ದಿಂದ ಹಿಡಿದು 'ಮದುವೆ ಆಲ್ಬಮ್ ವರೆಗಿನ ಹನ್ನೆರಡು ನಾಟಕಗಳ ಅಧ್ಯಯನವನ್ನು ತಮ್ಮ 'ಗಿರೀಶ್

ಕಾರ್ನಾಡ ಹಾಗೂ ಭಾರತೀಯ ರಂಗಭೂಮಿ' ಎಂಬ ಕೃತಿಯಲ್ಲಿ ವಿಮರ್ಶಾತ್ಮಕ ಅಧ್ಯಯನಗಳು ಎಂದು ಕರೆದುಕೊಂಡು ಹಾಗೆಯೆ ತಮ್ಮ ಅಧ್ಯಯನ ರೂಪಿಸಿಕೊಂಡಿದ್ದಾರೆ.

ಒಟ್ಟಿನಲ್ಲಿ ಕಳೆದ ದಶಕದಲ್ಲಿ ಕನ್ನಡ ವಿಮರ್ಶೆ ತನ್ನ ಪ್ರಾಚೀನ ಪರಂಪರೆಯ ಸೃಜನಶೀಲ ಸಾಹಿತ್ಯಕ್ಕೆ ತೀವ್ರವಾಗಿ ಸ್ಪಂದಿಸಿದೆ ಎಂಬುದು ನಿಜವಾದರೂ ಆಧುನಿಕ ತಿಳುವಳಿಕೆಯಲ್ಲಿ ಆಧುನಿಕ ಪೂರ್ವ ಸಾಹಿತ್ಯವನ್ನು ಕಂಡುಕೊಂಡಂತೆ ಇಪ್ಪತ್ತೊಂದನೇ ಶತಮಾನದ ಹೊಸ ತಿಳುವಳಿಕೆಯಲ್ಲಿ ಹಳಗನ್ನಡ ಸಾಹಿತ್ಯವನ್ನು ಗ್ರಹಿಸುವಾಗ ಬಹು ಗಂಭೀರವಾದ ಬದಲಾವಣೆಗಳಿಗೆ ತೆರೆದುಕೊಳ್ಳಲಾಗಿದೆ. "ಇವತ್ತು ಸಾಹಿತ್ಯ ಅಧ್ಯಯನ ಎಂಬುದು ಕೇವಲ ಶುದ್ದ ಸಾಹಿತ್ಯಿಕ ಮಾನದಂಡಗಳ ಮೂಲಕ ನಡೆಯುತ್ತಿಲ್ಲ. ಸಾಹಿತ್ಯದ ರಚನೆ, ಅದರ ಸಂವಹನ, ಅದರ ಓದು, ಅದರ ಪ್ರಕಾರ ಪಲ್ಲಟ ಹಾಗೂ ಅಧ್ಯಯನ ಬಹಳ ವಿಸ್ತಾರ ಮತ್ತು ಸಂಕೀರ್ಣವಾಗಿದೆ. ಈ ವಿಸ್ತಾರ ಮತ್ತು ಸಂಕೀರ್ಣತೆಯ ಸ್ವರೂಪವನ್ನು ಸಮಾಜದ ವಿವಿಧ ವರ್ಗ ಹಿತಾಸಕ್ತಿಗಳು ತಮ್ಮ ದೃಢ ಧೋರಣೆಗೆ ಅನುಗುಣವಾಗಿ ಬಳಸಿಕೊಳ್ಳುತ್ತಿವೆ ಹಾಗೂ ವ್ಯಾಖ್ಯಾನಿಸುತ್ತಿವೆ."[೫] ಎಂಬ ಅಭಿಪ್ರಾಯದಲ್ಲಿ ಇಪ್ಪತ್ತೊಂದನೆ ಶತಮಾನದ ವಿಮರ್ಶೆ ಹಳಗನ್ನಡವನ್ನು ಹೇಗೆ ಎದುರುಗೊಳ್ಳುತ್ತಿದೆ ಎಂಬುದು ತಿಳಿಯುತ್ತದೆ.

ಮೊದಲಿನಂತೆ ಇಂದು ಸಾಹಿತ್ಯವನ್ನು ಕೇವಲ ಆಸ್ವಾದನೆಗಾಗಿ ಅಧ್ಯಯನ ಮಾಡುತ್ತಿಲ್ಲ. ಬದಲಿಗೆ ಸಾಹಿತ್ಯ ಅಧ್ಯಯನ ಎಂಬುದು ಸಾಮಾಜಿಕ ಅಧ್ಯಯನದ ಒಂದು ಭಾಗವಾಗಿದೆ. ಸಾಮಾಜಿಕ ಒತ್ತಡಗಳು ಹಾಗೂ ಸಾಹಿತ್ಯ ಅಧ್ಯಯನದ ಸಾಮಾಜಿಕ ಹೊಣೆಗಾರಿಕೆಯ ಪ್ರಶ್ನೆಗಳು ಇದು ಒಟ್ಟಾಗಿ ಕೆಲಸ ಮಾಡುತ್ತಿವೆ. ಆದ್ದರಿಂದಲೇ ಸಾಹಿತ್ಯದ ನಿರೂಪಣೆಗಿಂತ ಸಾಹಿತ್ಯದ ಆಶಯ ಇಂದು ಪ್ರಧಾನವಾಗಿ ಚರ್ಚೆಯಾಗುತ್ತಿದೆ.

ಈ ಹಿನ್ನೆಲೆಯನ್ನಿಟ್ಟುಕೊಂಡು ನೋಡಿದರೆ ಇಂದು ಹಳಗನ್ನಡ ಪಠ್ಯಗಳನ್ನು ಕೃತಿಕೇಂದ್ರಿತ ನೆಲೆಯಿಂದ ವಿಮರ್ಶಿಸಲಾಗುತ್ತಿದೆ. ಇದರ ಜೊತೆಗೆ ಕಾವ್ಯದ ಶೈಲಿ ಭಾಷೆ, ಕಥಾವಸ್ತು, ಪಾತ್ರಚಿತ್ರಣಗಳ ಮೂಲಕ ಕೃತಿಯ ಮೌಲ್ಯಮಾಪನಕ್ಕೆ ತೊಡಗುತ್ತಾರೆ. ಮೌಲ್ಯಮಾಪನಕ್ಕೆ ಪೂರಕವಾಗಿ ತೌಲನಿಕ ವಿಧಾನವನ್ನು ಅನುಸರಿಸುತ್ತಾರೆ. ಬಹುತೇಕ ಹಳಗನ್ನಡ ಕೃತಿಗಳು ಸಂಸ್ಕೃತದ ರೂಪಾಂತರಗಳೋ, ಭಾವಾನುವಾದಗಳೋ ಆಗಿರುವುದರಿಂದ ಅವುಗಳ ಅಧ್ಯಯನ ಸಂದರ್ಭದಲ್ಲಿ ಇದನ್ನು ಪ್ರಜ್ಞಾಪೂರ್ವಕವಾಗಿ ನಿರಾಕರಿಸುವುದನ್ನು ಕಾಣಬಹುದು. "ನಾನು ಜೈಮಿನಿ ಭಾರತವನ್ನು ಅದರ ಕಾಲ ದೇಶಗಳ ವಿಮರ್ಶೆಗೆ ಹೋಗದೆ ಅದು ಅನುವಾದ ಎಂಬುದನ್ನು ಮರೆತು (ಅಂದರೆ ಈ ಕಾವ್ಯದಲ್ಲಿ ಕಂಡು ಬರುವ ಘಟನೆಗಳಿಗೆ, ಅರ್ಥವೈಶಾಲ್ಯಕ್ಕೆ ಲಕ್ಷ್ಮೀಶನು ಎಷ್ಟು ಹೊಣೆ ಮತ್ತು ಜೈಮಿನಿ ಮುನಿಯ ಕಾಣಿಕೆ ಎಷ್ಟು ಎನ್ನುವ ವಿಮರ್ಶೆಗೆ ಹೋಗದೆ) ಕನ್ನಡ ಜೈಮಿನಿಯನ್ನು ಇಂದು ನಾವು ಓದಿದರೆ ನಮಗೆ ದೊರಕುವ ಅರ್ಥವೇನು?- ಕೃತಿ ಪ್ರತಿಪಾದಿಸುವ ಮೌಲ್ಯಗಳೇನು? ಎಂಬುದನ್ನು ಮಾತ್ರ ಚರ್ಚಿಸಿದ್ದೇನೆ."[೬] ಹೀಗೆ ಪಠ್ಯಗಳ ಹಿನ್ನೆಲೆಯನ್ನು

ಪ್ರಜ್ಞಾಪೂರ್ವಕವಾಗಿ ನಿವಾರಿಸಿಕೊಂಡು ಅವುಗಳ ಅಧ್ಯಯನ ನಡೆಸಲಾಗುತ್ತದೆ ಮತ್ತು ಇದುವರೆಗಿನ ವಿಮರ್ಶಾತ್ಮಕ ಅಧ್ಯಯನಗಳ ಮುಂದುವರಿಕೆಗೆ ಪ್ರಯತ್ನಿಸಲಾಗುತ್ತದೆ.

ಆದರೆ ಇಂತಹ ಅಧ್ಯಯನಗಳು ಶೈಕ್ಷಣಿಕ ಚಟುವಟಿಕೆಯ ಭಾಗವಾಗಿ ಮೂಡಿಬಂದಿದೆ ಎನ್ನಿಸುತ್ತದೆ. ಇದೆಲ್ಲವನ್ನು ಸಾಹಿತ್ಯ ಮೀಮಾಂಸೆ, ಸಂಸ್ಕೃತಿ ಮೀಮಾಂಸೆ, ಸಾಮಾಜಿಕ, ಚಾರಿತ್ರಿಕ ಅಧ್ಯಯನ ಕ್ಷೇತ್ರಗಳ ಜ್ಞಾನದ ಮುಂದುವರಿಕೆಯೋ, ಪ್ರಶ್ನೆಯೋ ಅಥವಾ ಬದಲಾವಣೆಗೆ ಕಾರಣವಾಗಬಲ್ಲ ಜ್ಞಾನವನ್ನು ಒದಗಿಸಬಲ್ಲ ಅಧ್ಯಯನಗಳೋ ಆಗಿರುವಂತೆ ಕಾಣುವುದಿಲ್ಲ. ಏಕೆಂದರೆ ಆರಂಭದಲ್ಲಿ ಕವಿಯ ಕೃತಿ, ಕಾಲ, ದೇಶ ಮೊದಲಾದವುಗಳ ಅಧ್ಯಯನದಲ್ಲಿ ವಿದ್ವಾಂಸರಿಂದ ವಿದ್ವಾಂಸರಿಗೆ ಒಂದು ಬೆಳವಣಿಗೆಯು ಗೋಚರಿಸುತ್ತಿತ್ತು. ಆದರೆ ಈಗ ಒಬ್ಬರ ಅಧ್ಯಯನವನ್ನು – ಚರ್ಚೆಯನ್ನು ಮುಂದುವರೆಸಿ ಇದನ್ನು ಜ್ಞಾನವನ್ನಾಗಿ ಪರಿವರ್ತಿಸಬಲ್ಲ ಸಾಮುದಾಯಿಕ ಪ್ರಯತ್ನವಿಲ್ಲ. ಪ್ರತಿ ಅಧ್ಯಯನದಲ್ಲಿಯೂ ಕೆಲವು ಉಪಯುಕ್ತ ಒಳನೋಟಗಳು ಕಾಣಿಸಿಕೊಳ್ಳುತ್ತವೆ; ಆದರೆ ಅದೊಂದು ಸುದೀರ್ಘ ಅಧ್ಯಯನ ಪರಂಪರೆಯಾಗಿ ರೂಪುಗೊಳ್ಳುತ್ತಿಲ್ಲದಿರುವುದು ಇವತ್ತಿನ ವಿಮರ್ಶೆಯ ದೊಡ್ಡ ಮಿತಿಯಾಗಿದೆ.

ಕಳೆದ ದಶಕದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ಕುರಿತ ವಿಮರ್ಶೆಯನ್ನು ರೂಪಿಸಿದ್ದರಲ್ಲಿ ಪಿಎಚ್. ಡಿ., ಎಂ. ಫಿಲ್. ಅಧ್ಯಯನಗಳದ್ದು ಒಂದು ಭಾಗವಾದರೆ, ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ರೂಪಿಸಿದ ವಿವಿಧ ಕೃತಿಗಳ ಸಾಂಸ್ಕೃತಿಕ ಮುಖಾಮುಖಿಗಳು ಹೊಸ ರೀತಿಯಲ್ಲಿ ಹಳೆಗನ್ನಡ ಸಾಹಿತ್ಯವನ್ನು ಎದುರುಗೊಳ್ಳಲು ನಮ್ಮನ್ನು ಪ್ರೇರೇಪಿಸಿವೆ. ೧೯೯೯ ರಿಂದ ಆರಂಭವಾಗಿರುವ ಈ ಯೋಜನೆಯಲ್ಲಿ ಇದುವರೆವಿಗೂ ಕವಿರಾಜಮಾರ್ಗ, ಆದಿಪುರಾಣ, ಹರಿಹರನ ರಗಳೆಗಳು, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭುದೇವರ ವಚನಗಳು, ಹರಿಶ್ಚಂದ್ರ ಚಾರಿತ್ರ, ಧರ್ಮಾಮೃತ, ಶೂನ್ಯಸಂಪಾದನೆಗಳು, ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಮೊದಲಾದ ಕೃತಿಗಳ ಸಾಂಸ್ಕೃತಿಕ ಮುಖಾಮುಖಿ ನಡೆಸಿದ್ದಾರೆ. ಬಹುತೇಕ ಮುಖಾಮುಖಿಗಳು ಸಂವಾದದ ರೂಪದಲ್ಲಿ ನಡೆದಿರುವುದರಿಂದ ಹೊಸ ಶತಮಾನ ತನ್ನ ಪಾರಂಪರಿಕ ಕೃತಿಗಳನ್ನು ಯಾವೆಲ್ಲಾ ನೆಲೆಗಳಿಂದ ಎದುರುಗೊಂಡಿದೆ ಎಂಬುದರ ಮಾಹಿತಿ ಲಭಿಸುತ್ತದೆ. ಇದುವರೆವಿಗೂ ಒಂದು ಕೃತಿ – ಕವಿಯನ್ನು ಕುರಿತು ಏಕವ್ಯಕ್ತಿ ನಡೆಸುತ್ತಿದ್ದ ವಿಮರ್ಶೆಗೂ ಅದೇ ಕೆಲಸವನ್ನು ಒಂದು ಸಮೂಹದಲ್ಲಿ ಚರ್ಚೆ ರೂಪದಲ್ಲಿ ನಡೆಸುವುದಕ್ಕೂ ಬಹಳಷ್ಟು ವ್ಯತ್ಯಾಸಗಳಿದ್ದು, ಇದರಿಂದ ಇದುವರೆಗಿನ ಪ್ರಾಚೀನ ಸಾಹಿತ್ಯ ಅಧ್ಯಯನಕ್ಕೆ ಹೊಸ ಹೊಸ ಒಳನೋಟಗಳು, ವಿವರಣೆಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿದೆ.

ಪ್ರಾಚೀನ ಕೃತಿಗಳ ಮುಖಾಮುಖಿಯಿಂದ ಅವುಗಳನ್ನು ತಲಸ್ಪರ್ಶಿಯಾಗಿ ಅರ್ಥಮಾಡಿಕೊಳ್ಳುವುದಲ್ಲದೆ "ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ

ಪ್ರತಿರೋಧವಾಗಿ ನಮ್ಮ ದೇಶಿ ಜ್ಞಾನ ಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಲು ಹಾಗೂ ಮತ್ತೊಮ್ಮೆ ಬಲಗೊಳ್ಳುತ್ತಿರುವ ವೈದಿಕಶಾಹಿಗಳ ವೈಭವೀಕರಣದಿಂದ ಆವರಿಸುತ್ತಿರುವ ವಿಸ್ಮೃತಿಯಿಂದ ಬಿಡುಗಡೆಗೊಳ್ಳುವ ಮೂಲಕ ಕನ್ನಡ ಸಂಸ್ಕೃತಿಯೊಂದನ್ನು ಪ್ರತಿಷ್ಠಾಪಿಸುವ ಮಹತ್ವಾಕಾಂಕ್ಷೆಯೊಂದಿಗೆ ಆರಂಭವಾಗಿರುವ"[2] ಈ ಯೋಜನೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನ–ವಿಶ್ಲೇಷಣೆ, ಮರು ನಿರೂಪಣೆಗಳನ್ನು ನಡೆಸುವ ಮೂಲಕ ಇಂದಿನ ಜಾಗತೀಕರಣದ ಬಿಕ್ಕಟ್ಟುಗಳನ್ನು ಮತ್ತು ಸ್ಥಳೀಯ ಕೋಮುವಾದಿ ಇಕ್ಕಟ್ಟುಗಳನ್ನು ಮೀರಲು ಪ್ರಾಚೀನರ ನಡೆ–ನುಡಿಗಳಲ್ಲಿ ಕೈ ಮಾರ್ಗಗಳಿವೆ ಎಂದು ಈ ಅಧ್ಯಯನಗಳು ಭಾವಿಸುತ್ತವೆ.

ಪಠ್ಯವನ್ನು ಇದುವರೆಗಿನ ಅಧ್ಯಯನ ಸಂಶೋಧನೆಗಳು ಹೇಗೆ ಗ್ರಹಿಸಿವೆ ಎಂಬುದನ್ನು ಪರಿಶೀಲಿಸಿ ಮುಂದುವರೆದು ಇನ್ನು ಯಾವ ಯಾವ ವಿಧಾನಗಳಿಂದ ಅವುಗಳನ್ನು ಎದುರುಗೊಳ್ಳಬಹುದೆಂದು ಇವು ಶೋಧಿಸುತ್ತವೆ. ಉದಾಹರಣೆಗೆ ಪಠ್ಯವೊಂದರ ಅಂತರ್ ಸಂಬಂಧಗಳು, ಅದರ ತಾತ್ವಿಕ ಸ್ವರೂಪ, ಕೃತಿಯ ಸ್ತ್ರೀವಾದಿ ಅಧ್ಯಯನ, ಸಾಮಾಜಿಕ ಅಧ್ಯಯನ, ಸಂಪತ್ತು ಮತ್ತು ಅಧಿಕಾರದ ಹಿನ್ನೆಲೆ, ದೇಶಿ ಸ್ವರೂಪದ ಹುಡುಕಾಟ, ಕಥನಕ್ರಮ, ಧಾರ್ಮಿಕ ಸ್ವರೂಪ ಮೊದಲಾದವುಗಳ ಹಿನ್ನೆಲೆಯಲ್ಲಿ ಅವುಗಳನ್ನು ಎದುರುಗೊಳ್ಳುತ್ತಾರೆ. ಅಂದರೆ ಕೃತಿಯೊಂದು ರಚನೆಗೊಂಡ ಕಾಲದ ಚೌಕಟ್ಟಿನಲ್ಲಿ ಅಧ್ಯಯನ ಮಾಡುವುದರ ಜೊತೆಗೆ ಇಂದಿನ ಸಕಲ ಸಾಮಾಜಿಕ ಸಂಕಟಗಳು ಒತ್ತಾಯಿಸುವ ಮತ್ತು ರೂಪಿಸುವ ಆಶಯ ಮತ್ತು ದೃಷ್ಟಿಕೋನಗಳ ಮೂಲಕ ಅಧ್ಯಯನ ನಡೆಸಲಾಗುತ್ತದೆ. ಸಾಹಿತ್ಯ ಕೃತಿಯೊಂದರ ಚಲನಶೀಲ ಸಂಕೀರ್ಣ ಸಾಂಸ್ಕೃತಿಕ ಜಗತ್ತು ಅಧ್ಯಯನಕಾರರ ದೃಷ್ಟಿಕೋನದ ಮೇಲೂ ಮತ್ತು ಅಧ್ಯಯನಕಾರರ ಸಮಕಾಲೀನ ಸಾಮಾಜಿಕ ದೃಷ್ಟಿಕೋನವು ಸಾಹಿತ್ಯ ಕೃತಿಯ ಸಾಂಸ್ಕೃತಿಕ ಜಗತ್ತಿನ ಮೇಲೂ ಪರಸ್ಪರ ಪ್ರಭಾವ ಬೀರುವ ಮೂಲಕ ಸಾಹಿತ್ಯದ ಓದು ಮತ್ತು ಅಧ್ಯಯನದಲ್ಲಿ ಜಡತೆಯನ್ನು ನೀಗಿ ಹೊಸಕಾಲದ ಅಗತ್ಯಗಳಿಗೆ ತಕ್ಕಂತೆ ಪಠ್ಯವನ್ನು ಗ್ರಹಿಸುವಲ್ಲಿ ಈ ಅಧ್ಯಯನಗಳು ನೆರವಾಗುತ್ತವೆ.

ಇನ್ನುಳಿದಂತೆ ಕಳೆದ ದಶಕದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ಅಧ್ಯಯನವನ್ನು ನಮ್ಮ ಹಳೆಯ ತಲೆಮಾರಿನ ಸಾಹಿತ್ಯ–ಸಂಶೋಧನೆಗಳ ಕೊಂಡಿಯಾಗಿರುವ ಎಮ್. ಎಮ್. ಕಲಬುರ್ಗಿ, ಎಲ್. ಬಸವರಾಜು, ಹಂಪನಾ ಮೊದಲಾದವರು ಮುಂದುವರೆಸಿದ್ದಾರೆ. ಕಲ್ಬುರ್ಗಿಯವರ ಮಾರ್ಗ ಸಂಪುಟಗಳು, ಪ್ರಮಾಣು, ಎಲ್. ಬಸವರಾಜು ಅವರ ಸೊನ್ನಲಪುರದ ಸಂತ ಸಿದ್ದರಾಮನ ನಿಜ ವಚನಗಳು, ಪ್ರಭುದೇವರ ಶೂನ್ಯ ಸಂಪಾದನೆ ಮತ್ತಿತರ ಕೃತಿಗಳು, ಹಂಪನಾ ಅವರ ಚಂದ್ರಕೊಡೆ ಕೃತಿಗಳು ಪ್ರಾಚೀನ ಕನ್ನಡ ಸಾಹಿತ್ಯವನ್ನು ವರ್ತಮಾನಕ್ಕೆ ಪ್ರಸ್ತುತ ಪಡಿಸುವ ಮತ್ತು ಪ್ರಸ್ತುತಗೊಳಿಸುವ ಎರಡೂ ರೀತಿಯ ಕೆಲಸಗಳನ್ನು ಮಾಡುತ್ತಿವೆ. ಇವರಲ್ಲಿ ಪ್ರಾಚೀನ ಸಾಹಿತ್ಯವನ್ನು ಇವತ್ತಿನವರೂ

ಸುಲಭವಾಗಿ ಓದಿ ಗ್ರಹಿಸುವಂತೆ ಮಾಡಲು ಎಲ್. ಬಸವರಾಜು ಅವರು ಶ್ರಮಿಸುತ್ತಿದ್ದರೆ, ಪ್ರಾಚೀನ ಸಾಹಿತ್ಯದ ಮೂಲ ಬಿಳಲುಗಳನ್ನು, ಅರ್ಥವಿಸ್ತಾರವನ್ನು ಪಠ್ಯಗಳ ಕರಾರುವಕ್ಕುತನವನ್ನು ಕಲ್ಬುರ್ಗಿ ಶೋಧಿಸುತ್ತಾರೆ. ಹಂಪನಾ ಅವರು ಮುಖ್ಯವಾಗಿ ಜೈನ ಸಾಹಿತ್ಯದ ವಿಮರ್ಶೆ ಮತ್ತು ಸಂಶೋಧನೆಗಳನ್ನು ಕೇಂದ್ರೀಕರಿಸಿದ್ದಾರೆ. ಶಾಸ್ತ್ರೀಯ ಸಂಪುಟಗಳನ್ನು ಹೊರತರುತ್ತಿರುವ ಟಿ. ವಿ. ವೆಂಕಟಾಚಲಶಾಸ್ತ್ರಿಯವರು ಸೃಜನಶೀಲ ಕಾವ್ಯಗಳಿಗಿಂತ ಅವುಗಳ ವ್ಯಾಕರಣ ಛಂದಸ್ಸುಗಳ ಮೇಲೆ ತಮ್ಮ ಶಾಸ್ತ್ರೀಯ ಸಂಪುಟಗಳಲ್ಲಿ ವಿಫುಲವಾಗಿ ಬರೆಯುತ್ತಿದ್ದಾರೆ.

ಒಟ್ಟಾರೆ ಪ್ರಾಚೀನ ಕನ್ನಡ ಸಾಹಿತ್ಯವನ್ನು ಮೂರು ಹಂತದಲ್ಲಿ ಕಳೆದ ದಶಕದ ವಿಮರ್ಶೆ ಎದುರುಗೊಂಡಿದೆ. ಮೊದಲನೆಯದಾಗಿ ಹಳೆಯ ಪರಂಪರೆಯ ಕೊಂಡಿಗಳಾಗಿದ್ದ ಕಲ್ಬುರ್ಗಿ, ಹಂಪನಾ ಮೊದಲಾದವರು ಕೃತಿಯ ಕಾಲ, ದೇಶ, ಕವಿ, ಕೃತಿ ಎಂಬ ಸಾಂಪ್ರದಾಯಿಕ ರೀತಿಯ ಅಧ್ಯಯನದಲ್ಲಿ ತೊಡಗಿದರೆ, ಎರಡನೆಯದಾಗಿ ಪಿಎಚ್. ಡಿ., ಎಮ್. ಫಿಲ್. ಪದವಿಗಾಗಿ ನಡೆಯುತ್ತಿರುವ ಅಧ್ಯಯನಗಳು. ಇನ್ನು ಮೂರನೆಯದು ಮತ್ತು ಬಹಳ ಮುಖ್ಯವಾದುದು ಪ್ರಾಚೀನ ಪಠ್ಯಗಳನ್ನು ಇವತ್ತಿನ ವಿಮರ್ಶಕರು ವಿವಿಧ ತಾತ್ವಿಕತೆಗಳ ಹಿನ್ನೆಲೆಯಲ್ಲಿ ಮುಖಾಮುಖಿಯಾಗುತ್ತಿರುವುದು. ಉದಾ. ಹಂಪಿಯ ಕನ್ನಡ ವಿವಿಯ 'ಸಾಂಸ್ಕೃತಿಕ ಮುಖಾಮುಖಿ' ಸರಣಿಯ ಕೃತಿಗಳು, ಕೆಲವು ಲೇಖಕರು ಸೆಮಿನಾರು ಮೊದಲಾದೆಡೆ ಮಂಡಿಸಿದ ಪ್ರಬಂಧಗಳನ್ನು ತಮ್ಮ ಕೃತಿಗಳಲ್ಲಿ ವಿಸ್ತರಿಸಿ ಬರೆದು ಪ್ರಕಟಿಸುತ್ತಾರೆ. ಇವೂ ಕೂಡ ಹಳಗನ್ನಡ ಸಾಹಿತ್ಯದ ಗಂಭೀರ ವಿಮರ್ಶೆಗಳಾಗಿವೆ.

ಆಧುನಿಕ ಕಾವ್ಯ ಕೇಂದ್ರಿತ ವಿಮರ್ಶೆ

ಸಾಮಾನ್ಯವಾಗಿ ವಿಮರ್ಶೆಯು ಯಾವಾಗಲೂ ಪದ್ಯಕೇಂದ್ರಿತವೇ. ಭಾರತೀಯ ಕಾವ್ಯ ಮೀಮಾಂಸೆ ಅವತರಿಸಿದ್ದೇ ಕಾವ್ಯ ಪರಂಪರೆಯ ಮೇಲೆ. ಪ್ರಾಚೀನ ಕಾಲದಲ್ಲಿ ಪದ್ಯ ಪ್ರಕಾರವನ್ನಷ್ಟೇ ಸಾಹಿತ್ಯ ಎಂದು ಗ್ರಹಿಸುವ ರೂಢಿಯಿತ್ತು. ಎಷ್ಟಾದರೂ ಗದ್ಯ ಆಧುನಿಕತೆಯ ಕೊಡುಗೆ. ಆದರೆ ಪದ್ಯ ಪ್ರಾಚೀನವಾದುದಾದರೂ ಅದನ್ನು ವಿವರಿಸಲು ಮೀಮಾಂಸೆ ಹುಟ್ಟಿಕೊಂಡಿದ್ದರಿಂದ ವಿಮರ್ಶೆಯು ಸಾಮಾನ್ಯವಾಗಿ ಗದ್ಯವನ್ನು ವಿಶ್ಲೇಷಿಸಲೆಂದೇ ಅವತರಿಸಿದೆ ಎಂಬ ಅಭಿಪ್ರಾಯವುಂಟು. ಇಷ್ಟಾದರೂ ಪದ್ಯ ಯಾವಾಗಲೂ ಮೀಮಾಂಸೆ-ವಿಮರ್ಶೆಯಲ್ಲಿ ಪ್ರಥಮ ಪ್ರಾಶಸ್ತ್ಯ ಪಡೆಯುತ್ತದೆ ಎಂಬುದು ಸುಳ್ಳಲ್ಲ. ಇಲ್ಲಿ ಆಧುನಿಕ ಕಾವ್ಯವನ್ನು ಕುರಿತು ಕನ್ನಡ ವಿಮರ್ಶೆ ಹೇಗೆ ಮುಖಾಮುಮುಖಿಯಾಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಇವತ್ತಿನ ಕನ್ನಡ ಕಾವ್ಯ ಸೃಷ್ಟಿ ಬಹು ಸಮೃದ್ಧತೆಯಿಂದ ಮತ್ತು ವೈವಿಧ್ಯತೆಯಿಂದ ಮೂಡಿ ಬರುತ್ತಿದ್ದು, ಉಳಿದೆಲ್ಲಾ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚು ಮಂದಿ ಇದರಲ್ಲಿ ತೊಡಗಿಸಿಕೊಂಡಿರುವಂತೆ ಕಂಡುಬರುತ್ತದೆ. ಆದರೆ ಸಾಹಿತ್ಯ ಕ್ಷೇತ್ರ ಪ್ರವೇಶಿಸುವ ಬಹುತೇಕ ಮಂದಿ ತಮ್ಮ ಯಾನವನ್ನು ಕಾವ್ಯ ರಚನೆಯಿಂದಲೇ ಆರಂಭಿಸುತ್ತರಾದರೂ, ಮೊದಲ

ಕವನ ಸಂಕಲನದಲ್ಲಿ ತೋರಿದ ಸಾಧನೆಯನ್ನು ನಂತರದ ಕೃತಿಗಳಲ್ಲಿ ಮುಂದುವರೆಸಿಕೊಂಡು ಹೋಗುವಲ್ಲಿ ಬಹುತೇಕರು ವಿಫಲರಾಗುತ್ತಾರೆ. ಆದರೂ ಆರಿಫ್ ರಾಜ, ವೀರಣ್ಣ ಮಡಿವಾಳ, ಕಾವ್ಯ ಕಡಮೆ ಮೊದಲಾದ ಹೊಸ ತಲೆಮಾರಿನ ಕವಿಗಳ ಕಾವ್ಯ ಸೃಷ್ಟಿಯ ಬಗ್ಗೆ ಕನ್ನಡದಲ್ಲಿ ಗಂಭೀರ ವಿಮರ್ಶೆಗಳು ಪ್ರಕಟಗೊಂಡಿವೆ.

ಕಳೆದ ದಶಕದಲ್ಲಿ ರಚನೆಯಾಗಿರುವ ಕಾವ್ಯ ವಿಮರ್ಶೆಗಳು ಬಹುತೇಕ ಆಯಾ ಸಂಕಲನಗಳ ಮುನ್ನುಡಿ ರೂಪದಲ್ಲಿ ಪ್ರಕಟಗೊಂಡಿವೆ. ಹಿರಿಯ ವಿಮರ್ಶಕರು ಬರೆದಿರುವ ಬಹುತೇಕ ಮುನ್ನುಡಿಗಳಲ್ಲಿ ಕಾವ್ಯಕ್ಕೆ ಬೇಕಾದ ತಾತ್ವಿಕತೆ, ಪರಿಕರಗಳ ಬಗ್ಗೆ ಕ್ವಚಿತ್ತಾಗಿ ಹೇಳಿದ್ದಾರೆ. ಆದರೆ ಗೆಳೆಯರೋ, ಹಿತೈಷಿಗಳೋ ಬರೆದಿರುವ ಮುನ್ನುಡಿಗಳಲ್ಲಿ ಇಂತಹ ವಿಮರ್ಶಾತ್ಮಕತೆಯನ್ನು ಕಾಣಲಾಗುವುದಿಲ್ಲ. ಆದ್ದರಿಂದಲೇ ಕನ್ನಡದ ಬಹತೇಕ ಯುವ ಕವಿಗಳು ತಮ್ಮ ಮೊದಲ ಸಂಕಲನದಲ್ಲಿ ತೋರುವ ಕಾವ್ಯ ಸಾಧನೆಯನ್ನು ನಂತರದ ಸಂಕಲನಗಳಲ್ಲಿ ಉಳಿಸಿಕೊಳ್ಳಲಾರದೆ ಹೋಗಿದ್ದಾರೆ ಎಂಬ ಆರೋಪವಿದೆ. “ಕೆಲವು ಕವಿಗಳು ತಮ್ಮ ಮೊದಲ ಸಂಕಲನದಲ್ಲಿ ಪ್ರಕಟಿಸಿದ ಸಾಮರ್ಥ್ಯ ನಂತರ ಪ್ರಕಟಿಸುತ್ತಿಲ್ಲ. ಒಂದು ಬಗೆಯಲ್ಲಿ ಎಕ್ಸಾಸ್ಟ್ ಆಗಿ ಹಳತರ ಪುನರುಕ್ತಿ ಮಾಡುತ್ತಿರುವಂತೆ ತೋರುತ್ತದೆ.”[೮] ಇಂತಹ ಬಿಕ್ಕಟ್ಟಿನಲ್ಲಿಯೂ ಕೆಲವು ಮುನ್ನುಡಿಗಳು ಕಾವ್ಯತತ್ವದ ಸತ್ಯಗಳನ್ನು ಹಿಡಿಯಲು ಪ್ರಯತ್ನಿಸಿವೆ. ಅದರಲ್ಲೂ ಹೊಸ ತಲೆಮಾರಿನ ಕವಿಗಳಿಗೆ ಹೆಚ್ಚು ಮುನ್ನುಡಿಗಳನ್ನು ಬರೆಯುವ ಎಚ್. ಎಸ್. ರಾಘವೇಂದ್ರರಾವ್, ನಟರಾಜ್ ಹುಳಿಯಾರ್, ಕ್ವಚಿತ್ತಾಗಿ ಕೆ. ವಿ. ನಾರಾಯಣ ಮೊದಲಾದವರು ಕಿರಿಯರ ಕಾವ್ಯವನ್ನು ಸಮತೋಲನದಿಂದ ಕಂಡು ಅನುಭವಗಳನ್ನು ಆಕೃತಿಗಳನ್ನಾಗಿಸುವ ಸೂಕ್ಷ್ಮತೆ ಬಗ್ಗೆ ಎಚ್ಚರಿಸಿದ್ದಾರೆ. ಇಂತಹ ಮುನ್ನುಡಿಗಳಲ್ಲಿ, ಆಕೃತಿಗೆ ಇಂದಿನ ಕವಿ ರೂಪಿಸಿಕೊಳ್ಳುತ್ತಿರುವ ವಿಧಾನಗಳು ಯಾವುವು? ಆಶಯಕ್ಕೆ ತಕ್ಕಂತೆ ಆಕೃತಿಯೋ? ಆಕೃತಿಗೆ ತಕ್ಕ ಹಾಗೆ ಆಶಯವೋ? ಅಥವಾ ಮೊದಲು ಮೂಡಬೇಕಾದ್ದು ಗಟ್ಟಿಯಾದ ಲೋಕಪ್ರಜ್ಞೆಯೋ? ಕಾವ್ಯತತ್ವ ಎಂಬುದು ಬದುಕಿನ ತತ್ವದ ಜೊತೆಗೆ ತಳುಕು ಹಾಕಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಗಳು ಇಲ್ಲಿ ಮುಖ್ಯವಾಗಿ ಚರ್ಚೆಯಾಗಿವೆ.

ಇವತ್ತಿನ ಕಾವ್ಯ ವಿಮರ್ಶೆಯಲ್ಲಿ ಹೊಸ ತಲೆಮಾರಿನ ಎನ್. ಕೆ. ಹನುಮಂತಯ್ಯ, ಆರಿಫ್ ರಾಜಾ, ಲಕ್ಕೂರು ಆನಂದ, ವೀರಣ್ಣ ಮಡಿವಾಳರ, ಅಕ್ಷತಾ ಕೆ., ಕಾವ್ಯ ಕಡಮೆ ಮೊದಲಾದವರ ಕವಿತೆಗಳನ್ನು ಹೆಚ್ಚು ಚರ್ಚಿಸಲಾಗಿದೆ. ಇನ್ನು ಹಿರಿಯ ತಲೆಮಾರಿನ ಕವಿಗಳಲ್ಲಿ ಎಚ್. ಎಸ್. ಶಿವಪ್ರಕಾಶ್, ಲಲಿತಾ ಸಿದ್ಧಬಸವಯ್ಯ, ಕೆ. ಬಿ. ಸಿದ್ಧಯ್ಯ ಮೊದಲಾದವರ ಕಾವ್ಯಗಳು ವಿಶೇಷವಾಗಿ ಚರ್ಚಿತವಾಗಿವೆ.

ನವೋದಯ, ನವ್ಯ, ದಲಿತ–ಬಂಡಾಯ ಸಾಹಿತ್ಯ ಚಳುವಳಿಗಳ ಸಂದರ್ಭದಲ್ಲಿದ್ದಂತೆ ಇಂದು ಯಾವುದೇ ನಿರ್ದಿಷ್ಟ ಪಂಥ, ಸಿದ್ಧಾಂತ, ಚಳುವಳಿಗಳ ಪ್ರಭಾವವಿಲ್ಲದಿರುವುದರಿಂದಲೂ, ಇವತ್ತಿನ ಕಾವ್ಯ ಮತ್ತು ಅದರ ಕುರಿತ ವಿಮರ್ಶೆಯಲ್ಲಿ ಕೆಲವು ವಿಶಿಷ್ಟ ಲಕ್ಷಣಗಳು ಗೋಚರಿಸುತ್ತಿವೆ. ಯಾವುದಾದರೂ ಸಾಹಿತ್ಯ ಪಂಥಗಳು

ಚಾಲನೆಯಲ್ಲಿದ್ದಾಗ ತಮ್ಮ ಆಲೋಚನೆಗಳಿಗೆ ಪೂರಕವಾದ ಸಾಹಿತ್ಯವನ್ನು ಬಲವಾಗಿ ಸಮರ್ಥಿಸಿಕೊಳ್ಳುವ ಸಂದರ್ಭದಲ್ಲಿ ಅತ್ಯುತ್ತಮ ವಿಮರ್ಶೆ ಹುಟ್ಟುತ್ತದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಇವತ್ತಿನ ಕಾವ್ಯರಚನೆಯ ಹಿಂದೆ ಇಂತಹ ಯಾವುದೇ ಘೋಷಿತ ವಿಚಾರಗಳಿಲ್ಲದಿರುವುದರಿಂದ ಇವತ್ತಿನ ವಿಮರ್ಶೆ ಭಿನ್ನ ಭಿನ್ನ ನೆಲೆಗಳಲ್ಲಿ ಕಾವ್ಯವನ್ನು ಗ್ರಹಿಸುವ ಪ್ರಯತ್ನ ಮಾಡುತ್ತಿದೆ. "ಸಾಹಿತ್ಯದಲ್ಲಿ ಯಾವುದೇ ಪಲ್ಲಟಗಳ ಮೊದಲ ಮತ್ತು ಮುಖ್ಯ ಲಕ್ಷಣಗಳು ದಾಖಲಾಗುವುದು 'ಕಾವ್ಯ'ದಲ್ಲಿ; ನಂತರ ಉಳಿದ ಪ್ರಕಾರಗಳಲ್ಲಿ ಅವು ಗೋಚರವಾಗುತ್ತವೆ. ಕಳೆದ ಶತಮಾನದ ಕೊನೆಯ ಮೂರು ದಶಕಗಳಲ್ಲಿ ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯದ ಮೂಲಕ ದಾಖಲಾದ ಪಲ್ಲಟಗಳು, ಐತಿಹಾಸಿಕ ಅನಿವಾರ್ಯಗಳಾಗಿದ್ದು, ಶೋಷಿತ ಮತ್ತು ಅಲಕ್ಷಿತ ಸಮುದಾಯಗಳು ಮೊದಲಬಾರಿಗೆ ದೊಡ್ಡ ಪ್ರಮಾಣದಲ್ಲಿ ಸಾಹಿತ್ಯ ಸೃಷ್ಟಿಯಲ್ಲಿ ಪಾಲ್ಗೊಂಡಿದ್ದವು. ಆದರೆ ಹೊಸ ಶತಮಾನದ ಪ್ರಾರಂಭದಲ್ಲಿ ಜಾಗತಿಕ ಮಟ್ಟದಲ್ಲಿ ತೋರಿದ ಆರ್ಥಿಕ ಪಲ್ಲಟದಿಂದಾಗಿ, ಆರ್ಥಿಕ ಶ್ರೇಣೀಕರಣವೇ ಇಂದು ಎಲ್ಲ ತಲ್ಲಣಗಳಿಗೆ ಕಾರಣವಾಗಿರುವಾಗ ಸಹಜವಾಗಿಯೇ ಹೊಸ ತಲೆಮಾರಿನ ಕಾಳಜಿಗಳು ಬದಲಾಗಿವೆ. ಏಕ ತಾತ್ವಿಕತೆಯ ಜಾಗೆಯಲ್ಲಿ ಈಗ ಅಖಂಡ ತಾತ್ವಿಕತೆ ಮುನ್ನೆಲೆಗೆ ಬಂದಿದ್ದು ನವೋದಯವನ್ನು ನೆನಪಿಸುತ್ತಿದೆ."[೯] ಇವತ್ತಿನ ಕಾವ್ಯ ರಚನೆಯ ಹಿನ್ನೆಲೆಗಳನ್ನು ಹಲವು ವಿಚಾರಗಳು ಪ್ರಭಾವಿಸಿದ್ದು, ಎಲ್ಲರಿಗೂ ಸಮಾನ ಎದುರಾಳಿಯಾಗಿ ಜಾಗತೀಕರಣ ನಿಂತಿರುವಂತೆ ತೋರುತ್ತದೆ. ಜೊತೆಗೆ ಇದುವರೆಗಿನ ಸಾಹಿತ್ಯ ಚಳುವಳಿಗಳು ಎದುರಿಸಿದ ಸನ್ನಿವೇಶಗಳಿಗಿಂತ ಬಹು ಭಿನ್ನವಾದ ಸಮಸ್ಯೆಗಳು ಇವತ್ತಿನ ಕವಿಗಳ ಎದುರಿರುವಂತೆ ತೋರುತ್ತಿದ್ದು ವಿಮರ್ಶೆ ಅವುಗಳನ್ನು ಗ್ರಹಿಸಲು ಪ್ರಯತ್ನಿಸಿದೆ.

ಸಮುದಾಯದ ಸಂವೇದನೆಯನ್ನು ಉತ್ಕಟವಾಗಿ ವ್ಯಕ್ತಪಡಿಸುವ ಆರೀಫ್ ರಾಜ ಅವರ ಕವಿತೆಗಳನ್ನು ಕುರಿತು "ಅತ್ಯಂತ ಚೆಲುವಿನ ನುಡಿಗಟ್ಟು ಅವರ ಕವಿತೆಗಳದು. ಸರೀಕ ಕವಿಗಳಿಗೆ ಹೋಲಿಸಿದರೆ ಆರಿಫರ ಕಾವ್ಯದ ಪರಿಮಳ ಗುಲಗಂಜಿಯಷ್ಟು ಹೆಚ್ಚೇ. ವೈಚಾರಿಕ ನಿಲುವು ಮುಂದು ಮಾಡುವ ಭರದಲ್ಲಿ ಕಾವ್ಯದಲ್ಲಿ ಲಯ ಹಿಂದಾಗುತ್ತಿರುವ ದಿನಗಳಲ್ಲಿ, ವೈಚಾರಿಕತೆಯ ಜೊತೆಗೆ ಲಯ-ಶಿಲ್ಪಕ್ಕೂ ಒತ್ತು ಕೊಟ್ಟ ಕಸುಬುದಾರಿಕೆ ಅವರದು. ಇದಕ್ಕೆ ಕಾರಣ ತಾನು ಬದುಕುತ್ತಿರುವ ಬಹು ಭಾಷಿಕ, ಬಹು ಧರ್ಮೀಯ, ಬಹು ಸಂಸ್ಕೃತಿಯ ಪರಿಸರವೂ ತನ್ನ ಕವಿತೆಗೆ ಕಸುವಾಗಿ ಪರಿಣಮಿಸಿರಬಹುದು"[೧೦] ಎನ್ನುವ ಮೂಲಕ ಕವಿತೆ ಕೇವಲ ಸಾಮಾಜಿಕ ಮುಖವಾಡ ಹೊಂದಿದರೆ ಸಾಲದು ಅದು ಮನಮೋಹನಗೊಳಿಸುವ ಮಾಂತ್ರಿಕತೆ ಮತ್ತು ಕವಿತೆಯ ಸಹಜ ಮಾರ್ದವತೆ ಅಪೇಕ್ಷಣೀಯ ಎಂಬ ಆಶಯವಿದೆ.

ಸಾಮಾನ್ಯವಾಗಿ ಮೊದಲಿನ ಕವಿತೆಗಳ ರಚನೆಗಳಲ್ಲಿ ಎಡಪಂಥೀಯ ಸಿದ್ಧಾಂತಗಳ ಬೌದ್ಧಿಕತೆ ಢಾಳಾಗಿ ಕೇಳುತ್ತಿತ್ತು. ಅನುಭವಗಳನ್ನು ಒಳಕ್ಕೆ ತೆಗೆದುಕೊಳ್ಳುವ ಸಂವೇದನಾಶೀಲ ಗುಣಕ್ಕಿಂತ ಸೈದ್ಧಾಂತಿಕ ಚೌಕಟ್ಟಿನ ಗಣಿತಾತ್ಮಕತೆಯಲ್ಲಿ ಮಾತನಾಡುವ

ದಾಟಿ ಮೇಲುಗೈ ಪಡೆದಿತ್ತು. ಆದರೆ ಬದುಕು ಬಹಳ ದೊಡ್ಡದು. ಅದು ಕಲಿಸುವ ಪಾಠ ಸಿದ್ಧಾಂತಗಳ ಮಿತಿಯನ್ನು ಅರಿವಿಗೆ ತಂದು ಅನುಭವದ ಮೂಸೆಯಲ್ಲಿ ಎಲ್ಲವನ್ನೂ ಕಾಯಿಸಿ ಕರಗಿಸುವ ಕಮ್ಮಟಶಾಲೆಯಾಗಿದೆ. ಆದ್ದರಿಂದ ನಂತರದ ಕವಿತೆಗಳು ಸಾಮಾಜಿಕತೆಯ ಜೊತೆಗೆ ಕಲಾತ್ಮಕತೆಗೆ ಹೆಚ್ಚು ಒತ್ತು ನೀಡಿವೆ.

ಇತ್ತೀಚಿನ ದಿನಗಳಲ್ಲಿ ಕಾವ್ಯವನ್ನು ಕುರಿತು ಮಾತನಾಡುವಾಗ ಸಾಮಾನ್ಯವಾಗಿ ನಿರಾಶೆಯ ದನಿಯೆತ್ತಿ ಕಳೆದುಹೋದ ಸಮೃದ್ಧಿಯ ನೆನಪಿನಲ್ಲಿ ಇಂದಿನದನ್ನು ಲಘುವಾಗಿ ಕಾಣುವುದು ನಡೆಯುತ್ತಿದೆ. ಆದರೆ ಇಡೀ ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಅವಲೋಕಿಸಿದರೆ ಅಲ್ಲಿ ಢಾಳಾಗಿ ಕಾಣುವುದು ಛಂದೋವೈವಿಧ್ಯದಲ್ಲಿ ನಡೆದಿರುವ ಪ್ರಯೋಗಶೀಲತೆ. ಛಂದಸ್ಸಿನ ಆವರಣವನ್ನು ಹಾಕಿಕೊಳ್ಳುತ್ತಲೇ ಉಲ್ಲಂಘನೆಗಳಿಗೆ ತುಡಿದು ಯಶ ಸಾಧಿಸಿದ ಪ್ರಯೋಗ ಪರಂಪರೆ ಕನ್ನಡದ್ದು. ಈ ಪ್ರಯೋಗಗಳು ಕಾಲದ ಮತ್ತು ಬದುಕಿನ ಲಯಕ್ಕೆ ಶ್ರುತಿಕೊಟ್ಟಂತೆ ಹುಟ್ಟಿ ಬೆಳೆದವು. ಅಂದರೆ ಭಾಷಾ ರಚನೆಯ ಸ್ವರೂಪವೆಂಬುದು ಕಾಲದ ಮಿಡಿತಕ್ಕೆ ಹುಟ್ಟಿ ಹರಿದದ್ದು. ಇದು ಪರಂಪರೆ ಮತ್ತು ಪ್ರಯೋಗಶೀಲತೆಯ ಸಂಲಗ್ನದಲ್ಲಿ ಹುಟ್ಟಿ ಬೆಳೆವ ಭಾಷೆಗಿರುವ ವಿಶಿಷ್ಟತೆ. ಈ ರೀತಿಯ ಬದಲಾವಣೆಗಳ ಆಂತರ್ಯದಲ್ಲಿ ಹಲವು ಬಗೆಯ ಪ್ರಭಾವ – ಪರಿಕರಗಳು ಕೆಲಸ ಮಾಡಿರುತ್ತವೆ. ದೈನಂದಿನ ಬದುಕಿನಲ್ಲಿ ಭಾಷೆಯ ಬಳಕೆಯಲ್ಲಾಗುವ ವ್ಯತ್ಯಾಸ ಸೂಕ್ಷ್ಮತೆಗಳಿಂದ ಮೊದಲ್ಗೊಂಡು ಬದುಕಿನೊಳಗೆ ಘಟಿಸುತ್ತಿರುವ ಸಾಮಾಜಿಕ ಸಾಂಸ್ಕೃತಿಕ ಪಲ್ಲಟಗಳು; ರಾಜಕೀಯ, ವೈಜ್ಞಾನಿಕ ಬೆಳವಣಿಗೆಗಳು, ಅನ್ಯಭಾಷಾ ಸಂಸರ್ಗದಿಂದಾದ ಒತ್ತಡಗಳು; ಹೀಗೆ ಬದುಕನ್ನು ಪ್ರಭಾವಿಸುವ ಎಲ್ಲವೂ ಭಾಷೆಯನ್ನು ರೂಪಿಸುವ ಮೂಲದ್ರವ್ಯಗಳೇ ಆಗಿರುತ್ತವೆ. ಆದ್ದರಿಂದ ಕಾಲದ ತಂತುವನರಿತಂತೆ ಭಾಷಿಕ ನುಡಿಗಟ್ಟು ಬದಲಾಗುತ್ತದೆ. ಪರಿಭಾಷೆಯಲ್ಲಿ ಪರಿಕಲ್ಪನೆಯಲ್ಲಿ ಚಿಂತನೆ ಸಿದ್ಧಾಂತದ ತಿಳುವಳಿಕೆ ದನಿಪಡೆಯುತ್ತಾ ಹೋಗುತ್ತದೆ. ಆ ಹಿನ್ನೆಲೆಯಲ್ಲಿ ಇವತ್ತಿನ ಕವಿತೆಗಳ ಭಾಷೆಯನ್ನು ಗಮನಿಸಬೇಕಾದ ಅಗತ್ಯವಿದೆ.

ಹಾಗೆಯೇ ಒಂದು ಮೂಲದಿಂದ ಹೊರಬಂದು ಬೇರೊಂದು ಜಗತ್ತಿಗೆ ಕಾಲಿಟ್ಟ ವ್ಯಕ್ತಿ ಎದುರಿಸುವ ಬೇರೆ ಬಗೆಯ ಸವಾಲುಗಳ ಚಿತ್ರಣ ಇಂದಿನ ಕವಿತೆಗಳಲ್ಲಿದೆ. ಇಂಡಿಯಾದ ಬಹುತ್ವ ಮೂಲದ ಸಮುದಾಯಗಳ ಗತಿಯೇ ಇಂತಹದ್ದು. ಮೂಲವನ್ನು ಬಿಟ್ಟು ಹೊಸದಕ್ಕೆ ತೆರೆದುಕೊಳ್ಳುವಷ್ಟರಲ್ಲಿ ಅದು ಹೊಸದಾಗಿರುತ್ತದೆ. ಆದರೆ ಹಳೆಯ ಪಟ್ಟಭದ್ರರ ಹಿಡಿತದಲ್ಲಿ ಅದಾಗಲೇ ವ್ಯವಸ್ಥೆಯಾಗಿರುತ್ತದೆ. ಅಲ್ಲಿ ವ್ಯವಸ್ಥೆಗೆ ಸಿಕ್ಕಿ ಹೊಸಬರು ಬಿಕರಿಯಾಗದ ಸರಕಾಗುತ್ತಾರೆ. ಇಲ್ಲಿ ಗೆಲ್ಲಬೇಕೆಂದರೆ ಹಳೆಯ ಮಾನದಂಡಗಳನ್ನು ಕಳಚಿ ಕಿತ್ತೆಸೆಯಬೇಕು. ಹೊಸಬಗೆಯ ಬದಲಿ ಮಾನದಂಡಗಳನ್ನು ಹುಡುಕಿಕೊಳ್ಳಬೇಕು. ಇವು ಎಲ್ಲಿಂದಲೋ ಕಡತಂದ ಈ ನೆಲಕ್ಕೆ ಒಗ್ಗದ ಮಾನದಂಡಗಳಾಗಬಾರದು. ನಮ್ಮಲ್ಲಿಯೇ ಇದ್ದು ಗಮನಕ್ಕೆ ಬಾರದೇ ಹೋಗಿರುವ ಮಾನದಂಡಗಳಾಗಬೇಕು. ಹುಡುಕಿ ತೆಗೆದು ಹೊಸಬಳಕೆಗೆ ಒಗ್ಗಿಸಿಕೊಳ್ಳಬಹುದಾದ ಮಾನದಂಡಗಳಾಗಬೇಕು.

ಇಪ್ಪತ್ತೊಂದನೆ ಶತಮಾನದ ಕನ್ನಡ ಕವಿತೆಗಳ ತಲ್ಲಣವು ಹೇಗೆ ಆಶಾದಾಯಕ ಸ್ಥಿತಿಗೆ ನಮ್ಮನ್ನು ಕರೆದೊಯ್ಯುತ್ತವೆಂದರೆ, "ಇಂದಿನ ಹದಗೆಟ್ಟ ಪರಿಸ್ಥಿತಿಯಲ್ಲಿ ಬಾಳು ಭಯದ ಬೀಡಾಗಿದೆ. ನೋವಿನ ನರಕವಾಗಿದೆ. ಇದರಿಂದ ಬಿಡುಗಡೆಯೇ ಇಲ್ಲವೇ ಎಂಬ ಚಡಪಡಿಕೆಯಿದೆ. ಆದರೆ ಈ ಚಡಪಡಿಕೆಯಲ್ಲಿ ಬಿಡುಗಡೆಯ ನಿರೀಕ್ಷೆಯೂ ಇದೆ. ಇದು ಇಲ್ಲಿನ ಬಹುತೇಕ ಕವಿತೆಗಳಲ್ಲಿ ಕಂಡುಬರುವ ಧೋರಣೆ. ಈ ಪರಿಯ ಅಸಹನೀಯ ಸ್ಥಿತಿ ಎಲ್ಲಿಗೆ ಮುಟ್ಟಿಸಿದೆಯೆಂದರೆ ಸಾರ್ವಜನಿಕ ಬದುಕಿನ ಈ ಕಟ್ಟುಬ್ಬಸದ ಸನ್ನಿವೇಶದಿಂದ ವೈಯಕ್ತಿಕ ಬದುಕೂ ತನ್ನ ಸ್ವಾಸ್ತ್ಯವನ್ನು ಕಳೆದುಕೊಂಡಿದೆ. ಅದನ್ನು ಕಂಡೂ ಕಂಡೂ ಅನುಭವಿಸಲಾಗದ ಮನೋಸ್ಥಿತಿ. ಯಾವುದೇ ಸೂಕ್ಷ್ಮಮನಸ್ಸಿನ ಜೀವಕ್ಕೆ ವೈಯಕ್ತಿಕ ಬದುಕಿಗೂ ಸಾರ್ವಜನಿಕ ಬದುಕಿಗೂ ಸಾಂಗತ್ಯವಿಲ್ಲದೇ ಹೋದಾಗ ಇಬ್ಬಂದಿಯ ನಡುವೆಯೂ ನೆಮ್ಮದಿಯಿಂದ ಸುಖ ಅನುಭವಿಸುವುದು ಸಾಧ್ಯವಾಗುವುದಿಲ್ಲ. ಅಂಥ ಸಂದರ್ಭದಲ್ಲಿ ಸಾರ್ವಜನಿಕ ಬದುಕಿನ ಪಾಪಪ್ರಜ್ಞೆಯನ್ನು ತನ್ನ ಮೈಮೇಲೆ ಎಳೆದುಕೊಳ್ಳುವುದು ಆತ್ಮ ನಿರೀಕ್ಷೆಗೆ ತೊಡಗುವುದು; ಆ ಮುಖೇನವಾಗಿ ಹಗುರಾಗಲು ಬಯಸುವುದು ಒಂದು ಬಗೆಯ ನಡೆ."[೧೧] ಇಂತಹ ಹತಾಶೆಯಿಂದ ಹೊರಬರುವ ದಾರಿಯನ್ನು ತೋರಿಸುವ ಸಮರ್ಥ ಕವಿತೆಗಳು ಈ ಶತಮಾನದ ಮೊದಲ ದಶಕದಲ್ಲಿ ಹೊರಬರುತ್ತಿರುವುದನ್ನು ಕನ್ನಡ ವಿಮರ್ಶೆ ಗುರುತಿಸಿದೆ.

ಹೊಸ ತಲೆಮಾರಿನ ಇದುವರೆಗಿನ ಕಾವ್ಯವನ್ನು ಗಮನಿಸಿದರೆ ದಾಸರು, ಬೇಂದ್ರೆ, ಅಡಿಗ, ನರಸಿಂಹಸ್ವಾಮಿ, ಎಕ್ಕುಂಡಿ ಮುಂತಾದವರ ಲಯ ವಿನ್ಯಾಸಗಳು ನೆನಪಾಗುತ್ತವೆ. ಆದರೆ ಅವು ಇರುವ ಹಾಗೆ ಬರುವುದಿಲ್ಲ. ಈ ಕವಿಗಳು ತಮಗೆ ದಕ್ಕಿದ ಪ್ರತಿಮಾಲೋಕದ ಬೆನ್ನಲ್ಲಿ ಮುರಿದು ಕಟ್ಟುವುದಕ್ಕೆ ಯತ್ನಿಸಿದ್ದಾರೆ. ಪುರಾಣ, ನಿಸರ್ಗಗಳ ಗರ್ಭದಿಂದ ಹಲವು ಚಿತ್ರಗಳನ್ನು ಕಟೆದು ನಿಲ್ಲಿಸುವ ಇವರನ್ನು ಕಾಡುವ ಅಂಶಗಳು 'ಕಾಲ' ಮತ್ತು 'ಸಾವು'. ಇವು ಆರಂಭದಿಂದ ಅವರ ಕವಿತೆಯನ್ನು ಆವರಿಸಿವೆ. ಆದರೆ ಇವೆರಡೂ ಅಂಶಗಳು ನವೋದಯ ಕಾವ್ಯದಲ್ಲಿ ಬರುವುದಕ್ಕೂ ವೈಯಕ್ತಿಕವಾಗಿ ಈ ಕವಿಯಲ್ಲಿ ಬರುವುದಕ್ಕೂ ವ್ಯತ್ಯಾಸಗಳು ಇವೆ. ಧಾವಂತದ ಬದುಕಿನ ಲಯಗಳನ್ನು ಇಷ್ಟಪಡದ ಹಲವು ಕವಿತೆಯ ಲಯಗಳನ್ನು ಕಾಣಬಹುದು. ಮನುಷ್ಯನ ತಲ್ಲಣಗಳನ್ನು ಅನಾವರಣಮಾಡುವಾಗ ಇವರು ರೂಪಿಸಿಕೊಳ್ಳುವ ಭಾಷಿಕ ಲಯಗಳು ಈ ಕಾಲಕ್ಕಂತೂ ಹೊಸದಾಗಿ ಕಾಣುತ್ತವೆ.

ದಲಿತ ಕಾವ್ಯವೂ ಈ ಸಂದರ್ಭದಲ್ಲಿ ಗಂಭೀರವಾಗಿ ರೂಪುಗೊಂಡಿದೆ. ಆದರೆ ಇದು ಸೂಕ್ತವಾದ ವಿಮರ್ಶೆಯ ಕೊರತೆ ಎದುರಿಸುತ್ತಿದೆ ಎಂಬ ಅಳಲಿದೆ. "ಜಾತಿ ವ್ಯವಸ್ಥೆ ಹೇರಿದ ಕಳಂಕ ಮತ್ತು ಪೂರ್ವಾಗ್ರಹಗಳಿಂದಾಗಿ ದಲಿತ ಸಾಹಿತ್ಯ ವಿಮರ್ಶೆಯ ಕೊರತೆ ಎದುರಿಸುತ್ತಿದೆ. ಸಾಹಿತ್ಯದ ಅತ್ಯುತ್ತಮ ಮಾಧ್ಯಮ ಕಾವ್ಯ. ಅದು ಜನಸಾಮಾನ್ಯರನ್ನು ತಲುಪದೇ ಇದ್ದಾಗ ವಿಮರ್ಶಕರು ಆ ಕೆಲಸ ಮಾಡುತ್ತಾರೆ. ಆದರೆ, ದಲಿತ ಸಾಹಿತ್ಯವನ್ನು ಓದುಗರಿಗೆ ತಲುಪಿಸುವ ವಿಮರ್ಶಕರು ಇಲ್ಲ. ಸ್ವತಃ ದಲಿತ ಸಮುದಾಯದಲ್ಲೂ ಅಂತಹ ವಿಮರ್ಶಕರಿಲ್ಲದಿರುವುದು ವಿಪರ್ಯಾಸ. ಜಾತಿಯ ಪರಿಧಿಯನ್ನು ಮೀರಿ ಅಸ್ಮಿತೆ

ಬೆಳೆಸಿಕೊಳ್ಳುವುದು ಕಷ್ಟ. ಆದರೂ, ಜಾತಿಯನ್ನು ಮೀರಿ ಬೆಳೆಯುವ ಶಕ್ತಿಯನ್ನು ದಲಿತರು ಬೆಳೆಸಿಕೊಳ್ಳಬೇಕು"[೨] ಇದೆಲ್ಲಾ ಉತ್ತಮ ವಿಮರ್ಶೆಯಿಂದ ಮಾತ್ರ ಸಾಧ್ಯ ಎಂಬ ಅಭಿಪ್ರಾಯ ಮೂಡಿದೆ. ಆದರೆ, ಅಂಬೇಡ್ಕರ್‌ವಾದಿ ವಿಚಾರವಾದದ ತಾತ್ವಿಕ ನೋಟ–ಕ್ರಮವನ್ನು ಮುಂದುವರಿಸಿರುವ ಹೊಸ ತಲೆಮಾರಿನ ದಲಿತ ಕಾವ್ಯ, ಸಾಮಾಜಿಕ ಸತ್ಯಗಳಿಗೆ ದನಿಯಾಗುವ ಮೂಲಕ ತನ್ನ ಪ್ರಖರತೆ ಹೆಚ್ಚಿಸಿಕೊಂಡಿದ್ದು, ಸಹಜವಾಗಿಯೇ ಈ ತಲೆಮಾರುಗಳ ಕಾವ್ಯದ ಕಾಳಜಿ, ಬಂಧ ಮತ್ತು ಲಯ ಮಾದರಿಗಳು ಕೂಡ ಬದಲಾಗಿವೆ.

ಈ ಹೊಸ ತಲೆಮಾರುಗಳಲ್ಲಿ ಎದ್ದು ಕಾಣುವ ಸುಬ್ಬು ಹೊಲೆಯಾರ್ ತಮ್ಮ ಹಿಂದಿನ ತಲೆಮಾರುಗಳಂತೆಯೇ ದಲಿತ ಚಳವಳಿಯಿಂದ ಕಾವ್ಯಕ್ಕೆ ಬಂದು ಕ್ರಮೇಣ ಅಂಬೇಡ್ಕರ್‌ವಾದವನ್ನು ಗಾಂಧಿವಾದದ ಹಿನ್ನೆಲೆಯಲ್ಲಿ ಹೊಸದಾಗಿ ವಿವರಿಸಿಕೊಂಡ ಕವಿ. ಅವರ 'ಗಾಂಧಿಯನ್ನು ಪ್ರೀತಿಸಲಾರದವರು' ಹಾಗೂ 'ಗಾಂಧಿ ಬಂದಾಗ ಅಂಬೇಡ್ಕರ್ ಒಳಗಿದ್ದರು' ಪದ್ಯಗಳು ಗಾಂಧೀಜಿಯನ್ನು ದಲಿತ ಕಾವ್ಯ ಹಾಗೂ ದಲಿತ ಚಿಂತನೆಯನ್ನು ಬೆಸೆಯಲೆತ್ನಿಸಿವೆ. ಒಟ್ಟು ಜಗತ್ತಿನ ದುಗುಡದ ಬಗೆಗೂ ಬರೆಯುವ ಇವರು ನವ್ಯ ಕಾಲದಂತೆ ಗದ್ಯದ ಲಯ ಮಾದರಿಗಳನ್ನು ಕಾವ್ಯಕ್ಕೆ ಒಗ್ಗಿಸಲೆತ್ನಿಸಿದ್ದಾರೆ.

ಹೊಸ ತಲೆಮಾರಿನ ಅತ್ಯಂತ ಪ್ರತಿಭಾವಂತ ಕವಿಯಾಗಿದ್ದ ಎನ್. ಕೆ. ಹನುಮಂತಯ್ಯ ಸೀಮಿತ ಅರ್ಥದಲ್ಲಾದರೂ ಸಿದ್ಧಾಂತಗಳ ಪರೀಕ್ಷೆಯನ್ನು ತಮ್ಮ ಕಾವ್ಯಕ್ಕೆ ತಂದರು. ಸುಬ್ಬು ಹೊಲೆಯಾರ್, ಹನುಮಂತಯ್ಯ, ವಿ. ಎಂ. ಮಂಜುನಾಥ್, ವಿ. ಆರ್. ಕಾರ್ಪೆಂಟರ್– ಈ ನಾಲ್ವರೂ ತಾತ್ವಿಕತೆಯ ದೃಷ್ಟಿಯಿಂದ ಲಂಕೇಶರ ಪ್ರಭಾವವನ್ನು ಸ್ವೀಕರಿಸಿದವರು ಎಂಬ ಅಂಶ ಕೂಡ ಇವರ ಕಾವ್ಯದ ನುಡಿಗಟ್ಟು, ನೋಟಕ್ರಮ ಹಾಗೂ ತಾತ್ವಿಕತೆಗಳು ಭಿನ್ನವಾಗಿರಲು ಕಾರಣವಿರಬಹುದು.

ಮೂರು ದಶಕಕ್ಕಿಂತಲೂ ಹೆಚ್ಚು ಕಾಲ ಹರಿದಿರುವ ದಲಿತ ಕಾವ್ಯದಲ್ಲಿ ಮಹಿಳಾ ದನಿಗಳು ತೀರಾ ಕಡಿಮೆ ಎಂಬ ಅಂಶ ಏಕಕಾಲಕ್ಕೆ ಸ್ತ್ರೀವಾದಿ ಚಿಂತನೆ ಹಾಗೂ ದಲಿತ ಚಿಂತನೆಗಳೆರಡೂ ದಲಿತ ಮಹಿಳೆಯರನ್ನು ದೊಡ್ಡ ಮಟ್ಟದಲ್ಲಿ ಮುಟ್ಟಲು ಆಗದಿರುವ ಕೊರತೆಯನ್ನು ಎತ್ತಿ ಹೇಳುತ್ತದೆ. ಇಂಥ ಸನ್ನಿವೇಶದಲ್ಲಿ ಅನಸೂಯ ಕಾಂಬಳೆ ದಲಿತ ಕಾವ್ಯಕ್ಕೆ ಸ್ತ್ರೀ ದೃಷ್ಟಿಕೋನವನ್ನು ಬೆಸೆದು, ದಲಿತ ಸ್ತ್ರೀವಾದದ ಸ್ವರೂಪವನ್ನೂ ರೂಪಿಸಲೆತ್ನಿಸಿದ್ದಾರೆ. 'ಹಂಚವ್ವಳ ಹಾಡು' ತರದ ಪದ್ಯಗಳಲ್ಲಿ ಜನಪದ ದ್ರವ್ಯವನ್ನೂ ಬಳಸಿದ್ದಾರೆ. ಈ ಮಾದರಿಯಲ್ಲಿ ಜನಪದ ಲಯ ಹಾಗೂ ವಸ್ತುಗಳನ್ನು ವಡ್ಡಗೆರೆ ನಾಗರಾಜಯ್ಯನವರೂ ತಮ್ಮ ಕಾವ್ಯದಲ್ಲಿ ಪ್ರಯೋಗಿಸಿದ್ದಾರೆ. ಇದೇ ಬಗೆಯ ಮತ್ತೊಂದು ಹಾದಿಯ ಪಯಣವನ್ನು ಬಿಂಬಿಸುವ ಮಹದೇವ ಶಂಕನಪುರ ಅವರು ಮಂಟೇಸ್ವಾಮಿ ಚೈತನ್ಯವನ್ನು ತಮ್ಮ ಪದ್ಯಗಳಿಗೆ ತಂದಿರುವ ಮೂಲಕ ದಲಿತ ಕಾವ್ಯ ವೈವಿಧ್ಯತೆಗೆ ಕಾರಣರಾಗಿದ್ದಾರೆ.

ಈ ಎಲ್ಲ ಕವಿಗಳು ತಂತಮ್ಮ ಕಾವ್ಯದಲ್ಲಿ ಒಟ್ಟಾರೆಯಾಗಿ ಅಂಬೇಡ್ಕರ್‌ವಾದಿ ವಿಚಾರವಾದದ ತಾತ್ವಿಕ ನೋಟಕ್ರಮವನ್ನು ಮುಂದುವರಿಸಿದ್ದಾರೆ. ಜೊತೆಜೊತೆಗೇ ಅವರು ಧರ್ಮವನ್ನು ಹಾಗೂ ತಂತಮ್ಮ ದೇಶೀ ಭೂತಕಾಲವನ್ನು, ದಲಿತ ಪುರಾಣಗಳ ಲೋಕವನ್ನು ಹುಡುಕಿಕೊಳ್ಳುತ್ತಿರುವ ರೀತಿ ಕೂಡ ಕುತೂಹಲಕರವಾಗಿದೆ. ಸುಬ್ಬು ಹಾಗೂ ಹನುಮಂತಯ್ಯನವರ ಕಾವ್ಯದಲ್ಲಿ ಅಂಬೇಡ್ಕರ್ ರೂಪಿಸಿಕೊಟ್ಟ ನವಬೌದ್ಧ ಮಾರ್ಗ; ವಡ್ಡಗೆರೆ ನಾಗರಾಜಯ್ಯನವರ ಕಾವ್ಯದಲ್ಲಿರುವ ಆದಿಜಾಂಬವ ಮೂಲದ ಆಸರೆ; ಮಹದೇವ ಶಂಕನಪುರ ಅವರ ಕಾವ್ಯದಲ್ಲಿ ಮಂಟೇಸ್ವಾಮಿ – ಮಲೆಮಹದೇಶ್ವರ ಪರಂಪರೆಯ ಮರುಹುಡುಕಾಟ; ಮಂಜುನಾಥರ ಪದ್ಯಗಳಲ್ಲಿ ಅಲ್ಲಲ್ಲಿ ಸುಳಿಯುವ ಕ್ರೈಸ್ತ ಧರ್ಮ ಕೊಟ್ಟ ವಿಮೋಚನೆಯ ಹಾದಿಗಳು ಕೂಡ ಈ ಹೊಸ ತಲೆಮಾರಿನ ಕಾವ್ಯಕ್ಕೆ ಭಿನ್ನ ತಾತ್ವಿಕ ಭಿತ್ತಿಗಳನ್ನೂ ಭಾಷಾಲೋಕವನ್ನೂ ಒದಗಿಸಿವೆ.

ಇಷ್ಟೆಲ್ಲ ವಿಶಿಷ್ಟ ಅಂಶಗಳು ಹೊಸ ಪೀಳಿಗೆಯ ದಲಿತ ಕಾವ್ಯದಲ್ಲಿ ಕಾಣಬರುತ್ತಿದ್ದರೂ ಇವು ಅಂತಿಮವಾಗಿ ಬಹುತೇಕ ಸಾಮಾಜಿಕ ಸತ್ಯಗಳನ್ನೇ ಕುರಿತು ಹೆಚ್ಚು ಹೇಳುತ್ತಿರುವಂತೆ ಕಾಣುತ್ತವೆನ್ನುವುದು ನಿಜ. ಆದರೆ, ಈ ಕವಿಗಳು ಬಳಸುತ್ತಿರುವ ಚೌಕಟ್ಟುಗಳು ಹಾಗೂ ಧೋರಣೆಗಳು ತಾವು ಮಂಡಿಸುತ್ತಿರುವ ಅನುಭವಗಳ ಎಲ್ಲ ಮುಖಗಳನ್ನು ಗಾಢ ಪರೀಕ್ಷೆಗೆ ಒಳಪಡಿಸುವಲ್ಲಿ ಶಕ್ತವಾಗಿದ್ದಂತಿಲ್ಲ; ಅಥವಾ ಆ ರೀತಿಯ ನಿಷ್ಠುರ ಪರೀಕ್ಷೆಯ ಅಗತ್ಯದ ಬಗ್ಗೆ ಈ ಕವಿಗಳು ಹೆಚ್ಚು ಯೋಚಿಸಿರುವ ಸೂಚನೆಗಳು ಅವರ ಕಾವ್ಯದಲ್ಲಿ ಕಂಡು ಬರುತ್ತಿಲ್ಲ. ಹೀಗಾಗಿ ಕಾವ್ಯರಚನೆ ಒದಗಿಸುವ ಬಹುಮುಖ್ಯ ಸ್ವಾತಂತ್ರ್ಯಗಳಲ್ಲಿ ಒಂದಾದ ಸಕಲ ಅನುಭವಗಳನ್ನು ಹಾಗೂ ಘಟನೆಗಳನ್ನು ತೀವ್ರವಾಗಿ ಪರೀಕ್ಷಿಸುವ ಸ್ವಾತಂತ್ರ್ಯವನ್ನು ಈ ಕವಿಗಳು ಉಪೇಕ್ಷಿಸಿದಂತೆ ಕಾಣುತ್ತದೆ. ಜಾನಪದ ಮಹಾಕಾವ್ಯಗಳನ್ನು ಆಧುನಿಕ ಸಿದ್ಧಾಂತಗಳನ್ನು ಅಳವಡಿಸುವ ಮೂಲಕ ಸಬಾಲ್ಟ್ರನ್ ಅಧ್ಯಯನದ ಆಶಯಗಳ ಜೊತೆ ಅವುಗಳ ಬದುಕಿನ ವಿವರಗಳಲ್ಲಿ ಇರಬಹುದಾದ ಶೋಷಣೆಯ ರೂಪಗಳನ್ನು ಶೋಧಿಸುವ ಕೆಲಸವೂ ಇಂದಿನ ಜಾನಪದ ಸಾಹಿತ್ಯ ವಿಮರ್ಶೆಯಲ್ಲಿ ನಡೆಯುತ್ತಿದೆ. ಜೊತೆಗೆ, ಕಾವ್ಯದ ಮೂಲ ಪ್ರಾಣಗಳಲ್ಲಿ ಒಂದಾದ ಭಾಷಿಕ ಪ್ರಯೋಗಗಳ ಸಾಧ್ಯತೆಗಳ ಬಗ್ಗೆ ಈ ಕವಿಗಳಲ್ಲಿ ಹೆಚ್ಚಿನ ಉತ್ಸಾಹ ಇದ್ದಂತಿಲ್ಲ. ಹೀಗಾಗಿ, ಕಾವ್ಯ ಪ್ರಕಾರದಲ್ಲಿ ಕನ್ನಡದ ಶ್ರೇಷ್ಠ ಕವಿಗಳು ಸಾಧಿಸಿರುವ ಭಾಷಿಕ ಪ್ರಯೋಗಗಳು ಹಾಗೂ ಅವುಗಳ ಸೌಂದರ್ಯಾತ್ಮಕ ಆನಂದವನ್ನು ಈ ಕವಿಗಳು ಸಾಧಿಸಲಾಗದೆ ಅವರ ಕಾವ್ಯ ಬಳಲಿರುವಂತೆ ಕಾಣುತ್ತದೆ ಎಂಬುದು ಇಂದಿನ ಸಂಕೀರ್ಣ ಸ್ಥಿತಿಗಳನ್ನು ಮನದಟ್ಟು ಮಾಡಿಕೊಡುತ್ತದೆ.

ಸಮಕಾಲೀನ ಕಾವ್ಯವನ್ನು ಮತ್ತು ಅದರ ವಸ್ತುಗಳ ವೈವಿಧ್ಯವನ್ನು ಕುರಿತು ಬಂದಿರುವ ಈ ಅಭಿಪ್ರಾಯ ಇವತ್ತಿನ ಕವಿತೆಯನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಹಾಯ ಮಾಡಬಹುದು ಎನಿಸುತ್ತದೆ. "ಇಂದಿನ ಕವಿತೆಯನ್ನು ಕುರಿತು ಬರೆಯ ಹೊರಟರೆ ಹಲವು ಇಕ್ಕಟ್ಟುಗಳು, ಸವಾಲುಗಳು ಎದುರಾಗಬಲ್ಲವು ಎಂದು

ಯಾರಿಗಾದರೂ ಅನಿಸುತ್ತದೆ. ನಮ್ಮ ಪೂರ್ವಸೂರಿಗಳು ಹಿಡಿದ ಕಾವ್ಯದ ಪರಿಕರಗಳನ್ನು ಬಳಸಿಕೊಂಡು ಇಂದಿನವರ ಕವಿತೆಯನ್ನು ಅಭ್ಯಾಸ ಮಾಡಿದರೆ ನಮಗೆ ಅಷ್ಟೊಂದು ಪ್ರಯೋಜನಗಳು ಸಿಗುವುದಿಲ್ಲ. ಹಾಗಾಗಿಯೇ ದೊಡ್ಡವರಿಗೆ ಇಂದಿನ ಕವಿತೆ ಏನಾಗುತ್ತಿದೆ ಎಂಬುದರ ಬಗ್ಗೆ ಸಾಕಷ್ಟು ಅನುಮಾನ, ಸಂದೇಹಗಳು ಎದುರಾಗಿವೆ. ಕಾವ್ಯದ ಸಂಗತಿಗಳು ಇಂದು ಯಾವ ದಿಕ್ಕಿನಿಂದಲಾದರೂ ನುಗ್ಗಬಹುದು; ಇಂಥದ್ದೇ ಮೂಲದಿಂದ ಬಂದಿದೆ ಎಂದು ಹೇಳಲು ಬರವುದಿಲ್ಲ. ನಮ್ಮ ಹಿರಿಯ ಜೀವಗಳು ಕವಿತೆಗೆ ಬೇಕಾದ ಆಕರಗಳನ್ನು ಎರಡು ದಿಕ್ಕಿನಿಂದ ಪಡೆಯುತ್ತಿದ್ದರು ಎಂಬುದು ಸದ್ಯಕ್ಕೆ ತಿಳಿಯಬಹುದು. ಒಂದು; ಸ್ವ ಅನುಭವದಿಂದ ಎರಡು; ಭಾರತೀಯ ತತ್ವಶಾಸ್ತ್ರೀಯ ನೆಲೆಗಳಿಂದ. ಇದನ್ನ ಧಾಟಿಕೊಂಡು ನಮ್ಮದೇ ತಿಳಿವಿನ ದಾರಿಯಾಗಿದ್ದ ಜನಪದ ಲೋಕದಿಂದ ಪಡೆಯಬಲ್ಲರಾಗಿದ್ದರು. ಇದರಲ್ಲಿ ನಮ್ಮ ಸುತ್ತಣ ನಿಸರ್ಗದ ಅವಯವಗಳು ಬದುಕನ್ನು ಅದರ ಪಲ್ಲಟಗಳನ್ನು ಗರ್ಭೀಕರಿಸಿಕೊಂಡಿದ್ದು ತಿಳಿದ ಸಂಗತಿ."[೧೩] ಆದ್ದರಿಂದ ಎಳೆಯರ ಕವಿತೆಗೆ ಮೂಲ ಆಕರಗಳು ಯಾವುದೆಂಬುದುದನ್ನು ಈ ಹಿನ್ನೆಲೆಗಳಿಂದ ಗ್ರಹಿಸಿದರೆ ಅವರ ಕಾವ್ಯ ಹೆಚ್ಚು ಹೆಚ್ಚು ಅನುಸಂಧಾನಗೊಳ್ಳಲು ಸಾಧ್ಯವಾಗುತ್ತದೆ. ಹಿಂದಿನವರು ಸವೆದ ಹಾದಿಯಲ್ಲಿಯೇ ನಾವು ಸಾಗಿದರೆ ಇವತ್ತಿನ ಕಾವ್ಯಕ್ಕೆ ನ್ಯಾಯ್ಯ ಸಲಿಸಲಾಗುವುದಿಲ್ಲ. ಬದಲಿಗೆ ಸಮಕಾಲೀನ ಇಕ್ಕಟ್ಟುಗಳನ್ನೂ ನಾವು ಮುಖ್ಯವಾಗಿ ಗ್ರಹಿಸಬೇಕಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ದಲಿತ ಬಂಡಾಯದ ಸಂದರ್ಭದಲ್ಲಿ ಕಾಣಿಸಿಕೊಂಡ ಹಲಬಗೆಯ ಸಮುದಾಯಗಳ ಅನುಭವಗಳು ಈಗ ಅದಕ್ಕಿಂತ ಬೇರೆಬಗೆಯಲ್ಲಿ ಕಾಣಿಸಿಕೊಳ್ಳುತ್ತಿವೆ. ಅಂದಿನ ದಲಿತ ಬಂಡಾಯದಲ್ಲಿ ಅಲ್ಲಲ್ಲಿ ಕಾಣಿಸಿಕೊಂಡ ನುಡಿಚಿತ್ರಗಳು ಇವತ್ತಿನ ಕವಿತೆಗೆ ಬೇಕಿಲ್ಲ. ದಲಿತ ಬಂಡಾಯ ಎಂಬ ಪರಿಕಲ್ಪನೆಗಳೇ ಇಂದು ಮರು ರೂಪಕ್ಕೆ ತಿರುಗಿವೆ. ಅಥವಾ ಅನುಭವಗಳ ಪ್ರಾಮಾಣಿಕತೆಗಳು ಮುನ್ನೆಲೆಗೆ ಬರುತ್ತಿವೆ. ಧರ್ಮ, ಸಂಸ್ಕೃತಿ, ಜಾತಿ, ಪ್ರೇಮ, ನಿಸರ್ಗದ ಪ್ರತಿಮೆಗಳು ಇಂದು ಪಡೆದುಕೊಳ್ಳುತ್ತಿರುವ ಅರ್ಥಗಳು ಸಾರ್ವಜನಿಕ ಆಯಾಮಗಳ ಬೇರುಗಳಿಂದಲೇ ಪ್ರವೇಶವಾಗುತ್ತಿವೆ. ಆರ್ಥಿಕತೆಯ ಪಲ್ಲಟಗಳು, ಆಧುನಿಕೋತ್ತರ ಎಂದು ಕರೆಯಬಹುದಾದ ಅನುಭವಗಳು ಭಾರತೀಯ ಹಾಗೂ ಕರ್ನಾಟಕ ಸಂದರ್ಭದಲ್ಲಿ ರೂಪುಗೊಳ್ಳುತ್ತಿರುವ ರೀತಿಗಳು; ಸಮಕಾಲೀನ ಘಟನೆಗಳು ಪಡೆದುಕೊಳ್ಳುತ್ತಿರುವ ಸ್ವರೂಪಗಳು; ಹೆಣ್ಣಿನ ನೋವಿನ ನೆಲೆಗಳು; ಇನ್ನೂ ಹೊಸ ವೇಷಗಳನ್ನು ಧರಿಸುತ್ತಿರುವ ಧಾರ್ಮಿಕ ಒಳ ಗುದ್ದಾಟಗಳು ನಮ್ಮ ಕಣ್ಣ ಮುಂದೆ ಬೇರೆ ಅವತಾರಗಳನ್ನು ತಾಳುತ್ತಲೇ ಇವೆ. ಕೊನೆಗೂ ಇವೆಲ್ಲವೂ ನಡೆಯುತ್ತಿರುವುದು ಒಟ್ಟು ಸಮಾಜದಲ್ಲಿಯೇ ಆದ್ದರಿಂದ ಇವೆಲ್ಲವನ್ನು ಕವಿತೆಯ ಮಾಧ್ಯಮವು ತನಗೆ ದಕ್ಕಿದಷ್ಟು ಕಸುವುನಿಂದ ಅಭಿವ್ಯಕ್ತಿಗೆ ಒಳಪಡಿಸುವ ಪ್ರಯತ್ನ ನಡೆಸುತ್ತಿದೆ. ಆ ದಿಕ್ಕಿನಲ್ಲಿ ಇವತ್ತಿನ ಕವಿತೆಗಳು ಒಂದಾಗಿಯೂ, ಹಲವೊಮ್ಮೆ ಬೇರೆಯಾಗಿಯೂ ಕಾಣಿಸುತ್ತವೆ. ಕವಿತೆಗೆ ವಸ್ತು ಏನಾದರೂ ಆಗಬಹುದೆಂಬುದು ಈ ಕಾಲದ ನಿಲುವು ಆಗಿದೆ. ಹೊಸಬರ ಕವಿತೆಗೆ ದಟ್ಟವಾದ ಜೀವನಾನುಭವದ ಅಗತ್ಯವಿದೆ.

ಆದರೆ ಇವತ್ತಿನ ನಂಬಿಕೆಯ ಪ್ರಶ್ನೆಯಲ್ಲಿ ಮನುಷ್ಯ ದ್ವಂದ್ವದಲ್ಲಿದ್ದಾನೆ. ಮನುಷ್ಯ ಸ್ವ ಬದುಕು ಮತ್ತು ಅನ್ಯ ಬದುಕುಗಳ ನಡುವೆ ಹಲ ಬಗೆಯ ಸಂಕಟಗಳನ್ನು ಎದುರಿಸುತ್ತಿದ್ದಾನೆ. ತಾನು ಎದುರಿಸಬೇಕಾದ್ದು ತನ್ನನ್ನೋ? ತನ್ನೊಳಗಿನ ಒತ್ತಡಗಳನ್ನೋ ಅಥವ ಸಮಾಜದ ಒತ್ತಡಗಳನ್ನೋ ಎಂಬ ಜಿಜ್ಞಾಸೆ ಕಾಡುತ್ತಿದೆ. ಕೆಲವೊಮ್ಮೆ ಸ್ವ ಒತ್ತಡಗಳೇ ಸಮಾಜದ ಒತ್ತಡಗಳೂ ಆಗಿರಬಹುದಾದ ಸಂಭವವಿದೆ. ಈ ಹಿನ್ನಲೆಗಳಿಂದ ಹೊಸಬರ ಕವಿತೆಯ ಒಳಗೆ ಇವೆಲ್ಲವೂ ಮಸುಕು ಮಸುಕಾಗಿ ಕಾಣಿಸುತ್ತ ಸಾಗಿವೆ.

ಕಾವ್ಯ ವಿಮರ್ಶೆಯಲ್ಲಿ ಹಲವು ಬಾರಿ ಪಾಶ್ಚಾತ್ಯರು ಬಳಸುವ ಪರಿಕಲ್ಪನೆಗಳನ್ನು ಯಥಾವತ್ತಾಗಿ ಅನ್ವಯಮಾಡಿ ಬಳಸಲಾಗುತ್ತದೆ. ಆದರೆ ನಮ್ಮ ಸಂದರ್ಭಗಳು ಹಲವು ಬಾರಿ ಅವುಗಳಿಗೆ ಬಹಳ ಭಿನ್ನವಾಗಿ ನಿರ್ಮಾಣಗೊಂಡಿರುತ್ತದೆ. ಇದಕ್ಕೆ ಸಣ್ಣ ನಿದರ್ಶನವೆಂದರೆ "ಇಂದಿಗೂ ಬುದ್ಧ, ಅಂಬೇಡ್ಕರ್, ಗಾಂಧೀ ಕುರಿತ ರೂಪಕಗಳು ಕಾಣಿಸಿಕೊಳ್ಳುತ್ತಿರುವುದು. ಇವರನ್ನು ಕನ್ನಡದ ಪ್ರಾತಿನಿಧಿಕ ಕವಿಗಳು ಬಳಸುವುದಕ್ಕೂ ಈಗಿನ ಕವಿಗಳು ಬಳಸುವ ರೂಪಕಗಳಿಗೂ ಹಲವು ರೀತಿಯಲ್ಲಿ ವ್ಯತ್ಯಾಸಗಳು ಕಾಣುತ್ತವೆ. ಹಲವು ನೆಲೆಗಳಲ್ಲಿ ಬುದ್ದ ಮತ್ತು ಅಂಬೇಡ್ಕರ್ ಇಂದಿನ ಸಾಂಸ್ಕೃತಿಕ ಪ್ರತಿಮೆಗಳಾಗಿಯೂ ಕಾಣಿಸಬಲ್ಲರು. ಅಂದರೆ ನಾವು ಎದುರುಗೊಳ್ಳುತ್ತಿರುವ ಎರಡು ಪರಿಕಲ್ಪನೆಗಳಾದ 'ಬಹುತ್ವ' ಮತ್ತು 'ನವ ರಾಷ್ಟ್ರೀಯತೆ'ಗಳು ನಮ್ಮ ಚಿಂತನೆಯ ಕ್ರಮಗಳನ್ನು ಅಲುಗಾಡಿಸುತ್ತಿವೆ. ಬಹುತ್ವ ನಮ್ಮ ನೆಲೆದ ನಿಲುವು. ಇದನ್ನು ಒಡೆಯುವ ಹವಣಿಕೆಯಲ್ಲಿ ನವ ರಾಷ್ಟ್ರೀಯತೆ ಇದೆ. ಆದರೆ ಎರಡರ ನಡುವೆ ಮುಗ್ಧಲೋಕವೊಂದು ಮಾಯವಾಗುವ ಸ್ಥಿತಿ ಇದೆ"[೧೪]. ಹೊಸಬರ ಕವಿತೆ ಈ ಮುಗ್ಧಲೋಕವನ್ನು ಹೆಚ್ಚು ತಾಕುತ್ತಿದೆ. ಪರಂಪರೆಗಿಂತ ಸಮಕಾಲೀನ ಅನುಭವ ಅವರನ್ನು ಈ ದಿಶೆಯತ್ತ ಮುನ್ನೆಡಸುತ್ತಿದೆ.

ಕಳೆದ ದಶಕದ ಕಾವ್ಯ ರೂಪದಲ್ಲಿ, ಭಾಷೆಯಲ್ಲಿ, ನಿರೂಪಣೆಯಲ್ಲಿ ಅಂತಹ ಗಂಭೀರವಾದ ಸಾಧನೆಯನ್ನು ತೋರಿಲ್ಲ, ಅಂತಹ ನಿದರ್ಶನಗಳು ಕಾಣುತ್ತಿಲ್ಲ ಎಂಬ ತೀರ್ಮಾನಗಳಿದ್ದರೂ ಅದು ಸಾಗುತ್ತಿರುವ ಹಾದಿ ಬಹುತೇಕ ಸೂಕ್ತವಾದುದೇ ಆಗಿದೆ. ಜೊತೆಗೆ ಸಮೃದ್ಧ ಸಾಹಿತ್ಯ ಪರಂಪರೆಯಿರುವ ಕಡೆ ಹೊಸ ಬರಹಗಳನ್ನು ಹಠಾತ್ತಾಗಿ ಸ್ವೀಕರಿಸಿ ಗೌರವಿಸುವುದು ತುಸು ನಿಧಾನವಾದ್ದರಿಂದ ಕಳೆದ ದಶಕದ ಕಾವ್ಯದಲ್ಲಿ ವಿಮರ್ಶಕರಿಗೆ ಬಹಳ ಬಿಕ್ಕಟ್ಟುಗಳು ಕಂಡಿವೆಯಾದರೂ ಅದರ ಜೊತೆಗೆ ಭವಿಷ್ಯದ ಬಗ್ಗೆ ಆಶಾಭಾವ ಮೂಡಿಸುವ ಕೃತಿಗಳ ರಚನೆಯೂ ಆಗುತ್ತಿದೆ ಎಂಬ ಅಭಿಪ್ರಾಯ ಸಾಮಾನ್ಯವಾಗಿ ವ್ಯಕ್ತವಾಗಿದೆ.

ಮಹಾಕಾವ್ಯ ಕೇಂದ್ರಿತ ವಿಮರ್ಶೆ

ಕಳೆದ ಶತಮಾನಕ್ಕೆ ಹೋಲಿಸಿದರೆ ಕಳೆದ ದಶಕದಲ್ಲಿ ಶಿಷ್ಟ ಮಹಾಕಾವ್ಯಗಳ ರಚನೆ ಮತ್ತು ಅಧ್ಯಯನ ವಿಶೇಷವಾಗಿ ನಡೆಯಲಿಲ್ಲ. ಲತಾ ರಾಜಶೇಖರ ಅವರು ಬುದ್ಧ, ಬಸವ ಮೊದಲಾದವರ ಬಗ್ಗೆ ಬರೆದ ಕೆಲವು ಮಹಾಕಾವ್ಯಗಳು ಮತ್ತು ವೀರಪ್ಪ ಮೊಯ್ಲಿಯವರ

‘ಶ್ರೀರಾಮಾನ್ವೇಷಣಂ’ ಮಹಾಕಾವ್ಯದ ಕೆಲವು ಸೋಪಾನಗಳು ಮಾತ್ರ ಈ ದಶಕದಲ್ಲಿ ಪ್ರಕಟಗೊಂಡವು. ಹಾಗೆಯೇ ಶ್ರೀಧರ್ ಹೆಗಡೆ ಭದ್ರನ್ ಅವರು ಆಧುನಿಕ ಕನ್ನಡ ಮಹಾಕಾವ್ಯಗಳನ್ನು ಕುರಿತು ಗಂಭೀರ ಅಧ್ಯಯನ ನಡೆಸಿದ್ದಾರೆ. ಆದರೆ ಇಪ್ಪತ್ತೊಂದನೇ ಶತಮಾನದ ಮೊದಲ ದಶಕದಲ್ಲಿ ಶಿಷ್ಟ ಕಾವ್ಯಗಳಿಗಿಂತ ಜನಪದರ ಸೃಷ್ಟಿಗಳಾಗಿರುವ ಮಹಾಕಾವ್ಯಗಳ ಕಡೆ ಹೆಚ್ಚು ಗಮನ ಹರಿಸಲಾಯಿತು. ಇದರಲ್ಲಿ ಸಿ. ಎನ್. ರಾಮಚಂದ್ರನ್ ಅವರ ಜಾಗತಿಕ ಜನಪದ ಮಹಾಕಾವ್ಯಗಳ ಮೇಲಿನ ಅಧ್ಯಯನ ‘ಹೊಸ ಮಡಿಯ ಮೇಲೆ ಚದುರಂಗ’ ಬಹು ಗಂಭೀರವಾದ ಕೃತಿಯಾಗಿದೆ.

ನಮ್ಮ ಸಾಂಸ್ಕೃತಿಕ ಅಧ್ಯಯನಗಳು ಹಾಗೂ ಸಮಾಜಶಾಸ್ತ್ರೀಯ ಅಧ್ಯಯನಗಳು ಅಥವಾ ಜನಪದ ಅಧ್ಯಯನಗಳು ಕಾಲಕಾಲಕ್ಕೆ ಬಿಕ್ಕಟ್ಟನ್ನು ಸೃಷ್ಟಿಸಿದಾಗ ಅವಕ್ಕೆ ಉತ್ತರಗಳನ್ನು ಹುಡುಕುವ ಪ್ರಕ್ರಿಯೆಯಲ್ಲಿ ಇದುವರೆಗೆ ಕೇವಲ ಶಾಸ್ತ್ರೀಯ ಆಕರಗಳನ್ನು ಆಧಾರವಾಗಿಟ್ಟುಕೊಳ್ಳಲಾಗುತ್ತಿತ್ತು. ಈಗ ಈ ಕ್ರಮಕ್ಕೆ ಹೊರತಾಗಿ ಮೌಖಿಕವನ್ನು ಪರಿಗಣಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ಹಿಂದಿನಿಂದಲೂ ನಮ್ಮ ಸಾಂಸ್ಕೃತಿಕ ಆಧ್ಯಯನದ ತಳಹದಿ ಯಾವಾಗಲೂ ಶಾಸ್ತ್ರೀಯವಾದದ್ದೇ. ನಂತರ ಈ ನೆಲಕ್ಕೆ ಸಂಬಂಧಿಸಿದ್ದನ್ನು ನೋಡಿದಾಗ ಮಲೆಮಾದೇಶ್ವರ, ಜುಂಜಪ್ಪ ಕಾವ್ಯ, ಅಥವಾ ಧರೆಗೆ ದೊಡ್ಡವರು ಕಾವ್ಯ, ಅಥವಾ ಜನಪದ ಮಹಾಭಾರತ, ಇತ್ಯಾದಿಗಳೆಲ್ಲಾ ಸಿಕ್ಕಿವೆ. ನಮ್ಮ ಪರಂಪರೆಯನ್ನು ಕಟ್ಟುವುದು ಅಥವಾ ಅರ್ಥಮಾಡಿಕೊಳ್ಳುವುದು ಎಂದರೆ ಇವನ್ನು ಶ್ರದ್ಧೆಯ ಮೂಲಕ ನೋಡುವ ಅಗತ್ಯ ಬೀಳುತ್ತದೆ. ನಮ್ಮ ಸಾಂಸ್ಕೃತಿಕ, ಪರಂಪರೆಯಲ್ಲಿ ಪ್ರತಿರೋಧದ ನೆಲೆಗಳನ್ನು ಅರ್ಥ ಮಾಡಿಕೊಳ್ಳಲು ಇವುಗಳೇ ನಮಗಿರುವ ಪ್ರಮುಖ ಆಕರಗಳು.

ಆದರೆ, ಕಳೆದ ಕೆಲವು ದಶಕಗಳಲ್ಲಿ ಕರ್ನಾಟಕದಲ್ಲಿ ನಡೆದ ಸಾಮಾಜಿಕ-ರಾಜಕೀಯ ಬದಲಾವಣೆಗಳು, ಅಕಡೆಮಿಕ್ ಅಧ್ಯಯನದ ಸ್ವರೂಪ ಮತ್ತು ಆಯ್ಕೆಗಳನ್ನು ಸಂಪೂರ್ಣವಾಗಿ ಪರಿವರ್ತಿಸಿವೆ. ಈಗ ಜಾನಪದ ಮಹಾಕಾವ್ಯಗಳನ್ನು ಇದುವರೆಗೆ ಮನ್ನಣೆ ಪಡೆದಿದ್ದ ಶ್ರೇಷ್ಠ ಸಾಹಿತ್ಯಕೃತಿಗಳಿಗೆ ಸರಿಸಮನಾಗಿ ಪರಿಗಣಿಸಲಾಗುತ್ತಿದೆ. ಸಂಸ್ಕೃತಿ ವಿಮರ್ಶೆಯ ದಿಕ್ಕಿನಲ್ಲಿ ಚಲಿಸುತ್ತಿರುವ ವಿಮರ್ಶಕರಿಗೂ ಇವು ಅಧ್ಯಯನದ ಅಮೂಲ್ಯ ಆಕರಗಳಾಗಿ ಕಂಡಿವೆ. ಈಗ ಸಾಹಿತ್ಯವೆಂಬ ಕಲೆಯನ್ನು ಕುರಿತ ವಿಚಾರಗಳು ಬಹಳ ವ್ಯಾಪಕವಾದ ಹಿನ್ನೆಲೆಯನ್ನು ಹೊಂದಿವೆ. ‘ಪ್ರಮಾಣ/ಶಿಷ್ಟ ಭಾಷೆ’ಯ ಚೌಕಟ್ಟುಗಳನ್ನು ಮೀರುವುದು ಕೂಡ ಗುಣವೇ ಇರಬಹುದೆಂಬ ನಿಲುವು ಈಗ ಮಾನ್ಯವಾಗಿದೆ.

ಜನಪದ ಮಹಾಕಾವ್ಯಗಳು ಮೌಖಿಕವಾಗಿರುವುದರಿಂದ, ಅವುಗಳನ್ನು ಲಿಖಿತ ರೂಪದಲ್ಲಿ ಪ್ರಕಟಿಸಿದಾಗ ಕೆಲವು ಪರಿಮಿತಿಗಳು ಏರ್ಪಡುತ್ತವೆ. ಅವುಗಳ ಚಲನಶೀಲಗುಣವು ಇಲ್ಲವಾಗುತ್ತದೆ. ಅಂತೆಯೇ ಗೇಯತೆಯೂ ಕೂಡ ಊಹೆಯ ವಸ್ತುವಾಗಿಬಿಡುತ್ತದೆ. ಈ ಕಾವ್ಯಗಳ ಸಂವಹನ ಮತ್ತು ಸಂರಕ್ಷಣದ ಕೆಲಸದಲ್ಲಿ ಹಾಡುಗಾರರು – ನಿರೂಪಕರು ಮುಖ್ಯವಾದ ಪಾತ್ರ ವಹಿಸುತ್ತಾರೆ. ಅವರಿಗೆ ತಾವು

ನಿರೂಪಿಸುತ್ತಿರುವ ಕಥೆಯ ಸ್ಥೂಲವಾದ ರೂಪುರೇಷೆಗಳು ತಿಳಿದಿರುತ್ತವೆ. ಹಾಗೆಯೇ ಯಾವುದೇ ಸಂದರ್ಭದಲ್ಲಿ ಬಳಸಬಹುದಾದ ಕೆಲವು ಸೂತ್ರರೂಪದ ವಿನ್ಯಾಸಗಳು ಗೊತ್ತಿರುತ್ತವೆ. ಆದ್ದರಿಂದಲೇ ಅವರು ನೀಡುವ ಪ್ರತಿಯೊಂದು ಪ್ರದರ್ಶನವೂ ಹೊಸ ಪಠ್ಯವೊಂದಕ್ಕೆ ಜನ್ಮ ಕೊಡುತ್ತದೆ. ಅಲ್ಲದೆ ಪ್ರತಿಯೊಬ್ಬ ಗಾಯಕನೂ ತಾನು ಹಾಡುತ್ತಿರುವ ಕಾವ್ಯದ ತನ್ನದೇ ಆದ ಆವೃತ್ತಿಯನ್ನು ಹೊಂದಿರುತ್ತಾನೆ. ಅದು ಅವನಿಗೆ ಗುರುಪರಂಪರೆಯಿಂದ ಹರಿದು ಬಂದಿರುತ್ತದೆ. ಅವರು ಅದನ್ನು ಹಾಡುವ ಧಾರ್ಮಿಕ ಮತ್ತು ಆಚರಣಾತ್ಮಕ ಸಂದರ್ಭಗಳು ಆಯಾ ಪಠ್ಯದ ಸ್ವರೂಪವನ್ನು ನಿರ್ಧರಿಸುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ಸಿ. ಎನ್. ರಾಮಚಂದ್ರನ್ ಅವರು ಕನ್ನಡ ಮೌಖಿಕ ಪರಂಪರೆಯ ಜನಪದ ಮಹಾಕಾವ್ಯಗಳನ್ನು ವ್ಯಾಪಕವಾಗಿ ಅಭ್ಯಾಸಮಾಡಿ, ಜಾನಪದದ ವಿನ್ಯಾಸಗಳನ್ನು ಚಿಂತನೆಗಳನ್ನು ತಮ್ಮ ಸಾಹಿತ್ಯವಿಮರ್ಶೆಯ ಆಲೋಚನಾ ಕ್ರಮದ ಜೊತೆಗೆ ಸೇರಿಸಿಕೊಂಡು ಈ ಕೃತಿ ರಚಿಸಿದ್ದಾರೆ. ಈ ಕೃತಿಯಲ್ಲಿ ಕನ್ನಡದ ಮಲೆ ಮಾದೇಶ್ವರ, ಮಂಟೇಸ್ವಾಮಿ, ಹಾಲುಮತ ಮಹಾಕಾವ್ಯ, ಜುಂಜಪ್ಪ, ಕುಮಾರರಾಮ, ಕೃಷ್ಣಗೊಲ್ಲರ ಕಾವ್ಯ, ತುಳು ಭಾಷೆಯ ಸಿರಿ, ತೆಲುಗಿನ ಪಲ್ನಾಟಿ ವೀರುಲ ಕಥಾ, ತಮಿಳಿನ ಅಣ್ಣನ್ ಮಾರ್ ಕತ್ಯೆ, ರಾಜಾಸ್ಥಾನಿಯ ಪಾಬೂಜಿ, ಅವಧಿ ಭಾಷೆಯ ಚನ್ಯೆನಿ, ಟಿಬೆಟನ್ ಮಂಗೋಲಿಯನ್ ನ ಗೆಸೆರ್ ರಾಜ, ಅರಾಬಿಕ್ ನ ಅಂತರ್, ಕಿರ್ಘೀಜ್ ನ ಮನಸ್, ಫಿನಿಷ್ ನ ಕಲೆವಲ, ಮಾಲಿಯ ಸುನ್ಜಾತ, ದಕ್ಷಿಣ ಅಮೇರಿಕಾದ ಮೊಹಾವೆ ಮಹಾಕಾವ್ಯ, ಜಪಾನ್ ಐನು ಕೋಟನ್ ಉಟುನ್ನೈ ಇಷ್ಟು ಮಹಾಕಾವ್ಯಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಕನ್ನಡದ ಜಾನಪದ ಮಹಾಕಾವ್ಯಗಳ ಅಧ್ಯಯನ ಕುರಿತಂತೆ ಇದೊಂದು ಮಹಾತ್ವಾಕಾಂಕ್ಷೆಯ ಕೃತಿ. ಕನ್ನಡದ ಜನಪದ ಮಹಾಕಾವ್ಯಗಳನ್ನು ಜಾಗತಿಕ ಜನಪದ ಮಹಾಕಾವ್ಯಗಳ ಜತೆ ಅಧ್ಯಯನ ಮಾಡಿರುವುದು ಈ ಕೃತಿಯ ಮೌಲ್ಯ ಹೆಚ್ಚಲು ಕಾರಣವಾಗಿದೆ. ಕನ್ನಡದ ಸಾಹಿತ್ಯ ವಿಮರ್ಶೆಯು ಸಾಂಸ್ಕೃತಿಕ ವಿಮರ್ಶೆಯಾಗಿ ರೂಪಾಂತರಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಅದಕ್ಕೆ ಪೂರಕವಾಗಿ ಇದೊಂದು ಬಹುಶಿಸ್ತೀಯ ಅಧ್ಯಯನವಾಗಿದೆ. ಕನ್ನಡದಲ್ಲಿ ಈ ರೀತಿಯ ಅಧ್ಯಯನವನ್ನು ಶಂಬಾ ಜೋಶಿ, ಡಿ. ಆರ್. ನಾಗರಾಜ್, ಕೆ. ವಿ. ನಾರಾಯಣ, ಎಚ್. ಎಸ್. ಆರ್, ರಹಮತ್ ತರೀಕೆರೆ, ರಾಜೇಂದ್ರ ಚೆನ್ನಿ, ಮೊಗಳ್ಳಿ ಗಣೇಶ್ ಮುಂತಾದವರಿಂದ ಬಿಡಿ ಬಿಡಿಯಾಗಿ ಈ ಬಗೆಗಿನ ಸಂಶೋಧನೆ, ವಿಮರ್ಶೆ ನಡೆದಿದೆ. ಆದರೆ ಒಂದೆಕಡೆ ಇಷ್ಟು ಬೃಹತ್ತಾದ ಮತ್ತು ಗಂಭೀರವಾದ ಅಧ್ಯಯನ ಪ್ರಕಟಗೊಂಡಿರುವುದು ಇದೇ ಮೊದಲು.

ಈ ಕೃತಿಯನ್ನು ಕುರಿತಂತೆ "ಜನಪದ ಮಹಾಕಾವ್ಯಗಳನ್ನು ವಿಶ್ವಾತ್ಮಕ ನೆಲೆಯಲ್ಲಿ, ಭಾರತೀಯ ನೆಲೆಯಲ್ಲಿ, ಮತ್ತು ಸ್ಥಳೀಯ ನೆಲೆಯಲ್ಲಿ ನೋಡಿದ ಕ್ರಮಗಳಿಂದಾಗಿ ಹೊಸ ಅನುಭವಗಳು ಇಲ್ಲಿ ದೊರೆಯುತ್ತವೆ. ಬದಲಾದ ನಿಯೋಗಗಳಿಂದಾಗಿ ಹೊಸ ಸಾಹಿತ್ಯ

ನಿರ್ಮಾಣವಾಗುವುದು, ಹೊಸ ರಂಗ ಹುಟ್ಟಿಕೊಳ್ಳುವುದು, ಗಂಡು ಹೆಣ್ಣಿನ ಸಂಬಂಧಗಳು ಪಲ್ಲಟಗೊಳ್ಳುವುದು, ಜನಾಂಗಿಕ ಅಸ್ಮಿತೆಯನ್ನು ಕಟ್ಟಿಕೊಳ್ಳುವುದು – ಹೀಗೆ ಆಧುನಿಕತೆಯ ಜಗತ್ತಿನಲ್ಲಿ ಆಧುನಿಕ ರೂಪಕಗಳು ಇಂತಹ ಮೌಖಿಕ ಮಹಾಕಾವ್ಯಗಳಿಂದ ನಿರಂತರವಾಗಿ ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಡಾ. ಸಿ.ಎನ್. ರಾಮಚಂದ್ರನ್ ಅವರು ಬದಲಾಗುತ್ತಿರುವ ಇಂತಹ ನಿಯೋಗಗಳನ್ನು ಮತ್ತು ರೂಪಾಂತರಗಳನ್ನು ಹಿಡಿದಿಟ್ಟಿದ್ದಾರೆ. ಮತ್ತು ನಾವು ಹೊಸದಾಗಿ ಹಿಡಿಯಲು ಅವಕಾಶ ಕಲ್ಪಿಸಿದ್ದಾರೆ"[೫] ಎಂದು ಪ್ರೊ.ಬಿ.ಎ. ವಿವೇಕ ರೈ ಅವರು ಮುನ್ನುಡಿಯಲ್ಲಿ ಹೇಳುತ್ತಾರೆ. ಇದು ಈ ಕೃತಿಯ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ.

ಮಹಾಕಾವ್ಯಗಳ ಕುರಿತಂತೆ ಇಂತಹ ವ್ಯಾಪಕ ಅಧ್ಯಯನದಿಂದ ಹುಟ್ಟಬಹುದಾದ ಫಲಿತಗಳು ಈ ಕೃತಿಯಲ್ಲಿ ಸ್ಪಷ್ಟವಾಗಿಲ್ಲ. ಕಾರಣ ಇಲ್ಲಿನ ವಿಶ್ಲೇಷಣೆಯಲ್ಲಿ ಜನಪದ ಮಹಾಕಾವ್ಯಗಳ ಪರಿಚಯ, ಹೋಲಿಕೆ, ಸಾಮ್ಯಗಳ ತುಲನೆಯ ಆಚೆ ಗಂಭೀರ ಒಳನೋಟಗಳನ್ನು ನೀಡಲು ಸಾಧ್ಯವಾಗಿಲ್ಲ. ಆಯಾ ಜನಪದ ಮಹಾಕಾವ್ಯಗಳು ಅಲ್ಲಲ್ಲಿನ ಸಾಂಸ್ಕೃತಿಕ ಮತ್ತು ರಾಜಕೀಯದ ಚಾರಿತ್ರಿಕ ಕಾರಣದ ಹಿನ್ನೆಲೆಯಲ್ಲಿ ಹುಟ್ಟಿರುವ ಸಂಭವವಿರುತ್ತದೆ. ಈ ಕೃತಿಯ ವಿಸ್ತಾರ ಕಾರಣವಾಗಿ ಆ ರೀತಿಯ ಅಂಶಗಳನ್ನು ಇಲ್ಲಿ ಚರ್ಚಿಸಲು ಸಾಧ್ಯವಾಗಿಲ್ಲ. ಆದರೆ, ಒಟ್ಟು ಜನಪದ ಮಹಾಕಾವ್ಯಗಳ ಒಳನೇಯ್ಗೆಯಲ್ಲಿ ಇರಬಹುದಾದ ಸಮಾನ ಎಳೆ ಯಾವುದು ಎನ್ನುವುದನ್ನು ಶೋಧಿಸಲು ಪ್ರಯತ್ನಿಸಲಾಗಿದೆ. ಹಾಗಾಗಿ ಇಲ್ಲಿ ವಿಮರ್ಶಾತ್ಮಕ ನೆಲೆ ಹೆಚ್ಚಾಗಿದೆ.

"ಆಖ್ಯಾನ ಮತ್ತು ವ್ಯಾಖ್ಯಾನ ಎನ್ನುವ ಪರಿಭಾಷೆಗಳು ಇಲ್ಲಿನ ಲೇಖನಗಳ ಮೂಲಕ ಮತ್ತೆ ಮತ್ತೆ ಮರುನಿರ್ವಚನಗಳಿಗೆ ಒಳಗಾಗಿವೆ. ಪಾಠವೊಂದು ಸ್ಥಳ, ಕಾಲ, ಧರ್ಮ, ಸಂಸ್ಕೃತಿ, ಧೋರಣೆಗಳಿಗೆ ಅನುಸಾರವಾಗಿ ಹೊಂದುವ ಎಲ್ಲಾ ರೂಪಾಂತರಗಳನ್ನು ಸಮಾನ ಶ್ರದ್ಧೆಯಿಂದ ನೋಡುವ ವ್ಯಾಖ್ಯಾನದ ಕ್ರಮ ಸಿ ಎನ್ ಆರ್ ಅವರ ಬರಹಗಳ ಅನನ್ಯತೆ. ಮೌಖಿಕ ಪರಂಪರೆಯ ವಿಸ್ತಾರವಾದ ಅವರ ಅಧ್ಯಯನವು ರಾಮಾಯಣ–ಮಹಾಭಾರತದಂತಹ ಮಹಾಕಾವ್ಯಗಳ ಸಹಿತ ನಮ್ಮ ಪ್ರಾಚೀನ ಕೃತಿಗಳನ್ನು ಕುರಿತ ಈವರೆಗಿನ ಅನೇಕ ಅಪವ್ಯಾಖ್ಯಾನಗಳನ್ನು ಸರಿಪಡಿಸುವ ದಾರಿಯನ್ನು ತುಳಿದಿದೆ. ಮೌಖಿಕ ಪರಂಪರೆಯ ಅಧ್ಯಯನದ ವಿಧಾನಶಾಸ್ತ್ರವನ್ನು ಬಳಸಿಕೊಂಡು, ಶಿಷ್ಟ ಮಹಾಕಾವ್ಯ ಮತ್ತು ಸಾಹಿತ್ಯ ಕೃತಿಗಳನ್ನು ನೋಡುವ ಆ ಅಧ್ಯಯನ ವಿಧಾನ..."[೬] ಕನ್ನಡದಲ್ಲಿ ಹೊಸ ರೀತಿಯ ಓದಿನ ಬೆಳವಣಿಗೆಗಳಿಗೆ ನಾಂದಿಯಾಗುವ ಸಾಧ್ಯತೆಯಿದೆ.

ಇಪ್ಪತ್ತೊಂದನೇ ಶತಮಾನದಲ್ಲಿ ಮಹಾಕಾವ್ಯಗಳ ಸ್ವರೂಪದಲ್ಲಿಯೂ ಬಹುಮುಖ್ಯವಾದ ಬದಲಾವಣೆಗಳು ಸಂಭವಿಸುತ್ತಿದ್ದು, ಮೊದಲಿದ್ದಂತೆ ಪ್ರಾಚೀನ ಶೈಲಿಯ ಕಥಾವಸ್ತು, ಭಾಷೆ, ಛಂದಸ್ಸು, ನಿರೂಪಣಾ ಶೈಲಿಯನ್ನೊಳಗೊಂಡಿರುವ ಕೃತಿಗಳಷ್ಟನ್ನೇ ಮಹಾಕಾವ್ಯ ಎಂದು ಕರೆಯುವ ಸಂದರ್ಭ ಈಗಿಲ್ಲ. ಆಧುನಿಕ ವಿಮರ್ಶಕರ ಪ್ರಕಾರ

ಇವತ್ತಿನ ಕಾದಂಬರಿಗಳೇ ಮಹಾಕಾವ್ಯಗಳಂತೆ ರಚನೆಯಾಗುತ್ತಿವೆ. ಜೊತೆಗೆ ಶಿಷ್ಟ ಮಹಾಕಾವ್ಯಗಳಿಗಿಂತ ಜನಪದ ಮಹಾಕಾವ್ಯಗಳು ಇವತ್ತಿನ ಮುಖ್ಯ ಅಧ್ಯಯನದ ವಸ್ತುಗಳಾಗಿವೆ.

ಗದ್ಯ ಕೇಂದ್ರಿತ ವಿಮರ್ಶೆ

ಸಾಹಿತ್ಯವನ್ನು ಮೌಲ್ಯಮಾಪನ ಮಾಡುವ ಎರಡು ಮುಖ್ಯ ಮಾನದಂಡಗಳಲ್ಲಿ ಒಂದು ಮೀಮಾಂಸೆಯಾದರೆ, ಮತ್ತೊಂದು ವಿಮರ್ಶೆ. ಮೀಮಾಂಸೆಗೆ ಬಹಳ ಹಿಂದಿನ ಇತಿಹಾಸವಿದ್ದು ಅತ್ಯುತ್ತಮ ಸಾಹಿತ್ಯವಿರುವ ಎಲ್ಲಾ ಭಾಷೆಗಳಲ್ಲೂ ಸಾಹಿತ್ಯದ ವಿವೇಚನೆಗೆ ಮೀಮಾಂಸೆ ರೂಪುಗೊಂಡಿದೆ. ಹಿಂದೆ ಪದ್ಯರೂಪದ ಮಹಾಕಾವ್ಯಗಳ ರಚನೆ ಹೆಚ್ಚಾಗಿ ನಡೆದಿದ್ದು, ಅದರ ವಿಶ್ಲೇಷಣೆಗೆ ಮೀಮಾಂಸೆ ತೊಡಗಿದೆ. ಆದರೆ ಯುರೋಪಿನಲ್ಲಿ ನಡೆದ ಪುನರುಜ್ಜೀವನದ ನಂತರ ಗದ್ಯ ಸಾಹಿತ್ಯ ಹೆಚ್ಚಾಗಿ ರಚನೆಯಾದ್ದರಿಂದ ಅದರ ಮೌಲ್ಯ ವಿವೇಚನೆಗೆಂದೇ ವಿಮರ್ಶೆ ರೂಪುಗೊಂಡಿತು. ಇಂದಿಗೂ ಕಾವ್ಯ ಪ್ರಕಾರದ ಸಮರ್ಥ ವಿವರಣೆಗೆ ಮೀಮಾಂಸೆಯ ಮಾನದಂಡಗಳು ಹೆಚ್ಚು ನೆರವಿಗೆ ಬಂದರೆ ಗದ್ಯದ ವಿಶ್ಲೇಷಣೆಗೆ ವಿಮರ್ಶೆಯ ಮಾನದಂಡಗಳು ಹೆಚ್ಚು ಸಮರ್ಥವಾಗಿ ಬಳಕೆಯಾಗುತ್ತವೆ. ಕಾಲಕಾಲಕ್ಕೆ ಬರುವ ಹೊಸ ವಿಮರ್ಶಾ ಸಿದ್ಧಾಂತಗಳು ಗದ್ಯ ಪ್ರಕಾರದ ವಿಶ್ಲೇಷಣೆಯಲ್ಲಿ ರೂಪುತಳೆದಿರುವುದನ್ನು ನಾವು ಗಮನಿಸಬಹುದು.

ಕಳೆದ ದಶಕದಲ್ಲಿ ಕನ್ನಡದಲ್ಲಿ ಅತಿ ಹೆಚ್ಚು ರಚನೆಗೊಂಡ ಸಾಹಿತ್ಯ ಪ್ರಕಾರಗಳೆಂದರೆ ಕಾವ್ಯ ಮತ್ತು ಕತೆಗಳು. ಅದರಿಂದಾಗಿ ಅತಿ ಹೆಚ್ಚು ವಿಮರ್ಶೆ ಬಂದಿರುವುದೂ ಕೂಡಾ ಈ ಎರಡು ಪ್ರಕಾರಗಳ ಮೇಲೆಯೆ ಆಗಿದೆ. ಈ ಕಾಲದ ವೇಗದ ಬದುಕಿನಿಂದಾಗಿ ಕಾದಂಬರಿ, ಮಹಾಕಾವ್ಯಗಳಂತಹ ದೀರ್ಘ ಬರವಣಿಗೆಗಳ ಬದಲಿಗೆ ಈ ರೀತಿಯ ಲಘು ಬರಹಗಳು ಹೆಚ್ಚಾಗಿ ಬರಲು ಕಾರಣವಾಗಿದೆ. ಉತ್ತಮ ಕತೆಗಾರರಾದ ಅಮರೇಶ ನುಗಡೋಣಿ, ಮೊಗಳ್ಳಿ ಗಣೇಶ, ಆನಂದ ಋಗ್ವೇದಿ, ವಿನಯಾ ಒಕ್ಕುಂದ ಮೊದಲಾದವರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ.

ಇನ್ನುಳಿದಂತೆ ಕನ್ನಡದಲ್ಲಿ ಬರುತ್ತಿರುವ ಅಂಕಣಗಳು, ಆತ್ಮಕತೆಗಳು, ಪ್ರಬಂಧಗಳು ಮತ್ತು ಲೇಖನಗಳ ಮೇಲೆಯೂ ಇವತ್ತಿನ ವಿಮರ್ಶೆ ಗಮನ ಹರಿಸುತ್ತಿರುವುದನ್ನು ಕಾಣಬಹುದು. ನಟರಾಜ ಹುಳಿಯಾರ್, ನಟರಾಜ ಬೂದಾಳ್, ಬಸವರಾಜ ಕಲ್ಗುಡಿ, ರಾಜೇಂದ್ರ ಚೆನ್ನಿ, ರಹಮತ್ ತರೀಕೆರೆ, ಕಾ.ವೆಂ. ಶ್ರೀನಿವಾಸ ಮೂರ್ತಿ, ನರಹಳ್ಳಿ, ಓ ಎಲ್ ಎನ್, ಯು.ಆರ್. ಅನಂತಮೂರ್ತಿ, ಚಂದ್ರಶೇಖರ ನಂಗಲಿ, ಕೆ.ವಿ. ಅಕ್ಷರ, ಮೊಗಳ್ಳಿ ಗಣೇಶ, ರಾಮಲಿಂಗಪ್ಪ ಬೇಗೂರ್, ಟಿ. ಪಿ. ಅಶೋಕ, ಬರಗೂರು ರಾಮಚಂದ್ರಪ್ಪ ಮೊದಲಾದವರು ಈ ರೀತಿಯ ವಿಮರ್ಶೆಯಲ್ಲಿ ತೊಡಗಿಕೊಂಡಿರುವ ಮುಖ್ಯ ಲೇಖಕರಾಗಿದ್ದಾರೆ.

ಕಥಾ ಸಾಹಿತ್ಯ

ಕಳೆದ ದಶಕದಲ್ಲಿ ಗದ್ಯ ಸಾಹಿತ್ಯ ಕುರಿತು ಬಂದಿರುವ ವಿಮರ್ಶೆಯನ್ನು ಅಧ್ಯಯನದ ಅನುಕೂಲಕ್ಕೆಂದು ಕಥಾವಿಮರ್ಶೆ, ಕಾದಂಬರಿ ವಿಮರ್ಶೆ ಎಂದು ವಿಂಗಡಿಸಿಕೊಳ್ಳಲಾಗಿದೆ. ಕನ್ನಡ ಕಥಾ ಸಾಹಿತ್ಯವನ್ನು ಕುರಿತು ವಿಮರ್ಶೆ ಮಾಡುವಾಗ ಅದುವರೆಗಿನ ಕತೆಗಳನ್ನು ಕುರಿತು, ಆ ಕತೆಗಳನ್ನು ಕುರಿತು ಬಂದಿರುವ ವಿಮರ್ಶೆಯನ್ನು ಕುರಿತು ಸದರಿ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಗಳನ್ನು ದಾಖಲಿಸುವುದುಂಟು. ಆದ್ದರಿಂದ ಕಳೆದ ದಶಕದ ವಿಮರ್ಶೆ ಸಮಕಾಲೀನ ಸಂದರ್ಭದಲ್ಲಿ ಬಂದ ಕತೆಗಳನ್ನು ವಿಮರ್ಶಿಸುತ್ತಲೇ ಇದುವರೆಗಿನ ಮುಖ್ಯ ಕತೆಗಳ ಪರಂಪರೆಯಲ್ಲಿ ಹೊಸ ಕತೆಗಳನ್ನು ಪರಿಶೀಲಿಸುವುದುಂಟು. ಆದರೆ ಪ್ರಸ್ತುತ ಅಧ್ಯಯನದಲ್ಲಿ ಸಾಧ್ಯವಾದಷ್ಟು ಸಮಕಾಲೀನ ಕಥಾ ಸಾಹಿತ್ಯವನ್ನು ಕುರಿತು ಬಂದಿರುವ ವಿಮರ್ಶೆಯನ್ನು ಮುಖ್ಯವಾಗಿ ಗಮನಿಸಿದೆ.

ಸಣ್ಣಕತೆ ಹೊಸಗನ್ನಡ ಸಾಹಿತ್ಯದಲ್ಲಿ ಒಂದು ಪ್ರಕಾರವಾಗಿ ರೂಪುಗೊಂಡಿದ್ದರೂ ಕತೆಯನ್ನು ಹೇಳುವ ಪರಂಪರೆ ಹೊಸದೇನೂ ಅಲ್ಲ. ಇಂಗ್ಲೀಷ್ ಸಾಹಿತ್ಯದ ಪರಿಚಯದಿಂದ ಸಣ್ಣಕತೆಯ ಮಾದರಿ ಹುಟ್ಟಿಕೊಂಡಿದೆ ಎಂದು ಕನ್ನಡ ವಿಮರ್ಶಕರು ಪರಿಭಾವಿಸಿಕೊಂಡು ಬಂದಿದ್ದಾರೆ. ಅಂಥ ಗ್ರಹಿಕೆಯಿಂದ ಇಪ್ಪತ್ತನೆಯ ಶತಮಾನದ ಆರಂಭದಿಂದ ಇದುವರೆಗೆ ಬಂದಿರುವ ಕಥಾ ಸಾಮಾಗ್ರಿಯನ್ನು ನೋಡಲಾಗುತ್ತಿದೆ. ಕಳೆದ ದಶಕದಲ್ಲಿ ಕನ್ನಡ ಕತೆಗಳನ್ನು ಕುರಿತು ಬಂದಿರುವ ಬಹುಮುಖ್ಯ ಕೃತಿಯಾದ ಗಿರಡ್ಡಿ ಗೋವಿಂದರಾಜ ಅವರ ವಿಮರ್ಶಾ ಲೇಖನಗಳ ಸಂಗ್ರಹ 'ಕಲ್ಪಿತ ವಾಸ್ತವ: ಕನ್ನಡ ಸಣ್ಣಕತೆ' ಇದೇ ಜಾಡಿನಲ್ಲಿ ಸಾಗಿರುವ ಚಿಂತನೆ. ಗಿರಡ್ಡಿ ಗೋವಿಂದರಾಜ "ಇಂದಿನ ಸಣ್ಣ ಕತೆ ನಮ್ಮ ಪ್ರಾಚೀನ ಕಥಾಪರಂಪರೆಯ ಸಹಜ ಬೆಳವಣಿಗೆಯ ಫಲವಲ್ಲ; ಪಶ್ಚಿಮದ ಆಧುನಿಕ ಸಣ್ಣ ಕತೆಯ ಸಂಪರ್ಕದಲ್ಲಿ ನಾವು ಬಂದಿರದಿದ್ದರೆ ಈಗಿನ ರೂಪದ ಸಣ್ಣಕತೆ ನಮ್ಮಲ್ಲಿ ಹುಟ್ಟುತ್ತಿರಲಿಲ್ಲ"[೧೭] ಎಂದು ಸ್ಪಷ್ಟವಾಗಿಯೇ ಹೇಳಿ ತಮ್ಮ ಚಿಂತನೆಯ ದಿಕ್ಕನ್ನು ಖಚಿತಪಡಿಸಿದ್ದಾರೆ. ಕಳೆದ ನಲವತ್ತೈದು ವರ್ಷಗಳ ಕಾಲಾವಧಿಯಲ್ಲಿ ಬರೆದಿರುವ ಇಲ್ಲಿನ ಎಲ್ಲ ಹದಿನಾಲ್ಕು ಲೇಖನಗಳಲ್ಲಿಯೂ ಕನ್ನಡ ಸಣ್ಣಕತೆ ಬೆಳವಣಿಗೆ ಕುರಿತಾಗಿ ಅವರ ವಿವರ ವಿಶ್ಲೇಷಣೆ, ತೀರ್ಮಾನಗಳಿವೆ. ಲೇಖನಗಳಲ್ಲಿ ಕನ್ನಡ ಸಣ್ಣ ಕತೆಯ ಬೆಳವಣಿಗೆಯ ವಿವಿಧ ಹಂತಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ ಎಂಬ ವಿವರಣೆಯೂ ಇದೆ. ಲೇಖನಗಳಲ್ಲಿ ವ್ಯತ್ಯಾಸಗಳೂ ಅಭಿಪ್ರಾಯಭೇದಗಳೂ, ಮೊದಲಿನ ನಿಲುವಿಗೆ ತಿದ್ದುಪಡಿಗಳೂ ಆಗಿರುವುದನ್ನು ದಾಖಲಿಸಲಾಗಿದೆ. ಮಾಸ್ತಿಯವರನ್ನು ಕನ್ನಡದ ಸಣ್ಣ ಕತೆಯ ಯುಗಪ್ರವರ್ತಕರೆಂದು ಗುರುತಿಸಿರುವ ಗಿರಡ್ಡಿಯವರು ತಮಗೆ ಮುಖ್ಯವೆನಿಸಿದೆ ಆನಂದ, ಬಾಗಲೋಡಿ ದೇವರಾಯ, ಶಾಂತಾದೇವಿ ಕಣವಿ, ಶಾಂತಿನಾಥ ದೇಸಾಯಿ, ಜಯಂತ ಕಾಯ್ಕಿಣಿ, ಸುರೇಂದ್ರನಾಥ ಅವರ ಕತೆಗಳ ಕುರಿತಾಗಿ ವಿಸ್ತೃತವಾಗಿ ವಿಶ್ಲೇಷಣೆ ನಡೆಸಿದ್ದಾರೆ. ವ್ಯಾಪಕ ಅಧ್ಯಯನದ ಹಿನ್ನೆಲೆ ಇರುವ ಗಿರಡ್ಡಿ ಕನ್ನಡ ಸಣ್ಣಕತೆ ಬೆಳೆದು ಬಂದ ಬಗೆಯನ್ನು ವಿವರವಾಗಿ ದಾಖಲಿಸಿದ್ದಾರೆ.

'ಮರೆಯಬಾರದ ಹಳೆಯ ಕತೆಗಳು' ಮಾಲಿಕೆಯಲ್ಲಿ ಅವರು ಪಂಜೆ, ಕೇರೂರರು, ಎಮ್.ಎನ್. ಕಾಮತ್, ಎಸ್. ಜಿ. ಶಾಸ್ತ್ರಿ, ಕೊರಡ್ಕಲ್, ಕುಲಕರ್ಣಿ ಶ್ರೀನಿವಾಸ, ಕಡಂಗೋಡ್ಲು, ಕೃಷ್ಣಕುಮಾರ ಕಲ್ಲೂರ, ಪ. ರಮಾನಂದ, ವಿ. ಜಿ. ಶ್ಯಾನಬಾಗ, ಶ್ರೀಸ್ವಾಮಿ, ಹ. ಪಿ. ಜೋಷಿ, ಸೇಡಿಯಾಪು ಕೃಷ್ಣಭಟ್ಟ, ನವರತ್ನ ರಾಮರಾಯ, ಟೇಂಗ್ಸೆ ಗೋವಿಂದರಾಯ, ಕ್ಷೀರಸಾಗರ, ಬೇಂದ್ರೆ, ಹೊಯಿಸಳ, ಮೇವುಂಡಿ ಮಲ್ಲಾರಿ, ಟಿ. ಎಸ್. ಸಂಜೀವರಾಯ, ಭಾರತೀಪ್ರಿಯ ಮೊದಲಾಗಿ ಇಪ್ಪತ್ತೆಂಟು ಕತೆಗಾರರ ವ್ಯಕ್ತಿತ್ವ–ಕೃತಿ ಪರಿಚಯಗಳನ್ನು ಮಾಡಿಕೊಟ್ಟಿದ್ದಾರೆ. ಇಲ್ಲಿನ ಮೂರು ಲೇಖನಗಳು ಕನ್ನಡ ಸಣ್ಣಕತೆ ನಿರ್ದಿಷ್ಟ ಕಾಲಘಟ್ಟದಲ್ಲಿ ಸಾಗಿಬಂದ ಮಜಲುಗಳನ್ನು ಪರಿಚಯಿಸುತ್ತವೆ. ಇದು ಕಳೆದ ಶತಮಾನದ ತೊಂಬತ್ತರ ದಶಕದವರೆಗಿನ ಕಾಲಘಟ್ಟಕ್ಕೆ ನಿಂತುಹೋಗಿರುವುದನ್ನು ಗಮನಿಸಬಹುದಾಗಿದೆ. 'ಇತ್ತೀಚೆಗೆ ಬರೆಯುತ್ತಿರುವ ಅನೇಕ ಮಹತ್ವದ ಕತೆಗಾರ್ತಿಯರ ಬಗ್ಗೆ, ಕಿರಿಯ ಕತೆಗಾರರ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗಿಲ್ಲ.' ಎಂಬ ಅರಿವು ತಮಗಿದೆ ಎಂದು ಲೇಖಕರು ಹೇಳಿಕೊಂಡಿದ್ದಾರೆ.

ಇಂದು ಕನ್ನಡದಲ್ಲಿ ಹೆಚ್ಚು ಪ್ರಖರವಾಗಿರುವ ಸಾಹಿತ್ಯ ಪ್ರಕಾರಗಳಲ್ಲಿ ಕಥಾ ಸಾಹಿತ್ಯವು ಒಂದು. ಮಾಸ್ತಿ, ಆನಂದ ಕಂದ ಮೊದಲಾದವರಿಂದ ಭದ್ರ ಪರಂಪರೆಯನ್ನು ಹೊಂದಿರುವ ಕನ್ನಡ ಕಥಾ ಸಾಹಿತ್ಯವು ಕಾಲಧರ್ಮಕ್ಕನುಗುಣವಾಗಿ ಇಂದು ಬಹು ಮುಖ್ಯ ಪ್ರಕಾರವಾಗಿ ಕನ್ನಡದಲ್ಲಿ ಕಾಣಿಸಿಕೊಳ್ಳುತ್ತಿದೆ. ಅಮರೇಶ ನುಗಡೋಣಿ, ವಸುದೇಂದ್ರ, ಚಿದಾನಂದ ಸಾಲಿ, ಟಿ. ಎಸ್. ಗೊರವರ, ವಿನಯ ಒಕ್ಕುಂದ, ಕಲಿಗಣನಾಥ ಗುಡದೂರು, ಜಯಲಕ್ಷ್ಮಿ ಕೊಡಿಬೆಟ್ಟು ಮೊದಲಾದ ಹೊಸ ತಲೆಮಾರಿನ ಸಮರ್ಥ ಕತೆಗಾರರಿಂದ ಕನ್ನಡ ಕಥಾ ಪ್ರಕಾರ ಸಮೃದ್ಧಗೊಳ್ಳುತ್ತಿದೆ. ಆದರೆ ಇವತ್ತಿನ ವಿಮರ್ಶೆ ಕನ್ನಡ ಕಥಾ ಸಾಹಿತ್ಯವನ್ನು ಗ್ರಹಿಸುತ್ತಿರುವ ನೆಲೆಗಳು ಕೊಂಚ ಭಿನ್ನವಾಗಿವೆ.

ಹೊಸ ಶತಮಾನದಲ್ಲಿ ಕನ್ನಡದಲ್ಲಿ ಅತಿ ಹೆಚ್ಚಾಗಿ ಕವನ ಸಂಕಲನಗಳು ಮತ್ತು ಕತೆಗಳು ಸೃಷ್ಟಿಯಾಗಿವೆ. ಆದರೆ ಸಂವಹನ ಮಾಧ್ಯಮಗಳ ಅಪಾರ ಬೆಳವಣಿಗೆಯಿಂದ ಮನುಷ್ಯನ ಭಾವಜಗತ್ತು ಕ್ರಮೇಣ ಸಡಿಲಗೊಳ್ಳುತ್ತಿದ್ದು, ಸರಕುಸಂಸ್ಕೃತಿ ಎಲ್ಲೆಡೆ ವ್ಯಾಪಿಸುತ್ತಿದೆ. ಮಾದ್ಯಮಗಳು ನಮ್ಮ ಸಂಬೋದನೆಯನ್ನು ಶಿಥಿಲಗೊಳಿಸಿ ಅಗ್ಗದ ಮನರಂಜನೆಯಲ್ಲಿ ನಮ್ಮನ್ನು ಮುಳುಗಿಸುತ್ತದೆ. ವಿಮರ್ಶೆಯನ್ನು ಸ್ವೀಕರಿಸಲಾರದಂತೆ ಸಮಾಜ ನಿರ್ಮಾಣವಾಗುತ್ತಿದ್ದು ಏಕಾಕೃತಿಯ ಕಡೆಗೆ, ಸರ್ವಾಧಿಕಾರದ ಕಡೆಗೆ ಸಮುದಾಯ ಚಲಿಸುತ್ತಿದೆ. ಇಂತಹ ಹೊಳಹುಗಳು ಇವತ್ತಿನ ಹೊಸ ತಲೆಮಾರಿನ ಕಾವ್ಯ–ಕತೆಗಳಲ್ಲಿ ಕಂಡುಬರುತ್ತಿವೆ.

ಇಂದು ವರ್ಷಕ್ಕೆ ಸರಾಸರಿ ಐವತ್ತು ಕಥಾ ಸಂಕಲನಗಳು ಪ್ರಕಟಗೊಳ್ಳುತ್ತಿವೆ. ಸಂಖ್ಯೆಯ ದೃಷ್ಟಿಯಿಂದ ಹೋಲಿಸಿದರೆ ಇದು ಹಿಂದೆಂದಿಗಿಂತಲೂ ಹೆಚ್ಚು. ಆದರೆ ಸಂಖ್ಯೆಯಂತೆಯೇ ಸಾಮರ್ಥ್ಯದ ದೃಷ್ಟಿಯಿಂದಲೂ ಗಂಭೀರವಾದ ಕತೆಗಳು ಪ್ರಕಟಗೊಳ್ಳುತ್ತಿವೆಯೇ ಎಂಬುದು ಯೋಚಿಸಬೇಕಾದ ವಿಚಾರ. ಇವತ್ತಿನ ಬಹುತೇಕ

ಕತೆಗಳು ಮನುಷ್ಯ ಸಂಬಂಧಗಳ ಬಗ್ಗೆ ಮಿಡಿಯುತ್ತಿವೆ. ಅಂದರೆ ಕಣ್ಣೀರಿನ-ದು:ಖದ ಬಗ್ಗೆ ಎಚ್ಚರಗೊಂಡಿದೆ. ಆದರೆ ಇಂತಹ ಘಟನೆ ಸನ್ನಿವೇಶಗಳನ್ನು ಹಾಸ್ಯ, ವಿಡಂಬನೆ, ವ್ಯಂಗ್ಯ, ಸಾತ್ವಿಕ ರೊಚ್ಚಿನ ಮೂಲಕ ನಿರೂಪಿಸುವಲ್ಲಿ ವಿಫಲಗೊಳ್ಳುತ್ತಿವೆ. ದಲಿತ-ಬಂಡಾಯದ ಮೊದಲ ತಲೆಮಾರಿನಲ್ಲಿ ಅವರ ಹಸಿವು, ಬಡತನ, ಶೋಷಣೆ, ಅವಮಾನಗಳ ಅನುಭವಗಳು ಹಸಿಹಸಿಯಾಗಿಯೇ ನಿರೂಪಣೆಗೊಂಡು ಯಶಸ್ವಿಯಾದವು. ಆದರೆ ಇವತ್ತಿನ ಕತೆಗಾರರಲ್ಲಿ ಅಂತಹ ಅಥೆಂಟಿಕ್ ಸಮಸ್ಯೆಗಳು, ತಲ್ಲಣಗಳು ಸಮರ್ಥವಾಗಿ ಅಭಿವ್ಯಕ್ತಿಗೊಳ್ಳುತ್ತಿಲ್ಲ ಎನಿಸುತ್ತದೆ.

ಯಾವುದೇ ಕತೆಯನ್ನು ಪರಿಣಾಮಕಾರಿಯಾಗಿಸುವಲ್ಲಿ ನಿರೂಪಣಾ ವಿಧಾನ ಬಹಳ ಮುಖ್ಯವಾದುದು. ಮಾಸ್ತಿ, ದೇವನೂರ ಮಹಾದೇವ ಅವರ ಕೆಲ ಕತೆಗಳು ತಮ್ಮ ನಿರೂಪಣಾ ತಂತ್ರದಿಂದಲೇ ಶ್ರೇಷ್ಠ ಕತೆಗಳಾಗಿ ಮೈತಳೆದಿವೆ. ಆದರೆ ಹೊಸ ತಲೆಮಾರಿನ ಕತೆಗಾರರ ಮುಖ್ಯ ಬಿಕ್ಕಟ್ಟುಗಳಲ್ಲಿ ನೇರ ನಿರೂಪಣಾ ವಿಧಾನವೂ ಒಂದು. ಇದು ಕತೆಗಳ ವೈವಿಧ್ಯತೆಯನ್ನು ಮಂಕಾಗಿಸುತ್ತದೆ. ಕೆಲ ಸಂದರ್ಭಗಳಲ್ಲಿ ಹಲವು ವ್ಯಕ್ತಿಗಳ ಗ್ರಹಿಕೆಯ ಮಾದರಿಯಲ್ಲಿ ಕತೆಗಳನ್ನು ಹೆಣೆಯುವ ಸಂದರ್ಭಗಳೂ ಉಂಟು. ಆದರೆ ಇವೆಲ್ಲಾ ಒಪ್ಪಂದಕ್ಕೆ ಒಂದು ಕಲಾತ್ಮಕ ಅಭಿವ್ಯಕ್ತಿ ಪಡೆಯುವ ಸಂದರ್ಭದಲ್ಲಿ ಕೆಲ ಬಿಕ್ಕಟ್ಟುಗಳನ್ನು ಎದುರಿಸುತ್ತವೆ. ಜೊತೆಗೆ ಇವತ್ತಿನ ಬಹುತೇಕ ಕತೆಗಳು ಸಂಭಾಷಣೆಯನ್ನು ಹೆಚ್ಚಾಗಿ ಒಳಗೊಂಡಿರುತ್ತದೆ. ಇಂತಹ ಸಂದರ್ಭದಲ್ಲಿ ಅನುಭವ ತೆಳುವಾಗಿ ಓದುಗನಲ್ಲಿ ಗಾಢವಾದ ಪರಿಣಾಮಗಳನ್ನು ಉಂಟು ಮಾಡಲು ಇವು ವಿಫಲಗೊಳ್ಳುತ್ತವೆ ಎಂಬುದು ಬಹುತೇಕ ಕಥಾಸ್ಪರ್ಧೆಗಳಲ್ಲಿ ತೀರ್ಪುಗಾರರಾಗಿ ಭಾಗವಹಿಸುವವರ ಅಭಿಪ್ರಾಯ.

ಕಳೆದ ದಶಕದ ಕತೆಗಳ ವಿಶಿಷ್ಟತೆಗೆ ಹಿನ್ನೆಲೆಯಾಗಿ ನಾವು ಕೊಂಚ ಹಿಂದಿನ ಇತಿಹಾಸ ಗಮನಿಸುವುದಾದರೆ, ಎಪ್ಪತ್ತರ ದಶಕದ ನಂತರ ಕನ್ನಡದಲ್ಲಿ ಹಲವು ಸಂವೇದನೆಗಳು ಪ್ರಕಟಗೊಳ್ಳತೊಡಗಿದವು. ಅವುಗಳಲ್ಲಿ ಸಾಹಿತ್ಯಿಕವಾಗಿಯೂ ಮುಖ್ಯವಾದ ಸಂವೇದನೆಗಳೆಂದರೆ ದಲಿತ ಸಂವೇದನೆ, ಸ್ತ್ರೀ ಸಂವೇದನೆ ಮತ್ತು ವಿಮರ್ಶನ ಪ್ರಜ್ಞೆಗಳು. ದಲಿತ ಸಂವೇದನೆ ಪ್ರತಿಪಾದಿಸಿದ ಸಾಮಾಜಿಕ ನ್ಯಾಯ, ಸ್ತ್ರೀ ಸಂವೇದನೆ ಪ್ರತಿಪಾದಿಸಿದ ಲಿಂಗನ್ಯಾಯ ಮತ್ತು ನವ್ಯ ವಿಮರ್ಶೆ ಪ್ರಕಟಿಸಿದ ಸಾಹಿತ್ಯ ರೂಪ ಮತ್ತು ವಸ್ತುಗಳ (ಸಾಹಿತ್ಯದ ರಚನೆ ಮತ್ತು ಆಶಯ) ನಡುವಣ ಸಮತೋಲನ ಪ್ರಜ್ಞೆ ಈ ಮೂರೂ ಕೂಡ ನಮ್ಮ ಇಂದಿನ ತಲೆಮಾರಿನ ಬರಹಗಾರರ ಮೇಲೆ ಬಲವಾದ ಸವಾಲುಗಳನ್ನು ಒಡ್ಡಿವೆ. ಅಂದರೆ ಏಕಕಾಲಕ್ಕೆ ಈ ಮೂರೂ ಪ್ರಜ್ಞೆಗಳನ್ನು ಒಳಗೊಳ್ಳುವ ಮತ್ತು ಈ ಮೂರೂ ಸಂವೇದನೆಗಳಲ್ಲಿ ಇರಬಹುದಾದ ಅರೆಕೊರೆಗಳನ್ನು ಮೀರಿ ಬೆಳೆಯುವ ಗುರುತರವಾದ ಸವಾಲು ಇಂದಿನ ಕತೆಗಾರರೆದುರು ಇದೆ. ದಲಿತ ಪ್ರಶ್ನೆಗಳನ್ನು ಮತ್ತು ಹೆಣ್ಣಿನ ಪ್ರಶ್ನೆಗಳನ್ನು ಅಲಕ್ಷಿಸಿ ಇಂದಿನ ಯಾವ ಬರಹಗಾರರೂ ಬರವಣಿಗೆ ಮಾಡಲು ಸಾಧ್ಯವಿಲ್ಲ. ಹಾಗೆ ನೋಡಿದರೆ ಸ್ತ್ರೀವಾದ ಮತ್ತು ದಲಿತ-ಬಂಡಾಯಗಳು ನಮ್ಮ ಆಲೋಚನಾ ಕ್ರಮ ಮತ್ತು ಬರವಣಿಗೆಯ ಕ್ರಮಗಳನ್ನು ಬದಲಾಯಿಸಿವೆ. ಆ ಮೂಲಕ ನಮ್ಮ ಬದುಕನ್ನೂ

ಪ್ರಭಾವಿಸಿವೆ. ಹಾಗೆಯೆ ಢಾಳಾದ ಕನ್ನಡ ವಿಮರ್ಶಾ ಲೋಕದ (ಹಲವು ರೀತಿಯ ಓದಿನ ದಾರಿಗಳ) ಪ್ರಭಾವಗಳನ್ನೂ ಕೂಡ ಕನ್ನಡ ಕತೆಗಳು ಎದುರಿಸಿವೆ.

ಸಾಮಾನ್ಯವಾಗಿ ಇವತ್ತಿನ ಎಲ್ಲಾ ಕತೆಗಳೂ "ಏಕಕಾಲಕ್ಕೆ ಲಿಂಗನ್ಯಾಯವನ್ನು ತಮ್ಮ ಅಂತರ್ಯದ ಕಾಳಜಿಯಾಗಿ ಹೊಂದಿವೆ. ಹೊಂದುತ್ತಲೇ ಸಾಮಾಜಿಕ ನ್ಯಾಯದ ಕಡೆಗೂ ಚಲಿಸಿವೆ. ಹಾಗೆಯೇ ಇಲ್ಲಿನ ಕತೆಗಳು ದಲಿತ–ಬಂಡಾಯ ಚಳವಳಿ ಮತ್ತು ಸ್ತ್ರೀವಾದಿ ಚಳವಳಿಗಳ ಚಹರೆಗಳನ್ನು ಹೊಂದಿವೆ ಮತ್ತು ಅವನ್ನು ಯಥಾವತ್ ತೊಡದೆ ದಾಟಿ ಕೂಡ ಬೆಳೆದಿವೆ. ತಾನು ಹುಟ್ಟಿ ಬೆಳೆದ ವರ್ಗದ ಆಗುಹೋಗುಗಳಿಗೆ ಮಾತ್ರ ಸೀಮಿತವಾಗದೆ ಅನುಪಮಾ ತಮ್ಮ ಅನುಭವ ಲೋಕವನ್ನು ಭಿನ್ನ ಸಾಮಾಜಿಕ ಸಮಸ್ಯೆಗಳ ಕಡೆಗೆ ಕತೆಗಳಲ್ಲಿ ವಿಸ್ತರಿಸಿಕೊಂಡಿದ್ದಾರೆ. ಇವರ ಕತೆಗಳಲ್ಲಿನ ಸಂವೇದನೆಯು ಹೆಣ್ಣು ಮತ್ತು ತಳವರ್ಗ ಇವುಗಳನ್ನೂ ಒಳಗೊಂಡು ಒಟ್ಟು ಸಮಾಜದ ಬಗೆಗಿನ ಕಾಳಜಿಗಳನ್ನು ಪ್ರಕಟಿಸುವ ಸಂವೇದನೆಯಾಗಿದೆ."[೧೮] ಎಂಬುದನ್ನು ಕನ್ನಡ ವಿಮರ್ಶೆ ಕಂಡುಕೊಂಡಿದೆ.

ಬದುಕಿನ ನೈಜ ಅನುಭವಗಳಂತೆ ಸಹಜವಾಗಿಯೇ ಹುಟ್ಟುವ ಕತೆ ಇಂದು ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಹೆಚ್ಚು ಚರ್ಚಿಸಲ್ಪಡುವ, ಆಸ್ವಾದಿಸಲ್ಪಡುವ ಪ್ರಕಾರವಾಗಿದೆ. ಈ ಹೊತ್ತಿನ ಟಿ. ಎಸ್. ಗೊರವರ್, ಶ್ವೇತಾ ಜಿ. ಎನ್., ವಸುಧೇಂದ್ರ, ವೀರೇಶ ಸೌದ್ರಿ,, ಸುಶೀಲಾ ಡೋಣೂರು, ರಾಜಲಕ್ಷ್ಮಿ ಕೋಡಿಬೆಟ್ಟು ಮತ್ತಿತರರವರೆಗೆ ಕನ್ನಡ ಕಥೆಗಳ ಜಾಡು ಬಹು ವಿಶಿಷ್ಟ, ವಿಭಿನ್ನ ಹಾಗೇ ನಿಗೂಢ. ಪ್ರತಿಯೊಂದು ಕತೆಗಳಲ್ಲೂ ಸಾಮಾಜಿಕ ಮೌಲ್ಯಗಳ ಪರಿಶೀಲನೆ, ಸುಧಾರಣೆ ಹಾಗೂ ಜೀವನಾನುಕಂಪದೊಂದಿಗೆ ಬೆಳೆದ ಕನ್ನಡ ಕಥಾ ಪರಂಪರೆ ವಿವಿಧ ಕಾಲಘಟ್ಟಗಳಲ್ಲಿ ಮನೋವಿಶ್ಲೇಷಣಾತ್ಮಕ, ಮಣ್ಣಿನ ವಾಸನೆ, ಗ್ರಾಮ್ಯ ಪರಿಸರ, ವಿಶಿಷ್ಟ ಭಾಷಾ ಪ್ರಯೋಗ, ಸಾಮಾಜಿಕ ಅಸಮಾನತೆ ಅನ್ಯಾಯದ ವಿರುದ್ಧ ಚಳವಳಿಯಾಗಿ, ತಾತ್ವಿಕ ನೆಲೆಗೆ ಮುಖಾಮುಖಿಯಾಗಿ, ಗೊಡ್ಡು ಸಂಪ್ರದಾಯಗಳಿಗೆ ಸವಾಲಾಗಿ, ಜನರ ಒಳತೋಟಿ, ವೈವಿಧ್ಯಮಯ ಬದುಕು, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ವಿರುದ್ಧದ ಅಕ್ಷರ ರೂಪದ ಹೋರಾಟವಾಗಿ, ಕೋಮುವಾದಕ್ಕೆ ಸೆಡ್ಡುಹೊಡೆದು, ಮಾನವಪ್ರೇಮ ಎತ್ತಿ ಹಿಡಿಯುವ ಅಸ್ತ್ರವಾಗಿ, ಕ್ಲೀಷೆ ಎನ್ನಿಸಬಹುದಾಗಿದ್ದ ಪ್ರೇಮ, ಕಾಮ, ಲೈಂಗಿಕತೆಯಿಂದ ಬೇರೊಂದು ನೈಜ ಪ್ರೀತಿಯ ಜಗತ್ತಿನ ಹುಡುಕಾಟವಾಗಿ, ಜನರ ದನಿಯೇ ಎಂಬಂತೆ ಇಪ್ಪತ್ತೊಂದನೇ ಶತಮಾನದ ಕನ್ನಡ ಸಣ್ಣಕಥೆಗಳು ಬದಲಾಗಿರುವ ಬಗೆ ಆಶಾದಾಯಕ ಬೆಳವಣಿಗೆಯಾಗಿದೆ. ಉದಾಹರಣೆಗೆ ಹೊಸ ತಲೆಮಾರಿನ ಮುಖ್ಯ ಕತೆಗಾರರಾದ ಮೌನೇಶ್ ಬಡಿಗೇರ್ ಅವರ ಕತೆಗಳ ಕುರಿತ ಅಭಿಪ್ರಾಯ "ಅವರು ಇದುವರೆಗಿನ ತಮ್ಮ ಪ್ರೌಢ ಬದುಕಿನ ಅಬ್ಸರ್ವೇಶನ್ ತಮಗೆ ದಕ್ಕಿಸಿದ ಗ್ರಹಿಕೆಗಳನ್ನು ಅವು ತಮಗೆ ತಟ್ಟಿದಷ್ಟೇ ತೀವ್ರವಾಗಿ – ಅದಕ್ಕಾಗಿ ಕನಸು, ರೂಪಕ, ವ್ಯಂಗ್ಯ, ವಿನೋದ ಇತ್ಯಾದಿಗಳನ್ನು ಬಳಸಿಕೊಂಡು – ಹೇಳುತ್ತಿರುವುದು ಇಲ್ಲಿನ ಸಾಮಾನ್ಯ ಎಳೆ. ಇದನ್ನು ಅವರು ಸಹಜವಾಗಿ ಮಾಡುತ್ತಾರೆಂಬುದೇ ಒಂದು ಹೆಚ್ಚುಗಾರಿಕೆ. ಇಲ್ಲಿ ಕಥನದ ಗಿಮ್ಮಿಕ್ ಇಲ್ಲ.

ಏನೋ ಕಟ್ಟುತ್ತಿದ್ದೇನೆಂಬ ಸಂಕಲ್ಪವಾಗಲಿ, ಯಾರಿಗೋ, ಯಾವುದಕ್ಕೋ ಬದ್ಧನಾಗಿರಬೇಕೆಂಬ ಅಸಹಜ ಕಟ್ಟುಪಾಡುಗಳ ಲಿಮಿಟೇಶನ್ಸ್ ಆಗಲಿ ಅವರಿಗಿಲ್ಲ ಇಲ್ಲ ಎಂಬುದು ಓದುಗನಿಗೆ ಮೊದಲಸಲಕ್ಕೇ ಅನುಭವಕ್ಕೆ ಬಂದುಬಿಡುವ ಸತ್ಯ."[67] ಎನ್ನುವಲ್ಲಿ ಹೊಸ ಕತೆಗಳ ಸ್ಥೂಲ ನೋಟವನ್ನು ಕಾಣಬಹುದು

ಕಳೆದ ದಶಕದಲ್ಲಿ ಒಳ್ಳೆಯ ಕಥಾಸಾಹಿತ್ಯ ಮೂಡಿಬಂದಿದೆ. ಸೃಜನಶೀಲ ಕಲ್ಪನೆ, ತಾತ್ವಿಕತೆ ಹಾಗೂ ಭಾಷೆ – ಈ ಅಂಶಗಳನ್ನು ಹದವಾಗಿ ಬೆರೆಸಿರುವ ಹಲವು ಕತೆಗಳು ಈ ಸಂದರ್ಭದಲ್ಲಿ ಅವತರಿಸಿವೆ. ಕಥೆಯೆಂದರೆ ಹೀಗೆ ಎಂಬ ಸಿದ್ಧಸೂತ್ರಗಳನ್ನು ಬಂಡಾಯಕ್ಕಿಂತಲೂ ಹೆಚ್ಚು ತೀವ್ರ ಹಾಗೂ ಗೋಚರಿಸುವ ರೀತಿಯಲ್ಲಿ ಧಿಕ್ಕರಿಸಿದ್ದು ಕಳೆದ ಎರಡು ದಶಕಗಳಿಂದ ಬರೆಯುತ್ತಿರುವ ಕಥೆಗಾರರಲ್ಲಿ ಎದ್ದುಕಾಣುತ್ತದೆ. ಕಥಾ ಪರಂಪರೆಯನ್ನು ಹೆಚ್ಚು ಆಸ್ಥೆಯಿಂದ ಬೆಳೆಸುತ್ತಿರುವ ಕುಂ.ವೀರಭದ್ರಪ್ಪ, ಅಬ್ದುಲ್ ರಶೀದ್, ಫಕೀರ್ ಮಹ್ಮದ್ ಕಟ್ಪಾಡಿ, ರಾಘವೇಂದ್ರ ಪಾಟೀಲ್, ಮೊಗಳ್ಳಿ ಗಣೇಶ, ಅಮರೇಶ ನುಗಡೋಣಿ, ಜಯಂತ ಕಾಯ್ಕಿಣಿ, ಚೆನ್ನಣ್ಣ ವಾಲೀಕಾರ, ಮಲ್ಲಿಕಾರ್ಜುನ ಹಿರೇಮಠ, ಬಾಳಾಸಾಹೇಬ ಲೋಕಾಪುರ, ಚಿತ್ರಶೇಖರ ಕಂಠಿ, ಅಬ್ಬಾಸ್ ಮೇಲಿನಮನಿ, ಬಸು ಬೇವಿನಗಿಡದ, ಅಲಕ ತೀರ್ಥಹಳ್ಳಿ, ಕಂನಾಡಿಗಾ ನಾರಾಯಣ, ಪ್ರಹ್ಲಾದ ಅಗಸನಕಟ್ಟೆ, ಲೋಕೇಶ ಅಗಸನಕಟ್ಟೆ, ಕೇಶವ ಮಳಗಿ, ವಿವೇಕ ಶಾನಭಾಗ, ಮತ್ತಿತರರ ಜೊತೆಗೆ ಸ್ಪರ್ಧಿಗಳೆಂಬಂತೆ ಭಿನ್ನ ಯೋಚನಾ ಕ್ರಮ ಮೈಗೂಡಿಸಿಕೊಂಡು ಬರೆಯುತ್ತಿರುವ ಯುವ ಕಥೆಗಾರರ ಪಡೆ ಕನ್ನಡ ಸಾಹಿತ್ಯ ವಲಯಕ್ಕೆ ಅಚ್ಚರಿ ಹುಟ್ಟಿಸುವ ರೀತಿಯಲ್ಲಿ ಬರೆಯುತ್ತಿದೆ. ಆನಂದ ಋಗ್ವೇದಿ, ವಿ.ಎಂ.ಮಂಜುನಾಥ, ಚಿದಾನಂದ ಸಾಲಿ, ಕಸ್ತೂರಿ ಬಾಯಿರಿ, ಡಾ. ವಿನಯಾ, ಕೆ. ಶರೀಫಾ, ಸರ್ಜಾ ಶಂಕರ್, ಮಹಾಂತೇಶ ನವಲಕಲ್, ಸಚ್ಚಿದಾನಂದ ಹೆಗಡೆ, ಮಂಜುನಾಥ ಗೀತಾ, ಮಂಜುನಾಥ ಲತಾ, ಗಂಗಾಧರ ಬೀಚನಹಳ್ಳಿ, ಡಾ. ಯಲ್ಲಪ್ಪ ಮೊದಲಾದವರು ಬಹು ಕಸುವಿನಿಂದ ಬರೆಯುತ್ತಿರುವುದು ಕನ್ನಡ ಕಥಾಸಾಹಿತ್ಯವು ಸಮೃದ್ಧಗೊಳ್ಳುತ್ತಿರುವುದನ್ನು ವಿಮರ್ಶೆ ಗುರುತಿಸಿದೆ.

ಒಳ್ಳೆಯ ಕಥೆಗಳ ರಚನೆಗೆ ಸ್ವಾನುಭವ ಮತ್ತು ಅನ್ಯನುಭವಗಳ ನಿರೂಪಣೆಯಷ್ಟೇ ಸಾಕಾಗುವುದಿಲ್ಲ. ವಾಸ್ತವದ ಶೋಧನೆಗೆ ಕಂಡುಂಡ ಅನುಭವಗಳಂತೆಯೇ ಕಲ್ಪನೆಯ ನೆರವಿನಿಂದ ಕಟ್ಟಿಕೊಡುವ ಅನುಭವಗಳೂ ಅತ್ಯಗತ್ಯ. ಹಲವು ದೇಶ, ಕಾಲ, ಸಂದರ್ಭಗಳನ್ನು ಒಮ್ಮೆಲೆ ಹಿಡಿಯಬೇಕಾದ 'ಕಥೆ'ಗಳಿಗಂತೂ ಈ ಬಗೆಯ ಕಲ್ಪನಾತ್ಮಕ ಪ್ರತಿಭೆಯು ಅತ್ಯಗತ್ಯ. ಅಂತೆಯೇ, ಕಥೆಯ ವಿಭಿನ್ನ ಭಾಗಗಳಲ್ಲಿ ಯಾವುದು ಎಷ್ಟು ಮುಖ್ಯ, ಯಾವುದು ಎಷ್ಟು ಇರಬೇಕು ಎನ್ನುವ ತಿಳಿವಳಿಕೆ, ಮೂರ್ತವಾದ ವಿವರಗಳಿಂದಲೇ ಅಮೂರ್ತವಾದ ದರ್ಶನವನ್ನು ಒಡಮೂಡಿಸುವ ಶಕ್ತಿ, ಭಾಷೆಯ ವಿಭಿನ್ನ ನೆಲೆಗಳನ್ನು ಸಂಯೋಜಿಸುವ ಸಾಮರ್ಥ್ಯ, ದೈನಿಕ ವಿವರಗಳ ಸಾಂಕೇತಿಕ ಬಳಕೆ ಇವೆಲ್ಲದರ ಸಂಯೋಗದಿಂದ ಉತ್ತಮವಾದ ಕಥೆಯು ಮೂಡಿ ಬರುತ್ತದೆ. ಕನ್ನಡದ ಮತ್ತು ಜಗತ್ತಿನ ಕಥಾ ಪರಂಪರೆಯ ನಿಕಟ ಪರಿಚಯವು ನಮ್ಮ ಕಥೆಗಾರರನ್ನು ಈ

ಸಾಧ್ಯತೆಗಳ ದಿಕ್ಕಿನತ್ತ ಕರೆದೊಯ್ಯಬೇಕು ಎಂಬ ವಿಮರ್ಶೆಯ ಆಶಯ ಹೊಸ ಕಥೆಗಳ ಜಾಡು ಗುರುತಿಸುವಲ್ಲಿ ದಿಕ್ಸೂಚಿಯಾಗಿದೆ.

ಕನ್ನಡ ಕತೆಗಳ ಮತ್ತು ಕತೆಗಾರರ ಸೃಷ್ಟಿಗೆ ಮುಖ್ಯ ವೇದಿಕೆಯಾಗಿರುವ ವಿವಿಧ ಪತ್ರಿಕೆಗಳ ಪುರವಣಿಗಳು ಮತ್ತು ಯುಗಾದಿ ಹಾಗೂ ದೀಪಾವಳಿ ವಿಶೇಷಾಂಕಗಳು ಕನ್ನಡದಲ್ಲಿ ಹೊಸ ರೀತಿಯ ಕತೆಗಳು ಹುಟ್ಟಿ ಬರಲು ಕಾರಣವಾಗಿವೆ. ಯಾವುದೇ ಲೋಕಾನುಭವವು ಕಥೆಗಾರನ ಅಂತರಂಗದಲ್ಲಿ ಪ್ರವೇಶ ಪಡೆದು ಅವನಿಗೇ ವಿಶಿಷ್ಟವಾದ ಗ್ರಹಿಕೆಯ ಕ್ರಮದಿಂದ ಮರುಹುಟ್ಟು ಪಡೆದಾಗ ಮಾತ್ರ 'ಕಥೆ'ಯೆಂಬ ಪವಾಡ ಸಂಭವಿಸುತ್ತದೆ. ಕಥೆ ಎಂಬುದು ಕೇವಲ ಲೋಕಾನುಭವಕ್ಕೆ ಸಂವಾದಿಯಾದ ಭಾಷಾ ಶರೀರವಲ್ಲ. ತನ್ನ ಕಲ್ಪನಾ ಶಕ್ತಿಯ ನೆರವಿನಿಂದ ಕಥೆಗಾರ ಕಥೆಯಲ್ಲಿ ತನ್ನದೇ ಆಶಯ, ಅರ್ಥಗಳನ್ನೂ ನೀಡಬೇಕು. ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರದ ಹರಹು ಹಾಗೂ ಇತಿಮಿತಿಗಳ ಬಗ್ಗೆ ಸರಿಯಾದ ತಿಳಿವಳಿಕೆ ಹೊಂದಿಲ್ಲದ ಅನೇಕ ಪ್ರಯತ್ನವಾದಿ ಕಥೆಗಾರರ ಸೋಲಿಗೆ ಅವರಲ್ಲೇ ಉತ್ತರವಿದೆ. ಕಥೆಯೆನ್ನುವುದು ಕೇವಲ ಭಾವನೆಗಳ ಮತ್ತು ಸೃಜನಶಕ್ತಿಯ ದುಂದುಗಾರಿಕೆಯೆಂದು ತಿಳಿಯದೆ ಒಂದು ನಿರ್ದಿಷ್ಟ ಉದ್ದೇಶಕ್ಕೆ ದುಡಿಸಿಕೊಳ್ಳುವ ಕಲೆಗಾರಿಕೆಯಾಗಬೇಕು. ಸ್ವಯಂಪೂರ್ಣ ಜಗತ್ತನ್ನು ಸೃಷ್ಟಿಸುವ ಆಶಯದೊಂದಿಗೆ ಕಥೆ ರಚನೆಯಾಗುವ ಬದಲು ಸುಧಾರಣೆ ಅಥವಾ ಆದರ್ಶಗಳ ಭಾರವನ್ನು ಅಕ್ಷರಗಳ ಮೂಲಕ ಸಾಧಿಸುವುದಲ್ಲ. ಕನ್ನಡ ಕಥೆಗಳೆಂದರೆ ಇಡಿಯಾಗಿ ಕಾಣಸಿಗದೆ ವಿವಿಧ ಪ್ರಾಂತ್ಯದ ಭಾಷಾ ಶೈಲಿ, ಕಥೆಗಾರರ ಸಂವೇದನಾಶೀಲತೆ, ಸೃಜನಶೀಲ ಮನಸ್ಸು, ಸಮಸ್ಯೆಗಳು, ಚಳವಳಿಗಳೂ ಭಿನ್ನ ಕಥೆಗಳ ರಚನೆಗೆ ಕಾರಣವಾದ ಅಂಶಗಳಾಗಿವೆ.

ಸಮಕಾಲೀನ ಕನ್ನಡ ಕತೆಗಾರರಲ್ಲಿ ಮುಖ್ಯರಾದ ಮೊಗಳ್ಳಿ ಗಣೇಶ್ ಅವರ ಕತೆಗಳನ್ನು ಕುರಿತು ಕನ್ನಡ ವಿಮರ್ಶೆ ಬಹು ನಿಕಟವಾಗಿ ಪ್ರತಿಕ್ರಿಯಿಸಿದೆ. ಒಬ್ಬ ನಿಜವಾದ ಕತೆಗಾರನಲ್ಲಿ ಕತೆಯ ವಸ್ತು, ಪಾತ್ರಗಳು, ಭಾಷೆ, ಸಂಸ್ಕೃತಿ, ಶೈಲಿ ಮೊದಲಾದವು ಹೇಗೆ ನಿರಂತರತೆಯನ್ನು ಸಾಧಿಸುತ್ತವೆ ಎನ್ನುವುದನ್ನು ಗಂಭೀರವಾಗಿ ಅಧ್ಯಯನ ಮಾಡಲಾಗಿದೆ. ಕನ್ನಡ ಕಥನಕ್ಕೆ ತಮ್ಮದೇ ಆದ ವಿಶಿಷ್ಟಾನುಭವವನ್ನು ಉಣಬಡಿಸಿದ ಮೊಗಳ್ಳಿ ಗಣೇಶ 'ಬುಗುರಿ' ಮೂಲಕ ಸಂಚಲನ ಮೂಡಿಸಿದರು. ನಂತರದ ಬಹುತೇಕ ಕಥೆಗಳಲ್ಲಿ ಹಿಂದಿನ ಬುಗುರಿಯ ಸುತ್ತ ಸುತ್ತಲು ಹೊಸ ದಾರ ಬಳಸಿದರಷ್ಟೆ ಅನ್ನಿಸುತ್ತದೆ. ಅವರು ಉಳಿದ ತಮ್ಮ ಸಹಲೇಖಕರಂತೆ ಕಥೆ ಹೇಳುವ ಕ್ರಮದಲ್ಲಿ ವೈವಿಧ್ಯತೆಯನ್ನು ಸಾಧಿಸಲಿಲ್ಲ. 'ಬುಗುರಿ' ಪ್ರಕಟವಾದ ದಿನದಿಂದ ಇಲ್ಲಿಯವರೆಗೂ ಮೊಗಳ್ಳಿಯವರು ಬರೆದ ಅತ್ಯುತ್ತಮ ಕಥೆ ಎಂಬುದರಲ್ಲಿ ಎರಡು ಮಾತಿಲ್ಲ. ದಲಿತ ಜಗತ್ತನ್ನು ತುಂಬಿಕೊಂಡಿರುವ ವಿಷಾದ ಮತ್ತು ಅಸಹಾಯಕತೆಗಳನ್ನು ಈ ಕಥೆ ಸಂಕೀರ್ಣವಾಗಿ ಅಷ್ಟೇ ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಆವೇಶ ಮತ್ತು ಭಾವುಕತೆಗಳ ಲವಲೇಶವೂ ಇಲ್ಲದೆ ಪಾತ್ರಗಳ ಒಳಜಗತ್ತಿನ ತಲ್ಲಣಗಳು ಕಾರಣವಾದ ಹೊರಜಗತ್ತಿನ ಶಕ್ತಿಗಳು ಕಥೆಯಲ್ಲಿ ಚಿತ್ರಿತವಾಗಿವೆ. ಮುಗ್ಧ ಬಾಲಕ ಚೆಲುವನ

ನೆಲೆಯಿಂದ ನಿರೂಪಿತವಾಗುವ ಕಥೆಗೆ ವ್ಯಕ್ತಿನಿಷ್ಠ ಆಯಾಮಗಳು ದೊರಕುತ್ತವೆ. ಜೀವನಪ್ರೀತಿಗೆ ಸಂಕೇತವಾಗಿರುವ ಬುಗುರಿಯ ಬಗೆಗಿನ ಹಂಬಲವನ್ನು ನೀಗಿಕೊಳ್ಳುವ ಮಟ್ಟಿಗೆ ಅವನ ಚೇತನದ ಮೇಲೆ ಆಗುವ ಹೊರಲೋಕದ ಆಕ್ರಮಣ ಅಸಾಧಾರಣವಾದುದು. ತಾಯಗರ್ಭವನ್ನು ಮರಳಿ ಸೇರಿಬಿಡಬೇಕೆಂಬ ಅವನ ಬಯಕೆ ಒಂದು ಇಡೀ ಸಮುದಾಯದ ಆಕ್ರಂದನವಾಗುತ್ತದೆ. ಗುಂಜಾರಯ್ಯ, ಅಟಾರಿ, ಚಿಕ್ಕಣ್ಣ ಮತ್ತಿತರ ಪಾತ್ರಗಳ ಅವಮಾನದ ಆಳಗಳು ವಿವರಣೆಗೆ ನಿಲುಕುವುದಿಲ್ಲ. ತಣ್ಣಗೆ ಉರಿಯುವ ಭಾಷೆ, ಅಲ್ಲಲ್ಲಿ ಮಿಂಚುವ ಹಾಸ್ಯದ ಎಳೆಗಳು ಮತ್ತು ಒಂದು ಜೀವನ ಕ್ರಮದ ಪ್ರಬುದ್ಧ ಅರಿವು 'ಬುಗುರಿ' ಕಥೆಯ ಯಶಸ್ಸಿಗೆ ಕಾರಣ ಎನಿಸಿದೆ. ಅವರ 'ನನ್ನ ಅಜ್ಜನಿಗೊಂದಾಸೆಯಿತ್ತು', 'ಆ ಅಳು ಇನ್ನೂ ಈಗಲೂ' ಸೇರಿದಂತೆ ಅನೇಕ ಕಥೆಗಳು 'ಬುಗುರಿ'ಯ ಮುಂದುವರೆದ ಭಾಗಗಳಾಗಿವೆ. ಎನ್ನುವಲ್ಲಿ ಒರ್ವ ಕತೆಗಾರನ ಕತೆಗಳ ಪರಂಪರೆಯನ್ನು ಸೂಕ್ಷ್ಮವಾಗಿ ಗಮನಿಸಿ ಪ್ರತಿಕ್ರಿಯಿಸಿರುವುದನ್ನು ಕಾಣಬಹುದು.

ಹೈದರಾಬಾದ್ ಕರ್ನಾಟಕ ಪ್ರದೇಶದ ಮಹತ್ವದ ಕಥೆಗಾರರಾದ ಅಮರೇಶ ನುಗಡೋಣಿ, ನವ್ಯ ಹಾಗೂ ಬಂಡಾಯ ಮಾದರಿಯಲ್ಲೆ ಮೈದಳೆಯುವ ಅವರ ಆರಂಭದ ಕಥೆಗಳು ಇತ್ತೀಚೆಗೆ ಜಾಗತೀಕರಣದ ಸವಾರಿಯನ್ನೂ ಎಳೆ ಎಳೆಯಾಗಿ ಬಿಡಿಸಲು ಯತ್ನಿಸುತ್ತಿವೆ. ರಾಯಚೂರು ಜಿಲ್ಲೆಯ ಸಿರವಾರ ಸುತ್ತಲಿನ ಭಾಷಾ ಪ್ರಯೋಗ ಅವರ ಕಥೆಗಳಲ್ಲಿ ಮೈದಳೆದರೂ ಬಳ್ಳಾರಿಯ ವಿಶಿಷ್ಟ ಆಡುಭಾಷೆಯ ಲಯ, ಗತಿ, ಶೈಲಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿದ ಕುಂವಿಯವರಂತೆ ವ್ಯಂಗ್ಯ, ವಿಡಂಬನಾ ರೀತಿಯ ಭಾಷಾ ಪ್ರಯೋಗದಲ್ಲಿ ನುಗಡೋಣಿ ಸ್ವಲ್ಪ ಮಟ್ಟಿಗೆ ಭಿನ್ನವಾಗುತ್ತಾರೆ. ಆಧುನಿಕ ಕನ್ನಡ ಕಥಾ ಪರಂಪರೆಯ ಹೊಸ ಹಾದಿಯಲ್ಲಿ ಸಾಗುತ್ತಿರುವ ಕಥೆಗಾರರ ಸಾಲಿನಲ್ಲಿ ಮುಂದೆ ನಡೆಯುತ್ತಿರುವ ನುಗಡೋಣಿಯವರು 'ಮಣ್ಣು ಸೇರಿತು ಬೀಜ' ಮತ್ತು 'ತಮಂಧದ ಕೇಡು' ಕಥಾ ಸಂಕಲನಗಳ ಮೂಲಕ ಕನ್ನಡ ಕಥಾ ಪರಂಪರೆಗೆ ಮಹತ್ವದ ಕೊಡುಗೆ ನೀಡಿದ ಅವರು ಮೂರನೇ ಕಥಾ ಸಂಕಲನ 'ಸವಾರಿ'ಯ ಮೂಲಕ ಕನ್ನಡದ ಕಥಾ ಲೋಕ ಸಾಗಿರುವ ಹೊಸ ಜಾಡಿನ ಶೋಧನೆಗೆ ಮೈಲುಗಲ್ಲಾಗಿದ್ದಾರೆ. ಕಥೆಗಳ ಶೀರ್ಷಿಕೆಗೆ ವಚನಗಳ ಸಾಲುಗಳನ್ನೇ ಆಯ್ಕೆಮಾಡಿಕೊಳ್ಳುವ ನುಗಡೋಣಿಯವರ ಆಯ್ಕೆ ವಿಶಿಷ್ಟವೆನಿಸುತ್ತದೆ. 'ಏ ದಿಲ್ ಮಾಂಗೆ ಮೋರ್', 'ಕಣ್ಣು ಮುಕ್ಕಾದ ಬೀಜಗಳು', 'ಮೀರುವ ಘನ', 'ಜೋಗುಳ ನಿಂದಲ್ಲದೆ', 'ದೈವಕ್ಕೆ ಶರಣಂಬೆವು', 'ಒಡಲುಗೊಂಡವರು', 'ಕುಡಿಬಂದ ದೀಪಗಳು' ಮತ್ತು 'ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು' ಎಂಬ ಕಥೆಗಳು ಕನ್ನಡ ಕಥೆಗಳಿಗೆ ಉತ್ತಮ ಸೇರ್ಪಡೆ. ಸದ್ಯದ ವಿದ್ಯಮಾನಗಳನ್ನು ವಿಶಿಷ್ಟ ಸ್ವಾನುಭವ ಮತ್ತು ಭಾಷಾ ಶೈಲಿಯೊಂದಿಗೆ ಚಿತ್ರಿಸುವಲ್ಲಿ ನುಗಡೋಣಿಯವರು ಓದುಗರ ಗಮನಸೆಳೆಯುತ್ತಾರೆ. ನೈಸರ್ಗಿಕ ಸಂಪನ್ಮೂಲಗಳೇ ಖಾಲಿಯಾಗಿ ಕೈಗಾರಿಕೆಗಳು ನಿಂತು ಲೆನಿನ್ ಪ್ರಣೀತ ಕಾರ್ಮಿಕ ಕ್ರಾಂತಿ ಬಣ್ಣ ಕಳೆದುಕೊಳ್ಳುತ್ತಿರುವುದನ್ನು, ಮಾವೋ ವಿಚಾರಧಾರೆಯ ಕೃಷಿ ಮತ್ತು ಕಾರ್ಮಿಕ ಕ್ರಾಂತಿ ಬದಲಾಗುತ್ತಿರುವ ರೀತಿಯನ್ನು, ಮತ್ತು ಹಸಿರು ಕ್ರಾಂತಿ ಸದ್ಯದ ಪರಿಸ್ಥಿತಿಯಲ್ಲಿ ಹೊಸ ತಂತ್ರಗಳ ಬಗ್ಗೆ ಕಲಾತ್ಮಕತೆ ಮತ್ತು

ವೈವಿಧ್ಯಮಯವಾಗಿ ಚಿತ್ರಿಸುವ 'ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು' ಕಥೆ. ಕನ್ನಡದ ಕಥನ ಕಲೆ ಪಡೆಯುತ್ತಿರುವ ಹೊಸ ಹೊಳುಹನ್ನು ಗುರುತಿಸಲು ಸಾಕ್ಷಿ. ಡಾ. ಪ್ರಹ್ಲಾದ ಅಗಸನಕಟ್ಟೆ, ಬಸವರಾಜ ಕುಕ್ಕರಹಳ್ಳಿ, ಲೋಕೇಶ ಅಗಸನಕಟ್ಟೆ ಬರೆಯುತ್ತಿರುವ ಕಥೆಗಳು ಕನ್ನಡ ಸಾಹಿತ್ಯದ ವಿಶಿಷ್ಟತೆಯನ್ನು ಸ್ಥಾಪಿಸುತ್ತಿರುವುದನ್ನು ಕನ್ನಡ ವಿಮರ್ಶೆ ಗುರುತಿಸಿದೆ.

ಎಲ್ಲಾ ಪಂಥ, ಮಾದರಿ, ಮಾರ್ಗ, ವಾದಗಳನ್ನು ಮೀರಿ ಸಶಕ್ತವಾಗಿ ಬರೆಯುತ್ತಿರುವ ಬಹುಮುಖ್ಯ ಕಥೆಗಾರರೆಂದು ವಿ. ಎಂ. ಮಂಜುನಾಥ, ಆನಂದ ಋಗ್ವೇದಿ, ಚಿದಾನಂದ ಸಾಲಿ, ಅಲಕ ತೀರ್ಥಹಳ್ಳಿ, ಮಂಜುನಾಥ ಲತಾ, ವಸುಧೇಂದ್ರ, ಸಚ್ಚಿದಾನಂದ, ನಾಗರಾಜ ವಸ್ತಾರೆ ಮೊದಲಾದವರನ್ನು ಗುರುತಿಸಲಾಗುತ್ತದೆ. ವಿ. ಎಂ. ಮಂಜುನಾಥ ಸೃಷ್ಟಿಸುತ್ತಿರುವ ಕಥೆಗಳು ಈ ಹಿಂದಿನ ಕಥನ ಮಾದರಿಗಳನ್ನೇ ಪ್ರಶ್ನಿಸುತ್ತವೆ. ಇಂದಿನ ಕತೆಯ ಪಾತ್ರಗಳು ಪಾತ್ರಗಳು ಅಮಾನವೀಯ ಕ್ರೌರ್ಯ, ಶೋಷಣೆ, ಅಸ್ಪೃಶ್ಯತೆ, ಜಾತಿಯಂಥಾ ಭೀಕರ ರೋಗಗಳಿಂದ ನಲುಗಿದರೂ ತಮ್ಮಷ್ಟಕ್ಕೆ ಗುಣಪಡಿಸಿಕೊಂಡು ದಿಟ್ಟತನದಿಂದ ಬದುಕಲು ಹೊಸ ಮಾರ್ಗ ಅನ್ವೇಷಿಸುವ ರೀತಿ ಅನನ್ಯ. ಕತೆಗಳಲ್ಲಿ ಬಳಸಿರುವ ವಿಶಿಷ್ಟ ಭಾಷೆಯೊಳಗಿನ ಬನಿ ಮತ್ತು ಎಚ್ಚರವನ್ನು ಕನ್ನಡ ಸಾಹಿತ್ಯ ವಿಮರ್ಶಕರು ವಿಭಿನ್ನ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ.

ಇತ್ತೀಚಿಗೆ ಅತ್ಯಂತ ಉತ್ಸಾಹದಿಂದ ಬರೆಯುತ್ತಿರುವ ಯುವ ಕಥೆಗಾರರಲ್ಲಿ ಒಂದು ಸಾಮಾನ್ಯ ಅಂಶವನ್ನು ಗುರುತಿಸಬಹುದು. ಸದ್ಯದ ಸಾಮಾಜಿಕ ವಿಷಮತೆ, ರಾಜಕೀಯ ಒಳಸುಳಿಗಳನ್ನು ಶೋಧಿಸುತ್ತಾ ಹೆಚ್ಚು ಸಮಕಾಲೀನತೆ ಹೊಂದುವ ಕೆಲಸ ಅವ್ಯಾವಹತವಾಗಿ ನಡೆದಿದೆ. ಸಾಮಾಜಿಕ ಇತಿಹಾಸದ ಜೊತೆಗೆ ವ್ಯಕ್ತಿಯ ಅಂತರಂಗದಲ್ಲಿಯೇ ಹುದುಗಿರುವ ವೈಯಕ್ತಿಕ ಅನುಭವಗಳ ಇತಿಹಾಸವೂ ಇತ್ತೀಚಿನ ಕಥಾ ಹಂದರವನ್ನು ಹಿಗ್ಗಿಸುತ್ತಿದೆ. ಹೊಸ ಕಥನ ಕ್ರಮದಲ್ಲಿ ವಿಶಿಷ್ಟವಾಗಿ ಬರೆಯುತ್ತಿರುವವರಲ್ಲಿ ಗಮನ ಸೆಳೆಯುತ್ತಿರುವ ಮತ್ತೊಬ್ಬ ಕಥೆಗಾರರೆಂದರೆ ಆನಂದ ಋಗ್ವೇದಿ. 'ಜನ್ನ ಮತ್ತು ಅನೂಹ್ಯ ಸಾಧ್ಯತೆ' ಎಂಬ ಕಥೆ ಮೂಲಕ ಯುವ ಕಥೆಗಾರರು ತುಳಿಯಬಹುದಾದ ಹೊಸ ಹಾದಿಗೆ ಮುನ್ಸೂಚನೆಯಾಗಿದ್ದಾರೆ. ದಟ್ಟವಾದ ಸಾಂಕೇತಿಕತೆ ಹಾಗೂ ಶೈಲಿಗೆ ಅವರ 'ಕತ್ತಲ ಬೀಜ' ಕಥೆ ಉತ್ತಮ ಉದಾಹರಣೆ. ವರ್ಗ, ವರ್ಣಗಳ ಅಂತರವನ್ನು, ಮನುಷ್ಯ ಸ್ವಭಾವದ ವಿವಿಧ ನಿಗೂಢಗಳನ್ನು ಹುಡುಕುವ ಪ್ರಯತ್ನ, ಕತ್ತಲು-ಬೆಳಕುಗಳ ಮುಖಾಮುಖಿಯನ್ನು ಪಾತ್ರ ಚಿತ್ರಣದ ನೆಲೆಯಲ್ಲಿಯೇ ಕಟ್ಟಿಕೊಡುವ ಪ್ರಯತ್ನ ವಿಶಿಷ್ಟವೆನಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಇವತ್ತಿನ ಕತೆಗಾರರ ಕುರಿತು ಡಿ. ಎಸ್. ನಾಗಭೂಷಣ ಅವರು "ತಾನು ಕಂಡುಂಡ ವರ್ತಮಾನದ ಬದುಕನ್ನು ರಾಗದ್ವೇಷವಿಲ್ಲದ, ನಿರ್ಲಿಪ್ತ ಮನಸ್ಸಿನಿಂದ ಕಟ್ಟಿಕೊಡುವ ವಸುಧೇಂದ್ರ ಸಮಕಾಲೀನ ಕಥೆಗಾರರಿಗಿಂತ ಭಿನ್ನವಾಗುತ್ತಾರೆ. ವಿಭಿನ್ನ ನೆಲೆಯ ತೇಜಸ್ವಿ ಮತ್ತು ವಸುಧೇಂದ್ರರ ನಡುವೆ ಕಥೆಗಳಲ್ಲಿ ಸ್ವಾಮ್ಯ ಇರುವುದು ಕತೆಗಳಲ್ಲಿ ಅಲ್ಲ, ಪಾತ್ರಗಳ ಸೃಷ್ಟಿಯಲ್ಲಿ ಇರುವ ಜೋಳೆತನ. ಇವರಿಬ್ಬರ ಪಾತ್ರಗಳು ಯಾವುದೇ

ಮುಲಾಜಿಲ್ಲದೆ ತಾವಾಡುವ ಮಾತುಗಳನ್ನು ಸಹಜವಾಗಿ ಹೊರಹಾಕುತ್ತವೆ. ಒಬ್ಬ ಕತೆಗಾರ, ಅಥವಾ ಕಾದಂಬರಿಗಾರ, ಓದುಗರು ಮತ್ತು ವಿಮರ್ಶಕರನ್ನು ಮೀರಿ ಪರೀಕ್ಷೆಗೆ ಒಳಗಾಗಬೇಕಿರುವುದು ಕಾಲನ ತಕ್ಕಡಿಯಲ್ಲಿ ಮಾತ್ರ. ಯಾವೊಬ್ಬ ವಿಮರ್ಶಕ ಒಬ್ಬ ಲೇಖಕನನ್ನು ಸೃಷ್ಟಿಸಲಾರ, ಬದಲಾಗಿ ಕೇವಲ ಪರಿಚಯಿಸಬಲ್ಲ ಅಷ್ಟೇ."[೨೦] ಎನ್ನುವಲ್ಲಿ ಕತೆಗಾರನ ಸಾಧ್ಯತೆಗಳು ಮತ್ತು ಸವಾಲುಗಳೆರಡನ್ನೂ ಒಟ್ಟಿಗೆ ಮನದಟ್ಟು ಮಾಡಿಕೊಡುತ್ತಾರೆ.

ಕಾಲದ ಒತ್ತಡದ ಹಿನ್ನೆಲೆಯಲ್ಲಿ ಶತಮಾನದ ಕೊನೆಯಲ್ಲಿ ಆರಂಭವಾದ ಜಾಗತೀಕರಣದ ಪ್ರಕ್ರಿಯೆ ಕನ್ನಡ ಕಥನವನ್ನು ಬೇರೊಂದು ದೃಷ್ಟಿಯಲ್ಲಿ ಅವಲೋಕಿಸಲು ಅವಕಾಶ ಮಾಡಿಕೊಟ್ಟಿದೆ. ಜಾಗತೀಕರಣದ ಪ್ರಕ್ರಿಯೆ ಆಧುನಿಕತೆಯೇ ಏಕರೂಪತೆಯನ್ನು ಉಂಟು ಮಡುವಂತದ್ದು. 'ಕಾರ್ಪೋರೇಟ್' ಸಂಸ್ಕೃತಿಯು ಆಧುನಿಕ ಜೀವನ ಶೈಲಿಯಲ್ಲಿ ಅಪಾರ ಬದಲವಣೆಯನ್ನು ತರುವುದರೊಂದಿಗೆ ಜೀವನ ಮೌಲ್ಯಗಳನ್ನು ಬದಲಾಯಿಸಿವೆ. ಮೌಲ್ಯಗಳು ಜೀವನದಲ್ಲಿ ಎರಡಾಗಿ ಕಾಣುವ ದ್ವಂದ್ವ ಈ ಕಾಲದ ಕತೆಗಾರರನ್ನು ಕಾಡಿದೆ. ತಾವು ಬಿಟ್ಟು ಬಂದ ಊರು, ತಮ್ಮ ಸಮುದಾಯದ ಜೀವನ ಕ್ರಮವನ್ನು ತಮ್ಮ ಕಂಪನಿ ಜೀವನ ಕ್ರಮದೊಡನೆ ಹೋಲಿಸುವುದು ಒಂದು ಲೋಕವಾದರೆ ಇನ್ನೊಂದು, ತಾವೀಗ ವರ್ತಮಾನದಲ್ಲಿ ನೋಡುತ್ತಿರುವ ಕಂಪನಿ ಜೀವನವನ್ನೇ ಅನುಭವದ ಆಕರವಾಗಿಸಿಕೊಳ್ಳುವುದು. ಇದನ್ನು ಇಜ್ಜೋಡಾದ ಸಂವೇದನೆ ಎನ್ನಬಹುದು. ಅಶೋಕ ಹೆಗಡೆ, ವಿವೇಕ ಶಾನುಭೋಗ, ನಾಗರಾಜ ವಸ್ತಾರೆ, ವಿಕ್ರಂ ಹತ್ವಾರ, ವಸುಧೇಂದ್ರ ಇವರ ಕತೆಗಳು ಸಶಕ್ತವಾಗಿ ಅಭಿವ್ಯಕ್ತಿಸುತ್ತವೆ. ಇವರ ಕತೆಗಳಲ್ಲಿರುವ ಈ ಎರಡೂ ಬಗೆಯ ಜಗತ್ತುಗಳಿಂದಾಗಿ ಮತ್ತೆ ಈ ಕತೆಗಾರರು ನವ್ಯದ ಅಭಿವ್ಯಕ್ತಿಯ ಶೈಲಿಗೆ ಹಿಂತಿರುಗುತ್ತಿದ್ದಾರೆ ಎನಿಸುತ್ತದೆ.

ಇದೇ ಸಂದರ್ಭದಲ್ಲಿ ಜಾಗತೀಕರಣದ ಹಿನ್ನೆಲೆಯಲ್ಲಿ ಹೊಸದಾಗಿ ವಿನ್ಯಾಸಗೊಳ್ಳುತ್ತಿರುವ ಜಾತಿ ವರ್ಗಗಳ ಘರ್ಷಣೆಗಳನ್ನು ಎತ್ತಿಕೊಳ್ಳುವ ಕತೆಗಳೂ ಬಂದಿವೆ. ಇವು ತಮ್ಮ ಮುಂದಿರುವ ಹೊಸ ಆಧುನಿಕ ಪರಿಕರಗಳನ್ನು ಮುರಿದು ಕಟ್ಟುವ ನಿಟ್ಟಿನಲ್ಲಿ ಜಾಗೃತವಾಗಿವೆ. ರಾಘವೇಂದ್ರ ಪಾಟೀಲರ ಕತೆಗಳು ಗ್ರಾಮೀಣ ಸಮುದಾಯದ ಬದುಕನ್ನು ಹಲವು ಚಾರಿತ್ರಿಕ ಪಲ್ಲಟಗಳಜೊತೆಗೆ ಹೇಳುತ್ತಿವೆ. ಕೃಷ್ಣಮೂರ್ತಿ ಹನೂರರು ಜನಪದದ ಆಕರಗಳಿಂದ ಮಾನವೀಯ ನೆಲೆಗಳನ್ನು ಹುಡುಕುತ್ತಿದ್ದಾರೆ. ಅಮರೇಶ ನುಗಡೋಣಿಯವರ ಕತೆಗಳು ಆ ಪ್ರದೇಶದ ಅಂಚಿನ ಸಮುದಾಯಗಳ ಜನಜೀವನ ಆಧುನಿಕ ಸ್ಥಿತ್ಯಂತರಗಳಿಗೆ ಪಕ್ಕಾಗುತ್ತಿರುವುದನ್ನು ಸಮರ್ಥವಾಗಿ ಹಿಡಿಯುತ್ತವೆ. ಪ್ರಹ್ಲಾದ ಅಗಸನಕಟ್ಟೆಯವರ ಕತೆಗಳು ಒಳಗೂ ಹೊರಗೂ ಪ್ರಕ್ಷುಬ್ದಗೊಂಡ ಜೀವನವನ್ನು ಕಾಣಿಸುತ್ತಿವೆ. ಇಂತವರಲ್ಲದೆ ವಿನಯಾ ಒಕ್ಕುಂದ, ಕಲಿಗಣನಾಥ ಗುಡದೂರು, ಲೋಕೇಶ ಅಗಸನಕಟ್ಟೆ, ಹನೂರು ಚೆನ್ನಪ್ಪ ಮುಂತಾದವರ ಕತೆಗಳು ಜಾಗತೀಕರಣದಿಂದ ಉಂಟಾದ ಸಂರಚನಾತ್ಮಕ ಬದಲಾವಣೆಗಳನ್ನು ತುಸು ಗೊಂದಲದಿಂದಲೇ ನಿರೂಪಿಸುತ್ತವೆ.

ಇದೇ ಸಂದರ್ಭದಲ್ಲಿ, ಜಾಗತೀಕರಣ ಏಕರೂಪತೆಯ ಸಂಸ್ಕೃತಿಯನ್ನು ಹೇರುತ್ತಿದೆ ಎಂಬ ವಾದಕ್ಕೆ ಪ್ರತಿಯಾಗಿ ಎಂಬಂತೆ ಕೆಲವು ಕತೆಗಳು ಭಿನ್ನ ಸಂವೇದನೆಗಳನ್ನು ನಿರೂಪಿಸುತ್ತವೆ. ಬಹುತ್ವದ ದನಿಗಳಲ್ಲಿ ಮಾತನಾಡುವ ಈ ಪರಿ ಒಮ್ಮೆಗೆ ಅವರ ಅರಾಜಕತೆ ಸ್ವರೂಪವನ್ನು, ಕಾಲದ ತಲ್ಲಣಗಳನ್ನೂ ಹೇಳುತ್ತಲಿದೆಯೇನೋ ಅನ್ನಿಸುತ್ತದೆ. ಜಾಗತೀಕರಣಕ್ಕೆ ಪ್ರತಿಕ್ರಿಯೆ ಎಂಬಂತೆ, ದೇಸಿಯತೆ, ಪ್ಯಾಂಟಸಿ, ಆಧುನಿಕೋತ್ತರ ಶೈಲಿಗಳನ್ನು ರೂಢಿಸಿಕೊಂಡು ಬರೆಯುವ ವೈವಿಧ್ಯ ಕಾಣುತ್ತಿದೆ. ಆದರೆ ಜಾಗತಿಕ ವಿದ್ಯಮಾನಗಳು ತಾಂತ್ರಿಕತೆಯ ಕಾರಣದಿಂದ ಕಣ್ಣಮುಂದೆಯೇ ನಡೆಯುತ್ತಿರುವಂತೆ ಕಾಣುವಾಗ ಅದನ್ನು ವಾಸ್ತವ ಜೀವನಾನುಭವ ಎಂದು ಗ್ರಹಿಸಬೇಕೋ ಅಥವಾ ಕಳೆದು ಹೋಗುತ್ತಿರುವ ಸಮುದಾಯದ ಬದುಕನ್ನು ತನ್ನ ಪ್ರಮಾಣವೆಂದು ತಿಳಿಯಬೇಕೋ ಎನ್ನುವ ಗೊಂದಲದಲ್ಲಿ ಕನ್ನಡದ ಕತೆಗಾರನಿದ್ದಾನೆ ಎನಿಸುತ್ತದೆ. ಇದರಿಂದಾಗಿ ಇವತ್ತಿನ ಕೆಲವರ ಕತೆಗಳು ಅನುಭವವನ್ನೇ ಪ್ರಮಾಣವಾಗಿಟ್ಟುಕೊಂಡು ಬರೆಯುವ ಕಡೆಗೆ ಹೊರಳುತ್ತಿವೆ.

ಒಟ್ಟಾರೆ, ಕನ್ನಡದ ಹೊಸ ಸಂವೇದನೆಯ ಕತೆಗಳು ಓದುಗರ ಮನದಾಳಕ್ಕೆ ಇಳಿದು ಸಂಚಲನ ಸೃಷ್ಟಿಸಲು ಶಕ್ಯವಿರುವ ಕಥೆಗಳು ಮತ್ತು ಕಥೆಗಾರರು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಪಲ್ಲಟಗಳ ಜೊತೆಗೆ ನವ ವಸಾಹತುಶಾಹಿ ಮತ್ತು ಜಾಗತೀಕರಣದ ಪ್ರಭಾವ ಮತ್ತು ಪರಿಣಾಮಗಳನ್ನು ಸಶಕ್ತವಾಗಿ ತಮ್ಮ ಕತೆಗಳಲ್ಲಿ ಪ್ರಕಟಿಸುತ್ತಿದ್ದಾರೆ. ಸೃಜನಶೀಲ ಲೇಖಕ ತನ್ನ ಕಾಲದ ನಿರಂತರತೆ ಮತ್ತು ಸಮಕಾಲೀನ ವಿದ್ಯಮಾನಗಳ ಒತ್ತಡಗಳನ್ನು ದಾಟಿ ಸೃಜನ ಕ್ರಿಯೆಯಲ್ಲಿ ಎಲ್ಲ ಕಾಲದ, ಎಲ್ಲ ಮೌಲಿಕ ಅಂಶಗಳನ್ನು ಸೇರಿಸಲು ಯತ್ನಿಸುವುದು ಸರ್ವವಿಧಿತ. ಕನ್ನಡ ಕಥೆಗಳ ಮುಖ್ಯ ಸತ್ವ ಅದರ ಸೃಜನಶೀಲ ಕಲ್ಪನೆಯಿಂದಲೇ ಮೈತಳೆದಿದೆ. ಪ್ರಗತಿಪರವಾದ ನಿಶ್ಚಿತ ತಾತ್ವಿಕತೆ ಮತ್ತು ಗ್ರಾಮ್ಯ ಶೈಲಿಯ ಬರವಣಿಗೆ ಹೆಚ್ಚು ಮಾನ್ಯಗೊಂಡಿರುವುದರಿಂದ ಆ ರೀತಿಯ ಕತೆಗಳೇ ಕನ್ನಡದಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿರುವುದನ್ನು ಕಾಣಬಹುದು. ಕಳೆದ ದಶಕದ ಮುಖ್ಯ ಸಾಹಿತ್ಯಿಕ ಉತ್ಪನ್ನಗಳಾದ ಕವಿತೆ ಮತ್ತು ಕತೆಗಳಲ್ಲಿ ವ್ಯಕ್ತಿ ವಿಶಿಷ್ಟತೆಗಿಂತ ಸಾಮಾನ್ಯತೆಯನ್ನು ಮುಖ್ಯವಾಗಿ ಕಾಣಬಹುದು. ಬರೆದವರ ಹೆಸರನ್ನು ತೆಗೆದು ವಿವಿಧ ಕವಿಗಳ ಕತೆಗಾರರ ಬರಹಗಳನ್ನು ಒಂದೇ ಸಂಕಲನದಲ್ಲಿ ಜೋಡಿಸಿದರೆ, ಭಾಷೆ ಮತ್ತು ರಚನಾಶೈಲಿಯಿಂದಷ್ಟೆ ಇದು ಇಂತವರ ಬರಹ ಎಂದು ಗುರುತಿಸಲು ಅಸಾಧ್ಯವಾಗುತ್ತದೆ. ಅಂದರೆ ಸಮಕಾಲೀನ ಬರಹಗಾರರು ತಮಗೇ ವಿಶಿಷ್ಟವೆನಿಸುವ ಸ್ವಂತಿಕೆಯನ್ನು ಬರಹಗಳಲ್ಲಿ ರೂಪಿಸಿಕೊಳ್ಳುವಲ್ಲಿ ಸೋತಿದ್ದಾರೆಂಬುದನ್ನು ಇವತ್ತಿನ ವಿಮರ್ಶೆ ಗುರುತಿಸಿದೆ.

ಕಾದಂಬರಿ

ದಲಿತ – ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಕನ್ನಡದಲ್ಲಿ ಹೆಚ್ಚಾಗಿ ಕಾದಂಬರಿಗಳು ರಚನೆಗೊಂಡವು. ಆದರೆ ಕಳೆದ ದಶಕದಲ್ಲಿ ಹೊಸದಾಗಿ ಸಾಹಿತ್ಯಕ್ಷೇತ್ರಕ್ಕೆ

ಪ್ರವೇಶ ಪಡೆದ ತಲೆಮಾರು ಕಾದಂಬರಿ ಪ್ರಕಾರದ ಬಗ್ಗೆ ಹೆಚ್ಚು ಆಸ್ಥೆ ವಹಿಸಿದಂತೆ ಕಂಡುಬರುತ್ತಿಲ್ಲ. ಆದರೆ ಹಿರಿಯ ತಲೆಮಾರಿನವರಾದ ಶ್ರೀನಿವಾಸ ವೈದ್ಯ, ಗೋಪಾಲಕೃಷ್ಣ ಪೈ, ಕುಂ. ವೀರಭದ್ರಪ್ಪ ಮೊದಲಾದವರು ಗಾತ್ರದಲ್ಲಿ ದೊಡ್ಡವಾಗಿರುವ ಕಾದಂಬರಿ ರಚಿಸುತ್ತಿದ್ದಾರೆ. ಕಾದಂಬರಿ ರಚನೆಗೆ ಹೋಲಿಸಿದರೆ ಕಾದಂಬರಿ ಕುರಿತ ವಿಮರ್ಶೆ ಕಳೆದ ದಶಕದಲ್ಲಿ ಹೆಚ್ಚಾಗಿ ರೂಪುಗೊಂಡಿದೆ. ಅದರಲ್ಲೂ ಪಿಎಚ್. ಡಿ. ಅಧ್ಯಯನ ಮತ್ತು ಇತರೆ ಅಧ್ಯಯನಗಳಲ್ಲಿ ಕಾದಂಬರಿಗಳ ವಿಮರ್ಶೆ ಗಂಭೀರವಾಗಿ ನಡೆದಿದೆ.

ದಲಿತ-ಬಂಡಾಯದ ಜೋರು ಕಾಲಕ್ಕೆ ಹೋಲಿಸಿದರೆ ಇಂದು ಸನ್ನಿವೇಶದ ಬಹುಮುಖತೆಯಿಂದ, ಹಲವು ನೆಲೆಗಳಿಂದ ಇವತ್ತಿನ ಸಾಹಿತ್ಯ ಬರುತ್ತಿದೆ. ಸಾಂಪ್ರದಾಯಿಕವಾದ ಸಾಹಿತ್ಯ ಪ್ರಕಾರಗಳು ಈ ಹೊತ್ತು ಸಂಕರಗೊಳ್ಳುತ್ತಿದ್ದು, ಬದಲಾದ ಮನೋಸ್ಥಿತಿ ಮತ್ತು ಮಾದ್ಯಮದ ಅನಿವಾರ್ಯತೆಯಾಗಿ ಇವು ಸಂಭವಿಸುತ್ತಿವೆ. ಮೇಲ್ನೋಟಕ್ಕೆ ಇದು ಕನ್ನಡ ಸಾಹಿತ್ಯದ ಶಿಥಿಲತೆಯೇನೋ ಅನ್ನಿಸಿದರೂ, ಹೊಸ ರೀತಿಯ ಅಭಿವ್ಯಕ್ತಿಯನ್ನು-ಸಂವೇದನೆಗಳನ್ನು ಹೊಸದಾದ ಕಣ್ಣುಗಳಿಂದಲೆ ನೋಡಬೇಕಾದ ಅನಿವಾರ್ಯತೆ ಇರುವುದರಿಂದ ಇವತ್ತಿನ ಸಾಹಿತ್ಯದಲ್ಲಿ ಕಂಡುಬರುತ್ತಿರುವ ಅನುಭವ, ಭಾವನೆ, ವಿಚಾರ ಮತ್ತು ಅವೆಲ್ಲವುಗಳ ಬಗೆಗಿನ ನಿಲುವು/ದೃಷ್ಟಿಕೋನಗಳನ್ನು ನಾವು ಸರಿಯಾಗಿ ಗ್ರಹಿಸಬೇಕಿದೆ.

ಆದರೆ ಇವತ್ತಿನ ಸಾಹಿತ್ಯಾಭಿವ್ಯಕ್ತಿಯಲ್ಲಿ ಮಾಗುವಿಕೆಯ ಕೊರತೆಯಿದ್ದು, ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳುವಲ್ಲಿ ವಿಫಲವಾಗುತ್ತಿದೆ. ಬರವಣಿಗೆಯ ಭಾಷೆ ಮತ್ತು ಕ್ರಮ ಕಾಲ ಕಾಲಕ್ಕೆ ಬದಲಾವಣೆ ಆಗುತ್ತಿರುತ್ತದೆಯಾದರೂ ಅದು ಪರಂಪರೆಯ ಅರಿವಿಟ್ಟುಕೊಂಡು ನಡೆಯಬೇಕಾದ ಅನಿವಾರ್ಯತೆ ಯಾಗಿರುತ್ತದೆ. ಜೊತೆಗೆ ಇವತ್ತಿನ ಮಾಧ್ಯಮ ಕೂಡಾ ನಮ್ಮ ಸಾಹಿತ್ಯ ಪ್ರಕಾರಗಳಿಗೆ ವಿವಿಧ ರೀತಿಯ ಸಂತಾನಹರಣ, ಗಾತ್ರಹರಣ ಪರಿಸ್ಥಿತಿಯನ್ನು ತಂದೊಡ್ಡುತ್ತಿದ್ದು, ಲೇಖಕನಾದವನು ತನ್ನ ಬರವಣಿಗೆಯ ತಾತ್ವಿಕ ಹಿನ್ನೆಲೆ ಮತ್ತು ಸ್ವರೂಪ, ವಿನ್ಯಾಸಗಳನ್ನು ಜತನದಿಂದ ಮುಂದುವರೆಸಬೇಕಾಗಿದೆ. ಮೇಲ್ನೋಟಕ್ಕೆ ಭಯ - ಆತಂಕಗಳನ್ನು ಉಂಟುಮಾಡುವ ವಾತಾವರಣವನ್ನು ಭರವಸೆ - ನಂಬಿಕೆಗಳನ್ನಾಗಿ ಮಾರ್ಪಾಡಿಸಿಕೊಂಡು ಮುಂದುವರೆಯಬೇಕಾದ ಅನಿವಾರ್ಯತೆಯಿದೆ.

ಕಥೆ ಮತ್ತು ಕಾದಂಬರಿಗಳ ನಡುವಿನ ವ್ಯತ್ಯಾಸವನ್ನು ಬರೆಯುವವರ ಅಥವಾ ಓದುವವರ ನೆಲೆಯಿಂದ ಹುಡುಕುವ ಕೆಲಸವು ಕನ್ನಡದಲ್ಲಿ ಅಷ್ಟಾಗಿ ಆಗಿಲ್ಲ. ಕಾರಂತ, ಕುವೆಂಪು ಅಥವಾ ಭೈರಪ್ಪನವರಂತಹ ಲೇಖಕರು ಕಾದಂಬರಿಯೆಂಬ ಬಗೆಯನ್ನು ಮಾತ್ರ ಆರಿಸಿಕೊಂಡರು. ಸಣ್ಣ ಕತೆ ಅವರಿಗೆ ಒಗ್ಗಲಿಲ್ಲ. ಮಾಸ್ತಿಯವರು ಕೆಲವು ಕಾದಂಬರಿಗಳನ್ನು ಬರೆದರಾದರೂ ಅವರಿಗೆ ಒಲಿದಿದ್ದು ಸಣ್ಣ ಕತೆ ಮಾತ್ರವೆ. ನಂತರದ ಬರಹಗಾರರಲ್ಲಿ ಕೆಲವರಾದರೂ ಎರಡೂ ಪ್ರಕಾರಗಳನ್ನು ಆರಿಸಿಕೊಂಡು ಎರಡರಲ್ಲಿಯೂ ಗೆದ್ದರು. ದೇವನೂರ ಮಹಾದೇವ ಅವರು ಅವೆರಡರ

ನಡುವಿನ ಗಡಿಗೆರೆಗಳನ್ನು ಉಳಿಸುವ ಅಳಿಸುವ ಕೆಲಸವನ್ನು ಒಟ್ಟೊಟ್ಟಿಗೆ ಮಾಡಿದರು. ಆದರೆ, ಈಗ ಬರೆಯುತ್ತಿರುವ ಐವತ್ತರಿಂದ ಇಪ್ಪತ್ತರವರೆಗಿನ ತರುಣಿ – ತರುಣರು ಕಾದಂಬರಿಯನ್ನು ಬರೆಯಬಯಸಿದ್ದು ಕಡಿಮೆ. ಬರೆದಾಗಲೂ ಗೆದ್ದಿದ್ದು ಕಡಿಮೆ. ಹೀಗೆ ಆಗುವುದರ ಕಾರಣಗಳು ಮಾಧ್ಯಮಗಳು ಹೇರುತ್ತಿರುವ ಒತ್ತಡಗಳಲ್ಲೋ ಅಥವಾ ತಂತ್ರಜ್ಞಾನದ ಫಲವಾದ 'ಕಡಿಮೆ ಗಮನ'ದ ಸನ್ನಿವೇಶದಲ್ಲೋ ಹೇಳುವುದು ಕಷ್ಟ. ಪ್ರಾಯಶಃ ಇವೆಲ್ಲದರ ಜೊತೆಗೆ ಇನ್ನೂ ಕೆಲವು ಕಾರಣಗಳಿರಬಹುದು.

ಹದಿನೆಂಟನೇ ಶತಮಾನದಲ್ಲಿ ಯುರೋಪಿನಲ್ಲಿ ಆರಂಭಗೊಂಡ ಕಾದಂಬರಿ ಸ್ವಲ್ಪ ಕಾಲದಲ್ಲಿ ತನ್ನ ಮಹತ್ವವನ್ನು ದೃಢಪಡಿಸಿಕೊಂಡಿತು. ಜೇನ್ ಆಸ್ಟಿನ್, ವಾಲ್ಪರ್, ಥ್ಯಾಕರ್, ಜಾರ್ಜ್ ಡಿಕನ್ಸ್ ಮೊದಲಾದವರ ಕಾದಂಬರಿಗಳು ಕಾದಂಬರಿ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ರೂಪುಗೊಳಿಸಿದವು. ಟಾಲ್ ಸ್ಟಾಯ್ ಕಾದಂಬರಿಗಳು ಆಧುನಿಕ ಮಹಾಕಾವ್ಯಗಳು ಎಂದೇ ಹೆಸರು ಮಾಡಿ ತಮ್ಮ ಸಾರ್ವಭೌಮತೆಯನ್ನು ಸ್ಥಾಪಿಸಿದವು. ಇಪ್ಪತ್ತೊಂದನೆ ಶತಮಾನದಲ್ಲಿಯಂತೂ ಇಂದು ಜಾಗತಿಕ ಮಟ್ಟದಲ್ಲಿ ಕಾದಂಬರಿ–ಕಾವ್ಯ ಪ್ರಕಾರವೇ ಪ್ರದಾನವಾಗಿ ನಿಂತಿದೆ.

ಕಳೆದ ದಶಕದ ಕಾದಂಬರಿಗಳಲ್ಲಿ ಕಂಡುಬರುವ ಮುಖ್ಯ ಲಕ್ಷಣಗಳನ್ನು ಕನ್ನಡ ವಿಮರ್ಶೆ ಹೀಗೆ ಗುರುತಿಸಿದೆ. ವಿಭಜಿತವಾದ ಸಮಾಜ ಮತ್ತು ಸ್ವಕೇಂದ್ರಿತವಾದ ದೃಷ್ಟಿಕೋನ ಇಂದು ಜನಸಮುದಾಯಗಳಲ್ಲಿ ಕಂಡುಬರುತ್ತಿದೆ. ಮೊದಲಿನಿಂದಲೂ ನಮ್ಮದು ವರ್ಣ, ವರ್ಗ, ಲಿಂಗ ಮತ್ತು ಜಾತಿಗಳಲ್ಲಿ ಹರಿದುಹಂಚಿರುವ ಸಮಾಜ. ಅಲ್ಲದೆ ಅವುಗಳ ನಡುವೆ ಮೇಲುಕೀಳುಗಳ ಸಂಬಂಧವಿತ್ತು, ಇದೆ. ಇದರ ಫಲವಾಗಿ ಪರಸ್ಪರ ಅನುಮಾನ, ತಿರಸ್ಕಾರ, ಭಯ, ಈರ್ಷೆ ಮುಂತಾದ ಭಾವಸಂಬಂಧಗಳು ಸಹಜವಾಗಿಯೇ ಬೆಳೆದಿರುತ್ತವೆ. ಮೇಲುನೋಟದ ಸಾಮೀಪ್ಯದ ಸಂಗಡವು ಅಂತರ ಇರುತ್ತದೆ. ಕಳೆದ ಕೆಲವು ದಶಕಗಳಲ್ಲಿ ಮೂಡಿದ ಹೊಸ ಎಚ್ಚರಗಳು ಸಮುದಾಯಗಳಲ್ಲಿ ಮತ್ತು ಅವುಗಳಲ್ಲಿ ಮೂಡಿಬಂದ ಕಲಾವಿದರಲ್ಲಿ ಆತ್ಮನಿವೇದನೆ ಮತ್ತು ಆತ್ಮಸಮರ್ಥನೆಗಳ ಗುಣವನ್ನು ಮೂಡಿಸಿವೆ. 'ಮೇಲು' ಎನ್ನಲಾದ ಜಾತಿಗಳು ಈ ಲಕ್ಷಣದಿಂದ ಬಿಡುಗಡೆ ಪಡೆದಿಲ್ಲ. ಮಹಿಳೆಯರ ಅತ್ಯುತ್ತಮವಾದ ಬರವಣಿಗೆಯೂ ಸೇರಿದಂತೆ, ಇದು ಇಂದಿನ ಅಪೇಕ್ಷೆ ಮತ್ತು ನಿರೀಕ್ಷೆ. ಆದರೆ, ಕಾದಂಬರಿಯು ನಿಜವಾದ ಅರ್ಥದಲ್ಲಿ ಹಲವು ಸಮುದಾಯಗಳನ್ನು ಒಳಗೊಳ್ಳುವ, ಎಲ್ಲವನ್ನೂ ಪ್ರೀತಿಯಿಂದ, ತಿಳಿವಳಿಕೆಯಿಂದ ನೋಡುವ ಪ್ರಕಾರ. ಅಂತೆಯೇ ಅದರಲ್ಲಿ ತನ್ನದೇ ಸಮುದಾಯದ ಆತ್ಮವಿಮರ್ಶೆಯ ನೆಲೆಗಳೂ ಇರುತ್ತವೆ. ಈ ಮಾತಿಗೆ ಕುವೆಂಪು ಅವರ ಕಾದಂಬರಿಗಳಿಗಿಂತ ಬೇರೆ ನಿದರ್ಶನ ಬೇಕಿಲ್ಲ. ಆದರೆ ಇಂದಿನ ಬರವಣಿಗೆಯಲ್ಲಿ 'ನಾವು' ಮತ್ತು 'ಅನ್ಯರು' ಎಂಬ ವಿಂಗಡಣೆ ಇರುತ್ತದೆ. ಇಂತಹ ಆತ್ಮಮರುಕ ಅಥವಾ ಅಹಂಕಾರಗಳು ಕಾದಂಬರಿಯ ಬರವಣಿಗೆಗೆ ಸೂಕ್ತವಲ್ಲ. ಅಂತಹ ಕಾದಂಬರಿಗಳು ಪರಂಪರೆಯಲ್ಲಿ ಶಾಶ್ವತವಾಗಿ ಗುರುತಿಸಿಕೊಳ್ಳುವಲ್ಲಿ ವಿಫಲವಾಗುತ್ತವೆ.

ಯಾವತ್ತಿಗೂ ನಮ್ಮ ಸಮುದಾಯಗಳ ಚೌಕಟ್ಟನ್ನು ಮೀರಿ ಒಟ್ಟು ಸಮಾಜದ ತಲ್ಲಣಗಳನ್ನು ಒಳಗೊಳ್ಳುವ ಬರವಣಿಗೆಯು ಅಪರೂಪ. ಕಾರಂತರೂ ಸೇರಿದಂತೆ ಹಲವು ಲೇಖಕರ ಅನೇಕ ಕಾದಂಬರಿಗಳು ಇಂದು ರೂಪಿತವಾಗುತ್ತಿರುವ ಓದುಗರಿಗೆ ಇಷ್ಟವಾಗುತ್ತಿಲ್ಲ. 'ಚೋಮನ ದುಡಿ', 'ಕುಡಿಯರ ಕೂಸು', 'ಪ್ರಕೃತಿ'ಯಂತಹ (ಶ್ರೀರಂಗ) ಕಾದಂಬರಿಗಳು ಇಂದು ಓದಿಸಿಕೊಳ್ಳದೆ ಹಿನ್ನೆಲೆಗೆ ಸರಿದಿವೆ. ಆದ್ದರಿಂದಲೇ ಇಂದು ಬರೆಯಲಾಗುತ್ತಿರುವ ಕಾದಂಬರಿಗಳೂ ಸ್ವಕೇಂದ್ರಿತವಾಗಿವೆ. 'ಬರೆದವರು ಯಾರು' ಎನ್ನುವುದು ಓದಬೇಕೋ, ಬೇಡವೋ ಎನ್ನುವುದನ್ನು ನಿರ್ಧರಿಸುತ್ತಿದೆ. ಆದ್ದರಿಂದಲೇ ಒಡೆದ ಸಮಾಜದ ಒಡಲಿನಿಂದ ಒಡೆಯದ ಪ್ರಜ್ಞೆಯನ್ನು ಹೊಂದಿರುವ ಕಾದಂಬರಿಗಳನ್ನು ನಿರೀಕ್ಷಿಸುವುದು ಸಾಧುವಲ್ಲ. ಕನ್ನಡದಲ್ಲಿ ಅಂತಹ ಕಾದಂಬರಿಗಳು ಕಾಣುವುದೂ ಇಲ್ಲ. ಈ ಪಲ್ಲಟಕ್ಕೆ ಮುಖ್ಯ ಕಾರಣ ಓದುಗ ಮತ್ತು ಲೇಖಕ ವರ್ಗ ಎರಡೂ ಕಾರಣವಾಗಿವೆ.

ಇನ್ನೊಂದು ಬಗೆಯ ಕಾದಂಬರಿಗಳು, ವ್ಯಕ್ತಿಯ ಸಂಕಟಗಳನ್ನು ನಡುವೆ ಇಟ್ಟುಕೊಂಡು ಅವುಗಳ ಸುತ್ತ ಆಲೋಚನೆಯ, ಕಲೆಯ ಗೂಡನ್ನು ಕಟ್ಟುತ್ತವೆ. ಇವುಗಳು ಏನಿದ್ದರೂ ಸಮಾಜವನ್ನು ವ್ಯಕ್ತಿಯ ಅಂತರಂಗದಲ್ಲಿ ಮೂಡಿದ ಪ್ರತಿಬಂಬವಾಗಿ ಮಾತ್ರ ನೋಡಬಲ್ಲವು. ಆದರೆ, ಇವುಗಳಲ್ಲಿ ಕೆಲವಾದರೂ ಎಲ್ಲ ಕಾಲಕ್ಕೂ ಸಲ್ಲುವ ಗುಣವನ್ನು ಪಡೆದಿರುತ್ತವೆ. ಇಂತಹ ಬರವಣಿಗೆಯನ್ನು ನವ್ಯದ ಪಳೆಯುಳಿಕೆಗಳೆಂದು ಕರೆಯಲಾಗುತ್ತಿದೆ. ಆದರೆ ಸಧ್ಯದ ಗಂಭೀರ ಕಾದಂಬರಿಗಳೆಂದು ನಾವು ಇವುಗಳನ್ನೆ ಗ್ರಹಿಸ ಬೇಕಾಗಿದೆ. ಇವತ್ತಿನ ಸಾಮಾಜಿಕ ವಿದ್ಯಮಾನಗಳು ಕಾದಂಬರಿಯಂತಹ ದೀರ್ಘ ಓದಿಗೆ ಪೂರಕವಾಗಿಲ್ಲದಿರುವುದರಿಂದ ಈ ಬದಲಾವಣೆಯನ್ನು ಸಕಾರಾತ್ಮಕವಾಗಿ ಗ್ರಹಿಸುವ ಅಗತ್ಯವಿದೆ.

ಇಂದಿನ ಹಲವು ಕಾದಂಬರಿಗಳು ಪ್ರಾದೇಶಿಕತೆಯ ಪ್ರಯೋಜನಗಳನ್ನು ಮತ್ತು ಅದರಿಂದಲೇ ಹುಟ್ಟಿರುವ ಬಿಕ್ಕಟ್ಟುಗಳನ್ನು ಭಾಷೆಯಲ್ಲಿ ಮತ್ತು ವಿವರಗಳಲ್ಲಿ ಸಮರ್ಥವಾಗಿ ಬಳಸುತ್ತಿವೆ. ಇದರಿಂದಾಗಿ ಈ ಕಾಲದ ಕಾದಂಬರಿಕಾರರು ಎದುರಿಸಿರುವ ಮತ್ತೊಂದು ಮುಖ್ಯ ಸವಾಲು ಎಂದರೆ, ಸಮಗ್ರತೆಯನ್ನು ಒಳಗೊಳ್ಳಲಾಗದಿರುವುದು. 'ಬದುಕು', 'ಅರಮನೆ'ಗಳಂತಹ ಹತ್ತು ಹಲವು ಕಾದಂಬರಿಗಳು ಈ ಅನುಭವವನ್ನು ಪಡೆದಿವೆ. ಈ ಸಂಗತಿಯು ಈ ಕಾಲದ ಬರಹಗಾರರಲ್ಲಿ ಆತಂಕ ಮತ್ತು ತಲ್ಲಣಗಳನ್ನು ಹುಟ್ಟಿಸಿದೆ. ಇದು ಕೇವಲ ಓದುಗರಿಗೆ ಸಂವಹನವಾಗುವ ಅಥವಾ ಆಗದಿರುವ ಪ್ರಶ್ನೆಯಲ್ಲ. ಬದಲಾಗಿ ಪ್ರಾದೇಶಿಕತೆಯ ಚೌಕಟ್ಟಿನಲ್ಲಿ ಎಷ್ಟನ್ನು ಹೇಳಬಹುದು, ಹೇಗೆ ಹೇಳಬಹುದು ಎನ್ನುವ ಪ್ರಶ್ನೆ. ಇದು ಲೇಖಕನ ಪ್ರತಿಭೆಯನ್ನು ಮಾತ್ರವಲ್ಲ, ಅವನ ಉದ್ದೇಶಗಳನ್ನೂ ಅವಲಂಬಿಸಿರುತ್ತದೆ. ತನ್ನಷ್ಟಕ್ಕೆ ತಾನು ದೋಷವೂ ಅಲ್ಲದ, ಗುಣವೂ ಅಲ್ಲದ ಪ್ರಾದೇಶಿಕತೆಯು ಲೇಖಕನ ಹಿನ್ನೆಲೆಯನ್ನು ಅವಲಂಬಿಸಿದ ವಿಶಿಷ್ಟ ಲಕ್ಷಣವಷ್ಟೆ. ಕಾದಂಬರಿಯ ಮಹತ್ವ ಮತ್ತು ಕಲಾತ್ಮಕತೆಗಳು ಅವುಗಳ ಆಚೆಗಿನ

ಸಂಗತಿಗಳಿಂದ ತೀರ್ಮಾನವಾಗುತ್ತವೆ ಎಂಬುದರ ಅರಿವು ಸಧ್ಯದ ಬಹುತೇಕ ಕಾದಂಬರಿಕಾರರಿಗೆ ಅರಿವಾಗಿಲ್ಲ ಎಂಬುದು ವಿಮರ್ಶಕರ ಆಕ್ಷೇಪ.

ಇವತ್ತಿನ ಕಾದಂಬರಿಗಳಲ್ಲಿ ನಿರೂಪಣೆಯ ಬಗೆಗಳು ವೈವಿಧ್ಯಮಯವಾಗಿವೆ. ಕನ್ನಡ ಕಾದಂಬರಿಯು ನವೋದಯ, ಪ್ರಗತಿಶೀಲ, ನವ್ಯ ಮುಂತಾದ ಚಳುವಳಿಗಳ ಚೌಕಟ್ಟಿಗೆ ಸಿಗುವುದಿಲ್ಲ. ವಾಸ್ತವವಾದೀ ನಿರೂಪಣೆ ಮತ್ತು ಸಾಂಕೇತಿಕತೆಗಳು ಅದರ ಮುಖ್ಯ ಬಗೆಗಳು. ನವ್ಯದ ನಂತರ ಬರೆಯತೊಡಗಿದ ಲೇಖಕರಿಗೆ ವಾಸ್ತವಮಾರ್ಗದಲ್ಲಿಯೇ ಹೇಳುವುದು ಹೇರಳವಾಗಿತ್ತು. ಆದರೆ, ಅವರು ಬರೆಯತೊಡಗಿದ ವಸ್ತು ಅವರಿಗೆ ಅತಿನಿಕಟವಾಗಿದ್ದು, ಅಲ್ಲಿನ ದುಃಖ ಮತ್ತು ಕೋಪಗಳು ಕಾದಂಬರಿಕಾರರದೂ ಆಗಿತ್ತು. ಕಥೆಗಳನ್ನು ಬರೆಯುವಾಗ, ಹೇಗೋ ನಿರ್ವಹಿಸಬಹುದಾದ ಈ ಬಿಕ್ಕಟ್ಟು ಕಾದಂಬರಿಗಳ ಸಂದರ್ಭದಲ್ಲಿ ಇನ್ನಷ್ಟು ಸಂಕೀರ್ಣವಾಗುತ್ತದೆ. ಸಾಮಾಜಿಕ ವಾಸ್ತವದ ಪ್ರಾಮಾಣಿಕವಾದ, ಸುದೀರ್ಘ ನಿರೂಪಣೆಯು ತನ್ನಷ್ಟಕ್ಕೆ ತಾನೇ ಕಾದಂಬರಿಯಾಗುವುದೇ? ನಮ್ಮ ಜೀವನದ ಹಾಡುಪಾಡುಗಳನ್ನು ನಮ್ಮವರೊಂದಿಗೆ–ಅನ್ಯರೊಂದಿಗೆ ಸರಳವಾಗಿ, ನೇರವಾಗಿ ಹಂಚಿಕೊಳ್ಳುವುದಷ್ಟೇ ಬರವಣಿಗೆಯ ಗುರಿಯೆಂಬ ನಿಲುವು ಈಗೀಗ ವ್ಯಕ್ತವಾಗುತ್ತಿದೆ. ನಮ್ಮ ಮನಸ್ಸುಗಳು ಮತ್ತು ಓದುವಿಕೆ ಕೂಡ ನೇರವಾಗಿ ಕತೆ ಹೇಳದ ಸುದೀರ್ಘ ಕಥಾನಕಗಳನ್ನು ಭಿನ್ನವಾಗಿ ನೋಡುವ ರೂಢಿಯನ್ನು ಬೆಳಸಿಕೊಳ್ಳುತ್ತಿದೆ.

ಇಂದಿನ ಕಾದಂಬರಿಗಳು ಹೆಚ್ಚಾಗಿ ಸಮುದಾಯಗಳ ಆತ್ಮಕಥನವನ್ನು ಪ್ರಕಟಿಸುತ್ತಿವೆ. ಈಚೆಗೆ ಮುನ್ನೆಲೆಗೆ ಬಂದಿರುವ ಕೆಲವು ಕಾದಂಬರಿಗಳು ನಿರ್ದಿಷ್ಟ ಸಮುದಾಯಗಳ ಇತಿಹಾಸವನ್ನು ಕಟ್ಟಿಕೊಡುವ ಉಮೇದನ್ನು ತೋರಿಸಿವೆ. ('ಸ್ವಪ್ನಸಾರಸ್ವತ' 'ಮಿತ್ತಬೈಲು ಯಮುನಕ್ಕ', 'ಉಲ್ಲಂಘನೆ', 'ತಲಗಳಿ') ಇವು ಸಾಕಷ್ಟು ಸಂಶೋಧನೆಯ ಫಲವಾಗಿ ಮೂಡಿಬಂದಿರುತ್ತವೆ. ಮಾನವಿಕ–ಸಾಮಾಜಿಕ ಅಧ್ಯಯನಗಳಿಗಿಂತ ಭಿನ್ನವಾದ ಕಥಾನಕಗಳನ್ನು ರೂಪಿಸಿರುತ್ತವೆ. ಆದರೆ, ಅವು 'ಸಮುದಾಯಗಳ ಆತ್ಮಕಥನ'ದ ಆಚೆಗೆ ಹೊಂದಿರುವ ಉದ್ದೇಶಗಳು ಮತ್ತು ಪಡೆದಿರುವ ಸಿದ್ಧಿಗಳು ಯಾವ ಬಗೆಯವು ಎನ್ನುವುದು ಕೂಡ ಮುಖ್ಯ. ಇದು ಬರವಣಿಗೆಯ ಅಧಿಕೃತತೆಗಿಂತ ವಸ್ತುವಿನ ಕಾರಣವಾಗಿ ಬರೆಯುವವನ ಒಟ್ಟು ತಾತ್ವಿಕತೆ ಮತ್ತು ಜೀವನದರ್ಶನದ ಪ್ರಶ್ನೆ. ಇದರಿಂದಾಗಿ ಕಿರಿಯ ಬರಹಗಾರರ ಕಥೆ, ಕಥನ ಮತ್ತು ಕಾದಂಬರಿಗಳ ನಡುವಿನ ಅಂತರವೇ ಮಸುಳಿಸುತ್ತದೆ. ಆದರೆ ಇದನ್ನು ಕಾದಂಬರಿಯ ದೋಷವೆಂದು ಪರಿಗಣಿಸುವುದಕ್ಕಿಂತ ಸಾಹಿತ್ಯ ರೂಪಗಳು ಹೊಂದುತ್ತಿರುವ ಸಂಕರವೆಂದು ತಿಳಿಯಲಾಗುತ್ತಿದೆ.

ಕಾದಂಬರಿಯ ಭಾಷೆಯಲ್ಲಿ ಹಲವು ವಿಶಿಷ್ಟತೆಗಳು ಈ ಸಂದರ್ಭದಲ್ಲಿ ದಾಖಲಾಗುತ್ತಿದ್ದು ವೈವಿಧ್ಯಮಯವಾದ ಗದ್ಯವು ರಚನೆಯಾಗುತ್ತಿದೆ. "ನಾವು ಗದ್ಯ ಬರವಣಿಗೆಯ ಸಂಧಿಕಾಲದಲ್ಲಿ ನಿಂತಿದ್ದೇವೆ. ವಿವರಗಳಿಗೆ ಉಪಯೋಗಿಸುವ ಭಾಷೆಯು

‘ಗದ್ಯದ ರೂಪಕ’ವಾಗಬೇಕಾದರೆ ವಿಷಯ ವಸ್ತು ಸೂಚಿಸುವ ಸನ್ನಿವೇಶದಿಂದ ಆಯ್ದ ಪದಗಳಿಂದಲೇ ಅಲಂಕರಿಸಲ್ಪಡಬೇಕಾಗುತ್ತದೆ. ಇದೊಂದು ವಿಷಯದಲ್ಲಿ ಮಾತ್ರ ಕಾದಂಬರಿಯ ಭಾಷೆಯು ಸೃಜನಶೀಲವಾಗಬೇಕಾದರೆ ಸನ್ನಿವೇಶದ ಸಂಪೂರ್ಣ ಅರಿವಿನಿಂದ ಬಂದ ‘ರಕ್ತಗತವಾದ’ ಒಂದು ಭಾಷೆ ಉದ್ಭವವಾಗಬೇಕಾಗುತ್ತದೆ. ಇಲ್ಲದಿದ್ದರೆ ಮಿದುಳಿನಿಂದ ಸೃಜಿಸುವ ಭಾಷೆಯು ಎಷ್ಟೇ ಶಕ್ತಿಯುತವಾಗಿದ್ದರೂ ಕೂಡ ಅದಕ್ಕೆ ಈ ಅರ್ಥದಲ್ಲಿ ಸೃಜನಶೀಲತೆಯು ದಕ್ಕುವುದಿಲ್ಲ.... ಜೀವನಕ್ಕೆ ಚಿಂತನೆಯನ್ನು ತೊಡಿಸಬೇಕೋ ಅಥವಾ ಜೀವನದಿಂದ ಉದ್ಭವವಾದ ಚಿಂತನೆಯೇ ಮೂರ್ತರೂಪವನ್ನು ಕಾದಂಬರಿಯಲ್ಲಿ ದಕ್ಕಿಸಿಕೊಳ್ಳಬೇಕೋ ಎಂಬುದೇ ಮೂಲ ಸಮಸ್ಯೆಯಾಗಿದೆ. ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕಂಡುಕೊಳ್ಳದೆ ನಮ್ಮ ಗದ್ಯ ಬರವಣಿಗೆಯು ಹೆಚ್ಚು ಸ್ವೀಕಾರಾರ್ಹವಾಗಲಾರದು”[೨೧] ಎಂಬ ಎಚ್ಚರಿಕೆಯೂ ಇದರ ಹಿಂದೆ ಕೆಲಸ ಮಾಡುತ್ತಿದೆ.

ಕಾದಂಬರಿಗಳನ್ನು ಆಧುನಿಕ ಮಹಾಕಾವ್ಯಗಳೆಂದು ಕರೆಯಲಾಗುತ್ತದೆ. ಏಕೆಂದರೆ ಪ್ರತಿ ಕಾದಂಬರಿಯೊಳಗೂ ಒಂದು ಅವಿಚ್ಛಿನ್ನವಾದ ಜೀವನದರ್ಶನವಿರುತ್ತದೆ. ಯಾವುದೇ ಶ್ರೇಷ್ಠ ಕಾದಂಬರಿಯ ಒಳಗೆ ‘ಕಾದಂಬರಿಯೆಂದರೇನು ಎನ್ನುವುದರ ಹುಡುಕಾಟವೂ ಇರುತ್ತದೆ. ಇದು ಅಕಡೆಮಿಕ್ ಪಾಂಡಿತ್ಯದಿಂದ ಬರುವುದಲ್ಲ. ಅಂತೆಯೇ ಪ್ರಪಂಚದ ಹಲವು ಕಾದಂಬರಿಗಳ ಓದು ಕೊಂಚ ನೆರವು ನೀಡಬಹುದಾದರೂ ಅಷ್ಟೇ ಸಾಲದು. ಎಲ್ಲಕ್ಕಿಂತ ಮುಖ್ಯವಾಗಿ ಇದು ಅನುಭವ, ಬುದ್ಧಿ, ಭಾವನೆ ಮತ್ತು ಭಾಷಿಕ ಪರಿಕರಗಳ ಸೂಕ್ತವಾದ ಸಂಯೋಜನೆಯ ಪ್ರಶ್ನೆ. ನಮ್ಮ ಯುವಲೇಖಕರಿಗೆ ಇಂತಹ ಶಕ್ತಿಯು ಇಲ್ಲವೆಂದಲ್ಲ. ನಿಜವಾಗಿ ಬೇಕಿರುವುದು ಸಾಮಾಜಿಕವಾದ ಒತ್ತಡಗಳನ್ನು ಮೀರುತ್ತಲೇ ಅವುಗಳಿಗೆ ಧ್ವನಿಕೊಡುವ ಶಕ್ತಿ. ತಾತ್ವಿಕತೆಯು ಒಟ್ಟು ಜೀವನದ ಬಗ್ಗೆ ಮಹತ್ವದ ಪ್ರಶ್ನೆಗಳನ್ನು ಕೇಳಿಕೊಳ್ಳುವ ಮತ್ತು ಉತ್ತರಗಳಿಗಾಗಿ ಕೃತಿಯ ಬೆಳವಣಿಗೆಯಲ್ಲಿಯೇ ಹುಡುಕುವ ಕೆಲಸ. ಹೊಸ ತಿಳಿವಳಿಕೆಯು ಬರವಣಿಗೆಯ ಹೊಸ ಬಗೆಗಳನ್ನು ಬಯಸುತ್ತದೆ. ಹಾಗೆ ಮೂಡುವ ಹೊಸ ಬಗೆಗಳು ಓದುಗರಿಗೆ ಹಿಡಿಸದೆ ಇರಬಹುದು. ‘ಕಾನೂರು ಹೆಗ್ಗಡಿತಿ’ ಮತ್ತು ‘ಮಲೆಗಳಲ್ಲಿ ಮದುಮಗಳು’ ಕಾದಂಬರಿಗಳ ನಡುವೆ ಇರುವ ವ್ಯತ್ಯಾಸಗಳ ಅಧ್ಯಯನವು ಕುವೆಂಪು ಅವರ ಲೋಕದರ್ಶನವು ಬೆಳೆದ ಬಗೆಗೆ ಕನ್ನಡಿಯಾಗಿದೆ. ಅವೆರಡರ ನಡುವೆ ‘ಶ್ರೀ ರಾಮಾಯಣ ದರ್ಶನಂ’ ಇರುವುದು ಆಕಸ್ಮಿಕವಲ್ಲ.

ವಾಸ್ತವತೆ ಇವತ್ತಿನ ಕಾದಂಬರಿಗಳ ಮತ್ತೊಂದು ಮುಖ್ಯ ಲಕ್ಷಣ. ಕಾದಂಬರಿಯು ಹೇಳುವಿಕೆಯ ಹಾಗೆಯೇ ಕಟ್ಟುವಿಕೆಯನ್ನೂ ಬಯಸುತ್ತದೆ. ನೇರವಾದ, ಉತ್ತಮಪುರುಷ ನಿರೂಪಣೆ ಇರುವ, ಕಾಲಾನುಕ್ರಮವಾದ ಕಥನಕ್ರಮವು ಇಂತಹ ಕಟ್ಟುವಿಕೆಗೆ ಸಹಜವಾಗಿಯೇ ಬರುವ ವಿವರಗಳ ಜೊತೆಗೆ, ಅಗತ್ಯವಾದ ಸೂಕ್ಷ್ಮತೆಯನ್ನು ಕೊಡುವಂತಹ ವಿವರಗಳನ್ನು ಕಲ್ಪಿಸಿಕೊಂಡು, ಹುಡುಕಿಕೊಳ್ಳುತ್ತವೆ. ಅಂತಹ ಕಲ್ಪಕತೆಯು ಕಾದಂಬರಿಗೆ ಬೇಕೇಬೇಕು. ಅಲ್ಲಿ ಅವಾಸ್ತವವೂ ವಾಸ್ತವವನ್ನು ಕಾಣಿಸುವ

ಬೆಳಕಿಂಡಿ. ಕಳೆದ ಎರಡು ಮೂರು ದಶಕಗಳು ಜೀವನದಲ್ಲಿ ತಂದಿರುವ ಬದಲಾವಣೆಯನ್ನು ಅದರ ಎಲ್ಲ ಆಯಾಮಗಳನ್ನು ನಿರ್ಮಮವಾಗಿ ಗ್ರಹಿಸಿ, ಅರ್ಥೈಸಿಕೊಂಡು ರಚಿತವಾಗುವ ಕಾದಂಬರಿ ಮಾತ್ರ ಶ್ರೇಷ್ಠ ಕಾದಂಬರಿಯಾಗುತ್ತದೆ. ಆದರೆ ಕಳೆದ ದಶಕದ ಕನ್ನಡ ಕಾದಂಬರಿಗಳ ರಚನೆಯಲ್ಲಿ ಹೊಸ ತಲೆಮಾರು ಅಷ್ಟು ಸಕ್ರಿಯವಾಗಿ ತೊಡಗಿಸಿಕೊಂಡಿಲ್ಲ. ಇತ್ತೀಚೆಗೆ ಪ್ರಕಟಗೊಂಡ ಕನ್ನಡ ಮುಖ್ಯ ಕಾದಂಬರಿಗಳಾದ 'ಮಾಯಾಲೋಕ', 'ಹಳ್ಳ ಬಂತು ಹಳ್ಳ', 'ಪ್ರೀತಿ, ಮೃತ್ಯು, ಭೀತಿ' ಮುಂತಾದ ಕೃತಿಗಳನ್ನು ಬರೆದವರು ಎಪ್ಪತ್ತರ ವಯಸ್ಸನ್ನು ಮೀರಿದ್ದಾರೆ. ಅನಂತರದ ಪೀಳಿಗೆಯ 'ಗಾಂಧಿ ಬಂದ', 'ಕಾಲಜಿಂಕೆ', 'ಒಂದು ಬದಿ ಕಡಲು', 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಮುಂತಾದವನ್ನು ಬರೆದವರೂ ತರುಣರಲ್ಲ. ಕನ್ನಡದ ಬಹುಪಾಲು ಶ್ರೇಷ್ಠ ಕಾದಂಬರಿಗಳು ಲೇಖಕರಿಗೆ ಮೂವತ್ತೈದು ವರ್ಷಗಳಾಗುವ ಮೊದಲೇ ಬಂದಿವೆ. ಆದರೆ ಈ ಮಾತನ್ನು ಕಳೆದ ದಶಕದ ಕಾದಂಬರಿಕಾರರಿಗೆ ಹೇಳುವಂತಿಲ್ಲ.

ಈ ಹಿನ್ನೆಲೆಯಲ್ಲಿ ತೇಜಸ್ವಿಯವರ ಕಾದಂಬರಿಗಳ ಮೇಲೆ ಬಂದಿರುವ ಹೊಸ ವಿಮರ್ಶೆಯನ್ನು ಗಮನಿಸುವುದಾದರೆ, ಅಲ್ಲದೆ ಜಾಗತೀಕರಣವನ್ನು ಸಮರ್ಥಿಸುವ ತೇಜಸ್ವಿ ಪರಿಸರದ ಕಥೆಗಳನ್ನು ಗಮನಿಸಿದರೆ, ಈ ಎರಡೂ ವಿಚಾರ ಧಾರೆಗಳು ಜೊತೆಯಾಗಿ ಸಾಗಲು ಸಾಧ್ಯವೇ ಇಲ್ಲ ಎಂಬುದು ಮನದಟ್ಟಾಗುತ್ತದೆ. ದೇಸಿ ಜ್ಞಾನವೆಂಬುದು ಜಾಗತಿಕ ಮಾರುಕಟ್ಟೆಯಲ್ಲಿ ಅತ್ಯಂತ ವೇಗವಾಗಿ ಬಿಕರಿಯಾಗುತ್ತಿರುವ ಸರಕು. ಜ್ಞಾನವೆಂಬುದು ಬಹುರಾಷ್ಟ್ರೀಯ ಕಂಪೆನಿಗಳ ಲಾಭದ ಸರಕು ಆದ ಮೇಲೆ ತೃತೀಯ ಜಗತ್ತುಗಳ ಮುಗ್ಧತೆ ಸಹಜವಾಗಿ ಉಳಿಯಲು ಸಾಧ್ಯವೇ ಎಂಬುದು ಶೋಧನೀಯ ವಿಚಾರವಾಗುತ್ತದೆ. ಅಪ್ಪಟ ಲೋಹಿಯಾವಾದಿಯಾಗಿದ್ದ ತೇಜಸ್ವಿಯವರು ತಮ್ಮ ಕಾದಂಬರಿಗಳಲ್ಲಿ ಹಾಗೆ ಭಿನ್ನವಾಗಿ ಕಾಣಿಸಿಕೊಳ್ಳುತ್ತಾರೆ ಎಂಬುದನ್ನು ಕನ್ನಡ ವಿಮರ್ಶೆ ಹೀಗೆ ಗುರುತಿಸಿದೆ. "ವಿಜ್ಞಾನ ಮತ್ತು ಯಂತ್ರಜ್ಞಾನವನ್ನು ಸಂದೇಹಿಸದೆ ಬರೆಯುವಾಗ ಅವರೊಬ್ಬ ಗಾಂಧೀವಾದಿಯಲ್ಲ. ಜಾತಿಸಮಸ್ಯೆಯನ್ನು ಅಪ್ರಮುಖವೆಂದು ಬರೆಯುವಾಗ ಅವರೊಬ್ಬ ಲೋಹಿಯಾವಾದಿಯಾಗಿರುವುದಿಲ್ಲ. ಜಾಗತೀಕರಣವನ್ನು ಸಮರ್ಥಿಸುವಾಗ ಮಾರ್ಕ್ಸ್‌ವಾದಿ ಕೂಡ ಆಗಿರುವುದಿಲ್ಲ. ಕರ್ನಾಟಕದ ಸಾಮಾಜಿಕ ರಾಜಕೀಯ ಬದುಕಿನಲ್ಲಿ ಗಂಭೀರವಾದ ಪಾತ್ರವನ್ನು ನಿರ್ವಹಿಸಿದ ತೇಜಸ್ವಿ ತಮ್ಮ ಸೃಜನಶೀಲ ಬರಹಗಳಲ್ಲಿ ಅತಿಗಳಿಗೆ ಹೋಗದೆ ಸತ್ಯವನ್ನು ಹುಡುಕಲು ಯತ್ನಿಸುತ್ತಾರೆ. ಇದು ಅವರ ಶಕ್ತಿ ಮತ್ತು ಮಿತಿಯೂ ಹೌದು."[೨೨] ಹಾಗೆಯೇ ತೇಜಸ್ವಿಯವರು ಮಹಿಳಾ ಪಾತ್ರಗಳಿಗೆ ಹೇಳಿಕೊಳ್ಳಬಹುದಾದ ಪ್ರಾಧಾನ್ಯತೆ ನೀಡಿಲ್ಲ.

ಕರ್ವಾಲೊ ಕಾದಂಬರಿಯಲ್ಲಿನ ಹಾವುಗೊಲ್ಲರ ಎಂಗ್ಟನ ಹೆಂಡತಿ, ಇದ್ದಿಲು ಸುಡುವವನ ಹೆಂಗಸು, ಮಾಯಾಲೋಕದ ಬಾಯಮ್ಮ, ಚಿದಂಬರ ರಹಸ್ಯದ ಗೋಸಾಯಿ ಹೆಂಗಸರು ಇವರಿಗೆ ಹೆಸರು ಕೂಡ ಇಲ್ಲ. ವ್ಯಕ್ತಿತ್ವವೂ ಇಲ್ಲ. ಪಶುಸದೃಶ ಬದುಕು

ಬದುಕುತ್ತಿರುವವರು. ಒಂದರ್ಥದಲ್ಲಿ ಈ ಪಾತ್ರಗಳಿಗೆ ಹೋಲಿಸಿದರೆ ಅವರ ಮೆಚ್ಚಿನ ನಾಯಿ ಕಿವಿಯೇ ಹೆಚ್ಚು ಸುಸಂಸ್ಕೃತ. ತುಸು ಮೇಲಿನ ಜಾತಿಯ ಮಂದಣ್ಣನ ಹೆಂಡತಿ ಮದುಮಗಳು ರಾಮಿಯಂತೂ ಇವರ ನಿರೂಪಣೆಯಲ್ಲಿ 'ಹರಾಮಿ' ಮಾತ್ರ. ಮಾಯಾಲೋಕದ ಲಂಬಾಣಿ ಹೆಂಗಸು ಯಾಡಿ "ತನ್ನ ಲೈಂಗಿಕ ಸಾಹಸಗಳಿಗಾಗಿ ಇಡೀ ಹೋಬಳಿಗೆ ಕುಖ್ಯಾತಳಾಗಿದ್ದಳು ಹದಿನಾರು ದಿನದ ಕೆಲಸಕ್ಕೆಂದು ತರೀಕೆರೆ ತಾಂಡಾದಿಂದ ಬಂದವಳು ಕೆಲಸಕ್ಕೆ ಹೋದ ಎಲ್ಲ ತೋಟಗಳಲ್ಲೂ ಪುಕಾರೆಬ್ಬಿಸಿ ದಿನಾ ಇವಳು ಯಾರು ಯಾರ ಜೊತೆಯೋ ಅಲ್ಲಿ ಬಿದ್ದುಕೊಂಡಿದ್ದಳು, ಇಲ್ಲಿ ಬಿದ್ದುಕೊಂಡಿದ್ದಳು ಎಂದು ಮಾತಾಡುತ್ತಿದ್ದರು."[೨೩] ಎಂದು ಬರೆಯುತ್ತಾರೆ. ಕಂಡ ಕಂಡ ಗಂಡಸಿನ ತೀಟೆ ತೀರಿಸುವ ಜೀವಂತ ತೊಗಲಿನ ಗೊಂಬೆಗಳಂತೆ ಈ ಪಾತ್ರಗಳು ವರ್ತಿಸುತ್ತವೆ. "ಸೂಕ್ಷ್ಮ ಸಂವೇದನೆಯ ದೊಡ್ಡ ಲೇಖಕರನ್ನು ಓದುವಾಗ ಹೀಗೆ ಕಂಪಾರ್ಟುಮೆಂಟುಗಳಲ್ಲಿಟ್ಟು ನೋಡಬಾರದು ಎಂದು ಎಷ್ಟೇ ಅಂದುಕೊಂಡರೂ ಕೂಡ ಅವರ ಹೆಣ್ಣು ಪಾತ್ರಗಳು ಬಂದು ಅವರ ನಾಯಿಗಿರುವ ಘನತೆ ತಮಗಿಲ್ಲವಲ್ಲ ಎಂದು ರಚ್ಚೆ ಹಿಡಿದು ನ್ಯಾಯ ಕೇಳುತ್ತವೆ."[೨೪] ಅಂದರೆ ತೇಜಸ್ವಿಯವರ ಸಾಹಿತ್ಯದಲ್ಲಿ ಮಹಿಳಾಪರವಾದ ಸಂವೇದನೆ ಅಷ್ಟಾಗಿ ಇಲ್ಲ ಎಂದೇ ಈ ಶತಮಾನದ ವಿಮರ್ಶೆ ಪ್ರತಿಪಾದಿಸಿದೆ.

ಕಾದಂಬರಿ ಪ್ರಕಾರದ ಸಾಧ್ಯತೆಗಳನ್ನು ಗುರುತಿಸುವಾಗ ತೇಜಸ್ವಿಯವರ ಈ ನಿಲುವನ್ನು ಗಮನಿಸಬಹುದು. ಸಮಾಜದ ಅವನತಿಗೆ ಕಾರಣಗಳನ್ನು ಹುಡುಕುವಾಗಲೆಲ್ಲ ತೇಜಸ್ವಿ ಎರಡು ಮುಖ್ಯ ಅಂಶಗಳನ್ನು ಪ್ರತಿಪಾದಿಸುತ್ತಾರೆ. ಸಮುದಾಯಗಳ ಪಾರಂಪರಿಕ ಜ್ಞಾನವನ್ನು ವ್ಯವಸ್ಥೆ ಜ್ಞಾನವೆಂದೇ ಪರಿಗಣಿಸದೆ ಅಲಕ್ಷಿಸಿದ್ದು ಒಂದಾದರೆ, ಸಮುದಾಯಗಳು ಆಧುನಿಕ ಸವಾಲುಗಳನ್ನು ಎದುರಿಸಲು ಸಜ್ಜುಗೊಳ್ಳದೆ ಸೋತು ಹೋದದ್ದು ಅಥವಾ ಸೋಲಿಸಿಕೊಂಡದ್ದು ಎರಡನೆಯ ಕಾರಣ. ಸಮಾಜದ ಚಲನಶೀಲತೆಯನ್ನು ನಿರಂತರ ಪ್ರತಿಪಾದಿಸುತ್ತಿದ್ದ, ಸಮರ್ಥಿಸುತ್ತಿದ್ದ ತೇಜಸ್ವಿ, ಲಂಕೇಶ್ ಮುಂತಾದವರು ಇದೇ ರಭಸದಲ್ಲಿ ಜಾಗತೀಕರಣದ ಹುನ್ನಾರಗಳನ್ನು ಅರಿಯದೆ ಅದನ್ನು ಸಮರ್ಥಿಸುವ ಹಂತಕ್ಕೂ ತಲುಪಿದ್ದು ನಾಡಿನ ದುರಂತವೆಂದೇ ಭಾವಿಸಬೇಕು. ಅದರಲ್ಲೂ ತೇಜಸ್ವಿ ಜಾಗತೀಕರಣವನ್ನು ಬಹಿರಂಗವಾಗಿಯೇ ಒಪ್ಪಿಕೊಂಡಿದ್ದರು. ಇದನ್ನು ಅವರ ಆರಂಭದ ಕಾದಂಬರಿಯಾದ ಕರ್ವಾಲೋ ಮತ್ತು ಕಡೆಯ ಕಾದಂಬರಿಯಾದ ಮಾಯಾಲೋಕ ಕಾದಂಬರಿಗಳಲ್ಲಿನ ಮಾತುಗಳ ಮೂಲಕ ತುಸುಮಟ್ಟಿಗೆ ಅರಿಯಬಹುದು. "ನಾನು ನನ್ನ ತೋಟವನ್ನು ಮಾರಿ ಬೇರೇನಾದರೂ ಮಾಡಬೇಕೆಂದು ನಿರ್ಧರಿಸಿದ್ದೆ. ಮೊದಲನೆಯದಾಗಿ ವ್ಯವಸಾಯದಿಂದ ಲಾಭ ಬರುವುದೆಂಬ ನಂಬಿಕೆ ನನ್ನೊಳಗೆ ನಶಿಸತೊಡಗಿತ್ತು. ಲಾಭ ಮಾಡುವುದಿರಲಿ ಬ್ಯಾಂಕಿನಲ್ಲಿ ಮಾಡಿಕೊಂಡ ಸಾಲದ ಬಡ್ಡಿ ಕಟ್ಟುತ್ತಾ ಹೆಚ್ಚುಕಡಿಮೆ ಅಧಿಕಾರಶಾಹಿಯ ಜೀತದಾಳಾಗಿ ನಾನೂ ನನ್ನಂಥ ಅನೇಕ ರೈತರು ಪರಿವರ್ತಿತರಾಗಿದ್ದರು. ಹಾಕಿದ ಲೆಕ್ಕಾಚಾರ ಒಂದೂ ಗುರಿ ತಲುಪುತ್ತಲೇ ಇರಲಿಲ್ಲ. ಅಕಸ್ಮಾತ್ ಕೊಂಚ ಕರಾರುವಕ್ಕಾಗಿ ಬೆಳೆ ಬಂದರೂ ಆ ವೇಳೆಗಾಗಲೆ ಹಣದುಬ್ಬರ, ಏರಿದ ಬೆಲೆಗಳು, ವಿಷದಂತೆ ಏರುತ್ತಿದ್ದ ಬ್ಯಾಂಕ್ ಬಡ್ಡಿ ದರ, ಅದನ್ನು

ಕಬಳಿಸಿ ಬಿಡುತ್ತಿದ್ದವು. ಹೀಗಾಗಿ ಸದಾ ಮುಂದೆ ಸಿಕ್ಕುವ ಲಾಭದ ಮರೀಚಿಕೆಯ ಹಿಂದೆ ಆರ್ಥಿಕ ಬಿಕ್ಕಟ್ಟಿನ ಮರಳುಗಾಡಿನಲ್ಲಿ ಸಾಗುತ್ತಿದ್ದೆ."[೨೫] ಎಂಬ ಹೇಳಿಕೆಗಳು ಆ ಕಾಲದಲ್ಲಿದ್ದ ರೈತ ಹೋರಾಟ ಸೇರಿದಂತೆ ಹಲವು ಚಳುವಳಿಗಳ ಮೇಲೆ ಬೆಳಕು ಚೆಲ್ಲುತ್ತವೆ.

ಕಾದಂಬರಿ ಸೃಜನಶೀಲ ಬರವಣಿಗೆಯಾದರೂ ಇದರ ಸಾಧ್ಯತೆ ಇತರ ಪ್ರಕಾರಗಳಿಗೆ ಹೋಲಿಸಿದರೆ ತುಂಬಾ ವಿಶಿಷ್ಟವೆನಿಸುತ್ತದೆ. ಒಂದು ಕೃತಿಯನ್ನು ಗ್ರಹಿಸಿದ ರೀತಿಯನ್ನು ವಿಮರ್ಶಕನಾದವನು ವಿಮರ್ಶೆಯನ್ನು ಬರೆಯುತ್ತಿರುವಾಗಲೇ ತನಗೆ ಖಚಿತಪಡಿಸಿಕೊಳ್ಳುತ್ತಾನೆ. ಈ ರೀತಿಯಾಗಿ ನಡೆಯುವ ಕ್ರಿಯೆಯೂ ಸೃಷ್ಟ್ಯಾತ್ಮಕ ಕ್ರಿಯೆಯೇ ಆಗಿರುತ್ತದೆ. ಈ ಗ್ರಹಿಸಿದ ರೀತಿಯನ್ನು ಬದಿಗಿಟ್ಟು ಬರೆದ ವಿಮರ್ಶೆ ಕೇವಲ ವ್ಯಕ್ತಿಗತ ಅಭಿಪ್ರಾಯಜನ್ಯ ವಿಮರ್ಶೆಯಾಗಿಬಿಡುತ್ತದೆ. "ಒಂದು ಸಾಹಿತ್ಯ ಪ್ರಕಾರ ಯಾವ ಹಂತದ ವರೆಗೆ ಬೆಳೆದು ನಿಂತಿರುತ್ತದೋ ಅಲ್ಲಿಯ ವರೆಗೆ ಒಬ್ಬ ಸಾಹಿತಿ, ಆ ಸಾಹಿತ್ಯ ಪ್ರಕಾರದಲ್ಲಿ ಅರಳಿದ ರೀತಿಯನ್ನು ನೋಡಬೇಕೆ ಹೊರತು, ಇಂದು ಆ ಪ್ರಕಾರ ಬೆಳೆದುನಿಂತ ರೀತಿಯಲ್ಲಿ ಅದೂ ಮುಖ್ಯವಾಗಿ ಕಾದಂಬರಿ ಲೋಕದ ತಾಂತ್ರಿಕ ಬೆಳವಣಿಗೆಯ ಬೆಳಕಿನಲ್ಲಿ ಹಿಂದಿನ ಸಾಹಿತ್ಯ ಕೃತಿಗಳನ್ನು ಪರೀಕ್ಷಿಸುವುದು ಒಮ್ಮೊಮ್ಮೆ ಅಪಾಯಕಾರಿ ನಿರ್ಧಾರಗಳತ್ತ ನಮ್ಮನ್ನು ಕರೆದೊಯ್ಯಬಹುದು. ಈ ಕಾರಣಕ್ಕಾಗಿಯೇ ಮೌಲ್ಯಗಳು ವ್ಯಕ್ತವಾದ ರೀತಿಗಿಂತ ಮೌಲ್ಯಗಳ ಪುನರ್ಮೌಲ್ಯೀಕರಣಕ್ಕೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ."[೨೬] ಎಂಬಲ್ಲಿ ಕುಲಕರ್ಣಿಯವರ ವಿಮರ್ಶೆಯ 'ಧೋರಣೆ'ಗಳನ್ನು ನಾವು ಗುರುತಿಸಬಹುದು

ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಾಹಿತ್ಯಲೋಕದಲ್ಲಿ ಕಾದಂಬರಿ ಪ್ರಕಾರ ನಶಿಸುತ್ತಿದೆ. ವೇಗದ ಬದುಕು ಮತ್ತು ಮಾರುಕಟ್ಟೆ ಸಂಸ್ಕೃತಿ ತೋರಿಸುತ್ತಿರುವ 'ಮರೀಚಿಕಾ ಐಷಾರಾಮ'ದತ್ತಗಿನ ಧಾವಂತ ಕಾದಂಬರಿಯ ಓದಿಗೆ ಅಗತ್ಯವಾದ ಸಮಯವನ್ನು ಓದುಗರಿಂದ ಕಿತ್ತುಕೊಂಡಿದೆ. ಕವಿತೆ ತನ್ನ ಹಿಂದಿನ ಆಕರ್ಷಣೆಯನ್ನೂ ಮೊನಚನ್ನೂ ತನ್ಮೂಲಕ ಓದುಗರನ್ನೂ ಕಳೆದುಕೊಳ್ಳುತ್ತಿದೆ. ಈ ದಿನಗಳಲ್ಲಿ ಕಥಾಪ್ರಕಾರವೊಂದೇ ಸಾಹಿತ್ಯಕ್ಷೇತ್ರದಲ್ಲಿ ಪ್ರಖರವಾಗಿ ಹೊಳೆಯುತ್ತಿರುವುದು. ಹೀಗಾಗಿ ಕಥಾಕ್ಷೇತ್ರದಲ್ಲಿ ಒಂದು ಪ್ರಕಾರದ ಯಜಮಾನಿಕೆಯನ್ನು ಸ್ಥಾಪಿಸಲಾಗುತ್ತಿದೆ. ಇದಕ್ಕೆ ಇವತ್ತಿನ ಪತ್ರಿಕೆಗಳ ಪಾತ್ರವೂ ಸೇರಿದ್ದು ಕೇವಲ ಕತೆಗಳ ಪ್ರಕಟಣೆಗೆ ಅವು ಆದ್ಯತೆ ನೀಡಿರುವುದರಿಂದ ಕಾದಂಬರಿ ಪ್ರಕಾರ ಬಿಕ್ಕಟ್ಟನ್ನು ಎದುರಿಸುತ್ತಿದೆ

ನಾಟಕ ಕೇಂದ್ರಿತ ವಿಮರ್ಶೆ

ಇಂದು ಪ್ರಚಲಿತದಲ್ಲಿರುವ ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯ ಮತ್ತು ನಾಟಕಗಳು ಅತ್ಯಂತ ಪ್ರಾಚೀನವಾದವು. ಬಹಳ ಹಿಂದಿನಿಂದಲೇ ಅವುಗಳಿಗೆ ವಿಶಿಷ್ಟವಾದ ಮೀಮಾಂಸೆ ರೂಪುಗೊಂಡಿದೆ. ವಿಮರ್ಶೆ ಕೂಡ ಆರಂಭದಲ್ಲಿ ಈ ಪ್ರಕಾರಗಳ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿತು. ಆದರೆ ಕ್ರಮೇಣ ಗದ್ಯ ಪ್ರಕಾರಗಳಾದ ಕತೆ ಕಾದಂಬರಿಗಳು

ವಿಮರ್ಶೆಯ ಗಮನವನ್ನು ಕೊಂಚಮಟ್ಟಿಗೆ ತನ್ನೆಡೆಗೆ ಸೆಳೆಯಲು ಪ್ರಯತ್ನಿಸಿದವು.

ಪ್ರದರ್ಶಕ ಕಲೆಗಳಲ್ಲಿರುವಂತೆ ರಂಗಭೂಮಿಯಲ್ಲಿ ಹೆಚ್ಚು ವಿಮರ್ಶೆ ಬೆಳೆದಿಲ್ಲ. ಇದಕ್ಕೆ ಕಾರಣ, ಸಾಹಿತ್ಯ ವಿಮರ್ಶೆಯನ್ನು ಹೊರತು ಪಡಿಸಿ ಬೇರೆ ಎಲ್ಲಾ ಕಲೆಗಳ ವಿಮರ್ಶೆ ನಮ್ಮಲ್ಲಿ ಬೆಳೆದಿಲ್ಲ. ಇದಕ್ಕೆ ಈ ಕಲೆಗಳನ್ನು ನೋಡುವ ಕ್ರಮ ವಿಭಿನ್ನ ಚಾರಿತ್ರಿಕ ಘಟ್ಟಗಳಲ್ಲಿ ಬದಲಾದುದು ಬಹುಮುಖ್ಯ ಕಾರಣ. ನಂದಿಕೇಶ್ವರನ ಕಾಲಕ್ಕೆ 'ರಸಗ್ರಹಣ'ವನ್ನೇ ಪ್ರತ್ಯೇಕವಾಗಿ ಚರ್ಚಿಸುವ ಅಭ್ಯಾಸವಿದ್ದ ದೇಶವಿದು. ನಂತರ ಬೇರೆ ಬೇರೆಯ ಧರ್ಮಗಳ ಆಡಳಿತ ಬಂದಾಗೆಲ್ಲಾ ಈ ಪ್ರದರ್ಶಕ ಕಲೆಗಳನ್ನು ನೋಡುವ ಕ್ರಮ ಬದಲಾಗಿದೆ. ಮೈಸೂರು ಸಂಸ್ಥಾನದಲ್ಲಿಯೇ ಸಂಗೀತ ಪ್ರಿಯರಿದ್ದ ರಾಜರುಗಳ ಕಾಲಕ್ಕೂ ಆಧುನಿಕ ಪ್ರಜಾಸರ್ಕಾರದ ಕಾಲಕ್ಕೂ ಶಾಸ್ತ್ರೀಯ ಸಂಗೀತವನ್ನು ಗಮನಿಸುವ ಪದ್ಧತಿ ಬದಲಾಗಿರುವುದನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಇನ್ನು ರಂಗಭೂಮಿಯು ಮೂಲತಃ ಉತ್ಸವಗಳ ಭಾಗವಾಗಿ ಬದುಕಿದ್ದ ಕಲಾ ಪ್ರಕಾರವಾಗಿತ್ತು, ಕೆಲವೊಮ್ಮೆ ರಾಜರುಗಳ ನೆರಳಲ್ಲಿ ಜೀವಂತಿಕೆ ಪಡೆದಿತ್ತು. ವಸಾಹತುಶಾಹಿಯ ಕಾಲದಲ್ಲಿಯೇ ಈ ನಾಡಿಗೆ ಆಧುನಿಕ ರಂಗಭೂಮಿಯು ಪರಿಚಿತವಾದದ್ದು. ಹೀಗಾಗಿ ಸ್ವತಃ ರಂಗಭೂಮಿಗೆ ಸಾವಿರಾರು ವರ್ಷದ ಇತಿಹಾಸವಿದ್ದರೂ ರಂಗಭೂಮಿಯನ್ನು ಉತ್ಸವ ಹಾಗೂ ದೇವರುಗಳನ್ನು ಹೊರತು ಪಡಿಸಿ ಕಲೆ ಎಂದು ಗುರುತಿಸುವ ಕ್ರಮಕ್ಕಿರುವ ಇತಿಹಾಸ ಬೇರೆ ಪ್ರಕಾರಗಳಿಗೆ ಹೋಲಿಸಿದರೆ ಕಡಿಮೆ ಇದೆ.

ನಮ್ಮ ಸಮಾಜದಲ್ಲಿ ಬೆಳಕಿನ ಕೆಳಗೆ ಇರುವ ವಿವರಗಳಿಗೆ ಸಿಗುವ ಆದ್ಯತೆಯಂತೆ ಇತರ ವಿವರಗಳಿಗೆ ಆದ್ಯತೆ ದೊರೆಯುವುದಿಲ್ಲ. ಇದು ನಾವು ಸಮಾಜ ಕಟ್ಟಿರುವ ಮತ್ತು ನಮ್ಮ ಮೌಲ್ಯಮಾಪನ ಕ್ರಮದಲ್ಲಿಯೇ ಇರುವ ಹುಳುಕು. ನಮ್ಮಲ್ಲಿ ಆರಂಭವಾದ ಅನೇಕ ರಂಗಶಾಲೆಗಳು ಎರಡು ಮೂರು ದಶಕಗಳ ಅನುಭವವನ್ನು ಹೊಂದಿವೆ. ವರುಷಕ್ಕೆ ಕನಿಷ್ಟ ಹದಿನೈದು ಜನ ರಂಗತಜ್ಞರನ್ನು ತಯಾರಿಸುತ್ತಿವೆ. ಈ ಕೊಡುಗೆಯನ್ನು ಅಲ್ಲಗಳೆಯಲಾಗದು. ಆದರೆ ರಂಗತಜ್ಞರನ್ನು ಸೃಷ್ಟಿಸಿ ಹಾಗೆಯೇ ರಂಗವಿಮರ್ಶಕರನ್ನೂ ಸೃಷ್ಟಿಸಬೇಕೆಂದು ಈ ರಂಗಶಾಲೆಗಳು ಯೋಚಿಸಬೇಕು. ಇಂತಹ ರಂಗಶಾಲೆಗಳಲ್ಲಿ ರಂಗವಿಮರ್ಶೆಯನ್ನು ಸಹ ಪ್ರಧಾನ ಪಠ್ಯವಾಗಿಸಿ ಇದೇ ರಂಗತಜ್ಞರು ಬರಹಗಾರರೂ ಆಗುವುದಕ್ಕೆ ಪ್ರೇರೇಪಿಸಬೇಕು. ಆಗ ಮುಂಬರುವ ತಲೆಮಾರುಗಳಲ್ಲಿ ರಂಗವಿಮರ್ಶೆ ಎಂಬುದು ಜೀವಂತವಾಗಿರಲು ಸಾಧ್ಯ. ಇದೇ ಸಂದರ್ಭದಲ್ಲಿ ನಮ್ಮಲ್ಲಿನ ಸ್ನಾತಕೋತ್ತರ ಕೇಂದ್ರಗಳ ಮೂಲಕ ಬಂದ ಹೊಸ ಭಾಷಾ ತಜ್ಞರುಗಳನ್ನು ಸಹ ಗಮನಿಸಬೇಕು. ಈ ಮಾದರಿಯ ತಯಾರಿ ಪಡೆದವರು ಸಾಹಿತ್ಯ ವಿಮರ್ಶೆಯ ಮಾನದಂಡಗಳ ಮೂಲಕ ರಂಗಭೂಮಿ ವಿಮರ್ಶೆಯನ್ನು ಸಹ ಮಾಡಲು ಪ್ರಯತ್ನಿಸುತ್ತಾ ಇದ್ದಾರೆ. ಇಂತ ಸ್ನಾತಕೋತ್ತರ ಕೇಂದ್ರಗಳಲ್ಲಿಯೂ ದೃಶ್ಯ ಮಾಧ್ಯಮದ ವಿಮರ್ಶೆಗೆ ಪಠ್ಯೇತರ ಚಟುವಟಿಕೆಯಾಗಿ ಪ್ರತ್ಯೇಕ ಶಿಬಿರಗಳನ್ನು ನಡೆಸಬೇಕು. ಆ ಮೂಲಕ ಈ ವಿದ್ಯಾರ್ಥಿಗಳು ಸಹ ದೃಶ್ಯ ಮಾಧ್ಯಮದ ವಿಮರ್ಶೆಗೆ ಬಳಸಬೇಕಾದ ಮಾದರಿಗಳನ್ನು ರೂಪಿಸುವ ಕೆಲಸ

ಆಗಬೇಕು. ಈ ಮಾದರಿಯಲ್ಲಿ ಎಲ್ಲಾ ವಿದ್ಯಾರ್ಥಿ ತಯಾರಿಕ ಹಂತದಲ್ಲಿ ವಿಮರ್ಶೆಯನ್ನು ಕಲಿಸುವ ಕೆಲಸವಾದಾಗ ನಮ್ಮಲ್ಲಿ ದೃಶ್ಯಮಾಧ್ಯಮ ವಿಮರ್ಶೆ ಶಕ್ತವಾಗುವ ಸಾಧ್ಯತೆ ಇದೆ.

ನಮ್ಮಲ್ಲಿನ ಅಕಾಡೆಮಿಗಳು ಹಾಗೂ ರಂಗಪೀಠಗಳು ಕಳೆದ ಕೆಲವು ದಶಕಗಳಿಂದ ರಾಜಕೀಯ ಓಲೈಕೆಗಳಿಂದಾದ ಪ್ರತಿನಿಧಿಗಳಿಂದ ತುಂಬಿವೆ. ಇದರಿಂದಾಗಿ ಅಕಾಡೆಮಿ ಮತ್ತು ರಂಗಪೀಠಗಳು ಮಾಡಬೇಕಾದ ಅಕಾಡೆಮಿಕ್ ಕೆಲಸಗಳು ಸರಿಯಾದ ಕ್ರಮದಲ್ಲಿ ಆಗುತ್ತಾ ಇಲ್ಲ ಎಂಬುದು ಮೇಲ್ನೋಟಕ್ಕೇ ಕಾಣುತ್ತಾ ಇದೆ. ಮೊದಲಿಗೆ ಇಂತಹ ತಾಣಗಳನ್ನು ರಾಜಕೀಯ ಓಲೈಕೆಗಳಿಂದ ದೂರ ಇಡುವ ಕೆಲಸ ಆಗಬೇಕಿದೆ. ನಾಟಕ ಅಕಾಡೆಮಿಯು ರಂಗಭೂಮಿಯ ಸರ್ವತೋಮುಖ ಬೆಳವಣಿಗೆಯನ್ನು ಅಕಡೆಮಿಕ್ ಆಗಿ ಯೋಚಿಸುವ ತಾಣವಾಗಬೇಕಿದೆ. ಅದಕ್ಕಾಗಿ ನಿರಂತರವಾಗಿ ನಾಟಕ ಶಿಬಿರಗಳ ಮಾದರಿಯಲ್ಲಿಯೇ ನಾಟಕ ವಿಮರ್ಶಾ ಶಿಬಿರಗಳನ್ನು ಸಹ ಅಕಾಡೆಮಿಗಳು ಮಾಡಬೇಕಿದೆ. ಈ ನಿಟ್ಟಿನಲ್ಲಿ ಹಿಂದೆ ಹಲವು ಪ್ರಯತ್ನಗಳಾಗಿವೆಯಾದರೂ ಇವುಗಳಲ್ಲಿ ದೂರಗಾಮಿ ದೃಷ್ಟಿಕೋನದ ಕೊರತೆ ಇದ್ದದ್ದು ಸ್ಪಷ್ಟ. ಹೀಗಾಗಿ ಈವರೆಗಿನ ಪ್ರಯತ್ನಗಳಿಂದ ಫಲಗಳು ದೊಡ್ಡ ಕೊಡುಗೆ ಆಗಿಲ್ಲ.

ಪ್ರಾಯಶಃ ನಾಟಕ ಅಕಾಡೆಮಿ ಸ್ವತಃ ಒಂದು ರಂಗವಿಮರ್ಶೆಯ ತ್ರೈಮಾಸಿಕವನ್ನೋ ಅರ್ಧ ವಾರ್ಷಿಕ ಪತ್ರಿಕೆಯನ್ನೋ ಹೊರತರುವ ಪ್ರಯತ್ನ ಮಾಡಬೇಕು. ಸಾಹಿತ್ಯ ಅಕಾಡೆಮಿಯು ವಾರ್ಷಿಕವಾಗಿ ವಿಭಿನ್ನ ಸಾಹಿತ್ಯ ಪ್ರಾಕಾರಗಳ ಕುರಿತು ತರುವ ಹೊತ್ತಿಗೆಗಳ ಹಾಗೆ ಆಯಾ ವರ್ಷಗಳಲ್ಲಿ ರಂಗಭೂಮಿಯಲ್ಲಿ ಆದ ವಿಭಿನ್ನ ಪ್ರಯೋಗಗಳ ದಾಖಲೆಯೂ ಸಿಗುವಂತಹ ಹಾಗೂ ದೃಶ್ಯಮಾಧ್ಯಮ ವಿಮರ್ಶೆ ಇರುವಂತಹ ಲೇಖನಗಳು ಈ ಹೊತ್ತಿಗೆಯಲ್ಲಿ ಇದ್ದರೆ, ಅವು ಮುಂದಿನ ತಲೆಮಾರಿಗೆ ಮಾದರಿಯಾಗಿ ಉಳಿಯಬಲ್ಲವು. ಇದೇ ಮಾದರಿಯನ್ನು ರಂಗಪೀಠಗಳು ಸಹ ಅನುಸರಿಸಬಹುದು. ರಂಗಶಾಲೆಗಳ ದೃಷ್ಟಿಯಿಂದ ಹೇಳುವುದಾದರೆ ನೀನಾಸಂ ಶಾಲೆಯು 'ಮಾತುಕತೆ' ಎನ್ನುವ ಹೊತ್ತಿಗೆಯ ಮೂಲಕ ಕೆಲವು ಮಾದರಿ ವಿಮರ್ಶೆಗಳನ್ನು ಪ್ರಕಟಿಸುವ ಪ್ರಯತ್ನ ಮಾಡಿದೆ. ಹಾಗೆಯೇ ವಸಂತ ಬನ್ನಾಡಿಯವರು ಸಹ ಕೆಲವು ಸಂಚಿಕೆಗಳನ್ನು ಪ್ರಕಟಿಸಿದ್ದಾರೆ. ಡಾ.ವಿಜಯಾ ಅವರ 'ಸಂಕುಲ' ಪತ್ರಿಕೆಯು ಕೆಲವು ಕಾಲ ಅಪರೂಪದ ರಂಗವಿಮರ್ಶೆಗಳನ್ನು ಪ್ರಕಟಿಸಿದೆ. ಈ ಮಾದರಿಯ ಕೆಲಸಗಳು ನಿರಂತರತೆಯನ್ನು ಪಡೆಯುವಲ್ಲಿ ರಂಗಶಾಲೆಗಳು ಸ್ವತಃ ಪಾಲ್ಗೊಳ್ಳಬೇಕು. ಕನಿಷ್ಟ ಆಯಾ ರಂಗಶಾಲೆಯಲ್ಲಿ ಆದ ಪ್ರಯೋಗಗಳನ್ನು ದೃಶ್ಯಮಾಧ್ಯಮದ ವಿಮರ್ಶಾ ಸಾಧನಗಳ ಮೂಲಕ ವಿಶ್ಲೇಷಿಸುವ ಲೇಖನಗಳನ್ನು ಪ್ರಕಟಿಸಿದರೂ ರಂಗಭೂಮಿಗೆ ಅದೊಂದು ದೊಡ್ಡ ಸಹಾಯವಾಗುತ್ತದೆ.

ನಮ್ಮ ಸಮಕಾಲೀನ ರಂಗಭೂಮಿಯಲ್ಲಿ ಹೆಚ್ಚು ಜನಪ್ರಿಯವಾಗುವುದು ಹಾಸ್ಯ ನಾಟಕಗಳು ಮಾತ್ರ, ಇದರ ಜೊತೆಗೆ ನೋಡುಗನೊಬ್ಬ ನಾಟಕದ ಅವಧಿಯಲ್ಲಿ ಮಾತ್ರ ಅದರೊಡನೆ ಇದ್ದು ನಂತರ ಕೇವಲ ರಂಜನೆಯ ನೆನಪನ್ನು ಮಾತ್ರ ಹೊತ್ತು ಸಾಗುತ್ತಾನೆ

ಎಂಬ ದೃಷ್ಟಿಕೋನವೊಂದು ಪ್ರಚಲಿತದಲ್ಲಿದೆ. ಹೀಗಾಗಿ ಈಚೆಗೆ ಬರುವ ನಾಟಕಗಳಲ್ಲಿ ಹಾಸ್ಯ ಮತ್ತು ವಿಡಂಬನೆಗೆ ಹೆಚ್ಚು ಸಮಯ ನೀಡಲಾಗುತ್ತದೆ. ಇದೂ ಸಹ ನವವಸಾಹತುಶಾಹಿಯ ಕೂಸೇ ಆಗಿದೆ. ಬಹುತೇಕರಿಗೆ ರೋಲರ್ ಕೋಸ್ಟರ್ ಸವಾರಿ ಇಷ್ಟವಾಗುತ್ತದೆ. ಅದರಲ್ಲಿ ಎಲ್ಲಾ ಥ್ರಿಲ್‌ಗಳು ಇವೆ. ಭಾಗವಹಿಸುವಾತನಿಗೆ ಮುಂಚಿತವಾಗಿಯೇ ನನಗೇನೂ ಆಗುವುದಿಲ್ಲ ಎಂದು ಗೊತ್ತಿದ್ದರೂ ಆ ರೋಲರ್ ಕೋಸ್ಟರ್‌ನ ಏರಿಳಿತಗಳಲ್ಲಿ ಆತ ಚೀರುತ್ತಾನೆ, ಕೂಗುತ್ತಾನೆ, ಕಡೆಗೆ ಎಲ್ಲಾ ಮುಗಿಸಿ ಇಳಿಯುವಾಗ ಅವನ ಮುಖದಲ್ಲಿ ವಿಚಿತ್ರ ನೆಮ್ಮದಿ ಇರುತ್ತದೆ. ಅಂತಹುದೇ ವಿನ್ಯಾಸವುಳ್ಳ ಸಿನಿಮಾ ಮತ್ತು ರಂಗಪ್ರದರ್ಶನದ ಸೃಷ್ಟಿಯೂ ಜಗತ್ತಿನಾದ್ಯಂತ ನಡೆಯುತ್ತಿದೆ. ವಿಕ್ಟರ್ ಹ್ಯೂಗೋನ 'ಲೇ ಮಿಸರಬಲ್ಸ್' ಕಾದಂಬರಿಯು ೧೮ನೇ ಶತಮಾನದ ಬಡವರ ಕತೆಯನ್ನು ಹೇಳಲು ಪ್ರಯತ್ನಿಸಿದರೆ, ಅದೇ ಕಾದಂಬರಿಯನ್ನಾಧರಿಸಿದ ಬ್ರಾಡ್ವೇ ರಂಗಪ್ರದರ್ಶನವು ಬಡತನವನ್ನು ರಮ್ಯಗೊಳಿಸುವತ್ತ ಹಾಗೂ ಬಡವರ ಕಷ್ಟಗಳನ್ನು ರೋಮ್ಯಾಂಟಿಸೈಸ್ ಮಾಡುವ ಕಡೆಗೆ ಇರುತ್ತವೆ. ಹಾಗಾಗಿ ಅಲ್ಲಿ ಹಾಡೇ ಪ್ರಧಾನವಾಗಿರುತ್ತದೆ. ಇಂತಹ ಕಡೆ ಕೃತಿ ಚರ್ಚೆಯ ಮೂಲಕ ಬೆಳೆಯುವ ಸಾಧ್ಯತೆ ಕಡಿಮೆ ಇರುತ್ತದೆ.

ಇಂತಹ ಕಾಲಘಟ್ಟದಲ್ಲಿ ಸಮಕಾಲೀನ ಕಲಾವಿದರು ಪೋಸ್ಟ್ ಮಾಡರ್ನ್ ಕಲ್ಚರ್ ಬಗ್ಗೆ ಮತ್ತೆ ಮತ್ತೆ ಮಾತಾಡಲಾರಂಭಿಸಿದ್ದಾರೆ ಎಂಬುದು ಬಹುಮುಖ್ಯವಾಗಿ ಗಮನಿಸಬೇಕಾದ ವಿಷಯವಾಗಿದೆ. ನಮ್ಮ ಭಾಷೆಯಲ್ಲೂ ಅಂತಹ ಪ್ರಯತ್ನಗಳನ್ನು ಹಲವರು ಮಾಡುತ್ತಾ ಇದ್ದಾರೆ. ಕೆ.ವೈ.ಎನ್. ಈಚೆಗೆ ಬರೆದಿರುವ 'ಮಲ್ಲಿಗೆ' ಎಂಬ ನಾಟಕ ಅಥವಾ ಎಸ್.ಆರ್.ರಮೇಶ್ ಅವರು ಬರೆದಿರುವ 'ಹೀಗೊಂದು ಸಂಜೆ' ಮತ್ತು 'ರಾಜ ನಗಾರಿ' ತರಹದ ನಾಟಕಗಳು ಸಮಕಾಲೀನ ಇತಿಹಾಸಕ್ಕೆ ಪ್ರತಿಕ್ರಿಯೆಯಾಗಿಯೇ ಹುಟ್ಟಿದ ಕೃತಿಗಳು. ಈ ನಾಟಕದ ಕ್ರಮದಲ್ಲಿನ ಬದಲಾವಣೆಗಳನ್ನು ಗಮನಿಸಬಹುದು. ಇವುಗಳಿಂದಾಚೆಗೆ ಸಿಜಿಕೆ ತಮ್ಮ ನಾಟಕಗಳನ್ನು ಕಟ್ಟುವಾಗ ನಾಟಕಕಾರರನ್ನು ತಾಲೀಮಿನಲ್ಲಿ ಜೊತೆಯಾಗಿ ಇರಿಸಿಕೊಂಡೇ ನಾಟಕ ಕಟ್ಟುತ್ತಿದ್ದ ಮಾರ್ಗವೂ ಹವ್ಯಾಸೀ ರಂಗತಂಡಗಳಿಗೆ ಹೆಚ್ಚು ಆಪ್ತವಾಗುತ್ತದೆ. ಆಯಾ ತಂಡದ ಮಿತಿಗಳು ಹಾಗೂ ಗುಣಾತ್ಮಕ ಶಕ್ತಿಗಳನ್ನು ಗಮನದಲ್ಲಿ ಇರಿಸಿಕೊಂಡು ಕಟ್ಟಿದ ನಾಟಕವನ್ನು ಆಯಾ ತಂಡಕ್ಕೆ ಪ್ರದರ್ಶನಕ್ಕಾಗಿ ಸಿದ್ಧಪಡಿಸುವುದು ಸಹ ಸುಲಭ ಸಾಧ್ಯವಾಗುತ್ತದೆ.

ರಂಗಭೂಮಿಯ ಭಾಷೆಯ ಕುರಿತು ಹೇಳುವುದಾದರೆ ನವವಸಾಹತುಶಾಹಿಯ ಹೊಡೆತಗಳಲ್ಲಿ ಅತಿಹೆಚ್ಚು ಹೈಬ್ರಿಡ್‌ತನವನ್ನು ಪಡೆದುಕೊಂಡದ್ದು ಭಾಷೆ. ಆಧುನಿಕ ಜಗತ್ತಿನಲ್ಲಿ ಬದುಕುವುದಕ್ಕೆ ಆಂಗ್ಲ ಭಾಷೆಯನ್ನು ಕಲಿಯಲೇ ಬೇಕು ಎಂಬ ಭ್ರಮೆಯೊಂದು ಸೃಷ್ಟಿಯಾದ ಹಿನ್ನೆಲೆಯಲ್ಲಿ ಕಳೆದ ಮೂರು – ನಾಲ್ಕು ದಶಕಗಳಿಂದ ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ಆಂಗ್ಲ ಭಾಷೆ ಕಲಿಯಲು ಕಳಿಸಿದ್ದಾರೆ. ಈ ಆಯ್ಕೆ ಖಂಡಿತಾ ಕಲಿಯುವ ಮಕ್ಕಳದ್ದಲ್ಲ ಬದಲಿಗೆ ಅವರ ಪೋಷಕರದ್ದು. ಈ ಆಂಗ್ಲ

ಮಾಯೆಯ ಮೂಲಕ ನವವಸಾಹತುಶಾಹಿ ನಾಡಿನಲ್ಲಿ ಹರಡತೊಡಗಿದೊಡನೆ ನಮ್ಮ ಹೊಸ ತಲೆಮಾರು ನಮ್ಮ ಭಾಷೆಯನ್ನು ಬಳಸುವ ಕ್ರಮದಲ್ಲಿ ಪಲ್ಲಟಗಳಾಗಿವೆ. ನಮ್ಮ ಸೊಗಡುಗಳು ಹಿಂದಕ್ಕೆ ಸರಿದು ಏಕರೂಪಿ ರಾಜ್ಯಭಾಷೆಯೊಂದು ಆಂಗ್ಲಪದಗಳ ಬಳಕೆಯ ಜೊತೆಗೆ ಚಾಲ್ತಿಗೆ ಬಂದಿದೆ. ಇಂತಹ ಪರಿಸ್ಥಿತಿಯನ್ನು ತಮ್ಮ ಕಲಾಕೃತಿಗಳಲ್ಲಿ ಹಿಡಿದಿಡುವ ಪ್ರಯತ್ನವನ್ನು ಬಹುತೇಕ ನಾಟಕ ರಚನೆಕಾರರು ಮಾಡುತ್ತಾ ಇದ್ದಾರೆ. ಕೈಲಾಸಂ ಅವರು ಹಾಸ್ಯ ಸೃಷ್ಟಿಗಾಗಿ ಮತ್ತು ಸ್ವಾತಂತ್ರಪೂರ್ವದ ಮೇಲ್ವರ್ಗದ ಜನರ ಬದುಕನ್ನು ಹಿಡಿಯಲು ಬಳಸಿದ ಭಾಷಾ ಕ್ರಮವು ನಂತರ ದ್ಯಾವನೂರು ಮಹಾದೇವ ಮುಂತಾದವರಲ್ಲಿ ದುಪ್ಪಿ ಕಮಿಷನರ್ ಆಗುವ ಮೂಲಕ ಹೊರಗಿನಿಂದ ಬಂದ ಪದಗಳನ್ನು ಸ್ಥಳೀಯಗೊಳಿಸಿಕೊಳ್ಳುವ ಪ್ರಕ್ರಿಯೆಯನ್ನು ಸಹ ಬಿಚ್ಚಿಡುತ್ತಾರೆ.

ಇದು ದುರಿತ ಕಾಲ. ಜನ ಸಾಮಾನ್ಯರ ಎದುರಿಗೆ ಅನೇಕ ಬಗೆಯ ವ್ಯಾಖ್ಯಾನಗಳು ಏಕಕಾಲಕ್ಕೆ ಅರಚಿಕೊಳ್ಳುತ್ತಾ ಇವೆ. ಅವುಗಳಲ್ಲಿ ಯಾವುದೋ ಸರಿ ಎಂದುಕೊಂಡು ಹಿಂಬಾಲಿಸುವಷ್ಟರಲ್ಲಿ ಅದಕ್ಕೆ ತದ್ವಿರುದ್ಧವಾದ ಮತ್ತೊಂದು ವ್ಯಾಖ್ಯಾನ ನಮ್ಮೆದುರಿಗೆ ಬಂದು ಕೂರುತ್ತಿದೆ. ಹೀಗಾಗಿ ಸಾಮಾನ್ಯ ಜನ ಯಾವುದನ್ನು ಆರಿಸಿಕೊಳ್ಳಬೇಕು ಎಂದರಿವಾಗದ ಗೊಂದಲದಲ್ಲಿ ಇದ್ದಾರೆ. ಕೆಲವೊಮ್ಮೆ ತಾವೇ ಆರಿಸಿದ್ದನ್ನು ಕುರಿತು ಬೇಸರಿಸಿಕೊಂಡು ಗೊಣಗುತ್ತಾ ಇದ್ದಾರೆ. ಈ ಕಾಲವನ್ನು ೧೯೭೫ರ ತುರ್ತುಪರಿಸ್ಥಿತಿಯ ಕಾಲಕ್ಕೆ ನೇರವಾಗಿ ಹೋಲಿಸಬಹುದು. ಆಗಲೂ ಸಾಮಾನ್ಯರಿಗೆ ಆಯ್ಕೆಯ ಗೊಂದಲವಿತ್ತು. ಯಾವ ಮಗ್ಗುಲಲ್ಲಿ ನಿಂತು ಮಾತಾಡಬೇಕೆಂದರಿವಾಗದ ಅಸಡ್ಡಾಳ ಸ್ಥಿತಿಯಿತ್ತು. ಇಂತಹ ಕಾಲಘಟ್ಟದಲ್ಲಿ ಜನರ ಬದುಕನ್ನು ರೂಪಿಸುವ ಮಹಾಶಕ್ತಿಯಾಗಬೇಕಾದ್ದು ಸಾಹಿತ್ಯ ಚಳುವಳಿಗಳು ಹಾಗೂ ರಂಗಚಳುವಳಿಗಳು. ಈ ಹಿನ್ನೆಲೆಯಲ್ಲಿ ಶಶಿಧರ್ ಕಾವೂರ್ ಅವರ ಪಠ್ಯವನ್ನು ನೋಡಬಹುದು. "ನವವಸಾಹತುಶಾಹಿಯ ಶಿಶುವಾದ ಕೊಳ್ಳುಬಾಕ ಸಂಸ್ಕೃತಿಯು ನವ್ಯೋತ್ತರ ವಾಸ್ತುವಿನ್ಯಾಸಕ್ಕೆ ದಾರಿಯಾಗಿ, ಆ ಮೂಲಕ ನಮ್ಮ ನಡುವೆ ಅನೇಕ ಹೊಸ ಬಗೆಯ ತಲ್ಲಣಗಳ ಹುಟ್ಟಿಗೆ ಕಾರಣವಾಗಿದೆ. 'ಅಪಾರ್ಟ್‌ಮೆಂಟ್' ಎಂಬ ಹೊಸ ಸಂಸ್ಕೃತಿಯು ನಮ್ಮ ನಡುವೆ ಹೊಸ ಸ್ಥಾವರಗಳನ್ನು ನಿಲ್ಲಿಸಿದೆ. ಇಂತಹ ಕಾಲಘಟ್ಟದಲ್ಲಿ ಶಶಿಧರ್ ಕಾವೂರ ಅವರ 'ನೆಮ್ಮದಿ ಅಪಾರ್ಟ್‌ಮೆಂಟ್' ನಾಟಕವು ಸಮಕಾಲೀನ ಸಮಸ್ಯೆಗಳನ್ನು ಕುರಿತಂತೆ ಮಾತಾಡುವ ನಾಟಕವಾಗಿದೆ. ನೆಮ್ಮದಿಯನ್ನು ಹುಡುಕುತ್ತಾ ಹೊರಟು ಅಪಾರ್ಟ್‌ಮೆಂಟ್ ಸೇರಿದ ಸಾಮಾನ್ಯ ಜನಗಳ ಸಂಕಟವನ್ನು ಕಟ್ಟಿಕೊಡುವ ಮೂಲಕ, ಯಾವ ಸಮಾಜವು ಬಹುಮುಖಿ ಆಗಿ ಉಳಿಯುವುದಿಲ್ಲವೋ ಅದು ರೋಗಗ್ರಸ್ತ ಸಮಾಜವಾಗುತ್ತದೆ ಎಂಬುದನ್ನು ನಾಟಕವಾಗಿಸಿದ್ದಾರೆ."[೨೨] ಈ ಹೇಳಿಕೆಯಲ್ಲಿ ಇವತ್ತಿನ ನಾಟಕಗಳ ವಸ್ತು ಮತ್ತು ಅದರ ತಂತ್ರವನ್ನು ಸ್ಪಷ್ಟಪಡಿಸಲಾಗಿದೆ. ಆದರೆ ವಾಸ್ತವವಾಗಿ ಇಂದು ಕನ್ನಡದಲ್ಲಿ ಇಂತಹ ಸ್ವತಂತ್ರ ನಾಟಕಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದುವರೆಗಿನ ಮುಖ್ಯ ಸಾಹಿತ್ಯ ಕೃತಿಗಳನ್ನು ರಂಗಕ್ಕೆ ರೂಪಾಂತರಿಸಿಕೊಳ್ಳುವ ಮೂಲಕ

ಹೊಸ ರೀತಿಯ ಸಾದ್ಯತೆಗೆ ಕನ್ನಡ ರಂಗಭೂಮಿ ಮುಖ ಮಾಡಿದೆ. ಆದರೆ ಇದರಿಂದ ನಾಟಕ ಪ್ರಕಾರದಲ್ಲಿ ಹೊಸ ಪಠ್ಯಗಳು ರೂಪುಗೊಳ್ಳುವ ಸಾಧ್ಯತೆ ಕಡಿಮೆಯಾದಂತೆ ಆಗಿದೆ.

ಪಶ್ಚಿಮದಿಂದ ಅನುವಾದ ನಾಟಕಗಳ ಹಿಂದೆ ಇರುವ ಪ್ರಮುಖ ಪ್ರೇರಣೆಗಳನ್ನು ಕನ್ನಡ ವಿಮರ್ಶೆ ಕಂಡಿರಿಸಿದೆ. ಸ್ವಕಲ್ಪಿತವಲ್ಲದ ವಸ್ತುಗಳಿಗೆ ಇರುವ ಸಾತತ್ಯ ಮತ್ತು ಅವು ನೀಡಬಹುದಾದ ರಂಜನೆಗಳನ್ನು ಆಯಾಯಾ ಕಾಲಘಟ್ಟಗಳಲ್ಲಿ ಅಧಿಕಾರದಲ್ಲಿರುವ ಪ್ರಭಾವೀ ವರ್ಗಗಳು ತಮ್ಮ ತಮ್ಮ ಸ್ಥಾನ–ಮಾನಗಳನ್ನು ಮತ್ತು ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಬೃಹತ್ ಆಚಾರಸಂಹಿತೆಗಳನ್ನೇ ಪುರಾಣಗಳಲ್ಲಿ ಕೊರೆದಿರುತ್ತವೆ. ಅಂತ ಪುರಾಣ ವಸ್ತಗಳಿಂದ ನಾಟಕ ರಚನೆಯಾದಾಗ ಸಾಮಾಜಿಕ–ಧಾರ್ಮಿಕ–ರಾಜಕೀಯ ಪರಿವರ್ತನೆಯ ಉದ್ದೇಶವುಳ್ಳ ಎಲ್ಲರೂ ಆರ್ಷೇಯ ಪುರಾಣೇತಿಹಾಸಗಳನ್ನು ನಿರಸನಗೊಳಿಸಿ, ಅವುಗಳಲ್ಲಡಗಿರುವ 'ಗುಪ್ತ ಕಾರ್ಯಕ್ರಮ ಸೂಚಿ'ಗಳನ್ನು ಬಯಲಿಗೆಳೆಯುವ ಪ್ರಯತ್ನ ಮಾಡುತ್ತವೆ. ಇದನ್ನು ವಿಮರ್ಶಕರು ಗಮನಿಸಿದಾಗ ಮಾತ್ರ ಗೋಚರಿಸುವ ಸಾಧ್ಯತೆಯಿರುತ್ತದೆ.

ಕನ್ನಡದ ಮುಖ್ಯ ನಾಟಕಕಾರರಾದ ಎಚ್. ಎಸ್. ವೆಂಕಟೇಶಮೂರ್ತಿಯವರ ಮುಖ್ಯ ನಾಟಕಗಳು ಈ ರೀತಿಯ ನಿರಸನದ ಕೆಲಸವನ್ನು ಮಾಡುತ್ತವೆ. ಅಷ್ಟೇ ಅಲ್ಲ, ಅವೆಲ್ಲವೂ ಸ್ತ್ರೀಪರವಾದ ನಿಲುವುಗಳಿಂದ ಪ್ರೇರಿತವಾಗಿರುತ್ತವೆ. ಆ ರೀತಿಯ ಪ್ರಯತ್ನವನ್ನು ಅವರ ಕೆಲವು ನಾಟಕಗಳ ಪರಿಶೀಲನೆಯಿಂದ ತೋರಿಸಿಕೊಡಬಹುದು. ಅವರ 'ಹೆಜ್ಜೆಗಳು', 'ಚಿತ್ರಪಟ', 'ಉರಿಯ ಉಯ್ಯಾಲೆ', 'ಊರ್ಮಿಳಾ' ಮುಂತಾದ ನಾಟಕಗಳು 'ಪುರಾಣ'ದಿಂದ ತೆಗೆದುಕೊಂಡ ವಸ್ತುಗಳಲ್ಲಿ ಈ ನಿರಸನವನ್ನು, ಹೊಸ ವೈಚಾರಿಕತೆಯನ್ನು ಗುರುತಿಸಬಹುದಾಗಿದೆ. ಒಟ್ಟಾರೆ ಕಳೆದ ದಶಕದಲ್ಲಿ ಕನ್ನಡ ರಂಗಭೂಮಿ ಮತ್ತು ನಾಟಕ ಪ್ರಕಾರವನ್ನು ಕುರಿತು ಬಂದ ವಿಮರ್ಶೆಯು ಆ ಪ್ರಕಾರದ ಸ್ಥಗಿತತೆಯನ್ನು ಸರಿಯಾಗಿ ದಾಖಲು ಮಾಡಿದೆ.

ಕಾದಂಬರಿಗಳ ನಾಟಕ ರೂಪಾಂತರಗಳಲ್ಲಿ ಬಹು ಯಶಸ್ವಿಯಾದ ಕುವೆಂಪುರವರ "ಮಲೆಗಳಲಿ ಮದುಮಗಳು" ಕಾದಂಬರಿಯು ಅದರ ಭಿನ್ನತೆಗಾಗಿ ಸಾಹಿತ್ಯಲೋಕದಲ್ಲಿ ಬೆರಗು ಮೂಡಿಸಿತ್ತು. ಸಾಂಪ್ರದಾಯಕ ಸಾಹಿತ್ಯದ ಹಾಗೂ ಸಾಹಿತ್ಯ ವಿಮರ್ಶೆಯ ಯಾವುದೇ ಮಾನದಂಡಗಳಿಗೂ ಒಗ್ಗದ ಈ ಕಾದಂಬರಿ ಹೊಸದೊಂದು ಸಾಹಿತ್ಯಕ ಆಯಾಮವನ್ನೇ ತೆರೆದಿಟ್ಟಿತ್ತು. ಕನ್ನಡ ರಂಗಭೂಮಿ ಕತಾಕಥಿತ ಚೌಕಟ್ಟಿನ ನಾಟಕಗಳ ಪೊರೆಯನ್ನು ಕಳಚಿಕೊಂಡಂತೆ "ಮಲೆಗಳಲಿ ಮದುಮಗಳು" ನಾಟಕ ಮೂಡಿ ಬಂದಿದೆ. ಮೊದಲೇ ನಿರ್ದಿಷ್ಟ ಮಾನದಂಡಗಳೇ ಇಲ್ಲದ ರಂಗವಿಮರ್ಶಾ ಪ್ರಕಾರಕ್ಕೆ ಯಾವ ಮಾನದಂಡಗಳನ್ನಿಟ್ಟುಕೊಂಡು ಈ ಮೆಗಾ ನಾಟಕವನ್ನು ವಿಮರ್ಶಿಸಬೇಕೆನ್ನುವುದೇ ಒಂದು ಸವಾಲಿನ ಕೆಲಸವಾಗಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ಮಲೆನಾಡಿನ ತೀರ್ಥಹಳ್ಳಿಯ ಸುತ್ತಮುತ್ತಲ ಗ್ರಾಮಪ್ರದೇಶದಲ್ಲಿ ನಡೆಯುವ ಸಾಮಾಜಿಕ ಸ್ಥಿತ್ಯಂತರಗಳನ್ನು ಕಟ್ಟಿಕೊಡುವ 'ಮಲೆಗಳಲಿ ಮದುಮಗಳು' ನಾಟಕವು ನೈತಿಕತೆ–ಅನೈತಿಕತೆ, ಧಾರ್ಮಿಕ ಹೇರಿಕೆ,

ನಾಗರೀಕತೆಯ ದುಷ್ಪರಿಣಾಮ, ಮನುಷ್ಯನ ಸಣ್ಣತನ, ಸ್ವಾರ್ಥ, ದೌರ್ಬಲ್ಯಗಳು ಹಾಗೂ ಶೋಷಣೆಯ ವಿವಿಧ ಆಯಾಮಗಳನ್ನು ಅನಾವರಣಗೊಳಿಸುತ್ತದೆ. "ಇಡೀ ಕಥಾನಕದಲ್ಲಿ ಕುವೆಂಪುರವರ ಜೀವನ ಪ್ರೀತಿ, ಸಾಮಾಜಿಕ ಒಳನೋಟ, ಪ್ರಗತಿಪರ ನಿಲುವು ಮತ್ತು ಪ್ರೀತಿಯ ಕಡೆಗೆ ಒಲವುಗಳು ಬಿಚ್ಚಿಕೊಳ್ಳುತ್ತವೆ. ಅವುಗಳನ್ನು ನವಿರಾದ ಹಾಸ್ಯದೊಂದಿಗೆ ನಿರೂಪಿಸಿರುವ ಕ್ರಮ ಅಚ್ಚರಿ ಹುಟ್ಟಿಸುತ್ತದೆ. ಒಂದು ನಿರ್ದಿಷ್ಟ ಕಾಲಘಟ್ಟದ ಜನಜೀವನದ ಜೀವನ ದರ್ಶನವನ್ನು ಈ 'ಮಲೆಗಳಲಿ ಮದುಮಗಳು' ಮಾಡಿಕೊಡುತ್ತದೆ. ಇಡೀ ನಾಟಕ ನಿರೂಪಣಾ ಪ್ರಧಾನವಾಗಿದ್ದು ಕಥಾನಕವನ್ನು ಹೇಳಲು ಬಳಸಿದ ನಿರೂಪಣಾ ವಿಧಾನವೇ ಈ ನಾಟಕದ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ. ಪ್ರತಿ ಪಾತ್ರ ಸೃಷ್ಟಿ ಮತ್ತು ಪಾತ್ರಪೋಷಣೆಗಳು ಈ ನಾಟಕದಲ್ಲಿ ವಿಶೇಷತೆಯನ್ನು ಕಟ್ಟಿಕೊಟ್ಟಿವೆ. ಇಲ್ಲಿ ನಾಯಕ ನಾಯಕರಿಲ್ಲ, ಪ್ರಮುಖ ಎನ್ನಿಸುವ ಪಾತ್ರಗಳೂ ಇಲ್ಲ. ನಗಣ್ಯ ಪಾತ್ರಗಳನ್ನಿಟ್ಟುಕೊಂಡು ಕಥೆ ಕಟ್ಟುವ ರೀತಿ ಮತ್ತು ಅದು ಪ್ರೇಕ್ಷಕರ ಮೇಲೆ ಮಾಡಿದ ಪರಿಣಾಮ ಈ ನಾಟಕದ ಬಹು ಮುಖ್ಯ ಅಂಶಗಳಾಗಿವೆ."[೨೮] ಒಂದು ಕಡೆ ಕೂತು ಒಂದು ಗ್ರಾಮದ ಆಗುಹೋಗುಗಳನ್ನು ಜೀವಂತವಾಗಿ ನೋಡಿ ಆನಂದಿಸಬಹುದಾದ ಅನುಭೂತಿಯನ್ನು ಈ ನಾಟಕ ಪ್ರೇಕ್ಷಕರಿಗೆ ನೀಡುವ ಮೂಲಕ ಕನ್ನಡ ರಂಗಭೂಮಿಯ ಹೊಸ ಸಾಧ್ಯತೆಗಳನ್ನು ತೆರೆದಿಟ್ಟಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಗ್ರಾಮೀಣ ಭಾಗದಲ್ಲಿ ಪೌರಾಣಿಕ ನಾಟಕಗಳನ್ನು ರಾತ್ರಿ ಪೂರಾ ಆಡುವ ಪರಿಕಲ್ಪನೆಯಲ್ಲಿ ಕೆ. ವೈ ನಾರಾಯಣಸ್ವಾಮಿ ಮತ್ತು ಸಿ. ಬಸವಲಿಂಗಯ್ಯ ಅವರ ಜೋಡಿ ಅದನ್ನು ಯಶಸ್ವಿಯಾಗಿ ರಂಗರೂಪಕ್ಕಿಳಿಸಿದ ಧಾಟಿಯಲ್ಲಿಯೆ ತೇಜಸ್ವಿಯವರ ಕರ್ವಾಲೋ, ಪಂಪನ ವಿಕ್ರಮಾರ್ಜುನವಿಜಯವನ್ನು ಪಂಪಭಾರತವೆಂಬ ಹೆಸರಿನಲ್ಲಿ ರಂಗರೂಪಕ್ಕೆ ಅಳವಡಿಸಲಾಗಿದೆ. ಈ ಪರಿಣತಿಯು ಇನ್ನಷ್ಟು ಮುಖ್ಯ. ನಾಟಕಗಳ ಸಾಹಿತ್ಯಕ ಗುಣಗಳನ್ನು ಕುರಿತಂತೆ ಮಾತ್ರ ಬರೆಯುವಾಗಲೂ ಆ ಕೃತಿಗಳ ಒಳಗಡೆಯೇ ಇರುವ 'ನಾಟಕೀಯತೆ'ಯ ಹುಡುಕಾಟವು ಮುಖ್ಯವಾಗುತ್ತದೆ. ಇನ್ನೊಂದು ಅಂಶವೆಂದರೆ, ಹಲವು ಪ್ರಕಾರಗಳಲ್ಲಿ ಬರೆಯುತ್ತಿರುವ ಲೇಖಕನು 'ಪ್ರಕಾರ ಸಂಕರ' ಮಾಡುವುದರಿಂದ ಒಳ್ಳೆಯದೋ ಕೆಟ್ಟದ್ದೋ ಆಗುತ್ತಿರುತ್ತದೆ. ಕಂಬಾರ, ಲಂಕೇಶ, ಶಿವಪ್ರಕಾಶ್ ಮುಂತಾದವರ ಹಾಗೆಯೇ ಮುಖ್ಯವಾಗಿ ಕವಿಯಾದ ವೆಂಕಟೇಶಮೂರ್ತಿಯವರ ಹಲವು ಬಗೆಯ ನಾಟಕಗಳನ್ನು ಅಭ್ಯಾಸ ಮಾಡುವಾಗ ಕೆಲವು ವಿಧಾನಗಳನ್ನು ರೂಪಿಸಿಕೊಳ್ಳುವುದು ಕಡ್ಡಾಯವಾಗುತ್ತದೆ.

ಜಾನಪದ ಸಾಹಿತ್ಯ ವಿಮರ್ಶೆ

ಕಳೆದ ದಶಕದಲ್ಲಿ ತಳಸಮುದಾಯಗಳ ಬಗೆಗಿನ ಅಧ್ಯಯನ ಆರಂಭವಾಗಿದ್ದರಿಂದ ಜನಪದರ ಸಾಹಿತ್ಯ ಮತ್ತು ಆಚರಣೆಗಳನ್ನು ಗಂಭೀರವಾಗಿ ಅಧ್ಯಯನ ನಡೆಸಲಾಗಿದೆ. ಈ ದಿಶೆಯಲ್ಲಿ ಎಮ್. ಫಿಲ್., ಪಿಎಚ್. ಡಿ. ಗಳ ಅಧ್ಯಯನವೇ ಗಂಭೀರವಾಗಿ ನಡೆದಿದೆ.

ಹೊಸತಲೆಮಾರಿನ ವಿಮರ್ಶಕರಲ್ಲಿ ಜನಪದ ಸಾಹಿತ್ಯ ಮತ್ತು ಪರಂಪರೆಯ ಬಗ್ಗೆ ಚಿಂತನೆ ನಡೆಸುತ್ತಿರುವ ಹಲವಾರು ಜನ ವಿಮರ್ಶಕರಿದ್ದಾರೆ. ಕಳೆದ ದಶಕದಲ್ಲಿ ಮುಖ್ಯವಾಗಿ ಜನಪದ ಸಾಹಿತ್ಯವನ್ನು ಪುನರ್ ವ್ಯಾಖ್ಯಾನ, ಪುನರ್ ವಿಶ್ಲೇಷಣೆ ಮಾಡುವ ಮತ್ತು ಸಾಹಿತ್ಯದ ವಿಶ್ಲೇಷಣೆಗಿಂತ ಜನಪದ ಸಿದ್ಧಾಂತಗಳ ಮೇಲೆ, ಕೆಲವು ಜನಪದ ಆಚರಣ ಲೋಕಗಳ ಮೇಲೆ, ಅದರ ಆಧುನಿಕ ರೂಪಾಂತರಗಳ ಮೇಲೆ ಹೊಸತರಹದ ಚರ್ಚೆಗಳು ನಡೆದಿವೆ. ಆದರೆ ಸಾಹಿತ್ಯ ಕೃತಿಗಳ ವಿಶ್ಲೇಷಣೆಯು ಕಡಿಮೆ.

ಒಮ್ಮೊಮ್ಮೆ ಜನಪದ ಸಾಹಿತ್ಯದ ಬಗ್ಗೆ ಈ ಗಮನ ಕಡಿಮೆಯಾಗಲು ಸಾಂಸ್ಕೃತಿಕ ವಿಮರ್ಶೆಯ ಹೆಸರಲ್ಲಿ ಶುರುವಾಗಿರುವ ವಿಮರ್ಶನ ಮಾದರಿಯೂ ಒಂದು ಕಾರಣವೆನ್ನಬಹುದು. ಇದು ಸಾಹಿತ್ಯದ ಚಾರಿತ್ರಿಕ ವಿಶ್ಲೇಷಣೆಯ ಬಗ್ಗೆ ಗಮನ ಕೊಡುವಷ್ಟು ಅದರ ಭಾಷಿಕ ವಿನ್ಯಾಸದ ಮೇಲೆ, ಅದರ ಕಲಾತ್ಮಕತೆಯ ಮೇಲೆ ಗಮನ ಕೊಡುವುದಿಲ್ಲ. ಆದ್ದರಿಂದ ಜನಪದ ಸಾಹಿತ್ಯವನ್ನು ಸಾಹಿತ್ಯವಾಗಿಯೂ ನೋಡುವ ದೃಷ್ಟಿಕೋನಗಳು ಜರೂರಾಗಿ ತೊಡಗಿಕೊಳ್ಳುವ ಅಗತ್ಯ ಕಾಣುವುದು. ಅನೇಕ ಸಲ ಜನಪದ ಹಿನ್ನೆಲೆಯವರಿಗೆ, ಅವರಿಗಿರುವ ಪಠ್ಯಕ್ರಮದ ಕಾರಣದಿಂದಲೊ ಏನೊ, ಅದರ ಮಾನವಶಾಸ್ತ್ರೀಯ ಆಯಾಮದ ಬಗ್ಗೆ ಹೆಚ್ಚು ತುಡಿತವಿರುತ್ತದೆ. ಕರ್ನಾಟಕದಲ್ಲಿ ಜನಪದ ಅಧ್ಯಯನಗಳಿಗೆ ಸಂಬಂಧಿಸಿದಂತೆ ಒಂದು ವಿಚಿತ್ರ ಸನ್ನಿವೇಶವಿದೆ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಜನಪದ ಅಧ್ಯಯನದ ಕೋರ್ಸನ್ನು ಅದರಿಂದ ಪದವಿ ಪಡೆದವರಿಗೆ ನೌಕರಿಯ ಅವಕಾಶಗಳು ಕಡಿಮೆಯಾಗಿವೆ ಎಂಬ ಕಾರಣಕ್ಕಾಗಿ ಮುಚ್ಚಲಾಗಿದೆ. ಆದರೆ ಇದೇ ಹೊತ್ತಲ್ಲಿ ಜಾನಪದ ಅಧ್ಯಯನಗಳಿಗೆಂದು ಹೊಸ ವಿಶ್ವವಿದ್ಯಾಲಯವು ಆರಂಭವಾಗಿದೆ.

ಮುಖ್ಯ ಅಧ್ಯಯನಗಳನ್ನು ಗಮನಿಸುವುದಾದರೆ, ಜಾನಪದ ಹಿನ್ನೆಲೆಯಲ್ಲಿ ಶರಣ ಚಳವಳಿಯನ್ನು ವಿಶ್ಲೇಷಿಸುವ ಪ್ರಯತ್ನ ನಡೆದಿದೆ. ವಚನಗಳು ಹನ್ನೆರಡನೇ ಶತಮಾನದ ಬಹುದೊಡ್ಡ ಸಾಹಿತ್ಯಿಕ ಮತ್ತು ಸಾಮಾಜಿಕ ಕ್ರಾಂತಿ. ಇದರ ಬಗ್ಗೆ ಅಂದಿನಿಂದ ಇಂದಿನವರೆಗೂ ಅನೇಕಾನೇಕ ಬರೆಹದ ಇತಿಹಾಸಗಳು ದೊರೆಯುತ್ತವೆ. ಈ ಇತಿಹಾಸಗಳೆಲ್ಲ ಶರಣರು ಸಮಾನತೆಯ ಸಮಾಜವನ್ನು ಕಟ್ಟಲು ಪ್ರಯತ್ನಿಸಿದ್ದನ್ನು, ಆಗಿನ ಕಲ್ಯಾಣ ಪಟ್ಟಣದ ಆದರ್ಶ ಗುಣಲಕ್ಷಣಗಳನ್ನು ಹಾಗೂ ಆ ಚಳುವಳಿಯ ನಾಯಕರಾದ ಬಸವಣ್ಣ ಮೊದಲಾದ ಶರಣರ ನಡುವಿನ ಅನ್ಯೋನ್ಯ ಸಂಬಂಧಗಳನ್ನು ದಾಖಲಿಸಿವೆ. ಆದರೆ ಇದರ ಬಗ್ಗೆ ಮೌಖಿಕ ಕಥನಗಳಲ್ಲಿ ದೊರೆಯುವ ಮಾಹಿತಿ ತೀರಾ ಭಿನ್ನವೆನಿಸುತ್ತದೆ. ಈ ಬಗ್ಗೆ ಪ್ರಸ್ತಾಪವಿರುವ ಮೌಖಿಕ ಕಥನಗಳಲ್ಲಿ ಮಂಟೇಸ್ವಾಮಿ ಜನಪದ ಮಹಾಕಾವ್ಯ ಗಮನಾರ್ಹವಾದುದು. ಆ ಕಾವ್ಯದಲ್ಲಿ ಬರುವ ವಿವರಗಳನ್ನು ಮುಂದಿನಂತೆ ಸಂಗ್ರಹಿಸಬಹುದು.

ಮಂಟೇಸ್ವಾಮಿ ಹನ್ನೆರಡನೇ ಶತಮಾನದಲ್ಲಿದ್ದ ಕೆಳವರ್ಗದ ಶಿವಶರಣ. ಬಸವಣ್ಣನ ಕಾಲದಲ್ಲೇ ಉಳುಕಾಗಿದ್ದ ಕಲ್ಯಾಣ ಪಟ್ಟಣದ ಶರಣ ಸಮೂಹವನ್ನು ತಿದ್ದಿ ಸರಿಪಡಿಸಲು

ಕಲ್ಯಾಣ ಪಟ್ಟಣಕ್ಕೆ ಈತ ಹೊರಡುತ್ತಾನೆ. ಕಲ್ಯಾಣದಲ್ಲಿ ದಾಸೋಹಕ್ಕೆ ಮೊದಲು ಶುಭ್ರವಾಗಿರುವ ಮಹಾತ್ಮರು, ಶರಣರನ್ನು ಬಿಡು ಅನಂತರ ರೋಗಿ, ಭಿಕ್ಷುಕರನ್ನು ಬಿಡಬೇಕೆಂದು ಬಸವಣ್ಣನ ಆಜ್ಞೆಯಾಗಿರುತ್ತದೆ. ಇದನ್ನು ಮನಗಂಡ ಮಂಟೇಸ್ವಾಮಿ ಕುಷ್ಠರೋಗಿಯ ವೇಷಧಾರಿಯಾಗಿ ಕಲ್ಯಾಣ ಪಟ್ಟಣದ ಬಾಗಿಲಿಗೆ ಬರುತ್ತಾನೆ. ಬಾಗಿಲಲ್ಲಿದ್ದ ಕಟುಗರ ಸಂಗಯ್ಯ ಎನ್ನುವ ವ್ಯಕ್ತಿ ಮಂಟೇಸ್ವಾಮಿಯನ್ನು ತಡೆದು ನಿಲ್ಲಿಸುತ್ತಾನೆ. ಇದರಿಂದ ಕೋಪಗೊಂಡ ಮಂಟೇಸ್ವಾಮಿ ಬಸವಣ್ಣ ಮತ್ತು ನೀಲಾಂಬಿಕೆಯರಿಗೆ ಜ್ಞಾನೋದಯ ಮಾಡಿಸಿ, ಬಾಗಿಲಿಗೆ ನಮಗಿಂತ ಬಹುದೊಡ್ಡ ಶರಣ ಬಂದಿದ್ದಾನೆಂದು ತಿಳಿಯುವಂತೆ ಮಾಡುತ್ತಾನೆ. ಈ ವಿಷಯ ತಿಳಿದ ಬಸವಣ್ಣ–ನೀಲಾಂಬಿಕೆ ಅವರು ಬಾಗಿಲಿಗೆ ದಾಪಿಸುತ್ತಾರೆ. ಅಷ್ಟೊತ್ತಿಗಾಗಲೇ ಮಂಟೇಸ್ವಾಮಿ ಹರಳಯ್ಯನ ತಿಪ್ಪೇಗುಂಡಿಯಲ್ಲಿ ಬಿದ್ದಿರುತ್ತಾನೆ. ಅದನ್ನು ಕಂಡ ಬಸವ ದಂಪತಿಗಳು ಸ್ವಾಮಿಯನ್ನು ಕೈ ಹಿಡಿದೆತ್ತಲು ಕೈ, ಕಾಲಿಡಿದೆತ್ತಲು ಕಾಲು, ರುಂಡವಿಡಿದೆತ್ತಲು ರುಂಡ ಕಿತ್ತು ಬರುತ್ತವೆ. ಅವುಗಳನ್ನೆಲ್ಲಾ ಪೊಟ್ಟಣ ರೀತಿ ಕಟ್ಟಿ ಹೊತ್ತು ತರುತ್ತಾರೆ. ಸ್ವಾಮಿಯ ಪವಾಡ ಪರಿಣಾಮದಿಂದ ಅವರು ಹೊತ್ತು ತರುವ ಆ ದೇಹದ ಭಾಗಗಳು ನೋಡುವ ಶರಣರಿಗೆ ಹೆಂಡದ ಗಡಿಗೆ, ಮಾಂಸದ ಪೊಟ್ಟಣದ ರೀತಿ ಕಾಣಲಾರಂಭಿಸುತ್ತವೆ. ಇಂತಹ ದೃಶ್ಯವನ್ನು ನೋಡಿದ ಕಲ್ಯಾಣದ ಮೇಲ್ವರ್ಗದ ಶರಣರು ನಾವು ಮತ್ತು ನಮ್ಮ ಲಿಂಗ ಬತ್ತಗೆಟ್ಟಂತಾಯಿತು ಎಂದು ಕಲ್ಯಾಣದಿಂದ ಓಡುತ್ತಾರೆ. ದಲಿತ ಶರಣರು ಮಾತ್ರ ಅಲ್ಲೇ ಇದ್ದರು. ಆಗ ಸ್ವಾಮಿ ಬಸವಣ್ಣನಿಗೆ ಬುದ್ಧಿವಾದ ಹೇಳುತ್ತಾ ನಿಜವಾದ ಶರಣರೆಂದರೆ ಇವರು (ದಲಿತರು). ಓಡಿ ಹೋದವರೆಲ್ಲ ಕಳ್ಳ ಜಂಗಮರು. ಉಳಿದವರನ್ನೇ ಶರಣರೆಂದು ನಂಬಿ ಗುರುಮಠ ಬೆಳೆಸು ಎನ್ನುವ ಮಾತುಗಳನ್ನು ಹೇಳುತ್ತಾನೆ.

ಬಸವಣ್ಣನವರ ಸಮಾನತೆಯು ಒಳಗೇನೆ ಎಂತಹ ದ್ವಂದ್ವಾತ್ಮಕವಾಗಿತ್ತು, ಹಾಗೆಯೇ ಎಂಥ ವೇಷಧಾರಿ ಜಂಗಮರು ಕಲ್ಯಾಣದಲ್ಲಿದ್ದರು, ಶಿವಶರಣರಲ್ಲಿದ್ದ ತಾರತಮ್ಯ ಮನೋಭಾವ ಯಾವ ತೆರನಾದುದು ಎನ್ನುವ ವಿಷಯಗಳನ್ನು ಈ ಕಾವ್ಯ ತಿಳಿಸುತ್ತದೆ. ಶಿವಶರಣರ ಈ ಜಾತಿ ತಾರತಮ್ಯ ನೀತಿಯಿಂದಾಗಿ ಕೆಳವರ್ಗದ ಶಿವಶರಣರಿಗೆ ಸರಿಯಾದ ಸ್ಥಾನ ಸಿಕ್ಕದೇ ಇದ್ದ ಕಾರಣದಿಂದಾಗಿ ತುಂಬಾ ಪ್ರಜ್ಞಾವಂತರಾದ ಮಂಟೇಸ್ವಾಮಿಯಂತಹ ಶರಣರು ಬಸವಣ್ಣನೂ ಸೇರಿದಂತೆ ಮೇಲ್ವರ್ಗದ ಶರಣರ ವಿರುದ್ಧ ದಂಗೆಯೆದ್ದು ಪರಿಸ್ಥಿತಿ ಸುಧಾರಿಸಿದ ಈ ಅಂಶ ಬಹುಶಃ ಬರಹದ ಮೂಲಕ ದಾಖಲಾಗುತ್ತ ಬಂದಿರುವ ಯಾವ ಇತಿಹಾಸದಲ್ಲೂ ಸಿಗಲಾರದು. ಆದ್ದರಿಂದಲೇ “ಜಾನಪದ ಮತ್ತು ಇತಿಹಾಸದ ಸಂಬಂಧಗಳನ್ನು ಹೇಳುವಾಗ ಇತಿಹಾಸ ಎಲ್ಲಿ ಸೋಲುತ್ತದೆಯೋ ಅಲ್ಲಿ ಜಾನಪದ ನೆರವಿಗೆ ಬರುತ್ತದೆ’ ಎನ್ನುವ ವಿದ್ವಾಂಸರ ಮಾತು ಸತ್ಯಕ್ಕೆ ಹತ್ತಿರವಾದುದು. ಒಂದು ಕಾಲದ ವಸ್ತುನಿಷ್ಠ ಇತಿಹಾಸವನ್ನು ತಿಳಿಯಬೇಕಾದರೆ ಬರಹದ ಇತಿಹಾಸದ ಜೊತೆಗೆ ಅದೇ ಕಾಲದಲ್ಲಿ ರಚನೆಯಾದ ಮೌಖಿಕ ಇತಿಹಾಸವನ್ನು ಗಮನಿಸಬೇಕಾಗುತ್ತದೆ. ಇಲ್ಲವಾದರೆ ಏಕಪಕ್ಷಿಯ ನಿಲುವುಗಳು ಮಾತ್ರ ತಿಳಿಯುತ್ತವೆ. ಈವರೆಗೂ ರಚನೆಯಾಗಿರುವ ಇತಿಹಾಸಗಳ ರಚನೆಯೇ ಇದಕ್ಕೆ ಸಾಕ್ಷಿ.”[3] ಬಸವಣ್ಣ

ಎಲ್ಲಾ ಶರಣರನ್ನು ತಿದ್ದಿ ಬೆಳೆಸಿದ ಸುದ್ದಿ ನೀಡುವ ಇತಿಹಾಸ ಎಂದೂ ಕೂಡ ದಲಿತ ಶರಣನೊಬ್ಬ ಬಸವಣ್ಣನನ್ನು ತಿದ್ದಿದ ಸುದ್ದಿಯನ್ನು ನೀಡಲಾರದು. ಅಂತಹ ಅದ್ಭುತ ಕೆಲಸ ಮೌಖಿಕ ಇತಿಹಾಸದಿಂದಲೇ ಸಾಧ್ಯ. ಇದನ್ನು ಮನಗಂಡಿರುವ ಅನೇಕ ಇತಿಹಾಸಕಾರರು ಮೌಖಿಕ ಚರಿತ್ರೆಯ ಕಡೆಗೆ ಗಮನ ನೀಡಿರುವುದು ಸ್ವಾಗತಾರ್ಹ.

ಮೌಖಿಕ ಇತಿಹಾಸ, ಇತಿಹಾಸ ರಚನೆಗೆ ತುಂಬಾ ಸಹಕಾರಿ, ಅನಿವಾರ್ಯ ಕೂಡ ಎಂಬುದು ಸತ್ಯ. ಆದರೆ ಮೌಖಿಕ ಇತಿಹಾಸವನ್ನು ಇತಿಹಾಸ ರಚನೆಗೆ ಬಳಸಿಕೊಳ್ಳುವ ವಿದ್ವಾಂಸ ತುಂಬಾ ಪ್ರಜ್ಞಾವಂತನಿರಬೇಕು. ಕಾರಣ ಮೌಖಿಕ ಇತಿಹಾಸದಲ್ಲಿ ಅನೇಕ ಘಟನೆಗಳು ಐತಿಹ್ಯ–ಪುರಾಣಗಳಾಗಿ ಮಾರ್ಪಾಟಾಗಿರುತ್ತವೆ. ಈ ಐತಿಹ್ಯ–ಪುರಾಣಗಳಿಂದ ಐತಿಹಾಸಿಕ ಅಂಶಗಳನ್ನು ಬಿಡಿಸಿಕೊಳ್ಳುವ ಕ್ರಿಯೆ ತುಂಬಾ ಕಷ್ಟಕರ. ಆದ್ದರಿಂದ ಮೌಖಿಕ ಇತಿಹಾಸ ವಸ್ತುನಿಷ್ಠ ಇತಿಹಾಸದ ರಚನೆಗೆ ತುಂಬಾ ಸಹಕಾರಿ, ವಿದ್ವಾಂಸ ಮೌಖಿಕ ಇತಿಹಾಸವನ್ನು ಅರ್ಥಮಾಡಿಕೊಳ್ಳುವಾಗ ಸ್ವಲ್ಪ ಎಡವಿದ್ದೇ ಆದಲ್ಲಿ ಅಷ್ಟೇ ಅಪಾಯಕಾರಿ.

"ಸಾಹಿತ್ಯ ವಿಮರ್ಶೆಯ ಪ್ರಧಾನಧಾರೆಯು ಎಷ್ಟೋ ಶತಮಾನಗಳ ಕಾಲ ಅವುಗಳ ಅಸ್ತಿತ್ವವನ್ನು ಗುರುತಿಸಲೂ ಇಲ್ಲ, ಅವುಗಳನ್ನೂ ಮೆಚ್ಚಿಕೊಳ್ಳಲೂ ಇಲ್ಲ. ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ ಪ್ರಾರಂಭವಾದ ಜನಪದ ಸಾಹಿತ್ಯದ ಸಂಕಲನ ಕಾರ್ಯವು, ಭೂಮಾಲಿಕ ವರ್ಗಗಳಲ್ಲಿ ಪ್ರಚಲಿತವಾಗಿದ್ದ ಜನಪದಗೀತೆಗಳು ಮತ್ತು ಲಾವಣಿಗಳಿಗೆ ಸೀಮಿತವಾಗಿದ್ದವು. ಎಪ್ಪತ್ತರ ದಶಕದ ಮೊದಲ ವರ್ಷಗಳಲ್ಲಿ ಪ್ರಕಟವಾದ 'ಮಲೆ ಮಾದೇಶ್ವರ ಕಾವ್ಯ' ಮತ್ತು 'ಮಂಟೇಸ್ವಾಮಿ ಕಾವ್ಯ'ಗಳು ಕೂಡ ಸಾಹಿತ್ಯಕ ಯಾಜಮಾನ್ಯದ ಧೋರಣೆಗಳಲ್ಲಿ ಹೆಚ್ಚಿನ ಬದಲಾವಣೆಯನ್ನು ತರಲಿಲ್ಲ. ಮುಂದಿನ ಇಪ್ಪತ್ತು ವರ್ಷಗಳ ಕಾಲ ಅವುಗಳನ್ನು ಮಾನವಶಾಸ್ತ್ರದ ಕುತೂಹಲವನ್ನು ತಣಿಸುವ ಸಾಮಗ್ರಿಯೆಂದು ಬಗೆಯಲಾಯಿತು."[೩೦] ಅವು ಜಾನಪದ ಅಧ್ಯಯನಗಳ ವ್ಯಾಪ್ತಿಯಿಂದ ಹೊರಗೆ ಬರಲಿಲ್ಲ. ಈ ಮೌಖಿಕ ಮಹಾಕಾವ್ಯಗಳನ್ನು ದಲಿತರು ಮತ್ತು ಅಂಚಿಗೆ ತಳ್ಳಲ್ಪಟ್ಟ ಜಾತಿ/ಸಮುದಾಯಗಳವರು ಹಾಡುತ್ತಿದ್ದರು. ಅವು ಅನುಭವಿಸಿದ ನಿರ್ಲಕ್ಷ್ಯಕ್ಕೆ ಈ ಸಂಗತಿಯೂ ಕಾರಣ. ಫಿನ್ ಲ್ಯಾಂಡಿನ ಮೌಖಿಕ ಮಹಾಕಾವ್ಯವಾದ 'ಕಾಲೇವಾಲಾ'ವನ್ನು ಅಧ್ಯಯನ ಮಾಡುವ ಅವಕಾಶ ಸಿಕ್ಕಿದ್ದು ಕೂಡ ಮಹತ್ವದ ಬದಲಾವಣೆಗೆ ಕಾರಣವಾಗಿರಬಹುದು.

ಆದರೆ, ಕಳೆದ ಕೆಲವು ದಶಕಗಳಲ್ಲಿ ಕರ್ನಾಟಕದಲ್ಲಿ ನಡೆದ ಸಾಮಾಜಿಕ–ರಾಜಕೀಯ ಬದಲಾವಣೆಗಳು, ಅಕಡೆಮಿಕ್ ಅಧ್ಯಯನದ ಸ್ವರೂಪ ಮತ್ತು ಆಯ್ಕೆಗಳನ್ನು ಸಂಪೂರ್ಣವಾಗಿ ಪರಿವರ್ತಿಸಿವೆ. ಈಗ ಜಾನಪದ ಮಹಾಕಾವ್ಯಗಳನ್ನು ಇದುವರೆಗೆ ಮನ್ನಣೆ ಪಡೆದಿದ್ದ ಶ್ರೇಷ್ಠ ಸಾಹಿತ್ಯಕೃತಿಗಳಿಗೆ ಸರಿಸಮನಾಗಿ ಪರಿಗಣಿಸಲಾಗುತ್ತಿದೆ. ಸಂಸ್ಕೃತಿವಿಮರ್ಶೆಯ ದಿಕ್ಕಿನಲ್ಲಿ ಚಲಿಸುತ್ತಿರುವ ವಿಮರ್ಶಕರಿಗೂ ಇವು ಅಧ್ಯಯನದ ಅಮೂಲ್ಯ ಆಕರಗಳಾಗಿ ಕಂಡಿವೆ. ಈಗ ಸಾಹಿತ್ಯವೆಂಬ ಕಲೆಯನ್ನು ಕುರಿತ ವಿಚಾರಗಳು ಬಹಳ ವ್ಯಾಪಕವಾದ ಹಿನ್ನೆಲೆಯನ್ನು ಹೊಂದಿವೆ. 'ಪ್ರಮಾಣ/ಶಿಷ್ಟ ಭಾಷೆ'ಯ

ಚೌಕಟ್ಟುಗಳನ್ನು ಮೀರುವುದು ಕೂಡ ಗುಣವೇ ಇರಬಹುದೆಂಬ ನಿಲುವು ಈಗ ಮಾನ್ಯವಾಗಿದೆ.

ಜನಪದ ಮಹಾಕಾವ್ಯಗಳು ಮೌಖಿಕವಾಗಿರುವುದರಿಂದ, ಅವುಗಳನ್ನು ಲಿಖಿತ ರೂಪದಲ್ಲಿ ಪ್ರಕಟಿಸಿದಾಗ ಕೆಲವು ಪರಿಮಿತಿಗಳು ಏರ್ಪಡುತ್ತವೆ. ಅವುಗಳ ಚಲನಶೀಲಗುಣವು ಇಲ್ಲವಾಗುತ್ತದೆ. ಅಂತೆಯೇ ಗೇಯತೆಯೂ ಕೂಡ ಊಹೆಯ ವಸ್ತುವಾಗಿಬಿಡುತ್ತದೆ. ಈ ಕಾವ್ಯಗಳ ಸಂವಹನ ಮತ್ತು ಸಂರಕ್ಷಣದ ಕೆಲಸದಲ್ಲಿ ಹಾಡುಗಾರರು–ನಿರೂಪಕರು ಮುಖ್ಯವಾದ ಪಾತ್ರ ವಹಿಸುತ್ತಾರೆ. ಅವರಿಗೆ ತಾವು ನಿರೂಪಿಸುತ್ತಿರುವ ಕಥೆಯ ಸ್ಥೂಲವಾದ ರೂಪುರೇಷೆಗಳು ತಿಳಿದಿರುತ್ತವೆ. ಹಾಗೆಯೇ ಯಾವುದೇ ಸಂದರ್ಭದಲ್ಲಿ ಬಳಸಬಹುದಾದ ಕೆಲವು ಸೂತ್ರರೂಪದ ವಿನ್ಯಾಸಗಳು ಗೊತ್ತಿರುತ್ತವೆ. ಆದ್ದರಿಂದಲೇ ಅವರು ನೀಡುವ ಪ್ರತಿಯೊಂದು ಪ್ರದರ್ಶನವೂ(ಪರ್ಫಾರ್ಮನ್ಸ್) ಹೊಸ ಪಠ್ಯವೊಂದಕ್ಕೆ ಜನ್ಮ ಕೊಡುತ್ತದೆ. ಅಲ್ಲದೆ ಪ್ರತಿಯೊಬ್ಬ ಗಾಯಕನೂ ತಾನು ಹಾಡುತ್ತಿರುವ ಕಾವ್ಯದ ತನ್ನದೇ ಆದ ಆವೃತ್ತಿಯನ್ನು ಹೊಂದಿರುತ್ತಾನೆ. ಅದು ಅವನಿಗೆ ಗುರುಪರಂಪರೆಯಿಂದ ಹರಿದು ಬಂದಿರುತ್ತದೆ. ಅವರು ಅದನ್ನು ಹಾಡುವ ಧಾರ್ಮಿಕ ಮತ್ತು ಆಚರಣಾತ್ಮಕ ಸಂದರ್ಭಗಳು ಆಯಾ ಪಠ್ಯದ ಸ್ವರೂಪವನ್ನು ನಿರ್ಧರಿಸುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಈ ಬಗೆಯ ಚಲನಶೀಲತೆ ಮತ್ತು ಪ್ರತಿಯೊಂದು ಪೀಳಿಗೆಯ ಗಾಯಕರು ಹೊಸದಾಗಿ ಸೇರಿಸುವ ವಿವರಗಳು, ಆ ಕಾವ್ಯದ ಐತಿಹಾಸಿಕತೆಯನ್ನು ಕಂಡುಕೊಳ್ಳುವ ಕೆಲಸದಲ್ಲಿ ಕೊಂಚ ಅಡ್ಡಿಯಾಗುತ್ತವೆ.

ಅನೇಕ ಜನಪದ ಕಾವ್ಯಗಳ ಅಸ್ತಿತ್ವವಿರುವುದು ಒಂದು ನಿರ್ದಿಷ್ಟ ಸಮುದಾಯದ ನಂಬಿಕೆಗಳು ಮತ್ತು ಇತಿಹಾಸದ ಚೌಕಟ್ಟಿನಲ್ಲಿ. ಅವು ಆ ಸಮುದಾಯದ ಸಂಸ್ಕೃತಿ, ಪುರಾಣ ಮತ್ತು ಅಲಿಖಿತ ಇತಿಹಾಸಗಳ ಬೃಹತ್ ಭಂಡಾರವಾಗಿರುತ್ತವೆ. ಆದ್ದರಿಂದ ಅವು ಅವರ ಅನುದಿನದ ಚಟುವಟಿಕೆಗಳನ್ನು ಧೋರಣೆಗಳನ್ನು ನಿರ್ಧರಿಸುವ ಮಾರ್ಗದರ್ಶಿಗಳಾಗಿರುತ್ತವೆ. ಆಗ ಅವುಗಳ ಸಾಹಿತ್ಯಕ ಮೌಲ್ಯವು ಕೊಂಚ ಬದಿಗೆ ಸರಿಯುತ್ತದೆ. ಈ ಕಾವ್ಯಗಳನ್ನು ಅಂತಹ ಚೌಕಟ್ಟಿನಿಂದ ಬೇರ್ಪಡಿಸಿ, ಇತರ ಸಾಹಿತ್ಯಕೃತಿಗಳ ಸಾಲಿನಲ್ಲಿ ಪರಿಶೀಲಿಸುವುದು ಅತ್ಯಗತ್ಯ. ಅವುಗಳನ್ನು ಹೀಗೆ ಸೆಕ್ಯುಲರ್ ಆಗಿ ಮಾರ್ಪಡಿಸುವುದರ ಪರಿಣಾಮ ಮತ್ತು ಪ್ರಯೋಜನಗಳನ್ನು ಕುರಿತು ವಿವರವಾಗಿ ಯೋಚಿಸಬೇಕಾಗಿದೆ.

'ಮಲೆ ಮಾದೇಶ್ವರ ಕಾವ್ಯ' ಮತ್ತು 'ಮಂಟೇಸ್ವಾಮಿ ಕಾವ್ಯ'ಗಳು, ಕರ್ನಾಟಕದ ಮುಖ್ಯವಾದ ಜನಪದ ಮಹಾಕಾವ್ಯಗಳು. ಹಾಲುಮತದ ಮಹಾಕಾವ್ಯ ಮತ್ತು ಮೈಲಾರಲಿಂಗನ ಕಾವ್ಯಗಳು ಅನುಕ್ರಮವಾಗಿ ಕುರುಬರು ಮತ್ತು ಗೊಲ್ಲರ ಸಮುದಾಯಗಳ ಜೀವನಕ್ರಮ ಮತ್ತು ಇತಿಹಾಸದ ಸುತ್ತ ರೂಪಿತವಾಗಿವೆ. ಕೃಷ್ಣಗೊಲ್ಲರ ಕಾವ್ಯ, ಜುಂಜಪ್ಪನ ಕಾವ್ಯ, ಎಲ್ಲಮ್ಮನ ಕಾವ್ಯ, ಕುಮಾರರಾಮನ ಕಾವ್ಯ ಮತ್ತು ಕರಾವಳಿ ಕರ್ನಾಟಕದ ಸಿರಿ

ಮಹಾಕಾವ್ಯಗಳು ಕರ್ನಾಟಕದ ಪ್ರಮುಖ ಜನಪದ ಮಹಾಕಾವ್ಯಗಳು. ತುಳು ಭಾಷೆಯಲ್ಲಿ ರಚಿತವಾಗಿರುವ ಪಾಡ್ದನಗಳನ್ನು ವಿಶೇಷವಾಗಿ ಹೆಸರಿಸಬೇಕು. ಸಿರಿ ಮಹಾಕಾವ್ಯವೂ ಒಂದು ಪಾಡ್ದನವೇ. ಈ ಕಾವ್ಯಗಳನ್ನು ಕನ್ನಡ ಸಾಹಿತ್ಯ ಪರಂಪರೆಯ ಪ್ರಧಾನ ಧಾರೆಯೊಳಗೆ ತರುವ ಪ್ರಯತ್ನಗಳು ನಡೆಯುತ್ತಿವೆ. ಅದರಿಂದ ಕನ್ನಡ ಸಾಹಿತ್ಯವು ಇನ್ನಷ್ಟು ಶ್ರೀಮಂತವಾಗುತ್ತದೆ

ಜನಪದರ ಸೃಷ್ಟಿಗಳಾಗಿರುವ ಮಹಾಕಾವ್ಯಗಳ ಅಧ್ಯಯನದ ಕಡೆ ಇತ್ತೀಚೆಗೆ ಹೆಚ್ಚು ಗಮನ ನೀಡಲಾಗುತ್ತಿದೆ. ನಮ್ಮ ಸಾಂಸ್ಕೃತಿಕ ಅಧ್ಯಯನಗಳು ಹಾಗೂ ಸಮಾಜಶಾಸ್ತ್ರೀಯ ಅಧ್ಯಯನಗಳು ಅಥವಾ ಜನಪದ ಆದ್ಯಯನಗಳು ಕಾಲಕಾಲಕ್ಕೆ ಬಿಕ್ಕಟ್ಟನ್ನು ಸೃಷ್ಟಿಸಿದಾಗ ಅವಕ್ಕೆ ಉತ್ತರಗಳನ್ನು ಹುಡುಕುವ ಪ್ರಕ್ರಿಯೆಯಲ್ಲಿ ಇದುವರೆಗೆ ಕೇವಲ ಶಾಸ್ತ್ರೀಯ ಆಕರಗಳನ್ನು ಮಾತ್ರ ಆಧಾರವಾಗಿಟ್ಟುಕೊಳ್ಳಲಾಗುತ್ತಿತ್ತು. ಈಗ ಈ ಕ್ರಮಕ್ಕೆ ಹೊರತಾಗಿ ಮೌಖಿಕವನ್ನು ಪರಿಗಣಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ಲಾಗಾಯ್ತಿನಿಂದಲೂ ನಮ್ಮ ಸಾಂಸ್ಕೃತಿಕ ಆಧ್ಯಯನದ ತಳಹದಿ ಯಾವಾಗಲೂ ಶಾಸ್ತ್ರೀಯವಾದದ್ದೇ. ನಂತರ ಈ ನೆಲಕ್ಕೆ ಸಂಬಂಧಿಸಿದ್ದನ್ನು ನೋಡಿದಾಗ ಮಲೆಮಾದೇಶ್ವರ, ಜುಂಜಪ್ಪ ಕಾವ್ಯ, ಅಥವಾ ಧರೆಗೆ ದೊಡ್ಡವರು ಕಾವ್ಯ, ಅಥವಾ ಜನಪದ ಮಹಾಭಾರತ, ಇತ್ಯಾದಿಗಳೆಲ್ಲಾ ಸಿಕ್ಕಿವೆ. ಆದರೆ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಇವುಗಳ ಅಧ್ಯಯನವು ಕೇವಲ ವಿದ್ವಾಂಸರ ನೆಲೆಯಲ್ಲಿ ಮಾತ್ರ ಹೆಚ್ಚು ಚರ್ಚಿತವಾಗುತ್ತಿದೆಯೇ ಹೊರತು ಅದರಾಚೆಗೆ ಅವುಗಳ ಸಾಧ್ಯತೆಯನ್ನು ನೋಡುವ ಪ್ರಯತ್ನ ಅಷ್ಟಾಗಿ ಇಲ್ಲ. ನಮ್ಮ ಪರಂಪರೆಯನ್ನು ಕಟ್ಟುವುದು ಅಥವಾ ಅರ್ಥಮಾಡಿಕೊಳ್ಳುವುದು ಎಂದರೆ ಇವನ್ನು ಶ್ರದ್ಧೆಯ ಮೂಲಕ ನೋಡುವ ಅಗತ್ಯ ಬೀಳುತ್ತದೆ. ನಮ್ಮ ಸಾಂಸ್ಕೃತಿಕ, ಪರಂಪರೆಯಲ್ಲಿ ಪ್ರತಿರೋಧದ ನೆಲೆಗಳನ್ನು ಅರ್ಥ ಮಾಡಿಕೊಳ್ಳಲು ಇವುಗಳೇ ನಮಗಿರುವ ಪ್ರಮುಖ ಆಕರಗಳು. ಅವುಗಳ ಪ್ರತಿ ವಿವರಗಳನ್ನೂ ಸಹ ಬೇರೆ ಬೇರೆ ರೀತಿಯ ಜ್ಞಾನ ಶಿಸ್ತುಗಳ ಮೂಲಕ ಕಂಡುಕೊಳ್ಳಬೇಕಾಗಿದ್ದು ಆ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ.

ಕನ್ನಡ ವಿಮರ್ಶೆಯಲ್ಲಿ, ರೂಪಕ–ಪ್ರತಿಮೆಗಳ ನೆರವಿನಿಂದ ವಿಮರ್ಶೆಯ ವಿಚಾರಗಳನ್ನು ಬೆಳೆಸುವ ಆಕರ್ಷಕವಾದ ಪದ್ಧತಿಯೊಂದು ಮೊದಲಿನಿಂದಲೂ ಇದೆ. ಅಡಿಗರ 'ಮಣ್ಣಿನ ವಾಸನೆ', ಅನಂತಮೂರ್ತಿಯವರ 'ಜಗಲಿ–ಹಿತ್ತಿಲು', ಡಿ.ಆರ್.ನಾಗರಾಜ್ ಅವರ 'ಅಮೃತ ಮತ್ತು ಗರುಡ' ಮುಂತಾದ ಉದಾಹರಣೆಗಳನ್ನು ಕೊಡಬಹುದು. ಹೀಗೆ ಮಾಡುವುದರಿಂದ ಆಲೋಚನೆಗಳು ಆಕರ್ಷಕವಾಗಿ, ಮನಸ್ಸಿಗೆ ತಲುಪುತ್ತವೆ. ಕೆಲವೊಮ್ಮೆ ಇದು ಸಂಕೀರ್ಣತೆ ಮತ್ತು 'ಬಹು ಆಯಾಮಗಳ ಗ್ರಹಿಕೆ'ಗೆ ಅಡ್ಡಿಯಾಗಬಹುದು. ಈ ಬರವಣಿಗೆಯು ವಾಗ್ಮಿಯ ಪರಿಕರಗಳನ್ನೂ ಬಳಸಿಕೊಳ್ಳುತ್ತದೆ. ಆದರೆ, ಇನ್ನೊಂದು ನೂರಕ್ಕೆ ನೂರರಷ್ಟು ಬರವಣಿಗೆಯ ಶೈಲಿ. ರೂಪಕಗಳನ್ನು ಅನುಮಾನದಿಂದ ನೋಡುವ ಅಕಡೆಮಿಕ್ ಶೈಲಿ. ಪರಿಭಾಷೆಯ ಬಳಕೆಯ ಬಗ್ಗೆ ಇವರಿಗೆ ಕಿರಿಕಿರಿ ಇಲ್ಲ. ಓದುಗರು ಅವುಗಳನ್ನು ಕಲಿಯುವುದು ಸೂಕ್ತವೆಂದೇ ಅವರ ಅನಿಸಿಕೆ.

ಅಂತಹ ಅನೇಕ ನೆರವನ್ನು ಅವರೇ ರೂಪಿಸಿಕೊಟ್ಟಿದ್ದಾರೆ. 'ಸಾಹಿತ್ಯ ವಿಮರ್ಶೆ' ಕನ್ನಡದ ಅತ್ಯುತ್ತಮ ಪ್ರವೇಶಿಕೆಗಳಲ್ಲಿ ಒಂದು. ಇವರು ಮಾತುಗಾರರಾಗಿ ಅಷ್ಟು ಪರಿಣಾಮಕಾರಿಯಾಗದೆ ಇರಬಹುದು. ಆದರೆ, ಇವರನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವುದು ಅಸಾಧ್ಯ. ರಾಮಚಂದ್ರನ್ ಅವರು ಇಂತಹ ಬರವಣಿಗೆಗೆ ಒಲಿದವರು. ಇವರಿಗೆ ನಿಷ್ಠುರತೆಯು ಸಾಧ್ಯವಾದರೂ ಆಕ್ರಮಣಶೀಲತೆಯಲ್ಲ. ಇವರೊಂದಿಗೆ ಮತ್ತು ಇವರ ಬರವಣಿಗೆಯೊಂದಿಗೆ ವಾಗ್ವಾದಗಳು ಸಾಧ್ಯ.

ಸಾಹಿತ್ಯ ಪ್ರಕಾರಗಳನ್ನು ಮುಖ್ಯವಾಗಿಟ್ಟು ಮಾಡುವ ವಿಮರ್ಶೆಯಿಂದ ಉಂಟಾಗುವ ಪ್ರಯೋಜನಗಳನ್ನು ನಾವು ಈ ಕೆಳಗಿನಂತೆ ಗ್ರಹಿಸಬಹುದು. ಮೊದಲನೆಯದಾಗಿ, ಪ್ರಕಾರ ಕೇಂದ್ರಿತ ವಿಮರ್ಶೆಯಿಂದ ಒಂದು ಬಗೆಯ ಸೂಕ್ಷ್ಮ ಓದು ಸಾಧ್ಯವಾಗುತ್ತದೆ. ಎರಡನೆಯದಾಗಿ, ಆ ಪ್ರಕಾರದ ಪರಂಪರೆಯ ಹಿನ್ನೆಲೆಯಲ್ಲಿ ಆ ಸಂದರ್ಭದ ಕೃತಿಯನ್ನಿಟ್ಟು ನೋಡಿ ಹೆಚ್ಚು ನಿಖರವಾದ ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ. ಮೂರನೆಯದಾಗಿ ಇತ್ತೀಚೆಗೆ ವಿಶ್ವವಿದ್ಯಾಲಯಗಳಲ್ಲಿ ಸಂಘಟಿತವಾಗಿ ನಡೆಯುವ ಸಂಶೋಧನೆಗಳು ಸಾಮಾನ್ಯವಾಗಿ ಒಂದೊಂದು ನಿರ್ದಿಷ್ಟ ಪ್ರಕಾರವನ್ನು ಕೇಂದ್ರೀಕರಿಸಿರುತ್ತವೆ. ಮತ್ತು ಆ ಮೂಲಕ ಈಗಾಗಲೇ ರೂಪುಗೊಂಡಿರುವ ನಿರ್ಧಿಷ್ಟ ಅಭಿಪ್ರಾಯಗಳನ್ನು ಪ್ರಶ್ನಿಸಲು ಪ್ರಯತ್ನಿಸುತ್ತವೆ. ಮತ್ತು ಕೊನೆಯದಾಗಿ ವಿಮರ್ಶೆಯನ್ನು ಅರ್ಥಶಾಸ್ತ್ರದ ಪರಿಭಾಷೆಯಲ್ಲಿ ಸೂಕ್ಷ್ಮ ಮತ್ತು ಸಮಗ್ರ ಎಂದು ವಿಂಗಡಿಸುವುದಾದರೆ ಪ್ರಕಾರ ವಿಮರ್ಶೆಯನ್ನು ಸೂಕ್ಷ್ಮ ವಿಮರ್ಶೆಯೆಂತಲೂ, ಲೇಖಕರೊಬ್ಬರ ಒಟ್ಟು ಸಾಹಿತ್ಯವನ್ನು ಕುರಿತ ವಿಮರ್ಶೆಯನ್ನು ಸಮಗ್ರ ವಿಮರ್ಶೆಯೆಂತಲೂ ಗುರುತಿಸಬಹುದು. ಮತ್ತು ಏಕಕಾಲಕ್ಕೆ ಈ ಎರಡೂ ವಿಮರ್ಶಾ ಪದ್ಧತಿಗಳು ಜಾರಿಯಲ್ಲಿರಲು ಸಾಧ್ಯವಿದೆ.

ಸಾಹಿತ್ಯ ಪ್ರಕಾರಗಳ ಜೊತೆಗೆ ಸ್ಥೂಲವಾಗಿ ಸಾಹಿತ್ಯ ಪಂಥಗಳ ಹಿನ್ನೆಲೆಯ ವಿಮರ್ಶೆಯನ್ನು ನೋಡಬಹುದು. ಕಳೆದ ಶತಮಾನದಲ್ಲಿ ಮುಖ್ಯವಾಗಿ ಚಾಲ್ತಿಗೆ ಬಂದ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ-ಬಂಡಾಯ ಸಾಹಿತ್ಯ ಪಂಥಗಳು ನಾವು ಬರೆದ ಸಾಹಿತ್ಯವನ್ನು ವಿಮರ್ಶೆಗೊಳಪಡಿಸುವ ಪರಿಯನ್ನು ಅದೇ ಪರೋಕ್ಷವಾಗಿ ಪ್ರಭಾವಿಸುತ್ತಿದ್ದವು. ಹಳೆಯ ಪ್ರಕಾರಗಳು ಎಂದಿಗೂ ಇಲ್ಲವಾಗುವುದಿಲ್ಲ. ಹೊಸ ಪ್ರಕಾರಗಳು ಹುಟ್ಟುವುದು ನಿಲ್ಲುವುದಿಲ್ಲ. ಹಾಗಾಗಿ ಈ ಪ್ರಕಾರದೃಷ್ಟಿಯು ನಿರಂತರವಾಗಿ ಇದ್ದೇ ಇರುತ್ತದೆ. ಎರಡು ಕಾರಣಗಳಿಗಾಗಿ ಪ್ರಕಾರವಿಮರ್ಶೆ ಇಂದಿಗೂ ಪ್ರಸ್ತುತವಾಗಿದೆ. ಮೊದಲನೆಯದಾಗಿ ಈ ಪ್ರಕಾರಗಳು ಐತಿಹಾಸಿಕ ವಾಸ್ತವದ ಭಾಗಗಳಾಗಿರುವುದರಿಂದ ಹಾಗೂ ಅನೇಕ ಕೃತಿಗಳು ಪ್ರಕಾರಗಳಲ್ಲಿ ಲಭ್ಯವಿರುವುದರಿಂದ ಅವುಗಳನ್ನು ಕಡೆಗಣಿಸುವಂತಿಲ್ಲ.

ಅಡಿ ಟಿಪ್ಪಣಿಗಳು

೧. ಆಮೂರ ಜಿ. ಎಸ್., ಆಧುನಿಕ ಕನ್ನಡ ವಿಮರ್ಶೆ, ಸಪ್ನ ಬುಕ್ ಹೌಸ್, ಬೆಂಗಳೂರು-೨೦೦೮, ಪುಟ-೦೩
೨. ಕೇಶವಶರ್ಮ ಕೆ. : ನೀಲನಕ್ಷೆ (ಕನ್ನಡ ವಿಮರ್ಶೆ: ಇಟ್ಟ ಹೆಜ್ಜೆ ತೊಟ್ಟ ರೂಪ), ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೨, ಪುಟ - ೫೪
೩. ಶೇಷಗಿರಿ ರಾವ್ ಎಲ್ ಎಸ್. : ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಬಸವನ ಗುಡಿ, ಬೆಂಗಳೂರು ೨೦೧೧, ಪುಟ - ೮೩
೪. ನಾಗಭೂಷಣ ಡಿ. ಎಸ್., (ಲೇಖನ) ಕನ್ನಡ ಸಾಹಿತ್ಯ ವಿಮರ್ಶೆ: ಒಂದು ತಾತ್ವಿಕ ನೋಟ ೨೦೦೧- ೨೦೧೧, ಅರುಹು - ಕುರುಹು, ಸಂಚಿಕೆ ೧೩, ಏಪ್ರಿಲ್ / ಜೂನ್ ೨೦೧೨, ಪುಟ - ೯ ಮತ್ತು ೧೦
೫. ಪುಟ್ಟಯ್ಯ ಬಿ. ಎಂ., ಜೈಮಿನಿ ಭಾರತ 'ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿವಿ, ಹಂಪಿ, ೨೦೦೯, ಮುನ್ನುಡಿ,
೬. ರಾಮಚಂದ್ರನ್ ಸಿ. ಎನ್., ಬಯಲ ರೂಪ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩, ಪುಟ - ೧೩೨
೭. ಪುಟ್ಟಯ್ಯ ಬಿ. ಎಂ., ಜೈಮಿನಿ ಭಾರತ : ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿವಿ, ಹಂಪಿ, ೨೦೦೯, ಮುನ್ನುಡಿ,
೮. ರಹಮತ್ ತರೀಕೆರೆ (ಸಂ), ಹೊಸ ತಲೆಮಾರಿನ ತಲ್ಲಣ, ಕನ್ನಡ ವಿವಿ, ಹಂಪಿ, ೨೦೦೮, ಪುಟ - ೧೬೯
೯. ಆಶಾದೇವಿ ಎಮ್. ಎಸ್., ಬೆಂಗಳೂರಿನ ವಿಜಯನಗರದ ಪಂಪ ಸಭಾಂಗಣದಲ್ಲಿ ೨೭/೦೫/೨೦೧೨ರಂದು ಕರ್ನಾಟಕ ಸಾಹಿತ್ಯ ಪರಿಷತ್ತು 'ಕನ್ನಡ ಸಾಹಿತ್ಯದ ಇಂದಿನ ಸ್ಥಿತಿಗತಿ' ಎಂಬ ಕಾರ್ಯಕ್ರಮದಲ್ಲಿ ಮಾಡಿದ ಉಪನ್ಯಾಸ
೧೦.ರಘುನಾಥ ಚ. ಹ., 'ಆ ಗುಡ್ಡದಲ್ಲಿ... ಆ ಮೌನದಲ್ಲಿ...', ಪ್ರಜಾವಾಣಿ ಲೇಖನ ೨೭ ಡಿಸೆಂಬರ್, ೨೦೧೨
೧೧.ಸಿದ್ದರಾಮಯ್ಯ ಎಸ್ .ಜಿ., (ರಂಗನಾಥ ಕಂಟನಕುಂಟೆಯವರ ದೇವನೇಗಿಲು ಕವನ ಸಂಕಲನಕ್ಕೆ ಬರೆದಿರುವ ಮುನ್ನುಡಿ) ಲಡಾಯಿ ಪ್ರಕಾಶನ, ೨೦೧೭
೧೨.ಮೂಡ್ನಾಕೂಡು ಚಿನ್ನಸ್ವಾಮಿ, 'ದಲಿತ ಸಾಹಿತ್ಯಕ್ಕೆ ವಿಮರ್ಶೆಯ ಕೊರತೆ' ಪ್ರಜಾವಾಣಿ' ೧೫-೦೭-೨೦೧೩, ಮೈಸೂರು.
೧೩.ರಾಮಲಿಂಗಪ್ಪ ಟಿ. ಬೇಗೂರು, ದೂರತೀರ'ದ ಒಂದು ಇಣುಕುನೋಟ, ಆಗಸ್ಟ್ ೩೧, ೨೦೧೫, ಅನಿಕೇತನ ಡಾಟ್ ಕಾಮ್
೧೪.ರಾಮಚಂದ್ರನ್ ಸಿ. ಎನ್., 'ಹೊಸಮಡಿಯ ಮೇಲೆ ಚದುರಂಗ, ಸಪ್ನ ಬುಕ್ ಹೌಸ್, ೨೦೦೭, ಮುನ್ನುಡಿ

೧೫.ಸುರೇಶ ನಾಗಲಮಡಿಕೆ, 'ಕಾವ್ಯಮನೆಯ ಮೂಲಕ ಹೊಸಬರ ಕವಿತೆ', ೨೧-೦೯-೨೦೧೭, ಅನಿಕೇತನ ಡಾಟ್ ಕಾಮ್

೧೬.ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ: ಕನ್ನಡ ಸಣ್ಣಕತೆ ಸಪ್ನ ಬುಕ್‌ಹೌಸ್, ೨೦೦೯, ಪು - ೪೩

೧೭.ಕಲಿಗಣನಾಥ ಗುಡದೂರು, 'ಕನ್ನಡ ಕಥೆಗಳ ಹೊಸ ಜಾಡು' ಜನವರಿ ೩೧, ೨೦೦೯, ಸಂಪದ ಡಾಟ್‌ಕಾಮ್

೧೮.ಅದೇ ಲೇಖನ

೧೯.ನರೇಂದ್ರ ಪೈ, 'ವಸುಧೇಂದ್ರ ಕತೆಗಳು' ಟಿಪ್ಪಣಿಪುಸ್ತಕಬ್ಲಾಗ್, ಜೂನ್ ೩೦, ೨೦೧೫

೨೦.ನಾಗಭೂಷಣ ಡಿ. ಎಸ್., ರೂಪ ರೂಪಗಳನು ದಾಟಿ, ನೆಲಮನೆ ಪ್ರಕಾಶನ, ೨೦೧೩ ಪು - ೪೩೯

೨೧.ಮಾಧವ ಕುಲಕರ್ಣಿ ಕನ್ನಡದ 'ಇಪ್ಪತ್ತೈದು ಆಯ್ದ ಕಾದಂಬರಿಗಳ ವಿಮರ್ಶೆ' ಆದಿತ್ಯ ಪ್ರಕಾಶನ, ಬೆಳಗಾವಿ ೨೦೧೫, ಪು - ೮೭

೨೨.ನೆಲ್ಲುಕುಂಟೆ ವೆಂಕಟೇಶ್, 'ತೇಜಸ್ವಿಯವರ ಕಾದಂಬರಿಗಳ ಮರುಓದು', ೦೧-೨೪-೨೦೧೬, ಅನಿಕೇತನ ಡಾಟ್ ಕಾಮ್

೨೩.ಅದೇ ಲೇಖನ,

೨೪.ಪೂರ್ಣಚಂದ್ರ ತೇಜಸ್ವಿ, ಕರ್ವಾಲೊ, ಪುಸ್ತಕ ಪ್ರಕಾಶನ, ಮೈಸೂರು ೧೯೮೦, ಪು - ೨೪-೨೫

೨೫.ಮಾಧವ ಕುಲಕರ್ಣಿ ಕನ್ನಡದ 'ಇಪ್ಪತ್ತೈದು ಆಯ್ದ ಕಾದಂಬರಿಗಳ ವಿಮರ್ಶೆ' ಆದಿತ್ಯ ಪ್ರಕಾಶನ, ಬೆಳಗಾವಿ ೨೦೧೫, ಪು - ೮೯

೨೬.ಮಾಧವ ಕುಲಕರ್ಣಿ ಕನ್ನಡದ 'ಇಪ್ಪತ್ತೈದು ಆಯ್ದ ಕಾದಂಬರಿಗಳ ವಿಮರ್ಶೆ ಆದಿತ್ಯ ಪ್ರಕಾಶನ ಬೆಳಗಾವಿ ೨೦೧೫, ಪುಟ - ೪೪

೨೭.ಸುರೇಶ ಬಿ., ರಂಗಸಾಂಗತ್ಯ, ನಿರಂತರಬ್ಲಾಗ್ ಸ್ಪಾಟ್, ಮೈಸೂರು ಏಪ್ರಿಲ್ ೧೯, ೨೦೧೫

೨೮.ಶಶಿ ಸಂಪಳ್ಳಿ, ಅದ್ಭುತ ದೃಶ್ಯವೈಭವ ಕಟ್ಟಿಕೊಡುವ "ಮಲೆಗಳಲಿ ಮದುಮಗಳು" ರಂಗಭೂಮಿ ವಿಶ್ಲೇಷಣೆ — ಕನ್ನಡ ರಂಗಪತ್ರಿಕೆ ೨-೧೧-೨೦೧೩

೨೯.ಮುತ್ತಯ್ಯ ಎಮ್. ಎಸ್., 'ಜಾನಪದ ಪರಂಪರೆ : ಚರಿತ್ರೆಯ ನೆಲೆಗಳು', ೦೯-೨೨-೨೦೧೩, ಕಿಲಾರಿ ಸಂಸ್ಕೃತಿ ಡಾಟ್ ಕಾಮ್

೩೦.ದಂಡಪ್ಪ ಎಚ್. ಮತ್ತು ಬಿ. ಎನ್. ಸುಮಿತ್ರಾಬಾಯಿ (ಸಂ) : ಸುವರ್ಣ ಸಾಹಿತ್ಯ ವಿಮರ್ಶೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೦೬, ಪುಟ-೩೬

ಅಧ್ಯಾಯ – ನಾಲ್ಕು

ಕನ್ನಡ ವಿಮರ್ಶೆಯ ಪ್ರಧಾನ ಪ್ರವೃತ್ತಿಗಳು

ಮಾನವನ ಬದುಕು ನಿಂತ ನೀರಲ್ಲ. ಅದು ವಿಕಾಸಶೀಲವಾದುದು. ಬದುಕು ಬೆಳೆದಂತೆ, ಬದಲಿಸಿದಂತೆ ಅದರ ಅಭಿವ್ಯಕ್ತಿಯಾದ ಸಾಹಿತ್ಯವೂ ಅನಿವಾರ್ಯವಾಗಿ ಬೆಳೆಯುತ್ತದೆ, ಬದಲಾಗುತ್ತದೆ. ಹೊಸತನವನ್ನು ಅಳವಡಿಸಿಕೊಳ್ಳುತ್ತದೆ. ಹೀಗಾಗಿ ಯಾವುದೇ ಸಾಹಿತ್ಯದ ಚರಿತ್ರೆ ನಿರಂತರವಾದ ಕ್ರಾಂತಿ, ಚಳುವಳಿಗಳ, ಪ್ರಯೋಗಗಳ ಕತೆಯೇ ಆಗಿರುತ್ತದೆ. ಕನ್ನಡ ಈ ಮಾತಿಗೆ ಅಪವಾದವಲ್ಲ. ಕನ್ನಡ ಸಾಹಿತ್ಯ ಉದ್ದಕ್ಕೂ ಪರಂಪರೆಯ ನೆಲೆಗಟ್ಟಿನ ಮೇಲೆ ನಿಂತೇ ಹೊಸತನವನ್ನು ಸ್ವಾಗತಿಸುತ್ತ, ಅರಗಿಸಿಕೊಳ್ಳುತ್ತ ಸಮನ್ವಯದ ಹಾದಿಯಲ್ಲಿ ಸಾಗಿ ಬಂದಿದೆ.

ವಿಮರ್ಶೆ ಎಂದರೆ ಸಾಮಾನ್ಯವಾಗಿ ಕೃತಿಯೊಂದನ್ನು ಓದುಗ ಅರ್ಥಮಾಡಿಕೊಳ್ಳುವ ಮತ್ತು ತನ್ನ ಸುತ್ತಲಿನವರಿಗೆ ಅರ್ಥಮಾಡಿಕೊಡುವ ಒಂದು ಪ್ರಾಮಾಣಿಕವಾದ ಪ್ರಯತ್ನ ಎನ್ನಬಹುದು. ಹಾಗೆ ಅರ್ಥಮಾಡಿಕೊಂಡ ಕೃತಿಯ 'ಮೌಲ್ಯ'ವನ್ನು ನಿರ್ಣಯಿಸುವ ಪ್ರಯತ್ನವನ್ನೆ ವಿಮರ್ಶೆ ಎನ್ನಲಾಗುತ್ತದೆ. ವಿಮರ್ಶೆಯಲ್ಲಿ ಬಹು ಮುಖ್ಯವಾದುದು ಕೃತಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರ ಬೆಲೆಯನ್ನು ನಿರ್ಣಯಿಸುವುದು. ಇವುಗಳಲ್ಲಿ ಮೊದಲನೆಯದು ಎಲ್ಲಾ ಕಾಲದಲ್ಲಿಯೂ ಅಂದಂದಿನ ಕೃತಿಗಳ ಬಗೆಗೆ ಅಂದಂದಿನ ವಿಮರ್ಶಕರಿಂದ ನಡೆಯುವ ಕಾರ್ಯ. ಇನ್ನು ಎರಡನೆಯದಾದ ಮೌಲ್ಯನಿರ್ಧಾರದ ಪ್ರಯತ್ನವು ಕಾಲದಿಂದ ಕಾಲಕ್ಕೆ ಬದಲಾಗುವ ಸಾಧ್ಯತೆ ಹೊಂದಿರುತ್ತದೆ ಹಾಗೂ ಏಕಕಾಲದಲ್ಲಿ ಭಿನ್ನವಾದ ಮೌಲ್ಯಗಳನ್ನು ಪಡೆದುಕೊಳ್ಳುವ ಸಾಧ್ಯತೆ ಇರುತ್ತದೆ. ಇದಕ್ಕೆ ಕಾರಣವೇನೆಂದರೆ, ಕೃತಿಯೊಂದನ್ನು ಅರ್ಥಮಾಡಿಕೊಳ್ಳಲು ಬೇಕಾದ ಸಹೃದಯತೆ, ಸೂಕ್ಷ್ಮ ಸಂವೇದನೆ, ಆಳವಾದ ಪರಿಶೀಲನೆ ಮತ್ತು ತಾನು ಅರ್ಥಮಾಡಿಕೊಳ್ಳಲು ಬಯಸುತ್ತಿರುವ ಕೃತಿ ಅದರ ಹಿನ್ನೆಲೆಗಿರುವ ಪರಂಪರೆಯಿಂದ ಎಷ್ಟರಮಟ್ಟಿಗೆ ಪ್ರಭಾವಿತವಾಗಿದೆ ಹಾಗೂ ಭಿನ್ನವಾಗಿದೆ ಅಥವಾ ವಿಶಿಷ್ಟವಾಗಿದೆ ಎಂದು ವಿವೇಚನೆ ಮಾಡಲು ಆಗತ್ಯವಾಗಿರುವ ವ್ಯುತ್ಪತ್ತಿ ಕಾರಣವಾಗಿರುತ್ತದೆ.

ವಿಮರ್ಶೆಯ ಮೌಲ್ಯನಿರ್ಧಾರಕ್ಕೆ ಇನ್ನೊಂದು ಬಹುಮುಖ್ಯವಾಗಿ ಬೇಕಾದ ಅಂಶವೆಂದರೆ ಕೃತಿಯನ್ನು ಅರ್ಥಮಾಡಿಕೊಳ್ಳಲು ಬೇಕಾಗುವ ಸಾಮರ್ಥ್ಯದ ಜತೆಗೆ ಒಂದು ಕಾಲಾತೀತವಾದ ನಿಲುವಿಗೆ ಅಂಟಿಕೊಳ್ಳುವ ವಸ್ತುನಿಷ್ಠ ಮನೋಧರ್ಮ. ಈ ಕಾಲಾತೀತವಾದ ನಿಲುವು ಪ್ರಾಚೀನ ಕಾಲದ ಕೃತಿಗಳನ್ನು ಪರಿಶೀಲಿಸುವಾಗ ಒದಗುವಷ್ಟು ಸುಲಭವಾಗಿ ಸಮಕಾಲೀನ ಕೃತಿಗಳನ್ನು ಪರಿಶೀಲಿಸುವಾಗ ಒದಗುವುದು ಕಷ್ಟ.

ಸಮಕಾಲೀನ ವಿಮರ್ಶೆ ಕೇವಲ ಕೃತಿಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಅರ್ಥಮಾಡಿಕೊಡುವ ಪ್ರಯತ್ನಗಳಲ್ಲಿಯೆ ಬಹುಮಟ್ಟಿಗೆ ನಿಂತುಕೊಳ್ಳಲು ಇರುವ ಕಾರಣ, ಅಂತಿಮ ಮೌಲ್ಯನಿರ್ಧಾರವೆಂಬುದು ಕಾಲದಿಂದ ಕಾಲಕ್ಕೆ ಬದಲಾಗುವ ಸಂಭವವಿರುವುದರಿಂದ. ಆದುದರಿಂದಲೇ ಸಮಕಾಲೀನ ಲೇಖಕರಿಗೆ ಸಮಕಾಲೀನ ವಿಮರ್ಶಕರಿಂದ ಹೆಚ್ಚು ವಿಮರ್ಶೆ ಬರುವುದಿಲ್ಲ ಎಂಬ ಅಪವಾದವಿದೆ. ಅಕಸ್ಮಾತ್ ವಿಮರ್ಶೆ ನಡೆದಿದ್ದರೂ ಅದು ನಿಷ್ಪಕ್ಷಪಾತವಾಗಿದೆ ಎಂದು ಅನ್ನಿಸುವುದಿಲ್ಲ.

ಸಾಮಾನ್ಯವಾಗಿ ಸಮಕಾಲೀನ ವಿಮರ್ಶಕನಿಗೆ ತನ್ನ ಕಾಲದಲ್ಲಿಯೆ ಬದುಕುತ್ತಿರುವ ಬರಹಗಾರ ಹಾಗೂ ಆತನ ಕೃತಿಯೊಂದಿಗೆ ಅಭಿಪ್ರಾಯ ರೂಪಿಸಿಕೊಳ್ಳುವ, ಪ್ರತಿಕ್ರಿಯೆ ನೀಡುವ ಸಂಬಂಧದಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲದ ಕಾರಣ, ವಿಮರ್ಶಕ ತನ್ನ ಕಾಲದ ಕೃತಿಗಳ ವಿಚಾರದಲ್ಲಿ ಆಸ್ಥೆ ವಹಿಸದಿರಲು ಸಾಧ್ಯವಾಗುವುದಿಲ್ಲ. ಆದರೆ ಒಂದು ಕೃತಿಯ ವಿಮರ್ಶೆ ಎನ್ನುವುದು, ಆ ಕೃತಿ ರಚಿತವಾದ ಕಾಲದ ವಿಮರ್ಶಕರಿಂದಲೆ ಆಗಿ ಮುಗಿಯುವ ಕಾರ್ಯವಲ್ಲ. ನಿಜವಾಧ ಕೃತಿ ಎಲ್ಲ ಕಾಲದ ವಿಮರ್ಶಕರಿಂದಲೂ ಪರಿಶೀಲನೆಗೆ ಒಳಪಡುತ್ತಲೇ ಇರುತ್ತದೆ. ಹಾಗೆ ಎಲ್ಲ ಕಾಲದ ವಿಮರ್ಶಕರ ವಿಚಾರಕ್ಕೆ ಒಳಗಾಗುವುದು ಆ ಕೃತಿ ನಿಜವಾಗಿಯೂ ಮಹತ್ವದ್ದು ಎಂಬುದರ ಸಂಕೇತ. ಕೃತಿವಿಮರ್ಶೆ ಎನ್ನುವುದು ಯಾವಾಗಲೊ ಒಮ್ಮೆಗೆ ಅಭಿಪ್ರಾಯಗಳ, ಮೌಲ್ಯ ವಿವೇಚನೆಯ, ಸುರುಳಿಯಲ್ಲಿ ಸುತ್ತಿ ಭದ್ರವಾಗಿರಿಸುವ ಪ್ರಯತ್ನವಲ್ಲ. ಅದೊಂದು ನಿರಂತರ ಕ್ರಿಯೆ. ಆದರೆ ಪ್ರತಿಯೊಂದು ಕಾಲದಲ್ಲಿಯೂ ನಿಜವಾದ ವಿಮರ್ಶಕ ನಾನಲ್ಲ, ನಿಜವಾದ ವಿಮರ್ಶೆ ಏನಿದ್ದರೂ ಮುಂದಿನವರಿಂದ ಬರುತ್ತದೆ ಎಂದು ಸುಮ್ಮನಾದರೆ ಅಂದಿನ ಕಾಲ ವೈಚಾರಿಕ ದೃಷ್ಟಿಯಿಂದ ಜೀವಂತವಾಗಿಲ್ಲ ಎನ್ನಬೇಕಾಗುತ್ತದೆ. ಆದ್ದರಿಂದ ಯಾವ ಕಾಲದಲ್ಲಿಯೇ ಆಗಲಿ ವಿಮರ್ಶೆ ಏಕಕಾಲಕ್ಕೆ ಸಮಕಾಲೀನವೂ, ಸಾರ್ವಕಾಲೀಕವೂ ಆಗಬೇಕಾಗುತ್ತದೆ. ಜೊತೆಗೆ ಯಾವ ಕಾಲದಲ್ಲಿಯೇ ಆಗಲಿ ವಿಮರ್ಶೆಯ ಪ್ರವೃತ್ತಿಗಳನ್ನು ಕುರಿತು ಯೋಚಿಸುವಾಗ ಸಮಕಾಲೀನ ವಿಮರ್ಶೆಗಳ ಸಮಸ್ಯೆಗಳ ಮೇಲಿನಿಂದಲೇ ವಿಚಾರ ಮಾಡಬೇಕಾಗುತ್ತದೆ. ಆಗ ಮಾತ್ರ ನಮಗೆ ಸಮಕಾಲೀನ ವಿಮರ್ಶೆಯ ಒಲವು-ನಿಲುವುಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ನಮ್ಮ ಸುತ್ತ-ಮುತ್ತಲ ವಿಮರ್ಶೆಯ ಲಕ್ಷಣಗಳನ್ನು ಗಮನಿಸಿದರೆ ವಿಮರ್ಶೆ ಎಂದರೆ ಹೇಗಿರಬೇಕು, ಹೇಗಿರಬಾರದು ಎಂಬುದು ತಿಳಿಯುತ್ತದೆ. ಏಕೆಂದರೆ ಎಲ್ಲ ಕಾಲದಲ್ಲಿಯೂ ಸಾಹಿತ್ಯದಲ್ಲಿ ಪಕ್ಷ-ಪ್ರತಿಪಕ್ಷಗಳಿದ್ದೇ ಇರುತ್ತವೆ. ಇವುಗಳೇ ಕ್ರಮೇಣ ಸಾಹಿತ್ಯ ಚಳವಳಿ, ಸಾಹಿತ್ಯ ಪಂಥಗಳಾಗಿ ಬೆಳೆಯುತ್ತವೆ. ಸಾಹಿತ್ಯದ ಪ್ರಗತಿಗೆ ಕಾರಣವಾಗುವ ಇವುಗಳಿಂದ ಒಂದು ಪಕ್ಷದ ಲೇಖಕರೋ, ಓದುಗರೋ ವಿಮರ್ಶಕರ ಪಾತ್ರವನ್ನು ವಹಿಸುವುದು, ತಾವು ನಂಬಿ ಆಚರಿಸುವ ಚಳುವಳಿಯನ್ನು ಬೆಳೆಸಲು ಅನಿವಾರ್ಯವಾಗುತ್ತದೆ. ಇಂಥ ಹೊತ್ತಿನಲ್ಲಿ ತಾವು ವಹಿಸಿಕೊಂಡ ಪಂಥವೊಂದರ ಬರಹವನ್ನೋ ಲೇಖಕನನ್ನೋ ಸಮರ್ಥಿಸಿಕೊಳ್ಳುವ, ತಮಗಿಂತ ಹಿಂದಿನ ಲೇಖಕರನ್ನೋ,

ಕೃತಿಗಳನ್ನೋ ತೆಗಳುವ ಕಾರ್ಯವೊಂದು ವಿಮರ್ಶೆ ಎಂಬ ಹೆಸರಿನಲ್ಲಿ ಪ್ರಚಲಿತವಾಗುವುದುಂಟು. ವಿಮರ್ಶೆ ಮಾಡತಕ್ಕವರು ಎಷ್ಟೇ ವಿದ್ಯಾವಂತರೂ, ಬುದ್ಧಿವಂತರೂ ಆಗಿದ್ದರೂ, ಅವರು ಯಾವ ಪಕ್ಷವನ್ನು ವಹಿಸಿಕೊಂಡು ಮಾತನಾಡುವರೋ ಆ ಕವಿಯ ಸಾಮರ್ಥ್ಯ ಮತ್ತು ಕೃತಿ ನಿಜವಾಗಿಯೂ ಸತ್ವಶಾಲಿಯಾದದ್ದಾದರೂ, ಆ ಕವಿ ಅಥವಾ ಕೃತಿಯನ್ನು ಕುರಿತು ವಿಮರ್ಶಕರು ನಿಷ್ಪಕ್ಷಪಾತವಾಗಿ ವಿಮರ್ಶಿಸುತ್ತಿದ್ದಾರೆಂದು ನಂಬಿಕೆ ಕೆಲವೊಮ್ಮೆ ಬಾರದೆ ಹೋಗುವ ಸಂದರ್ಭವೂ ಉಂಟು. ಆದ್ದರಿಂದ ವಿವಿಧ ತತ್ವ, ಸಿದ್ಧಾಂತ ಮತ್ತು ಪರಂಪರೆಯ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ವಿಮರ್ಶಾ ಪ್ರಕಾರಗಳನ್ನು ನಾವು ವಿವರವಾಗಿ ಪರಿಶೀಲಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಕನ್ನಡ ವಿಮರ್ಶೆ ಸಾಗಿ ಬಂದ ಹಂತಗಳನ್ನು ನವೋದಯ ವಿಮರ್ಶೆ, ಪ್ರಗತಿಶೀಲ ವಿಮರ್ಶೆ, ನವ್ಯ ವಿಮರ್ಶೆ, ನವ್ಯೋತ್ತರ ವಿಮರ್ಶೆಗಳೆಂದು ಗುರುತಿಸಬಹುದು. ಎಂಬತ್ತರ ದಶಕದ ನವ್ಯೋತ್ತರ ವಿಮರ್ಶೆಯ ಮುಖ್ಯ ಧಾರೆಗಳಾಗಿ ಮತ್ತೆ ನಾವು ದಲಿತ ವಿಮರ್ಶೆ, ಬಂಡಾಯ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ ಮತ್ತು ಸಾಂಸ್ಕೃತಿಕ ವಿಮರ್ಶೆ ಎಂದು ವಿಂಗಡಿಸಿಕೊಳ್ಳಬಹುದು. ಕನ್ನಡದಲ್ಲಿ ದಲಿತ-ಬಂಡಾಯ ಸಾಹಿತ್ಯ ಚಳವಳಿಗಳ ನಂತರ ಯಾವ ಸಾಹಿತ್ಯ ಪಂಥಗಳೂ ಸಕ್ರಿಯವಾಗಿದಿರುವುದರಿಂದ ಈಗಲೂ ಈ ಪಂಥದ ವಿಮರ್ಶೆಗಳೇ ಮುಖ್ಯವಾಗಿ ಚಲಾವಣೆಯಾಗುತ್ತಿವೆ. ಈ ನಡುವೆ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನದ ಅನುಕೂಲಕ್ಕೆ ವಿಮರ್ಶೆಯನ್ನು ವಿವಿಧ ವಿಭಾಗಗಳಡಿಯಲ್ಲಿ, ಪಾರಿಭಾಷಿಕ ಪದಗಳ ವಿವರಣೆಯಲ್ಲಿ ಅಧ್ಯಯನ ನಡೆಸಲಾಗುತ್ತಿದೆ.

ಕನ್ನಡ ವಿಮರ್ಶೆಯಲ್ಲಿ ದೇಶಿ ತತ್ವಗಳನ್ನು ಅರಸುತ್ತಿರುವ ಡಾ. ಚಲಪತಿಯವರು ಕನ್ನಡ ವಿಮರ್ಶೆಯಲ್ಲಿ ಚಲಾವಣೆಯಾಗುತ್ತಿರುವ ವಿವಿಧ ಸಿದ್ಧಾಂತಗಳನ್ನು ಹೀಗೆ ಸಂಗ್ರಹಿಸಿದ್ದಾರೆ. "ನವ್ಯ ವಿಮರ್ಶೆ, ರಾಚನಿಕ ವಿಮರ್ಶೆ, ಮನೋವೈಜ್ಞಾನಿಕ ವಿಮರ್ಶೆ, ಚಿರಂತನ ಪ್ರತೀಕ ವಿಮರ್ಶೆ, ನಿರಚನ ವಿಮರ್ಶೆ, ಕೃತಿನಿಷ್ಠ ನವ್ಯ ವಿಮರ್ಶೆ, ಕೃತಿಕೇಂದ್ರಿತ ವಿಮರ್ಶೆ, ಕೃತಿಕೇಂದ್ರ ವಿಮರ್ಶೆಯ ಪ್ರಭೇದ ವಿಮರ್ಶೆ, ಕರ್ತೃಕೇಂದ್ರಿತ ವಿಮರ್ಶೆ, ಕರ್ತೃನಿಷ್ಠ ವಿಮರ್ಶೆ, ಸ್ತ್ರೀನಿಷ್ಠ ವಿಮರ್ಶೆ, ಸ್ವರೂಪ ವಿಮರ್ಶೆ, ರೂಪನಿಷ್ಠ ವಿಮರ್ಶೆ, ಪರಿಣಾಮ ಕೇಂದ್ರಿತ ವಿಮರ್ಶೆ, ಪ್ರಕಾರ ವಿಮರ್ಶೆ, ಪ್ರಕಾರನಿಷ್ಠ ವಿಮರ್ಶೆ, ವಾಚಕಾಭಿಮುಖ ವಿಮರ್ಶೆ, ವಾಚಕ ಕೇಂದ್ರಿತ ವಿಮರ್ಶೆ, ಪ್ರಾಯ್ಡ್‌ವಾದಿ ವಿಮರ್ಶೆ, ನವಪ್ರಾಯ್ಡ್‌ವಾದಿ ವಿಮರ್ಶೆ, ಯೂಂಗ್‌ವಾದಿ ವಿಮರ್ಶೆ, ಅನುಮಿತಿವಾದ, ಉತ್ಪತ್ತಿವಾದ, ಭುಕ್ತಿವಾದ, ವ್ಯಕ್ತಿವಾದ, ವಸ್ತುನಿಷ್ಠವಾದ, ಸಮಷ್ಟಿವಾದ, ನಿಯತಿವಾದ, ರಾಚನಿಕೋತ್ತರವಾದ, ಪ್ರಕೃತಿವಾದ, ನವಚಾರಿತ್ರಿಕವಾದ, ಆಧುನಿಕವಾದ, ಅಸ್ತಿತ್ವವಾದ, ಅನುಕರಣವಾದ, ವಸಾಹತುವಾದ, ವಾಸ್ತವತಾವಾದ, ಭೌತಿಕವಾದ, ಸಾಪೇಕ್ಷ ಸಿದ್ಧಾಂತ, ಸ್ವೀಕರಣ ಸಿದ್ಧಾಂತ, ವಸ್ತುಪ್ರತಿರೂಪ, ವಸಾಹತೋತ್ತರ ಚಿಂತನೆ, ಮಾರ್ಕ್ಸ್‌ವಾದ, ಸಮಾಜವಾದ."[7] ಎಂದೆಲ್ಲಾ ವೈವಿಧ್ಯಮಯವಾಗಿ ಗುರುತಿಸಬಹುದು. ಆದರೆ ಅವೆಲ್ಲಾ ಕನ್ನಡ ವಿಮರ್ಶೆಯಲ್ಲಿ ಪ್ರತ್ಯೇಕ

ಧಾರೆಯಾಗಿ ಬೆಳೆದು ಬಂದು ಅಸ್ತಿತ್ವ ಗುರುತಿಸಿಕೊಂಡಿದ್ದು ಕಡಿಮೆ. ಆದ್ದರಿಂದ ಮೇಲೆ ಗುರುತಿಸಿದ ನವ್ಯೋತ್ತರ ವಿಮರ್ಶೆಯ ಮುಖ್ಯ ಧಾರೆಗಳಾಗಿ ದಲಿತ ವಿಮರ್ಶೆ, ಬಂಡಾಯ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ ಮತ್ತು ಸಾಂಸ್ಕೃತಿಕ ವಿಮರ್ಶೆಗಳನ್ನು ಇಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಸಾಹಿತ್ಯದಲ್ಲಿ ಪ್ರತಿಪಾದನೆಯಾಗುವ ಮನೋಧರ್ಮ, ಸಾಹಿತ್ಯದ ವಸ್ತು-ವಿಷಯ, ರಚನಾ ಶೈಲಿ ಮೊದಲಾದವುಗಳನ್ನು ಆಧರಿಸಿ ಸಾಹಿತ್ಯ ಪಂಥಗಳನ್ನು ರಚಿಸಲಾಗುತ್ತದೆ. ಇಂತಹ ಸಾಹಿತ್ಯ ಪಂಥಗಳಿಗೆ ಆ ಕಾಲದಲ್ಲಿ ಅಸ್ತಿತ್ವದಲ್ಲಿರುವ ಚಳುವಳಿಗಳು ಒತ್ತಾಸೆಯಾಗಿ ನಿಂತಿರುತ್ತವೆ. ಈ ದಿಶೆಯಲ್ಲಿ ಕನ್ನಡದಲ್ಲಿ ಇದುವರೆವಿಗೂ ನವೋದಯ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ನವ್ಯ ಸಾಹಿತ್ಯ, ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ, ಮಹಿಳಾ ಸಾಹಿತ್ಯ, ಮುಸ್ಲಿಂ ಸಂವೇದನೆಯ ಸಾಹಿತ್ಯ ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಇವುಗಳಲ್ಲಿ ಇಪ್ಪತ್ತೊಂದನೆ ಶತಮಾನದಲ್ಲಿ ಹೆಚ್ಚು ಚಾಲ್ತಿಯಲ್ಲಿರುವ ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ, ಮಹಿಳಾ ಸಾಹಿತ್ಯ, ಮುಸ್ಲಿಂ ಸಂವೇದನೆಯ ಸಾಹಿತ್ಯ ಸೃಷ್ಟಿ ಮತ್ತು ಅಂತಹ ಸಾಹಿತ್ಯವನ್ನು ವಿಮರ್ಶಿಸಲು ಪೂರಕವಾಗಿ ಒದಗಿದ ಸನ್ನಿವೇಶಗಳನ್ನು ನೋಡಬಹುದು. ಇವುಗಳಲ್ಲಿ ಮೊದಲಿಗೆ ಕ್ವಚಿತ್ತಾಗಿ ಈಗಲೂ ಬಳಕೆಯಲ್ಲಿರುವ ನವ್ಯ ವಿಮರ್ಶೆ ಅಥವ ರೂಪನಿಷ್ಟ ವಿಮರ್ಶೆಯನ್ನು ನೋಡಬಹುದು.

ಕನ್ನಡದಲ್ಲಿ ವೃತ್ತಿಪರ ವಿಮರ್ಶೆಯನ್ನು ಆರಂಭಿಸಿದ್ದ ನವ್ಯ ವಿಮರ್ಶೆಯು ಎಂಭತ್ತರ ದಶಕದ ದಲಿತ-ಬಂಡಾಯ ಸಾಹಿತ್ಯದ ಏರುಗಾಲದಲ್ಲಿ ಕೊಂಚ ಇಳಿಮುಖವಾಗಿದ್ದಂತೆ ಕಂಡರೂ ಹೊಸ ಶತಮಾನದಲ್ಲಿ ಒಂದು ಮುಖ್ಯ ವಿಮರ್ಶಾ ಮಾದರಿಯಾಗಿ ಚಲಾವಣೆಯಲ್ಲಿದೆ. ಟಿ. ಪಿ. ಅಶೋಕ, ಎಸ್. ಆರ್. ವಿಜಯಶಂಕರ್ ಮೊದಲಾದವರು ಇನ್ನೂ ನವ್ಯ ವಿಮರ್ಶಾ ಪರಿಕರಗಳಿಂದಲೇ ತಮ್ಮ ವಿಮರ್ಶಾ ಮಾನದಂಡಗಳನ್ನು ರೂಪಿಸಿಕೊಳ್ಳುತ್ತಿದ್ದಾರೆ. ಸಧ್ಯ ಕನ್ನಡದಲ್ಲಿ ಯಾವುದೇ ಪಂಥವೂ ಚಲನಶೀಲವಾಗಿಲ್ಲ. ಇನ್ನು ಯಾವುದೇ ಪಂಥಕ್ಕೆ ಸೇರದೆ ಇರುವವರ ಸಂಖ್ಯೆ ಕೂಡಾ ದಿನೇ ದಿನೇ ವಿಮರ್ಶಾ ಕ್ಷೇತ್ರದಲ್ಲಿ ಹೆಚ್ಚಾಗುತ್ತಿದೆ. ಯಾವುದಾದರೂ ಪಂಥವೊಂದಕ್ಕೆ ಬದ್ಧರಾದರೆ ಅದು ಸೃಜನಶೀಲತೆಯನ್ನು ನಿಯಂತ್ರಿಸಿ ಏಕಮುಖವಾಗಿಸುತ್ತದೆಯೆಂಬ ತಿಳಿವಳಿಕೆಯಿಂದ ಇಂದು ಯಾವುದೇ ಪಂಥಕ್ಕೆ ಸೇರದೆ ಇರುವುದೇ ಒಂದು ಆದರ್ಶ ಮಾದರಿ ಎನ್ನಿಸಿದೆ.

ಆದರೆ ನವ್ಯಸಾಹಿತ್ಯ ವಿಮರ್ಶೆಯಲ್ಲಿ ಸಾಮಾಜಿಕತೆ ಇದೆಯಾದರೂ ಅದು ವೈಯಕ್ತಿಕ ಅನುಭವ ಪ್ರಾಮಾಣ್ಯವೇ ಮುಖ್ಯವೆಂದು ಪ್ರತಿಪಾದಿಸಿ ವಿಮರ್ಶೆಯ ನಿಷ್ಠುರತೆಯನ್ನು ಮುನ್ನೆಲೆಗೆ ತರುತ್ತದೆ. ಅಂದರೆ ವೈಯಕ್ತಿಕ ಅನುಭವ ಪ್ರಾಮಾಣ್ಯವೇ ಮುಖ್ಯವೆಂಬ ತತ್ವವನ್ನು ವೈಪರೀತ್ಯದ ಅಂಚಿಗೆ ಕೊಂಡೊಯ್ದು ಪರಿಣಾಮವಾಗಿ ಸಾಮಾಜಿಕ ಕಾಳಜಿಯ ತಾತ್ವಿಕತೆಗೆ ಬೆನ್ನು ಮಾಡುತ್ತದೆ. ಆದ್ದರಿಂದಲೇ ನವ್ಯದ

ರೂಪಕಾತ್ಮಕತೆಯನ್ನು ವಿರೋಧಿಸಿ ಸಾಮಾಜಿಕ ವಿಮರ್ಶೆಯಾದ ಬಂಡಾಯ ರೂಪುತಳೆಯಬೇಕಾಯಿತು.

ಕನ್ನಡ ಸಾಹಿತ್ಯದ ನವೋದಯದೊಂದಿಗೇ ಆರಂಭವಾದ ಸಾಹಿತ್ಯ ವಿಮರ್ಶೆ ನಮ್ಮಲ್ಲಿ ಈಗಾಗಲೇ ಹಲವು ಹಂತಗಳನ್ನು ಕಂಡಿದೆ. ಆದರೆ ಕೆಲವರು ಭಾವಿಸಿರುವಂತೆ ಈ ಹಂತಗಳು ಒಂದು ಮುಗಿದ ನಂತರ ಇನ್ನೊಂದರಂತೆ ಆರಂಭವಾಗುವುದಿಲ್ಲ. ಒಂದು ಪ್ರವೃತ್ತಿ ಆರಂಭವಾಗಿ ಬೆಳೆದು ಸಾರ್ವತ್ರಿಕ ವಾಗುತ್ತಿರುವಂತೆಯೆ ಅದಕ್ಕೆ ಪ್ರತಿಯಾಗಿ ಇನ್ನೊಂದು ಪ್ರವೃತ್ತಿ ಆರಂಭವಾಗಿ ಕೆಲವು ವಲಯಗಳಲ್ಲಿ ಪ್ರಬಲಿಸಿಕೊಳ್ಳಬಹುದು. ಈ ಎರಡನೆಯದಕ್ಕೂ ಪ್ರತಿಯಾಗಿ ಇನ್ನೊಂದು ಹುಟ್ಟಿಕೊಂಡಾಗ ಮೂರೂ ಏಕಕಾಲಕ್ಕೆ ಅಸ್ತಿತ್ವದಲ್ಲಿರುವುದೂ ಸಾಧ್ಯ. ಆ ಕಾರಣದಿಂದಾಗಿ ಈ ಕೆಳಗೆ ಗುರುತಿಸಿರುವ ವಿಮರ್ಶಾ ಪ್ರಕಾರಗಳು ಏಕಕಾಲದಲ್ಲಿ ಕನ್ನಡದಲ್ಲಿ ಬಳಕೆಗೊಳ್ಳುತ್ತಿವೆ ಎಂದು ಗ್ರಹಿಸಲಾಗಿದೆ.

೪.೧ ರೂಪ ಕೇಂದ್ರಿತ ವಿಮರ್ಶೆ

ಈ ಅಧ್ಯಯನದಲ್ಲಿ ಮೊದಲನೆಯದಾಗಿ ಕನ್ನಡ ವಿಮರ್ಶಾ ಪರಂಪರೆಗೆ ವಸ್ತುನಿಷ್ಠತೆಯನ್ನು ತಂದುಕೊಟ್ಟ ನವ್ಯ ವಿಮರ್ಶೆಯನ್ನು ಗಮನಿಸಬಹುದು. ಸಾಹಿತ್ಯ ರೂಪಗಳನ್ನೆ ಪ್ರಧಾನವಾಗಿಟ್ಟುಕೊಂಡು ವಿಮರ್ಶೆಗೆ ತೊಡಗುವ ಈ ವಿಧಾನವು ಉದಾರವಾದಿ ಗುಣದ ನವೋದಯ ವಿಮರ್ಶೆ ಮತ್ತು ಬದ್ಧ ದೃಷ್ಟಿಕೋನವುಳ್ಳ ಪ್ರಗತಿಶೀಲ ವಿಮರ್ಶೆಗೆ ಪ್ರತಿಯಾಗಿ ಕನ್ನಡದಲ್ಲಿ ಆರಂಭವಾಯಿತು. ಜೊತೆಗೆ ಹೊಸದಾಗಿ ಆರಂಭ ಪಡೆದ ಆ ಚಳುವಳಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ತನ್ನತನ ಸಾಬೀತುಪಡಿಸಬೇಕಾದ ಅವಶ್ಯಕತೆಯೂ ಇತ್ತು. ಪಶ್ಚಿಮದಲ್ಲಿ ಈಗಾಗಲೇ ಮುಗಿದು ಹೋಗಿದ್ದ ನವ್ಯ ಚಳುವಳಿಯೇ ಇದಕ್ಕೆ ಪ್ರೇರಣೆಯಾದರೂ ಸ್ವತಂತ್ರ ಭಾರತದ ಬೆಳವಣಿಗೆ ಕಂಡು ಭ್ರಮನಿರಸನಗೊಂಡಿದ್ದೇ ಈ ಚಳುವಳಿಗೆ ತತ್ಕಾಲದ ಪ್ರೇರಣೆಯಾಗಿತ್ತು. ಜೊತೆಗೆ ಇದುವರೆಗಿನ ಕನ್ನಡ ಸಾಹಿತ್ಯದ ವಿಮರ್ಶೆಗೆ ವೃತ್ತಿಪರತೆ ಇಲ್ಲದಿರುವುದನ್ನು ಇದು ಕಂಡುಕೊಂಡಿತ್ತು. ಆರಂಭದಲ್ಲಿ ಅಮೆರಿಕದ ರೂಪನಿಷ್ಠ ವಿಮರ್ಶೆಯನ್ನು ಅನುಕರಿಸಿದರೂ ತದನಂತರ ಸ್ಥಳೀಯ ಸತ್ವಗಳನ್ನು ಮೈಗೂಡಿಸಿಕೊಂಡು ಹೊಸ ಪರಿಭಾಷೆಯನ್ನು ರೂಪಿಸಿಕೊಂಡು ವ್ಯವಸ್ಥಿತ ವಿಮರ್ಶೆ ಕ್ರಮವಾಗಿ ರೂಪುಗೊಂಡಿತು. ಅರವತ್ತು – ಎಪ್ಪತ್ತರ ದಶಕದಲ್ಲಿ ಹೆಚ್ಚಾಗಿದ್ದ ರೂಪ ಕೇಂದ್ರಿತ ವಿಮರ್ಶೆಯು, ದಲಿತ – ಬಂಡಾಯ ಸಾಹಿತ್ಯದ ಅಬ್ಬರದ ಕಾಲದಲ್ಲಿ ಕೊಂಚ ಮಂಕಾಗಿದ್ದಂತೆ ಕಂಡರೂ ಕಳೆದ ದಶಕದಿಂದ, ಸಮಕಾಲೀನ ಪ್ರವೃತ್ತಿಗಳಿಗೆ ತನ್ನನ್ನು ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಕನ್ನಡದಲ್ಲಿ ಮತ್ತೆ ಪ್ರವರ್ಧಮಾನಕ್ಕೆ ಬರುತ್ತಿದೆ.

ಮುಖ್ಯವಾಗಿ ಗೋಪಾಲಕೃಷ್ಣ ಅಡಿಗ, ಯು. ಆರ್. ಅನಂತಮೂರ್ತಿ, ಕೀರ್ತಿನಾಥ ಕುರ್ತುಕೋಟಿ, ಜಿ. ಎಸ್. ಆಮೂರ, ಎಂ. ಜಿ. ಕೃಷ್ಣಮೂರ್ತಿ, ಗಿರಡ್ಡಿ ಗೋವಿಂದರಾಜ, ಶಾಂತಿನಾಥ ದೇಸಾಯಿ, ಜಿ. ಎಚ್. ನಾಯಕ್ ಮೊದಲಾದವರು ನವ್ಯ ವಿಮರ್ಶೆ

ವ್ಯವಸ್ಥಿತವಾಗಿ ರೂಪುಗೊಳ್ಳಲು ಕಾರಣರಾದರು. ಇವರಲ್ಲಿ ಕೆಲವರು ಇಂದು ಕೂಡ ನವ್ಯದ ಹಾದಿಯಲ್ಲಿಯೇ ತಮ್ಮ ವಿಮರ್ಶೆಯನ್ನು ಮುಂದುವರೆಸಿಕೊಂಡು ಬಂದಿದ್ದರೆ; ಮತ್ತೆ ಕೆಲವರು ಸಮಕಾಲೀನ ಆಲೋಚನೆಗಳಿಗೆ ತೆರೆದುಕೊಂಡು ಮಾರ್ಕ್ಸ್‌ವಾದಿ ವಿಮರ್ಶೆ, ಸಾಂಸ್ಕೃತಿಕ ವಿಮರ್ಶೆಗಳನ್ನು ಸಂಯೋಜಿಸಿಕೊಂಡು ತಮ್ಮ ವಿಮರ್ಶಾ ವ್ಯವಸಾಯವನ್ನು ಮುಂದುವರೆಸಿದ್ದಾರೆ.

ಈಗಲೂ ಕ್ರಿಯಾಶೀಲರಾಗಿರುವ ಕೆಲವು ಮುಖ್ಯ ವಿಮರ್ಶಕರೆಂದರೆ ಯು. ಆರ್. ಅನಂತಮೂರ್ತಿ ('ಸದ್ಯ ಮತ್ತು ಶಾಶ್ವತ', 'ವಾಲ್ಮೀಕಿಯ ನೆವದಲ್ಲಿ', 'ಮಾತು ಸೋತ ಭಾರತ' ಇತ್ಯಾದಿ) ಎಲ್. ಎಸ್. ಶೇಷಗಿರಿರಾವ್ ('ಪ್ರಿಯ ಕನ್ನಡ ಬಂಧು' ಇವರೀಗ ಬಹುತೇಕ ಸಂಸ್ಕೃತಿ ವಿಮರ್ಶಕರಾಗಿ ನಾಡು-ನುಡಿ ಹೋರಾಟದಲ್ಲಿ ತೊಡಗಿದ್ದಾರೆ.) ಕೀರ್ತಿನಾಥ ಕುರ್ತುಕೋಟಿ ('ರೊಮ್ಯಾಂಟಿಸಿಜಂ', 'ಅಧ್ಯಯನ ಮತ್ತು ಪಾರಾಯಣ', 'ಪಂಡಿತರ ತಪ್ಪು', 'ರಾಜಕೀಯ ಮತಧರ್ಮ', 'ಭಾಷೆ ಮತ್ತು ಸಂಸ್ಕೃತಿ'), ಗಿರಡ್ಡಿ ಗೋವಿಂದರಾಜು ('ಪ್ರಮಾಣು', 'ಕಲ್ಪಿತ ವಾಸ್ತವ - ಸಣ್ಣಕತೆ'), ಜಿ. ಎಚ್. ನಾಯಕ್('ಸ್ಥಿತಿಗತಿ', 'ಗುಣಗೌರವ') ಸಿ. ಎನ್. ರಾಮಚಂದ್ರನ್ ('ಪರಂಪರೆ - ಪ್ರತಿರೋದ', ಪ್ರಮಾಣ ಮತ್ತು ಪರಿಪ್ರೇಕ್ಷ, 'ಹೊಸ ಮಡಿಯ ಮೇಲೆ ಚದುರಂಗ') ಎಚ್. ಎಸ್. ವೆಂಕಟೇಶ ಮೂರ್ತಿ ('ಆಕಾಶದ ಹಕ್ಕಿ'), ನರಹಳ್ಳಿ ಬಾಲಸುಬ್ರಹ್ಮಣ್ಯ ('ಕುವೆಂಪು ಕಾವ್ಯ; ಸಂಸ್ಕೃತಿ ಚರಿತ್ರೆಯ ರೂಪಕ'), ಟಿ. ಪಿ. ಅಶೋಕ ('ಸಾಹಿತ್ಯ ಸಮೃದ್ಧಿ', 'ಪುಸ್ತಕ ಸಮಯ', 'ಪುಸ್ತಕ ಸನ್ನಿದಿ'), ಎಚ್. ಎಸ್. ರಾಘವೇಂದ್ರರಾವ್ ('ತರು ಕಳೆದ ಪುಷ್ಪ', 'ನಮಸ್ಕಾರ', 'ಕಣ್ಣಹನಿಗಳೇ ಕಾಣಿಕೆ'), ಕೆ. ವಿ. ತಿರುಮಲೇಶ್ ('ಆಳ-ನಿರಾಳ' ಭಾಗ ೧ ಮತ್ತು ೨.) ಮೊದಲಾದವರ ವಿಮರ್ಶಾ ಕೃತಿಗಳನ್ನು ಗಮನಿಸಿದರೆ ನವ್ಯ ವಿಮರ್ಶೆ ಕಾಲಾನಂತರದಲ್ಲಿ ಪಡೆದುಕೊಂಡಿರುವ ಬದಲಾವಣೆಗಳನ್ನು ಗಮನಿಸಬಹುದು.

ಆರಂಭದಲ್ಲಿ ನವ್ಯ ವಿಮರ್ಶೆ ಕೃತಿನಿಷ್ಠವಾಗಿತ್ತು. ನವೋದಯದವರ ವಿವರಣೆ-ವರ್ಣನೆಗೆ ಬದಲಾಗಿ ವಸ್ತುನಿಷ್ಠತೆಯನ್ನು ರೂಢಿಸಿಕೊಂಡು, ಕೃತಿಯ ಆಕೃತಿ - ಆಶಯವನ್ನಷ್ಟೆ ಗಂಭೀರವಾಗಿ ಪರಿಗಣಿಸಿ ಹೊಸ ಪರಿಭಾಷೆಗಳನ್ನು ರೂಪಿಸಿಕೊಂಡು ಮುಂದುವರೆಯಿತು. ಆದರೆ ನವ್ಯದ ಹಿನ್ನೆಲೆಗಿದ್ದ ತುಸು ಹೆಚ್ಚೇ ಎನಿಸುವ ಪಶ್ಚಿಮದ ತಿಳುವಳಿಕೆ, ತಾನು ಜೀವಿಸುತ್ತಿರುವ ಸಮಾಜದ ಅರಿವಿನ ಕೊರತೆ, ಕಲೆಗಾಗಿ ಕಲೆ ಎನ್ನುವ ಮನೋಭಾವ ಮೊದಲಾದವುಗಳಿಂದ ಅದು ಹಿನ್ನೆಡೆ ಕಂಡಿತು. ಆದರೂ ಆರಂಭದಿಂದಲೇ ಅದರಲ್ಲಿ ಪ್ರಾಯೋಗಿಕ ವಿಮರ್ಶೆ (ಮಾಧವ ಕುಲಕರ್ಣಿ), ರೂಪನಿಷ್ಠ ವಿಮರ್ಶೆ (ಜಿ. ಎಚ್. ನಾಯಕ್), ಸಂಸ್ಕೃತಿನಿಷ್ಠ ವಿಮರ್ಶೆ (ಅನಂತಮೂರ್ತಿ), ಪ್ರಾಗ್ರೂಪ ವಿಮರ್ಶೆ (ಸಿ. ಎನ್. ಆರ್) ಮೊದಲಾದ ರೂಪಗಳು ಚಾಲ್ತಿಯಲ್ಲಿದ್ದವು. ಉದಾಹರಣೆಗೆ ಆರಂಭದಲ್ಲಿ ಹೆಚ್. ಎಸ್. ರಾಘವೇಂದ್ರರಾವ್ ಕೃತಿನಿಷ್ಠ ವಿಮರ್ಶಕರಾಗಿದ್ದರು. ಆದರೆ ಕ್ರಮೇಣ ದಲಿತ-ಬಂಡಾಯ ಚಳುವಳಿಗಳ ಹಿನ್ನೆಲೆಯಲ್ಲಿ ಸಮಾಜ ನಿಷ್ಠ, ಸಂಸ್ಕೃತಿನಿಷ್ಠ ವಿಮರ್ಶಕರಾಗಿ ಹೊರಹೊಮ್ಮಿದ್ದಾರೆ. ಹಾಗೆಯೇ ಸಿ. ಎನ್. ಆರ್. ಕೂಡ ಜಾನಪದ

ಮತ್ತು ಭಾಷಿಕ ಹಿನ್ನೆಲೆಯ ವಿಮರ್ಶೆಯಲ್ಲಿ ತೊಡಗಿದ್ದಾರೆ. ಇನ್ನು ಯು.ಆರ್ ಅನಂತಮೂರ್ತಿಯವರ ಬಗೆಗೆ ಹೇಳುವುದಾದರೆ ಇಂದು ಅಂಕಣ ರೂಪದ ಲೇಖನಗಳಲ್ಲಿ ಬರುತ್ತಿರುವ ಅವರ ವಿಮರ್ಶೆಯು ಕೇವಲ ಸಾಹಿತ್ಯಕ್ಕೆ ಸೀಮಿತವಾಗದೆ ವರ್ಗಪ್ರಜ್ಞೆ, ವರ್ಣಪ್ರಜ್ಞೆ, ರಾಜಕೀಯ, ಶಿಕ್ಷಣ, ಸಮಾಜವಾದ, ವಸಾಹತೋತ್ತರ ಚಿಂತನೆ ಮೊದಲಾದ ಹಲವು ವಿಷಯಗಳನ್ನು ಏಕಕಾಲಕ್ಕೆ ನಿರ್ವಹಿಸುತ್ತಿದ್ದಾರೆ. ಹೀಗೆ ಇಪ್ಪತ್ತೊಂದನೇ ಶತಮಾನದಲ್ಲಿಯೂ ನವ್ಯ ವಿಮರ್ಶೆ ಮುಂದುವರೆದಿದೆ. ಆದರೆ ಸ್ವರೂಪದಲ್ಲಿ ಮತ್ತು ಪರಿಣಾಮದಲ್ಲಿ ಗಂಭೀರ ಬದಲಾವಣೆಗಳನ್ನು ಒಳಗೊಂಡಿದೆ. ಈಗ ಕೆಲ ಬದಲಾವಣೆಯೊಂದಿಗೆ ಕಾಣಿಸಿಕೊಂಡಿರುವ ಮತ್ತು ಸಂಪೂರ್ಣವಾಗಿ ನವ್ಯದ ಸೆರೆಯಿಂದ ಬಿಡಿಸಿಕೊಳ್ಳಲಾಗದ ಈ ರೀತಿಯ ವಿಮರ್ಶೆಯ ಹಿಂದಿರುವ ಪ್ರೇರಣೆ ಮತ್ತು ಉದ್ದೇಶಗಳನ್ನು ಶೋಧಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಹೊಸ ಶತಮಾನದ ನವ್ಯ ವಿಮರ್ಶಕರಲ್ಲಿ ಬಹು ಮುಖ್ಯರೆಂದು ಗುರುತಿಸುವ ಎಸ್. ಆರ್. ವಿಜಯಶಂಕರ್ ಇದುವರೆವಿಗೂ ಮನೋಗತ, ಒಳದನಿ, ಒಡನಾಟ, ಪ್ರತಿಮಾಲೋಕ, ನಿಧಾನಶೃತಿ, ನಿಜಗುಣ ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವರ ವಿಮರ್ಶಾ ಬರಹಗಳಲ್ಲಿ ಕೃತಿಯ ವಿಸ್ತಾರ ಓದು, ವಿಷಯದ ಸೂಕ್ಷ್ಮಗ್ರಹಿಕೆ, ಬದುಕನ್ನು ನೋಡುವ ದೃಷ್ಟಿಕೋನ, ಬರಹಗಾರನ ಒಳತೋಟಿಯನ್ನು ಸಮರ್ಥವಾಗಿ ಹಿಡಿಯುವ ಬಗೆಯನ್ನು ಕಾಣಬಹುದು. ಕೃತಿಯ ಸಂದರ್ಭ ಮತ್ತು ಆಶಯಗಳಿಗಷ್ಟೇ ಅವರ ಗಮನ ನಿಲ್ಲದೇ ಆ ಕೃತಿಯ ಓದಿನಿಂದಾಗಿ ಅವರೊಳಗೆ ಮೂಡಿದ ಬೆರಗು ಮತ್ತು ತಿಳುವಳಿಕೆಯನ್ನೂ ಸಂಕೋಚವಿಲ್ಲದೇ ಹಂಚಿಕೊಳ್ಳುವಂತೆಯೇ ಅಭಿಜಾತ ಕೃತಿಗಳ ಓದಿನ ಮೂಲಕ ಸದ್ಯದ ಕೃತಿಯನ್ನು ಬೆಣ್ಣೆಯಿಂದ ಕೂದಲು ತೆಗೆದಷ್ಟೇ ಸೂಕ್ಷ್ಮದಲ್ಲಿ ಹಿಡಿದೆತ್ತಬಲ್ಲರು.

ಮುಖ್ಯವಾಗಿ ಅವರ ವಿಮರ್ಶೆ ನವ್ಯದಿಂದ ನವ್ಯೋತ್ತರದ ಕಾಲದ ಕಡೆಗೆ ನಡೆದ ಪಯಣ. ಅವರು ನವ್ಯಸಾಹಿತಿಗಳ, ವಿಮರ್ಶಕರ ಗರಡಿಯಲ್ಲಿ ಪಳಗಿದವರು. ಅದರ ಪ್ರಭಾವವನ್ನು ಇಂದಿನ ಅವರ ಎಲ್ಲ ಬರೆಹಗಳಲ್ಲಿ ಕಾಣಬಹುದು. ಅವರ ಬರೆಹಗಳಲ್ಲಿ ಸಾಂಸ್ಕೃತಿಕ ವಿಮರ್ಶೆಯ ಚಹರೆಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಅವರ ಸಾಹಿತ್ಯದ ಓದು ನವ್ಯದಿಂದ ಸಾಂಸ್ಕೃತಿಕ ವಿಮರ್ಶೆಯ ಕಡೆಗಿನ ನಡೆ. ಆದರೆ ಪೂರ್ಣವಾಗಿ ನವ್ಯದ ವಿಮರ್ಶೆಯ ಪರಿಕರಗಳಿಂದ ಪೂರ್ಣವಾಗಿ ಇಂದಿಗೂ ಬಿಡುಗಡೆ ಪಡೆಯಲು ಸಾಧ್ಯವಾಗಿಲ್ಲ. ನವ್ಯದ ಕೃತಿನಿಷ್ಟ ಹಾಗೂ ಪ್ರಾಯೋಗಿಕ ವಿಮರ್ಶೆಯ ವಿಧಾನಗಳೇ ಅವರಲ್ಲಿ ಹೆಚ್ಚು ಬಳಕೆಯಾಗಿರುವುದು. ಅಲ್ಲಲ್ಲಿ ಸಾಂಸ್ಕೃತಿಕ ವಿಮರ್ಶೆಯ ವಿಧಾನ ಅನುಸರಣೆ ಮತ್ತು ಅದರ ಪ್ರಸ್ತಾಪವಿದೆ. ಒಟ್ಟು ಇಲ್ಲಿನ ಅವರ ಬರೆಹಗಳಲ್ಲಿ ನವ್ಯದ ಓದಿನ ವಿಧಾನವನ್ನು ಉಳಿಸಿಕೊಂಡೇ ಅದಕ್ಕೆ ಇಂದಿನ ಕೆಲವು ವಿಧಾನಗಳನ್ನು ಬೆಸೆದುಕೊಳ್ಳಲು ಯತ್ನಿಸುತ್ತಿದ್ದಾರೆ.

ಸಾಹಿತ್ಯ ಕೃತಿಯೊಂದರ ಓದಿನಿಂದ ಪಡೆದುಕೊಂಡ ಅನುಭವವನ್ನು ಸಂಸ್ಕೃತಿಯ ಕಾಣ್ಕೆಯ ಮೂಲಕ ತೂಗಿನೋಡುವ ಇವರ ಪ್ರಯತ್ನ ಕನ್ನಡ ವಿಮರ್ಶಾಲೋಕದ ಮುಖ್ಯ ದಾರಿಯಾಗಿದೆ. ವಿಮರ್ಶೆ ಎನ್ನುವುದು ಕೇವಲ ಕೃತಿಯೊಂದರ ನೇತ್ಯಾತ್ಮಕ ಸಂಗತಿಗಳನ್ನು ಶೋಧಿಸುವುದಷ್ಟೆ ಅಲ್ಲ ಅನ್ನುವುದನ್ನು ಇವರ ಕೃತಿಗಳು ಒತ್ತಿ ಹೇಳುತ್ತವೆ. "ಒಂದು ಸಾಹಿತ್ಯ ಕೃತಿ ಅಥವ ಒಂದು ಸಾಂಸ್ಕೃತಿಕ ಸಂದರ್ಭ ಕುರಿತು ಬರೆಯುವಾಗ ಆ ಕೃತಿ ಅಥವಾ ಆ ಸಂದರ್ಭವನ್ನೇ ಕೇಂದ್ರವಾಗಿಟ್ಟುಕೊಂಡಿದ್ದರೂ ವಿಜಯಶಂಕರರ ಬರಹ ವಿಸ್ತಾರವಾದ ಮತ್ತು ಪುನರೋದಿನ ಫೋಕಸ್ ಪಡೆಯುವ ಕಾರಣ ಆ ಕೃತಿ ಅಥವಾ ಸಂದರ್ಭಕ್ಕೆ ಹೆಚ್ಚಿನ ಕ್ಯಾನ್ವಾಸ್ ತಾನೇ ತಾನಾಗಿ ಸಿಕ್ಕು ಬರವಣಿಗೆಯ 'ಮಿತಿ' ವಿಸ್ತಾರವಾಗಿಬಿಡುತ್ತದೆ. ಮಾದರಿಗಳನ್ನು ಮುರಿಯುವ ಮತ್ತು ಹೇಳಬೇಕೆನ್ನಿಸಿದ್ದನ್ನು ಹೇಳಿಯೇ ಹೇಳುವ ಅವರ ಬಗೆಯಲ್ಲಿ ವಿಮರ್ಶಕ ಪ್ರಜ್ಞೆಗಿಂತಲೂ ಸಂಸ್ಕೃತಿ ಚಿಂತನೆಯೇ ಹೆಚ್ಚು ಮನೆ ಮಾಡಿರುವಂತಿದೆ"[3] ಎಂಬುದು ನವ್ಯ ವಿಮರ್ಶೆ ಕೂಡಾ ಕಾಲಧರ್ಮಕ್ಕೆ ಅನುಗುಣವಾಗಿ ಸಾಂಸ್ಕೃತಿಕ ವಿಮರ್ಶೆಯಾಗಿ ರೂಪಾಂತರಗೊಳ್ಳುತ್ತಿರುವುದನ್ನು ಕಾಣಬಹುದು.

ಇಷ್ಟಾದರೂ ವಿಜಯಶಂಕರ ಅವರು ಈಗಲೂ ನವ್ಯ ವಿಮರ್ಶಾ ಮಾನದಂಡಗಳನ್ನು ಬಳಸಿಯೇ ವಿಮರ್ಶಾ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದಾರೆ. ಅವರ ವಿಮರ್ಶೆಯ ಒಂದು ಸರ್ವಾನ್ವಯ ಸ್ವರೂಪವೆಂದರೆ ಕೃತಿಯೊಂದನ್ನು ಅವರು ತಮ್ಮ ವಿಸ್ತಾರ ಓದಿನ ಸ್ಮೃತಿಯಿಂದ ಲಭಿಸಿದ ಹೋಲಿಕೆಯ ಅಪಾರ ಅವಕಾಶದಿಂದ ಎಲ್ಲ ಕೃತಿಗಳ ವಿಮರ್ಶೆಗೆ ಹೊರಡುತ್ತಾರೆ. ಅಪರೂಪದ ಸಂಯಮ ಹಾಗೂ ಬದ್ಧತೆಯಿಂದಲೇ ಅವರು ಬರೆಯುತ್ತಾರಾದರೂ ಈ ಹೋಲಿಕೆಯ ಉತ್ಸಾಹದಲ್ಲಿ ಕೃತಿಗಿಂತ ಹೆಚ್ಚಿಗೆ ಅವರೇ ಮುನ್ನಲೆಗೆ ಬಂದುಬಿಟ್ಟಂತೆ ಭಾಸವಾಗುತ್ತದೆ. ಈ ಸ್ವರೂಪವನ್ನು ಅವರ 'ನಿಜಗುಣ'ದಲ್ಲಿಯೂ ಕಾಣಬಹುದಾದರೂ ಇಲ್ಲಿ ಅವರ ಮನಸ್ಸು ಹೆಚ್ಚಿನ ಸಹಾನುಭೂತಿಯ ಹಿನ್ನೆಲೆಯಲ್ಲಿ ಕೃತಿ ಪರಿಶೀಲನೆಗೆ ತೊಡಗಿರುವುದನ್ನು ಗುರುತಿಸಬಹುದಾಗಿದೆ. ತಿರುಮಲೇಶರ ಕಾವ್ಯ ಕನ್ನಡ ಕಾವ್ಯ ಪರಂಪರೆಯ ದೃಷ್ಟಿಯಿಂದ ಮಹತ್ವದ ಸಾಧನೆಯನ್ನು ಮಾಡಿದಂತಾಗುವುದಿಲ್ಲ ಎಂಬುದಾಗಲಿ, ಮಹದೇವರ ಬಗ್ಗೆ ಬರೆಯುತ್ತ 'ಅವರು ನಿರ್ಮಿಸಿಕೊಂಡಿರುವ ಅನುಭವದ ಸಂದರ್ಭದಲ್ಲಿಯೇ ನಾವು ಅವರು ಬರೆದ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳಬೇಕು' ಎಂಬ ಮಾತನ್ನು ಮರೆಯಬಾರದು"[4] ಎಂದು ಬರೆಯುತ್ತಾರೆ.

ಆದರೆ ಹೀಗೆ ಬರೆದಾಗ ಕೃತಿಯೊಂದನ್ನು ಕೇವಲ ಕಾಲನಿಷ್ಠ, ಕೃತಿನಿಷ್ಠವಾಗಿಯೇ ಓದಿದರೆ ಅದರ ಸರ್ವ ಸಾಧ್ಯತೆಗಳನ್ನು ಕಂಡುಕೊಳ್ಳಬಹುದೇ ಎಂಬುದರ ಬಗ್ಗೆ ಮೌನ ತಾಳುವ ಇವರು, ಇದೇ ಲೇಖನದ ಕೊನೆಗೆ "ಕೃತಿಯ ಯಶಸ್ಸಿಗೆ ಈಗ ಹೇಳುತ್ತಿರುವ ಸ್ಥಿತಿ ಮುಗಿದ ಮೇಲೆ ಏನು ಎಂಬುದನ್ನು ಒಳಗೊಳ್ಳಬಹುದಾದ ತಾತ್ವಿಕ ನಿಲುವು ಬೇಕೇ ಇಲ್ಲ ಎಂಬುದು ದಲಿತ ಸಾಹಿತ್ಯದ ನಂಬುಗೆಯಾದರೆ ಅದು ನಾವೆಲ್ಲಾ ಸೇರಿ

ಚರ್ಚಿಸಬಹುದಾದ ವಿಷಯ”[೪] ಎನ್ನುವ ಮೂಲಕ ದಲಿತ ಸಾಹಿತ್ಯದ ವಿಶಿಷ್ಟ ಸಾಧನೆಯನ್ನು ತಮ್ಮ ಮಾಮೂಲಿ ನವ್ಯ ಮಾನದಂಡಗಳ ಮೂಲಕ ವಿವರಿಸಲು ಪ್ರಯತ್ನಿಸಿ ಅದರ ಸಾಧ್ಯತೆ ಕುಗ್ಗಿಸುತ್ತಾರೆ. ಇಷ್ಟಾದರೂ ಅವರನ್ನು ಪೂರ್ಣ ನವ್ಯ ವಿಮರ್ಶಕರೆಂದೂ ಇಲ್ಲವೇ ಪೂರ್ಣ ಸಾಂಸ್ಕೃತಿಕ ನೆಲೆಯ ವಿಮರ್ಶಕರೆಂದೂ ಕರೆಯಲಾಗುವುದಿಲ್ಲ. ಅವೆರಡನ್ನೂ ಕೂಡಿಸಿಕೊಂಡು ತಮ್ಮ ಸಾಹಿತ್ಯ ಸಂಗಾತಿತನವನ್ನು ನಿಷ್ಠೆಯಿಂದ ಮುಂದುವರೆಸಿದ್ದಾರೆ.

ಅವರ ಈ ಬಗೆಯ ಓದು ಮತ್ತು ವಿಮರ್ಶೆಯ ಬರೆಹಗಳಲ್ಲಿ ಅವರ ವಿಶೇಷತೆಯಿರುವುದು; ಸಾಹಿತ್ಯದ ಅಂತರ್‌ಪಠ್ಯೀಯ ಓದು ಮತ್ತು ಪಾಂಡಿತ್ಯಗಳಲ್ಲಿ. ಸಾಹಿತ್ಯದ ಮುಖ್ಯಪಠ್ಯಗಳನ್ನು ಆರಿಸಿಕೊಂಡು ಓದುವುದು ಬರೆಯುವುದು ಅವರ ಆಸಕ್ತಿ ಮತ್ತು ಸಾಹಿತ್ಯ ಪ್ರೀತಿಯನ್ನು ಎತ್ತಿತೋರಿಸುತ್ತದೆ. ಈ ನೆಲೆಯಲ್ಲಿ ಅವರದು ಗುಣಗ್ರಾಹಿ ಓದು. ಅವರೆನ್ನುವಂತೆ “ವಿಮರ್ಶೆ ಎಂಬುದು ಕೇವಲ ಒಬ್ಬ ಕವಿಯ ಅಥವಾ ಕೃತಿಗಳ ವ್ಯಾಖ್ಯಾನಗಳಲ್ಲ. ಅದು ಜನರ ವಿಚಾರ ಕ್ರಮವನ್ನು ನೋಡುವ ರೀತಿಯನ್ನು ಬದಲಿಸುವ ಕ್ರಮ ಎಂಬ ತಾತ್ವಿಕ ಸ್ಪಷ್ಟತೆಯಿಂದಲೇ ಬೇಂದ್ರೆಯವರು ವಿಮರ್ಶೆಯನ್ನು ಪ್ರತಿಪಾದಿಸಿದರು. ಆದರೂ ಅವರ ಎಲ್ಲ ವಿಮರ್ಶೆ ಚಿಂತನೆಗಳು ಒಟ್ಟಾಗಿ ಒಂದು ಶಾಸ್ತ್ರೀಯ ಸ್ವರೂಪವನ್ನು ನಿರ್ಮಿಸಿಕೊಡಲಿಲ್ಲ.”[೫] ಎನ್ನುತ್ತಾರೆ.

ಒಟ್ಟಿನಲ್ಲಿ ಅವರ ಸಾಹಿತ್ಯ ಸಂಗಾತಿತನದ, ಒಡನಾಟದ ಅವರ ವಿಮರ್ಶೆಯ ಬರೆಹಗಳು ಸಾಹಿತ್ಯವನ್ನು ಹೊಸದಾಗಿ ಪ್ರವೇಶಿಸುವವರಿಗೆ ನೆರವಾಗುತ್ತವೆ. ಅಲ್ಲದೆ ಇಂದು ದೇಶದಲ್ಲಿ ಮತೀಯವಾದಿ ಫ್ಯಾಸಿಸ್ಟ್ ಮತ್ತು ಸರ್ವಾಧಿಕಾರಿ ರಾಜಕಾರಣದ ಕಬಂಧ ಬಾಹುಗಳು ವ್ಯಾಪಿಸಿಕೊಳ್ಳುತ್ತಿರುವಾಗ ಇಂತಹ ಸಾಹಿತ್ಯ ವಿಮರ್ಶೆ ಬರೆಹಗಳು, ಸಾಹಿತ್ಯದ ಓದುಗರಲ್ಲಿ ಮಾನವೀಯತೆಯ ಸಾಹಿತ್ಯಾನುಭವ ಮತ್ತು ಬಹುತ್ವದ ಲೋಕಾನುಭವಗಳನ್ನು ಆರೋಗ್ಯಕರ ಚಿಂತನೆಗಳನ್ನು ಕೊಂಚವಾದರೂ ಬೆಳೆಸಿದರೆ ಅಷ್ಟರ ಮಟ್ಟಿಗೆ ಅವರ ಬರೆಹದ ಉದ್ದೇಶ ಯಶಸ್ವಿಯಾಗಿದೆ ಎಂದೇ ಭಾವಿಸಬೇಕು. ಅಂತಹ ಚಿಂತನೆಗಳನ್ನು ಬೆಳೆಸುವ ಆಶಯ ಅವರ ವ್ಯಕ್ತಿತ್ವದಲ್ಲಿದೆ ಎಂಬುದೇ ಅವರನ್ನು ಮುಖ್ಯವಾದ ವಿಮರ್ಶಕರಾಗಿ ಗುರುತಿಸುವಂತೆ ಮಾಡಿದೆ.

ಕೃತಿಯ ಸಂದರ್ಭ ಮತ್ತು ಆಶಯಗಳಿಗಷ್ಟೇ ಅವರ ಗಮನ ನಿಲ್ಲದೇ ಆ ಕೃತಿಯ ಓದಿನಿಂದಾಗಿ ಅವರೊಳಗೆ ಮೂಡಿದ ಬೆರಗು ಮತ್ತು ತಿಳುವಳಿಕೆಯನ್ನೂ ಸಂಕೋಚವಿಲ್ಲದೇ ಹಂಚಿಕೊಳ್ಳುವಂತೆಯೇ ಅಭಿಜಾತ ಕೃತಿಗಳ ಓದಿನ ಮೂಲಕ ಸದ್ಯದ ಕೃತಿಯನ್ನು ಬೆಣ್ಣೆಯಿಂದ ಕೂದಲು ತೆಗೆದಷ್ಟೇ ಸೂಕ್ಷ್ಮದಲ್ಲಿ ಹಿಡಿದೆತ್ತಬಲ್ಲರು. ಇದಕ್ಕೆ ಉದಾಹರಣೆಯಾಗಿ ಪರ್ವವನ್ನೂ, ಮೌನಿಯನ್ನೂ ಹೆಸರಿಸಬಹುದು. ಸಾಹಿತ್ಯ ಕೃತಿಯೊಂದರ ಓದಿನಿಂದ ಪಡೆದುಕೊಂಡ ಅನುಭವವನ್ನು ಸಂಸ್ಕೃತಿಯ ಕಾಣ್ಕೆಯ ಮೂಲಕ ತೂಗಿನೋಡುವ ಪ್ರಯತ್ನ ನಿಜಕ್ಕೂ ಕನ್ನಡ ವಿಮರ್ಶಾಲೋಕದ ಅಪರೂಪದ

ದಾರಿಯಾಗಿದೆ. ವಿಮರ್ಶೆ ಎನ್ನುವುದು ಬರಿಯ ನೇತ್ಯಾತ್ಮಕ ಅಲ್ಲ ಅನ್ನುವುದನ್ನು ಈ ಲೇಖನಗಳು ಒತ್ತಿ ಹೇಳುತ್ತವೆ.

ಆದರೆ ನವ್ಯ ಸಾಹಿತ್ಯ ಮತ್ತು ವಿಮರ್ಶೆ ದಲಿತ – ಬಂಡಾಯ ಸಾಹಿತ್ಯ ಚಳುವಳಿ ಆರಂಭವಾದಾಗ ಅಪಾರ ಟೀಕೆಗೆ ಗುರಿಯಾದಂತೆ ಈಗಲೂ ಅದು ತಳೆಯುವ ನಿಲುವುಗಳ ಕಾರಣಗಳಿಂದಾಗಿ ಅದು ಆಕ್ಷೇಪಕ್ಕೆ ಗುರಿಯಾಗುತ್ತಿದೆ. ಏಕೆಂದರೆ, ನವೋದಯ ಮತ್ತು ನವ್ಯ ಸಾಹಿತ್ಯಗಳೆರಡೂ ಪಶ್ಚಿಮದಿಂದ ಪ್ರೇರಣೆ ಪಡೆದರೂ ಎರಡೂ ಪಂಥಗಳು ಪಡೆದುಕೊಂಡ ಸ್ವರೂಪ ಮತ್ತು ಹಿನ್ನೆಲೆಗಳಲ್ಲಿ ಅಗಾಧ ವ್ಯತ್ಯಾಸಗಳು ಗೋಚರವಾಗಿವೆ. ನವೋದಯ ಸಾಹಿತ್ಯವು ತನ್ನ ಕಾಲದ ಹೊಸ ಸಾಹಿತ್ಯವನ್ನು ಸಮರ್ಥವಾಗಿ ಅರ್ಥ ಮಾಡಿಕೊಂಡು ಅದನ್ನೂ ತನ್ನ ರುಚಿಯ ಒಂದು ಭಾಗವನ್ನಾಗಿಸಿಕೊಳ್ಳಲು ಅದು ಬೇರೆ ಬೇರೆ ಶಕ್ತಿ ಸ್ರೋತಗಳನ್ನು ನಿಸ್ಸಂಕೋಚವಾಗಿ ಹುಡುಕಿಕೊಂಡಿತು. ಇಂಗ್ಲೀಷ್, ಗ್ರೀಕ್, ಇಟಾಲಿಯನ್ ಸಾಹಿತಿಗಳು ಶತಶತಮಾನಗಳಿಂದ ನಮ್ಮ ವಿಮರ್ಶಾ ಪರಿಭಾಷೆಯ ಗೊಡವೆ ಇಲ್ಲದೆ ಭಿನ್ನವಾಗಿ ಬೆಳೆದವರು. ಇವರು ನೀಡಿದ ಪಂಥಾಹ್ವಾನವನ್ನು ಸ್ವೀಕರಿಸಿ, ಅವರಿಂದ ದಕ್ಕಬೇಕಾದ್ದೆಲ್ಲವನ್ನೂ ತಾನು ದಕ್ಕಿಸಿಕೊಂಡಿತು; ದಷ್ಟ ಪುಷ್ಟವಾಗಿ ಬೆಳೆಯಿತು. ಆದರೆ ನವ್ಯದ ನಡೆ ಇಷ್ಟು ಸರಳವಾಗಿರಲಿಲ್ಲ.

ಕೋಲ್‌ರಿಜ್, ವರ್ಡ್ಸ್‌ವರ್ಥ್, ಅರಿಸ್ಟಾಟಲ್, ಪ್ಲೇಟೋ, ಲಾಂಜೈನಸ್ ಅಂಥವರು ಯಾವ ದೃಷ್ಟಿಕೋನದಿಂದ ಸಾಹಿತ್ಯದ ಕೃಷಿ ಮಾಡಿದ್ದಾರೆ, ಅದರ ಕ್ರಮವನ್ನು ನಾವು ಹೇಗೆ ನಮ್ಮ ವಿಮರ್ಶಾಕ್ರಮದೊಡನೆ ಹೊಂದಿಸಿಕೊಳ್ಳಬೇಕು ಎನ್ನುವ ಬಗ್ಗೆ ಬಿ.ಎಂ.ಶ್ರೀ, ಮಾಸ್ತಿ, ಕುವೆಂಪು ಮುಂತಾದವರು ಒಂದು ತೆರೆದ ವಿಮರ್ಶಕ ಮನಸ್ಸಿನಿಂದ ಕೆಲಸ ಮಾಡಿದರು. ನಮ್ಮ ವಿಮರ್ಶೆಯ ಬೀಸು ದೊಡ್ಡದಾಯಿತು. ಅದರ ಆಯಾಮಗಳು ಅನೇಕವಾದವು, ಸಾಹಿತ್ಯಕ ಪರಿಭಾಷೆ ಹೆಚ್ಚು ಸಮೃದ್ಧವಾಯಿತು. ಮೌಲ್ಯಮಾಪನ ಕ್ರಮ, ತೌಲನಿಕ ವಿಧಾನಗಳು ಬೇರೆಯಾದವು. ಈ ಎಲ್ಲವೂ ಕನ್ನಡಕ್ಕೆ ಲಾಭ ತಂದುಕೊಟ್ಟ ಕೆಲಸವೇ. ನವೋದಯ ಸಾಹಿತ್ಯಕ್ಕೆ ಬಂದ ವೈವಿಧ್ಯತೆ, ಸಾಹಿತ್ಯ ಪ್ರಕಾರದ ಶ್ರೀಮಂತಿಕೆ ವಿಮರ್ಶೆಯನ್ನು ಆರೋಗ್ಯಕರ ನಿಟ್ಟಿನಲ್ಲಿ ಬೆಳೆಸಿತು. ಹೊಸ ಸಾಹಿತ್ಯದ ಜೊತೆ ಹೊಸ ವಿಮರ್ಶಾಕ್ರಮವು ನಿರ್ದಿಷ್ಟವಾಗಿ, ಆರೋಗ್ಯಕರವಾಗಿ ಬೆಳೆಸಿತು.

ಆದರೆ ನವೋದಯಕ್ಕೆ ಹೋಲಿಸಿದರೆ ನವ್ಯ ಸಾಹಿತ್ಯ ವಿಮರ್ಶೆ ಪ್ರಮುಖವಾಗಿ ಅನುವಾದ ಆಧಾರಿತ ವಿಮರ್ಶೆ ಎಂಬ ಆರೋಪಕ್ಕೆ ತುತ್ತಾಗಿದೆ. ಈ ಕ್ಷೇತ್ರದಲ್ಲಿ ಅನೇಕ ಧೀಮಂತರು ತಮ್ಮನ್ನು ತೊಡಗಿಸಿಕೊಂಡಿದ್ದರೂ ಒಂದೇ ಒಂದು ಸ್ವೋಪಜ್ಞ ಪರಿಕಲ್ಪನೆಯನ್ನು ಸೃಷ್ಟಿಸಲಿಲ್ಲ, ಕಟ್ಟಿಕೊಡಲಿಲ್ಲ. ಕೇವಲ ಅನುವಾದ ಕ್ರಿಯೆಯನ್ನು ಮಾತ್ರ ಕೈಗೊಂಡು, ಹೊಸ ಹೊಸ ಪರಿಭಾಷೆಗಳನ್ನು ಸೃಷ್ಟಿಸಿಕೊಳ್ಳುವಲ್ಲಿಗೆ ಸೀಮಿತವಾಯಿತು. ಉದಾಹರಣೆಗೆ ಮುಂದೆ ಒದಗಿಸಿರುವ ಪರಿಭಾಷೆಯ ಯಾದಿಯನ್ನು ನೋಡಿದರೆ ಇದು ಸ್ಪಷ್ಟವಾಗಿ ಕಾಣುತ್ತದೆ. ನವ್ಯ ವಿಮರ್ಶೆಯ ಕಸುಬಿನಲ್ಲಿ ತೊಡಗಿಸಿಕೊಂಡವರಿಗೆಲ್ಲಾ ಅತ್ಯಂತ ಪ್ರಿಯವಾದ ಬಹು ಬಳಕೆಯಲ್ಲಿರುವ ಪಟ್ಟಿ ಇಲ್ಲಿದೆ. ಅದರ ಜೊತೆಗೆ ಇದರ ಇಂಗ್ಲಿಷ್

ಸಂವಾದಿ ಪಟ್ಟಿಯೂ ಇದೆ. ಕೃತಿಯಲ್ಲಿ ಮೂಡಿ ಬರದ ಆದರ್ಶ, ಭಾಷೆಯಲ್ಲಿ ಮೈದಾಳದ ಅನುಭವ," ಎನ್ನುವ ಮಾತು ಲೀವೀಸ್‌ನ "Intentions are nothing except as realized in language" ದ ಅನುವಾದ. ಇದೇ ರೀತಿ "ಭಾವಾಭಿನಯ = enactment in language "ದ ಸೃಜನಶೀಲ ಅನುಭವಾನ್ವೇಷಣೆ = explorative creative use of language " ವಸ್ತು ಪ್ರತಿರೂಪ = objective Correlative/ ಅಮೂರ್ತ, ಮೂರ್ತ = abstract, concrete; ಕರ್ಷಣೆ – Tension; ಸಂವೇದನಾ ಪಲ್ಲಟ; Change in Sensibility; ವ್ಯಂಗ್ಯ - Irony; ambiguity – ಅರ್ಥ ಸಂದಿಗ್ಧತೆಯ ಜೊತೆ ಒಳಾರ್ಥ ಶ್ರೀಮಂತಿಕೆ; ವೈರುಧ್ಯ = Contraiety, ಇವುಗಳ ಜೊತೆಗೆ deconstruction ವಿರಚನಾ ಕ್ರಿಯೆ; ಕರ್ಷಣ – Structaralism – ವಿನ್ಯಾಸೋತ್ತರ; archetype – ಆದ್ಯಪ್ರತಿ, ಮೊದಲಾದ ಕನ್ನಡದ ಜಾಯಮಾನಕ್ಕೆ ಹೊಂದದ ಪರಿಭಾಷೆಗಳನ್ನು ನವ್ಯದವರು ಕನ್ನಡಕ್ಕೆ ತಂದಿದ್ದಾರೆ ಎಂಬ ಆಕ್ಷೇಪವಿದೆ.

ಪಾಶ್ಚಾತ್ಯ ಕಾವ್ಯದ ಸಂದರ್ಭದಲ್ಲಿ, ಅಲ್ಲಿನ ಸೃಷ್ಟಿಶೀಲ ಬರವಣಿಗೆಯ ಹಿನ್ನೆಲೆಯಲ್ಲಿ ಸಹಜವಾಗಿ ಬಂದ ಇಂಥ ಮಾತುಗಳನ್ನು ಕನ್ನಡಕ್ಕೆ ಅನುವಾದ ಮಾಡಿ ತಾವು ಅವುಗಳ ಹಿಂದಿನ ಸಿದ್ಧಾಂತವನ್ನು ಕನ್ನಡ ಸಾಹಿತ್ಯದಲ್ಲಿ ಮರುರೂಪಿಸುತ್ತಿದ್ದೇವೆ ಎಂಬ ಆಲೋಚನೆಯನ್ನು ಆ ಕಾಲದಲ್ಲಿಯೇ ತೇಜಸ್ವಿಯವರು ನೇರವಾಗಿ ನಿರಾಕರಿಸಿದ್ದರು. ಆದರೆ ಇಂಥ ಅನುವಾದದ ಪರಿಕಲ್ಪನೆ ಹಿಂದೆ ಸಂಸ್ಕೃತ ಸಾಹಿತ್ಯ ವಿಮರ್ಶೆಯಲ್ಲಾಗಲಿ, ನವೋದಯ ಕಾಲದ ವಿಮರ್ಶೆಯಲ್ಲಾಗಲಿ ಅಷ್ಟಾಗಿ ಕಾಣುವುದಿಲ್ಲ. ಅದಕ್ಕೆ ಬದಲಾಗಿ ಕುವೆಂಪು, ಪುತಿನ, ಅಂಥವರ ಸಾಹಚರ್ಯದಲ್ಲಿ ಹೊಸ ವಿಮರ್ಶೆಯ ಪರಿಭಾಷೆಯನ್ನು ರೂಪಿಸಿಕೊಳ್ಳಲಾಯಿತು. ಪುತಿನ ಅವರ 'ಭವ ನಿಮಜ್ಜನ ಚಾತುರ್ಯ; ಲಘಿಮಾ ಕೌಶಲ; ಕುವೆಂಪು ಅವರ ಭೂಮದ ಕಲ್ಪನೆ; ಭವ್ಯತೆ; ಪೂರ್ಣದೃಷ್ಟಿ'ಯಂಥ ಪರಿಕಲ್ಪನೆಗಳು ಅವರ ಕಾವ್ಯ ರಚನಾ ಸಂದರ್ಭದಲ್ಲೇ ಬಂದವು. ಇವುಗಳ ಹಿಂದೆ ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆ ಇದ್ದರೂ ಕನ್ನಡಕ್ಕೆ ಅಷ್ಟು ಅಪರಿಚಿತವೆನಿಸುವುದಿಲ್ಲ. ನವೋದಯಕ್ಕೆ ಹೋಲಿಸಿದರೆ, ನವ್ಯ ವಿಮರ್ಶೆಯ ಕಾಲದಲ್ಲಿ ಈ ರೀತಿಯ ಸ್ವೋಪಜ್ಞ ಪರಿಕಲ್ಪನೆ ಕಂಡುಬಂದಿದ್ದು ಕಡಿಮೆ. ಬಂದಿರುವ ಎಲ್ಲಾ ಪರಿಭಾಷೆ, ಆಲೋಚನೆಗಳು ಪಶ್ಚಿಮದ ವಿವಿಧ ಸಿದ್ಧಾಂತಗಳಿಂದ ಪ್ರಭಾವಿತಗೊಂಡಿರುವಂತವೇ ಆಗಿವೆ.

ನವ್ಯದ ಈ ಬೆಳವಣಿಗೆಗೆ ಮುಖ್ಯ ಕಾರಣ, ನವ್ಯ ವಿಮರ್ಶೆಯಲ್ಲಿ ಹೆಚ್ಚಾಗಿ ಇಂಗ್ಲಿಷ್ ಅಧ್ಯಾಪಕರು ತೊಡಗಿಸಿಕೊಂಡಿದ್ದು. "ಪ್ರತಿ ಅರ್ಧ ದಶಕ, ದಶಕಗಳಲ್ಲಿ ಪಾಶ್ಚಿಮಾತ್ಯ ಪ್ರಪಂಚದಲ್ಲಿ ಶೋಕಿಗೆಂದು ಹುಟ್ಟಿ ಬಂದ ಎಲ್ಲ ಸಿದ್ಧಾಂತಗಳನ್ನು ಇಂಗ್ಲಿಷ್‌ನಲ್ಲಿ ಇಡಿಯಾಗಿ ನುಂಗಿ ಕನ್ನಡದಲ್ಲಿ ಕಟ್ಟಿದ್ದರ ಪರಿಣಾಮವೇ ಈ ಭ್ರಾಂತು. ಡಾ. ಸಿ.ಎನ್. ರಾಮಚಂದ್ರನ್ ಅಂಥವರು ಮುಖ್ಯವಾಗಿ ಮಾಡಿದ್ದು ಇದೇ. ಇಂಗ್ಲಿಷ್‌ನಲ್ಲಿ ಕಂಡ

ಸಿದ್ಧಾಂತಗಳನ್ನೆಲ್ಲ ಓದಲಾಗದ ಕನ್ನಡದಲ್ಲಿ ತಂದು ಅಮಾಯಕರಲ್ಲಿ ಒಂದು ಬಗೆಯ ಕೀಳರಿಮೆ ಹುಟ್ಟಿಸಿ ಕಡ ತಂದ ಪರಿಭಾಷೆಯನ್ನು ಚಾಲ್ತಿಗೆ ತಂದು ತಾವು ಹೊಸದೇನನ್ನೋ ಕನ್ನಡಕ್ಕೆ ಕಾಣಿಸುತ್ತಿದ್ದೇವೆ ಎಂದು ಭ್ರಮಿಸಿ ಉಳಿದವರನ್ನು ಶುಷ್ಕ ಪಾಂಡಿತ್ಯ ಪ್ರದರ್ಶನಕ್ಕೆ ತಳ್ಳಿದರು. ಒಂದು ಬಗೆಯ ಭಯಂಕರ ಕೊಳ್ಳುಬಾಕತನ ಕನ್ನಡದೊಳಕ್ಕೆ ಬಂದದ್ದು ಇಂಥ ಪಾಂಡಿತ್ಯ ಪ್ರದರ್ಶನ ಪ್ರಿಯರಿಂದ."[6] ಈ ಅಭಿಪ್ರಾಯವನ್ನು ಸಾರಾಸಗಟಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲವಾದರೂ ಕನ್ನಡ ಸಾಹಿತ್ಯ ವಿಮರ್ಶೆ ಸಾಮಾನ್ಯ ಜನರಿಂದ ದೂರವಾಗಲು ಈ ಬೆಳವಣಿಗೆಗಳೆ ಕಾರಣ ಎಂದರೆ ತಪ್ಪಾಗಲಿಕ್ಕಿಲ್ಲ.

ಎಪ್ಪತ್ತರ ದಶಕದ ನವ್ಯ ವಿಮರ್ಶೆಗೂ, ಇಪ್ಪತ್ತೊಂದನೇ ಶತಮಾನದ ಮೊದಲ ದಶಕದ ನವ್ಯ ವಿಮರ್ಶೆಗೂ ಕೆಲವು ಮೂಲಭೂತವಾದ ವ್ಯತ್ಯಾಸಗಳಿದ್ದು ಅವುಗಳನ್ನು ಇವತ್ತಿನ ಇಬ್ಬರು ಮುಖ್ಯ ನವ್ಯ ವಿಮರ್ಶಕರ ವಿಮರ್ಶಾ ಬರಹಗಳನ್ನು ಪರಿಶೀಲಿಸುವುದರ ಮೂಲಕ ಅದರ ಅವಸ್ಥಾಂತರವನ್ನು ಅಧ್ಯಯನ ಮಾಡಬಹುದು. ಕನ್ನಡದ ಮುಖ್ಯ ವಿಮರ್ಶಕರೆಂದು ಹೆಸರಾದ ಸಿ. ಎನ್. ರಾಮಚಂದ್ರನ್ ಮತ್ತು ಟಿ. ಪಿ. ಅಶೋಕ್ ಇವರನ್ನು ಗಮನಿಸಬಹುದು. ಇವರಿಬ್ಬರೂ ಆಂಗ್ಲ ಭಾಷೆಯ ಅಧ್ಯಾಪಕರಾಗಿದ್ದು ಕನ್ನಡ ವಿಮರ್ಶೆಯನ್ನು ವಿಸ್ತರಿಸಿದವರಲ್ಲಿ ಬಹುಮುಖ್ಯರಾಗಿದ್ದಾರೆ.

ಸಿ. ಎನ್. ರಾಮಚಂದ್ರನ್ ಅವರ ವಿಮರ್ಶೆಯ ಲಕ್ಷಣಗಳೆಂದರೆ, ಪಠ್ಯದ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸುವ 'ಪಠ್ಯಕೇಂದ್ರಿತ', ಕೃತಿಗಳ ವ್ಯಾಖ್ಯಾನದ ಸಂದರ್ಭದಲ್ಲಿ ಕ್ರಿಯಾಶೀಲವಾಗಿರುವ ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಕಥನಗಳ ಒಳನೋಟ, ಸಧ್ಯದ ಓದು ಎಂಬ ಪರಿಕಲ್ಪನೆಗೆ ನೀಡುವ ಮಹತ್ವದಿಂದ ತಮ್ಮ ಬರವಣಿಗೆಯು 'ರೂಪಾರಾಧನೆ'ಯೋ ಅಥವಾ ಸಾಮಾಜಿಕ - ಸಾಂಸ್ಕೃತಿಕ ವಿವರಗಳ ದಾಖಲಾತಿಯೋ ಆಗದಂತೆ ನೋಡಿಕೊಳ್ಳುವ ಎಚ್ಚರ ಇವರಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಸಿ. ಎನ್. ಆರ್, ಅವರ ನಿಲುವುಗಳನ್ನು 'ವಸಾಹತೋತ್ತರ ಓದು' ಎಂದು ಕರೆಯಲಾಗಿದ್ದು ಅವರ ಬರಹಗಳಲ್ಲಿ ಧಾರ್ಮಿಕ ಕೃತಿಗಳನ್ನು ಅನುಸಂಧಾನ ಮಾಡುವ ಬಗೆ, ಸಾಹಿತ್ಯೇತರ ಕೃತಿಗಳನ್ನು ಅವುಗಳ 'ರಾಜಕೀಯ ಆವರಣ'ದಿಂದ ಹೊರಗೆ ಇಟ್ಟು ನೋಡಬೇಕಾದ ಅಗತ್ಯ, ವೈದಿಕ ಸಂಸ್ಕೃತಿಯ ಪರವಾದ ನಿಲುವುಗಳು, ದೇಶೀವಾದ, ಅನನ್ಯತೆಯ ಹುಡುಕಾಟ ಮುಂತಾದ ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತದೆ ಎಂದು ಕನ್ನಡ ವಿಮರ್ಶೆ ಗುರುತಿಸಿದೆ.

ಸಿ. ಎನ್. ಆರ್, ಅವರ ವಿಮರ್ಶೆಯು ಪಾಶ್ಚಾತ್ಯ ಪ್ರೇರಿತ ವಾಸ್ತವದ ಅನುಸಂಧಾನಕ್ಕೆ ಮೀಸಲಾಗಿ, ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವೆನಿಸುವ 'ಆಧ್ಯಾತ್ಮಿಕ' ಕಾಳಜಿಗಳು, ಅನುಭವದ 'ನೆಲೆಗಳು', ದ್ಯಾವಾ-ಪೃಥ್ವಿಗಳ ಸಂಬಂಧದ ಪ್ರಶ್ನೆಗಳು, 'ಬೆಬ್ಬೆರಗು ನಲಿವುಗಳ ಪುಳಕದ' ಕ್ಷಣಗಳು ಮುಂತಾದ ಸಂಗತಿಗಳನ್ನು ಅಷ್ಟಾಗಿ ಗಮನಿಸುವುದಿಲ್ಲ, ಏಕೆಂದರೆ ಒಬ್ಬ ವಿಮರ್ಶಕನ ಲೋಕದರ್ಶನ, ಜೀವನವನ್ನು ಕುರಿತ

ತಾತ್ವಿಕ ನಿಲುವುಗಳು ಮತ್ತು 'ಸಾಹಿತ್ಯದ ಸ್ವರೂಪ ಹಾಗೂ ಸಾಧ್ಯತೆ'ಗಳನ್ನು ಕುರಿತ ಅನಿಸಿಕೆಗಳು ಅವನ ಬರವಣಿಗೆಯಲ್ಲಿ ಪ್ರತಿಫಲಿಸಬೇಕು. ಈ ಸಂಗತಿಗಳಿಗೂ ವಿಮರ್ಶೆಯ ಕೆಲಸಕ್ಕೆಂದು ಅವನು ಬಳಸಿಕೊಳ್ಳುವ ಹತಾರಗಳಿಗೂ ಅಂತಹ ಹತ್ತಿರದ ಸಂಬಂಧ ಇರಬೇಕಿಲ್ಲ. ನಮ್ಮಲ್ಲಿ ಯಾರಿಗೂ ಲೋಕದ ಬಗ್ಗೆ ತಟಸ್ಥವಾದ ನಿಲುವುಗಳಿರುವುದಿಲ್ಲ. ಸಾಹಿತ್ಯದ ಓದಿನಿಂದ ಸಾಮಾಜಿಕ ನಿಲುವುಗಳನ್ನು ಹೊರಗಿಡುವ ಪ್ರಯತ್ನಗಳು ಅಷ್ಟಾಗಿ ಯಶಸ್ವಿಯಾಗಲಾರವು.

ಈ ದೃಷ್ಟಿಯಿಂದ ನೋಡಿದಾಗ ಸಿ. ಎನ್. ಆರ್. ಅವರದು ಒಟ್ಟಂದದಲ್ಲಿ ಜನಪರವಾದ, ಹಾಗೆಂದು ರಾಜಕೀಯ/ಸಾಮಾಜಿಕ ಹೋರಾಟಗಳಲ್ಲಿ ನೇರವಾಗಿ ಭಾಗವಹಿಸದ ನೆಲೆಯೆಂದು ಹೇಳಬಹುದು. ಅವರು ವಿಮರ್ಶೆಯಲ್ಲಿ ಮಾರ್ಕ್ಸ್‌ವಾದ, ಸಮಾಜವಾದ, ಅಂಬೇಡ್ಕರ್ ವಾದ, ಗಾಂಧೀವಾದ ಮುಂತಾದವುಗಳ ಬಗ್ಗೆ ಖಚಿತವಾದ ಪರ–ವಿರೋಧಗಳನ್ನು ಕಾಣಲಾಗುವುದಿಲ್ಲ. ಹಾಗೆಯೇ ತಾವು ಬರೆಯುತ್ತಿರುವ ಲೇಖನದ ಆಚೆಗಿನ ಸಂಗತಿಗಳನ್ನು ಸಾಧ್ಯವಾದಷ್ಟು ಹೊರಗಡೆಯೇ ಇಟ್ಟು ನೋಡುವ ಅಕಡೆಮಿಕ್ ಶಿಸ್ತನ್ನು ಅವರ 'ಓದುಗಳು' ಅವರಿಗೆ ಕಲಿಸಿವೆ. 'ಆವರಣ'ದಂತಹ ಕೃತಿಯ ಬಗ್ಗೆ ಬರೆಯುವಾಗ ಅತ್ಯಂತ ಕಟುವಾಗಿ ಹಾಗೂ ಎಲ್ಲ ಸಾಮಾಜಿಕ ಕಳಕಳಿಯೊಂದಿಗೆ ಬರೆಯುವ ಅವರು, ಅನಂತಮೂರ್ತಿಯವರ ಬರವಣಿಗೆಯಲ್ಲಿ ಕಂಡುಬರುವ 'ಪ್ರಗತಿಶೀಲತೆ'ಯು ಹುಸಿ ಎನಿಸಿದರೆ, ಅದನ್ನೂ ಅಷ್ಟೇ ದಿಟ್ಟವಾಗಿ ಹೇಳಬಲ್ಲರು.

ರಾಮಚಂದ್ರನ್ ಅವರು, ತಮ್ಮ ಅಧ್ಯಾಪನದ ಅಗತ್ಯವಾಗಿ, ಪಾಶ್ಚಾತ್ಯ ಸಾಹಿತ್ಯಚಿಂತನೆಯ ಜೊತೆ ಅಂದಂದಿನ 'ಅಪ್ ಟು ಡೇಟ್' ಸಂಬಂಧವನ್ನು ಇಟ್ಟುಕೊಂಡವರು. ಅವರಿಗೆ ಸಮಕಾಲೀನರೋ ಕೊಂಚ ಹಿರಿಯರೋ ಆದ ನವ್ಯ ವಿಮರ್ಶಕರು ತಮ್ಮ ಸೃಜನಶೀಲ ಸಾಹಿತಿಗಳೂ ಆಗಿದ್ದರಿಂದ ಈ ರೀತಿಯ ಓದುಗಳನ್ನು ಅಷ್ಟಾಗಿ ಮಾಡದಿದ್ದ ಸಂದರ್ಭದಲ್ಲೂ ಅವುಗಳನ್ನು ಸಮರ್ಥವಾಗಿ ಕನ್ನಡಕ್ಕೆ ತಂದ ಸಿ. ಎಸ್. ರಾಮಚಂದ್ರನ್ ಅವರು ಮುಂದುವರೆದು, 'ಸಾಹಿತ್ಯ ವಿಮರ್ಶೆ' ಮತ್ತು 'ತೌಲನಿಕ ಅಧ್ಯಯನ' ಕೂಡ ತಮಗಿರುವ ಹಲವು ಭಾಷೆಗಳ ತಿಳಿವಳಿಕೆ ಅಥವಾ ಇಂಗ್ಲಿಷಿನಿಂದ ದತ್ತವಾದ ಅನ್ಯ ಕಥಾನಕಗಳನ್ನು ಉಪಯೋಗಿಸಿಕೊಂಡು ರಚಿತವಾದ ಕೃತಿಯೇ ಆಗಿದೆ. ವಿಮರ್ಶೆಯ ವಿಧಾನಗಳು ಮತ್ತು ಸಾಹಿತ್ಯವನ್ನು ಕುರಿತ ಸಿದ್ಧಾಂತಗಳು ನಿರ್ವಾತದಲ್ಲಿ ಹುಟ್ಟುವುದಿಲ್ಲ. ಅವುಗಳೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಜೆಂಡಾಗಳ ಒತ್ತಾಸೆಯಲ್ಲಿಯೇ, ನಿರ್ದಿಷ್ಟವಾದ ವರ್ಗಗಳ ಹಿತಾಸಕ್ತಿಗೆಂದೇ ಹುಟ್ಟಿಕೊಳ್ಳುತ್ತವೆ. ಉದಾಹರಣೆಗೆ, 'ಕಲೆಗಾಗಿ ಕಲೆ' ಮತ್ತು 'ಜೀವನಕ್ಕಾಗಿ ಕಲೆ' ಎನ್ನುವ ವಾದಗಳ ಹಿಂದೆ ಸಾಹಿತ್ಯದ ಸಾಮಾಜಿಕ ಸಾಧ್ಯತೆಗಳು ಮತ್ತು ಅವುಗಳ ಅಪೇಕ್ಷಣೀಯತೆಯನ್ನು ಸ್ಪಷ್ಟವಾದ ನಿಲುವುಗಳಿವೆ. ಆದ್ದರಿಂದ ಇಂತಹ ವಿಧಾನಗಳ ಆಯ್ಕೆಯಲ್ಲಿ ತಟಸ್ಥತೆಯು ಸಾಧ್ಯವಿಲ್ಲ. ಪಾಶ್ಚಾತ್ಯ ಸಾಹಿತ್ಯವಿಮರ್ಶೆಯಲ್ಲಿ ಪರಿಣಾಮಕಾರಿಯಾಗಿ ಬಳಕೆಯಾಗಿರುವ 'ಸ್ವಾಭಿಮುಖಿ ಸಾಹಿತ್ಯ', 'ಪರಿಭ್ರಮಣ' ಮತ್ತು 'ಶೋಧ' ಮುಂತಾದ ಹಲವು ಹಾದಿಗಳನ್ನು ಸಿ. ಎನ್.

ಆರ್. ಅವರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಇವುಗಳು ಸಾಮಾನ್ಯವಾಗಿ ಹಳಗನ್ನಡ/ನಡುಗನ್ನಡ ಕಾವ್ಯಗಳ ಸಂದರ್ಭದಲ್ಲಿಯೇ ಬಳಕೆಯಾಗುತ್ತವೆ. ಇಂಥ ಬರವಣಿಗೆಯಲ್ಲಿ ಸಂಬಂಧಪಟ್ಟ ಕಾವ್ಯಗಳ ಮೇಲೆ ಹೊಸ ಬೆಳಕು ಚೆಲ್ಲುವುದರಲ್ಲಿ ಸಿ. ಎನ್. ಆರ್. ಯಶಸ್ವಿಯಾಗಿದ್ದಾರೆ.

ಮೊದಲಿಗೆ ಸಿ. ಎನ್. ರಾಮಚಂದ್ರನ್ ಅವರ ವಿಮರ್ಶಾ ಸಾಹಿತ್ಯವನ್ನು ಗಮನಿಸುವುದಾದರೆ, ಆಖ್ಯಾನ ಮತ್ತು ವ್ಯಾಖ್ಯಾನ ಎನ್ನುವ ಪರಿಭಾಷೆಗಳು ಅವರ ಕೃತಿಗಳ ಮೂಲಕ ಮತ್ತೆ ಮತ್ತೆ ಮರುನಿರ್ವಚನಗಳಿಗೆ ಒಳಗಾಗಿವೆ. ಪಾಠವೊಂದು ಸ್ಥಳ, ಕಾಲ, ಧರ್ಮ, ಸಂಸ್ಕೃತಿ, ಧೋರಣೆಗಳಿಗೆ ಅನುಸಾರವಾಗಿ ಹೊಂದುವ ಎಲ್ಲಾ ರೂಪಾಂತರಗಳನ್ನು ಸಮಾನ ಶ್ರದ್ಧೆಯಿಂದ ನೋಡುವ ವ್ಯಾಖ್ಯಾನದ ಕ್ರಮ ಸಿ. ಎನ್. ಆರ್. ಅವರ ಬರಹಗಳ ಅನನ್ಯತೆ. ಮೌಖಿಕ ಪರಂಪರೆಯ ವಿಸ್ತಾರವಾದ ಅವರ ಅಧ್ಯಯನವು ರಾಮಾಯಣ–ಮಹಾಭಾರತದಂತಹ ಮಹಾಕಾವ್ಯಗಳ ಸಹಿತ ನಮ್ಮ ಪ್ರಾಚೀನ ಕೃತಿಗಳನ್ನು ಕುರಿತ ಈವರೆಗಿನ ಅನೇಕ ಅಪವ್ಯಾಖ್ಯಾನಗಳನ್ನು ಸರಿಪಡಿಸುವ ದಾರಿಯನ್ನು ತುಳಿದಿದೆ. ಮೌಖಿಕ ಪರಂಪರೆಯ ಅಧ್ಯಯನದ ವಿಧಾನಶಾಸ್ತ್ರವನ್ನು ಬಳಸಿಕೊಂಡು, ಶಿಷ್ಟ ಮಹಾಕಾವ್ಯ ಮತ್ತು ಸಾಹಿತ್ಯ ಕೃತಿಗಳನ್ನು ನೋಡುವ ಆ ಅಧ್ಯಯನ ವಿಧಾನ ಸಿ. ಎನ್. ಆರ್. ಅವರ ವಿಶಿಷ್ಟ ಕೊಡುಗೆ.

'ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು: ಮಾದರಿಗಳ ಪಲ್ಲಟ' ಎಂಬ ಲೇಖನವು ಪ್ರಸ್ತುತ ಚಲಾವಣೆಯಲ್ಲಿ ಇರುವ ಬೀಸುಹೇಳಿಕೆಗಳನ್ನು ಸಕಾರಣವಾಗಿ ನಿರಾಕರಿಸುತ್ತಲೇ, ಈಗಿನ ಕಾಲದ ಸಾಹಿತ್ಯ ಒಂದು ಪ್ರವೃತ್ತಿ, ಒಂದು ಚಳುವಳಿ, ಒಂದು ಮಾದರಿ ಎಂಬ ಘಟ್ಟವನ್ನು ಮೀರಿ, ಸಂಕೀರ್ಣ ಆಗಿರುವ ವಿನ್ಯಾಸಗಳನ್ನು ಚರ್ಚಿಸುತ್ತದೆ. ಮಹಾಕಾವ್ಯಗಳು ಮತ್ತು ಬ್ಲಾಗ್ ಬರಹಗಳು, ಕವನಗಳು ಮತ್ತು ಕತೆ, ಕಾದಂಬರಿಗಳು, ನಾಟಕಗಳು ಮತ್ತು ವಿಮರ್ಶೆಗಳು – ಹೀಗೆ ಪ್ರಭೇದಗಳ ಒಳಗೆಯೇ ಹೊಸ ಮಾದರಿಗಳ ರೂಪುಗೊಳ್ಳುವಿಕೆ ಮತ್ತು ಹೊಸಪ್ರಭೇದಗಳ ನಿರ್ಮಾಣ –ಇವು ಹೊಸ ಸಮಾಜದ ಶೋಧಕ್ಕಾಗಿ ತುಡಿಯುವ ಪ್ರಕ್ರಿಯೆಯ ಸಂಕಥನವು ಕನ್ನಡದ ಉದಾಹರಣೆಗಳ ಮೂಲಕ ವಿವರಿತವಾಗಿದೆ. ವೇದಿಕೆಗಳ ಸಾಮಾನ್ಯೀಕೃತ ಉದ್ಘೋಷಗಳ ನಡುವೆ ಇಂತಹ ಸೂಕ್ಷ್ಮ ಸತ್ಯಗಳನ್ನು ಹೇಳುವ ಬರಹಗಳು ನಮಗೆ ಇನ್ನಷ್ಟು ಬೇಕಾಗಿವೆ.

ಕನ್ನಡ ವಿಮರ್ಶಾ ಪರಂಪರೆಯಲ್ಲಿ, ಅರಗುವುದಕ್ಕೆ, ಕರಗುವುದಕ್ಕೆ ಇರುವ ಮಹತ್ವವು, ಜಿಡಿಯಾಗಿ ನಿಲ್ಲುವ, ವಿಧಾನಗಳು ಮತ್ತು ಉಪಕರಣಗಳಿಗೆ ಇಲ್ಲ. ಆಯಾತವಾದ ಅಕಡೆಮಿಕ್ ಸರಕುಗಳನ್ನು ನಾವು ಕಡೆಗಣಿಸಿದ್ದೇವೆ. ಅಷ್ಟೇಕೆ ನಮ್ಮ ಪ್ರಮುಖ ವಿಮರ್ಶಕರಲ್ಲಿ ಕೆಲವರಿಗೆ, ಕವಿ/ಕೃತಿಗಳ ಜೊತೆಗಿನ ಅನುಸಂಧಾನವು ಮುಖ್ಯವಾಗುವುದೇ ವಿನಾ, ಅದೇ ಕವಿ/ಕೃತಿಗಳ ಬಗ್ಗೆ ಇತರರು ಬರೆದ ವಿಮರ್ಶೆಯಲ್ಲ. ಆದ್ದರಿಂದಲೇ ರಾಮಚಂದ್ರನ್ ಅವರು ಮಾಡಿರುವ ಇಂತಹ ಪ್ರಯತ್ನಗಳು, ವಿಮರ್ಶಕನಿಗೆ ಗೌರವವನ್ನು ತಂದುಕೊಡುತ್ತವೆ, ಕೃತಿಗಳನ್ನು ಅರ್ಥ ಮಾಡಿಕೊಳ್ಳುವ

ಹೊಸ ಬಾಗಿಲುಗಳನ್ನು ಕೊಡುತ್ತವೆ. ಆದರೆ, ಕನ್ನಡ ವಿಮರ್ಶಾ ಪರಂಪರೆಯ ಇವುಗಳನ್ನು ಮುಖ್ಯ ಹಂತಗಳೆಂದು ಪರಿಗಣಿಸುತ್ತಿಲ್ಲ. ನವೋದಯ ವಿಮರ್ಶೆ, ನವ್ಯ ವಿಮರ್ಶೆ, ದಲಿತ–ಬಂಡಾಯ, ದೇಶೀವಾದ ಮುಂತಾದ ವಿಧಾನಗಳೇ ನಮಗೆ ಮುಖ್ಯವಾಗುತ್ತವೆ. ಹೀಗೆ ಆಗುವುದು ಅಕಡೆಮಿಕ್ ಶಿಸ್ತಾದ ವಿಮರ್ಶೆಗೆ ಅಪಾಯಕರ. ಆದರೆ, ಸ್ನಾತಕೋತ್ತರ ವಿದ್ಯಾರ್ಥಿಗಳೂ ಸೇರಿದಂತೆ ನಮ್ಮ ಬಹುಪಾಲು ಓದುಗರು ಅಕಡೆಮಿಕ್ ಸಾಹಿತ್ಯಶಾಸ್ತ್ರದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿರುವುದು ನಿಜ. ಸಂಸ್ಕೃತಿ ಅಧ್ಯಯನವೆಂದು ಕರೆಯಲಾಗುವ ಓದುಗಳು ಕೂಡ ಈ ಬಗೆಯ ಹತಾರಗಳನ್ನು ಸಾರಾಸಗಟಾಗಿ ನಿರಾಕರಿಸುತ್ತಿವೆ.

ಸಿ. ಎನ್. ಆರ್. ಅವರ ವಿಮರ್ಶೆಯ ಇನ್ನೊಂದು ಮುಖ್ಯ ಗುಣವೆಂದರೆ ಅವರ ಲೇಖನಗಳ ವಸ್ತುವೈವಿಧ್ಯ ಹಾಗೂ ಬರವಣಿಗೆಯ ಶೈಲಿಯಲ್ಲಿ ತೋರಿಸುವ ವೈವಿಧ್ಯ. ಅವರು ಯಾವುದೇ ವಿಷಯವನ್ನು ಬರವಣಿಗೆಗೆ ಬಾಹಿರವೆಂದು ತಿಳಿದಿಲ್ಲ. ಕಾವ್ಯ, ನಾಟಕ, ಕಥಾಸಾಹಿತ್ಯ, ವೈಚಾರಿಕ ಸಾಹಿತ್ಯ ಮುಂತಾದ ಎಲ್ಲ ಪ್ರಕಾರಗಳ ಬಗ್ಗೆಯೂ ಅವರು ಬರೆದಿದ್ದಾರೆ. ತ್ರಿವೇಣಿಯವರಂಥ 'ಜನಪ್ರಿಯ' ಲೇಖಕಿಯ ಬಗ್ಗೆ ಅವರು ಬರೆದಿರುವ 'ಮಾನೋಗ್ರಾಫ್' ಇದಕ್ಕೆ ಇನ್ನೊಂದು ಉದಾಹರಣೆ. ಹಾಗೆಯೇ ಅಂಕಣಗಳು, ಭಾಷಣಗಳು, ಸೆಮಿನಾರು ಪ್ರಬಂಧಗಳು, ಆಕಾಶವಾಣಿ ಭಾಷಣಗಳು, ಪತ್ರಿಕಾವಿಮರ್ಶೆ, ಕನ್ನಡದ ಕೃತಿಗಳ ಬಗ್ಗೆ ಇಂಗ್ಲಿಷಿನಲ್ಲಿ ಬರೆಯುವುದು ಮುಂತಾದ ಹಲವು ಹೊರೆಗಳನ್ನು ಅವರು ತೆಗೆದುಕೊಂಡು ಸಮರ್ಥವಾಗಿ ನಿರ್ವಹಿಸಿದ್ದಾರೆ. ಹಾಗೆಯೇ ದಲಿತ–ಬಂಡಾಯ ಚಳುವಳಿಯ ಏರುವೆಯ ದಿನಗಳಲ್ಲಿ ಬರೆಯತೊಡಗಿದ ಸಿ.ಎನ್.ಆರ್. ಅವರನ್ನು ನವ್ಯ ವಿಮರ್ಶಕರೆಂಬ ಹಣೆಪಟ್ಟಿಯಿಂದ ಹೆಸರಿಸಲು ಸಾಧ್ಯವಿಲ್ಲ. ಅವರ ವಿಮರ್ಶೆಯಲ್ಲಿ ಪೂರ್ವಪಕ್ಷವಿರುವುದೇ ಹೊರತು ಶತ್ರುಪಕ್ಷ ಇರುವುದಿಲ್ಲ. ಆದ್ದರಿಂದಲೇ ನವ್ಯವಿಮರ್ಶೆ ಇಂದು ರೂಪಕಾತ್ಮಕ ಭಾಷೆಯಲ್ಲಿ ಪ್ರಕಟಗೊಳ್ಳುತ್ತಿದೆ.

ಕನ್ನಡ ವಿಮರ್ಶಕರಿಗೆ ಕೆಲವು ಸಾಹಿತ್ಯಪ್ರಕಾರಗಳು ಉಳಿದವುಗಳಿಗಿಂತ ಹೆಚ್ಚಾಗಿ ಒಗ್ಗುತ್ತವೆ. ಉಳಿದ ಪ್ರಕಾರಗಳಲ್ಲಿ ಅವರು ಕೆಲಸ ಮಾಡಿದರೂ, ತಮ್ಮ ಪ್ರೀತಿಯ ಪ್ರಕಾರದ ನೆಲೆಯಿಂದಲೇ ಹೊರಡುತ್ತಾರೆ. ಉದಾಹರಣೆಗೆ, ಕುರ್ತಕೋಟಿಯವರ ಮನೋಧರ್ಮಕ್ಕೆ ಕಾವ್ಯವೇ ಮೂಲನೆಲೆಯಾದರೆ, ಆಮೂರ್ ಅವರಿಗೆ ಕಥಾಸಾಹಿತ್ಯವು ಹೆಚ್ಚು ಮುಖ್ಯವೆನಿಸುತ್ತದೆ. ಆ ದೃಷ್ಟಿಯಿಂದ ನೋಡಿದಾಗ, ಸಿ. ಎನ್. ಆರ್. ಅವರಿಗೆ ಕಥನವನ್ನು ಒಳಗೊಳ್ಳುವ ಯಾವುದೇ ಪ್ರಕಾರವು ಹೆಚ್ಚು ಸೇರುತ್ತದೆ. ಈ ಆಯ್ಕೆಯು ಹಳಗನ್ನಡ–ನಡುಗನ್ನಡ ಕಾವ್ಯಗಳು ಮತ್ತು ನಮ್ಮ ಕಾಲದ ಕಥೆ–ಕಾದಂಬರಿಗಳು ಎರಡನ್ನೂ ಒಳಗೊಳ್ಳುತ್ತವೆ. ಆದ್ದರಿಂದಲೇ ಅವರು ಜಾನಪದ ಕಥನಕಾವ್ಯಗಳಲ್ಲಿಯೂ ತೀವ್ರವಾದ ಆಸಕ್ತಿಯನ್ನು ತೋರಿಸಿದ್ದಾರೆ. ಹಾಗೆಯೇ ಅವರಿಗೆ ಸೃಜನಶೀಲತೆಯ ಸೀಮೆಯ ಆ ಕಡೆ ಈ ಕಡೆ ಇರುವ ಬರಹಗಳೂ ಇಷ್ಟವೇ. ಆದರೆ, ಅಮೂರ್ತದೊಂದಿಗೆ ಅನುಸಂಧಾನ ಮಾಡುವ ಕಾವ್ಯದ ಕಡೆಗೆ ಅವರ ಮನಸ್ಸು ಅಷ್ಟಾಗಿ ಒಲಿದಿಲ್ಲ. ಕಾವ್ಯದ ಬಗ್ಗೆ

ಬರೆದಾಗಲೂ ಅದರ ಪರಿಕರಗಳು ಮತ್ತು ಅದನ್ನು ವಿಮರ್ಶೆ ಮಾಡಲು ಬಳಸಬಹುದಾದ ಪರಿಕರಗಳ ಕಡೆಗೆ ಅವರು ತೀವ್ರವಾದ ಆಸಕ್ತಿಯನ್ನು ತೋರಿಸಿಲ್ಲ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ವನ್ನು ಕುರಿತು ಬರೆದಿರುವ ಲೇಖನದಲ್ಲಿ, ಅವರು ಹೊಸ ಆಕೃತಿ ಯಾವಾಗಲೂ ಹೊಸ ಮೌಲ್ಯಗಳನ್ನು ಸಂಕೇತಿಸುತ್ತದೆ. ಒಂದು ಆಕೃತಿಯನ್ನು ಪ್ರಜ್ಞಾಪೂರ್ವಕವಾಗಿ ತ್ಯಜಿಸುವುದೆಂದರೆ, ಆ ಆಕೃತಿ ಪ್ರತಿನಿಧಿಸುವ ಜೀವನ ದೃಷ್ಟಿಕೋನವನ್ನೂ ಮತ್ತು ಜೀವನಮೌಲ್ಯಗಳನ್ನೂ ನಿರಾಕರಿಸುವುದು ಬಹಳ ಮುಖ್ಯವಾದ ಮಾತು.

ಸಿ. ಎನ್. ರಾಮಚಂದ್ರನ್ ಅವರ ವಿಮರ್ಶಾ ಲಕ್ಷಣಗಳನ್ನು ಸ್ಪಷ್ಟಪಡಿಸಿಕೊಳ್ಳಲು ದೇವನೂರ ಮಹಾದೇವರ 'ಕುಸುಮಬಾಲೆ' ಕೃತಿಯನ್ನು ಕುರಿತು ಬರೆದಿರುವ ಲೇಖನವನ್ನು ಪರಿಶೀಲಿಸಬಹುದು. ಇದು ಕೃತಿಗಳ ವಿಶ್ಲೇಷಣೆಯ ಮೂಲಕವಾಗಿಯೇ ಮೌಲ್ಯಮಾಪನದ ಕೆಲಸದಲ್ಲಿ ತೊಡಗಿಕೊಳ್ಳುವ ಬರವಣಿಗೆ. 'ಕುಸುಮಬಾಲೆ'ಯು ಸುಲಭವಾಗಿ ಅರ್ಥವಾಗುವುದಿಲ್ಲವೆಂಬ ಆಕ್ಷೇಪಣೆಯನ್ನು ಪರಿಶೀಲಿಸಲು ಹೊರಡುವ ಲೇಖನವು, ಹಲವಾರು ಹೊಸ ವಿಧಾನಗಳನ್ನು ಮತ್ತು ಉಪಕರಣಗಳನ್ನು ಪರಿಚಯ ಮಾಡಿಕೊಡುತ್ತಾ ಆ ಮೂಲಕ ಆ 'ಕುಸುಮಬಾಲೆ'ಯನ್ನು ಕುರಿತಂತೆ ಇರುವ ನಮ್ಮ ತಿಳಿವಳಿಕೆಯನ್ನೂ ಬೆಳೆಸುತ್ತದೆ. ನಮ್ಮ ವಿಮರ್ಶೆಯ ಸನ್ನಿವೇಶದ ದುರಂತವೆಂದರೆ, ಇಲ್ಲಿ ಬಳಸಲಾಗಿರುವ ಉಪಕರಣಗಳನ್ನು ಬೇರೆ ಕೃತಿಗಳ ವಿಮರ್ಶೆಯಲ್ಲಿ ಬಳಸಿಕೊಳ್ಳುವ ಪ್ರಯತ್ನವನ್ನು ಇತರ ವಿಮರ್ಶಕರು ಮಾಡುವುದಿಲ್ಲ. ಇದಕ್ಕೆ ಕಾರಣಗಳನ್ನು ಹುಡುಕುವುದು ಕಷ್ಟ. ಇದು ಆಶಯನಿಷ್ಠ ವಿಮರ್ಶೆಗೆ ಸಹಜವಾದ ಮಿತಿಯೋ ಅಥವಾ ಪಾಶ್ಚಾತ್ಯವಾದುದರ ಬಗ್ಗೆ ಇಂದಿನ ವಾತಾವರಣದಲ್ಲಿಯೇ ಇರುವ ಅಸಹನೆಯ ಫಲವೋ ಅಥವಾ ಕನ್ನಡದ ವಿಮರ್ಶ ವಿವೇಕವು ಅಕಡೆಮಿಕ್ ಆದುದರ ಬಗ್ಗೆ ನಿಧಾನವಾಗಿ ಬೆಳೆಸಿಕೊಳ್ಳುತ್ತಿರುವ ಅನಾಸಕ್ತಿಯ ಫಲವೋ ಇರಬಹುದು. ಈ ಬರವಣಿಗೆಯಲ್ಲಿ ರಾಮಚಂದ್ರನ್ ಅವರು, ವಾಚಕಸ್ಪಂದನ ಸಿದ್ಧಾಂತವನ್ನು ಬಳಸಿಕೊಂಡು ತಮ್ಮ ಅನಿಸಿಕೆಗಳನ್ನು ಕಟ್ಟಿಕೊಟ್ಟಿದ್ದಾರೆ. ಹಾಗೆ ಮಾಡುವುದರ ಮೂಲಕ, ಆ ಕಾದಂಬರಿಯಲ್ಲಿ ಇದೆಯೆಂದು ಹೇಳಲಾದ ಬಿಕ್ಕಟ್ಟಿಗೆ ವಿವರಣೆ ಮತ್ತು ಪರಿಹಾರ ಎರಡನ್ನೂ ನೀಡಿದ್ದಾರೆ. ಅದಲ್ಲದೆ ಹೆಸರುವಾಸಿಯಾದ ಚಿಂತಕ-ವಿಮರ್ಶಕರಾದ ಬಖ್ತಿನ್ ಅವರ ವಿಚಾರಗಳನ್ನೂ ಬಳಸಿಕೊಳ್ಳುತ್ತಾರೆ.

ಅವರು ಲೇಖನದ ಮೊದಲಿನಲ್ಲಿ ತಾತ್ವಿಕವಾದ ಸಂಗತಿಗಳನ್ನು ಸರಳವಾಗಿ ಹಾಗೂ ನೇರವಾಗಿ ಪರಿಚಯಿಸುತ್ತಾರೆ. 'ಕೃತಿ' ಮತ್ತು 'ಪಠ್ಯ'ಗಳ ನಡುವಿನ ಅಂತರವನ್ನು ಸ್ಪಷ್ಟಪಡಿಸಿ ಪ್ರತಿಯೊಂದು ಓದಿನಲ್ಲಿಯೂ ಹೊಸದೊಂದು 'ಪಠ್ಯ'ವು ಮೂಡಿಬರುವುದೆಂದು ತಿಳಿಸುತ್ತಾರೆ. ಹೀಗೆ ಆಗುವುದರಿಂದಲೇ 'ಕೃತಿ'ಯ ಅರ್ಥವೆನ್ನುವುದು ಅನಿರ್ದಿಷ್ಟವೆಂದು ತಿಳಿಯಬೇಕು. ಅರ್ಥವು ಲೇಖಕನಲ್ಲಾಗಲೀ, ಕೃತಿಯಲ್ಲಾಗಲೀ ಅಥವಾ ಓದುಗನಲ್ಲಾಗಲಿ ಇರುವುದಿಲ್ಲ. ಅದು ಓದುಗ ಮತ್ತು ಪಠ್ಯದ ನಡುವೆ, ನಿರ್ದಿಷ್ಟವಾದ ದೇಶ-ಕಾಲ-

ಸಂದರ್ಭದಲ್ಲಿ ನಡೆಯುವ ಪರಸ್ಪರ ಕೊಳುಕೊಡುವಿಕೆಯ ಕೆಲಸದಲ್ಲಿ ಹುಟ್ಟಿಕೊಳ್ಳುತ್ತದೆ. 'ಕುಸುಮಬಾಲೆ'ಯ ವಿಷಯದಲ್ಲಿಯೂ ಇದು ಸತ್ಯವೇ. ಯಾವುದೇ ಪುಸ್ತಕವನ್ನು ಓದುವಾಗ, ಓದುಗನ ಮನಸ್ಸಿನಲ್ಲಿ ಕೆಲವು ನಿರೀಕ್ಷೆಗಳು ಇರುತ್ತವೆ. ಅವುಗಳ ಪೂರೈಕೆಯು ಆಗುತ್ತಾ ಹೋದರೆ, ಅವನಿಗೆ ಯಾವ ಗೊಂದಲವೂ ಇಲ್ಲದೆ ಕೃತಿಯ ಸಂವಹನವಾಗುತ್ತದೆ. ಈ ನಿರೀಕ್ಷೆಗಳು, ಓದುಗನ ಸಾಹಿತ್ಯದ ಓದಿನಿಂದ ಮಾತ್ರವಲ್ಲ, ಆ ಕಾಲದ ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶದಿಂದಲೂ ಹುಟ್ಟಿರುತ್ತವೆ. ಮುಖ್ಯರಾದ ಲೇಖಕರು ಸತತವಾಗಿ ಅಂತಹ ನಿರೀಕ್ಷೆಗಳನ್ನು ಮುರಿಯುತ್ತಾರೆ. ಬೇರೆ ಏನನ್ನೋ ಹೇಳುವುದರಿಂದ ಗ್ರಹಿಕೆಯ ಹೊಸ ಹಾದಿಗಳನ್ನು ಕಟ್ಟಿಕೊಡುತ್ತಾರೆ. ಆದರೆ, ಈ ಮುರಿಯುವಿಕೆಯ ಪ್ರಮಾಣವು ಜಾಸ್ತಿಯಾದಷ್ಟೂ ಅವನಿಗೆ ಸಂವಹನದ ಸವಾಲುಗಳು ಎದುರಾಗುತ್ತವೆ.

ಕುಸುಮಬಾಲೆಯು ಇಂತಹ ಸವಾಲುಗಳನ್ನು ಒಡ್ಡುವುದನ್ನು ಸಿ. ಎನ್. ಆರ್. ಅವರು ವಿವರವಾಗಿ ತೋರಿಸಿದ್ದಾರೆ. ದಲಿತರೇ ಬರೆದಿರುವ ಬರವಣಿಗೆಯಲ್ಲಿ ದಲಿತಪಾತ್ರಗಳು ಕೇವಲ ದುಃಖಿತರೂ ಶೋಷಿತರೂ ಆಗಿ ಕಾಣಿಸಿಕೊಳ್ಳದೆ, ಹಲವು ಬಗೆಯ ಬದುಕುವ ಹುನ್ನಾರಗಳನ್ನು ಬಲ್ಲ ತಂತ್ರಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಇಂಥ ಪಾತ್ರಗಳನ್ನು ವಿವರಿಸಲು ಅವರು ಜನಪದ ಕಥೆಗಳಲ್ಲಿ ಕಾಣಿಸಿಕೊಳ್ಳುವ 'ಟ್ರಿಕ್ ಸ್ಟರ್' ಎನ್ನುವ ಪರಿಕಲ್ಪನೆಯನ್ನು ಬಳಸಿಕೊಳ್ಳುತ್ತಾರೆ. ಕುರಿಯಯ್ಯನು ಹೇಳುವ ಕುಲಪುರಾಣವೂ ಈ ನಿಲುವನ್ನೇ ಸಮರ್ಥಿಸುತ್ತದೆ. ಆದರೆ, ಸಿ. ಎನ್. ಆರ್. ಅಂತಹ ಪಾತ್ರಗಳು ತಂತ್ರಿಗಳಾಗುವುದು, ವ್ಯವಸ್ಥೆಯೇ ಸೃಷ್ಟಿಸಿರುವ ಸನ್ನಿವೇಶದ ಕ್ರೂರ ಪರಿಣಾಮವೆಂದು ಸ್ಪಷ್ಟಪಡಿಸುತ್ತಾರೆ. ಹಾಗೆಯೇ ಕುಸುಮಬಾಲೆ ಎಂಬ ಶೀರ್ಷಿಕೆಯಿಂದ ಮೂಡುವ, ಅವಳೇ ಮುಖ್ಯ ಪಾತ್ರವೆಂಬ ನಿರೀಕ್ಷೆಯೂ ಹುಸಿಯಾಗುತ್ತದೆ.

ಹೀಗೆ ಹೆಜ್ಜೆಹೆಜ್ಜೆಗೂ ಆಗುವ ಅನುಭವದಿಂದ ಓದುಗನಲ್ಲಿ ಗೊಂದಲವು ಮೂಡಬಹುದು. ಆದರೆ, ಎಚ್ಚರಿಕೆಯಿಂದ ಓದಿದಾಗ, ಓದಿದವನ ಲೋಕದರ್ಶನವೇ ಬದಲಾಗುತ್ತದೆ. ಇಂತಹ ಪೂರ್ವಸಿದ್ಧತೆ ಇರುವವನು ಕೃತಿಯಿಂದ ಹೆಚ್ಚಿನ ತಿಳಿವಳಿಕೆಯನ್ನು ಪಡೆಯುತ್ತಾನೆ ಎಂಬ ಅವರ ನಿಲುವು ಸರಿಯಾಗಿದೆ. ಇಷ್ಟೇ ಅಲ್ಲದೆ, ಕೃತಿಯ ಒಳಗೆ ನಡೆಯುವ ಶೈಲಿಸಂಕರ ಮತ್ತು ಪ್ರಕಾರಸಂಕರಗಳನ್ನು ಕೂಡ ಅವರು ವಿವರಿಸುತ್ತಾರೆ. ಮುಖ್ಯವಾಗುವ ಮಾತೆಂದರೆ, ಈ ಹುಡುಕಾಟಗಳು 'ಕುಸುಮಬಾಲೆ'ಯ ಒರಿಮೆಯನ್ನು ಹೇಳುತ್ತಲೇ ಅದರ ಗ್ರಹಿಕೆಯ ಬಗೆಗಳನ್ನು ರೂಪಿಸಿಕೊಡುವುದು. ಹಾಗೆಯೇ 'ಕುಸುಮಬಾಲೆ'ಯ ಭಾಷೆಯ ಬಳಕೆಯಲ್ಲಿ ಇರುವ ಅನೇಕ ಸೂಕ್ಷ್ಮವಾದ ಸಂಗತಿಗಳನ್ನು ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಲಾಗಿದೆ. ಅಲ್ಲಿ ಇರುವುದು ಕೇವಲ ಸಾಮಾಜಿಕ ಉಪಭಾಷೆಯ ಬಳಕೆಯಲ್ಲ. ಬದಲಾಗಿ ಹಲವು ಭಾಷಾಬಳಕೆಯ ಸಂದರ್ಭಗಳನ್ನು ಗಮನಿಸುತ್ತಾ ಅವು ಪಾತ್ರಗಳನ್ನು ಕುರಿತ ಲೇಖಕನ ಧೋರಣೆಗೆ ಹಿಡಿದ ಕನ್ನಡಿಯೂ ಆಗಿರುವುದನ್ನು ಹೇಳುತ್ತಾರೆ. ಕೃತಿಯು ರೂಪಿತವಾಗಿರುವ ಛಿದ್ರಛಿದ್ರ

ಅನುಭವಗಳ ಲೋಕವು, ನಮ್ಮ ಅನುಭವಲೋಕವೂ ಛಿದ್ರವಾಗಿರುವ ಬಗೆಯ ಪ್ರತಿಫಲನವೆಂದು ಗ್ರಹಿಸಲಾಗಿದೆ.

ಕಳೆದ ದಶಕದ ನವ್ಯ ವಿಮರ್ಶೆ ಪಡೆದುಕೊಂಡ ರೂಪವನ್ನು ಪರಿಶೀಲಿಸಲು ಸಿ. ಎನ್. ಆರ್. ಜೊತೆಗೆ ಮತ್ತೊರ್ವ ಇಂಗ್ಲಿಷ್ ಅಧ್ಯಾಪಕರಾದ ಟಿ. ಪಿ. ಅಶೋಕ ಅವರ ಬರಹಗಳನ್ನು ಗಮನಿಸಬಹುದು. ಸಿ. ಎನ್. ಆರ್. ನಂತರದ ತಲೆಮಾರಿನವರಾದ ಇವರು, ನವ್ಯವನ್ನು ಸಂಪೂರ್ಣ ಒಪ್ಪಿದ್ದರೂ ಕನ್ನಡದ ಕೃತಿಗಳೊಂದಿಗೆ ಇವರ ಅನುಸಂಧಾನ ಹೆಚ್ಚಾಗಿ ನಡೆದಿರುವುದರಿಂದ ಜೊತೆಗೆ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಸಾಕಷ್ಟು ಕೃಷಿಮಾಡಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವುದರಿಂದ ಕಳೆದ ದಶಕದ ರೂಪಕೇಂದ್ರಿತ ವಿಮರ್ಶೆ ಇವರಲ್ಲಿ ಅಭಿವ್ಯಕ್ತಗೊಂಡಿರುವ ಬಗೆಯನ್ನು ಇಲ್ಲಿ ನೋಡಲಾಗಿದೆ.

ಟಿ. ಪಿ. ಆಶೋಕ ಅವರ ಈವರೆಗೂ ಪ್ರಕಟವಾದ ಕೃತಿಗಳು ಹೀಗಿವೆ : 'ಸಾಹಿತ್ಯ ಸಂದರ್ಭ', 'ಸಾಹಿತ್ಯ ಸಂಪರ್ಕ', 'ಸಾಹಿತ್ಯ ಸಂಬಂಧ', 'ಪುಸ್ತಕ ಪ್ರೀತಿ', 'ಪುಸ್ತಕ ಸಮಯ', 'ನವ್ಯ ಕಾದಂಬರಿಯ ಪ್ರೇರಣೆಗಳು', 'ಹೊಸ ಹೆಜ್ಜೆ – ಹೊಸ ಹಾದಿ', 'ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣ ಪ್ರಕ್ರಿಯೆ', 'ಶಿವರಾಮ ಕಾರಂತ: ಎರಡು ಅಧ್ಯಯನಗಳು', 'ವೈದೇಹಿ ಅವರ ಕಥೆಗಳು', 'ಯು. ಆರ್. ಅನಂತಮೂರ್ತಿ: ಒಂದು ಅಧ್ಯಯನ', 'ಕುವೆಂಪು ಕಾದಂಬರಿ: ಎರಡು ಅಧ್ಯಯನಗಳು' ಮತ್ತು 'ತೇಜಸ್ವಿ ಕಥನ' ಮೊದಲಾದ ವಿಮರ್ಶಾ ಸಂಕಲನಗಳು, ಜೊತೆಗೆ, 'ಕೆ. ವಿ. ಸುಬ್ಬಣ್ಣ ಆಯ್ದ ಬರೆಹಗಳು' , 'ಸಾಹಿತ್ಯ ವಿಮರ್ಶೆ–೧೯೮೩', 'ಎ. ಕೆ. ರಾಮಾನುಜನ್ ಅವರ ನೆನಪಿನ ಸಂಪುಟ', 'ಕಾರಂತ ಮಂಥನ', 'ಶಿವರಾಮ ಕಾರಂತ: ಈ ಶತಮಾನದ ನೋಟ' ಮುಂತಾದ ಸಂಪಾದಿತ ಕೃತಿಗಳೂ ಸೇರಿದಂತೆ, 'ರಷ್ಯನ್ ನೀಳ್ಗತೆಗಳು', 'ರಿಕ್ತ ರಂಗಭೂಮಿ' ಎಂಬ ಎರಡು ಅನುವಾದ ಕೃತಿಗಳು ಕೂಡ ಪ್ರಕಟವಾಗಿವೆ. ಇಷ್ಟು ದೀರ್ಘವಾಗಿ ಇವರ ಸಾಹಿತ್ಯ ಕೃಷಿಯನ್ನು ಪರಿಚಯ ಮಾಡಿಕೊಟ್ಟ ಉದ್ದೇಶ, ಇವರು ವಿಮರ್ಶೆಯಲ್ಲಿ ಎಷ್ಟು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆಂದು ಕಂಡುಕೊಳ್ಳವ ಸಲುವಾಗಿ.

ಟಿ.ಪಿ. ಅಶೋಕ ಅವರ ವಿಮರ್ಶಾ ಬರೆಹದ ಹಿಂದೆ ಇರುವ ತಾತ್ವಿಕತೆಯ ಸ್ವರೂಪ ಮತ್ತು ಬೆಳವಣಿಗೆ ಅತ್ಯಂತ ಕೂತೂಹಲದಾಯಕವಾದುದು. ೧೯೭೮ ರಲ್ಲಿ ಪ್ರಕಟವಾದ 'ನವ್ಯ ಕಾದಂಬರಿಯ ಪ್ರೇರಣೆಗಳು' ಕೃತಿಯಿಂದ ಆರಂಭಿಸಿ ೨೦೧೧ ರಲ್ಲಿ ಪ್ರಕಟವಾದ 'ಪುಸ್ತಕ ಸಮಯ' ಕೃತಿಯವರೆಗಿನ ಒಟ್ಟು ಬರೆಹಗಳಲ್ಲಿ ಪ್ರಮುಖವಾದ ಎರಡು ರೀತಿಯ ಬರೆಹಗಳಿವೆ. ಅವುಗಳಲ್ಲಿ ಒಂದು : ಪುಸ್ತಕ ಪರಿಚಯ. ಸುಮಾರು ನೂರಾರು ಸಾಹಿತ್ಯ ಹಾಗೂ ಸಾಂಸ್ಕೃತಿಕ ಗ್ರಂಥಗಳ ವಿಮರ್ಶಾತ್ಮಕ ಅವಲೋಕನ. ಎರಡು :ಕವಿ–ಕಾಲ–ಸಂದರ್ಭಗಳೊಡನೆ ಕೃತಿಗಳ ಮೌಲ್ಯಮಾಪನ. ಅಶೋಕರ ಆರಂಭಿಕ ಬರೆಹಗಳಲ್ಲಿ ಕಥೆಯನ್ನು ನಂಬು ಕಥೆಗಾರರನ್ನಲ್ಲ ಎಂಬ ಭಾವನೆ ಪ್ರಧಾನವಾಗಿ ಕಂಡರೆ, ನಂತರದ ಬರೆಹಗಳಲ್ಲಿ ಕಥೆ ಹಾಗೂ ಕಥೆಗಾರ ಇವೆರಡನ್ನು

ಒಂದೇ ಕಥಾನಕವಾಗಿ ಕಾಣುವ ದೃಷ್ಟಿ ಕಂಡು ಬರುತ್ತದೆ. ಇವರು ವಿಮರ್ಶೆ ಎನ್ನುವುದು ಕೇವಲ ಅಕಾಡೆಮಿಕ್ ಕಾರ್ಯವಲ್ಲ. ಅದೊಂದು ಮಾನಸಿಕ, ಸಾಂಸ್ಕೃತಿಕ ಅಗತ್ಯ. ಮನಸ್ಸಿನ ಆರೋಗ್ಯಕ್ಕೆ, ಸಂಸ್ಕೃತಿಯ ಆರೋಗ್ಯಕ್ಕೆ ವಿಮರ್ಶೆ ಅತ್ಯವಶ್ಯ. ವಿಮರ್ಶೆ ಕೇವಲ ಪ್ರತಿಕ್ರಿಯೆಯಲ್ಲ ಅದೇ ಮುಖ್ಯ ಕ್ರಿಯೆ. ಸರಿ ತಪ್ಪುಗಳ ತೀರ್ಪಿಗಿಂತ ಹೆಚ್ಚಾಗಿ ಎಚ್ಚರ ಸಂವಾದ ವಿಮರ್ಶೆಯ ಗುರಿಯಾಗಿರಬೇಕು. ವಿಮರ್ಶೆಯು ಕೃತಿಯ ಮೇಲೆ ಸವಾರಿ ಮಾಡಬಾರದು. ಒಳ್ಳೆಯ ವಿಮರ್ಶೆಯು ಕಲಾ ಕೃತಿಯೊಂದು ಹೀಗೆ ಇರಬೇಕೆಂದು ಷರತ್ತು ಹಾಕುವುದಿಲ್ಲ. ಕಲಾಕೃತಿಯ ಅನನ್ಯತೆಯನ್ನು ಗುರುತಿಸುವುದೆ ವಿಮರ್ಶೆಯ ಮುಖ್ಯ ಕಾರ್ಯ. ಓದುಗನು ಕೃತಿಕಾರನನ್ನು ತಲುಪಲು ಇರುವ ಅಡ್ಡಿ ಆತಂಕಗಳನ್ನು ತೊಡದು ಹಾಕಲು ಪ್ರಯತ್ನಿಸಬೇಕು. ಆ ಮೂಲಕ ಒಳ್ಳೆಯ ಕೃತಿಗಳ ವ್ಯಾಪಕ ಓದು, ಚರ್ಚೆಯನ್ನು ಪ್ರಚೋದಿಸುವಂತಿರಬೇಕು ಎಂಬ ನಂಬಿಕೆಗಳು ಇವರ ಬರೆಹಗಳುದ್ದಕ್ಕೂ ಕಾಣುತ್ತವೆ. ಇಂಥ ತಾತ್ವಿಕತೆಯ ಹಿನ್ನೆಲೆಯಲ್ಲಿ ವಿಮರ್ಶಿಸುವ ಇವರು 'ಕಲಾಕೃತಿಗಳು ನಿರ್ದಿಷ್ಟ ಕಾಲ – ದೇಶ – ಸಂಸ್ಕೃತಿಗಳ ಒತ್ತಡದಲ್ಲಿ ಸೃಷ್ಟಿಯಾಗುತ್ತವೆ' ಎಂಬುದನ್ನು ಪ್ರಧಾನವಾಗಿ ಪರಿಗಣಿಸುತ್ತಾರೆ.

ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಟಿ. ಪಿ. ಅಶೋಕ ಅವರ ವಿಮರ್ಶಾ ಶೈಲಿ ಕುರಿತು 'ಸಾಹಿತ್ಯ ಸಂಬಂಧ' ಕೃತಿಗೆ ಪ್ರಸ್ತಾವನೆ ಬರೆದ ಕೆ.ವಿ. ಅಕ್ಷರ ಅವರ ಮಾತುಗಳನ್ನು ಇಲ್ಲಿ ನೋಡಬಹುದು; "ಕನ್ನಡ ವಿಮರ್ಶೆಯಲ್ಲಿ ಪ್ರಮುಖವಾದ ಎರಡು ವಿಧಗಳಿವೆ. ಒಂದು ಡಿ. ಆರ್. ನಾಗರಾಜ್ ಅವರ ಮಾರ್ಗ, ಅದು ಪಶ್ಚಿಮದ ಪರಿಣಿತರಿಗಿಂತ ಹೆಚ್ಚು ಪರಿಣಿತಿಗೆ ಯತ್ನಿಸುವ ಮತ್ತು ಆ ಮೂಲಕವೇ ನಾಜೂಕಾಗಿ ಅವರಿಗೇ ಚೆಳ್ಳೇಹಣ್ಣು ತಿನಿಸುವ ತಿರುಮಂತ್ರದ ಹಾದಿ. ಇನ್ನೊಂದು 'ಡಿ–ಪ್ರೊಫೇಷನಲೈಜೇಷನ್' ನ ಹಾದಿ. ಟಿ. ಪಿ. ಅಶೋಕ ಅವರ ವಿಮರ್ಶೆ ಈ ಎರಡನೇ ಮಾದರಿಯದು. ಈ ಹಾದಿಯಲ್ಲಿ ಹೊರಡುವ ಲೇಖಕರು ತಾವು ಮತ್ತು ತಮ್ಮ ಓದುಗ, ಕೇಳುಗರಿಬ್ಬರೂ ಸಮಾನವಾಗಿ ಸರಳರೆಂದು ಭಾವಿಸಿಕೊಂಡು, ಮೇಲ್ನೋಟಕ್ಕೆ ಕ್ಲಿಷ್ಟವಾಗಿ ಕಾಣಬಹುದಾದ ಸಂಗತಿಗಳನ್ನು ಸರಳವಾಗಿ ವಿವರಿಸಲಿಕ್ಕೆ ಸಾಧ್ಯವೆಂದು ನಂಬುವಂತವರು. ಮಾತ್ರವಲ್ಲ ಸಾಹಿತ್ಯದ ಪ್ರಯೋಜನವು ಸಾಹಿತ್ಯದ ವಿದ್ಯಾರ್ಥಿಗಳ ಆಚೆಗೂ ಇದೆಯೆಂಬ ನಂಬಿಕೆ ಈ ವರ್ಗದ ವಿಮರ್ಶಕರಿಗಿದೆ."[2] ಈ ಕಾರಣದಿಂದಾಗಿಯೇ ಅಶೋಕ ಅವರ ವಿಮರ್ಶೆಯ ಬರೆಹವು ಅತ್ಯಂತ ಸರಳವಾಗಿರುತ್ತದೆ ಹಾಗೂ ಕೃತಿನಿಷ್ಠವಾಗಿರುತ್ತದೆ. ಇವರು ಯಾವುದೇ ಕೃತಿಯ ಬಗ್ಗೆ ಬರೆಯುವಾಗಲೂ ಅದರಲ್ಲಿನ ಕಥೆಯನ್ನು ಪುನಃ ಹೇಳುತ್ತಾ ಹೋಗುತ್ತಾರೆ. ಅಷ್ಟೇ ಅಲ್ಲ ಆ ಕೃತಿಯೊಳಗಿಂದ ದೀರ್ಘ ಉಲ್ಲೇಖಗಳನ್ನು ನೀಡುತ್ತಾರೆ. ಇದರಿಂದಾಗಿ ಕೆಲವರು ಅಶೋಕ ಅವರನ್ನು 'ಸಾರಾಂಶ ವಿಮರ್ಶಕ' ಎಂಬುದಾಗಿ ವ್ಯಂಗ್ಯವಾಡಿದ್ದಾರೆ. ಆದರೆ ಮೇಲೆ ವಿವರಿಸಿದ ಅವರ ವಿಮರ್ಶಾ ನಂಬಿಕೆ ಹಾಗೂ ತಿಳುವಳಿಕೆಯ ಹಿನ್ನೆಲೆಯಲ್ಲಿ ಗಮನಿಸಿದರೆ ಅದೊಂದು ದೋಷವಲ್ಲ; ಗುಣ ಎಂಬುದು ಅರಿವಿಗೆ ಬರುತ್ತದೆ. ಅದೂ ಅಲ್ಲದೇ ಸಾರಾಂಶ ಹೇಳುವುದರಲ್ಲೇ ಅಶೋಕ ಅವರು ವಿರಮಿಸುವುದಿಲ್ಲ. ಅದರ ಗುಣ

ದೋಷಗಳನ್ನು ಹಾಗೂ ಸಾಧ್ಯತೆಗಳನ್ನು ಪರಿಶೀಲಿಸಿ ಮೌಲ್ಯಮಾಪನವನ್ನು ಮಾಡುತ್ತಾರೆ. ಇದರೊಳಗೆ ಅವರದೇ ಆದ ದೃಷ್ಟಿ ಧೋರಣೆಗಳೂ ಇರುತ್ತವೆ.

ಎಂಬತ್ತರ ದಶಕದಿಂದ ಹೆಚ್ಚು ಚಾಲ್ತಿಯಲ್ಲಿರುವ ಸಾಮಾಜಿಕ ವಿಮರ್ಶೆಯನ್ನು ಟಿ. ಪಿ. ಅಶೋಕ ಅವರ ಎದುರುಗೊಂಡ ಬಗೆಯನ್ನು ಕೆಲವು ವಿಶಿಷ್ಟ ಅಂಶಗಳು ಸ್ಪಷ್ಟಪಡಿಸುತ್ತವೆ. ಮೊದಲಿಗೆ ಇವರ ವಿಮರ್ಶೆಯ ಒಟ್ಟು ಬರೆಹದಲ್ಲಿ ದಲಿತ ಕಥನಗಳು ಹಾಗೂ ಕಥನಕಾರರ ಬಗ್ಗೆ ಬರೆದಿರುವುದನ್ನು ನೋಡಬಹುದು. ಅವುಗಳಲ್ಲಿ 'ಲೋಹಿಯಾ ಅವರ ಜಾತಿ ಪದ್ಧತಿ', 'ಕುಂವೀ ಅವರ ಡೋಮ ಮತ್ತಿತರ ಕಥೆಗಳು', 'ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳು', 'ದೇವನೂರ ಮಹದೇವ ಅವರ ಕುಸುಮಬಾಲೆ', 'ಸಿದ್ಧಲಿಂಗಯ್ಯ ಅವರ ಉರಿ ಕಂಡಾಯ', ದೇವನೂರ ಮಹದೇವ : ವ್ಯಕ್ತಿ ಮತ್ತು ಕೃತಿ', 'ಕುವೆಂಪು ಆಧುನಿಕತೆಯ ಪ್ರಶ್ನೆ', 'ಕನ್ನಡ ಕಾದಂಬರಿ ಪರಂಪರೆ ಮತ್ತು ಭಾರತೀಪುರ' ಇವೇ ಮೊದಲಾದ ಬರೆಹಗಳನ್ನು ಆಧರಿಸಿ ಟಿ. ಪಿ. ಅಶೋಕ ಅವರ ದಲಿತ ದೃಷ್ಟಿಕೋನವನ್ನು ಗುರುತಿಸುವ ಪ್ರಯತ್ನ ಮಾಡಬಹುದಾಗಿದೆ. ಟಿ. ಪಿ. ಅಶೋಕ ಅವರ ವಿಮರ್ಶಾ ಬರೆಹಗಳಲ್ಲಿ ವ್ಯಕ್ತವಾಗಿರುವ ದಲಿತ ದೃಷ್ಟಿಕೋನವನ್ನು ಪ್ರಧಾನವಾದ ಎರಡು ನೆಲೆಗಳಲ್ಲಿ ಗುರುತಿಸಬಹುದಾಗಿದೆ. ಅವುಗಳಲ್ಲಿ ಮೊದಲನೆಯದು ದಲಿತ ಸಮುದಾಯದ ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆ. ಎರಡನೆಯದು ದಲಿತ ಕೃತಿಗಳ ಸಾಹಿತ್ಯಿಕ ನೆಲೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಯ ಭಾರತೀಯ ಸಂದರ್ಭದೊಳಗೆ ದಲಿತರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಗಾದವರು ಎಂಬ ಸಾಮಾನ್ಯ ತಿಳುವಳಿಕೆಯನ್ನು ಅಶೋಕ ಅವರೂ ಕೂಡ ಮಾನ್ಯ ಮಾಡುತ್ತಾರೆ. ದಲಿತರ ಇಂಥ ದುಸ್ಥಿತಿಗೆ ಜಮೀನ್ದಾರರು ಹಾಗೂ ಧಾರ್ಮಿಕ ಶಕ್ತಿಗಳು ಒಂದು ಕಾರಣ ಎಂಬುದನ್ನು ಯಾವುದೇ ತಕರಾರು ಇಲ್ಲದೇ ಒಪ್ಪಿಕೊಂಡಿದ್ದಾರೆ. ಹಾಗೂ ಈ ಜನವರ್ಗಗಳು ಸಮಾಜದಲ್ಲಿ ಶೋಷಣೆಯ ಜಗತ್ತಿನಿಂದ ಎದ್ದು ಬರಬೇಕು ಎಂಬುದರ ಬಗ್ಗೆ ಯಾವುದೇ ಅನುಮಾನವಿಲ್ಲದ ದೃಷ್ಟಿ ಅಶೋಕ ಅವರ ಬರೆಹಗಳಲ್ಲಿ ಬಹುಪಾಲು ಸಂದರ್ಭಗಳಲ್ಲಿ ಗುಪ್ತಗಾಮಿನಿಯಾಗಿ ಕೆಲವೊಮ್ಮೆ ನೇರವಾಗಿ ವ್ಯಕ್ತವಾಗಿರುವುದನ್ನು ಕಾಣಬಹುದು. ಇದಕ್ಕೆ ಆಧಾರವಾಗಿ ಅವರ ವಿಮರ್ಶಾ ಬರೆಹವೊಂದರಲ್ಲಿ ಬಂದಿರುವ ಕೆಲವು ಮಾತುಗಳನ್ನು ನೋಡುವುದಾದರೆ : ಕೆಳವರ್ಗದ ಬದುಕು ಬದಲಾಗಬೇಕು. ಶೋಷಣೆ ನಿಲ್ಲಬೇಕು. ಶೋಷಕ ವರ್ಗವನ್ನು ಎದುರಿಸಲು ಶೋಷಿತ ವರ್ಗ ಸಜ್ಜಾಗಬೇಕು ಎಂಬುದನ್ನೇ ಎಲ್ಲಾ ಪ್ರಜ್ಞಾವಂತ ಓದುಗರು ಬಯಸುತ್ತಾರೆಂದು ಅಭಿಪ್ರಾಯ ಪಡುತ್ತಾರೆ.

ದಲಿತರು ಶೋಷಣೆಯಿಂದ ವಿಮುಕ್ತಿ ಪಡೆಯವುದರ ಬಗ್ಗೆ ಚಿಂತಿಸುತ್ತಾ, ಈ ವಿಮುಕ್ತಿಗಾಗಿ ಶ್ರಮಿಸಿದ ಅಂಬೇಡ್ಕರ್, ಗಾಂಧಿ ಮತ್ತು ಲೋಹಿಯಾ ಅವರ ಪ್ರಯತ್ನಗಳನ್ನು ಶ್ಲಾಘಿಸುತ್ತಾರೆ. ಈ ಮೂವರನ್ನು 'ಭಾರತೀಯ ಸಮಾಜವನ್ನು ಅದರ ಮೂಲ ಸ್ಥರಗಳಲ್ಲಿ ವಿಶ್ಲೇಷಿಸಿದ ಅತೀ ಮುಖ್ಯ ಭಾರತೀಯ ಚಿಂತಕರೆಂದು' ಒಪ್ಪಿಕೊಳ್ಳುತ್ತಾರೆ. 'ಭಾರತೀಯ ಸಮಾಜದ ಪರಂಪರಾಗತ ವ್ಯವಸ್ಥೆಯಲ್ಲಿ ದಲಿತರಿಗೆ

ನ್ಯಾಯ ದೊರಕುವುದಿಲ್ಲ. ಬದಲಿಗೆ ಹೊಸ ನ್ಯಾಯಾಂಗ ವ್ಯವಸ್ಥೆ, ಹೊಸ ರಾಜಕೀಯ ವ್ಯವಸ್ಥೆ, ಹೊಸ ಧಾರ್ಮಿಕ ವ್ಯವಸ್ಥೆಯಿಂದ ಮಾತ್ರ ದಲಿತರ ವಿಮೋಚನೆ ಸಾಧ್ಯ' ಎಂಬುದನ್ನು ಶ್ರೀರಂಗರ ಹರಿಜನ್ವಾರ ನಾಟಕದಲ್ಲಿ ಹರಿಜನರಿಗೆ ಸಿಕ್ಕ ಮುನಿಸಿಪಾಲಿಟಿ ಚುನಾವಣೆಯ ಮತದಾನದ ಹಕ್ಕು, ಭೈರಪ್ಪ ಹಾಗೂ ಅನಂತಮೂರ್ತಿ ಅವರುಗಳ 'ದಾಟು' ಮತ್ತು 'ಭಾರತೀಪುರ' ಕಾದಂಬರಿಗಳಲ್ಲಿ ವ್ಯಕ್ತವಾಗಿರುವ ಹೊಸಶಿಕ್ಷಣ ವ್ಯವಸ್ಥೆ ಹಾಗೂ ಹೊಸ ಉತ್ಪಾದನಾ ವ್ಯವಸ್ಥೆಗಳಿಂದ ಉಂಟಾದ ಬದಲಾವಣೆಗಳ ಹಿನ್ನೆಲೆಯಲ್ಲಿ ಸಮರ್ಥಿಸುತ್ತಾರೆ.

ಆದರೆ ಜಾತಿ ವ್ಯವಸ್ಥೆಯನ್ನು ಏಕ ಮುಖವಾಗಿ ನೋಡುವ ಕ್ರಮವನ್ನು ಪ್ರಶ್ನಿಸುತ್ತಾರೆ. ಲೋಹಿಯಾ ಅವರು ಹೇಳಿರುವ ಸಮಾಜದ ಅಸಮಾನತೆಗೆ ಜಾತಿ ಪದ್ಧತಿಯೇ ಕಾರಣ. ಒಂದೇ ಜಾತಿಯೊಳಗೇ ಕಂಡು ಬರುವ ಅಕ್ಷರ, ವರ್ಗ ಹಾಗೂ ಲಿಂಗ ಭೇದಗಳನ್ನು ಮರೆಯುವಂತಿಲ್ಲ. ಶೂದ್ರರು ದ್ವಿಜರ ಕೆಟ್ಟ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಸರಿಯಲ್ಲ' ಎಂಬ ಮಾತನ್ನು ಎತ್ತಿ ಹಿಡಿಯುತ್ತಾರೆ. ಕ್ರೌರ್ಯಗಳು ಯಾವುದೇ ಒಂದು ಸಮುದಾಯಕ್ಕೆ ಸೀಮಿತವಲ್ಲ ಎಂಬುದರ ಕಡೆಗೆ ಗಮನ ಸೆಳೆಯುತ್ತಾರೆ. ವಿಶೇಷವಾಗಿ ಲೋಹಿಯಾ ಅವರು ಹೇಳಿದಂತೆ 'ಜಾತಿ ಪಾಲಿಸಿದವರು ದ್ವಿಜರೆನ್ನುವಾಗಲೂ ರಾಷ್ಟ್ರೀಯ ಜಾತಿ ಪದ್ಧತಿಯಲ್ಲಿ ದಲಿತರು ಶೂದ್ರರಾದರೆ; ಅಂತರಾಷ್ಟ್ರೀಯ ಜಾತಿ ಪದ್ಧತಿಯಲ್ಲಿ ದ್ವಿಜರೂ ಶೂದ್ರರೇ' ಎಂಬುದನ್ನು ಒತ್ತಿ ಹೇಳುತ್ತಾರೆ. ಇದು ಏನೇ ಆದರೂ ಭಾರತೀಯ ಸಮಾಜದ ಜಾತಿ ಪದ್ಧತಿಯಲ್ಲಿ ದ್ವಿಜರ ಪಾತ್ರವಿರುವುದು ಸುಸ್ಪಷ್ಟ. ಆದರೂ ಈ ಮಾತನ್ನು ಇಡೀ ದ್ವಿಜ ಸಮಾಜಕ್ಕೆ ಅನ್ವಯಿಸಬಾರದು ಎಂಬ ಅಭಿಪ್ರಾಯವಿದೆ. ಈ ಹಿನ್ನೆಲೆಯೊಳಗೆ ಅಶೋಕ ಅವರ ಒಂದು ಅಭಿಪ್ರಾಯ ಹೀಗಿದೆ : ಜಾತಿ ಪದ್ಧತಿಯನ್ನು ಕೊನೆಗಾಣಿಸಲು ದ್ವಿಜರು ಹಾಗೂ ಶೂದ್ರರು ಒಟ್ಟಾಗಿ ನಿಂತರೆ ಸರ್ವಾಂಗ ಪ್ರಗತಿಯಾಗುತ್ತದೆ. ಈ ಸಂದರ್ಭಕ್ಕೆ ಶೂದ್ರರು ಮೇಲ್ಜಾತಿಯವರ ಬಗ್ಗೆ ದ್ವೇಷ ಹುಟ್ಟಿಸಬಾರದು. ದ್ವಿಜರು ತಮಗೆ ಆಗುವ ತಾತ್ಪೂರ್ತಿಕ ಅನ್ಯಾಯವನ್ನು ಸಹಿಸಿಕೊಳ್ಳಬೇಕು. ಈ ಮಾತುಗಳಿಂದ ಅಶೋಕ ಅವರ ಧೋರಣೆ ಏನೆಂಬುದು ಸ್ಪಷ್ಟವಾಗುತ್ತದೆ.

ದಲಿತರ ವಿಮೋಚನೆಗಾಗಿ ಅಂಬೇಡ್ಕರ್ ಅವರು ನೀಡುವ ಸಾಧ್ಯತೆಗಳ ಬಗ್ಗೆ ಪರಿಶಿಲಿಸುತ್ತಾ ಕೆಲವು ಮಹತ್ವದ ಪ್ರಶ್ನೆಗಳನ್ನು ಎತ್ತುತ್ತಾರೆ. ಅಂಬೇಡ್ಕರ್ ಸೂಚಿಸಿದಂತೆ ಅಂತರ್ ಜಾತಿಯ ವಿವಾಹ, ಸಹಪಂಕ್ತಿ ಭೋಜನದ ಮಾರ್ಗಗಳನ್ನು ಒಪ್ಪುತ್ತಾ ಮತಾಂತರದ ಬಗ್ಗೆ ಕೆಲವು ಅನುಮಾನಗಳನ್ನು ವ್ಯಕ್ತಪಡಿಸುತ್ತಾರೆ. ಮುಖ್ಯವಾಗಿ ಮತಾಂತರ ಜಾತಿ ವ್ಯವಸ್ಥೆಯ ನಿರ್ಮೂಲನೆಗೆ ಸೂಕ್ತ ಮಾರ್ಗವಲ್ಲ. ಅದು ಕೇವಲ ಭಾವನಾತ್ಮಕವಾದುದು ಅದರಿಂದ ದಲಿತರಿಗೆ ಏನೇನು ಲಾಭವಿಲ್ಲ. ಸ್ವತಃ ಅಂಬೇಡ್ಕರ್ ಅವರೇ ಹೋಗಿರುವ ಬೌದ್ಧಧರ್ಮದಲ್ಲಿ ಸಮಸ್ಯೆಗಳಿಲ್ಲವೆ? ಬೌದ್ಧ ಧರ್ಮ ಪ್ರಚಲಿತವಿರುವ ದೇಶಗಳಲ್ಲಿ ದಲಿತರಿಗೆ ಸಮಸ್ಯೆಗಳಿಲ್ಲವೆ? ಅಶೋಕರ ಈ ಪ್ರಶ್ನೆಗಳು ಮೇಲ್ನೋಟಕ್ಕೆ ಸರಿ

ಎನಿಸಿದರೂ ನೊಂದವರು ತಮ್ಮ ಬಿಡುಗಡೆಗೆ ತಹತಹಿಸಿದ ತಲ್ಲಣಗಳನ್ನು ಗೌಣವಾಗಿಸುತ್ತವೆ. ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಹೋಗುವ ನಿರ್ಧಾರದಲ್ಲಿ ಹಿಂದೂ ಧರ್ಮದ ಹಿಂದೆ ಇರುವ ಕೆಟ್ಟ ಜಾತಿಯತೆಯ ಬಗೆಗೆ ಇರುವ ಬೇಸರವನ್ನು ಪಕ್ಕಕ್ಕೆ ಸರಿಸುತ್ತವೆ. ಅದೂ ಅಲ್ಲದೇ ಅಶೋಕ ಅವರೇ ಶಿವರಾಮ ಕಾರಂತರ 'ಚೋಮನದುಡಿ' ಕಾದಂಬರಿಯಲ್ಲಿ ಬರುವ ಚೋಮನ ಮಗ 'ಗುರುವ'ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡದ್ದರಿಂದ ಸಿಕ್ಕ ಆರ್ಥಿಕ ವಿಮೋಚನೆಯನ್ನು ಸಮರ್ಥನೆಯ ದಾಟಿಯಲ್ಲಿ ವಿಶ್ಲೇಷಿಸಿರುವುದು ವಿಮರ್ಶಕರ ದ್ವಿಮುಖ ನೀತಿಯನ್ನು ದರ್ಶಿಸುತ್ತದೆ.

ದಲಿತರ ವಿಮೋಚನೆಗೆ ಸಮಾಜದ ಆಮೂಲಾಗ್ರ ಬದಲಾವಣೆ ಅಗತ್ಯವೆಂಬುದನ್ನು ಒತ್ತಿ ಹೇಳುವ ವಿಮರ್ಶಕರು ಆಧುನಿಕತೆ ಇದಕ್ಕೆ ಅತ್ಯುತ್ತಮ ಮಾರ್ಗ ಎಂಬುದನ್ನು ಬಲವಾಗಿ ನಂಬುತ್ತಾರೆ. ಏಕೆಂದರೆ ಅವರು ಹೇಳುತ್ತಿರುವ ಹೊಸ ವ್ಯವಸ್ಥೆಗಳು ನಮ್ಮ ಸಮಾಜಕ್ಕೆ ಪ್ರವೇಶಿಸಿದ್ದೇ ಹದಿನೆಂಟನೇ ಶತಮಾನದಿಂದ ಆದ ಜಾಗತಿಕ ಬದಲಾವಣೆಗಳಿಂದ. ಅಂದರೆ ನಮ್ಮಲ್ಲಿ ವಸಾಹತುಶಾಹಿಯ ಪ್ರವೇಶದಿಂದ. ಆದರೆ ಈ ರೀತಿಯ ದಲಿತರ ಬಿಡುಗಡೆಯ ಸಾಧ್ಯತೆಗಳು ವಸಾಹತುಶಾಹಿಯ ಫಲಗಳಾದರೂ ಈ ಕಾರಣಕ್ಕೆ ವಸಾಹತು ಶಾಹಿಯನ್ನು ಸಂಪೂರ್ಣವಾಗಿ ಸಮರ್ಥಿಸುವ ಅಗತ್ಯವಿಲ್ಲ ಎಂಬ ಎಚ್ಚರಿಕೆಯ ಮಾತುಗಳನ್ನು ಆಡುತ್ತಾರೆ.

ಒಟ್ಟಾರೆ ಅಶೋಕ ಅವರಿಗೆ ದಲಿತರ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣ ಅರಿವಿದೆ. ಹಾಗೂ ಅದರ ಬಗ್ಗೆ ವಿರೋಧವೂ ಇದೆ. ಅದನ್ನು ಹೋಗಲಾಡಿಸುವ ಅಗತ್ಯ ಹಾಗೂ ಮಾರ್ಗಗಳ ಬಗ್ಗೆ ಆಲೋಚನೆಗಳೂ ಇವೆ. ಈ ಸಂದರ್ಭಕ್ಕೆ ಅವರು ಹೇಳುವಂತೆ "ದಲಿತರ ದುರ್ಗತಿಗೆ ಕೇವಲ ಧರ್ಮ ಮತ್ತು ಜಾತಿಯನ್ನು ಹೊಣೆಯಾಗಿಸಬೇಕಿಲ್ಲ. ಅಸಮಾನತೆಯ ಬೀಜಗಳು ಜಾತಿಯ ಒಳಗೂ ಹೊರಗೂ ಎರಡೂ ಕಡೆ ಇವೆ. ಹಾಗಾಗಿ ಇಂಥ ಕ್ರೂರ ಜಾತಿ ಪದ್ಧತಿಯ ವಿನಾಶಕ್ಕೆ ಎರಡೂ ದಿಕ್ಕಿನಲ್ಲಿ ಪ್ರಯತ್ನಗಳಾಗಬೇಕು. ಆಧುನಿಕತೆ ಅದಕ್ಕೊಂದು ವೇದಿಕೆ ಒದಗಿಸಲು ಸಹಕರಿಸಲಿದೆ. ದಲಿತರು ಬರೀ ದ್ವೇಷ ಅಸೂಹೆ ಹಾಗೂ ಆಕ್ರೋಶಗಳಿಂದ ಬಿಡುಗಡೆ ಹೊಂದುವುದು ಅಸಾಧ್ಯ. ವಿನಯಶೀಲತೆ, ಅಹಿಂಸೆ ಸ್ನೇಹಮಯತೆ ಇರಬೇಕು"[೮] ಎನ್ನುತ್ತಾ ದೇವನೂರ ಮಹದೇವ ಅವರಲ್ಲಿ ಇಂಥ ಗುಣಗಳನ್ನು ಗುರುತಿಸುತ್ತಾರೆ.

ಕುವೆಂಪು ಹಾಗೂ ಕಾರಂತರ ಕಾದಂಬರಿಗಳನ್ನೂ ಒಳಗೊಂಡಂತೆ ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರತಿನಿಧೀಕರಣ ತೃಪ್ತಿಕರವಾಗಿರಲಿಲ್ಲ. ದಲಿತ ಲೋಕದಿಂದ ತರುಣ ಲೇಖಕರು ಸಾಹಿತ್ಯ ಬರೆಯಲು ಆರಂಭಿಸಿದ ನಂತರ ಆ ಕೊರತೆ ಈಡೇರಿತು ಎಂಬ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳ ಕಡೆಗೆ ಗಮನ ಸೆಳೆಯುವ ಟಿ. ಪಿ. ಅಶೋಕ ಅವರು ದೇವನೂರ ಮಹಾದೇವ ಅವರ 'ಕುಸುಮಬಾಲೆ' ಕೃತಿಯನ್ನು ವಿಮರ್ಶೆಮಾಡುತ್ತಾ ಹೀಗೆ ಹೇಳುತ್ತಾರೆ: ಕನ್ನಡ ಸಾಹಿತ್ಯದ ಓದುಗರಿಗೆ ಅಷ್ಟಾಗಿ ಪರಿಚಿತವಲ್ಲದ ಒಂದು ಮನುಷ್ಯ ಲೋಕವನ್ನು ಒಳಗಿನವರಾಗಿ ಚಿತ್ರಿಸುವುದರ ಮೂಲಕ

ದಲಿತ ಸಾಹಿತಿಗಳು ಓದುಗರ ಅನುಭವ ಪ್ರಪಂಚವನ್ನು ಹಿಗ್ಗಿಸಿದ್ದಾರೆ. ಸಾವಿರಾರು ವರ್ಷಗಳಿಂದ ಮೂಕವಾಗಿದ್ದ ಜನಾಂಗವೊಂದು ನಿಧಾನವಾಗಿ ಮೈಕೊಡವಿಕೊಂಡು ಎದ್ದು ಮಾತನಾಡಲು ಆರಂಭಿಸಿದ್ದರಿಂದಾಗಿ ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಹೊಸ ಕಂಪನಗಳು ಎದ್ದಿದ್ದು ಐತಿಹಾಸಿಕ ಸತ್ಯವಾಗಿದೆ. ಇದುವರೆಗೆ ಬಹಳ ಮಟ್ಟಿಗೆ ಸಂಕೇತ, ಪ್ರತೀಕಗಳಾಗಿ ಕಾಣಿಸಿದ್ದ ಕೆಲವು ಮನುಷ್ಯ ಮಾದರಿಗಳು, ವರ್ಗಗಳು ಇತರೆ ಮನುಷ್ಯರಂತೆ ಜೀವಂತ ವ್ಯಕ್ತಿಗಳಾಗಿ ಕಾಣಿಸಿಕೊಂಡಿದ್ದು ಈ ಲೇಖಕರ ಒಂದು ಸಾದನೆಯೆಂದೇ ಹೇಳಬೇಕು. ಆಧುನಿಕ ಕನ್ನಡ ಸಾಹಿತ್ಯದ ಒಂದು ಪ್ರಮುಖ ಇತ್ಯಾತ್ಮಕ ಅನಿವಾರ್ಯ ಆಪೇಕ್ಷಣೀಯ ಚಳುವಳಿ ಎಂದು ಪರಿಗಣಿತವಾಗಿ ಅದರ ದಟ್ಟ ಪ್ರಭಾವ ಅನೇಕ ಹಿರಿಯ ಲೇಖಕರ ಹೊಸ ಬರೆಹಗಳಲ್ಲಿ ನಿಚ್ಚಳವಾಗಿ ಕಂಡು ಬಂದಿತು. ಒಟ್ಟಾರೆ ಇವರ ಬರವಣಿಗೆಗಳು ಕನ್ನಡ ಸಾಹಿತಿಯ ದಿಕ್ಕನ್ನು ಬದಲಿಸುವಷ್ಟು ಸಮರ್ಥವಾಗಲಿಲ್ಲ ಎಂಬುದು ನಿಜವಾದರೂ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವರಗಳಲ್ಲಿ ಹೆಚ್ಚಿನ ವೈವಿಧ್ಯತೆಯನ್ನು ನೀಡುವುದರ ಮೂಲಕ ಓದುಗರ ತಿಳುವಳಿಕೆಯ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾದವು.

ವಿಮರ್ಶಕರ ಮೇಲಿನ ಮಾತುಗಳು ದಲಿತ ಸಾಹಿತ್ಯ ಹಾಗೂ ಸಾಹಿತಿಗಳನ್ನು ಸರಿಯಾಗಿಯೇ ಅರ್ಥೈಯಿಸುತ್ತವೆ ಎನ್ನಬಹುದು. ದಲಿತ ಬರೆಹಗಳು ಶುದ್ಧ ಸಾಹಿತ್ಯದ ತತ್ವಗಳಾಚೆಗೆ ನಡೆದುದರ ಬಗ್ಗೆಯೂ ಇಲ್ಲಿ ಸುಳಿವುಗಳಿವೆ. ಸಿದ್ಧಲಿಂಗಯ್ಯ ಅವರ ಕಾವ್ಯದ ಆಕ್ರೋಶದ ಭಾಷೆ, ದೇವನೂರ ಮಹದೇವ ಅವರ ಕಾದಂಬರಿಗಳ ಗ್ರಾಮ್ಯ ಭಾಷೆ ಹಾಗೂ ಬಹುತೇಕ ದಲಿತ ಬರಹಗಾರರ ಮೀಮಾಂಸೆ ಮತ್ತು ಛಂದಸ್ಸಿನ ಪರಧಿಯನ್ನು ಮೀರಿದ ರಚನೆಗಳು ಕನ್ನಡ ಸಾಹಿತ್ಯದ ಹೊಸತನಗಳಾದುದರ ಬಗ್ಗೆ ಇಲ್ಲಿ ಗಮನಸೆಳೆಯಲಾಗಿದೆ. ಆದರೆ ಮುಖ್ಯವಾಗಿ ಗಮನಿಸಬೇಕಾದುದೆಂದರೆ ದಲಿತಸಾಹಿತ್ಯ ಶುದ್ಧಸಾಹಿತ್ಯವಲ್ಲ. ಬದಲಿಗೆ ಚಳುವಳಿ ಆಧಾರಿತವಾದುದು. ಸಮಸ್ಯೆಗಳು ಬಿಗಡಾಯಿಸಿ ಚಳವಳಿ ತೀವ್ರಗೊಂಡಾಗ ಉತ್ತಮ ಸಾಹಿತ್ಯ ಕೃತಿಗಳು ರಚನೆಯಾಗಿವೆ. ಇದರ ಅರಿವೂ ವಿಮರ್ಶಕರಿಗಿದೆ. ಇಂಥ ಚಳುವಳಿ ಆಧರಿತ ಕೃತಿಗಳನ್ನು ಆರಂಭಕ್ಕೆ ಉದಾರವಾಗಿ ನಂತರ ನಿರ್ಭಾವುಕವಾಗಿ ನೋಡಬೇಕು ಎಂಬ ಎಚ್ಚರದೊಂದಿಗೆ ದಲಿತ ಕೃತಿಗಳನ್ನು ವಿವೇಚಿಸಿರುವ ಇವರು ಸಾಂಸ್ಕೃತಿಕ ಎಚ್ಚರದ ವಿಮರ್ಶೆಯನ್ನು ಮಾಡಿದ್ದಾರೆ. ಆದರೆ ಇವರ ಒಟ್ಟು ವಿಮರ್ಶೆಯ ನಿಲುವು, ಸಾಹಿತ್ಯ ರೂಪಕ್ಕೆ ತನ್ನದೇಯಾದ ಅನನ್ಯತೆಯಿದ್ದು, ವಿವಿಧ ಸಿದ್ಧಾಂತಗಳ ಹಿನ್ನೆಲೆಯ ವಸ್ತುಗಳು ಕೃತಿಯಾಗಿ ಹೇಗೆ ರೂಪುತಳೆದಿವೆ ಎನ್ನುವುದರೆಡೆಗೆ ಈ ವಿಮರ್ಶೆ ಹೆಚ್ಚಾಗಿ ಗಮನ ನೀಡುತ್ತದೆ.

೪.೨ ಸಾಮಾಜಿಕ ವಿಮರ್ಶೆ

ಸಾಹಿತ್ಯ ಜನಜೀವನದ ಪ್ರತಿಬಿಂಬ. ಒಬ್ಬ ಅಥವಾ ಹಲವರ ಸೃಜನಶೀಲವಾದ ಮನಸ್ಸಿನ ಅಭಿವ್ಯಕ್ತಿ ಸಾಹಿತ್ಯವಾಗಿ ಅದು ಸಹೃದಯದಲ್ಲಿ ನೆಲೆಯಾಗುತ್ತದೆ. ಸಾಹಿತ್ಯದ ಉದ್ದೇಶ ವಿಶಾಲವಾದುದು, ವ್ಯಾಪಕವಾದುದು ಆಗಿದೆ. ಸಾಹಿತ್ಯ ಸಾಮಾಜಿಕ ಬದುಕನ್ನು

ಆಧರಿಸಿ ಹುಟ್ಟುವ ಸೃಜನಶೀಲ ಕ್ರಿಯೆಯಾಗಿದೆ. ಸಾಹಿತ್ಯವು ಬಾಳಿನ ಸಮಂಜಸ ಚಿತ್ರಣ ಅರ್ಥಪೂರ್ಣದರ್ಶನ. ಚಿರಂತನ ಮೌಲ್ಯಗಳ ನಿರೂಪಣೆಯನ್ನು ಒಳಗೊಂಡಿರುತ್ತದೆ. ಸಾಹಿತ್ಯವು ಸಾಮಾಜದ ಮೇಲೆ ಎರಡು ರೀತಿಯಲ್ಲಿ ಪ್ರಭಾವ ಬೀರುತ್ತದೆ. ಮೊದಲನೆಯದು, ಸಾಹಿತ್ಯ ಸಮಾಜದ ಮೇಲೆ ಪ್ರಭಾವ ಬೀರಿ ಸಾಮಾಜಿಕ ಬದಲಾವಣೆಗೆ ಒಂದು ಪ್ರೇರಕ ಶಕ್ತಿಯಾಗಿ ಪರಿಣಮಿಸುತ್ತದೆ. ಧಾರ್ಮಿಕ ರಾಜಕೀಯ ಮುಂತಾದ ಕಾರಣಗಳಿಂದ ನಡೆಯುವ ಸಾಮಾಜಿಕ ಪರಿವರ್ತನೆ ಆ ಕಾಲದ ಸಾಹಿತ್ಯ ಕೃತಿಗಳಲ್ಲಿ ಪ್ರತಿಬಿಂಬಿತವಾಗಿರುತ್ತದೆ ಎನ್ನುವುದು ಇನ್ನೊಂದು. ಈ ದಿಸೆಯಲ್ಲಿ ಸಾಹಿತ್ಯದ ದೃಷ್ಟಿ ವಿಶಾಲವಾಗುತ್ತದೆ. ಅದು ಸಮಾಜದ ಕೈಗನ್ನಡಿ ಎಂಬ ಮಾತಿಗೆ ಪುಷ್ಟಿ ಕೊಡುತ್ತದೆ. ಕಾಲ ಕಾಲಕ್ಕೆ ಬದಲಾಗುವ ಮೌಲ್ಯಗಳು ಸಾಹಿತ್ಯದ ಸಂದರ್ಭದಲ್ಲಿಯೂ ಬದಲಾವಣೆ ಕಾಣುವಂತಾಗುತ್ತವೆ. ಹತ್ತನೆಯ ಶತಮಾನದ ವೀರಯುಗ, ಹನ್ನೆರಡನೆಯ ಶತಮಾನದ ಭಕ್ತಿಯುಗ, ಇಪ್ಪತ್ತನೆಯ ಶತಮಾನದ ವೈಜ್ಞಾನಿಕ ಯುಗ ಎಂದಾಗ ಆಯಾ ಕಾಲದ ಪ್ರಮುಖವಾದ ಜನಮನೋಧರ್ಮವನ್ನು ಸೂಚಿಸುತ್ತದೆ. ಸಾಮಾಜಿಕ ಬದಲಾವಣೆಗಳಿಂದ ಆಯಾ ಕಾಲದಲ್ಲಿ ವೈಚಾರಿಕ ಕ್ರಾಂತಿಯಾಗಿರುತ್ತದೆ. ಅದರ ಪರಿಣಾಮವಾಗಿ ಹೊಸ ಮೌಲ್ಯಗಳು ಕಾಣಿಸಿಕೊಳ್ಳುತ್ತವೆ. ಸಾಹಿತ್ಯವು ಇದೆಲ್ಲವನ್ನು ಅಂದಂದಿನ ಸಂದರ್ಭವನ್ನು ದಾಖಲಿಸುತ್ತ ಬರುತ್ತದೆ.

ಕನ್ನಡ ಸಾಹಿತ್ಯ ಮೊದಲಿನಿಂದಲೂ ಸಾಮಾಜ ಮುಖಿಯಾಗಿದ್ದರೂ ಅದು ಎಪ್ಪತ್ತರ ದಶಕದಲ್ಲಿ ಬಂದ ಬಂಡಾಯ ಮತ್ತು ದಲಿತ ಸಾಹಿತ್ಯ ಜನಸಮುದಾದತ್ತ ಸಾಗಿ ಸಾಮಾಜಿಕ ಪರಿವರ್ತನೆಯಲ್ಲಿ ಹೊಸ ಚಾಲನೆ ನೀಡಿದವು. ಸಾಮಾನ್ಯ ಜನರ ಅನೇಕ ರೀತಿಯ ಆಶೋತ್ತರಗಳನ್ನು ಪ್ರತಿನಿಧಿಸುವ ಹಾಗೂ ಈ ಆಶೋತ್ತರಗಳಿಗೆ ಕಾರಣವಾದ ಆಳವಾದ ಸಾಮಾಜಿಕ ರಾಜಕೀಯ ಸಂಗತಿಗಳನ್ನು ನಿಯಂತ್ರಿಸುವ ಜಾತಿ, ಧರ್ಮ, ವರ್ಗ ಇವುಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ತನ್ನ ಓದುಗರಿಗೆ ಅರ್ಥಮಾಡಿಸುವತ್ತ ಬಂಡಾಯ ಸಾಹಿತ್ಯ ಒಲವು ತೋರಿತು. ಪ್ರಗತಿಶೀಲ, ಬಂಡಾಯ ಮತ್ತು ದಲಿತ ಸಾಹಿತ್ಯಗಳು ವಾಸ್ತವ ಲೋಕ, ಕಾವ್ಯ ಲೋಕ, ಲೋಕ ಸತ್ಯಗಳು ಬೇರೆ ಬೇರೆ ಎಂಬುದು ಬಯಲಾಗಿ ಸಾಹಿತಿಗಳು ಹಸ್ತಿದಂತ ಗೋಪುರಗಳಿಂದ ಕೆಳಗಿಳಿದು ವ್ಯಕ್ತಿ ಕೇಂದ್ರಿತ ನೆಲೆಗಳಿಂದ ಹೊರಗೆ ಬಂದು ಸಾಮಾಜಿಕ ಹೊಣೆಗಾರಿಕೆಯನ್ನು ಹೊರಲು ಸಮಾಜದಲ್ಲಿ ಆರೋಗ್ಯಕರವು ಅಮೂಲಾಗ್ರವೂ ಆದ ಬದಲಾವಣೆಗಳನ್ನು ತರಲು ಸಿದ್ಧರಾಗುವಂತಾಯಿತು. ಭಾವಪರ, ಚಿಂತನಪರ ಕೃತಿಗಳ ಜೊತೆ ಜೊತೆಗೆ ಜನಪರ ಕೃತಿಗಳೂ ಬರತೊಡಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಸಮೃದ್ಧಿ, ವೈವಿಧ್ಯಗಳು, ಜೀವಕಳೆ – ಜೀವನ ಕಲೆಗಳು ದೊರೆಯುವಂತಾಯಿತು.

ಸಾಹಿತ್ಯ ಸಾಮಾಜಿಕ ಬದುಕನ್ನು ಆಧರಿಸಿ ಹುಟ್ಟುವ ಒಂದು ಸೃಜನಶೀಲ ಕ್ರಿಯೆಯಾದುದರಿಂದ ಯಾವುದೇ ಕಾಲದಲ್ಲಿ ಸೃಷ್ಟಿಯಾದ ಸಾಹಿತ್ಯ ಅಥವಾ ಕೃತಿಗಳು ಆಯಾ ಕಾಲದ ವಿಶಿಷ್ಟ ವರ್ಗದ ಜನರ ಹಿತಾಸಕ್ತಿಗಳನ್ನು, ಆಶೋತ್ತರಗಳನ್ನು,

ಪ್ರವೃತ್ತಿಗಳನ್ನು ಪಡಿಮೂಡಿಸುತ್ತವೆ ಎಂಬ ಮಾರ್ಕ್ಸನ ಮಾತು ಇಲ್ಲಿ ಸಾಹಿತಿ ತನ್ನ ಸಮಾಜ ಚಿತ್ರಣವನ್ನು ಒಂದಿಲ್ಲೊಂದು ರೀತಿಯಲ್ಲಿ ಅಳವಡಿಸಿಕೊಳ್ಳಲೇಬೇಕಾಗುತ್ತದೆ. ಆತ ಆ ಸಮಾಜದ ಒಂದು ಅನಿವಾರ್ಯವಾದ ಅಂಗವಾಗಿರುವುದರಿಂದ ಅವನು ತನ್ನ ಸಮಕಾಲೀನ ಸಮಾಜದ ಬಗ್ಗೆ ಎಚ್ಚರ ತಾಳಿರುತ್ತಾನೆ. ಸಮಾಜದ ಗತಿಯನ್ನು ತನ್ನ ಇತಿಮಿತಿಗಳೊಂದಿಗೆ ಸಾಹಿತ್ಯದಲ್ಲಿ ಒಡಮೂಡಿಸುವುದು ಸಾಮಾಜಿಕ ಪ್ರಜ್ಞೆಯುಳ್ಳ ಸಾಹಿತಿಯ ಮೊದಲ ಕರ್ತವ್ಯವಾಗಿದೆ. ಮಾನವೀಯ ಬಾಳಿನಲ್ಲಿ ಹಲವಾರು ವಿಕೃತಿಗಳು ಕಂಡು ಬರಬಹುದು. ಆದರೆ ಈ ವಿಕೃತಿಗಳ ಹಿಂದೆ ಅಡಗಿರುವ ಬಾಳಿನ ಅರ್ಥವನ್ನು ಸಾಹಿತ್ಯವು ಹೊರಹೊಮ್ಮಿಸಿ ತೋರಿಸಬೇಕು. ಹಾಗಾಗಿ ಮಾನವ ತನ್ನ ಪರಿಸರದಿಂದ ರೂಪುಗೊಳ್ಳುವದಾದರೆ ಮಾನವೀಯತೆಯಿಂದ ಕೂಡಿದ ಪರಿಸರವನ್ನು ರೂಪಿಸುವಲ್ಲಿ ಸಾಹಿತಿಯ ಪಾತ್ರ ಮಹತ್ವದ್ದಾಗಿದೆ.

ಒಟ್ಟಾರೆ "ಸಾಹಿತ್ಯವು ಸಾಮಾಜಿಕ ಬದಲಾವಣೆಯಲ್ಲಿ ಒಂದು ಮಹತ್ವಪೂರ್ಣವಾದ ಹೆಣಿಕೆಯಾಗಿದೆ. ಸಾಹಿತ್ಯ ಬಿಟ್ಟು ಸಮಾಜವಿಲ್ಲ, ಸಮಾಜ ಬಿಟ್ಟು ಸಾಹಿತ್ಯವಿಲ್ಲ, ಸಾಹಿತ್ಯವನ್ನು ಬಿಟ್ಟ ಸಮಾಜ ತನ್ನ ಕಲಾತ್ಮಕತೆಯನ್ನು ಕಳೆದುಕೊಳ್ಳಬಲ್ಲದು, ಸಮಾಜವನ್ನು ಬಿಟ್ಟ ಸಾಹಿತ್ಯ ಶಾನುಭೋಗರ ಖಾತೆಯಾಗಬಲ್ಲದು. ಹೀಗಾಗಿ ಯಾವೊಂದು ಭಾಷೆಯ ಸಾಹಿತ್ಯವು ಆ ಜನರ ನಿತ್ಯ ಬದುಕಿನಲ್ಲಿ ತೇದು ಕೊಂಡಿರಬೇಕಾಗುತ್ತದೆ. ಅಂದಾಗಲೆ ಅದು ಸಾಮಾಜಿಕ ಬದಲಾವಣೆಯೊಂದಿಗೆ ಚಿರಂತನ ಮೌಲ್ಯ ಉಳಿಸಿಕೊಳ್ಳುತ್ತದೆ." ಎಂಬ ಹೇಳಿಕೆಯನ್ನು ಸಮರ್ಥಿಸುತ್ತಾ ಸಾಹಿತ್ಯದ ಉದ್ದೇಶ ಸದಾ ಸಮಾಜದ ಸ್ವಾಸ್ಥ್ಯದ ಕಡೆಗೆ ಇರಬೇಕಾಗುತ್ತದೆ. ಎಂಬುದರ ಕಡೆಗೆ ಸಾಮಾಜಿಕ ವಿಮರ್ಶೆ ಗಮನ ನೀಡುತ್ತದೆ

ಕನ್ನಡದಲ್ಲಿ ಸಮಾಜವನ್ನೆ ಮುಖ್ಯವಾಗಿಸಿಕೊಂಡು ವಿಮರ್ಶೆ ಹುಟ್ಟಿ ಬರಲು ಇರುವ ಕಾರಣಗಳನ್ನು ಕೊಂಚ ಪರಿಶೀಲಿಸಬೇಕಾಗುತ್ತದೆ. ಆರಂಭದ ನವೋದಯ ಸಾಹಿತ್ಯದಲ್ಲಿ ಪ್ರಮುಖವಾಗಿದ್ದ ಭಾವಗೀತೆಯ ಪ್ರಕಾರವು ವೈಯಕ್ತಿಕತೆಯನ್ನು ಒಳಗೊಂಡಿದ್ದರೂ ಸ್ವಾತಂತ್ರ್ಯ ಚಳವಳಿಯ ಆದರ್ಶ, ರಾಷ್ಟ್ರೀಯತೆ – ಪ್ರಾದೇಶಿಕತೆಗಳ ಮಹತ್ವ, ಸಮಾನತೆಯ ಆಶಯ – ಇತ್ಯಾದಿಗಳನ್ನು ಪಂಥಪ್ರಣಾಲಿಯಂತೆ ಪ್ರತಿಪಾದಿಸಿದ್ದು ಈಗ ಇತಿಹಾಸ. ಅಂದರೆ ನವೋದಯ ಸಾಹಿತ್ಯವು ಯಾವತ್ತೂ ವೈಯಕ್ತಿಕತೆಯ ಹೆಸರಿನಲ್ಲಿ ಸಾಮಾಜಿಕ ವಿಮುಖತೆಯನ್ನು ತೋರಲಿಲ್ಲ. ಆದರೆ ನವೋದಯ ಕಾವ್ಯ 'ಸ್ಥಗಿತ ಸ್ಥಿತಿ' ತಲುಪಿದೆಯೆಂದು 'ನವ್ಯ ಕಾವ್ಯ'ದ ಹುಟ್ಟಿಗೆ ಸಮರ್ಥನೆ ನೀಡಲಾಯಿತು. "ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ತನಕ ಇದ್ದ ವಾತಾವರಣ ಈಗ ಸಮೂಲ ಪರಿವರ್ತನೆಗೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದ ಉದ್ವೇಗ ಪರವಶತೆಯ ಹಾರಾಟ ಮುಗಿದು ಈಗ ನಮ್ಮ ಮನಸ್ಸು ಮತ್ತೆ ನೆಲಕ್ಕೆ ಇಳಿದಿದೆ ..... ಹೊಸ ಆದರ್ಶ. ಹೊಸ ಕನಸಿಗಾಗಿ ದೇಶದ ಮನಸ್ಸು ಹಸಿದು ಕಾಯುತ್ತಿದೆ. ಇಂಥ ವಾತಾವರಣ ಸುತ್ತಮುತ್ತಲೂ

ಇರುವಾಗ ಜೀವನಾವಲಂಬಿಯಾದ ಕಾವ್ಯವೂ ಪರಿವರ್ತನೆಗೊಳ್ಳುವುದು ಸಹಜ"[೧೦] ಎನ್ನುವುದು ನವ್ಯಕಾವ್ಯದ ಹುಟ್ಟಿಗೆ ಗೋಪಾಲಕೃಷ್ಣ ಅಡಿಗರ ಸಮರ್ಥನೆ.

ಇದಕ್ಕೂ ಮುಂಚೆ ನವ್ಯಕಾವ್ಯದ ಹುಟ್ಟನ್ನು ಸಮರ್ಥಿಸಿ, ಪ್ರತಿಪಾದಿಸಿದ ವಿ. ಕೃ. ಗೋಕಾಕರು ಹೇಳಿದ್ದು ಅಲಂಕಾರಿಕ, ಮಾನಸಿಕ ನಿರ್ಮಿತಗಳಿಂದ ದೂರ ಸರಿಯುವ ಮಾರ್ಗ ಇದು. ವಸ್ತುಗಳ ನೈಜ ಸತ್ಯದ ಸಹಜ ಅಭಿವ್ಯಕ್ತಿಯೆಡೆಗೆ ಈ ಮಾರ್ಗವು ನಮ್ಮನ್ನು ಕರೆದೊಯ್ಯಲಿದೆ. ವ್ಯಕ್ತಿನಿಷ್ಠವಾಗಿ ಅದು ರೂಪಿತವಾಗಿದ್ದರೆ ಕಾವ್ಯವು ನವ್ಯವಾಗುತ್ತದೆ ಎಂದು. ಅಂದರೆ ನವ್ಯ ಹುಟ್ಟಿನಲ್ಲಿ ಇಬ್ಬರಿಗೂ ಭಿನ್ನ ಅಭಿಪ್ರಾಯಗಳಿವೆ. ಆದ್ದರಿಂದಲೇ ನವ್ಯಕಾವ್ಯ ವ್ಯಕ್ತಿನಿಷ್ಠವಾಗಿದ್ದು ಮಾತ್ರವಲ್ಲ, ಸಾಹಿತ್ಯದಲ್ಲಿ ವ್ಯಕ್ತಿನಿಷ್ಠತೆಯನ್ನು ಪ್ರತಿಪಾದಿಸಿತು. ಸಾಮಾಜಿಕ ನಿಷ್ಠತೆಗೆ ದೂರವಾಗುತ್ತ ಬಂತು. ಸಾಹಿತ್ಯದಲ್ಲಿ ಭಾಷೆಯ ಸೂಕ್ತ ಬಳಕೆ, ಶಿಲ್ಪದ ಮಹತ್ವ, ಮಡಿವಂತಿಕೆ ಮುಕ್ತ ಅಭಿವ್ಯಕ್ತಿ ಮುಂತಾದ ಅಂಶಗಳಿಂದ ನವ್ಯ ಸಾಹಿತ್ಯವು ಹೊಸ ಸಂಚಲನಕ್ಕೆ ಕಾರಣವಾಯಿತು. ವಿಮರ್ಶೆಯ ನಿಷ್ಠುರತೆಯನ್ನು ಮುನ್ನೆಲೆಗೆ ತಂದಿತು. ಆದರೆ ವೈಯಕ್ತಿಕ ಅನುಭವ ಪ್ರಾಮಾಣ್ಯವೇ ಮುಖ್ಯವೆಂಬ ತತ್ವವನ್ನು ವೈಪರೀತ್ಯದ ಅಂಚಿಗೆ ಕೊಂಡೊಯ್ದ ಪರಿಣಾಮವಾಗಿ ಸಾಮಾಜಿಕ ಕಾಳಜಿಯ ತಾತ್ವಿಕತೆಗೆ ಬೆನ್ನು ಮಾಡಿ ಬೆಳೆಯಿತು. ವೈಯಕ್ತಿಕ ವೈಪರೀತ್ಯವೇ ತತ್ವಪ್ರಣಾಲಿಯಾದಾಗ ಸಾಮಾಜಿಕ ತತ್ವ ಪ್ರಣಾಲಿಯು ಪ್ರತಿರೋಧಾತ್ಮಕವಾಗಬೇಕಾಗುತ್ತದೆ. ಇಂಥ ಪ್ರತಿರೋಧವೂ ಒಂದು ಕಾರಣವಾಗಿ, ಸಾಮಾಜಿಕ – ಆರ್ಥಿಕ ವಿಷಮತೆಗೆ ವಿರುದ್ಧವಾದ ಸಮಾನತೆಗಾಗಿ, ಸಾಮಾಜಿಕ ಜವಾಬ್ದಾರಿಯಿಂದ ಜನ್ಮತಾಳಿದ ದಲಿತ ಸಾಹಿತ್ಯ – ಬಂಡಾಯ ಸಾಹಿತ್ಯದ ಸಮರ್ಥನೆಗಾಗಿ ಸಾಮಾಜಿಕ ವಿಮರ್ಶೆ ಬಂದಿತು.

ನವ್ಯಸಾಹಿತ್ಯ ಸಂದರ್ಭವು ಚಳವಳಿ ಹಾಗೂ ಪಂಥ ಬದ್ಧತೆಗಳಿಗೆ ತೀವ್ರ ವಿರೋಧಿಯೂ 'ಸಾಹಿತ್ಯ ಶಿಲ್ಪಬದ್ಧತೆಗೆ' ಪ್ರಬಲ ಪೂರಕವೂ ಆಗಿದ್ದನ್ನು ನೆನೆಯಬಹುದು. ನವ್ಯ ಸಾಹಿತ್ಯವು ವ್ಯಕ್ತಿನಿಷ್ಠತೆ ಮತ್ತು ಕೃತಿ ಶ್ರೇಷ್ಠತೆಗಳನ್ನು ಮುನ್ನೆಲೆಗೆ ತಂದದ್ದು ಈಗ ಇತಿಹಾಸದ ಭಾಗವೂ ಹೌದು. ಏಕವ್ಯಕ್ತಿ, ಏಕಕೃತಿಗಳ ಪರಿಭಾವನೆಯಲ್ಲೇ ಶ್ರೇಷ್ಠತೆಯನ್ನು ಹುಡುಕುವ 'ನವ್ಯ'ದ ಮಾನದಂಡಗಳು ಸಾಮಾಜಿಕ ಸನ್ನಿವೇಶದ ಮೂಲಕವೂ ಸೃಜನಶೀಲತೆಯನ್ನು ಪರಿಗಣಿಸಬೇಕಾಗುತ್ತದೆಯೆಂದು ಭಾವಿಸಲಿಲ್ಲ. ಶ್ರೇಷ್ಠತೆ ಎನ್ನುವುದು ಕೇವಲ ಒಂದು ಕೃತಿ, ಒಬ್ಬ ವ್ಯಕ್ತಿಯ ನೆಲೆಯಲ್ಲಿ ನಿರ್ಧಾರವಾಗುವ ಅಂಶವಲ್ಲ. ವ್ಯಕ್ತಿ ಮತ್ತು ಕೃತಿಯು ನಿಮಿತ್ತ ಮಾತ್ರವಾಗಿ ನಿರ್ದಿಷ್ಟ ಸಾಮಾಜಿಕ–ಸಾಂಸ್ಕೃತಿಕ ಪರಂಪರೆಯನ್ನು ಪರಿಗಣಿಸಬೇಕಾಗುತ್ತದೆ. ಇಷ್ಟಕ್ಕೂ ಶ್ರೇಷ್ಠತೆ ಎನ್ನುವುದು ಒಂದು ನಿರಂತರ ಶೋಧವಾದೀತೇ ಹೊರತು ಮುಕ್ತಾಯಗೊಂಡ ನೆಲೆಯಾಗಲಾರದು. ವೈಯಕ್ತಿಕ ಅನುಭವ ಪ್ರಾಮಾಣ್ಯದ ಅಸಲಿ ಅಭಿವ್ಯಕ್ತಿಯೊಂದೇ ಶ್ರೇಷ್ಠತೆಯ ಮಾನದಂಡವಾಗಲಾರದು. ನಿರ್ದಿಷ್ಟ ದೃಷ್ಟಿದರ್ಶನಗಳೇ ಪಂಥೀಯ ತಾತ್ವಿಕ ನೆಲೆಗಳೆಂಬುದು ಬಂಡಾಯದವರ ನಂಬಿಕೆ.

ಸಾಹಿತ್ಯ ಮತ್ತು ಸಂಸ್ಕೃತಿಗಳ ಬಹುಮುಖತೆಯನ್ನು ಒಪ್ಪುವ ಯಾರೂ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪ್ರೇರಣೆಗಳನ್ನು ನಿರಾಕರಿಸುವುದಿಲ್ಲ. ಸಾಹಿತ್ಯ

ಮತ್ತು ಸಂಸ್ಕೃತಿಗಳು ಕೇವಲ ವೈಯಕ್ತಿಕವಲ್ಲ; ಸಾಮಾಜಿಕ. ನವ್ಯ ಸಾಹಿತ್ಯ ಸಂದರ್ಭವನ್ನು ಹೊರತು ಪಡಿಸಿದರೆ, ಕನ್ನಡ ಸಾಹಿತ್ಯವು 'ಬಹುಪಾಲು' ಸಾಮಾಜಿಕ ನೆಲೆಗಳನ್ನು ಒಳಗೊಂಡಿದೆ ಅಥವಾ ಪ್ರತಿಪಾದಿಸಿಕೊಂಡು ಬಂದಿದೆ. ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಗಳನ್ನು ಕರಾರುವಾಕ್ಕಾಗಿ ಬೇರ್ಪಡಿಸಲಾಗದ ಕಾರಣಕ್ಕಾಗಿ ನವ್ಯ ಸಾಹಿತ್ಯದಲ್ಲೂ ಸಾಮಾಜಿಕತೆ ಇದೆಯಾದರೂ ವೈಯಕ್ತಿಕ ಅನುಭವ ಪ್ರಾಮಾಣ್ಯವೇ ಮುಖ್ಯವೆಂದು ನವ್ಯದ ನೇತಾರರು ಪ್ರತಿಪಾದಿಸಿದರು.

ಕನ್ನಡ ಸಾಹಿತ್ಯದ ಇವತ್ತಿನ ಸಂದರ್ಭವು ದಲಿತ – ಬಂಡಾಯ ಸಾಹಿತ್ಯದ ಪ್ರಭಾವ, ಪ್ರೇರಣೆಗಳಿಂದ ತಪ್ಪಿಸಿಕೊಂಡಿಲ್ಲ ಎಂಬುದು ವಾಸ್ತವ. ವಿವಿಧ ನಿರ್ಲಕ್ಷಿತ ಸಾಮಾಜಿಕ ವಲಯಗಳಲ್ಲಿ ಅಭಿವ್ಯಕ್ತಿಯ ಆತ್ಮವಿಶ್ವಾಸವನ್ನು ಮೂಡಿಸಿದ ದಲಿತ–ಬಂಡಾಯ ಸಾಹಿತ್ಯ ಚಳವಳಿಗಳ ಫಲವಾಗಿ ಹೊಸ ಪೀಳಿಗೆಯ ಅನೇಕರಲ್ಲಿ ಪ್ರಗತಿಪರ ಆಶಯಗಳು ತಾನೇತಾನಾಗಿ ಅಂತರ್ಗತವಾಗಿವೆ. ರಾಜಧಾನಿಯಾಚೆಗೆ ಅನೇಕ ಪ್ರಗತಿಪರ ಪ್ರತಿಭಾವಂತರು ಕ್ರಿಯಾಶೀಲರಾಗಿದ್ದಾರೆ. ಆದರೆ ನವ್ಯ ಸಾಹಿತ್ಯ ಸಂದರ್ಭದ ಆಶಯಗಳ ಮರು ಪ್ರತಿಪಾದನೆಗೆ ಮುಂದಾದವರ ಮಾತುಗಳು ಮುಂಚೂಣಿಗೆ ಬರುತ್ತಿವೆ. ವಿವಿಧ ಮಾಧ್ಯಮಗಳಲ್ಲಿ ಪ್ರಾಮುಖ್ಯ ಪಡೆಯುತ್ತಿವೆ. ಚಳವಳಿಗಳ ಪ್ರಭಾವವಿದ್ದರೂ ಸಂಘಟನಾತ್ಮಕ ಕ್ರಿಯೆ ಕಡಿಮೆಯಾದದ್ದರ ಫಲವಾಗಿ ವ್ಯಕ್ತಿನಿಷ್ಠ ಆಶಯಗಳು ಪ್ರಾಮುಖ್ಯ ಪಡೆಯುತ್ತಿವೆ; ಸಾಮಾಜಿಕ ಆಶಯಗಳು ಹಿನ್ನಡೆ ಅನುಭವಿಸುತ್ತಿವೆ ಎಂಬುದೇ ಸಾಮಾಜಿಕ ವಿಮರ್ಶೆಯ ಮುಖ್ಯ ಕಳಕಳಿಯಾಗಿದೆ.

ನವ್ಯದ ರೂಪನಿಷ್ಠ ವಿಮರ್ಶೆಗೆ ಪ್ರತಿಯಾಗಿ ಹುಟ್ಟಿಬಂದ ಬಂಡಾಯ ಸಾಹಿತ್ಯದ ಸಮಾಜನಿಷ್ಠ ವಿಮರ್ಶೆಯನ್ನು ಸಾಮಾಜಿಕ ವಿಮರ್ಶೆ ಎಂದು ಗುರುತಿಸಲಾಗಿದೆ. ಇದು ತನ್ನ ಸಾಹಿತ್ಯ ಚಳುವಳಿಯನ್ನು ಸಮರ್ಥಿಸಲೆಂದೇ ವಿಮರ್ಶೆಯಲ್ಲಿ ತೊಡಗಿಸಿಕೊಂಡಿತು. ನವೋದಯ, ಪ್ರಗತಿಶೀಲ, ನವ್ಯ ಸಾಹಿತಿಗಳಲ್ಲಿ ಬಹುಪಾಲು ಜನರು ಮೇಲ್ಜಾತಿಗಳಿಗೆ ಸೇರಿದ ಜನರಾಗಿದ್ದರು. ಅದರಲ್ಲೂ ಅವರು ಮುಖ್ಯವಾಗಿ ಬ್ರಾಹ್ಮಣರು ಮತ್ತು ಲಿಂಗಾಯಿತರಾಗಿದ್ದರು. ಕುವೆಂಪು ಅವರಂಥವರು ಅಲ್ಲಿ ಇಲ್ಲಿ ಈ ಮಾತಿಗೆ ಅಪವಾದವಾಗಿದ್ದರು. ಇದಕ್ಕೆ ಬಹುಮುಖ್ಯ ಕಾರಣ ಅಕ್ಷರ ಸಂಸ್ಕೃತಿ ನಮ್ಮ ಸಮಾಜದಲ್ಲಿನ ಕೆಳಸ್ತರಗಳಿಗೆ ತಲುಪದೇ ಇದ್ದದ್ದು. ಸ್ವಾತಂತ್ರ್ಯದ ನಂತರ ಈ ಕೆಳಸ್ತರಗಳಲ್ಲಿನ ಜನರೂ ಅಕ್ಷರ ಸಂಸ್ಕೃತಿಯೆಡೆಗೆ ಬರತೊಡಗಿದರು. ಹೀಗೆ ಬಂದ ಮೊದಲ ತಲೆಮಾರಿನ ಹಿಂದುಳಿದ ವರ್ಗಗಳು ಮತ್ತು ದಲಿತರು ೧೯೭೦ರ ದಶಕದಲ್ಲಿ ಸಕ್ರಿಯವಾಗಿ ಸಾಹಿತ್ಯ ರಚನೆಗೆ ತೊಡಗಿದರು. ಸಾಮಾಜಿಕ ಬದ್ಧತೆ ಮತ್ತು ಸಾಮಾಜಿಕ ಬದಲಾವಣೆಗಾಗಿ ಸಾಹಿತ್ಯ ಎಂಬ ದೃಷ್ಟಿಕೋನ ಇವರದಾಗಿತ್ತು. ೧೯೭೦ರ ದಶಕದ ಕೊನೆಯ ಭಾಗದಲ್ಲಿ ಹಾವನೂರ ವರದಿ (ಹಿಂದುಳಿದ ವರ್ಗಗಳಿಗೆ ಮೀಸಲಾತಿ) ಜಾರಿಗಾಗಿ ನಡೆದ ಹೋರಾಟ, ೧೯೭೩ರಲ್ಲಿ ಬಸವಲಿಂಗಪ್ಪ ಇಡೀ ಕನ್ನಡ ಸಾಹಿತ್ಯವನ್ನು ಬೂಸಾ ಸಾಹಿತ್ಯ ಎಂದದ್ದು, ಕುವೆಂಪು ಅದನ್ನು ಸಮರ್ಥಿಸಿದ್ದು, ದೇವರಾಜ ಅರಸು ಸರಕಾರ ಭೂ ಸುಧಾರಣಾ

ಮಸೂದೆಯನ್ನು ಜಾರಿಗೊಳಿಸಿ ಅಸಂಖ್ಯಾತ ಭೂಹೀನರಿಗೆ ಜಮೀನು ದೊರೆತದ್ದು, ಇವೆಲ್ಲಾ ಮೊದಲ ತಲೆಮಾರಿಗೆ ಅಕ್ಷರ ಪಡೆದ ಯುವಕರನ್ನು ಪ್ರಗತಿಪರವಾಗಿ ಚಿಂತಿಸಲು, ಆ ಚಿಂತನೆಯ ಫಲವಾಗಿ ಸಾಹಿತ್ಯ ರಚಿಸಲು ಪ್ರೇರೇಪಿಸಿತು.

ನವ್ಯರು ವ್ಯಕ್ತಿಗಳ ಭಾವನೆಗಳ ತುಮುಲಕ್ಕೆ, ಅಂತರಂಗದ ವಿವರಗಳಿಗೆ ರೂಪು ಕೊಡುತ್ತಿದ್ದಾಗ, ಬಂಡಾಯ ಸಾಹಿತಿಗಳು ಸಮಾಜದ ವಿಕಾರಗಳನ್ನು ಸಾಹಿತ್ಯದಲ್ಲಿ ಒಡಮೂಡಿಸುವ, ಆ ಮೂಲಕ ಬದಲಾವಣೆಗೆ ನಾಂದಿಯಾಗುವ ಕಾರ್ಯ ಕೈಗೊಂಡರು. ಈ ದೃಷ್ಟಿಯಿಂದಾಗಿ ೧೯೭೪ರಲ್ಲಿ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ಮೈಸೂರಿನಲ್ಲಿ ಜನ್ಮ ತಾಳಿತು. ಇಲ್ಲಿಂದಾಚೆಗೆ ಸಾಹಿತ್ಯವನ್ನು ಬ್ರಾಹ್ಮಣ ಪ್ರಜ್ಞೆ, ಶೂದ್ರ ಪ್ರಜ್ಞೆಯ ದೃಷ್ಟಿ ಪರಿಕಲ್ಪನೆಗಳನ್ನಿಟ್ಟುಕೊಂಡು ವಿವೇಚಿಸುವ ವಿಮರ್ಶೆ ಪ್ರಾರಂಭವಾಯಿತು. ಮೊದಲಿಗೆ ಕೆಲ ನವ್ಯ ಸಾಹಿತಿಗಳೂ, ದಲಿತ ಸಾಹಿತಿಗಳೂ ಈ ಬರಹಗಾರರ ಮತ್ತು ಕಲಾವಿದರ ಒಕ್ಕೂಟದಲ್ಲಿ ಇದ್ದರು. ನಂತರ ತುರ್ತುಪರಿಸ್ಥಿತಿಯ ಕಾಲದಲ್ಲಿ ಕೆಲವರು ಅದನ್ನು ವಿರೋಧಿಸದೆ ಆರಾಮವಾಗಿದ್ದರು. ಮತ್ತೆ ಕೆಲವರು 'ತುರ್ತುಪರಿಸ್ಥಿತಿ'ಯನ್ನು ವಿರೋಧಿಸಿ ಸೆರೆಮನೆಯ ವಾಸಕ್ಕೂ ಈಡಾದರು. ಈ ಕಾಲದಲ್ಲಿ ಸಾಹಿತಿಗಳ ಧ್ರುವೀಕರಣವೂ ಆರಂಭವಾಯಿತು. ಈ ಧ್ರುವೀಕರಣ ಕೊನೆಗೆ ೧೯೭೯ರಲ್ಲಿ ಧರ್ಮಸ್ಥಳ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ಸ್ಫೋಟವಾಯಿತು. ದಲಿತ ಸಾಹಿತ್ಯದ ಚರ್ಚೆಗೆ ಅವಕಾಶ ನೀಡದ್ದರಿಂದ ಧರ್ಮಸ್ಥಳ ಸಾಹಿತ್ಯ ಸಮ್ಮೇಳನವನ್ನು ವಿರೋಧಿಸಿ ಪ್ರಗತಿಪರ ಸಾಹಿತಿಗಳು ಬೆಂಗಳೂರಿನಲ್ಲಿ ಮಾರ್ಚ್ ೧೦-೧೧ರಂದು ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ನಡೆಸಿದರು. 'ಖಡ್ಗವಾಗಲಿ ಕಾವ್ಯ: ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬ ಘೋಷಣೆಯೊಂದಿಗೆ ಚಳವಳಿ ಆರಂಭವಾಯಿತು.

ಬಂಡಾಯ ಸಾಹಿತ್ಯದ ಮೇಲೆ ಮಾರ್ಕ್ಸ್‌ವಾದ, ಲೋಹಿಯಾವಾದ, ಗಾಂಧಿ-ಅಂಬೇಡ್ಕರವಾದಗಳ ಪ್ರಭಾವವಿದೆ. ಅಂದರೆ ಪ್ರಮುಖ ಬಂಡಾಯ ಲೇಖಕರಾದ ಬರಗೂರು ರಾಮಚಂದ್ರಪ್ಪ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ಪ್ರಮುಖವಾಗಿಸಿಕೊಂಡರೆ, ಕಾಳೇಗೌಡ ನಾಗವಾರ ಲೋಹಿಯಾವಾದವನ್ನು ಪ್ರಮುಖ ನೆಲಗಟ್ಟಾಗಿಸಿಕೊಳ್ಳುತ್ತಾರೆ. ಸಾಹಿತ್ಯ ರಚನೆಗೆ ಕಾರಣವಾದ ಪ್ರೇರಣೆಗಳೇ ಸಾಹಿತ್ಯ ವಿಮರ್ಶೆಗೂ ಮಾನದಂಡಗಳಾಗಿದ್ದು, ಬರಗೂರು ರಾಮಚಂದ್ರಪ್ಪ, ಆರ್ಕೆ ಮಣಿಪಾಲ ಮುಂತಾದವರ ಮಾರ್ಕ್ಸ್‌ವಾದಿ ವಿಮರ್ಶೆಯಿಂದ ಪ್ರಾರಂಭವಾದ ಬಂಡಾಯ ವಿಮರ್ಶೆ 'ಪ್ರತಿ ಸಂಸ್ಕೃತಿ', 'ಶಿಷ್ಟ-ಪರಿಶಿಷ್ಟ'ವರೆಗೆ ತಲುಪಿ ನಂತರ ಸಂಸ್ಕೃತಿ ವಿಮರ್ಶೆಯ ಹಾದಿ ಹಿಡಿಯಿತು.

"ಸಾಹಿತ್ಯದ ಮುಖ್ಯ ಧ್ಯೇಯವೆಂದರೆ ಇರುವ ಸಮಾಜವನ್ನು ಇನ್ನಷ್ಟು ಸುಸ್ಥಿರವಾಗಿ, ಸುಂದರವಾಗಿ ಬಲಗೊಳ್ಳಲು ಮನಸುಗಳನ್ನು ಪ್ರೇರೇಪಿಸುವುದಾಗಿದೆ. ಯುವ ಬರಹಗಾರರು ಸಾಹಿತ್ಯವನ್ನು ಗಂಭೀರವಾದ ಅಧ್ಯಯನದ ಶಿಸ್ತಾಗಿ ಪರಿಭಾವಿಸಬೇಕಾಗಿದೆ. ಅದಕ್ಕಾಗಿ ಬರೆಯುವವರು ತಾವು ಬರೆದಂತೆ ಬದುಕುವ ಬದ್ಧತೆಯನ್ನು ಪ್ರದರ್ಶಿಸಬೇಕಾದ ಜವಾಬ್ದಾರಿಯನ್ನು ನಿರ್ವಹಿಸಬೇಕು. ವಿಮರ್ಶೆ ಎಂಬುದು ಮನುಷ್ಯ ಬದುಕಿನ ನ್ಯಾಯ-

ಅನ್ಯಾಯಗಳ ಪರಾಮರ್ಶೆಯಾಗಿದೆ. ಸಾಹಿತ್ಯ ವಿಮರ್ಶೆ ಎಂದರೆ ಸಮಾಜ ವಿಮರ್ಶೆಯೇ ಆಗಿದೆ. ಹಾಗಾಗಿ ಸಾಹಿತಿ ಕಲಾವಿದರಾದವರಿಗೆ ಸಾಮಾಜಿಕ ಜವಾಬ್ದಾರಿ ಇದೆ.” ಬುದ್ಧ, ಬಸವಣ್ಣ, ಫುಲೆ, ವಿವೇಕಾನಂದ, ಪೆರಿಯಾರ್, ಗಾಂಧೀ, ಅಂಬೇಡ್ಕರ್, ಲೋಹಿಯಾ ಮುಂತಾದ ಮಾನವೀಯ ಚಿಂತಕರು ನಮ್ಮ ದೇಶದಲ್ಲಿ ಶ್ರೇಷ್ಠ ವಿಮರ್ಶಾ ಪರಂಪರೆಯ ಪ್ರತಿಪಾದಕರಾಗಿದ್ದಾರೆ. ಆ ಪರಂಪರೆಯನ್ನು ಮುಂದುವರಿಸುವುದು ಇಂದು ಬರೀ ಸಾಹಿತಿಗಳಾದವರ ಕಾರ್ಯ ಮಾತ್ರವಲ್ಲ, ಎಲ್ಲ ಕ್ಷೇತ್ರಗಳ ಚಿಂತಕರ ಆದ್ಯ ಕರ್ತವ್ಯವಾಗಿದೆ. ಇಂದಿಗೂ ಬಂಡಾಯ ಸಾಹಿತ್ಯದ ಪರಿಕಲ್ಪನೆ ಸಾಮಾನ್ಯ ವಲಯಗಳಲ್ಲಿ ಹೇಗೆ ಚಾಲ್ತಿಯಲ್ಲಿದೆ ಎಂಬುದಕ್ಕೆ ಇದೊಂದು ಉದಾಹರಣೆ ಅಷ್ಟೆ.

ಬಂಡಾಯ ವಿಮರ್ಶೆ ಗುರುತಿಸುವಂತೆ, ಕಾವ್ಯಭಾಷೆಯ ದೃಷ್ಟಿಯಿಂದ ಕನ್ನಡದಲ್ಲಿ ನವ್ಯದ ಸಂಕೀರ್ಣತೆ ಮತ್ತೆ ಮುಂಚೂಣಿಗೆ ಬಂದು ನಿಲ್ಲುತ್ತಿದೆ. ನಮ್ಮ ಅನೇಕ ಕವಿಗಳು ಅದರಲ್ಲಿಯೂ ಹೊಸ ತಲೆಮಾರಿನ ಕವಿಗಳು ನವ್ಯದ ಸಂದರ್ಭದಲ್ಲಿದ್ದ ಭಾಷೆಗೆ ಒಲಿದಿದ್ದಾರೆ. ದಲಿತ– ಬಂಡಾಯದ ಪ್ರತಿಭಟನಾ ನೆಲೆಯಲ್ಲಿ ಹೊಸ ಭಾಷೆಯನ್ನು ಮುರಿದು ಕಟ್ಟಲಾಗಿದ್ದ ಕಾವ್ಯ, ಅಮೂರ್ತ– ಸಂಕೀರ್ಣತೆಯ ನವ್ಯದ ಶೈಲಿಗೆ ಮರಳಿದೆ. ಸದ್ಯದ ಹೊಸ ಕವಿಗಳ ಕಾವ್ಯವನ್ನು ಈ ಮಾತುಗಳಿಗೆ ಸಾಕ್ಷಿಯಾಗಿಸಬಹುದು. ಇದರರ್ಥ ಇದು ಕೆಟ್ಟ ಕಾವ್ಯವೆಂದಲ್ಲ; ಬದಲಿಗೆ ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಯಾವುದನ್ನು ತೀವ್ರವಾಗಿ ವಿರೋಧಿಸಲಾಗಿತ್ತೋ ಇಂದು ಅದೇ ರೀತಿಯ ಭಾಷೆ ಮತ್ತು ಆಲೋಚನೆಗಳು ಮೂಡಿಬರುತ್ತಿರುವುದನ್ನು ಬಂಡಾಯ ವಿಮರ್ಶೆ ಗುಮಾನಿಯಿಂದ ನೋಡುತ್ತಿದೆ.

ಇದಕ್ಕೆ ಪೂರಕವಾಗಿ, ಇತ್ತೀಚೆಗೆ ಕನ್ನಡದಲ್ಲಿ ಮುಖ್ಯ ಕೃತಿಗಳೆಂದು ಗ್ರಹಿಸಿ ಚರ್ಚಿಸುತ್ತಿರುವುದಕ್ಕೆ, ಪ್ರಶಸ್ತಿಗಳನ್ನು ನೀಡುತ್ತಿರುವುದಕ್ಕೆ ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರಾದ ಬರಗೂರು ರಾಮಚಂದ್ರಪ್ಪನವರು, “ಶ್ರೀನಿವಾಸ ವೈದ್ಯರ 'ಹಳ್ಳ ಬಂತು ಹಳ್ಳ' ಮತ್ತು ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಗಳಿಗೆ ನೀಡಿದ ಪ್ರಶಸ್ತಿ ಮತ್ತು ಅದರ ಹಿಂದೆ ಇರಬಹುದಾದ ನವ್ಯದ ವಿಮರ್ಶಾ ನಿಲುವುಗಳನ್ನು ಗಮನಿಸಬೇಕು. ಇದುವರೆವಿಗೂ ಹೆಚ್ಚು ಚರ್ಚೆಯಾಗದ, ಪರಂಪರೆಯ ಭಾಗವೂ ಆಗದ ಲೇಖಕರು ದಿಢೀರನೆ ಮುಂಚೂಣಿಗೆ ಬಂದದ್ದು, ನವ್ಯದ ಸಂದರ್ಭದಲ್ಲಿದ್ದ ವಾತಾವರಣವನ್ನು ನೆನಪಿಸುತ್ತದೆ. ಇವು ಎಷ್ಟೇ ಉತ್ತಮ ಕೃತಿಗಳಾದರೂ ಕನ್ನಡ ಸಾಹಿತ್ಯ ಪ್ರಯೋಗಶೀಲ ಓದುಗನ ಮನಸ್ಸಿನಲ್ಲಿ ವೈಚಾರಿಕತೆಯನ್ನು ಬಿಂಬಿಸುವುದಿಲ್ಲ. ಈ ಲೇಖಕರು ಒಮ್ಮಿಂದೊಮ್ಮೆಲೆ ಇಂಥ ಗೌರವವನ್ನು ಪಡೆದವರಾದರು. ಇದೊಂದು ರೀತಿಯ ನವ್ಯದ ಮರುಮಾಟ ಅನ್ನಿಸದೇ ಇರಲಾರದು.” ಎಂದು ಸಂಶಯ ಪಡುತ್ತಾರೆ. ಜಾಗತೀಕರಣದ ಹುದುಲಿನಲ್ಲಿ ಸಿಕ್ಕಿರುವ ನಮಗೆ ಈ ಸಂದರ್ಭಕ್ಕೆ ಶಕ್ತ ಸಾಹಿತ್ಯ ಹುಟ್ಟಬೇಕೆಂಬುದು ನಿಜವಾದರೂ, ಕೃತಿಯೊಂದರ ಸೃಜನಶೀಲತೆ ಅಥವಾ ಭಾಷಾ ಪ್ರಯೋಗ ಹೀಗೆ ಇರಬೇಕೆಂಬುದು ನಿರ್ಧರಿಸಲು ಸಾಧ್ಯವಾಗದಿದ್ದರೂ, ಇದುವರೆಗಿನ

ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು, ಪರಂಪರೆಯನ್ನು ಸಧ್ಯದ ಕೃತಿಗಳು ಮುಂದುವರೆಸಿಕೊಂಡು ಹೋಗಬೇಕೇ ಹೊರತು, ಹಿನ್ನಡೆ ತರಬಾರದು.

ಇಂದು ಕನ್ನಡ ಸಾಹಿತ್ಯದಲ್ಲಿ ಯಾವುದೇ ಸಾಹಿತ್ಯ ಚಳವಳಿಗಳು ಇಲ್ಲದಿರುವುದರಿಂದ ಸಾಹಿತಿಗಳಿಗೆ ಒಂದು ರೀತಿಯ ಸೃಜನಶೀಲ ಸ್ವಾತಂತ್ರ್ಯ ಸಿಕ್ಕಿದೆ. ಆದ್ದರಿಂದ ಯಾವುದೇ ಸದ್ದುಗದ್ದಲವಿಲ್ಲದೆ ತಮ್ಮ ಪಾಡಿಗೆ ತಾವು ಸಾಹಿತ್ಯ ಸೃಷ್ಟಿ ಮಾಡುತ್ತಿದ್ದಾರೆ. ಆದರೆ ಇಂತಹ ಸ್ಥಿತಿಯ ಬಗ್ಗೆ ಸಮಾಧಾನ ಹೊಂದದ ಬಂಡಾಯ ವಿಮರ್ಶೆಯು ಇಂದು ಸದ್ದುಗದ್ದಲವಿಲ್ಲದೆ ಬರೆಯುವವರು ಯಾವುದೇ ಪಂಥಗಳಿಗೆ ಸೇರಿರುವುದಿಲ್ಲವೆಂದು ಒಪ್ಪುವುದಿಲ್ಲ. ಯಾಕೆಂದರೆ ನಿರ್ದಿಷ್ಟ ಪಂಥವೊಂದನ್ನು ಒಪ್ಪಿಕೊಂಡಿದ್ದರೂ ಸಾರ್ವಜನಿಕ ಕ್ರಿಯೆ – ಪ್ರತಿಕ್ರಿಯೆಗಳಲ್ಲಿ ಭಾಗವಹಿಸದೆ ಇರುವ ಸ್ವಾತಂತ್ರ್ಯ ಬರಹಗಾರರಿಗೆ ಇರುತ್ತದೆ. ಜೊತೆಗೆ ಇನ್ನು 'ಯಾವುದೇ ಪಂಥಕ್ಕೆ ಸೇರದೆ ಇರುವವರು' ಯಾವುದೇ ಗದ್ದಲವನ್ನೂ ಎಬ್ಬಿಸದೆ ತಾನಾಯಿತು ತನ್ನ ಬರವಣಿಗೆಯಾಯಿತು ಎಂಬ ಸ್ಥಿತಿಯಲ್ಲಿ ಇರುತ್ತಾರೆ, ಹಾಗೆ ಇದ್ದರೆ ಅದು ಸೃಜನಶೀಲ ಸಜ್ಜನಿಕೆಯಾಗುತ್ತದೆ, ಅದರ ಬದಲಿಗೆ, ಯಾವುದಾದರೂ ಪಂಥಕ್ಕೆ ಸೇರಿದರೆ ಸಾಹಿತಿಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆಂಬ ಭಾವನೆಯ ಜೊತೆಗೆ ಪಂಥಾತೀತ ಮನೋಧರ್ಮವೇ ಆದರ್ಶಗಳ ಮಾದರಿ ಎಂಬ ತಿಳಿವಳಿಕೆಯನ್ನು ಇದು ಸಾರಾಸಗಟಾಗಿ ವಿರೋಧಿಸುತ್ತದೆ.

ಏಕೆಂದರೆ, ಯಾವುದಾದರೂ ಪಂಥವೊಂದಕ್ಕೆ ಬದ್ಧರಾದರೆ ಅದು ಸೃಜನಶೀಲತೆಯನ್ನು ನಿಯಂತ್ರಿಸಿ ಏಕಮುಖವಾಗಿಸುತ್ತದೆಯೆಂಬ ತಿಳಿವಳಿಕೆಯಿಂದ ಯಾವುದೇ ಪಂಥಕ್ಕೆ ಸೇರದೆ ಇರುವುದೇ ಒಂದು ಆದರ್ಶ ಮಾದರಿ ಎನ್ನಿಸಿರಬಹುದು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ – ಶಕ್ತಿಶಾಲಿ ಸೃಜನಶೀಲತೆಯು ಪಂಥದೊಳಗಿದ್ದೂ ಪಂಥವನ್ನು ಮೀರುವ ಜಿಗಿತವನ್ನು ಪಡೆದಿರುತ್ತದೆ. ಯಾವುದೇ ವಾಚ್ಯದಲ್ಲಿ ಪಂಥವೊಂದನ್ನು ಗ್ರಹಿಸುವುದಕ್ಕೂ ಆಶಯದಲ್ಲಿ ಗ್ರಹಿಸುವುದಕ್ಕೂ ಅಂತರವಿದೆ. ಪಂಥವೊಂದನ್ನು ನಾವು ಅರಿಯುವ ಹಾಗೂ ಅರಗಿಸಿಕೊಳ್ಳುವ ಸಾಮರ್ಥ್ಯದಲ್ಲಿ ಸೃಜನಶೀಲತೆಯ ಸ್ವರೂಪ ನಿರ್ಧಾರವಾಗುತ್ತದೆ. ಆದ್ದರಿಂದ ಸಾಹಿತಿಯು ಪಂಥವೊಂದನ್ನು ಒಪ್ಪುವುದು ನಕಾರಾತ್ಮಕವಾಗಬೇಕಿಲ್ಲ. ಹಾಗೆ ನೋಡಿದರೆ 'ಪಂಥ'ವೆನ್ನುವುದು ಯಾವ ನೆಲೆಗೆ ಸಂಬಂಧಪಟ್ಟದ್ದೆಂಬ ಪ್ರಶ್ನೆಯೂ ಮುಖ್ಯವಾಗುತ್ತದೆ. ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ 'ಪಂಥ'ಗಳೂ ಇವೆ. ಸಾಮಾಜಿಕ – ರಾಜಕೀಯ ಪಂಥಗಳೂ ಇವೆ. ಸಾಹಿತ್ಯಕ್ಕೆ ಬಂದರೆ, 'ನವೋದಯ'ವೂ ಒಂದು ಪಂಥ; 'ನವ್ಯ'ವೂ ಒಂದು ಪಂಥ. ಆದರೆ 'ಯಾವ ಪಂಥಕ್ಕೂ ಸೇರದೆ ಬರೆಯುವ ಪ್ರವೃತ್ತಿ'ಯನ್ನು ಕುರಿತ ಪ್ರಶಂಸಾ ಪರಿಭಾಷೆಯು ಹೆಚ್ಚು ಬಳಕೆಗೆ ಬಂದದ್ದು ಪ್ರಗತಿಶೀಲ ಮತ್ತು ದಲಿತ – ಬಂಡಾಯ ಸಾಹಿತ್ಯ ಚಳವಳಿಗಳ ಸಂದರ್ಭದಲ್ಲಿ ಎಂಬುದನ್ನು ಈ ವಿಮರ್ಶೆ ಗುರುತಿಸುತ್ತದೆ.

[illegible]

'ಶುದ್ಧ ಸಾಹಿತ್ಯ' ಕಲ್ಪನೆಯನ್ನು ಉಲ್ಲಂಘಿಸಿ ಸಾಮಾಜಿಕ, ಆರ್ಥಿಕ ಸನ್ನಿವೇಶದ ರಾಜಕಾರಣವನ್ನು ಮುನ್ನೆಲೆಗೆ ತಂದ ಈ ಚಳವಳಿಗಳು ಸಾಹಿತ್ಯ ಸೃಷ್ಟಿಗಷ್ಟೇ ಸೀಮಿತವಾಗಿರಲಿಲ್ಲ; ಸಾಹಿತ್ಯವನ್ನು ಕಲಾ ಲೋಲುಪತೆಯೆಂದು ಭಾವಿಸಲಿಲ್ಲ; ಬದುಕೆನ್ನುವುದು ಸಾಮಾಜಿಕ – ಆರ್ಥಿಕ ಆಯಾಮಗಳಿಂದ ಹೊರತಾದದ್ದೆಂದು ತಿಳಿಯಲಿಲ್ಲ. ಬದುಕೆಂಬ ರೂಪಕದೊಳಗಿದ್ದ ಸಾಮಾಜಿಕ – ಆರ್ಥಿಕ ರೂಪಗಳನ್ನು ಅನಾವರಣಗೊಳಿಸುತ್ತಲೇ ಏಕಕಾಲಕ್ಕೆ ಬದುಕನ್ನು ಹೊಸದಾಗಿ ವಿವರಿಸಿದ ಮತ್ತು ಸಾಹಿತ್ಯವನ್ನು ಸಾಮಾಜಿಕಗೊಳಿಸಿದ ಕ್ರಿಯೆಯು ಇಂತಹ ಪ್ರಗತಿಪರ ಚಳವಳಿಗಳಿಂದ ಆಯಿತು. ಯಾವುದೇ ಚಳವಳಿಗೆ ಒಂದು ತಾತ್ವಿಕತೆ ಇರುತ್ತದೆ. ಈ ತಾತ್ವಿಕತೆಯನ್ನೇ 'ಪಂಥೀಯತೆ' ಎಂದೂ ಕರೆಯಬಹುದು. ಈ ಹಿನ್ನೆಲೆಯಲ್ಲಿ ನೋಡಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ: 'ಯಾವ ಪಂಥಕ್ಕೂ ಸೇರದ' ಎಂಬ ಪ್ರಶಂಸೆಯು 'ಪ್ರಧಾನವಾಗಿ' ಪ್ರಗತಿಪರ ಹಾಗೂ ಎಡಪಂಥೀಯತೆಗೆ ವಿರುದ್ಧವಾದ ನೆಲೆಯಿಂದ ಹುಟ್ಟಿದೆ ಎಂದು ಇದು ಗುರುತಿಸುತ್ತದೆ.

ಈ ನಿದರ್ಶನಗಳಿಂದ ಸ್ಪಷ್ಟವಾಗುವ ಅಂಶವೆಂದರೆ – ಪಂಥಬದ್ಧತೆಯು ಮಾರಕವಲ್ಲ; ಪ್ರೇರಕ. ಪಂಥವೊಂದನ್ನು ಅಕ್ಷರಸ್ಥ ವಾಚ್ಯದಲ್ಲಿ ಅನುಸರಿಸಿದರೆ ಸೃಜನಶೀಲತೆಗೆ ಊನವಾದೀತೆ ಹೊರತು, ಅದರ ಆಶಯವನ್ನು ಪ್ರೇರಣೆಯಾಗಿ ಪಡೆದರೆ ಸೃಜನಶೀಲತೆಗೆ ಹೊಸ ಆಯಾಮ ಲಭ್ಯವಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ – ಅದರಲ್ಲೂ ದಲಿತ – ಬಂಡಾಯ ಚಳವಳಿಗಳ ಸಂದರ್ಭದಲ್ಲಿ 'ಯಾವ ಪಂಥಕ್ಕೂ ಸೇರದ' 'ಅನನ್ಯತೆ'ಯನ್ನು ಗುರುತಿಸ ಹೊರಟಿದ್ದು ಪ್ರಗತಿ ಪಂಥಗಳಿಗೆ ಪ್ರತಿಕ್ರಿಯೆಯಾದ ಪ್ರತಿಗಾಮಿ ಪಂಥವೂ ಎಡಪಂಥೀಯತೆಗೆ ಎದುರಾದ ಬಲಪಂಥೀಯತೆಯೂ ಆಗಿರುವ ಸಾಧ್ಯತೆಯಿದೆ. ಈ ದೃಷ್ಟಿಯಿಂದ 'ಯಾವ ಪಂಥಕ್ಕೂ ಸೇರದ' ಎಂಬುದೇ ನಿರ್ದಿಷ್ಟ ಪಂಥವಾಗಿರುವ ಸಾಧ್ಯತೆ ಇರುತ್ತದೆ. ಕನ್ನಡದಲ್ಲಿ ಅಂತಹ ಸ್ಥಿತಿ ನಿರ್ಮಾಣವಾಗುತ್ತಿರುವ ಸನ್ನಿವೇಶವಿದೆ.

ಹಾಗೆಂದು, ಬರಹಗಾರರೆಲ್ಲರೂ ಪ್ರಜ್ಞಾಪೂರ್ವಕವಾಗಿ ಒಂದು ಪಂಥಕ್ಕೆ ಬದ್ಧರಾಗಿಯೇ ಬರೆಯಬೇಕೆಂದಾಗಲಿ, ಬರೆಯುತ್ತಿದ್ದಾರೆಂದಾಗಲಿ ಅಲ್ಲ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನೆಲೆಗಳು ನಿರ್ದಿಷ್ಟ ಸಮಾಜದ ಬದುಕನ್ನು ರೂಪಿಸುವ ಒಳಶಕ್ತಿಗಳಾಗಿರುವುದರಿಂದ ಬರಹಗಾರರ ಒಳಗೆ ನಿರ್ದಿಷ್ಟ ದೃಷ್ಟಿ ದರ್ಶನಗಳು ರೂಪುಗೊಳ್ಳುತ್ತವೆ. ಈ ನಿರ್ದಿಷ್ಟ ದೃಷ್ಟಿ ದರ್ಶನಗಳು ಪ್ರಚಲಿತವಾಗಿರುವ ಪಂಥಗಳಿಗೆ ಹೊಂದಬಹುದು; ಪಂಥಗಳಿಂದ ಪ್ರೇರಣೆ ಪಡೆಯಬಹುದು; ಅದೇ ಪಂಥವಾಗಬಹುದು; ಹೊಸ ಪಂಥೀಯತೆಯೊಂದು ಬೆಳಗಬಹುದು. ಹೀಗೆ ವಿವಿಧ ವಿಧಾನಗಳಲ್ಲಿ ಅಭಿವ್ಯಕ್ತವಾಗಬಹುದು.

ನಮ್ಮ ದೇಶದಲ್ಲಿ ಜಾರಿಗೆ ಬಂದ ಜಾಗತೀಕರಣ ನಾಮಾಂಕಿತ ಮುಕ್ತ ಆರ್ಥಿಕ ನೀತಿಯ ಫಲಿತಗಳನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲೂ ಕಾಣಬಹುದಾಗಿದೆ.

"ಮುಕ್ತ ಆರ್ಥಿಕ ನೀತಿಯ ಗುಣಲಕ್ಷಣಗಳನ್ನು ಹರ್ಬರ್ಟ್ ಅಪ್ತೇಕರ್ ಅವರು ಹೀಗೆ ಪಟ್ಟಿ ಮಾಡುತ್ತಾರೆ. (೧) ಮುಕ್ತ ಆರ್ಥಿಕ ನೀತಿಯಲ್ಲಿ ಸರ್ಕಾರವನ್ನು ಬಂಡವಾಳಶಾಹಿಗಳು ನಿಯಂತ್ರಿಸುತ್ತಾರೆ; ಬಂಡವಾಳಶಾಹಿಗಳನ್ನು ಸರ್ಕಾರವು ನಿಯಂತ್ರಿಸುವುದಿಲ್ಲ. (೨) ಇಲ್ಲಿ ರಾಜಕೀಯ ಸ್ವಾತಂತ್ರ್ಯ ಮಾತ್ರ ಇರುತ್ತದೆ; ಆರ್ಥಿಕ ಸ್ವಾತಂತ್ರ್ಯ ಇರುವುದಿಲ್ಲ. (೩) ಅಸಮಾನತೆ ಎನ್ನುವುದು ಒಂದು ಸ್ವಾಭಾವಿಕ ಸ್ಥಿತಿ. ಪ್ರಗತಿಪರ ಚಳವಳಿಗಳು ಸಾಮಾಜಿಕ-ಆರ್ಥಿಕ ಸ್ವಾತಂತ್ರ್ಯವನ್ನೂ ಸಮಾನತೆಯನ್ನೂ ಬಯಸುತ್ತವೆ. ಈ ಕಾರಣದಿಂದ ಸ್ವಾತಂತ್ರ್ಯದ ಪರಿಕಲ್ಪನೆಗೆ ಸಾಮುದಾಯಿಕ ಸ್ವರೂಪ ನೀಡುತ್ತವೆ. ಬಂಡವಾಳಶಾಹಿ, ಮುಕ್ತ ಆರ್ಥಿಕ ನೀತಿಯು ಸಾಮುದಾಯಿಕ ಸ್ವಾತಂತ್ರ್ಯ ಮತ್ತು ಸಮಾನತೆಯ ಪರವಾಗಿರುವುದಿಲ್ಲ; ಬದಲಾಗಿ ವೈಯಕ್ತಿಕ ಲಾಭವನ್ನಷ್ಟೇ ಪರಿಗಣಿಸುತ್ತದೆ. ಹೀಗಾಗಿ ಮುಕ್ತ ಆರ್ಥಿಕ ನೀತಿಯು ಸಾಮಾಜಿಕ ಕಾಳಜಿಯನ್ನು ಗೌಣವಾಗಿಸಿ, ವ್ಯಕ್ತಿ ಕೇಂದ್ರಿತ 'ಮಾರುಕಟ್ಟೆ ಮನೋಧರ್ಮ'ವನ್ನು ಬೆಳೆಸುತ್ತದೆ."[೨] ಇಂದು ನಮ್ಮ ಸಂದರ್ಭದಲ್ಲಿ ರೂಪುಗೊಳ್ಳುತ್ತಿರುವುದು ಇದೇ ಮನೋಧರ್ಮ. ಇದರ ಫಲವಾಗಿ ವೈಯಕ್ತಿಕ ಲಾಭ ನಷ್ಟಗಳು ಮುಖ್ಯವಾಗುತ್ತವೆ. ಸಾಮಾಜಿಕ ಆಶಯಗಳು ಅಮುಖ್ಯವಾಗುತ್ತವೆ.

ಸಾಹಿತ್ಯ ಚಳವಳಿಗಳು ಪ್ರತಿಪಾದಿಸಿದ ಸಾಮಾಜಿಕ ಜವಾಬ್ದಾರಿಯ ಕಲ್ಪನೆಗೆ ಹಿನ್ನಡೆಯಾಗುತ್ತಿರುವುದು ಮತ್ತು ಚಳವಳಿಗಳ ತೀಕ್ಷ್ಣತೆ ಕಡಿಮೆಯಾಗಿದೆಯೆಂಬುದು ಆತಂಕಕಾರಿ ಸಂಗತಿ. ಸಾಹಿತ್ಯ ಚಳವಳಿಗಳಾಗಲಿ, ಸಾಮಾಜಿಕ ಜವಾಬ್ದಾರಿಯ ಪರಿಕಲ್ಪನೆಯಾಗಲಿ ಯಾವತ್ತೂ ಸೃಜನಶೀಲ ಸ್ವಾತಂತ್ರ್ಯಕ್ಕೆ ವಿರೋಧಿಗಳಲ್ಲ. ವಿಮರ್ಶಕ ಮಾರ್ಕ್ಸ್ ಅಡೆರತ್ ಪ್ರತಿಪಾದಿಸಿದಂತೆ "ಸೃಜನಶೀಲ ಸ್ವಾತಂತ್ರ್ಯದ ಪರಿಕಲ್ಪನೆಯು ಸಾಮಾಜಿಕ ಜವಾಬ್ದಾರಿಯ ಭಾವನೆಯಿಂದ ಪ್ರತ್ಯೇಕವಾದುದಲ್ಲ. ಅವೆರಡೂ ಅವಿಭಾಜ್ಯ ಅಂಗಗಳು'. ಇವತ್ತು ಆತಂಕಕಾರಿಯಾದ ಇನ್ನೊಂದು ಬೆಳವಣಿಗೆಯನ್ನು ಕಾಣಬಹುದು. ಬಂಡವಾಳಶಾಹಿ ಮುಕ್ತ ಆರ್ಥಿಕ ನೀತಿಯಲ್ಲಿ ಶೀಘ್ರ ಲಾಭ ಮಾಡುವ ಪ್ರವೃತ್ತಿ ಪ್ರಮುಖವಾಗಿರುವಂತೆ ಸಾಂಸ್ಕೃತಿಕ ಕ್ಷೇತ್ರದಲ್ಲೂ ಅದರ ಛಾಯೆ ಕಾಣುತ್ತಿದೆ. ವ್ಯಕ್ತಿ ಮಾತ್ರ ಮುಖ್ಯವಾಗುವ ಮನೋವೃತ್ತಿಯು ಸಮಾಜಕ್ಕಿಂತ ಸ್ವಂತದ್ದನ್ನು ಪ್ರಚುರಪಡಿಸಿಕೊಳ್ಳುತ್ತದೆ; ಸ್ವಂತ ಲಾಭಕ್ಕಾಗಿ ದುಡಿಯುತ್ತದೆ; ಅದಕ್ಕಾಗಿ ಹಪಹಪಿಸುತ್ತದೆ. ಬಂಡವಾಳಶಾಹಿಗೆ ಆರ್ಥಿಕ ಲಾಭ ಮುಖ್ಯವಾದರೆ ಸಾಂಸ್ಕೃತಿಕ ಕ್ಷೇತ್ರಕ್ಕೆ ಶೀಘ್ರ ಪ್ರಸಿದ್ಧಿ ಮತ್ತು ಲಾಭ ಮುಖ್ಯವಾಗುತ್ತದೆ. ಇಂಥ ಕಡೆ ವ್ಯಕ್ತಿನಿಷ್ಠ ಬಂಡವಾಳಶಾಹಿ ಮತ್ತು ವ್ಯಕ್ತಿನಿಷ್ಠ ಸಾಂಸ್ಕೃತಿಕ ಕ್ಷೇತ್ರ ಪ್ರಜ್ಞಾಪೂರ್ವಕವಾಗಿಯೊ ಅಪ್ರಜ್ಞಾಪೂರ್ವಕವಾಗಿಯೋ ಪೂರಕವಾಗುವ ಅಪಾಯವಿರುತ್ತದೆ."[೩] ಇದರ ಫಲವಾಗಿ ಸಾಂಸ್ಕೃತಿಕ ಕ್ಷೇತ್ರವು ಬಂಡವಾಳಶಾಹಿಯ ಆರ್ಥಿಕ ಶಕ್ತಿಯ ಫಲಿತಗಳನ್ನು ಒಪ್ಪುತ್ತಾ ವ್ಯಕ್ತಿವಿಶಿಷ್ಟತೆಯನ್ನು ಪ್ರತಿಪಾದಿಸುತ್ತಾ ಸಾಮಾಜಿಕ ಹೊಣೆಗಾರಿಕೆಗೂ ಸಾಂಸ್ಕೃತಿಕ ಸೃಜನಶೀಲತೆಗೂ ಸಂಬಂಧವಿಲ್ಲವೆನ್ನುತ್ತಾ ಸ್ವಂತ ಸುಖದಲ್ಲಿ ಲೀನವಾಗುತ್ತದೆ. ಪ್ರಸಿದ್ಧಿಗಾಗಿ ಬಂಡವಾಳಶಾಹಿಯ ತಾಂತ್ರಿಕ ವಿಧಾನಗಳನ್ನೇ ಬಳಸಲಾಗುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಪ್ರಾಮುಖ್ಯ ಪಡೆದುಕೊಳ್ಳುತ್ತಿರುವ ಇನ್ನೊಂದು ನೆಲೆಯೆಂದರೆ 'ಜಾಹಿರಾತೀಕರಣ'. ಜಾಹಿರಾತು ಕೊಡುವುದು ತಪ್ಪಲ್ಲ. ಆದರೆ

ಅದು ಜೀವನದ ಅವಿಭಾಜ್ಯ ಅಂಗವಾಗುವಂತೆ ಮಾಡಿಕೊಂಡರೆ ಹುಸಿ ಪ್ರಸಿದ್ಧಿ, ಹುಸಿ ಪ್ರತಿಷ್ಠೆ ಮತ್ತು ಶೀಘ್ರ ಫಲಾಪೇಕ್ಷೆಯ ಪ್ರವೃತ್ತಿಯನ್ನು ಬೆಳೆಸುತ್ತದೆ. ಜಾಹಿರಾತು ಎನ್ನುವುದು ನಿರಂತರ ಪ್ರಕ್ರಿಯೆಯಾಗಿ ಜಾಹಿರಾತೀಕರಣವಾಗುತ್ತದೆ. ಜಾಗತೀಕರಣವು ಬೆಳೆಸುತ್ತಿರುವ ವ್ಯಕ್ತಿ ಕೇಂದ್ರಿತ, ಸ್ವಾರ್ಥಕೇಂದ್ರಿತ, ಭೋಗ ಕೇಂದ್ರಿತ ಮನೋವೃತ್ತಿಯು ಜಾಹೀರಾತೀಕರಣವನ್ನೂ ಒಳಗೊಂಡಂತೆ ಸಾಂಸ್ಕೃತಿಕ ಕ್ಷೇತ್ರವನ್ನೂ ಪ್ರವೇಶಿಸುತ್ತಿದೆ.

'ಜಾಹಿರಾತು ಬೂರ್ಶ್ವಾ ಸಂಸ್ಕೃತಿಯ ಶೈಲಿಯನ್ನು ಸ್ಥಾಪಿಸುತ್ತದೆ; ಅದರ ನೀತಿಗಳನ್ನು ರೂಪಿಸುತ್ತದೆ. ಬಂಡವಾಳಶಾಹಿ ರಾಷ್ಟ್ರಗಳ ಸಂಸ್ಕೃತಿಯನ್ನು ಪ್ರಮುಖ ಅಂಶವಾಗಿಸುತ್ತದೆ; ಸಾಮಾಜಿಕ ಪ್ರಜ್ಞೆಯನ್ನು ನಿಯಂತ್ರಿಸುತ್ತದೆ. ಈಗ ನಮ್ಮಲ್ಲಿ ಪ್ರಾರಂಭವಾಗಿರುವುದು ಇದೇ ಪ್ರಕ್ರಿಯೆ. ಬಂಡವಾಳಶಾಹಿ ರಾಷ್ಟ್ರಗಳ ಸಂಸ್ಕೃತಿಯ ಮಾದರಿ ಮುನ್ನೆಲೆಗೆ ಬರುತ್ತಿದೆ. ಸಾಮಾಜಿಕ ಪ್ರಜ್ಞೆಯು ಹಿನ್ನೆಲೆಗೆ ಸರಿಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಹಿಂದೆಂದಿಗಿಂತ ಹೆಚ್ಚು ಪ್ರಗತಿಪರ ಚಳವಳಿಗಳ ಅಗತ್ಯ ಕಾಣುತ್ತಿದೆ. ಪ್ರಗತಿಪರ ಚಳವಳಿಗಳು ಯಾವತ್ತೂ 'ಸ್ವಾತಂತ್ರ್ಯ'ದ ವಿರೋಧಿಗಳಲ್ಲ; ವ್ಯಕ್ತಿ ಸ್ವಾತಂತ್ರ್ಯ ಮಾತ್ರವೇ ಸ್ವಾತಂತ್ರ್ಯವೆಂದು ನಂಬಿರುವುದೂ ಇಲ್ಲ. ಶತಶತಮಾನಗಳಿಂದ ಸಮಕಾಲೀನ ಸಂದರ್ಭದವರೆಗೆ ಸ್ವಾತಂತ್ರ್ಯದ ಅನುಭವವೇ ಇಲ್ಲದೆ ಜೀವನ ಸಾಗಿಸುತ್ತ ಬಂದವರ 'ಬಿಡುಗಡೆ'ಯಲ್ಲಿ ಸ್ವಾತಂತ್ರ್ಯಕ್ಕೆ ಸಾರ್ಥಕತೆ ತರುವುದು ಪ್ರಗತಿಪರ ಚಳವಳಿಗಳ ಆಶಯವಾಗಿದೆ. ವ್ಯಕ್ತಿ ಮತ್ತು ಸಮುದಾಯವನ್ನು ಒಂದಾಗಿ ಗ್ರಹಿಸುವ ಕ್ರಮದಲ್ಲಿ ಸ್ವಾತಂತ್ರ್ಯವನ್ನು ಅರ್ಥೈಸುವುದು ಮತ್ತು ಅನುಷ್ಠಾನಗೊಳಿಸುವುದು ಇಂತಹ ಚಳವಳಿಗಳ ಮೂಲ ಆಶಯವಾಗಿರುತ್ತದೆ. ಸಮೂಹ ಚಳವಳಿಗಳು ಸಂಪೂರ್ಣ ಕ್ರಿಯಾಶೀಲವಾಗಿದ್ದರೆ ಸಾಂಸ್ಕೃತಿಕ ಚಳವಳಿಗಳು ಪೂರಕವಾಗಿರುತ್ತವೆ; ತಮ್ಮ ಕ್ಷೇತ್ರದಲ್ಲಿ ಪ್ರಗತಿಪರ ಆಶಯಗಳನ್ನು ಜೀವಂತವಾಗಿಡುತ್ತವೆ; ಈ ಮೂಲಕ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಬದುಕುವ, ಬದುಕಿಸುವ, ಜನಸಮುದಾಯಕ್ಕೆ ಗೌರವ ಸಲ್ಲಿಸುತ್ತವೆ; ಈ ಮೂಲಕ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತವೆ.

ಸೃಜನಶೀಲದ ಸಾಮಾಜಿಕ ಜವಾಬ್ದಾರಿಯನ್ನು ಕುರಿತು ರಷ್ಯಾದ ಲೇಖಕ ಪ್ಲಖನೋವ್ ತನ್ನ 'ಆರ್ಟ್ ಅಂಡ್ ಸೋಷಿಯಲ್ ಲೈಫ್' ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ: ಕಲಾಕಾರರು ಜನಗಳಿಂದ ಮನ್ನಣೆ ಮತ್ತು ಸ್ವಾತಂತ್ರ್ಯವನ್ನು ಬಯಸುತ್ತಾರೆ. ಜನರು ಕಲಾಕಾರರಿಂದ ಜವಾಬ್ದಾರಿಯನ್ನು ಬಯಸುತ್ತಾರೆ. ನಾವು ಜನಗಳಿಗೆ ಜವಾಬ್ದಾರರಾಗಬೇಕು. ಜನರಿಗೆ ಜವಾಬ್ದಾರರಾಗುವ ಪ್ರಾಮಾಣಿಕ ಚಳವಳಿಗಳು ಬೇಕು. ಈ ದಿಕ್ಕಿನಲ್ಲಿ ದಲಿತ–ಬಂಡಾಯ ಸಾಹಿತ್ಯ ಚಳವಳಿಯು ತನ್ನ ಅನುಭವದ ಪಾಠದಿಂದ ಮತ್ತಷ್ಟು ಪಕ್ವತೆಯನ್ನು ಪಡೆದು ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕು. ಜಾತಿವಾದ, ಕೋಮುವಾದಗಳು ವಿಷಬೀಜ ಬಿತ್ತುತ್ತಿರುವ ವಿಷಮ ಸನ್ನಿವೇಶದಲ್ಲಿ ಸಾಂಸ್ಕೃತಿಕ ಕ್ಷೇತ್ರವು ಸಹನೆ ಮತ್ತು ಸಮಾನತೆಗಳ ಆಶಯವನ್ನು ವಿಸ್ತರಿಸಬೇಕು. ವ್ಯಕ್ತಿ ಮತ್ತು ಸಮುದಾಯಗಳ

ಅನುಸಂಧಾನದಲ್ಲಿ ಸ್ವಾತಂತ್ರ್ಯದ ಕಲ್ಪನೆಯನ್ನು ಕಟ್ಟಿಕೊಳ್ಳಬೇಕು ಎಂಬುದು ಬಂಡಾಯ ವಿಮರ್ಶೆಯ ಆಶಯ.

ಇಂಗ್ಲಿಷ್‌ನಲ್ಲಿ ದೊಡ್ಡ ಇತಿಹಾಸವನ್ನೇ ಹೊಂದಿರುವ ಸಾಮಾಜಿಕ ವಿಮರ್ಶೆಯ ಮತ್ತೊಂದು ಮಾದರಿಯಾದ ಮಾರ್ಕ್ಸ್‌ವಾದಿ ವಿಮರ್ಶೆ ಭಾರತವನ್ನು, ಆ ಮೂಲಕ ಕನ್ನಡವನ್ನು ನಲವತ್ತರ ದಶಕದಲ್ಲಿಯೆ ಪ್ರವೇಶಿಸಿತು. ಆದರೆ ಅದೊಂದು ದೊಡ್ಡ ಪರಂಪರೆಯಾಗಿ ಬೆಳೆಯುವಲ್ಲಿ ಸೋತಿತು. ಅನಕೃ ('ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ'), ನಿರಂಜನ ('ಪ್ರಗತಿಶೀಲ ಸಾಹಿತ್ಯದ ಗೊತ್ತುಗುರಿಗಳು', 'ಬುದ್ಧಿ, ಭಾವ, ಬದುಕು') ಮೊದಲಾದ ಪ್ರಗತಿಶೀಲ ಸಾಹಿತಿಗಳು ಮಾರ್ಕ್ಸ್‌ವಾದಿ ಸಾಹಿತ್ಯ ಮತ್ತು ವಿಮರ್ಶೆಯನ್ನು ಆರಂಭಿಸಿದರಾದರೂ ಅದನ್ನೊಂದು ವ್ಯವಸ್ಥಿತವಾದ ಮತ್ತು ನಿರಂತರವಾದ ಒಂದು ವಿಮರ್ಶಾ ಪರಂಪರೆಯಾಗಿ ರೂಪುಗೊಳಿಸುವ ಮನೋಭಾವ ಅವರಲ್ಲಿ ಕಂಡುಬರಲಿಲ್ಲ. ಆನಂತರ ನವ್ಯ ವಿಮರ್ಶೆ ತೀರಾ ವ್ಯಕ್ತಿನಿಷ್ಠವಾದಾಗ ಮತ್ತು ಬಂಡಾಯ – ದಲಿತ ಸಾಹಿತ್ಯಗಳು ಜಾಗೃತವಾಗಿ ತಮ್ಮಿಂದ ರಚಿತವಾದ ಸಾಹಿತ್ಯ ವಿಮರ್ಶೆಗೆ ತಮ್ಮದೇ ಮಾನದಂಡಗಳನ್ನು ಅಂದರೆ ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಲೋಹಿಯಾವಾದಗಳನ್ನು ಆಶ್ರಯಿಸಿದಾಗ ಮಾರ್ಕ್ಸ್‌ವಾದಿ ವಿಮರ್ಶೆ ಮತ್ತೆ ಚಾಲನೆಗೆ ಬಂತು. ೧೯೮೩ರಲ್ಲಿ ಡಿ. ಆರ್. ನಾಗರಾಜ ಅವರು ಪ್ರಕಟಿಸಿದ 'ಅಮೃತ ಮತ್ತು ಗರುಡ' ಮಾರ್ಕ್ಸ್‌ವಾದಿ ವಿಮರ್ಶೆಗೆ ಅತ್ಯುತ್ತಮ ಉದಾಹರಣೆ. ಆದರೆ ಅವರೇ ಕಡೆವರೆಗೂ ಮಾರ್ಕ್ಸ್‌ವಾದಿ ವಿಮರ್ಶಕರಾಗಿ ಉಳಿದುಕೊಳ್ಳಲಿಲ್ಲ.

ಕನ್ನಡದಲ್ಲಿ ಪ್ರಧಾನವಾಗಿ ಗುರುತಿಸಬಹುದಾದ ಮಾರ್ಕ್ಸ್‌ವಾದಿ ವಿಮರ್ಶಕರೆಂದರೆ ಆರ್.ವಿ. ಭಂಡಾರಿ ('ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ' ಮತ್ತು 'ವರ್ಣದಿಂದ ವರ್ಗದ ಕಡೆಗೆ) ಸಿ.ವೀರಣ್ಣ ('ಪ್ರಾಚೀನ ಸಾಹಿತ್ಯ : ರಾಜಸತ್ತೆಯ ಕಾಲ') ಆರ್.ಕೆ. ಮಣಿಪಾಲ ('ಸಾಹಿತ್ಯ; ಆಶಯ ಮತ್ತು ವಿನ್ಯಾಸ', 'ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿ'), ಶಿವರಾಮ ಪಡಿಕ್ಕಲ್ ('ನಾಡುನುಡಿಯ ರೂಪಕ) ಜಿ. ರಾಜಶೇಖರ ಮತ್ತು ಆಂಶಿಕವಾಗಿ ಚಂದ್ರಶೇಖರ ನಂಗಲಿ, ಕೆ. ವಿ. ನಾರಾಯಣ, ಯು. ಆರ್. ಅನಂತಮೂರ್ತಿ, ಬಸವರಾಜ ಕಲ್ಗುಡಿ ಇವರನ್ನು ಗಮನಿಸಬಹುದು. ಇತ್ತೀಚೆಗೆ ಮನು ವಿ. ದೇವದೇವನ್ ಅವರ 'ಪೃಥ್ವಿಯೊಲ್ಲೊದಗಿದ ಘಟವು...' ಮಾರ್ಕ್ಸ್‌ವಾದಿ ವಿಮರ್ಶಾ ಪರಂಪರೆಯ ಮುಂದುವರಿಕೆಯಾಗಿದೆ. ಒಟ್ಟಾರೆ ಕನ್ನಡದಲ್ಲಿ ಬಂದ ಮಾರ್ಕ್ಸ್‌ವಾದಿ ವಿಮರ್ಶೆ ಇಂಗ್ಲಿಷಿನ ಪ್ರಸಿದ್ಧ ವಿಮರ್ಶಕರಾದ ಜಾರ್ಜ ಲುಕಾಕ್ಸ್, ರೇಮಂಡ್ ವಿಲಿಯಮ್ಸ್, ಟೆರ್ರಿ ಈಗಲ್ಟನ್ ಮೊದಲಾದವರಿಂದ ಪ್ರೇರಣೆ ಪಡೆದಿದ್ದು ಆಗಾಗ್ಗೆ ಕನ್ನಡದಲ್ಲಿ ಚಲಾವಣೆಗೊಳ್ಳುತ್ತಿದೆ. ಮುಖ್ಯವಾಗಿ ಜಿ. ರಾಜಶೇಖರ ಅವರು ಕನ್ನಡದಲ್ಲಿ ಈ ರೀತಿಯ ಸಾಹಿತ್ಯ ವಿಮರ್ಶೆಯಲ್ಲಿ ತೊಡಗಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತ ಸಾಹಿತ್ಯ ಬಹಳ ವಿಶಿಷ್ಟವಾದದ್ದು. ವಚನ ಚಳವಳಿಯ ನಂತರ ಮೊತ್ತ ಮೊದಲ ಬಾರಿಗೆ ಸಾಹಿತ್ಯ ರಚನೆಯು. ಒಂದು ಸಾಮಾಜಿಕ

ಚಳವಳಿಯ ಅಂಗವಾಗಿ ಮೂಡಿಬಂದಿತು. ಕರ್ನಾಟಕದ ಇತಿಹಾಸದಲ್ಲಿ ದಲಿತ ಚಳವಳಿ ಮತ್ತು ದಲಿತ ಸಾಹಿತ್ಯ ಚಳವಳಿ ಒಟ್ಟಿಗೇ ಮೂಡಿಬಂದಿದೆ. ದಲಿತ ಸಂಘರ್ಷ ಸಮಿತಿಯ ಉಗಮ ಮತ್ತು ಬೆಳವಣಿಗೆ ದಲಿತ ಸಾಹಿತ್ಯದ ಉಗಮ ಮತ್ತು ಬೆಳವಣಿಗೆಯೂ ಹೌದು. ಆದರೆ ಅವುಗಳು ಇಂದು ಹಲವಾರು ಚಾರಿತ್ರಿಕ, ರಾಜಕೀಯ ಕಾರಣಗಳಿಂದಾಗಿ ಬೇರೆ ಬೇರೆಯಾಗಿ ನಿಂತಿವೆ. ಬಂಡಾಯ ಸಾಹಿತ್ಯ ಚಳವಳಿಯ ಹಿನ್ನೆಲೆಯಾಗಿರುವ ೧೯೬೦ ಮತ್ತು ೧೯೭೦ರ ದಶಕದ ಸಾಮಾಜಿಕ, ರಾಜಕೀಯ ವಾತಾವರಣವೇ ದಲಿತ ಚಳವಳಿಗೂ ಇದೆ. ಅಕ್ಷರ ಕಲಿತ ಮೊದಲ ತಲೆಮಾರು, ಹಾವನೂರ ವರದಿಯ ಪರಿಣಾಮ, ಸಮಾಜವಾದದ ಪ್ರಭಾವ, ಬಸವಲಿಂಗಪ್ಪನವರ 'ಬೂಸಾ' ಪ್ರಕರಣ, ದಲಿತರು 'ಮಲ' ಹೊರುವುದರ ವಿರುದ್ಧ ನಡೆದ ಹೋರಾಟ, ಭೂ ಮಸೂದೆ –ಇವೆಲ್ಲವುಗಳಿಂದ ದಲಿತರಲ್ಲಿ ಉಂಟಾದ ಎಚ್ಚರದ ಫಲವಾಗಿ ೧೯೭೪ರಲ್ಲಿ ಭದ್ರಾವತಿಯಲ್ಲಿ 'ದಲಿತ ಸಂಘರ್ಷ ಸಮಿತಿ' ರೂಪುಗೊಂಡಿತು ಮತ್ತು 'ದಲಿತ ವಿದ್ಯಾರ್ಥಿ ಒಕ್ಕೂಟ', 'ದಲಿತ ಮಹಿಳಾ ಒಕ್ಕೂಟ', 'ದಲಿತ ಕಲಾ ಮಂಡಳಿ', 'ದಲಿತ ನೌಕರರ ಒಕ್ಕೂಟ', 'ದಲಿತ ವೈದ್ಯರ ಒಕ್ಕೂಟ' ಮುಂತಾದ ಹಲವಾರು ಅಂಗಸಂಸ್ಥೆಗಳನ್ನು ಹುಟ್ಟುಹಾಕಿತು. ೧೯೭೬ರಲ್ಲಿ 'ದಲಿತ ಬರಹಗಾರರ ಯುವ ಸಂಘಟನೆಯು' ರೂಪುಗೊಂಡಿತು. ದಲಿತ ಸಂಘರ್ಷ ಸಮಿತಿಯ ವಿಚಾರಧಾರೆ ಗಾಂಧಿ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್‌ವಾದಿ ವಿಚಾರಗಳಿಂದ ರೂಪಿತವಾಗಿದೆ. ಈ ಒಂದು ಸಾಮಾಜಿಕ ಚಳವಳಿಯ ಅಂಗವಾಗಿ ಚಳವಳಿಯಲ್ಲಿದ್ದ ಜನರೇ ಸಾಹಿತ್ಯ ರಚನೆಗೂ ತೊಡಗಿದರು.

ಸಿದ್ಧಲಿಂಗಯ್ಯನವರ ಕವಿತೆಗಳು, ದೇವನೂರರ ಕತೆಗಳು ಕನ್ನಡ ಸಾಹಿತ್ಯದಲ್ಲಿ ಅವತರಿಸಿದ ಮೇಲೆ ಆ ಬಗೆಯ ಸಾಹಿತ್ಯವನ್ನು ವಿಮರ್ಶಿಸಲು ಮಾಮೂಲಿ ಮಾನದಂಡಗಳು ಸಾಕಾಗುವುದಿಲ್ಲವೆಂದು ದಲಿತ ವಿಮರ್ಶೆ ಹುಟ್ಟಿಕೊಂಡಿತು. ಹಾಗೆ ನೋಡಿದರೆ ಮಾರ್ಕ್ಸ್‌ವಾದಿ ವಿಮರ್ಶೆ ಮತ್ತು ಬಂಡಾಯ ವಿಮರ್ಶೆಗಳು ದಲಿತ ವಿಮರ್ಶೆಗೆ ಅಪರಿಚಿತವಾದದ್ದೇನೂ ಅಲ್ಲ. ಆದರೆ ದಲಿತ ಸಾಹಿತ್ಯ ವರ್ಣ ಸಮಸ್ಯೆಯನ್ನ ಪ್ರಧಾನವಾಗಿ ಆಧರಿಸಿದರೆ, ಬಂಡಾಯ ಸಾಹಿತ್ಯದ ಚಿಂತನೆ ವರ್ಗಸಮಸ್ಯೆಯನ್ನು ಕುರಿತದ್ದಾಗಿತ್ತು. ಇದೇ ಅವಧಿಯಲ್ಲಿ ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಶೆ ಕೂಡಾ ಮುಖ್ಯವಾಗಿ ಬೆಳೆದು ಬಂದಿತು. ಆದರೆ ಸ್ತ್ರೀವಾದಿ ಸಾಹಿತ್ಯ ಮತ್ತು ಪರಂಪರೆಗೆ ಪಶ್ಚಿಮದಲ್ಲೆ ಈಗಾಗಲೇ ಚಾಲ್ತಿಗೆ ಬಂದಿದ್ದ ಪರಂಪರೆಯ ಹಿನ್ನೆಲೆ ಇತ್ತು. ಆದರೆ ದಲಿತ–ಬಂಡಾಯ ಸಾಹಿತ್ಯಗಳು ದೇಶದ ವಿಶಿಷ್ಟ ಸಾಮಾಜಿಕ ಸನ್ನಿವೇಶದಿಂದಾಗಿ ಆರಂಭಗೊಂಡಿದ್ದವು.

ದೇವಯ್ಯ ಹರವೆ ('ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು'), ಜಿ.ಕೃಷ್ಣಪ್ಪ ('ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರ), ಎಲ್. ಹನುಮಂತಯ್ಯ, ಅರವಿಂದ ಮಾಲಗತ್ತಿ ('ದಲಿತ ಯುಗ ಮತ್ತು ಕನ್ನಡ ಸಾಹಿತ್ಯ'), ಸಿ. ಪಿ. ಸಿದ್ದಾಶ್ರಮ, ಕೆ. ಆರ್. ದುರ್ಗಾದಾಸ್, ಮನಜ ('ದಲಿತ ಸಾಹಿತ್ಯ; ಸ್ವರೂಪ, ಲಕ್ಷಣ'), ಜಿ. ಆರ್. ತಿಪ್ಪೇಸ್ವಾಮಿ,

ಮೊಗಳ್ಳಿ ಗಣೇಶ('ದಲಿತ ಚಿಂತನೆ', 'ದಲಿತರು ಮತ್ತು ಜಾಗತೀಕರಣ'), ಕೆ. ರಾಮಯ್ಯ, ಮುಳ್ಳೂರ ನಾಗರಾಜ, ಕೆ. ಬಿ. ಸಿದ್ಧಯ್ಯ ಮುಂತಾದವರು ಬಹು ಮೌಲಿಕವಾದ ದಲಿತ ವಿಮರ್ಶೆಯನ್ನು ಸೃಷ್ಟಿಸುತ್ತಿದ್ದಾರೆ.

ದಲಿತ ಸಾಹಿತ್ಯ ವಿಮರ್ಶೆಯ ಉದ್ದೇಶವನ್ನು ಕುರಿತು ಹೇಳುವಾಗ ದೇವಯ್ಯ ಹರವೆಯವರು "ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಇಂಡಿಯಾದ ಸಂಪ್ರದಾಯಬದ್ಧ ಧಾರ್ಮಿಕ ನೀತಿಯನ್ನಿಟ್ಟುಕೊಂಡು ಸಾಹಿತ್ಯವನ್ನು ವಿಮರ್ಶಿಸುವ ಸಂಪ್ರದಾಯ ಶರಣ ವಿಮರ್ಶೆಯಿದೆ; ರಸಾನಂದದ ಹೆಸರಿನಲ್ಲಿ ಆಹಾ! ಓಹೋ! ಉದ್ಗಾರಗಳ ರಸವಿಮರ್ಶೆಯಿಂದ, ಶುದ್ಧಕಲೆ ಮತ್ತು ಶುದ್ಧ ಸಾಹಿತ್ಯದ ಹೆಸರಿನಲ್ಲಿ ಪದಗಳ ಡಂಭಾಚಾರದೊಂದಿಗೆ ಮಾಡಿದ ಪ್ರಾಯೋಗಿಕ ವಿಮರ್ಶೆಯಂಥ ಮಾನದಂಡಗಳಿವೆ. ಆದರೆ ಇವಾವೂ ಮನುಷ್ಯನೆನಿಸಿ ಕೊಂಡವನ ಹತ್ತಿರಕ್ಕೆ ಹೋಗುವ ಸಾಹಿತ್ಯವನ್ನು ಸೃಷ್ಟಿಸಲು ಸಮರ್ಥವಾಗಲಿಲ್ಲ. ದಲಿತ ಸಾಹಿತ್ಯದಲ್ಲಿ ಮನುಷ್ಯ ಮತ್ತು ಆತನ ನೋವುಗಳು ಕೇಂದ್ರ ಬಿಂದುವಾಗುತ್ತವೆ."[೧೪] ಎಂದು ಹೇಳುತ್ತಾ ನವೋದಯ ಮತ್ತು ನವ್ಯ ವಿಮರ್ಶೆಗಳನ್ನು ನಿರಾಕರಿಸಿ ಕನ್ನಡ ಸಾಹಿತ್ಯಕ್ಕೆ ಹೊಸ ರೀತಿಯ ವಿಮರ್ಶೆಯ ಅಗತ್ಯವನ್ನು ಪ್ರತಿಪಾದಿಸುತ್ತಾರೆ. ಆದರೆ ಅರವಿಂದ ಮಾಲಗತ್ತಿ ಮೊದಲಾದ ನಂತರದ ದಲಿತ ಸಾಹಿತಿಗಳು ಹೀಗೆ ಸಾರಾಸಗಟಾಗಿ ಪರಂಪರೆಯನ್ನು ನಿರಾಕರಿಸಲು ವಿರೋಧ ವ್ಯಕ್ತಪಡಿಸುತ್ತಾರೆ. ಪರಂಪರೆಯ ಜೊತೆಗೆ ಅನುಸಂಧಾನ ಮಾಡುವ ಮೂಲಕ ನಮ್ಮತನವನ್ನು ಕಾಪಿಟ್ಟುಕೊಳ್ಳಬೇಕು ಎನ್ನುತ್ತಾರೆ. ದಲಿತ ಲೇಖಕರಲ್ಲಿ ಸಿದ್ಧಲಿಂಗಯ್ಯ ಮಾರ್ಕ್ಸವಾದಿ, ದೇವನೂರು ಲೋಹಿಯಾವಾದಿ, ಮ. ನ. ಜವರಯ್ಯ, ಅರವಿಂದ ಮಾಲಗತ್ತಿ ಮೊದಲಾದವರು ಅಂಬೇಡ್ಕರ್‌ವಾದಿಗಳೆಂದು ವಿಂಗಡಿಸಬಹುದು. ಅಷ್ಟರಮಟ್ಟಿಗೆ ಇವರ ಆಲೋಚನೆಗಳಲ್ಲಿ ವ್ಯತ್ಯಾಸಗಳು ಗೋಚರಿಸುತ್ತವೆ.

ದಲಿತ ಸಾಹಿತ್ಯ ಮತ್ತು ವಿಮರ್ಶೆಯು ಮುಖ್ಯವಾಗಿ ಮಾರ್ಕ್ಸ್‌ವಾದ, ಲೋಹಿಯಾವಾದ ಮತ್ತು ಅಂಬೇಡ್ಕರ್‌ವಾದಗಳಿಂದ ಪ್ರೇರಣೆ ಪಡೆದಿದೆ. ದಲಿತ ಕವಿಯೆಂದು ಹೆಸರಾದ ಸಿದ್ಧಲಿಂಗಯ್ಯ ಮೊದಲಾದವರು ವೈಚಾರಿಕ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದವನ್ನು ಮುಖ್ಯವಾಗಿ ಆಶ್ರಯಿಸಿದರೆ, ಸಂವೇದನಾಶೀಲ ಕತೆಗಾರರಾದ ಮತ್ತು ಲಂಕೇಶ್, ತೇಜಸ್ವಿಯವರ ನಿಕಟವರ್ತಿಯಾಗಿದ್ದು ಸಮಾಜವಾದಿ ದೃಷ್ಟಿಕೋನ ಹೊಂದಿದ್ದ ದೇವನೂರ ಮಹಾದೇವ ಮೊದಲಾದವರು ಲೋಹಿಯಾವಾದವನ್ನು ಮುಖ್ಯವಾಗಿ ಇಟ್ಟುಕೊಂಡಿದ್ದಾರೆ. ಅವರ 'ಎದೆಗೆ ಬಿದ್ದ ಅಕ್ಷರ' ಕೃತಿಯ ಲೇಖನಗಳಲ್ಲಿ ಈ ವಿಚಾರ ಸ್ಪಷ್ಟವಾಗುತ್ತದೆ. ಇನ್ನು ಮನಜ, ಅರವಿಂದ ಮಾಲಗತ್ತಿ, ದೇವಯ್ಯ ಹರವೆ ಮೊದಲಾದವರು ಮುಖ್ಯವಾಗಿ ಅಂಬೇಡ್ಕರ್‌ವಾದವನ್ನೆ ಆಶ್ರಯಿಸಿದ್ದು ಸಮುದಾಯದ ಅನುಭವಗಳನ್ನು ಪ್ರಮಾಣವಾಗಿ ಗ್ರಹಿಸುತ್ತಾರೆ. ಈ ನಡುವೆ ಮೊಗಳ್ಳಿ ಗಣೇಶ್ ಮೊದಲಾದ ಲೇಖಕರು ಜಾಗತೀಕರಣದ ಹಿನ್ನೆಲೆಯಲ್ಲಿ ದಲಿತ ಸಮುದಾಯವನ್ನು ಉದ್ಧರಿಸುವ ಬಗೆಗಳನ್ನು ಕುರಿತು ಚಿಂತನೆ ನಡೆಸಿದ್ದಾರೆ. ಅಂದರೆ ದಲಿತ ವಿಮರ್ಶೆಯ ಹಿನ್ನೆಲೆಗಳು

ವಿವಿಧ ನೆಲೆಗಳಿಂದ ರೂಪುಗೊಂಡಿವೆ. ಕನ್ನಡ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ರೂಪುಗೊಳ್ಳಬೇಕೆಂಬ ಕೂಗು ದಲಿತ ಸಮುದಾಯದವರೇ ಆದ ಮಹಾದೇವ ಅವರದ್ದಾಗಿದ್ದರೆ, ಅದೇ ಸಮುದಾಯದ ಮೊಗಳ್ಳಿಯವರು ಇಂಗ್ಲಿಷ್ ಭಾಷಾ ತಿಳಿವಳಿಕೆಯೇ ದಲಿತರ ಮೋಕ್ಷಕ್ಕೆ ಕಾರಣವಾಗಬಲ್ಲದೆಂದು ಪ್ರತಿಪಾದಿಸುತ್ತಾರೆ.

“ದೇವನೂರ ಮಹಾದೇವ ಅವರು ನಿಸ್ಸಂದೇಹವಾಗಿ ಶ್ರೇಷ್ಠ ಬರಹಗಾರ ಎಂದು ಒಪ್ಪಿದರೂ ಅವರ ಕತೆ ಮತ್ತು ಕಾದಂಬರಿಗಳ ಬಗ್ಗೆ ನಾವು ಪ್ರಶ್ನಿಸಬಹುದು. ಮಹಾದೇವರನ್ನು ಹೊಗಳಿರುವುದು ಬ್ರಾಹ್ಮಣ ವಿಮರ್ಶಕರಾದರೆ, ತೆಗಳಿರುವುದು ದಲಿತ ವಿಮರ್ಶಕರು. ಈ ಹೊಗಳಿಕೆ ಮತ್ತು ತೆಗಳಿಕೆ ಎರಡರಲ್ಲೂ ಲೋಪಗಳಿವೆ. ಮಹಾದೇವರನ್ನು ವೈಭವೀಕರಿಸಿ ವಿಮರ್ಶೆ ಮಾಡುವ ಬ್ರಾಹ್ಮಣ ಲೇಖಕರು ತಮ್ಮ ಬಹುಕಾಲದ ಪ್ರೀತಿ, ಮೆಚ್ಚಿಗೆ, ಹೊಗಳಿಕೆಯನ್ನೆಲ್ಲ ಒಂದೇ ಬಾರಿಗೆ ಮಹಾದೇವರಿಗೆ ಅರ್ಪಿಸಿಬಿಟ್ಟರು. ಇಂತಹ ಕೀಳು ಜಾತಿಯಿಂದ ಬಂದಾತ ಇಷ್ಟೊಂದು ಅದ್ಭುತವಾಗಿ ಬರೆಯಲು ಸಾಧ್ಯವಾಯಿತೇ ಎಂದು ನಿಬ್ಬೆರಗಾಗಿರುವ ಕ್ರಮದಲ್ಲೇ ಲೋಪವಿದೆ.”[೧೫] ಸಿದ್ಧಲಿಂಗಯ್ಯ ಮತ್ತು ಮಹಾದೇವರಿಬ್ಬರನ್ನೂ ಆರಂಭದಲ್ಲಿ ಸಾಹಿತ್ಯವಲಯವು ಸ್ವಾಗತಿಸಿದ್ದರಲ್ಲಿ ಇಂತಹ ಒಂದು ಅಂಶ ಬೆರೆತಿದೆ ಎಂದು ಗುರುತಿಸುವ ಅವರು ಈ ಕಾರಣದಿಂದಾಗಿಯೇ ಅಗತ್ಯಕ್ಕಿಂತ ಹೆಚ್ಚಾಗಿ ಇವರಿಬ್ಬರನ್ನೂ ಓಲೈಸುವ, ಸಮರ್ಥಿಸುವ ಸಂದರ್ಭ ಉಂಟಾಗಿದೆ ಎನ್ನುತ್ತಾರೆ. ದಲಿತ ಲೋಕದ ಯಾವ ಒಳ ವಿವರವೂ ನವ್ಯ ಲೇಖಕರಿಗೆ ಅಪರಿಚಿತವಾಗಿದ್ದಾಗ ಮತ್ತು ಪಶ್ಚಿಮದ ತತ್ವಗಳೇ ಅವರಿಗೆ ಮುಖ್ಯವಾಗಿದ್ದಾಗ ಮಹಾದೇವರ ಬರಹಗಳು ಹೊಸ ತಲ್ಲಣಗಳನ್ನು, ಅನುಭವಗಳನ್ನು ಮೂಡಿಸಿವೆ. ಆದ್ದರಿಂದಾಗಿಯೇ, ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯರ ಬಗ್ಗೆ ಕುರ್ತಕೋಟಿ, ಅನಂತಮೂರ್ತಿ, ಗಿರಡ್ಡಿ ಗೋವಿಂದರಾಜು, ಜಿ. ಎಸ್. ಆಮೂರ, ಟಿ. ಪಿ. ಅಶೋಕ, ಜಿ. ಎಚ್. ನಾಯಕ, ಸಿ. ಎನ್. ರಾಮಚಂದ್ರನ್ ಮುಂತಾದವರು ಬಹಳ ಗಂಭೀರವಾಗಿ ಬರೆದಿದ್ದಾರೆ.

ಆದರೆ ದಲಿತ ಬಂಡಾಯದ ಕತೆ ಮತ್ತು ಕಾವ್ಯದ ಶ್ರೇಷ್ಠ ಮಾದರಿಗಳನ್ನು ಒಂದು ವರ್ಗದ ವಿಮರ್ಶಕರು ತೋರುವಾಗ ಮಹಾದೇವ ಮತ್ತು ಸಿದ್ಧಲಿಂಗಯ್ಯ ಇವರಿಬ್ಬರನ್ನೆ ಗುರುತಿಸುವುದರಲ್ಲಿ ಒಂದು ಹುನ್ನಾರವಿದೆ ಎಂಬುದು ಮೊಗಳ್ಳಿ ಗಣೇಶ ಅವರ ಆರೋಪ. ನವ್ಯೋತ್ತರದಲ್ಲಿ ಮುಖ್ಯ ಲೇಖಕರನ್ನಾಗಿ ಇವರನ್ನು ಗುರುತಿಸುವ ಮೂಲಕ “ಪರೋಕ್ಷವಾಗಿ ಉಳಿದ ಶೂದ್ರರನ್ನು ಉಪೇಕ್ಷಿಸುವುದಕ್ಕೂ ಇವರನ್ನೆ ಆಯ್ಕೆ ಮಾಡುವ ಗುಪ್ತ ತಂತ್ರವಿದೆ. ಜೊತೆಗೆ ದಲಿತರ ವ್ಯಾಪ್ತಿಯಲ್ಲಿ ಹೇಳುವಾಗಲೂ ಇವರಿಬ್ಬರನ್ನೆ ಸೂಚಿಸಲಾಗುತ್ತದೆ. ನವ್ಯ ಸಾಹಿತ್ಯದ ನಂತರಕ್ಕೆ ಬ್ರಾಹ್ಮಣ ವಿಮರ್ಶಕರು ತೋರುವುದು ಈ ಎರಡು ಹೆಸರುಗಳನ್ನೆ. ಅದರಲ್ಲಿ ತೇಜಸ್ವಿಯವರನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಾರೆ. ದಲಿತ ಬಂಡಾಯ ಲೇಖಕರೆಲ್ಲ ಹೆಚ್ಚೂ ಕಡಿಮೆ ಒಂದೇ ಅನುಭವವನ್ನು ಒಂದೇ ರೀತಿಯಾಗಿ ಬರೆಯುವುದರಿಂದ ಅವರಲ್ಲಿ ಯಾರು ಸಮರ್ಥರೊ. ತಮಗೆ

ಆಪ್ತವಾಗುವರೊ ಅಂಥವರನ್ನು ಇಡೀ ಆ ಸಾಹಿತ್ಯ ಪಂಥದ ಪ್ರತಿನಿಧಿಯಾಗಿ ಹೇಳಿಬಿಡಬಹುದೆಂದು ವಿಮರ್ಶಕರು ತಿಳಿದಂತಿದೆ"[೧೬] ಎನ್ನುತ್ತಾರೆ. ಹಾಗಾಗಿ ಯಾವಾಗಲೂ ಕೂಡ ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಬರಹಗಳ ಬಗ್ಗೆಯೆ ಚರ್ಚಿಸುವ ಪರಿಪಾಠವಿದೆ. ಮಹಾದೇವರಂತಹ ಒಬ್ಬ ಲೇಖಕನನ್ನೆ ಅಳೆಯುತ್ತ ಉಳಿದವರು ಎಷ್ಟೇ ದಲಿತ ಬದುಕನ್ನು ಗಾಢವಾಗಿ ಬರೆದಿದ್ದರೂ ಯಾಕೆ ಅನೇಕ ವಿಮರ್ಶಕರು 'ಬೌದ್ಧಿಕ ಅಸ್ಪೃಶ್ಯತೆ'ಯನ್ನು, ತಾರತಮ್ಯವನ್ನು ಪಾಲಿಸುತ್ತಾರೆ ಎಂಬುದರ ಚರ್ಚೆ ನಡೆಯಬೇಕಾಗಿದೆ.

ಸಾಮಾನ್ಯವಾಗಿ ದಲಿತ ಸಾಹಿತ್ಯದಲ್ಲಿ ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರನ್ನು ಬಿಟ್ಟರೆ ಮೊಗಳ್ಳಿ ಗಣೇಶ್, ಕೆ. ಬಿ. ಸಿದ್ಧಯ್ಯ, ಅರವಿಂದ ಮಾಲಗತ್ತಿ, ಮೂಡ್ನಾಕೂಡು ಚಿನ್ನಸ್ವಾಮಿ ಸೇರಿದಂತೆ ಕೇವಲ ಬೆರಳೆಣಿಕೆಯ ಲೇಖಕರನ್ನು ಹೊರತುಪಡಿಸಿದರೆ ಅನೇಕ ದಲಿತ ಬರಹಗಾರರನ್ನು ಎರಡನೆ ದರ್ಜೆಯ ಮಾನದಂಡಗಳಲ್ಲಿ ನೋಡಿದ್ದಿದೆ. ದಲಿತ ಕಾವ್ಯ ಮತ್ತು ಕತೆ, ಕಾದಂಬರಿಗಳಿಗೆ ಮಾದರಿಯಾಗಿ ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಬರಹಗಳನ್ನು ಗೌರವಿಸಬಹುದೇ ವಿನಃ ಅವೇ ಅಂತಿಮ ಅಭಿವ್ಯಕ್ತಿಗಳಲ್ಲ. ಹಾಗೆ ನೋಡಿದರೆ ಇವರಿಬ್ಬರೂ ದಲಿತ ಸಾಹಿತ್ಯದ ಒಂದು ರೆಂಬೆಯ ಚೆಲುವನ್ನು ತೋರಿದ್ದಾರೆ. ಮಹಾದೇವ ಅವರು ದಲಿತ ಲೋಕದ ಮುಗ್ಧ ಮಾನವೀಯತೆಯನ್ನು ಮಾತ್ರವೆ ಅಭಿವ್ಯಕ್ತಿಸಿರುವುದು. ಅದಷ್ಟೇ ಸತ್ಯವಲ್ಲ. ಮಹಾದೇವ ಅವರ ಧೋರಣೆಯು ಸಾಂಪ್ರದಾಯಿಕ ಸುಧಾರಣಾವಾದಿಯ ರೀತಿಗೆ ಹೊಂದುವಂತಿದೆ. 'ಕುಸುಮಬಾಲೆ'ಯು ಮಾನವೀಯತೆಯ ಹಸಿವನ್ನು ದಟ್ಟವಾಗಿ ಬಿಂಬಿಸಿದರೂ ಅದರ ಪಾತ್ರಗಳು ಇರುವ ವ್ಯವಸ್ಥೆಯ ಜೊತೆ ಪಲಾಯನದ ರೀತಿಯಲ್ಲಿ ವರ್ತಿಸುತ್ತವೆ. 'ಒಡಲಾಳ'ದ ಕಿಚ್ಚಿನಲ್ಲೂ ಮಹಾದೇವ ತೀವ್ರವಾದ ಕಲಾತ್ಮಕ ನೀತಿಗೇ ಬದ್ಧವಾಗುತ್ತಾರೆ. ಮಹಾದೇವ ತಮ್ಮ ಅತಿ ವಿಶಿಷ್ಟ ಸೃಜನಶೀಲ ಪ್ರತಿಭೆಯ ಕಾರಣವಾಗಿಯೆ ದಲಿತಾನುಭವಗಳನ್ನೆಲ್ಲ ಪುರಾಣವಾಗಿಸಿಬಿಡುತ್ತಾರೆ. ಇದು ಸಮಾನತೆಯ ಹಸಿವಿರುವ ಕಾಲದಲ್ಲಿ ಸ್ವತಃ ದಲಿತರಿಗೆ ತುಂಬ ಆಪ್ತವಾದ ಕಥನವಾಗದೆ ತದ್ವಿರುದ್ಧ ಭಾವನೆ ಮತ್ತು ಅಭಿಪ್ರಾಯಗಳು ತಲೆದೋರುವಂತೆ ಮಾಡುತ್ತದೆ. ಹೀಗಾಗಿಯೆ 'ಕುಸುಮಬಾಲೆ'ಯ ಬಗ್ಗೆ ಥರಾವರಿ ಚರ್ಚೆ ದಲಿತರ ಮೂಲಕ ನಡೆದದ್ದು. ಅದು ಈಗಲೂ ಮುಂದುವರೆದಿದೆ.

ತುಂಬ ಕಲಾತ್ಮಕವಾಗಿ ದಲಿತರ ಬದುಕನ್ನು ಚಿತ್ರಿಸುವಾಗಲೂ ಅಪಾಯವಿದೆ. ಹಾಗೆಯೆ ವಾಚ್ಯವಾಗಿಸಿದಾಗಲೂ ಅದು ಅಸಹನೀಯವಾಗಿ ಕಾಣುವ ಸಾಧ್ಯತೆಯಿದೆ. ಮಹಾದೇವ ಅವರು ತನ್ನ ಕೃತಿಗಳಿಂದ ಸವರ್ಣೀಯ ಓದುಗರ ಅಂತಃಕರಣವನ್ನು ಬಡಿದೆಬ್ಬಿಸುವುದು ನಿಜವಿದ್ದರೂ ಆ ಬಗೆಯ ಅನುಭವಗಳೆಲ್ಲ ಓದುಗ ಲೋಕಕ್ಕೆ 'ಆನಂದ'ವನ್ನು ಉಂಟು ಮಾಡಬಲ್ಲವು. ಕಲಾತ್ಮಕವಾಗಿ ಅನುಭವಗಳನ್ನು ಮಹಾದೇವ ಕಟ್ಟಿಕೊಡುತ್ತಲೆ ಎಚ್ಚರವನ್ನು ಮೌನದಲ್ಲಿ ಧ್ವನಿಸುತ್ತಾರೆ. ಈ ಬಗೆಯ ಮೌನಧ್ಯಾನದ ಪ್ರತಿಭಟನೆ ಹಿತವಾಗಿರುವುದರಿಂದಲೆ ಬ್ರಾಹ್ಮಣ ವಿಮರ್ಶಕರಿಗೆ ಮಹಾದೇವ ಅವರು

ರೂಪಿಸುವ ದಲಿತ ಲೋಕ ಸೌಂದರ್ಯದಿಂದ ಕಂಗೊಳಿಸುವುದು. ಹೀಗಾಗಿಯೆ ವಾಚ್ಯವಾಗಿ ಮಹಾದೇವ ಮತ್ತು ಸಿದ್ಧಲಿಂಗಯ್ಯನವರನ್ನು ಹಿಂಬಾಲಿಸಿದ ದಲಿತ ಲೇಖಕರು ಅಂತಹ ವಿಮರ್ಶಕರಿಗೆ ಮುಖ್ಯವಾಗದೆ ಹೋದದ್ದು. ಕಾವ್ಯದಲ್ಲಿ ಬೇಕಾದರೆ ಹೇಗಾದರೂ ಬೈದರೂ ಓದಿಕೊಳ್ಳುವ ವಿಮರ್ಶಕರು ಅದೇ ದಲಿತರು ಹಕ್ಕೊತ್ತಾಯದ ದನಿಯಲ್ಲಿ, ಹೋರಾಟದ ಮಾರ್ಗದಲ್ಲಿ ನ್ಯಾಯ ಕೇಳಿ ವೈಚಾರಿಕವಾಗಿ ಪ್ರಶ್ನಿಸಿದರೆ ಮೂಗು ಮುರಿದುಕೊಳ್ಳುತ್ತಾರೆ.

ಎಪ್ಪತ್ತರ ದಶಕದ ನಂತರ ಕನ್ನಡದಲ್ಲಿ ಹಲವು ರೀತಿಯ ಸಂವೇದನೆಗಳು ಪ್ರಕಟಗೊಳ್ಳತೊಡಗಿದವು. ಅವುಗಳಲ್ಲಿ ಸಾಹಿತ್ಯಕವಾಗಿಯೂ ಮುಖ್ಯವಾದ ಸಂವೇದನೆಗಳೆಂದರೆ ದಲಿತ ಸಂವೇದನೆ, ಸ್ತ್ರೀ ಸಂವೇದನೆ ಮತ್ತು ವಿಮರ್ಶನ ಪ್ರಜ್ಞೆಗಳು. ದಲಿತ ಸಂವೇದನೆ ಪ್ರತಿಪಾದಿಸಿದ ಸಾಮಾಜಿಕ ನ್ಯಾಯ, ಸ್ತ್ರೀ ಸಂವೇದನೆ ಪ್ರತಿಪಾದಿಸಿದ ಲಿಂಗನ್ಯಾಯ ಮತ್ತು ನವ್ಯ ವಿಮರ್ಶೆ ಪ್ರಕಟಿಸಿದ ಸಾಹಿತ್ಯ ರೂಪ ಮತ್ತು ವಸ್ತುಗಳ (ಸಾಹಿತ್ಯದ ಕಟ್ಟಾಣಿಕೆ ಮತ್ತು ಕಾಣ್ಕೆಗಳ) ನಡುವಣ ಸಮತೋಲನ ಪ್ರಜ್ಞೆ ಈ ಮೂರೂ ಕೂಡ ನಮ್ಮ ಇಂದಿನ ತಲೆಮಾರಿನ ಬರಹಗಾರರ ಮೇಲೆ ಬಲವಾದ ಸವಾಲುಗಳನ್ನು ಒಡ್ಡಿವೆ. ಅಂದರೆ ಏಕಕಾಲಕ್ಕೆ ಈ ಮೂರೂ ಪ್ರಜ್ಞೆಗಳನ್ನು ಒಳಗೊಳ್ಳುವ ಮತ್ತು ಈ ಮೂರೂ ಸಂವೇದನೆಗಳಲ್ಲಿ ಇರಬಹುದಾದ ಅರೆಕೊರೆಗಳನ್ನು ಮೀರಿ ಬೆಳೆಯುವ ಗುರುತರವಾದ ಸವಾಲು ಇಂದಿನ ಬರಹಗಾರರೆದುರು ಇದೆ. ದಲಿತ ಪ್ರಶ್ನೆಗಳನ್ನು ಮತ್ತು ಹೆಣ್ಣಿನ ಪ್ರಶ್ನೆಗಳನ್ನು ಅಲಕ್ಷಿಸಿ ಇಂದಿನ ಯಾವ ಬರಹಗಾರರೂ ಬರೆವಣಿಗೆ ಮಾಡಲು ಸಾಧ್ಯವಿಲ್ಲ. ಹಾಗೆ ನೋಡಿದರೆ ಸ್ತ್ರೀವಾದ ಮತ್ತು ದಲಿತ–ಬಂಡಾಯಗಳು ಸಧ್ಯದ ಆಲೋಚನಾ ಕ್ರಮ ಮತ್ತು ಬರವಣಿಗೆಯ ಕ್ರಮಗಳನ್ನು ಬದಲಾಯಿಸಿವೆ. ಆ ಮೂಲಕ ಸಧ್ಯದ ಬದುಕನ್ನೂ ಪ್ರಭಾವಿಸಿವೆ.

ಇವತ್ತಿನ ಸಮಾಜದಲ್ಲಿ ಶಿಕ್ಷಿತ ಮಧ್ಯಮವರ್ಗದ ಮೇಲೆ ಕೋಮುವಾದಿಗಳು, ಕಟ್ಟಾ ಸಂಪ್ರದಾಯವಾದಿಗಳು ಬಿತ್ತುವ ಬೀಜಗಳಿಗೆ ದೃಶ್ಯ ಮಾಧ್ಯಮಗಳು ವಾಸ್ತು, ಭವಿಷ್ಯದ ಕಾರ್ಯಕ್ರಮಗಳು, ಇತರ ಮೂಢ ನಂಬಿಕೆಗಳಿಗೆ ಇಂಬು ಕೊಡುವಂತಹ ಕಾರ್ಯಕ್ರಮಗಳ ಮೂಲಕ ನೂರೆಂಟು ರೀತಿಯಲ್ಲಿ ನೀರು, ಗೊಬ್ಬರ ಹಾಕಿ ಬೆಳೆಸುತ್ತಿವೆ. ಆ ಮೂಲಕ ಎಂಬತ್ತರ ದಶಕದ ಕರ್ನಾಟಕದ ಸಮಾಜ ಬದಲಾಗುತ್ತಿದೆ. ದಲಿತ – ಬಂಡಾಯ ಸಾಹಿತ್ಯ ಚಳುವಳಿಯ ಭಾಗವಾಗಿರುವ, ಅದರ ಪ್ರಭಾವಕ್ಕೊಳಗಾಗಿರುವ ಸಾಹಿತಿಗಳು, ಲಂಕೇಶ್ ಪತ್ರಿಕೆಯ ಪ್ರಭಾವದಲ್ಲಿ ಬೆಳೆದವರು, ತೇಜಸ್ವಿಯವರ ಪ್ರಭಾವಕ್ಕೊಳಗಾದ ಸಾಹಿತಿಗಳು, ನವೋದಯ ಸಾಹಿತ್ಯದ ಮುಖ್ಯವಾಗಿ ಕುವೆಂಪುರವರ ಸಾಹಿತ್ಯದ ಅಧ್ಯಯನದಿಂದ ದೀಪ್ತರಾದವರು ಇಂದಿಗೂ ಕೋಮುವಾದವನ್ನು ವಿರೋಧಿಸುತ್ತಾರೆ. ರೈತ, ದಲಿತ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳ ಪ್ರಭಾವಕ್ಕೊಳಗಾದವರು ಕೂಡ ಕೋಮುವಾದದಿಂದ ಗಣನೀಯ ಪ್ರಮಾಣದಲ್ಲಿ ದೂರ ಉಳಿದಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಜಾತೀವಾದ ಬೇರೆ ರೂಪದಲ್ಲಿ ಇವತ್ತಿನ

ಸಮಾಜವನ್ನು ಆಕ್ರಮಿಸುತ್ತಿದೆ. ಹಾಗೆಯೇ ಇವತ್ತಿನ ಸಮಾಜದ ಮುಖ್ಯ ಪಿಡುಗಾಗಿರುವ ಭ್ರಷ್ಟಾಚಾರದ ವಿಷಯ–ವಿವಿಧ ಪಕ್ಷಗಳ ಭ್ರಷ್ಟಾಚಾರದ ಬಗ್ಗೆ ನಿರ್ದಿಷ್ಟ ನಿಲುವುಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಸ್ವಜಾತಿಯವರ ಭ್ರಷ್ಟಾಚಾರ ಬೇರೆ ಜಾತಿಯವರು ಮಾಡುವ ಭ್ರಷ್ಟಾಚಾರ ಬೇರೆ ಬೇರೆಯದಾಗಿ ಕಾಣತೊಡಗುತ್ತಿರುವುದರಿಂದ ಇವತ್ತಿನ ಸಮಾಜದ ನೈತಿಕ ಮಟ್ಟ ಪ್ರಶ್ನಾರ್ಹವಾದುದಾಗಿದೆ.

ಸಮಾಜದಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಇಂತಹ ಕ್ರಿಯೆಗಳಿಗೆ ಸಾಹಿತ್ಯ ಲೋಕದಲ್ಲಿ ದೃಢವಾದ, ಆಳವಾದ ಎದುರುವಾದಗಳು ಮೂಡಿಬರುತ್ತಿದೆಯೆ ಎಂದು ಪ್ರಶ್ನಿಸಿಕೊಂಡರೆ ಉತ್ತರ ಸ್ಪಷ್ಟವಾಗಿಲ್ಲ. ಇಂದು ಸಾಹಿತ್ಯ ಸಿದ್ಧಾಂತಗಳಲ್ಲಿ ಮುಖ್ಯವಾಗಿ ಚಲಾವಣೆಯಾಗುತ್ತಿರುವ ಆಧುನಿಕೋತ್ತರವಾದವು ಆಳವಾದ ಚಿಂತನೆಗಳ ಅವಶ್ಯಕತೆಯನ್ನೇ ನಿರಾಕರಿಸುತ್ತಾ, ಅವೆಲ್ಲಾ ಆಧುನಿಕತೆಯ ಪರಿಕಲ್ಪನೆಗಳು–ಇಡೀ ಸಮಾಜದ ಬಗ್ಗೆ, ಅದರ ಚರಿತ್ರೆಯ ಬಗ್ಗೆ, ಅದರಿಂದ ಕಲಿಯಬೇಕಾದ ಪಾಠಗಳ ಬಗ್ಗೆ ಚರ್ಚಿಸುವುದರ ಬದಲು, ಲೋಕ ಒಬ್ಬೊಬ್ಬರಿಗೆ ಒಂದೊಂದು ತೆರನಾಗಿ ಕಾಣುತ್ತದೆ ಎಂದು ಪ್ರತಿಪಾದಿಸುವುದರಿಂದ ಒಂದು ಸಮಗ್ರ ನೋಟ ಲಭ್ಯವಾಗುತ್ತಿಲ್ಲ.

ಈ ಕಾರಣಕ್ಕಾಗಿ ಹೊರಗಿನ ವಾದಗಳನ್ನು ತಿರಸ್ಕರಿಸಿ, ವಿಸ್ಮೃತಿಗೆ ಸಂದಿರುವ ನಮ್ಮ ದೇಶಿ ಜ್ಞಾನ ನೆಲೆಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ನಡೆದರೆ ಅದು ಪರೋಕ್ಷವಾಗಿ ವೈದಿಕ ಪುರೋಹಿತಶಾಹಿಯ ಚಿಂತನೆಯನ್ನು ವಿವಿಧ ರೂಪಗಳಲ್ಲಿ ಪುನರುತ್ಥಾನಗೊಳಿಸುವ ಕೆಲಸವಾಗುತ್ತಿದೆ. ಮುಂದುವರೆದು ಕನ್ನಡ 'ವಚನಗಳು ಜಾತಿ ವಿರೋಧಿ ರಚನೆಗಳೇ' ಎಂಬ ಚರ್ಚೆಯ ಸಂದರ್ಭದಲ್ಲಿ ಒಂದು ಗುಂಪು ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆಯೆಂಬುದೇ ಇಲ್ಲ. ಅದೆಲ್ಲ ಕೇವಲ ಬ್ರಿಟೀಷರ, ಇತರ ಪಾಶ್ಚಿಮಾತ್ಯರ ಸೃಷ್ಟಿ. ಭಾರತದಲ್ಲಿರುವುದು ಕೇವಲ ವಿವಿಧ ಕೆಲಸಗಳನ್ನು ಮಾಡುವ ಗುಂಪುಗಳಷ್ಟೇ. ಅಸ್ಪೃಶ್ಯತೆ ಎಂಬುದು ಕೂಡ ಆಯಾ ದಲಿತ ಜಾತಿಗಳು ತಾವೇ ತಮ್ಮನ್ನು ಇತರರಿಂದ ಪ್ರತ್ಯೇಕಗೊಳಿಸಿಕೊಳ್ಳಲು ಮಾಡಿಕೊಂಡ ಆಚರಣೆಗಳು ಎಂಬ ವಾದ ಹೂಡಿದ್ದಾರೆ. ಇದರ ಜೊತೆಗೆ ಐಡೆಂಟಿಟಿ ಅಥವಾ ಅಸ್ಮಿತೆಯವಾದ ವಿವಿಧ ಜಾತಿ, ಬುಡಕಟ್ಟುಗಳ, ಧರ್ಮ, ಲಿಂಗಗಳ ಜನರು ತಂತಮ್ಮ ಅಸ್ಮಿತೆಗಾಗಿ ಪ್ರಯತ್ನಿಸಬೇಕು ಎಂದು ಪ್ರತಿಪಾದಿಸುತ್ತಾ ಜನರೆಲ್ಲ ಒಗ್ಗಟ್ಟಾಗಿ ಪುರೋಹಿತಶಾಹಿಯ ವಿರುದ್ಧ, ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯ ಹೂಡುವುದೇ ಕಷ್ಟಕರವಾಗುವ ಪರಿಸ್ಥಿತಿಯನ್ನು ಮೂಡಿಸುತ್ತಿದೆ. ಹೀಗೆ ರಾಜಕೀಯದಲ್ಲಿ ದೊಡ್ಡ ಪ್ರಮಾಣದ ಹಾನಿಯನ್ನುಂಟು ಮಾಡುತ್ತಿರುವ ಜಾತಿವಾದವನ್ನು ಪರೋಕ್ಷವಾಗಿ ಬೌದ್ಧಿಕವಾಗಿ ಬೆಂಬಲಿಸುವ ವಾದವೊಂದು ಇಂದಿನ ಸಮಾಜದಲ್ಲಿ ಕಾಣಿಸುತ್ತಿದೆ.

ಇವತ್ತಿನ ಕನ್ನಡ ಸಾಹಿತ್ಯದ ನಿಲುವುಗಳು ಏಕಕಾಲಕ್ಕೆ ಹಲವು ನೆಲವುಗಳನ್ನು ಆಶ್ರಯಿಸಿವೆ. ರಹಮತ್ ತರೀಕೆರೆ, ರಾಜೇಂದ್ರ ಚೆನ್ನಿ ಮೊದಲಾದ ವಿಮರ್ಶಕರು ತಾತ್ವಿಕತೆ, ಸಾಮಾಜಿಕ ಬದ್ಧತೆಯನ್ನು ಮುಂದಿಟ್ಟುಕೊಂಡು ಸಾಹಿತ್ಯಕೃತಿಯನ್ನೂ, ಲೇಖಕರನ್ನೂ

ಪರಿಭಾವಿಸುವ ಪ್ರಯತ್ನದಲ್ಲಿದ್ದರೆ, ಮತ್ತೊಂದು ಕಡೆ ವಿಚಾರವಾದ ಮತ್ತು ಬೌದ್ಧಿಕತೆ ಎರಡನ್ನೂ ಒಳಗೊಂಡ ಬರಹಗಳನ್ನು ಮೆಚ್ಚುವ ವಿಮರ್ಶಕರು ಕಾಣಿಸಿಕೊಳ್ಳುತ್ತಿದ್ದಾರೆ. ಸಂಸ್ಕೃತಿ ವಿಮರ್ಶೆಯ ಮಾದರಿಯಲ್ಲಿ ಹೊರಗಿನಿಂದ ಮತ್ತೊಂದಷ್ಟು ವಿಚಾರಗಳು ಕನ್ನಡದೊಳಕ್ಕೆ ಹರಿದು ಬರುತ್ತಿವೆ. ನೋಮ್ ಚಾಮ್‌ಸ್ಕಿಯಂಥವರ ಆಲೋಚನೆಗಳನ್ನು ನಮ್ಮ ಪರಿಸರಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವ ಯತ್ನಗಳು ನಡೆಯುತ್ತಿವೆ. ಹಾಗೆಯೇ ಮೌಖಿಕ ಪರಂಪರೆಯೂ ಆ ಪರಂಪರೆಗೆ ನಿಷ್ಠರಾದವರನ್ನೂ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಬಹು ಗಂಭೀರವಾಗಿ ಅಧ್ಯಯನ ನಡೆಸಲಾಗುತ್ತಿದೆ. ಈ ನಡುವೆ ಅಭಿಜಾತ ಸಾಹಿತ್ಯವನ್ನೂ ಹೊಸ ತಿಳಿವಿನಲ್ಲಿ ಅನುಸಂಧಾನಿಸುವ ಪ್ರಯತ್ನಗಳೂ ನಡೆಯುತ್ತಿವೆ. ಇಷ್ಟಾದರೂ ಒಟ್ಟು ಕನ್ನಡ ವಿಮರ್ಶೆ ಸಾಮಾಜಿಕ ಬದ್ಧತೆಗೆ ತನ್ನನ್ನು ತೆತ್ತುಕೊಂಡಂತೆ ಕಾಣುತ್ತದೆ.

೪.೩ ರೂಪಾಂತರಗೊಂಡ ಸ್ತ್ರೀವಾದಿ ವಿಮರ್ಶೆ

ಹತ್ತೊಂಬತ್ತನೆ ಶತಮಾನದಿಂದ ಜಗತ್ತಿನಲ್ಲಿ ಕಾಣಿಸಿಕೊಂಡ ಸಾಮಾಜಿಕ ಸುಧಾರಣೆಗಳ ಹಿನ್ನೆಲೆಯಲ್ಲಿ ಮಹಿಳೆಯರು ಸಮಾಜದಲ್ಲಿ ಎದುರಿಸುತ್ತಿರುವ ಭೌತಿಕ ಶೋಷಣೆಗಳನ್ನು ಅವುಗಳಿಗೆ ಕಾರಣವಾಗಿರುವ ವ್ಯವಸ್ಥೆಯನ್ನು ಸಂಘಟಿತ ಸಾಮಾಜಿಕ, ರಾಜಕೀಯ ಹೋರಾಟಗಳ ಮೂಲಕ ಪ್ರತಿಭಟಿಸುವ ಕಾರಣಕ್ಕಾಗಿ ಸ್ತ್ರೀವಾದ ಚಾಲ್ತಿಗೆ ಬಂದಿತು. ಸಾಹಿತ್ಯ ಕ್ಷೇತ್ರದಲ್ಲಿ ಐವತ್ತರ ದಶಕದ ನಂತರ ಪಶ್ಚಿಮದಲ್ಲಿ ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಶೆ ಚಾಲ್ತಿಗೆ ಬಂದಿತ್ತು. ಎಪ್ಪತ್ತು–ಎಂಬತ್ತರ ದಶಕದ ನಂತರ ಕನ್ನಡದಲ್ಲೂ ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಶೆಯು ಹುಲುಸಾಗಿ ಬೆಳೆಯಿತು. 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ'ಯ ಸಂಪಾದಕರಾದ ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ ಅವರು ಅಭಿಪ್ರಾಯ ಪಡುವಂತೆ "ಸ್ತ್ರೀವಾದಿ ವಿಮರ್ಶೆಯು ಸಾಮಾಜಿಕ ಬೌದ್ಧಿಕ ಪರಂಪರೆಗಳನ್ನೇ ಪರೀಕ್ಷಿಸುವ ಒಂದು ದೃಷ್ಟಿಕೋನ; ಮಹಿಳೆಯರ ಅಧೀನತೆಯಿಂದ ಮತ್ತು ಈ ಪರಿಸ್ಥಿತಿಯನ್ನು ಬದಲಾಯಿಸುವ ಅವಶ್ಯಕತೆಯಿಂದ ಹುಟ್ಟುವ ದೃಷ್ಟಿಕೋನ. ಅಧಿಕಾರ ಸಂಬಂಧಗಳ ಮೇಲೆ ಮತ್ತು ಲಿಂಗಭೇದ ಸಂಬಂಧಗಳ ಸಾಮಾಜಿಕ ಅರ್ಥಕಲ್ಪನೆಯು ಹೇಗೆ ಕಟ್ಟಲ್ಪಟ್ಟಿದೆ ಎನ್ನುವುದರ ಮೇಲೆ ಒತ್ತು ಕೊಡುವುದೇ ಸ್ತ್ರೀವಾದಿ ವಿಮರ್ಶೆಯ ವೈಶಿಷ್ಟ್ಯವಾಗಿದೆ."[೧೨] ಈ ಹಿನ್ನೆಲೆಯಲ್ಲಿ ಇದುವರೆಗಿನ ಕನ್ನಡ ಸಾಹಿತ್ಯವನ್ನು ಮಹಿಳಾ ದೃಷ್ಟಿಕೋನದಿಂದ ನೋಡಿರುವ ವಿಭಿನ್ನ ಬಗೆಗಳನ್ನು ನಾವಿಲ್ಲಿ ಕಾಣಬಹುದು.

ಮಹಿಳೆಯರು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸಾಹಿತ್ಯ ರಚನೆ ಮಾಡಿದ ಉದಾಹರಣೆಗಳು ಅಲ್ಲಲ್ಲಿ ಸಿಕ್ಕಿದ್ದರೂ, ವಚನ ಚಳವಳಿಯನ್ನು ಹೊರತುಪಡಿಸಿದರೆ ಅವೆಲ್ಲಾ ಅಪವಾದಗಳಾಗೇ ಉಳಿಯುತ್ತವೆ. ವಚನ ಸಾಹಿತ್ಯದ ಸಂದರ್ಭದಲ್ಲಿ ಬೇರೆ ಬೇರೆ ಜಾತಿ ವರ್ಗಗಳು ಸಾಹಿತ್ಯ ರಚನೆಗೆ ತೊಡಗಿದಂತೆ ವಿಭಿನ್ನ ವೃತ್ತಿಗಳ/ಜಾತಿಗಳ ಮಹಿಳೆಯರೂ ಸಾಹಿತ್ಯ ರಚನೆ ಮಾಡಿದರು. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ

ಕೂಡ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಯಾವುದೇ ಚಳವಳಿಯಲ್ಲೂ ಮಹಿಳೆಯರು ಪ್ರಮುಖವಾಗಿ ಕಾಣುವುದಿಲ್ಲ. ಇದ್ದರೂ ಅವರೆಲ್ಲೋ ಅಂಚಿನಲ್ಲಿ ನಿಂತಿರುತ್ತಾರೆ. ಇಂದು ಮಹಿಳಾ ಸಾಹಿತ್ಯ ವಿಮರ್ಶಕರು, ಸಂಶೋಧಕರು ಅಂಚಿನಲ್ಲಿ ನಿಂತು ಕಣ್ಮರೆಯಾದ ಮಹಿಳಾ ಸಾಹಿತಿಗಳ ಪರಂಪರೆಯ ನಿರ್ಮಿತಿಯಲ್ಲಿ ತೊಡಗಿದ್ದಾರೆ. ನಂಜನಗೂಡು ತಿರುಮಲಾಂಬ ಮುಂತಾದ ನವೋದಯ ಕಾಲದ ಮಹಿಳಾ ಸಾಹಿತಿಗಳು ಈಗ ಚರ್ಚೆಗೆ ಬಂದಿದ್ದಾರೆ.

ವಿವಿಧ ಚಳವಳಿಗಳೊಂದಿಗೆ ಗುರುತಿಸಿಕೊಂಡಿರುವ, ಆದರೆ ಯಾವುದೇ ಚಳವಳಿಯೊಂದಿಗೂ ಪೂರ್ಣವಾಗಿ ಮುಳುಗಿ ಹೋಗಿರದ, ಅದರೆ ಸ್ತ್ರೀ ಎಂಬ ನೆಲೆಯಿಂದ ಎಂಬತ್ತರ ದಶಕದಿಂದ ಸಾಹಿತ್ಯ ರಚಿಸಲು ಆರಂಭಿಸಿದ ಎಲ್ಲರನ್ನೂ ಮಹಿಳಾ ಸಾಹಿತ್ಯ ಚಳವಳಿಗೆ ಸೇರಿದವರೆಂದು ಗುರುತಿಸಬಹುದು. ಇವರಲ್ಲಿ ನವ್ಯ ಚಳವಳಿಗೆ ಸೇರಿದವರು, ನವ್ಯರಂತೆ ಬರೆಯುವವರು, ಬಂಡಾಯದ ಜೊತೆಯಲ್ಲಿರುವವರು, ಬಂಡಾಯದ ಜೊತೆಯಲ್ಲಿದ್ದೂ ಭಿನ್ನ ಕಾಳಜಿ ಹೊಂದಿರುವ ಮುಸ್ಲಿಂ ಮಹಿಳಾ ಸಾಹಿತಿಗಳು ಹಾಗೂ ಇತರರನ್ನು ಸೇರಿಸಬಹುದು. ಕನ್ನಡ ವಿಮರ್ಶಕ ಲೋಕ ಕೂಡ ಮಹಿಳಾ ಸಾಹಿತಿಗಳನ್ನು ಗಂಭೀರವಾಗಿ ಚರ್ಚೆ ಮಾಡಲು ತೊಡಗಿದ್ದು ಈ ಸಂದರ್ಭದಲ್ಲೇ.

೧೯೮೦ರ ದಶಕದಲ್ಲೇ ಮಹಿಳೆಯರು ಬಹುಸಂಖ್ಯೆಯಲ್ಲಿ ಸಾಹಿತ್ಯ ರಚಿಸಲು ಆರಂಭ ಮಾಡಿದರೂ, ಅವರು ಪುರುಷರು ಹಾಕಿಕೊಟ್ಟ ಸಾಹಿತ್ಯ ಮಾದರಿಗಳು ಮತ್ತು ಸಾಹಿತ್ಯ ಸಿದ್ಧಾಂತಗಳನ್ನು ಆಧರಿಸಿಯೇ ಕೆಲಸ ಮಾಡಿದರು. ಇದಕ್ಕೆ ಅವರು ಇತರ ಚಳವಳಿಗಳೊಂದಿಗೆ ಇರಿಸಿಕೊಂಡ ಸಂಬಂಧಗಳು ಕಾರಣವಿರಬಹುದು, ಕನ್ನಡದಲ್ಲೇ ಅವರಿಗೆ ಮಾದರಿಗಳಿಲ್ಲದಿರುವುದು ಕಾರಣವಿರಬಹುದು, ಅವರು ವಿಭಿನ್ನವಾಗಿ ಬರೆದಿದ್ದರೂ, ವಿಮರ್ಶಕರೆಲ್ಲರೂ ಪುರುಷರಾಗಿದ್ದರಿಂದ ಅದು ಬೆಳಕಿಗೆ ಬಾರದೇ ಹೋಗಿರಬಹುದು. ಈಗ ೧೯೯೦ರ ದಶಕದ ನಂತರ ಕನ್ನಡಕ್ಕೆ ಹಲವಾರು ಸ್ತ್ರೀವಾದಿ ಚಿಂತನೆಗಳು ಅನುವಾದವಾಗಿ ಬರತೊಡಗಿವೆ. ಈ ಹೊಸ ವಿಚಾರಗಳು ಇಲ್ಲಿನ ಸಾಂಸ್ಕೃತಿಕ, ಸಾಮಾಜಿಕ ಅಗತ್ಯಗಳಿಗೆ ತಕ್ಕಂತೆ ಮಾರ್ಪಾಟಾಗಿ ಹೊಸ ಸಾಹಿತ್ಯ ಮತ್ತು ಹೊಸ ಮಹಿಳಾ ವಿಮರ್ಶಕಿಯರು ರೂಪುಗೊಳ್ಳುತ್ತಿದ್ದಾರೆ. ಇದುವರೆವಿಗೂ ಬಂದಿರುವ ಕೆಲ ಪ್ರಮುಖ ಸಾಹಿತಿಗಳೆಂದರೆ ವೈದೇಹಿ, ಶಶಿಕಲಾ ವಸ್ತ್ರದ, ಮಾಲತಿ ಪಟ್ಟಣಶೆಟ್ಟಿ, ಬಿ. ಟಿ. ಲಲಿತಾನಾಯಕ್, ಎಚ್. ಎಸ್. ಮುಕ್ತಾಯಕ್ಕ, ವಿಜಯಾದಬ್ಬೆ ವೀಣಾ ಶಾಂತೇಶ್ವರ, ಗೀತಾ ನಾಗಭೂಷಣ, ಸಾರಾ ಅಬೂಬಕರ್, ಭಾನು ಮುಷ್ತಾಕ್, ಎಚ್. ನಾಗವೇಣಿ ಮುಂತಾದ ಮಹಿಳೆಯರಿದ್ದಾರೆ.

ವಾಸ್ತವದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿ ಕೊಂಡಿರುವ ಮಹಿಳೆಯರ ಸಂಖ್ಯೆಯೇ ಕಡಿಮೆಯಿದ್ದು, ಹಾಗೆ ತೊಡಗಿಕೊಂಡಿರುವವರನ್ನೂ ಗಂಭೀರ ಮತ್ತು ಜನಪ್ರಿಯ ಎಂದು ವಿಂಗಡಿಸಿ ಬಹಳಷ್ಟು ಲೇಖಕಿಯರನ್ನು ಸೃಜನಶೀಲ ಸಾಹಿತ್ಯದ ಮುಖ್ಯವಾಹಿನಿಯಿಂದ

ದೂರವಿರಿಸುವ ರಾಜಕಾರಣದ ಬಗ್ಗೆಯೂ ಸ್ತ್ರೀವಾದಿ ವಿಮರ್ಶೆ ಜಾಗೃತಗೊಂಡಿದೆ. ಯಾವಾಗ ಸಾಹಿತ್ಯ ಪರಂಪರೆಯೊಂದು ಒಂದು ಸಣ್ಣ ಆಯ್ದಗುಂಪಿನ ದೃಷ್ಟಿಕೋನಗಳು ಮತ್ತು ಮೌಲ್ಯಗಳನ್ನು ಮಾತ್ರ ಪ್ರತಿನಿಧಿಸುತ್ತ, ಪ್ರಚಲಿತದಲ್ಲಿರುವ ಜನಪ್ರಿಯ – ಗಂಭೀರ ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕುತ್ತದೆಯೋ ಆಗ ಬಹುಪಾಲು ಮಹಿಳಾ ಲೇಖಕಿಯರ ಸಾಹಿತ್ಯ ಮೌಲ್ಯಮಾಪನಕ್ಕೆ ಅಡ್ಡಿಯುಂಟಾಗುತ್ತದೆ. ಆದ್ದರಿಂದಲೇ ಕನ್ನಡದಲ್ಲಿ ಬಹುಪಾಲು ಲೇಖಕಿಯರು ಜನಪ್ರಿಯ ಲೇಖಕಿಯರು ಎಂಬ ಹಣೆಪಟ್ಟಿಯೊಂದಿಗೆ ಗುರುತುಗೊಂಡಿದ್ದಾರೆ. ಆದರೆ ಅದೇ ಮಾದರಿಯಲ್ಲಿ ಬರೆಯುವ ಹಲವು ಲೇಖಕರು ಈ ಹಣೆಪಟ್ಟಿಯ ಗಣನೆಗೂ ಒಳಗಾಗದೆ ವಿಮರ್ಶಾ ಜಗತ್ತಿನಲ್ಲಿ ಕಾಣೆಯಾಗಿದ್ದಾರೆ. ಅಪಾರವಾದ ಓದುಗವರ್ಗವನ್ನು ಹೊಂದಿರುವ ಜನಪ್ರಿಯ ಸಾಮಾಜಿಕ ಮತ್ತು ಪತ್ತೆದಾರಿ ಕಾದಂಬರಿಗಳ ಲೇಖಕರ ಇರವನ್ನೂ ಕೂಡ ಈ ಹೊತ್ತಿನ ವಿಮರ್ಶಾ ಜಗತ್ತು ದಾಖಲಿಸುತ್ತಿಲ್ಲ. ಅಷ್ಟರಮಟ್ಟಿಗೆ ಮಹಿಳಾ ಸಾಹಿತ್ಯದ ಸಂದರ್ಭದಲ್ಲಿ ವ್ಯಕ್ತಗೊಳ್ಳುವ ವಿಮರ್ಶಾರಾಜಕಾರಣ ಆಳದಲ್ಲಿ ಪುರುಷರ ಸಾಹಿತ್ಯವನ್ನು ವ್ಯಾಪಿಸುತ್ತಿದೆ.

ಪುರುಷ ಪ್ರಾಧನ್ಯದೊಳಗೂ ಒಂದು ನಿರ್ದಿಷ್ಟ ಗುಂಪನ್ನು ಮಾತ್ರ ಪರಂಪರೆಯ ವಕ್ತಾರವಾಗಿ ಮುಂಚೂಣಿಗೆ ತರಲಾಗುತ್ತಿದೆ. ಜನಪ್ರಿಯ–ಗಂಭೀರ ಎಂಬ ಶ್ರೇಣೀಕೃತ ವಿಭಜನೆಯ ಪರಿಕಲ್ಪನೆಗಳ ಮೂಲಕ ಸಾಹಿತ್ಯ ವಿಮರ್ಶೆ 'ಗಂಭೀರ'ವೆಂಬ ಒಂದು ವರ್ಗವನ್ನು ಮಾತ್ರ ಪರಿಗಣಿಸುತ್ತದೆ. 'ಜನಪ್ರಿಯ'ವೆಂಬ ಇನ್ನೊಂದು ವರ್ಗವನ್ನು ಪರಂಪರೆಯ ಪರಿಧಿಯಲ್ಲಿ ಅಥವಾ ಆಚೆಗೆ ಇಟ್ಟು ವ್ಯವಹರಿಸಲಾಗುತ್ತದೆ. "ಈ ವಿಮರ್ಶಾ ರಾಜಕಾರಣದ ವಿರುದ್ಧ ಸ್ತ್ರೀವಾದವು ಎತ್ತುವ ತಕರಾರುಗಳು ಮೇಲುನೋಟಕ್ಕೆ ಮಹಿಳಾ ಸಾಹಿತ್ಯವನ್ನು ಕುರಿತಂತೆ ಕಂಡರು ಆಳದಲ್ಲಿ ಅದು ಒಟ್ಟಾರೆಯಾಗಿಯೇ ವಿಮರ್ಶಾ ಜಗತ್ತಿನ ಸ್ಥಾಪಿತ ಮೌಲ್ಯಗಳನ್ನೂ ಶ್ರೇಷ್ಠತೆಯ ರಾಜಕಾರಣವನ್ನೂ ಪ್ರಶ್ನಿಸುವುದಾಗಿದೆ. ಈ ಅರ್ಥದಲ್ಲಿ ಸ್ತ್ರೀವಾದಿ ವಿಮರ್ಶೆ ಪಾರ್ಶ್ವಿಕ ನೆಲೆಯದಲ್ಲ. ಹೋಲಿಸ್ಟಿಕ್ ಅಪ್ರೋಚನ್ನು ಹೊಂದಿದ್ದು."[೭೮] ಇದು ಮಹಿಳಾ ಸಾಹಿತ್ಯದ ವ್ಯಾಪ್ತಿಯದು ಮಾತ್ರ ಎಂಬಂತೆ ಕಾಣುವ ಪುರುಷಪ್ರಧಾನ ಸಾಹಿತ್ಯ ಲಿಂಗರಾಜಕಾರಣವು, ಪರಿಣಾಮದಲ್ಲಿ ಇಡೀ ಸಾಹಿತ್ಯ ಪರಂಪರೆಯಲ್ಲಿ ಅದಕ್ಕೂ ಮೀರಿ ಸಮಾಜವನ್ನೇ ಟೊಳ್ಳಾಗಿಸುವ ನೆಲೆಯದಾಗಿರುತ್ತದೆ. ಹಾಗೆಯೇ ಮೇಲುನೋಟಕ್ಕೆ ಮಹಿಳೆಯ ಸಾಹಿತ್ಯದ ಪರ ಎನ್ನುವ ಸ್ತ್ರೀವಾದಿ ವಿಮರ್ಶೆಯು ಆಳದಲ್ಲಿ ಒಟ್ಟಾರೆಯಾಗಿಯೇ ಸಾಹಿತ್ಯ ಪರಂಪರೆಯೊಂದರ ಆರೋಗ್ಯದತ್ತ ಕಾಳಜಿವಹಿಸಿದ ಚಿಂತನೆಯಾಗಿದೆ. ಏಕೆಂದರೆ ವಾಸ್ತವದಲ್ಲಿ ಸಾಹಿತ್ಯ ಮತ್ತು ಲಿಂಗರಾಜಕಾರಣದ ಪ್ರಶ್ನೆ ಕೇವಲ ಸಾಹಿತ್ಯದ ಪ್ರಶ್ನೆ ಮಾತ್ರವಲ್ಲ. ಬದಲಿಗೆ ಅದೊಂದು ಸಾಮಾಜಿಕ ಸನ್ನಿವೇಶದ ಪ್ರತಿಬಿಂಬವಾಗಿರುತ್ತದೆ.

ಒಟ್ಟಾರೆ, ಮಹಿಳೆಯರಿಂದ ರಚಿತವಾಗುತ್ತಿರುವ ಮತ್ತು ಮಹಿಳಾಪರ ದೃಷ್ಟಿಕೋನವಿರುವ ವಿಮರ್ಶೆಯನ್ನು ಸ್ತ್ರೀವಾದಿ ವಿಮರ್ಶೆಯೆಂದು ಕರೆಯಬಹುದು. ಜೊತೆಗೆ ಮಹಿಳಾ ಸಾಹಿತ್ಯವನ್ನು ಕುರಿತು ಪುರುಷ ಲೇಖಕರ ಅಭಿಪ್ರಾಯ ಅನಿಸಿಕೆಗಳನ್ನು

ನಾವು ಸ್ತ್ರೀವಾದಿ ವಿಮರ್ಶೆಯ ವ್ಯಾಪ್ತಿಗೆ ಸೇರಿಸಬಹುದು. ಇಷ್ಟಾದರೂ ಸ್ತ್ರೀವಾದಿ ವಿಮರ್ಶೆಯು ಕೃತಿಯೊಂದರ ಸಾಮಾಜಿಕ, ಆರ್ಥಿಕ ಸಂರಚನೆಗಳ ಬಗ್ಗೆ ಮಂಡಿಸುವ ಅಭಿಪ್ರಾಯವೇನು? ಜೀವನಾನುಭವದ ಕಥನವು ಹೊರಹೊಮ್ಮಿಸುವ ಜೀವನ ದರ್ಶನ ಯಾವುದು? ಕೃತಿ ನಿರೂಪಣೆಯ ವೈದಾನಿಕತೆಯಲ್ಲಿ ಕಾಣುವ ವಿಶಿಷ್ಟತೆಗಳೇನು? ಎಂಬುದನ್ನು ಸ್ತ್ರೀವಾದಿ ವಿಮರ್ಶೆ ಗಂಭೀರವಾಗಿ ಚರ್ಚಿಸಿದೆ.

ಕಳೆದ ದಶಕದಲ್ಲಿ ಪ್ರಕಟಗೊಂಡ ಸ್ತ್ರೀವಾದಿ ವಿಮರ್ಶೆ ಇದುವರೆಗೆ ಇದ್ದುದ್ದಕ್ಕಿಂತ ಬದಲಾವಣೆಯ, ಬೆಳವಣಿಗೆಯ ಲಕ್ಷಣಗಳನ್ನು ಪ್ರಕಟಿಸಿದ್ದು, ಮಹಿಳಾ ಸಾಹಿತ್ಯವನ್ನು ನೋಡಬೇಕಾದ ಕ್ರಮದ ಬಗ್ಗೆ ಹೊಸ ನೋಟಗಳನ್ನು ಒದಗಿಸುತ್ತಿದೆ. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ತನ್ನ ಸಾಹಿತ್ಯಿಕ ಪರಕಲ್ಪನೆಗಳನ್ನು ಈಗಾಗಲೇ ಸ್ಥಾಪಿತಗೊಂಡಿರುವ ಪುರುಷ ಕೇಂದ್ರಿತ ಸಾಹಿತ್ಯ ಪರಿಕಲ್ಪನೆಗಳನ್ನು ಪ್ರಶ್ನಿಸುವುದರೊಂದಿಗೆ ಆರಂಭಿಸುತ್ತದೆ. ಒಂದು ನಿರ್ದಿಷ್ಟ ಸಾಮಾಜಿಕ ಸನ್ನಿವೇಶದಲ್ಲಿ ಪುರುಷನ ಬರವಣಿಗೆಗೆ ದೊರೆಯುವ ಅವಕಾಶ, ಮಾನ-ಸಮ್ಮಾನಗಳು ಮಹಿಳೆಯರ ಬರಹಕ್ಕಿಂತ ಹೇಗೆ ಮತ್ತು ಏಕೆ ಭಿನ್ನವಾದುದಾಗಿರುತ್ತದೆ ಎಂಬ ಹುಡುಕಾಟದ ಜೊತೆಗೆ ಈಗಾಗಲೆ ಅಸ್ತಿತ್ವದಲ್ಲಿರುವ ಪುರುಷ ಪ್ರಧಾನ ಸಮಾಜ ಹಾಗೂ ಅದರ ಚಿಂತನಾ ಕ್ರಮದ ಲಿಂಗತ್ವ ಕುರಿತ ಪೂರ್ವಾಗ್ರಹಗಳನ್ನು ಪ್ರಶ್ನಿಸುತ್ತ ತನ್ನನ್ನು ತಾನು ವ್ಯವಸ್ಥೆಗಿಂತ ಭಿನ್ನವಾಗಿ ರೂಪಿಸಿಕೊಂಡಿದೆ. ಹಾಗಾಗಿಯೇ ಇಂದಿನ ಸ್ತ್ರೀವಾದದ ಎಲ್ಲ ಪರಿಕಲ್ಪನೆಗಳು ತೌಲನಿಕ ಪರಿಕಲ್ಪನೆಗಳಾಗಿವೆ. ಅಂದರೆ ಪುರುಷ ಪ್ರಧಾನ ಸಮಾಜದಲ್ಲಿ ಪ್ರಧಾನ ವಿಮರ್ಶೆಯ ನೆಲೆಗಳು ಪುರುಷನು ಹೊಂದಿರುವ ಸವಲತ್ತುಗಳು, ಹಕ್ಕುಗಳು, ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ರೂಪಿತವಾದವುಗಳೇ. ಆದ್ದರಿಂದಲೇ ಸ್ತ್ರೀವಾದಿ ಚಿಂತನೆಯಲ್ಲಿ ಈಗಾಗಲೇ ಇರುವ 'ಸ್ವಾತಂತ್ರ್ಯ'ದ ಪರಿಕಲ್ಪನೆಗಿಂತ ಸಮಾನತೆಯ ಪರಿಕಲ್ಪನೆಗೆ ಹೆಚ್ಚು ಒತ್ತುಕೊಟ್ಟು ಹೊಸ ರೀತಿಯ ವಿಮರ್ಶೆಗೆ ಪ್ರಚೋದಿಸುತ್ತದೆ. ಏಕೆಂದರೆ ಸ್ತ್ರೀವಾದಿ ಚಿಂತನೆ ಎಂಬುದೇ ಮೂಲಭೂತವಾಗಿ ಪ್ರತಿಕ್ರಿಯಾತ್ಮಕವಾದುದು ಆಗಿರುವುದರಿಂದ, ಸಧ್ಯ ಅಸ್ತಿತ್ವದಲ್ಲಿರುವ ಮುಖ್ಯ ವಿಮರ್ಶಾ ನೆಲೆಗಳಿಗೆ ಪ್ರತಿಕ್ರಿಯಿಸುತ್ತಲೇ ತನ್ನನ್ನು ತಾನು ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ.

ಹೀಗೆ ಸಮಕಾಲೀನ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯು ಮಹಿಳಾ ಸಾಹಿತ್ಯವೆಂಬ ಪರಿಕಲ್ಪನೆಯನ್ನು ದುಡಿಸಿಕೊಳ್ಳುವಾಗ ಆಳದಲ್ಲಿ ಪ್ರಧಾನಧಾರೆಯ ವಿಮರ್ಶೆಯೊಂದಿಗೆ ಸಹಮತವನ್ನು ಹೊಂದಿರುವುದರಿಂದಲೇ ಇಂದು ಅದಕ್ಕೆ ಶ್ರೇಣೀಕೃತ ವರ್ಗೀಕರಣವನ್ನು ದಾಟಿ ಮುನ್ನಡೆಯಲಾಗುತ್ತಿಲ್ಲ. ಮಹಿಳೆಯರ ಸಮಗ್ರ ಬರವಣಿಗೆಯನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳಲಾಗುತ್ತಿಲ್ಲ. ಕನ್ನಡದ ಎಲ್ಲ ಲೇಖಕಿಯರ ಮುಖವಾಣಿಯಾಗಿ ತನ್ನನ್ನು ವಿಸ್ತರಿಸಿಕೊಳ್ಳಲಾಗುತ್ತಿಲ್ಲ. ಬದಲಿಗೆ ಪ್ರಧಾನಧಾರೆಯಂತೆಯೇ ಸ್ತ್ರೀವಾದಿ ವಿಮರ್ಶೆಯೂ ಮಹಿಳಾ ಸಾಹಿತ್ಯದೊಳಗಿನ ಒಂದು ಸಣ್ಣ ಆಯ್ದ ಗುಂಪಿನ ಪ್ರತಿನಿಧೀಕರಣವನ್ನು ಮಾತ್ರ ನೆರವೇರಿಸುತ್ತಿರುವಂತೆ ಕಂಡುಬರುತ್ತದೆ. "ಯಾವ ಗುಣಲಕ್ಷಣವನ್ನು ಡಾಲೆಸ್ಪೆಂಡರ್

ಪ್ರಧಾನಧಾರೆಯ ದೋಷವಾಗಿ ಗುರುತಿಸುತ್ತಾಳೆಯೋ ಅದರ ಅಂಚಿನಲ್ಲಿಯೇ ಸ್ತ್ರೀವಾದಿ ವಿಮರ್ಶೆಯು ನಿಂತಿರುವಂತೆ ಭಾಸವಾಗುತ್ತದೆ. ಪರಂಪರೆಯ ಶೋಧದ ಸಂದರ್ಭವಿರಲಿ, ಸಮಕಾಲೀನ ವಿಮರ್ಶೆಯಲ್ಲಿರಲಿ ಸ್ತ್ರೀವಾದವು ಜನಪ್ರಿಯ-ಗಂಭೀರ ಎಂಬ ವರ್ಗೀಕರಣವನ್ನು ಪ್ರಮುಖ ಮಾನದಂಡವಾಗಿಟ್ಟುಕೊಂಡೇ ಮುಂದುವರಿಯುತ್ತಿದೆ. ಪರಂಪರೆಯ ಶೋಧದ ಕೆಲಸವು ಗಂಭೀರ ಲೇಖಕಿಯೊಬ್ಬಳ ಅನಾವರಣದೊಂದಿಗೆ ತಳುಕುಹಾಕಿಕೊಳ್ಳುತ್ತಿದೆ. ಈ ಗಂಭೀರ-ಜನಪ್ರಿಯ ಪರಿಕಲ್ಪನೆಗಳು ಮೂಲಭೂತವಾಗಿ ಶ್ರೇಷ್ಠ-ಕನಿಷ್ಠವೆಂಬ ಮೌಲ್ಯ ನಿರ್ಣಯದ ಮಾನದಂಡಗಳೂ ಆಗಿರುವುದರಿಂದ 'ಶ್ರೇಷ್ಠ ಪರಂಪರೆ' ಯೊಂದರ ನಿರ್ಮಾಣದ ಕೆಲಸವನ್ನು ಈ ಪರಂಪರೆಯ ಶೋಧವು ನಿರ್ವಹಿಸುತ್ತಿದೆ."[೨೯] ಶ್ರೇಣಿಕರಣದ ವಿರುದ್ಧ ಯುದ್ಧ ಸಾರುವ ಸ್ತ್ರೀವಾದಿ ರಾಜಕಾರಣವು ಶ್ರೇಣಿಕರಣಕ್ಕೆ ಪಕ್ಕಾಗುವ ಈ ಸನ್ನಿವೇಶದಲ್ಲಿ ಒಮ್ಮೆ ನಿಂತು ಹಿಂದೆ ತಿರುಗಿ ನೋಡುವುದು, ತನ್ನನ್ನು ತಾನು ವಿಮರ್ಶಿಸಿಕೊಳ್ಳುವುದು ಅಗತ್ಯ.

ಪ್ರಧಾನಧಾರೆಯ ವಿಮರ್ಶೆ ಬಳಸುವ ಪ್ರತಿಭೆ, ಸೋಪಜ್ಞತೆ, ಸೃಜನಶೀಲತೆ ಮತ್ತು ವ್ಯುತ್ಪತ್ತಿ ಇತ್ಯಾದಿ ಸಾಹಿತ್ಯ ಪರಿಕರಗಳು ಮಹಿಳೆಯ ಸಂದರ್ಭದಲ್ಲಿ ಹುಟ್ಟು ಹಾಕುವ ಈ ಬಿಕ್ಕಟ್ಟನ್ನು ಗಮನಿಸಿಯೇ ಸ್ತ್ರೀವಾದಿ ವಿಮರ್ಶೆ ಅದರ ವಿಮರ್ಶಾ ಮಾನದಂಡಗಳ ಬಗ್ಗೆ ತೀವ್ರ ವಿರೋಧವನ್ನೊಡ್ಡುತ್ತದೆ. ಮೂಲಭೂತವಾಗಿಯೇ ಪ್ರತಿಭೆ ಎಂಬುದೊಂದು ಅಮೂರ್ತ ಪರಿಕಲ್ಪನೆ. ಅದನ್ನು ಕೆಲವು ನಿರ್ದಿಷ್ಟ ಸಂಗತಿಗಳ ಆಧಾರದಲ್ಲಿ ಮೂರ್ತಗೊಳಿಸಿಕೊಳ್ಳಬಹುದು ಎನ್ನುವುದಾದರೂ ಅದು ಒಂದು ಹಂತದ ವ್ಯುತ್ಪತ್ತಿಯನ್ನು, ತರಬೇತಿಯನ್ನು, ಪರಿಶ್ರಮವನ್ನು ಬಯಸುವುದೇ ಆಗಿದೆ. ಆದರೆ ಮಹಿಳೆಯರ ಸಂದರ್ಭದಲ್ಲಿ ಲಿಂಗ ಅಸಮಾನತೆಯು ಏರ್ಪಡಿಸುವ ಈ ಕೊರತೆಯನ್ನು ಸಮಾಜವು ಪ್ರತಿಭಾಹೀನತೆಯೆಂದು ಪರಿಗಣಿಸುವುದನ್ನು ಇದು ವಿರೋಧಿಸುತ್ತದೆ.

ಈ ದಿಕ್ಕಿನಿಂದ ನೋಡಿದರೆ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಸಾಹಿತ್ಯ ಪರಂಪರೆಯ ಪರಿಕಲ್ಪನೆಯು ಕೇವಲ ಸಾಹಿತ್ಯ ಪರಿಕಲ್ಪನೆಯಾಗಿರದೆ, ಸ್ತ್ರೀವಾದಿ ರಾಜಕಾರಣದ ಹಲವು ಧಾರೆಗಳಲ್ಲಿ ಒಂದಾಗಿರುವುದರಿಂದ ಅದು ಮೂರು ಮುಖ್ಯ ನೆಲೆಗಳಲ್ಲಿ ಸಾಹಿತ್ಯ ಚಟುವಟಿಕೆಯನ್ನು ಪರಿಗಣಿಸುತ್ತದೆ. ಮೊದಲನೆಯದು, ಸಾಹಿತ್ಯ ಕ್ಷೇತ್ರದಲ್ಲಿನ ಪುರುಷ ಪ್ರಧಾನತೆಯನ್ನು ಬಯಲಿಗೆಳೆಯುವುದು. ಎರಡನೆಯದು, ಕಡೆಗಣಿಸಲ್ಪಟ್ಟ ಮಹಿಳಾ ಸಾಹಿತ್ಯವನ್ನು ಮುನ್ನೆಲೆಗೆ ತರುವುದು ಮತ್ತು ಕೊನೆಯದಾಗಿ, ಈ ಎರಡೂ ಚಟುವಟಿಕೆಯನ್ನು ಅಂತಿಮವಾಗಿ ಲಿಂಗಸಮಾನತೆಯ ರಾಜಕಾರಣದ ಪರಿಕರವಾಗಿ ಸಂಯೋಜಿಸುವುದು. ಈ ಮೂರು ನೆಲೆಗಳಿಗೆ ಅನುಗುಣವಾಗಿಯೇ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ತನ್ನ ವಿಮರ್ಶಾ ಪರಿಕರಗಳನ್ನು, ಮಾನದಂಡಗಳನ್ನು ರೂಪಿಸಿಕೊಳ್ಳುತ್ತದೆ ಹಾಗೂ ಅವು ಪ್ರಧಾನಧಾರೆಯ ವಿಮರ್ಶಾ ಪರಿಕರ ಹಾಗೂ ಮಾನದಂಡಗಳೆದುರು ತನ್ನದೆ ಆದ ಅರ್ಥಖಚಿತತೆಯನ್ನು ಹೊಂದುತ್ತದೆ. ಸ್ತ್ರೀವಾದಿ

ವಿಮರ್ಶೆಯ ಈ ತಾತ್ವಿಕತೆಗೆ ಅನುಗುಣವಾಗಿಯೇ ಇವತ್ತಿನ ಕನ್ನಡದ ಸ್ತ್ರೀವಾದಿ ಚಿಂತನೆಯು ಕೆಲಸ ನಿರ್ವಹಿಸುತ್ತಿದೆ.

ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಈ ವೈಧಾನಿಕತೆಯು ಒಂದು ಹಂತದಲ್ಲಿ ಪ್ರಧಾನಧಾರೆಗೆ ತನ್ನ ಭಿನ್ನಮತವನ್ನು ಪ್ರದರ್ಶಿಸುತ್ತಲೇ ಇನ್ನೊಂದು ಹಂತದಲ್ಲಿ ಅದರೊಂದಿಗೆ ಸಹಮತವನ್ನೂ, ಸಾಹಚರ್ಯವನ್ನು ಏರ್ಪಡಿಸಿಕೊಳ್ಳುತ್ತದೆ. ಸಾಹಿತ್ಯ ಪರಂಪರೆಯೊಂದರ ನಿರ್ಮಾಣದ ತಾತ್ವಿಕತೆಯೇ ಪ್ರಧಾನಧಾರೆಯ ವೈಧಾನಿಕತೆಯೊಂದಿಗೆ ತಳುಕು ಹಾಕಿಕೊಂಡಿದ್ದಾಗಿದೆ. ಅಂತೆಯೇ ಮಹಿಳಾ ಪರಂಪರೆಯ ನಿರ್ಮಾಣದ ಚಟುವಟಿಕೆಯು ಒಟ್ಟಾರೆಯಾಗಿಯೇ ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನು ಸಶಕ್ತಗೊಳಿಸುವುದರಲ್ಲಿ ಆಸಕ್ತವಾದುದು. ಕನ್ನಡದಲ್ಲಿ ಮಾತ್ರವಲ್ಲದೆ ಜಾಗತಿಕ ನೆಲೆಯಲ್ಲಿ ಕಾಣಸಿಗುವ ಹಲವು ಸ್ತ್ರೀವಾದಿ ಚಿಂತಕಿಯರ ಈ ಮಾದರಿಯ ಸಶಕ್ತೀಕರಣದ ಆಶಯವನ್ನು ಸಮಕಾಲೀನ ಸ್ತ್ರೀವಾದಿ ವಿಮರ್ಶೆಯು ಇಷ್ಟು ನೇರವಾಗಿ ಮಹಿಳಾ ಸಾಹಿತ್ಯವನ್ನು ಕನ್ನಡ ಸಾಹಿತ್ಯದ ಉಡಿಯೊಳಗೆ ಹಾಕದಿದ್ದರೂ ಪ್ರಧಾನಧಾರೆಯ ವಿಮರ್ಶಾ ರಾಜಕಾರಣವನ್ನು ಪ್ರಶ್ನಿಸುತ್ತಲೇ, ಕನ್ನಡ ಸಾಹಿತ್ಯ ಪರಂಪರೆಯ ಸಹಯೋಗವನ್ನು ಸ್ವೀಕರಿಸುತ್ತದೆ. ಪರಂಪರೆಯಲ್ಲಿ ಮರೆಯಾದ, ಹೂಳಲ್ಪಟ್ಟ ಲೇಖಕಿಯರ ಶೋಧ ಹಾಗೂ ಸಾಧನೆಯ ಗುರುತಿಸುವಿಕೆಯ ಪರಿಶ್ರಮವು ಅಂತಿಮವಾಗಿ ಶ್ರೇಷ್ಟ, ಪ್ರಾತಿನಿಧಿಕ ಲೇಖಕಿಯರನ್ನು, ಹೆಕ್ಕಿ ಕನ್ನಡ ಸಾಹಿತ್ಯ ಪರಂಪರೆಗೆ ಜೋಡಿಸುವ ಮೂಲಕ ಕನ್ನಡ ಸಾಹಿತ್ಯದ ಶ್ರೇಷ್ಟತೆಯನ್ನು, ಅನನ್ಯತೆಯನ್ನು ಸ್ಥಾಪಿಸುವುದರಲ್ಲಿಗೇ ಹೋಗಿ ಸೇರುತ್ತದೆ.

ಅಂದರೆ ಕನ್ನಡ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಸದ್ಯದ ಬಹುಮುಖ್ಯ ತಕರಾರಿರುವುದು ಮಹಿಳೆಯರ ಸಾಹಿತ್ಯದ ಬಗೆಗಿನ ಪ್ರಧಾನಧಾರೆಯ ಧೋರಣೆ ಕುರಿತಂತೆಯೇ. ಉಳಿದಂತೆ ಒಟ್ಟಾರೆಯಾಗಿಯೇ 'ಸಾಹಿತ್ಯ', 'ಸಾಹಿತ್ಯ ಪರಂಪರೆ' ಎಂಬುದರ ಬಗ್ಗೆಯೇ ಇಂದು ವ್ಯಕ್ತವಾಗುತ್ತಿರುವ ಭಿನ್ನ ಅಭಿಪ್ರಾಯಗಳು, ಚರ್ಚೆಗಳು ಸ್ತ್ರೀವಾದಿ ಸಂದರ್ಭಕ್ಕೆ ಹೊರತಾಗಿಯೇ ಉಳಿದಿವೆ. ಉದಾಹರಣೆಗೆ, ಶ್ರೇಷ್ಟ ಸಾಹಿತ್ಯ ಎಂಬ ಪರಿಕಲ್ಪನೆಯ ಸಂದರ್ಭದಲ್ಲಿ ಲೇಖಕಿಯರನ್ನು ಪರಿಗಣಿಸಲಾಗಿಲ್ಲ ಎನ್ನುವ ನೇರ ಆರೋಪ. ಹಾಗೆಯೇ 'ಶ್ರೇಷ್ಟ ಸಾಹಿತ್ಯ' ಎಂಬ ಪರಿಕಲ್ಪನೆ ಯಾಕೆ ಸಾಹಿತ್ಯದಲ್ಲಿ ಹುಟ್ಟಿಕೊಳ್ಳುತ್ತದೆ, ಅದು ಕಾಲದಿಂದ ಕಾಲಕ್ಕೆ ಹೇಗೆ ಬದಲಾಗುತ್ತ ಹೋಗುತ್ತದೆ, ಈ ಬದಲಾವಣೆಗೆ ಕಾರಣವಾದ ಸಂಗತಿಗಳು ಯಾವುವು? ಸಾಹಿತ್ಯ ಅಧ್ಯಯನದಲ್ಲಿ ಈ ಬದಲಾವಣೆಗೆ ಕಾರಣವಾದ ಸಂಗತಿಗಳು ಯಾವುವು? ಸಾಹಿತ್ಯ ಅಧ್ಯಯನದಲ್ಲಿ ಈ ಪರಿಕಲ್ಪನೆ ಅನಿವಾರ್ಯವೇ ಎಂಬ ಪ್ರಶ್ನೆಗಳ ಹಿನ್ನೆಲೆಯಲ್ಲಿ ಶ್ರೇಷ್ಟ ಸಾಹಿತ್ಯ ಎಂಬ ಪರಿಕಲ್ಪನೆಯಲ್ಲಿ ಲೇಖಕಿಯರು ಹೇಗೆ ಮತ್ತು ಯಾಕೆ ಹೊರತಾದರು ಎಂಬ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವುದು. ಹಾಗೆಯೇ ಪುರುಷ ಪ್ರಧಾನತೆ ತನ್ನ ಪರಂಪರೆಯನ್ನು ಜಾಣತನದಿಂದ ಕಾಯ್ದುಕೊಂಡಿದೆ ಹಾಗೂ ಮಹಿಳೆಯರನ್ನು ಪರಂಪರಾಹೀನ ಸ್ಥಿತಿಯಲ್ಲಿ

ಉಳಿಸಲು ಯತ್ನಿಸಿದೆ ಎಂಬ ಹಿನ್ನೆಲೆಯಲ್ಲಿ ಮಹಿಳಾ ಪರಂಪರೆಯ ರಚನೆಗೆ ತೊಡಗುವುದು ಅಥವಾ ಪರಂಪರೆ ಎಂಬ ಪ್ರಧಾನ ಧಾರೆಯ ಪರಿಕಲ್ಪನೆಯನ್ನೇ ಪ್ರಶ್ನಿಸುವುದು ಎರಡೂ ಭಿನ್ನ ಸೈದ್ಧಾಂತಿಕ ನೆಲೆಗಳಾಗಿದ್ದು, ಸದ್ಯದ ಕನ್ನಡದ ಸಂದರ್ಭವು ಇವುಗಳಲ್ಲಿ ಮೊದಲಿನ ಸೈದ್ಧಾಂತಿಕ ನೆಲೆಯಲ್ಲಿ ಕಾರ್ಯಪ್ರವೃತ್ತವಾಗಿದೆ.

ಇದಕ್ಕೆ ಪೂರಕವಾಗಿ ಕನ್ನಡದ ಇವತ್ತಿನ ಮುಖ್ಯ ಮಹಿಳಾ ಚಿಂತಕಿಯಾಗಿರುವ ಆಶಾದೇವಿಯವರ ನಿಲುವನ್ನು ನೋಡಬಹುದು. "ಇತ್ತೀಚೆಗೆ ನಾನು ಕಟ್ಟಲು ಯತ್ನಿಸುತ್ತಿರುವ ಪ್ರಮೇಯ ಏನು ಎಂದರೆ ಕನ್ನಡ ವಿಮರ್ಶೆಯಲ್ಲಿ ಯಾವಾಗಲೂ ಸ್ತ್ರೀ ದೃಷ್ಟಿಕೋನವಿದೆ, ಆದರೆ ಸ್ತ್ರೀ ಸಂವೇದನೆ ಇಲ್ಲ ಎಂಬುದು. ನಮ್ಮ ಎಷ್ಟೋ ಮಹತ್ವದ ಲೇಖಕಿಯರನ್ನು ಅವರ ನಿಜವಾದ ನೆಲೆ ಮತ್ತು ಬೆಲೆಯಲ್ಲಿ ಗುರುತಿಸಲು ಏಕೆ ಸಾಧ್ಯವಾಗಲಿಲ್ಲ ಎಂದರೆ ದೃಷ್ಟಿಕೋನ ಸಾಧ್ಯವಾಗಿ ಸಂವೇದನೆ ಸಾಧ್ಯವಾಗದಿರುವುದರಿಂದಾಗಿ. ಕನ್ನಡ ಸಾಹಿತ್ಯದ ಪುನರ್‌ಮೌಲ್ಯೀಕರಣ ಮಾಡುತ್ತಿರುವ ಈ ದಿನಗಳಲ್ಲಿ ಲೇಖಕಿಯರಿಗೆ ಬಹುಶಃ ಇಲ್ಲಿಯವರೆಗೆ ಸಿಗದೇ ಹೋದ ಸ್ಥಾನ ಇನ್ನು ಸಿಗುತ್ತೆ ಅಂತ ನನಗನ್ನಿಸುತ್ತಿದೆ."[೨೦] ಎನ್ನುವ ಇವರು, ಹೊಸ ತಲೆಮಾರಿನ ಕನ್ನಡ ಬರಹಗಾರರಲ್ಲಿ ಸ್ತ್ರೀಪರ ದೃಷ್ಟಿಕೋನ ಹೇಗೆ ಒಂದು ಮೌಲ್ಯವಾಗಿ ನೆಲೆಗೊಂಡಿದೆ ಎಂಬುದನ್ನೂ ಸ್ಪಷ್ಟಪಡಿಸುತ್ತಾರೆ.

"ಸಾಹಿತ್ಯ ಸೃಷ್ಟಿಗೆ ತೊಡಗಿಕೊಂಡಿರುವವರಲ್ಲಿ ಹಲವರು ಸಮಷ್ಟಿ ನೆಲೆಯಲ್ಲೂ ಬರೆಯುತ್ತಿದ್ದಾರೆ. ಅದಕ್ಕೇ ನಾನು ಹೇಳಿದ್ದು. ಇಂದು ಬರೆಹ ಸ್ತ್ರೀ ಕೇಂದ್ರಿತಕ್ಕಿಂತ ಬದುಕಿನ ಕೇಂದ್ರಿತ ಸಾಹಿತ್ಯವಾಗಿದೆ. ಇದೇ ಒಂದು ಬದಲಾವಣೆ. ಆತ್ಮ ಮರುಕ ಮತ್ತು ಸ್ವ-ಗ್ರಹಿಕೆಯಿಂದ ಹೊರಟು ಅಧಿಕೃತತೆಯೆಡೆ ಬಂದಿರುವುದೇ ಒಂದು ಬದಲಾವಣೆ. ಇಂದು ತುಂಬ ದೊಡ್ಡದಾಗಿರುವುದು ಯಾವುದೆಂದರೆ ಬದುಕು. ತಾನುಂಟೋ ಮೂರು ಲೋಕವುಂಟೋ ಎಂದು ನೋಡುತ್ತಿದ್ದವರಿಗೆ ಇಂದು ಕಣ್ಣು ಹೊರಳಿಸಿ ನೋಡಲಿಕ್ಕಾಗುತ್ತಿದೆ. ಹಾಗೆ ನೋಡಲಿಕ್ಕೆ ಬೇಕಾಗಿರುವ ಆತ್ಮಸಮ್ಮಾನ ಇಂದು ಸಾಧ್ಯವಾಗಿದೆ. ಕಟ್ಟಿಕೊಳ್ಳುತ್ತಿರುವ ಬದುಕಿನ ಬಗ್ಗೆ ಯಾವ ಕೀಳರಿಮೆಯೂ ಇಲ್ಲದ ವಿಶ್ವಾಸ ಇಂದು ಸಾಧ್ಯವಾಗಿದೆ. ಹೀಗಾಗಿ ಇಂದು ಹೆಣ್ಣು ಕಂಡುಕೊಳ್ಳುತ್ತಿರುವುದು ಹೊರಗಿನದ್ದೂ ಹೌದು ಒಳಗಿನದ್ದೂ ಹೌದು. ಆದರೆ ಕೆಲವೊಮ್ಮೆ ಬಿಡುಗಡೆಯ ದಾರಿಗಳಾಗಿ ಕಂಡಿರುವುದು ಎಷ್ಟೋ ಸಲ ಬಿಡುಗಡೆಯ ದಾರಿಗಳಾಗಿರುವುದಿಲ್ಲ. ಅವು ನಮ್ಮನ್ನು ಇನ್ನೂ ಹೆಚ್ಚೆಚ್ಚು ಆಳವಾಗಿ ಹುಗಿಯುವ (ಪುರುಷ ಪ್ರಧಾನತೆಯೊಳಗೆ) ಹುನ್ನಾರಗಳಾಗಿರುತ್ತವೆ. ಆದರೆ ಸಮಾಧಾನದ ಸಂಗತಿ ಎಂದರೆ ಇಂದು ಪುರುಷ ಪ್ರಾಧಾನ್ಯತೆಯ ಈ ಛದ್ಮವೇಷವು ಅರ್ಥವಾಗುತ್ತಿದೆ. ಒಂದು ಕಾಲದಲ್ಲಿ ಅದು ಅರಿವಿಗೇ ಬರುತ್ತಿಲ್ಲ."[೨೧] ಎನ್ನುವ ಇವರು, ಸ್ತ್ರೀವಾದವು ಒಂದು ಬದುಕಿನ ಕ್ರಮ ಅಷ್ಟೆ. ಸಮಾನತೆ, ಸ್ವಾತಂತ್ರ್ಯ ಯಾವುದೂ ಇಲ್ಲದ, ಬದಲಿಗೆ ಪರಸ್ಪರ ಸ್ವಾಯತ್ತತೆಯಿಂದ ಒಪ್ಪಿ ಗೌರವಿಸುವ ಒಂದು ಜೀವನ ವಿಧಾನ ಎಂದು ವ್ಯಾಖ್ಯಾನಿಸುತ್ತಾರೆ.

ಅಂದರೆ ಸ್ತ್ರೀವಾದ ಎನ್ನುವುದು ಮಹಿಳೆಯರಿಗೇ ಸಂಬಂಧಿಸಿದ್ದಲ್ಲ. ಆ ಬದುಕಿನ ಕ್ರಮವನ್ನು ಗಂಡು ಮತ್ತು ಹೆಣ್ಣು ಇಬ್ಬರೂ ಬಹಳ ಶ್ರಮ ಹಾಗೂ ಪ್ರೀತಿಯಲ್ಲಿ ಮಾತ್ರ ಕಟ್ಟಿಕೊಳ್ಳಲು ಸಾಧ್ಯ ಮತ್ತು ಆ ಪ್ರಯತ್ನ ಇಂದು ನಡೆಯುತ್ತಿದೆ ಎನ್ನುತ್ತಾರೆ. ಏಕೆಂದರೆ ಒಂದು ಕಾಲದಲ್ಲಿ ಸ್ತ್ರೀವಾದ ಭಾರತಕ್ಕೆ ಪ್ರವೇಶ ಮಾಡಿದಾಗ ಅದು ಎಲ್ಲಾ ಸೌಲಭ್ಯ ಪಡೆದ ವರ್ಗದ ಪ್ರಯತ್ನವಾಗಿ ಮಾತ್ರ ಕಾಣಿಸಿಕೊಳ್ಳುತ್ತಿತ್ತು. ಆದರೆ ಇಂದು ಬೇರೆ ಬೇರೆ ಸ್ತರಗಳಲ್ಲಿರುವವರಿಗೂ ಅದು ತಲುಪಿದೆ. ವಿದ್ಯಾವಂತರು, ಅವಿದ್ಯಾವಂತರು, ಗಾರ್ಮೆಂಟ್ ಕಾರ್ಮಿಕರು– ಹೀಗೆ ಎಲ್ಲರಲ್ಲಿ ಒಂದು ಜಾಗೃತಿ ಕಾಣಿಸುತ್ತಿದೆ. ಅದೇ ಹೊತ್ತಿಗೆ ಈ ಜಾಗೃತಿ ಅಥವಾ ಅರಿವು ಎನ್ನುವುದು ಆಧುನಿಕ ಹೆಣ್ಣಿನ ಹಿಂಸೆಯನ್ನು ಹಿಂದೆಂದೂ ಇರದಷ್ಟು ಹೆಚ್ಚಿಸಿದೆ ಎನ್ನುವುದೂ ಅಷ್ಟೇ ವಾಸ್ತವ. ಅರಿವಿನ ಹಿಂಸೆಯ ಘಟ್ಟವನ್ನು ದಾಟುವುದು ಯಾವ ಶೋಷಿತ ವರ್ಗಕ್ಕೂ ತುಂಬ ನಿರ್ಣಾಯಕವಾದ ಘಟ್ಟ. ಬಹಳ ಕಷ್ಟದ ಕಾಲ ಅದು. ಆದರೆ ಹೆಣ್ಣಿನದು ಅಸಾಧಾರಣವಾದ ಆತ್ಮ ಸ್ಥೈರ್ಯದ ವ್ಯಕ್ತಿತ್ವವಾದ್ದರಿಂದ ಈ ಹಿಂಸೆಯನ್ನು ಯಶಸ್ವಿಯಾಗಿ ರೂಪಿಸಿಕೊಳ್ಳುವ ಚೈತನ್ಯವನ್ನು ರೂಢಿಸಿಕೊಳ್ಳುತ್ತಿದ್ದಾಳೆ ಎನ್ನುತ್ತಾರೆ.

ಆಧುನಿಕೋತ್ತರ ಚಿಂತನೆಗಳು ಎಲ್ಲಾ ಬಗೆಯ ಚಳುವಳಿ, ಹೋರಾಟಗಳನ್ನು ಪ್ರಭಾವಿಸುತ್ತಿರುವಾಗ, ಸ್ತ್ರೀವಾದದ ಪ್ರತಿಕ್ರಿಯೆ ಅದನ್ನು ತನ್ನೊಳಗೆ ಸೇರಿಸಿಕೊಂಡು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಸಮಕಾಲೀನ ಸಂದರ್ಭಗಳು ಮೇಲ್ನೋಟಕ್ಕೆ ಅರಾಜಕವೇನೋ ಎನಿಸುವ ಭಾವವನ್ನು ಸಕಾರಣವಾಗಿ ಹುಟ್ಟಿಸುತ್ತಿವೆ. ಏಕ ತಾತ್ವಿಕತೆಯು ನಾಗರಿಕ ಸಮುದಾಯಗಳನ್ನು ಪ್ರಭಾವಿಸುವ, ನಿರ್ದೇಶಿಸುವ – ಆ ಮೂಲಕ ಸಮುದಾಯದ ಸವಾಲುಗಳು, ಬಿಕ್ಕಟ್ಟುಗಳು ಮತ್ತು ಆಶೋತ್ತರಗಳನ್ನು ಪ್ರತಿನಿಧಿಸಬಲ್ಲ ತಾತ್ವಿಕತೆಗಾಗಿ ಈ ಕಾಲವು ಉತ್ಕಟವಾಗಿ ನಿರೀಕ್ಷಿಸುತ್ತಿದೆ. ವಿಘಟನೆಗಳೇ ನಮ್ಮ ಕಾಲದ ಪರಮ ವಾಸ್ತವವಾಗಿ ಕಂಗೆಡಿಸುತ್ತಿರುವ ಕಾಲದಲ್ಲಿ ಸ್ತ್ರೀವಾದವನ್ನು ಗಂಡು ಮತ್ತು ಹೆಣ್ಣು ಇಬ್ಬರೂ ಸೇರಿ ಕಟ್ಟಬೇಕಾಗಿರುವ ಒಂದು 'ಬದುಕಿನ ಕ್ರಮ'ವನ್ನಾಗಿ ನೋಡುವ ಪ್ರಯತ್ನ ನಡೆಯುತ್ತಿದೆ.

ಈ ಬದುಕಿನ ಕ್ರಮವು, ಪ್ರಚಲಿತ ಮೌಲ್ಯ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವುದಕ್ಕಿಂತ, ಮುಖಾಮುಖಿಯಾಗುವುದಕ್ಕಿಂತ 'ಪರಿವರ್ತನೆ'ಯ ಮೂಲಕ ಸಮಕಾಲೀನ ಜಗತ್ತನ್ನು ಎದುರಿಸುವ ಪ್ರಯತ್ನ ನಡೆಸುತ್ತಿದೆ. ಏಕೆಂದರೆ ಮಾನವೀಯ ಆರ್ದ್ರತೆಯನ್ನೇ ತನ್ನ ಧಾತುವಾಗಿ ಪಡೆದ ಸ್ತ್ರೀವಾದವು ವ್ಯಕ್ತಿ ಮತ್ತು ವ್ಯವಸ್ಥೆ ಎರಡನ್ನೂ ದ್ವೇಷ, ಯುದ್ಧ, ಸೋಲು, ಮುಂತಾದ ಅಮಾನವೀಯವಾದ ಪರಿಕಲ್ಪನೆಗಳಲ್ಲಿ ಗ್ರಹಿಸುವುದನ್ನೇ ವಿರೋಧಿಸುವ ಮೂಲಕ ತನ್ನ ವ್ಯಾಪ್ತಿಯನ್ನು ವಿಸ್ತೃತಗೊಳಿಸಿಕೊಳ್ಳುತ್ತಿದೆ. ಆದ್ದರಿಂದಲೇ ಸಧ್ಯದ ಕನ್ನಡದ ಮುಖ್ಯ ಮಹಿಳಾ ಧ್ವನಿಯಾಗಿರುವ ವಿನಯಾ ವಕ್ಕುಂದ ಅವರು ಸ್ತ್ರೀವಾದವಿರುವುದು ಒಡೆದಿಡುವುದಕ್ಕಲ್ಲ ಎಂದು ಹೇಳುವುದು. ಏಕೆಂದರೆ "ಅಭಿವೃದ್ಧಿ ಮಾದರಿಯ ಬೆನ್ನತ್ತಿದ ಆಧುನಿಕ ನಾಗರಿಕತೆಯು ಮೈದಾಸನ ಹಾಗೆ,

ಭಸ್ಮಾಸುರನ ಹಾಗೆ ದಾರಿಯ ಕೊನೆಗೆ ಬಂದು ನಿಂತಿರುವ ಹೊತ್ತು ಇದು. ಗಾಂಧಿ ಪ್ರಣೀತ ಸ್ವಾವಲಂಬಿ, ಸರಳ ಮತ್ತು ಅಪರಿಗ್ರಹ ಸಮಾಜದ ಕಡೆಗೆ ಇಂದು ಇಡೀ ಜಗತ್ತು ಹೊರಳಿ ನೋಡುತ್ತಿದೆ. ಈ ಹೊರಳು ನೋಟವು ಅನಿವಾರ್ಯವಾಗಿ ಸ್ತ್ರೀವಾದದ ಕಡೆಗಿನ ಹೊರಳು ನೋಟವೂ ಆಗಿದೆ. ಏಕೆಂದರೆ ಗಾಂಧಿಯವರ ಸ್ವಾವಲಂಬನೆಯ ಪರಿಕಲ್ಪನೆಯ ಹಿಂದಿನ ಆಧಾರವೇ ಹೆಣ್ಣು. ಈ ಕಾರಣಕ್ಕಾಗಿಯೇ ಸ್ತ್ರೀವಾದವೆನ್ನುವುದು ಕೇವಲ ಜ್ಞಾನ ಮೀಮಾಂಸೆಯಲ್ಲ, ಅದೊಂದು ಲೋಕಮೀಮಾಂಸೆ."[೨೨] ಎನ್ನುವ ಅವರು ಮುಂದುವರೆದು "ಸ್ತ್ರೀವಾದದ ಈ ನಿಧಾನಗತಿಯ ಆದರೆ ಸ್ಥಿರನಡೆಯ ಪ್ರಯಾಣದ ಬಗ್ಗೆ ಯೋಚಿಸುವಾಗಲೆಲ್ಲ ಪ್ರಸಿದ್ಧವಾದ 'ಮೊಲ ಮತ್ತು ಆಮೆಯ ಕಥೆ'ಯೂ ನೆನಪಿಗೆ ಬಂದೇ ಬರುತ್ತದೆ. ವಿಪರ್ಯಾಸವೆಂದರೆ, ಮೊಲದ ಸೋಲಿಗೆ ಸಿಗುತ್ತಿರುವ ಅಧಿಕೃತತೆ, ಆಮೆಯ ಗೆಲುವಿನ ನಡೆಗೆ ಸಿಗುತ್ತಿಲ್ಲ ಎನ್ನುವುದು. ಸ್ತ್ರೀವಾದದ ಈ ನಿಡುಪಯಣವನ್ನು ಹಲವು ಪ್ರಮೇಯಗಳಲ್ಲಿ ಗುರುತಿಸಲು ಸಾಧ್ಯವಿದೆ. 'ಬಹಿಷ್ಕಾರದಿಂದ ಸ್ವೀಕಾರದ ಕಡೆಗಿನ', 'ಅನಧಿಕೃತತೆಯಿಂದ ಅಧಿಕೃತತೆಯ ಕಡೆಗಿನ', 'ಸ್ವಗತದಿಂದ ಸಂವಾದದ ಕಡೆಗಿನ' ಪ್ರಯಾಣವೆಂದೂ"[೨೩] ಇದನ್ನು ಗುರುತಿಸುತ್ತಾರೆ.

ಇಷ್ಟಾದರೂ ಸಮಕಾಲೀನ ಸ್ತ್ರೀವಾದಿ ಅಧ್ಯಯನಗಳ ಎರಡು ಮುಖ್ಯ ಚಲನೆಗಳೆಂದರೆ ಸಾಂಸ್ಕೃತಿಕ ಸ್ತ್ರೀವಾದ ಮತ್ತು ನೇಯ್ಗೆ. ಸಾಂಸ್ಕೃತಿಕ ಸ್ತ್ರೀವಾದವು ಹೆಣ್ಣಿನ ಶಕ್ತಿಮೂಲಗಳ ಮರು ವ್ಯಾಖ್ಯಾನದ ಮೂಲಕ ಹೆಣ್ಣಿನ ಚಹರೆಗಳನ್ನು ಅಧಿಕೃತಗೊಳಿಸಲು ಪ್ರಯತ್ನಿಸುತ್ತಿದೆ. ಹೆಣ್ಣಿನ ದೌರ್ಬಲ್ಯಗಳೆಂದು, ಅವಳ ಕಡ್ಡಾಯ, ಕರಾರಿನ ಗುಣಗಳೆಂದು ತಿಳಿಯಲಾಗುತ್ತಿದ್ದವನ್ನು 'ಸ್ತ್ರೀ ವಿಶಿಷ್ಟ' ಆಯಾಮಗಳೆಂದು ಸ್ಥಾಪಿಸಲು ಹವಣಿಸುತ್ತಿದೆ. 'ನೇಯ್ಗೆ'ಯು ಇತಿಹಾಸ, ಪುರಾಣಗಳೂ ಸೇರಿದಂತೆ, ವಿವಿಧ ಸೈದ್ಧಾಂತಿಕ ಅಂಶಗಳಿಂದ, ವಿವಿಧ ಕಲಾಪ್ರಕಾರಗಳಲ್ಲಿನ ಹೆಣ್ಣಿನ ಅಭಿವ್ಯಕ್ತಿ ಮತ್ತು ಅವುಗಳನ್ನು ಹೆಣ್ಣಿನ ಓದಿನ ಕ್ರಮಕ್ಕೆ ಒಳಗು ಮಾಡುತ್ತಲೇ ಸ್ತ್ರೀವಾದಿ ಅಧ್ಯಯನ ಮತ್ತು ಕಾವ್ಯಮೀಮಾಂಸೆಯನ್ನು ಕಟ್ಟುವುದರಲ್ಲಿ ಆಸಕ್ತವಾಗಿದೆ.

ಆಶಾದೇವಿಯವರ ಇಂಗಿತದಂತೆ ಸ್ತ್ರೀವಾದವನ್ನು ಮಹಿಳೆ ಮತ್ತು ಪುರುಷ ಇಬ್ಬರೂ ಸೇರಿ ಭದ್ರಗೊಳಿಸಬೇಕೆಂಬ ನಿಲುವನ್ನು ಮುಂದುವರೆಸುವಂತೆ ಇಂದಿನ ಅನೇಕ ಬರಹಗಾರ್ತಿಯರು ತಮ್ಮನ್ನು ಸ್ತ್ರೀವಾದದ ಉಗ್ರಬಂಡಾಯ ಸ್ವರೂಪಗಳ ಅಸ್ಮಿತೆಯಲ್ಲಿ ಗುರುತಿಸಿಕೊಳ್ಳಲು ನಿರಾಕರಿಸುತ್ತಾರೆ. ಸ್ತ್ರೀ ಅಸ್ಮಿತೆಯೆನ್ನುವುದನ್ನು ವಾಚ್ಯವಾಗಿ ನೋಡಲು ಬಯಸದೇ ಇರುವ ಹಲವಾರು ಲೇಖಕಿಯರು ತಮ್ಮನ್ನು ತಾವು 'ಸ್ತ್ರೀತ್ವದ' ವಿಶಿಷ್ಟತೆಯಲ್ಲಿ ಗುರುತಿಸಿಕೊಳ್ಳುತ್ತಾರೆ. ಇದೂ ಕೂಡ ಪ್ರಜ್ಞಾಪೂರ್ವಕ ನೆಲೆಯೇ ಆಗಿದೆ. ಏಕೆಂದರೆ, ಸ್ತ್ರೀ ಎನ್ನುವ ಅರಿವು ಬೆನ್ನಿಗಿದ್ದು ವ್ಯಕ್ತಿವಿಶಿಷ್ಟತೆಯಲ್ಲಿ ಅದನ್ನು ನಿಜಗೊಳಿಸಿಕೊಳ್ಳುವ ಹಂಬಲ ಇಲ್ಲಿದೆ. ಚಳವಳಿಯ ಹುರುಪು ಆವಿಯಾಗುತ್ತ ಬಂದಂತೆ ಇನ್ನೊಂದು ಹಂತದ ಸಂವೇದನೆಗಳು ನೆಲಗಾಣತೊಡಗಿವೆ. ಸೃಜನಶೀಲ ಕೃತಿಗಳಲ್ಲಿ ಕಥಾನಕಗಳ ವಿಪುಲ ಸೃಷ್ಟಿ

ನಡೆಯುತ್ತಿದ್ದು ಅವುಗಳಲ್ಲಿ ಬಹುಮುಖತ್ವದ ಶೋಧ ಮತ್ತು ಭಾಷೆಯ ಪರಿಷ್ಕಾರವನ್ನು ಸಾಧಿಸುತ್ತಿದ್ದು ತಮ್ಮ ಸಾಹಿತ್ಯ ವಸ್ತುಗಳ ಸ್ಪೇಸ್ ಅನ್ನು ವೃದ್ಧಿಸಿಕೊಳ್ಳುತ್ತಿದ್ದಾರೆ.

ಸ್ತ್ರೀವಾದಿ ನಿಲುವನ್ನು ಸೃಜನಶೀಲ ಸಾಹಿತ್ಯದಲ್ಲಿ ಗುರುತಿಸುವುದಾದರೆ ಮಹಿಳಾ ಬರಹಗಾರ್ತಿಯರಿಂದ ಬರುತ್ತಿರುವ ಇವತ್ತಿನ ಕಥಾನಕಗಳು ಹಲವಾರು ಜನ ಹವ್ಯಾಸಿ ಲೇಖಕಿಯರು ಮತ್ತು ವೃತ್ತಿಪರತೆಯಿಂದ ಸ್ವೀಕರಿಸಿ ಬರೆಯುತ್ತಿರುವವರಿಂದ ಬರುತ್ತಿವೆ. ಈ ಬರಹಗಳಲ್ಲಿ ಪ್ರಕಾರಗಳನ್ನು ವೈವಿಧ್ಯಮಯ ರೀತಿಯಲ್ಲಿ ಒಡೆದುಕಟ್ಟುವ ಕೌಶಲವನ್ನು ನಾವಿಂದು ಕಾಣುತ್ತಿದ್ದೇವೆ. ಒಂದು ಕಾಲದಲ್ಲಿ ಕಾವ್ಯವು ಮಹಿಳಾ ಅಭಿವ್ಯಕ್ತಿಯ ಸುವರ್ಣ ಮಾಧ್ಯಮವಾಗಿರುವುದನ್ನು ನೋಡಬಹುದು. ಸ್ವಂತ ಅನುಭವಗಳನ್ನು ದಾಖಲು ಮಾಡುತ್ತಲೇ ಅದನ್ನು ಕಾವ್ಯಭಾಷೆಯಲ್ಲಿ (ಮುಖ್ಯವಾಗಿ ಸಾಂಕೇತಿಕ ಭಾಷೆಯಲ್ಲಿ) ಮುಚ್ಚಿಡುವ ವ್ಯಕ್ತಿಕೇಂದ್ರಿತ ನೆಲೆಯದಾಗಿತ್ತು. ಆದರೆ ಈಗಿನ ರಚನೆಗಳನ್ನು ನೋಡಿದಾಗ ಕಥಾನಕಗಳನ್ನು ರೂಪಿಸುವುದು ಒಂದು ತೆರೆದುಕೊಳ್ಳುವ ರೀತಿಯನ್ನು ಇನ್ನೂ ಹೆಚ್ಚು ಸ್ಪಷ್ಟಗೊಳಿಸುತ್ತಿದೆ ಎನ್ನಿಸುತ್ತದೆ. ಅವುಗಳಲ್ಲಿ ವೈಜ್ಞಾನಿಕ ಬರಹಗಳು, ಮಹಿಳಾ ವಿಜ್ಞಾನಿಗಳ ಆತ್ಮಕಥೆ, ಜೀವನ ಚರಿತ್ರೆ, ಪ್ರವಾಸ, ಅನುಭವ ಕಥನ, ವೈದ್ಯಕೀಯ ಬರಹಗಳಲ್ಲಿ ಕಥಾನಕದ ಸೃಜನಶೀಲ ನೆಲೆಗಳು ಅರಳುತ್ತಿವೆ. ನೇಮಿಚಂದ್ರ, ದು. ಸರಸ್ವತಿ, ಪಾರ್ವತಮ್ಮ, ಮಹಾಲಿಂಗಶೆಟ್ಟಿ, ಎಚ್. ನಾಗವೇಣಿ, ಸವಿತಾನಾಗಭೂಷಣ, ಗಿರಿಜಮ್ಮ, ವಿಜಯಲಕ್ಷ್ಮಿ ಬಾಳೇಕುಂದ್ರಿ, ಲೀಲಾವತಿ ದೇವದಾಸ್ – ಹೀಗೆ ಹತ್ತುಹಲವು ಲೇಖಕಿಯರೇ ಇಲ್ಲಿದ್ದಾರೆ.

ಭಾರತದ ಕಥಾನಕಗಳನ್ನು ಸಂಪಾದಿಸಿ ಪ್ರಕಟಿಸಿರುವ ಶ್ರೀಮತಿ ಸೂಸಿತಾರು, ಕೆ. ಲಲಿತಾ, ತೇಜಸ್ವಿನೀ ನಿರಂಜನ ಮುಂತಾದವರು ಕಥಾನಕಗಳ ಮೂಲಕವೇ ಸ್ತ್ರೀಯರ ಚರಿತ್ರೆಯನ್ನು ಕಟ್ಟಿಕೊಡಬಹುದಾದ ಸುಳಿವುಗಳನ್ನು ನೀಡುತ್ತಿದ್ದಾರೆ. ವಿಮರ್ಶೆಯೂ ಈ ದಿಕ್ಕಿನಲ್ಲಿ ಕ್ರಿಯಾಶೀಲವಾಗಿದ್ದು, ಕಥಾನಕಗಳಿಂದಲೇ ಒಂದು ವಿಮರ್ಶೆಯ ಹಂದರ ನಿರ್ಮಿಸಿಕೊಳ್ಳುತ್ತಲಿದೆ. ಜಾನಪದ ಸಿರಿಯಂತಹ ಕಥಾನಕಗಳು ಎಚ್.ನಾಗವೇಣಿಯವರಲ್ಲಿ ಪುನರ್‌ನಿರ್ಮಾಣಗೊಳ್ಳುತ್ತಿರುವ ಸಂದರ್ಭದಲ್ಲಿ, ಜಾನಪದ ಪರಂಪರೆಯ ಆಕರಗಳ ಕಥಾನಕಗಳ ಸೃಷ್ಟಿಯೂ ಸಾಧ್ಯ ಎಂದು ಕಾಣುತ್ತಿದೆ. ಈ ರೀತಿಯ ಬಹುಮುಖತ್ವದ ಶೋಧದಲ್ಲಿ ಸ್ಪೇಸ್‌ಗಳನ್ನು ಕಂಡುಕೊಳ್ಳುತ್ತಿರುವುದು ಇಂದಿನ ಸ್ತ್ರೀಸಂವೇದನೆಯಲ್ಲಿ ಕಾಣುತ್ತಿದೆ.

ಈ ಮೊದಲು ಪ್ರಸ್ತಾಪಿಸಿದಂತೆ ಹೆಣ್ಣು ಎನ್ನುವುದನ್ನು ಜೈವಿಕ ಬದ್ಧತೆಯಿಂದ ಏಕಮುಖವಾಗಿ ಗ್ರಹಿಸಲಾಗದು. ಸ್ತ್ರೀತ್ವದ ಅನುಭವಗಳು ಸಾಮಾಜಿಕ ಪಾತಳಿಯಿಂದ ಹುಟ್ಟುವ ಜಾತಿ, ವರ್ಗ, ಸಂಸ್ಕೃತಿಗಳಿಂದ ನಿರೂಪಿಸಲ್ಪಡುತ್ತವೆ. ಅವು ಎಲ್ಲ ಸ್ತ್ರೀಯರಿಗು ಒಂದೇ ಆಗಿರುವುದಿಲ್ಲ. ಒಂದೇ ಪ್ರದೇಶಕ್ಕೆ ಸೇರಿದ ವೈದೇಹಿ ಮತ್ತು ಎಚ್. ನಾಗವೇಣಿಯವರ ಗ್ರಹಿಕೆಗಳು ಸಾಂಸ್ಕೃತಿಕ ನಿಶ್ಚಿತತೆಗಳಿಂದ ಭಿನ್ನವಾಗಿ ಕಾಣುತ್ತವೆ. ಮಧ್ಯಮವರ್ಗದ ಸುಶಿಕ್ಷಿತ ಪ್ರಜ್ಞೆಯು ಟಿಸಿಲಾಗಿ ಬರುತ್ತಿದ್ದ ಸ್ತ್ರೀಸಂವೇದನೆಗಳು ಇಂದು ಗೀತಾ ನಾಗಭೂಷಣ, ಬಿ. ಟಿ. ಜಾಹ್ನವಿ, ದು. ಸರಸ್ವತಿಯಂತಹ ಲೇಖಕಿಯರಿಂದ

ಬಹುಮುಖಿತ್ವದ ನೆಲೆಗಳನ್ನು ವಿಸ್ತರಿಸಿಕೊಳ್ಳುವಂತಿದೆ. ಸುಮಂಗಲಾ ಅವರ ಕಥಾನಕಗಳು ವರ್ಗನಿಶ್ಚಿತತೆಯನ್ನು ಸೂಚಿಸುತ್ತಿದ್ದರೆ (ಅವರ ಕಥಗಳಲ್ಲಿ ಬರುವ ಮನೆಗೆಲಸದ ಹೆಣ್ಣುಗಳು), ಸವಿತಾ ನಾಗಭೂಷಣರ 'ಸ್ತ್ರೀಲೋಕ'ವು ಸ್ತ್ರೀಯರದೆಲ್ಲ ಒಂದೇ ಲೋಕ ಅಲ್ಲ, ಜೈವಿಕತೆಯೂ ಅಲ್ಲಿ ಸಮಾನ ಅಂಶವಲ್ಲ ಎಂದು ತೋರಿಸುತ್ತದೆ. ಧರ್ಮವೆನ್ನುವ ನಿಶ್ಚಿತತೆಯನ್ನು ಸಾರಾ ಅಬೂಬಕರ್, ಬಾನುಮುಷ್ತಾಕ್ ತರದ ಲೇಖಕಿಯರು ಪರಿಷ್ಕರಣೆಯ ನೆಲೆಯಲ್ಲಿ ಗ್ರಹಿಸುತ್ತಾರೆ. ಪ್ರತಿರೋಧಕ ನೆಲೆಗಳಿಂದ ಹೊರಟು ಜೀವಮುಖಿಯಾಗಿಸುವ ಕಥಾನಕಗಳನ್ನು ಅವರು ನಿರೂಪಿಸುತ್ತಾರೆ. ಸಾರಾ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು', 'ಚಂದ್ರಗಿರಿಯ ತೀರದಲ್ಲಿ' ಕನ್ನಡದಲ್ಲಿ ಮುಸ್ಲಿಂ ಸ್ತ್ರೀಸಂವೇದನೆಯ ಹೊಸ ಮಗ್ಗುಲನ್ನು ತೆರೆದು ತೋರಿಸಿದವು. ಅವು ನಿಶ್ಚಿತತೆಗಳನ್ನು ನಿರೂಪಿಸುತ್ತಲೇ, ಬಹುಮುಖಿಯಾದ ಸಂವೇದನೆಗಳನ್ನು ರೂಪಿಸಿಕೊಂಡಿದ್ದು, ಕಥಾನಕಗಳಾಗಿ ಯಶಸ್ವಿಯಾಗಲು ಕಾರಣವಾಯಿತು.

"ಇಂದು ಮಹಿಳೆಯ ಸಾಹಿತ್ಯಕ್ಕೆ ಸಿಗ್ತಾ ಇರೋ ಸ್ಥಾನ ಬೇರೆ. ಮಹಿಳೆಯ ಸಾಹಿತ್ಯ ಮತ್ತು ಸಾಹಿತ್ಯದ ಸ್ವರೂಪ ಎರಡಕ್ಕೂ ಹತ್ತಿರದ ಸಂಬಂಧವಿದೆ. ಮಹಿಳೆಯ ಸಾಹಿತ್ಯವನ್ನು ಸಾಹಿತ್ಯ ಅಂತ ಮಾತ್ರ ನೋಡಬೇಕು ಎನ್ನುವುದು ನಮ್ಮ ಹಂಬಲ. ಸಾಹಿತ್ಯದಲ್ಲಿ ಒಳ್ಳೆ ಸಾಹಿತ್ಯ, ಕೆಟ್ಟ ಸಾಹಿತ್ಯ ಎಂದು ಮಾತ್ರ ಇರಬೇಕು ಎಂಬುದರ ಕಡೆಗೆ ನಮ್ಮ ಚಲನೆ ಇರಬೇಕು. ಅದು ತುಂಬ ದೂರದ ದಾರಿ ನಿಜ. ಆದರೆ ಸಮಾಧಾನದ ಸಂಗತಿ ಏನೆಂದರೆ ಮಹಿಳೆಯ ಸಾಹಿತ್ಯವನ್ನು ನೋಡುವ ದೃಷ್ಟಿಕೋನದಲ್ಲಿ ತುಂಬಾ ಖಚಿತ ಹಾಗೂ ಗುಣಾತ್ಮಕ ಬದಲಾವಣೆಗಳಾಗುತ್ತಿರುವುದು. ಇಂದು ಹಿಂದೆ ನಿರ್ಲಕ್ಷಿಸಲ್ಪಟ್ಟ ಲೇಖಕಿಯರನ್ನೂ ಮುಂದೆ ಇಟ್ಟುಕೊಂಡು ಚರ್ಚಿಸುತ್ತಿದ್ದೇವೆ ಎಂಬುದು ಮೊದಲನೆಯದು. ಎರಡನೆಯದಾಗಿ, ಲೇಖಕಿಯರನ್ನು ಬೇರೆ ಬೇರೆ ನೆಲೆಗಳಲ್ಲಿ, ಅಂದರೆ ಲೇಖಕಿ ಎನ್ನುವ ನಿರ್ದಿಷ್ಟತೆಯನ್ನು ಬಿಟ್ಟು ಚರ್ಚಿಸುವ ನೆಲೆಗಳನ್ನು ಕಟ್ಟಿಕೊಡುವುದರಲ್ಲಿ ಇವತ್ತಿನ ಕನ್ನಡ ವಿದ್ವತ್ ಲೋಕಕ್ಕೆ ಆಸಕ್ತಿ ಇದೆ. ತುಂಬಾ ಮೂಲಭೂತ ಸವಾಲುಗಳು ಇನ್ನೂ ಹಾಗೇ ಉಳಿದುಕೊಂಡಿವೆ ಎಂಬುದೇನೋ ನಿಜ".[೨೪] ಆದರೂ ಸ್ತ್ರೀವಾದಿ ಸಾಹಿತ್ಯವನ್ನು ಮುಖ್ಯವಾಹಿನಿಯಲ್ಲಿ ತೊಡಗಿಸಿಕೊಳ್ಳಲು ಈ ಉಪಕ್ರಮ ಅಗತ್ಯವಿದೆ ಎನಿಸುತ್ತದೆ.

ನವೋದಯ ಕಾಲದಿಂದಲೂ ಮಹಿಳಾ ಸಾಹಿತ್ಯ ಅವ್ಯಾಹತವಾಗಿ ರಚನೆಯಾಗುತ್ತಿದ್ದರೂ ಅದಕ್ಕೊಂದು ಸ್ಪಷ್ಟವಾದ ಅಭಿವ್ಯಕ್ತಿ ಸಿಕ್ಕಿದ್ದು ಎಂಬತ್ತರ ದಶಕದಲ್ಲಿ. ನವ್ಯದ ನಂತರ ಚಾಲನೆಗೆ ಬಂದ ದಲಿತ-ಬಂಡಾಯ ಸಾಹಿತ್ಯಗಳ ಜೊತೆ ಸ್ತ್ರೀವಾದಿ ಸಾಹಿತ್ಯ ಕೂಡಾ ಪ್ರಧಾನ ನೆಲೆಗೆ ಬಂದಿತು. ಯಾವುದೇ ಕೃತಿಯು ತನ್ನ ಕಾಲದ ಸಾಂಸ್ಕೃತಿಕ ವಿವರಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿರುತ್ತದೆ. ಇದುವರೆಗಿನ ಕನ್ನಡ ವಿಮರ್ಶೆ. ಹೆಚ್ಚಾಗಿ ಪುರುಷರಿಂದ ರಚನೆಗೊಂಡಿದ್ದು, ಕೇವಲ ಕೃತಿಯ ಕಾವ್ಯಾನಂದ, ರಸಾನುಭೂತಿ, ಕಥನಕಲೆ, ಜೀವನ ಮೌಲ್ಯ ಮತ್ತು ಸಾಂಸ್ಕೃತಿಕ ದಾಖಲೆಯಾಗಷ್ಟೇ ಅಧ್ಯಯನ ಮಾಡಿತ್ತು.

ಆದರೆ ಅಲ್ಲಿದ್ದ ಹೆಣ್ಣಿನ ಗೈರು ಹಾಜರಿಯನ್ನು ಗುರುತಿಸುವುದು ಮತ್ತು ಸ್ತ್ರೀಸಂಕಥನವನ್ನು ಕಟ್ಟುವುದು ಮಹಿಳಾ ವಿಮರ್ಶೆಯ ಪ್ರಧಾನ ಕೆಲಸವಾಗಿದೆ.

ಸಮೃದ್ಧ ಸಾಹಿತ್ಯ ಪರಂಪರೆ ಹೊಂದಿರುವ ಕನ್ನಡದಲ್ಲಿ ಶ್ರೇಷ್ಠ ಕವಿಗಳೆಂದು ಗುರುತಿಸಿರುವ ಪಂಪ, ರನ್ನ, ಜನ್ನ, ರಾಘವಾಂಕ, ಕುಮಾರವ್ಯಾಸ ಮೊದಲಾದವರ ಕೃತಿಗಳ ಬಗ್ಗೆ ಹೇರಳವಾದ ವಿಮರ್ಶೆ ಈಗಾಗಲೇ ಸೃಷ್ಟಿಯಾಗಿದೆ. ಇಂತಹ ವಿಮರ್ಶೆಯಲ್ಲಿ ಸ್ತ್ರೀಪರವಾದ ಆಲೋಚನೆ–ದೃಷ್ಟಿಕೋನ ಹೇಗೆ ಪ್ರಕಟವಾಗಿದೆ ಎಂಬುದನ್ನು ಸ್ತ್ರೀವಾದಿ ವಿಮರ್ಶೆ ಬಹಳ ಸೂಕ್ಷ್ಮವಾಗಿ ಗಮನಿಸಿದೆ. ಉದಾಹರಣೆಗೆ ಪಂಪ ಕನ್ನಡದ ಶ್ರೇಷ್ಟ ಕವಿ ಹೌದು ಆದರೆ ಆತನ ಪುರುಷಕೇಂದ್ರಿತ ದೃಷ್ಟಿಕೋನ ಮಹಿಳೆಯರನ್ನು ಹೇಗೆ ಕಂಡಿದೆ ಎಂಬುದನ್ನು ಬಿ. ಎನ್. ಸುಮಿತ್ರಾಬಾಯಿಯವರು ತಮ್ಮ 'ಆದಿಪುರಾಣದಲ್ಲಿ ಸ್ತ್ರೀ ಪ್ರಪಂಚದ ಬಳಕೆ' ಎಂಬ ಲೇಖನದಲ್ಲಿ ಬಹಳ ಸೂಕ್ಷ್ಮವಾಗಿ ಗಮನಿಸಿದ್ದಾರೆ. ಒಟ್ಟು ಪುರುಷನಾದ ಪಂಪ ಬದುಕಿನ ಸುಖ ಸಮೃದ್ಧಿ ಭೋಗಗಳೆಲ್ಲವಕ್ಕು ಮೂಲನಿಧಿ ಹೆಣ್ಣು ಎಂದು ಭಾವಿಸುತ್ತಾನೆ. ಮೊದಲನೆಯದಾಗಿ, ಎಲ್ಲಾ ಚರಾಚರಗಳಿಗೂ ಸ್ತ್ರೀಭಾವದ ಆರೋಪಣೆ, ಎರಡನೆಯದಾಗಿ, ಸ್ತ್ರೀ ಸಮೂಹವನ್ನು ಪುರುಷರ ಪೌರುಷದ ಪ್ರಭಾವಳಿಯಂತೆ ನೋಡುವುದು ಕೊನೆಯದಾಗಿ, ಗಂಡಸಿನ ಭೋಗ ಭಾಗ್ಯವನ್ನು ಸ್ತ್ರೀ ಸಮೂಹವೇ ಪ್ರತಿನಿಧಿಸುತ್ತದೆ' ಎಂಬ ಪಂಪನ ನಿಲುವನ್ನು ವಿವರಿಸಲಾಗಿದೆ. ಪಂಪ ಮೋಕ್ಷವನ್ನು 'ಮತ್ಸ್ಯಂಗನೆ' ಎಂದು ಕರೆದು ಧಾರ್ಮಿಕ ಹಿನ್ನೆಲೆಯಲ್ಲಿ ಮಹಿಳೆಗೆ ವಿಶೇಷ ಸ್ಥಾನಮಾನ ನೀಡಿದ್ದಾನೆ ಎಂಬ ಕೆ. ವಿ. ನಾರಾಯಣರ ಅಭಿಪ್ರಾಯವನ್ನು ವಿರೋಧಿಸುವ ಸುಮಿತ್ರಾಬಾಯಿಯವರು, ಬದುಕಿನಲ್ಲಿ ತುಂಬಾ ಮುಖ್ಯವಾದ ವಸ್ತುವಿಶೇಷಗಳಿಗೆ ಸ್ತ್ರೀಭಾವದ ಆರೋಪ ಮಾಡಿ ಸ್ತ್ರೀಯನ್ನು ಬಳಕೆಯ ವಸ್ತು ಸರಕು ಎಂಬಂತೆ ಪಂಪ ಗ್ರಹಿಸಿದ್ದಾನೆಯೇ ಹೊರತು, ಮಹಿಳೆ ಮೋಕ್ಷಕ್ಕೆ ಕಾರಣಳು ಎಂಬರ್ಥದಲ್ಲಿ ಅಲ್ಲ. ನಾವು ಹಾಗೆ ಅದನ್ನು ಅರ್ಥೈಸಿಕೊಳ್ಳುವುದು ಅಗತ್ಯವಿಲ್ಲ ಎನ್ನುತ್ತಾರೆ.

ಹಾಗೆಯೇ ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಉದಾತ್ತ ಚಿಂತನೆಯನ್ನು, ಮಾನವ ಜಾತಿಯಲ್ಲಿ ಸ್ತ್ರೀಜಾತಿ ಇಲ್ಲ ಎಂಬುದನ್ನು ಡಾ. ಎಚ್. ಎಸ್. ಶ್ರೀಮತಿಯವರು ಗುರುತಿಸಿದ್ದಾರೆ. ಮತ್ತೋರ್ವ ಮುಖ್ಯ ಸ್ತ್ರೀವಾದಿ ವಿಮರ್ಶಕಿಯಾಗಿರುವ ತಾರಿಣಿ ಶುಭದಾಯಿನಿಯವರು, ರತ್ನಾಕರವರ್ಣಿಯ ಭರತೇಶ ವೈಭವ ಕೃತಿಯ "ಭೋಗ–ಯೋಗ ಸಮನ್ವಯವನ್ನು ಹೇಳುತ್ತದೆ. ಕುಟುಂಬದ ಸಾಮರಸ್ಯವನ್ನು ಪ್ರತಿನಿದಿಸುತ್ತದೆ ಎಂಬ ತೀರ್ಮಾನವನ್ನು ಅಲ್ಲಗಳೆದು ಇದು ಭರತೇಶ ವೈಭವದ ಪುರುಷ 'ಅದಿಪತ್ಯ'ವನ್ನಷ್ಟೇ ವಿಶ್ಲೇಷಿಸುತ್ತದೆ. ಆದರೆ ಅದಕ್ಕೆ ಕಾರಣವಾದ ಪಿತೃ ವ್ಯವಸ್ಥೆಯ ಅಧಿಕಾರ ರಾಜಕಾರಣವನ್ನು ವಿವರಿಸುವುದಿಲ್ಲ"[25] ಎಂದು ಅಭಿಪ್ರಾಯ ಪಡುತ್ತಾರೆ.

ಇನ್ನು ಅಕ್ಕಮಹಾದೇವಿಯನ್ನು ಜನ್ನನ ಯಶೋಧರ ಚರಿತೆಯ ಅಮೃತಮತಿಯನ್ನು ಕುರಿತು ಹಲವು ಪದ್ಯಗಳು ರಚನೆಯಾಗಿದ್ದು, ಅವುಗಳು ಒಂದು ರೀತಿಯಲ್ಲಿ ಸ್ಥಾಪಿತ ಸತ್ಯಗಳ ಪ್ರಖರ ವಿಮರ್ಶೆಯೆಂದೇ ನಾವು ಪರಿಗಣಿಸಬೇಕಾಗುತ್ತದೆ.

ಆದರೆ ಸ್ತ್ರೀವಾದಿ ವಿಮರ್ಶೆಯಿಂದ ಪ್ರಾಚೀನ ಪಠ್ಯಗಳ ಸಮಗ್ರ ಓದು-ಅಧ್ಯಯನ ಇದುವರೆವಿಗೂ ಸಾಧ್ಯವಾಗಿಲ್ಲ. ಈ ರೀತಿಯ ಆಯಾ ಓದುಗಳು-'ಕಂಪಾರ್ಟಮೆಂಟ್ ಸ್ಟಡಿ'ಗಳು ಕವಿಯ ಸಮಗ್ರ ಜೀವನದೃಷ್ಟಿಕೋನವನ್ನು ಗ್ರಹಿಸಲು ಅಸಮರ್ಥವಾಗುತ್ತದೆಂಬ ಟೀಕೆ ಇಂತಹ ವಿಮರ್ಶೆಗಳಿಗಿದೆ.

ಸ್ತ್ರೀವಾದಿ ವಿಮರ್ಶೆ ವಚನ ಸಾಹಿತ್ಯಕ್ಕೆ ತುಂಬಾ ತೀವ್ರವಾಗಿ ಪ್ರತಿಕ್ರಿಯಿಸಿದೆ. ವಾಸ್ತವವಾಗಿ ದಲಿತ-ಬಂಡಾಯ ಚಳುವಳಿಗಳು ಕನ್ನಡದಲ್ಲಿ ಆರಂಭವಾದ ಮೇಲೆ ವಚನಗಳನ್ನು ಈ ಹಿಂದಿಗಿಂತ ಭಿನ್ನವಾಗಿ ಓದುವ, ಅರ್ಥೈಸುವ ಕ್ರಮ ರೂಢಿಗೆ ಬಂತು. ವಚನ ಸಾಹಿತ್ಯವನ್ನು 'ವಚನ ಚಳುವಳಿ' ಎಂದು ಕರೆಯುವ ಸಂಪ್ರದಾಯ ರೂಢಿಗೆ ಬಂತು. ವಚನ ಸಾಹಿತ್ಯದಲ್ಲಿನ ಸಮಾನತೆಯ ತತ್ವ ಮತ್ತು ನಿರ್ಭಿಡತನವನ್ನು ಸ್ತ್ರೀವಾದಿ ವಿಮರ್ಶೆ ಮೆಚ್ಚಿಕೊಂಡು, ವಚನ ಸಾಹಿತ್ಯದ ಸೋಲು-ಗೆಲುವುಗಳ ವಿಶ್ಲೇಷಣೆ, ಆ ಕಾಲದಲ್ಲಿ ವಚನಕಾರ್ತಿಯರು ಪಡೆದ ಮನ್ನಣೆ, ಪರಾಮರ್ಶೆ, ವಚನಕಾರ್ತಿಯರ ಅಭಿವ್ಯಕ್ತಿಗಳ ವಿಸ್ತಾರವಾದ ಓದು, ವಚನಕಾರರ ಜೀವನ ದೃಷ್ಟಿಯೊಳಗೆ ಬೆರೆತಿರುವ ಸ್ತ್ರೀ ಸಮಾನತೆಯ ಸಂದಿಗ್ಧಗಳು, ಹೀಗೆ ವಚನ ಸಾಹಿತ್ಯದ ಇತ್ಯಾತ್ಮಕ ಅಂಶಗಳನ್ನು ವಿಶ್ಲೇಷಿಸುವ ಕೆಲಸ ಸ್ತ್ರೀವಾದಿ ವಿಮರ್ಶೆಯಲ್ಲಿ ಗಂಭೀರವಾಗಿ ನಡೆಯುತ್ತಿದೆ.

ಹೆಣ್ಣಿನ ವ್ಯಕ್ತಿತ್ವವನ್ನು ಕುರಿತಂತೆ ವಚನಕಾರರ ಗ್ರಹಿಕೆ ಸಮಾನತೆಯಿಂದ ಕೂಡಿದ್ದರೂ ಮಹಿಳೆಯರು ಅವರ ಸಂವೇದನೆಯ ಭಾಗವಾಗಲಿಲ್ಲ ಎಂಬ ಆರೋಪವಿದೆ. "ಸಮಾಜದ ಇತರ ಸವಾಲುಗಳು ಬಸವಣ್ಣನನ್ನು ನಿದ್ದೆ ಎಚ್ಚರಗಳಲ್ಲಿ ಕಾಡಿದ ಹಾಗೆ ಹೆಣ್ಣಿನ ವಿಚಾರ, ಸಮಸ್ಯೆ ಕಾಡಲಿಲ್ಲ. ಅವನ ನಿರೀಕ್ಷೆಯ ಸಮಾಜದಲ್ಲಿ ಸ್ತ್ರೀ ಸಮಾನತೆಯೂ ಒಂದು ಮುಖ್ಯ ಅಂಶ ಎಂದು ಹೇಳಲಾಗುತ್ತಿದೆಯಾದರೂ ಸ್ತ್ರೀ ಸಮಾನತೆ ಅಥವಾ ಹೊಸ ಹೆಣ್ಣಿನ ಪರಿಕಲ್ಪನೆ ಅವನ ವ್ಯಕ್ತಿತ್ವದ ಒಂದು ಭಾಗವಾಗಿತ್ತು ಎನ್ನುವುದಕ್ಕೆ ಅವನ ವಚನಗಳಲ್ಲಿ ನಮಗೆ ಆಧಾರಗಳಿಲ್ಲ."[೨೬] ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಸ್ತ್ರೀವಾದಿ ವಿಮರ್ಶೆಯ ವಚನಗಳ ಅಧ್ಯಯನದಲ್ಲಿ ಶೈಲಜಾ ಉಡಚಣರ 'ವಚನಕಾರರ ದೃಷ್ಟಿಯಲ್ಲಿ ಸ್ತ್ರೀ' ಎಂಬ ಕೃತಿ ಮೊದಲ ಗಂಭೀರ ಪ್ರಯತ್ನವಾಗಿದೆ. ಯಜಮಾನ ಸಂಸ್ಕೃತಿಯಿಂದ ಕಳಚಿಕೊಂಡು ಹೊರಬಂದ ಹೆಣ್ಣು ಹೆಣ್ಣಾಗಿ ನಿಂತಿದ್ದು, ಗಂಡಿನ ಸರಿಸಮಾನ ಸಾಧನೆಯನ್ನು ಮಾಡಿದ್ದು ವಚನಕಾರರ ಕಾಲಕ್ಕೆ ಮಾತ್ರ ಎಂದು ಅಭಿಪ್ರಾಯ ಪಡುವ ಸ್ತ್ರೀವಾದಿ ವಿಮರ್ಶೆಯು ವಚನ ಯುಗವನ್ನು ಹೆಣ್ಣಿನ ಸ್ವಾತಂತ್ರ್ಯದ ಆರಂಭದ ಕುರುಹಾಗಿ ಪರಿಗಣಿಸುತ್ತದೆ. ಈ ಸಂದರ್ಭದಲ್ಲಿ ಬೇರೆ ಬೇರೆ ವಚನಕಾರರ ಸ್ತ್ರೀ ದೃಷ್ಟಿಕೋನದ ವಿಶ್ಲೇಷಣೆ, ವಚನಕಾರ್ತಿಯರ ವಚನಗಳಲ್ಲಿ ಸ್ತ್ರೀಪರವಾಗಿ ವ್ಯಕ್ತವಾಗುವ ನಿಲುವುಗಳು, ಪರಂಪರಾಗತ ಮಹಿಳಾ ಚರಿತ್ರೆಯೊಂದಿಗೆ ವಚನಕಾರರ ನಿಲುವುಗಳನ್ನು ತೂಗಿ ನೋಡುವ ಅಧ್ಯಯನಗಳು ಹೇರಳವಾಗಿ ನಡೆದವು. ಆದರೆ ಎಲ್ಲಾ ಅಧ್ಯಯನಗಳು ವಚನಗಳನ್ನು, ವಚನಕಾರರನ್ನು ಪೂರಕವಾಗಿಯೇ ನೋಡಿದ್ದಾರೆ ಎನ್ನುವಂತಿಲ್ಲ.

ಅಲ್ಲಿಯೂ ವಾಸ್ತವವನ್ನು ಅರಿಯುವ ಪ್ರಯತ್ನ ಮಾಡಿದ್ದಾರೆ. ಉದಾಹರಣೆಗೆ ಸವಿತಾ ಬನ್ನಾಡಿಯವರು ತಮ್ಮ 'ಆಲಯವು ಬಯಲಾಗಿ' ಕೃತಿಯಲ್ಲಿ, ವಚನ ಚಳುವಳಿಯು ಕರ್ನಾಟಕದ ಎಲ್ಲ ಭಾಗಗಳಿಗೆ ವ್ಯಾಪಿಸಿರಲಿಲ್ಲವಾದ್ದರಿಂದ ಅದನ್ನು ಸಾಮಾಜಿಕ ಬದಲಾವಣೆಯ ಗುರುತಾಗಿ ಸ್ವೀಕರಿಸಬಹುದೇ ಎಂಬುದರ ಚರ್ಚೆ, ವಚನಗಳ ಅಧ್ಯಯನಕ್ಕೆ ಶಿಷ್ಟ ಆಕರಗಳನ್ನು ಮಾತ್ರ ಬಳಸಿಕೊಳ್ಳಲಾಗಿರುವುದರಿಂದ ಅದು ಪರಿಪೂರ್ಣವೆನಿಸುವುದಿಲ್ಲ. ಹಾಗೂ ಶಿವಶರಣರು ಮತ್ತು ಸಮಾಜ ಎಂಬ ದೃಢೀಕರಣದಲ್ಲಿ ಇಡೀ ಭಾರತೀಯ ಸಮಾಜವನ್ನು ಏಕಾಕಾರಿಯಾಗಿ ಗ್ರಹಿಸಲಾಗಿದೆ. ಈ ಸಂದರ್ಭದ ಚಾರಿತ್ರಿಕ ಸಂಭವನೀಯತೆಯನ್ನು ಗೆರೆ ಎಳೆದಂತೆ ಪ್ರತ್ಯೇಕಿಸಲಾಗಿದೆ ಎಂದು – ವಚನ ಅಧ್ಯಯನದ ಅತಿಶಯೋಕ್ತಿಯ ನೆಲೆಗಳನ್ನು ಪಟ್ಟಿ ಮಾಡಿದ್ದಾರೆ. ಇದು ಮಹಿಳಾ ವಿಮರ್ಶೆಯು ಎಷ್ಟು ಖಚಿತವಾದ ನಿಲುವುಗಳನ್ನು ಪ್ರಧಾನಧಾರೆಯ ವಿಮರ್ಶೆಯೊಂದಿಗೆ ಜೋಡಿಸಲು ಪ್ರಯತ್ನಿಸುತ್ತದೆ ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

ಕನ್ನಡ ಸಾಹಿತ್ಯದ ಮುಖ್ಯ ಅಭಿವ್ಯಕ್ತಿಗಳಲ್ಲಿ ಒಂದಾಗಿರುವ ದಾಸ ಸಾಹಿತ್ಯವನ್ನು ಮಹಿಳಾ ವಿಮರ್ಶೆ ಇದಿರುಗೊಂಡಿದೆ. ಆದರೆ ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯಗಳು ಏಕರೂಪದ ತಾತ್ವಿಕ ನಿರೂಪಣೆ ಹೊಂದಿಲ್ಲ ಎಂದು ಗುರುತಿಸಿದೆ. ವಚನ ಸಾಹಿತ್ಯದಲ್ಲಿ ಸಂಸ್ಕೃತಿಯನ್ನು ನಿರಚನೆ ಮಾಡುವ, ಪುನರಚನೆ ಮಾಡುವ ಗುಣವಿದ್ದರೆ ದಾಸ ಸಾಹಿತ್ಯದಲ್ಲಿ ವ್ಯವಸ್ಥೆಯ ಇರುವಿಕೆಯೊಂದಿಗೆ ಅನುಸಂಧಾನ ಮಾಡುವ ಗುಣವಿದೆ ಎನ್ನುವ ವ್ಯಾಖ್ಯಾನವು ಎರಡೂ ಚಳುವಳಿಗಳ ತಾತ್ವಿಕ ಬೇಧವನ್ನು ಖಚಿತವಾಗಿ ಗುರುತಿಸುತ್ತದೆ.

ಇಪ್ಪತ್ತನೇ ಶತಮಾನದ ಮಧ್ಯಭಾಗದಿಂದ ಕನ್ನಡದಲ್ಲಿ ಹೇರಳವಾಗಿ ಜನಪದ ಸಾಹಿತ್ಯದ ಸಂಗ್ರಹ, ವಿಶ್ಲೇಷಣೆ ಮತ್ತು ಮೌಲ್ಯಮಾಪನ ನಡೆದಿದೆ. ಕಳೆದ ಶತಮಾನದಿಂದ ಕೊನೆಯ ದಶಕದಿಂದ ಸ್ತ್ರೀವಾದಿ ವಿಮರ್ಶೆಯೂ ಜನಪದ ಸಾಹಿತ್ಯದಲ್ಲಿ ಮಹಿಳೆಯ ಸ್ಥಾನ–ಮಾನಗಳನ್ನು ಪರಿಶೀಲಿಸುವ ಪ್ರಯತ್ನ ನಡೆಸಿದೆ. ಸಾಮಾನ್ಯವಾಗಿ ಶಿಷ್ಟ ಸಾಹಿತ್ಯ ಪುರುಷರಿಂದ ರಚನೆಗೊಂಡರೆ ಬಹುತೇಕ ಜನಪದ ಸಾಹಿತ್ಯ ಮಹಿಳೆಯರಿಂದ ರಚನೆಗೊಂಡಿದೆ. ಇಷ್ಟಾದರೂ ಜನಪದ ಸಾಹಿತ್ಯದಲ್ಲಿ ಬಿಂಬಿತವಾಗಿರುವ ಹೆಣ್ಣಿನ ಸಂವೇದನೆಗಳು ಬಹುತೇಕ ಪಿತೃವ್ಯವಸ್ಥೆಗೆ ಅಧೀನವಾಗಿವೆ. ಹೆಣ್ಣು ತನ್ನನ್ನೂ, ತನ್ನ ಬದುಕನ್ನು ಪುರುಷ ಪ್ರಜ್ಞೆಯಲ್ಲಿ ವಿವರಿಸಿಕೊಳ್ಳಲು ಕಾರಣ. ಪಶ್ಚಿಮ ಸ್ತ್ರೀವಾದ ಹೇಳುವಂತೆ ಇಡೀ ಜಗತ್ತಿಗೆ ಮನುಕುಲವೇ ಪುರುಷ ಪ್ರಜ್ಞೆಯನ್ನು ಅಳವಡಿಸಿಕೊಂಡಿದೆ. ಹಾಗೆಯೇ ಜನಪದ ಸಾಹಿತ್ಯ ಸಂಗ್ರಹ ಬಹುತೇಕ ಪುರುಷರಿಂದಲೇ ನಡೆದಿರುವುದರಿಂದ, ಕನ್ನಡ ಜನಪದ ಸಾಹಿತ್ಯದ ಮೇಲೆ 'ಪುರುಷ' ಜೀವನದ ದೃಷ್ಟಿಕೋನ ಪ್ರಭಾವ ಬೀರಿರುವುದನ್ನು ಸ್ತ್ರೀವಾದಿ ವಿಮರ್ಶಕಿಯರು ಗುರುತಿಸುತ್ತಾರೆ.

ಸ್ತ್ರೀವಾದಿ ವಿಮರ್ಶೆಯ ಪ್ರಧಾನ ವಿಮರ್ಶೆಯು ದಾಖಲಿಸುವ ಹೆಣ್ಣು ಗುಣಗಳ ವೈಭವೀಕರಣವನ್ನು ಮೀರಿ ಹೆಣ್ಣಿನ ಅಸ್ತಿತ್ವ ಶೋಧದ ಕಥನಗಳಾಗಿ ಸಿರಿ, ಉತ್ತರೆ, ಭಾಗೀರಥಿ ಮೊದಲಾದ ಪಾತ್ರಗಳನ್ನು ವಿಶ್ಲೇಷಿಸಿತು. ಇದು ವ್ಯವಸ್ಥೆಯನ್ನು ಒಪ್ಪಿದ ಮತ್ತು

ವಿರೋಧಿಸಿದ ಎರಡೂ ಮಾದರಿಗಳು ಅನುಭವಿಸುವ ದುರಂತ ಅಂತ್ಯವು ಯಾವ ಮೌಲ್ಯವನ್ನು ಪ್ರಕಟಿಸುತ್ತದೆಂದು ಚರ್ಚಿಸುತ್ತದೆ. ಕೃತಿಯನ್ನು ಸಾಂಸ್ಕೃತಿಕ ಪಠ್ಯವಾಗಿ ಗ್ರಹಿಸಿದಾಗ ಓದಿನ ಬಹುಸಾಧ್ಯತೆಗಳು ತೆರೆದುಕೊಳ್ಳುತ್ತವೆ. ಹಾಗೆಯೇ ಸ್ತ್ರೀವಾದಿ ತಾತ್ವಿಕತೆಯೊಂದಿಗೆ ಕೃತಿಯನ್ನು ಪ್ರವೇಶಿದಾಗಲೂ ಹಲವಾರು ಒಳನೋಟಗಳು ದಕ್ಕುತ್ತವೆ. ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಲೇಖಕರ ಕುರಿತು ನಡೆದ ವಿಮರ್ಶೆಗಳು ಕೆಲವೊಮ್ಮೆ ವಿಚಾರ ಸಂಕಿರಣಗಳಿಗೆ, ವಿಶೇಷಾಂಕಗಳಿಗೆ ಬರೆದಂಥವಾಗಿವೆ. ಇಂಥ ಲೇಖನಗಳಲ್ಲಿ ಇದುವರೆಗಿನ ಕೆಲ ತೀರ್ಮಾನಗಳನ್ನು ಪ್ರಶ್ನಿಸಿರುವ ಸಂದರ್ಭಗಳಿವೆ. ಉದಾಹರಣೆಗೆ ನವೋದಯದ ಮುಖ್ಯ ಲೇಖಕರು ಹೆಣ್ಣನ್ನು ಉದಾರವಾದಿ ನೆಲೆಯಿಂದ ನೋಡಿದರು ಎಂಬ ತೀರ್ಮಾನಗಳಿಗೆ ಪ್ರತಿಯಾಗಿ ಸ್ತ್ರೀವಾದಿ ವಿಮರ್ಶಕರು ಅಧ್ಯಯನಪೂರ್ಣವಾದ ಹೊಸ ಒಳನೋಟಗಳನ್ನು ನೀಡಿದ್ದಾರೆ. ಬೇಂದ್ರೆಯವರ ಸಖೀಗೀತಕ್ಕೆ ಎಂ. ಎಸ್. ಆಶಾದೇವಿ ಬರೆದಿರುವ ಟಿಪ್ಪಣಿಯಲ್ಲಿ 'ಸಾಂಸ್ಥಿಕ ಪುರುಷಾಧಿಕಾರದ, ಸಾಂಪ್ರದಾಯಿಕ ದಾಂಪತ್ಯಧರ್ಮದ ಎಲ್ಲ ಸುಳುವುಗಳು ಇವೆಯಾದರೂ ಇಂತಹ ದಾಂಪತ್ಯದಲ್ಲಿ ಸಖ್ಯ ಸಿದ್ದಿಸಲಾರದು' ಎಂದು ಅಭಿಪ್ರಾಯಪಡುತ್ತಾರೆ. ವಿಮರ್ಶೆಯೊಳಗಿನ ಇಂತಹ ಹೊಳವುಗಳು ಕಾವ್ಯದೊಳಗಿನ ಹೆಣ್ಣಿನ ಪ್ರತಿನಿಧೀಕರಣ ಸಾಮಾಜಿಕ ಹೆಣ್ಣಿನ ಪ್ರತಿನಿಧೀಕರಣವೇ ಎಂಬ ತಿಳುವಳಿಕೆ ಹುಟ್ಟಿಸುತ್ತದೆ.

ನವೋದಯದ ಸುಧಾರಣಾವಾದಿ ಮನೋಧರ್ಮವು ಪುರುಷನನ್ನು ರಕ್ಷಕನೆಂತಲೂ, ಸ್ತ್ರೀಯನ್ನು ಅಬಲೆಯೆಂತಲೂ ನಿರ್ದೇಶಿಸುತ್ತದೆ. ಮಾಸ್ತಿಯವರ ಬಹುತೇಕ ಕಥೆಗಳಲ್ಲಿ ಮಹಿಳಾ ಪಾತ್ರ ಪ್ರಧಾನವಾಗಿರುವ ನೆಲೆಗಳಿದ್ದು, ಅವುಗಳ ಪ್ರಯತ್ನ ಮತ್ತು ಫಲಗಳನ್ನು ಬಹಳ ಸಾವುಧಾನದಿಂದ ಮಾಸ್ತಿ ದಾಖಲಿಸುತ್ತಾರೆ. ಹೆಣ್ಣಿನ ಸಹಿಸಿಕೊಳ್ಳುವ, ಹೊರೆಯುವ ಗುಣವನ್ನು ಎತ್ತಿಕಟ್ಟುತ್ತಾರೆ. 'ಹೇಮಕೂಟದಿಂದ ಬಂದ ಮೇಲೆ ಎಂಬ ಮಾಸ್ತಿಯವರ ಕಥೆಯು ಸ್ತ್ರೀಪರ ನಿಲುವಿನ ಕಥೆ ಎಂಬ ಅಭಿಪ್ರಾಯವನ್ನು ಮೇಲ್ನೋಟಕ್ಕೆ ಮೂಡಿಸುತ್ತದೆ. ಅದರೆ ಕಥೆಯು ಕೊಡುವ ವಿವರಗಳು ಇದಕ್ಕೆ ವಿರುದ್ದವಾದ ನೆಲೆಯನ್ನು ತಲುಪಿಸುತ್ತವೆ ಎಂದು ಡಾ. ಸಬಿಹಾ ಭೂಮಿಗೌಡ ಅಭಿಪ್ರಾಯಪಡುತ್ತಾರೆ.

ನವೋದಯದ ಮತ್ತೋರ್ವ ಮುಖ್ಯ ಲೇಖಕರಾದ ಕಾರಂತರು ತಮ್ಮ ಕಾದಂಬರಿಗಳಲ್ಲಿ ಹೆಣ್ಣಿನ ದಿನನಿತ್ಯದ ವಾಸ್ತವಿಕ ವಿವರಗಳನ್ನು ಆಸ್ಥೆಯಿಂದ ದಾಖಲಿಸುತ್ತಾರೆ. ಗಂಡು-ಹೆಣ್ಣಿನ ಸಂಬಂಧಕ್ಕೆ ಮಹತ್ವದ ಅರ್ಥವನ್ನು ನೀಡುವುದಿಲ್ಲವಾದರೂ ಅದನ್ನು ಧಾರಣಮಾಡುವ ಹೆಣ್ಣಿನ ಶಕ್ತಿಯ ಬಗ್ಗೆ ಬೆರಗುಪಡುತ್ತಾರೆ. ಅಷ್ಟೊಂದು ಆಪ್ತವಲ್ಲದ, ತಮ್ಮ ಆಯ್ಕೆಯಲ್ಲದ ಜಗತ್ತಿನಲ್ಲಿ ಈ ಹೆಂಗಸರನ್ನು ಜೀವನಮುಖಿಯಾಗಿ ಉಳಿಸುವ ಸಂಗತಿ ಯಾವುದು ಎಂಬ ಶೋಧದಲ್ಲಿ ಕಾರಂತರು ತೊಡಗುತ್ತಾರೆ. ಆದರೆ ಈ ಹೆಂಗಸರು ಅಪಾರ ಶ್ರದ್ಧೆ ಮತ್ತು ಸಂಯಮದಿಂದ ಅನುದಿನದ ದಂದುಗವನ್ನು ನಿಭಾಯಿಸುವ ಶಕ್ತಿಯು ಅನ್ಯ ಆಯ್ಕೆಯೇ ಇಲ್ಲದ್ದರಿಂದ ಹುಟ್ಟಿರುವುದು ಎಂಬುದನ್ನು ಮಹಿಳಾ ವಿಮರ್ಶೆ ಗುರುತಿಸಿದೆ. ಹೀಗೆ ಕೃತಿಯೊಳಗಿನ

ರೂಢಿಯ ವಿವರಣೆಗಳನ್ನು ಪ್ರಶ್ನಿಸಿ, ವಿಶ್ಲೇಷಿಸಿ ಹೊಸ ಸತ್ಯಗಳನ್ನು ದಾಖಲಿಸುವ ಪ್ರಯತ್ನವನ್ನು ಮಹಿಳಾ ವಿಮರ್ಶೆ ಮಾಡುತ್ತದೆ.

ನವ್ಯದ ಮುಖ್ಯ ಲೇಖಕರಾದ ಪೂರ್ಣಚಂದ್ರ ತೇಜಸ್ವಿ, ಪಿ. ಲಂಕೇಶ ಮತ್ತು ಶಾಂತಿನಾಥ ದೇಸಾಯಿ ಮೊದಲಾದವರ ಸಾಹಿತ್ಯವನ್ನು ಕುರಿತು ಮಹಿಳಾ ವಿಮರ್ಶೆಯು ಬಹು ಮುತುವರ್ಜಿಯಿಂದ ವಿಶ್ಲೇಷಿಸಿದೆ. ಇಂತಹ ಸಂದರ್ಭದಲ್ಲಿ ಒಬ್ಬರಿಂದ ಒಬ್ಬರಿಗೆ ಮಹಿಳಾ ವಿಮರ್ಶೆಯ ಸೈದ್ಧಾಂತಿಕ ಹತಾಶೆಗಳು ಭಿನ್ನವಾಗಿವೆ. ಮತ್ತು ಕೆಲವೊಮ್ಮೆ ಒಂದೇ ಸೈದ್ಧಾಂತಿಕ ಹಿನ್ನೆಲೆ ಇದ್ದರೂ ತಲುಪುವ ತೀರ್ಮಾನಗಳು ಭಿನ್ನವಾಗಿರುತ್ತವೆ. ಪೂರ್ಣಚಂದ್ರ ತೇಜಸ್ವಿಯವರ ಕಥನಗಳು 'ವ್ಯವಸ್ಥೆಯು ಹೆಣ್ಣಿನ ಯಾವ ಅಂಶಗಳನ್ನು ಹತ್ತಿಕ್ಕಲು ಯತ್ನಿಸುತ್ತಿದೆಯೋ ಅದನ್ನೆಲ್ಲ ಬಲಿಷ್ಠಗೊಳಿಸಿ ಸ್ವಸಮರ್ಥನೆಗೆ ಒಳಪಡಿಸಿಕೊಳ್ಳುವ ರಾಜಕೀಯ ತಂತ್ರಗಳನ್ನು ಬಳಸಿಕೊಳ್ಳುತ್ತದೆಂದು' ಡಾ. ಬಿ. ಎನ್. ಸುಮಿತ್ರಾಬಾಯಿ ಅಭಿಪ್ರಾಯಪಟ್ಟರೆ ಡಾ. ಎಂ. ಎಸ್. ಆಶಾದೇವಿಯವರು ತೇಜಸ್ವಿ ಕಥನಗಳ ಈ ಗುಣಗಳ ಮೇಲೆ ಒತ್ತು ಕೊಡದೆ, ಇವುಗಳಲ್ಲಿ ಗಂಡು ಹೆಣ್ಣಿನ ಸಂಬಂಧಗಳ ಅದಮ್ಯತೆಯನ್ನು ತನ್ಮಯವಾಗಿ ಗ್ರಹಿಸುವ ವಿಧಾನವೇ ಇಲ್ಲವಾಗಿರುವ ಖಾಲಿತನದ ಕಡೆಗೆ ನಮ್ಮ ಗಮನ ಸೆಳೆಯುತ್ತಾರೆ. ಹೀಗೆ ಈ ಎರಡೂ ಅಭಿಪ್ರಾಯಗಳು ತೇಜಸ್ವಿ ಕಥನದ ಎರಡೂ ಆಯಾಮಗಳನ್ನು ನಿದರ್ಶಿಸುತ್ತದೆ. ಇದರಿಂದ ಸ್ತ್ರೀವಾದಿ ಓದಿನ ಬಹುಮುಖಿ ಸಾಧ್ಯತೆಗಳ ಪರಿಚಯ ನಮಗಾಗುತ್ತದೆ. ಹಾಗೆಯೇ ಲಂಕೇಶರ ಕಥನಗಳ ಅಧ್ಯಯನದಲ್ಲಿ ಡಾ. ಎಲ್. ಜಿ. ಮೀರಾ ನವ್ಯದ ವ್ಯಕ್ತಿಪ್ರಜ್ಞೆ ಮತ್ತು ಕಾಮ ಪ್ರಾಮುಖ್ಯತೆಗಳಿಗೆ ಲಂಕೇಶ ಕಥೆಗಳಲ್ಲೂ ಕುರುಹುಗಳಿರುವುದನ್ನು ದಾಖಲಿಸುತ್ತಾರೆ. ಇವರ ಕಥೆಗಳಲ್ಲಿ ಹೆಣ್ಣಿನ ವಿವರಗಳು ಸಾಂದ್ರವಾದ ಗಂಡುಪ್ರಜ್ಞೆಯ ಮೂಲಕ ನಿರೂಪಿತವಾಗಿದೆ.

ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯದ ಜೊತೆಜೊತೆಗೆ ಬೆಳೆದುಬಂದ ಸ್ತ್ರೀವಾದಿ ಸಾಹಿತ್ಯವನ್ನು ದಲಿತ-ಬಂಡಾಯ ಸಾಹಿತ್ಯಕ್ಕೆ ಹಿನ್ನೆಲೆಯಾಗಿದ್ದ ಚಳುವಳಿಗಳ ಜೊತೆಗೆ ಗುರುತಿಸುವುದು ವಾಡಿಕೆ ಆದರೆ, "ಮಹಿಳಾ ಸಾಹಿತ್ಯವನ್ನು ಕನ್ನಡ ಸಾಹಿತ್ಯದ ಇತರ ಚಳವಳಿಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದು ಸರಿಯಲ್ಲ. ಏಕೆಂದರೆ ಪ್ರತಿ ಚಳವಳಿಯಲ್ಲಿ ಲೇಖಕಿಯರು, ಅದೇ ಚಳವಳಿಯ ಲೇಖಕರೊಂದಿಗೆ ಸಂಘರ್ಷದ ಸಂಬಂಧಗಳನ್ನು ಹೊಂದಿದ್ದಾರೆ. 'ಗಂಡಿನ ಭಾಷೆಯಿಂದ ಹೆಣ್ಣಿಗೆ ಸಹಜವಾದ ಭಾಷೆಯ ಕಡೆಗೆ ಪ್ರಯಾಣಿಸಿದ್ದು ಮಹಿಳಾ ಸಾಹಿತ್ಯ. ಜೊತೆಗೆ ಪುರುಷರಿಂದ ದತ್ತವಾದ ಮಾದರಿಗಳಿಗೆ ಹೊಂದಿಕೊಳ್ಳುವ ಮತ್ತು ಅವುಗಳಿಂದ ಬಿಡಿಸಿಕೊಳ್ಳುವ ಪ್ರಯಾಣವೂ ಮಹಿಳಾ ಸಾಹಿತ್ಯದ"[೨೭] ಮುಖ್ಯ ಗುರಿಯಾಗಿದ್ದು ತನ್ನದೇ ಅಸ್ಮಿತೆಯನ್ನು ದಾಖಲಿಸಲು ಪ್ರಯತ್ನಿಸುತ್ತಿದೆ.

ಒಟ್ಟಾರೆ, ಇಪ್ಪತ್ತನೇ ಶತಮಾನದ ಆಧುನಿಕ ಮಹಿಳಾ ಸಾಹಿತ್ಯದಲ್ಲಿ ಕೆಳವರ್ಗದ ಹೆಣ್ಣುಮಕ್ಕಳ ಬದುಕು, ಬರವಣಿಗೆಯ ಪರಿಧಿಯಿಂದ ಹೊರಗೇ ಉಳಿದಿದೆ. ಕಳೆದ ೧೦ ವರ್ಷಗಳಲ್ಲಿ ಆ ಪರಿಸ್ಥಿತಿಯು ನಿಧಾನವಾಗಿ ಬದಲಾಗುತ್ತಿದೆ. ಈ ಹಿನ್ನೆಲೆಯಲ್ಲಿ

ಎನ್. ಗಾಯಿತ್ರಿ ('ಸ್ತ್ರೀವಾದಿ ಪ್ರವೇಶಿಕೆ'), ಗಾಯತ್ರಿ ನಾವಡ ('ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು'), ಕೇಶವ ಶರ್ಮ ('ಸ್ತ್ರೀವಾದಿ ವಿಮರ್ಶೆ') ಬಿ.ಎನ್. ಸುಮಿತ್ರಬಾಯಿ ('ಸ್ತ್ರೀವಾದ') ಮೊದಲಾದ ಕೃತಿಗಳು ಕನ್ನಡದಲ್ಲಿ ಸ್ತ್ರೀವಾದಿ ವಿಮರ್ಶೆ ಬೆಳೆಯಲು ಪ್ರೇರಣೆಯಾದರೆ, ಎಚ್. ಎಸ್. ಪಾರ್ವತಿ, ನೇಮಿಚಂದ್ರ, ವಿಜಯಾದಬ್ಬೆ, ಶಾಂತ ಇಮ್ರಾಪುರ, ಮೀನಾಕ್ಷಿ ಬಾಳಿ, ಎಚ್. ಎಸ್. ಶ್ರೀಮತಿ, ಪ್ರೀತಿ ಶುಭಚಂದ್ರ, ಮಲ್ಲಿಕಾ ಘಂಟಿ, ಸಬಿಹಾ ಭೂಮಿಗೌಡ, ಎಮ್. ಎಸ್. ಆಶಾದೇವಿ, ಶೈಲಜಾ ಹಿರೇಮಠ, ಕವಿತಾ ರೈ, ತಾರಿಣಿ ಶುಭದಾಯಿಣಿ, ಎಮ್. ವಿ. ವಸು, ದು. ಸರಸ್ವತಿ, ರಾಮಲಿಂಗಪ್ಪ ಟಿ. ಬೇಗೂರ್, ಎಚ್. ಎಸ್. ರಾಘವೇಂದ್ರರಾವ್, ರಹಮತ್ ತರೀಕೆರೆ ಮೊದಲಾದವರು ಸ್ತ್ರೀವಾದಿ ವಿಮರ್ಶೆಯನ್ನು ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಬರವಣಿಗೆಯು ಪಿತೃವ್ಯವಸ್ಥೆಯ ಚರ್ವಿತಚರ್ವಣವಾಗದಂತೆ ಎಚ್ಚರ ವಹಿಸಿ ಕೇವಲ ಅನುಭವ ಪ್ರಾಮಾಣ್ಯವನ್ನೆ ಆಶ್ರಯಿಸಿದ ಮಹಿಳಾ ವಿಮರ್ಶೆಯು ಕಳೆದ ದಶಕದಲ್ಲಿ ಪ್ರಾಚೀನ ಕೃತಿಗಳನ್ನು ಭಿನ್ನವಾಗಿ ಓದುವ ಮೂಲಕ, ವಚನಗಳನ್ನು ಹೊಸದಾಗಿ ಅನುಸಂಧಾನ ಮಾಡಿಕೊಳ್ಳುವ ಮೂಲಕ, ಜನಪದ ಸಾಹಿತ್ಯದಲ್ಲಿರುವ ಹೆಣ್ಣುಗುಣಗಳನ್ನು ಅನಾವರಣ ಮಾಡಿಕೊಳ್ಳುವ ಮೂಲಕ, ಕನ್ನಡ ಸಾಹಿತ್ಯದ ಪ್ರಧಾನ ಪಠ್ಯಗಳನ್ನು ಪುನರೋದಿಗೆ ಒಳಪಡಿಸಿ ಹೊಸ ನೆಲೆಯಲ್ಲಿ ಮಹಿಳಾ ಪಾತ್ರಗಳನ್ನು ತನ್ನ ತಾತ್ವಿಕ ಕಥನಗಳಲ್ಲಿ ಕಂಡಿರಿಸಿಕೊಳ್ಳಲು ಪ್ರಯತ್ನಿಸಿತು. ಆ ಮೂಲಕ ಇದುವರೆಗಿನ ಮಹಿಳಾ ವಿಮರ್ಶೆಗಿಂತ ಭಿನ್ನವಾಗಿ ರೂಪಾಂತರ ಹೊಂದಿ ಈ ದಶಕದಲ್ಲಿ ಮಹಿಳಾ ವಿಮರ್ಶೆ ಪ್ರಕಟಗೊಂಡಿತು.

೪.೪ ಸಾಂಸ್ಕೃತಿಕ ವಿಮರ್ಶೆ

ವಿಮರ್ಶೆ ಎಂದರೆ ಸಂಸ್ಕೃತಿ. ಸಂಸ್ಕೃತಿಗೆ ಭಾಷೆ ಮುಖ್ಯ. ಭಾಷೆಯಿಂದ ದಕ್ಕುವ ಈ ಸಂಸ್ಕೃತಿಯಿಂದಲೇ ಮನುಷ್ಯನು ಪ್ರಾಣಿಯಿಂದ ಭಿನ್ನನಾಗುತ್ತಾನೆ. ವಿಮರ್ಶೆ ಸಂಸ್ಕೃತಿಯೊಂದಿಗೇ ಬೆಳೆದು ಬಂದಿದೆ. ಸೂಕ್ಷ್ಮ ಓದುಗ ತಾನು ಓದುತ್ತಿರುವ ಬರಹದ ಜೊತೆ ಸಂಪರ್ಕ, ಸಂವಾದ ನಡೆಸುವ ಕ್ರಿಯೆಯೇ ವಿಮರ್ಶೆ. ಸಾಹಿತ್ಯ ಸೃಷ್ಟಿಯಾಗುವುದೇ ಭಾಷೆಯಲ್ಲಿ. ಭಾಷೆಯ ಸಂಕೇತಗಳಾದ ಅಕ್ಷರಗಳು ಕಣ್ಣಿಗೆ ಕಾಣುವಂಥದ್ದು. ಸಾಹಿತ್ಯ ಒಂದು ಏಕಾಂಗಿ ಕೃತ್ಯ. ಓದಿದ ಪುಸ್ತಕಗಳ ಕುರಿತು ಒಂದೆಡೆ ಕುಳಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಇರುವ ಸಾಧ್ಯತೆ ಇರುವುದು ಕೇವಲ ಸಾಹಿತ್ಯದಲ್ಲಿ ಮಾತ್ರ. ವಿಮರ್ಶೆ ಏಕೆ ಬೇಕೆಂದರೆ, ಕೃತಿ ರಚನೆಯಾದ ಕಾಲಘಟ್ಟ, ಆ ಸಂದರ್ಭದಲ್ಲಿದ್ದ ಸಾಮಾಜಿಕ ಸ್ಥಿತಿಗತಿ, ಸಾಂಸ್ಕೃತಿಕ ರೂಪಗಳನ್ನು ನೋಡಲು, ತಿಳಿಯಲು ವಿಮರ್ಶೆ ಬೇಕು. ಯಾವುದೇ ಒಂದು ಸಾಹಿತ್ಯ ಕೃತಿಯಿಂದ ಆ ಕಾಲದ ಘಟ್ಟ ಹೇಗಿದೆ? ಕಥೆಯಲ್ಲಿ ಅದು ಹೇಗೆಲ್ಲಾ ಪ್ರಕಟಗೊಂಡಿದೆ? ಎಂದು ವಿಮರ್ಶೆಯಿಂದ ತಿಳಿಯಬಹುದು. ವಿಮರ್ಶಕ ಓದುವ ಅಭಿರುಚಿ ಬೆಳೆಸುತ್ತಾನೆ. ಅಭಿರುಚಿಗೂ ಸಂಸ್ಕೃತಿಗೂ ಸಂಬಂಧವಿದೆ. ನಿಜವಾದ ವಿಮರ್ಶಕ ಜೊಳ್ಳು, ಕಾಳುಗಳನ್ನು ಬೇರ್ಪಡಿಸುತ್ತಾನೆ. ಹಾಗೆ ತಾನು ಬೇರ್ಪಡಿಸಿದ

ಗಟ್ಟಿಯಾದ ಕಾಳುಗಳ ಮೇಲೆ ಅಭಿರುಚಿಯನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುತ್ತಾನೆ. ಅತ್ಯುತ್ತಮ ಕೃತಿಗಳತ್ತ ಓದುಗರ ಗಮನ ಸೆಳೆವುದು ಅವನ ಕಾರ್ಯ. ವಿಮರ್ಶೆಯಿಂದಲೇ ಪ್ರಜಾಪ್ರಭುತ್ವದ ಉತ್ತುಂಗ ಸ್ಥಿತಿಯನ್ನು ತಲುಪಬಹುದು, ವ್ಯವಸ್ಥೆಯನ್ನು ಸರಿಪಡಿಸಬಹುದು. ಸಮಾಜದ ವಿವಿಧ ಅಂಗಗಳಲ್ಲಿ ವಿಮರ್ಶೆ ತನ್ನ ಕೆಲಸವನ್ನು ಮಾಡುತ್ತಿದೆ. ಹಿಂದೆ ಮೌಲ್ಯಗಳನ್ನು ಪ್ರಶ್ನಿಸದೇ ಸ್ವೀಕರಿಸುವ ಸಮಾಜವಿತ್ತು. ಆದರೆ ಇಂದು ಪರಿಸ್ಥಿತಿ ಭಿನ್ನವಾಗಿದೆ. ಓರ್ವ ನಿಜವಾದ ವಿಮರ್ಶಕ ಅತ್ಯುತ್ತಮವಾದ ಬರಹವನ್ನು ಉಳಿಸಿ, ಮುಂದಿನ ಪೀಳಿಗೆಗೆ ದಾಟಿಸುವ ಕೆಲಸವನ್ನು ಮಾಡುತ್ತಾನೆ.

ಸಂಸ್ಕೃತಿಯೆಂದರೆ ಜನಾಂಗವೊಂದರ ಅನುಭವ–ಪ್ರತಿಭೆಗಳ ಮೊತ್ತ. ಸಂಸ್ಕೃತಿಯನ್ನು ಅಧ್ಯಯನ ಮಾಡುವ ಮೂಲಕ ಆಯಾ ಜನಾಂಗದ ಅತ್ಯುತ್ತಮವಾದದನ್ನು ಗ್ರಹಿಸಬಹುದು ಎಂಬುದು ಪಶ್ಚಿಮದಲ್ಲಿ ಹುಟ್ಟಿಕೊಂಡ ತಿಳಿವಳಿಕೆ. ಅದು ಕ್ರಮೇಣ ಕನ್ನಡದಲ್ಲೂ ಸ್ಥಾನ ಪಡೆದು ಒಂದು ವಿಮರ್ಶಾ ಕ್ರಮವಾಗಿ ಬೆಳೆದದ್ದು ಎಪ್ಪತ್ತರ ದಶಕದಲ್ಲಿ. ಆರಂಭದಲ್ಲಿ ಆಂಶಿಕವಾಗಿ ಕಾಣಿಸಿಕೊಳ್ಳುತ್ತಿದ್ದ ಈ ವಿಮರ್ಶಾ ಕ್ರಮ ರಹಮತ್ ತರೀಕೆರೆಯವರ 'ಪ್ರತಿಸಂಸ್ಕೃತಿ' ಕೃತಿಯ ಮೂಲಕ ಈವರೆಗೆ ಆದರ್ಶವೆಂದು ಸ್ವೀಕೃತವಾಗಿದ್ದ ಸಂಸ್ಕೃತಿಯನ್ನು ನಿರಾಕರಿಸಿ, ಶ್ರೇಷ್ಠವೆಂದು ಮಾನ್ಯವಾಗಿರುವುದರ ಪಾವಿತ್ರ್ಯ ನಾಶಗೈಯುವುದು; ತಿರಸ್ಕೃತವೆನಿಸಿರುವ ದುಡಿವ ವರ್ಗದ ಸಂಸ್ಕೃತಿಯನ್ನು ಹಠತೊಟ್ಟು ಮೌಲ್ಯೀಕರಿಸುವ ಪ್ರಯತ್ನವನ್ನು ಮಾಡಿದರು. ಆದರೆ ಯಾರ ಮನಸ್ಸೂ ಮುರಿಯದ ಯಾರ ಬದುಕೂ ಬಾಡದ, ಜನಪರವಾದ ಹೊಸ ಸಮಾಜವಾದಿ ಮಿಥ್ ಒಂದನ್ನು ನೆಲೆಗೊಳಿಸುವ ಪ್ರಯತ್ನ ಸಂಸ್ಕೃತಿ ವಿಮರ್ಶೆಯ ಉದ್ದೇಶವಾಗಿರುವಂತೆ ಭಾಸವಾಗುತ್ತದೆ. ಜೊತೆಗೆ ಇದುವರೆವಿಗೂ ನಾವು ಭಾರತೀಯ ಸಂಸ್ಕೃತಿ ಎಂದ ಕೂಡಲೇ ಆರ್ಯ–ವೈದಿಕ–ಹಿಂದೂ–ಶಿಷ್ಟ ಸಂಸ್ಕೃತಿ ಎಂದು ಭಾವಿಸಿದ್ದೇವೆಯೇ ಹೊರತು, ಇಲ್ಲಿರುವ ತಳಸಮುದಾಯಗಳ, ಬುಡಕಟ್ಟು ಸಂಸ್ಕೃತಿಗಳ ಬಗ್ಗೆ ಅಧ್ಯಯನಗಳೇ ನಡೆದಿಲ್ಲ. ಆದ್ದರಿಂದ ಸಂಸ್ಕೃತಿ ವಿಮರ್ಶೆಯಲ್ಲಿ ಸಾಹಿತ್ಯ ಕೃತಿಯೊಂದು ಯಾರ ಸಂಸ್ಕೃತಿಯನ್ನು ಪ್ರತಿಪಾದಿಸಿ ಮಾನ್ಯ ಮಾಡುತ್ತಿದೆ ಮತ್ತು ಸಮಕಾಲೀನ ಸಾಂಸ್ಕೃತಿಕ ಒತ್ತಡಗಳು ಹೇಗೆ ಪ್ರಭಾವಬೀರಿವೆ ಎಂಬುದನ್ನು ನೋಡಲು ಈ ವಿಮರ್ಶೆ ಪ್ರಯತ್ನಿಸುತ್ತದೆ.

ಹೊಸ ಶತಮಾನದಲ್ಲಿ ಪಠ್ಯಗಳನ್ನು 'ಸಾಹಿತ್ಯಿಕ ಪಠ್ಯ' ಎನ್ನುವ ಬದಲು 'ಸಾಂಸ್ಕೃತಿಕ ಪಠ್ಯ' ಎಂದು ಕರೆಯಲಾಗುತ್ತಿದೆ. ಕಾಲಕಾಲಕ್ಕೆ ಸಾಹಿತ್ಯಾಧ್ಯಯನದ ಸ್ವರೂಪ ಬದಲಾಗುತ್ತಾ ವಿಸ್ತಾರವಾಗುತ್ತಾ ಬಂದಂತೆ ಇಂದು ಅದರ ಸಾಂಸ್ಕೃತಿಕ ವಿವರಗಳನ್ನೂ ಗಂಭೀರವಾಗಿ ಪರಿಶೀಲಿಸುವ ಪ್ರವೃತ್ತಿ ಬೆಳೆಯುತ್ತಿದೆ. ಪಠ್ಯ, ಪಠ್ಯದ ಕರ್ತೃ, ಪಠ್ಯದ ಪರಿಸರ, ಮತಧರ್ಮ, ಜಾತಿ, ವರ್ಗ ಮುಂತಾದವುಗಳ ತಾತ್ವಿಕ ಸ್ವರೂಪವನ್ನು ಶೋಧಿಸುವುದರ ಜೊತೆಗೆ ಪಠ್ಯದಲ್ಲಿ ಸಂಸ್ಕೃತಿಯ ಸಂಕೇತಗಳಾಗಿ ಕಾಣಿಸಿಕೊಳ್ಳುವ ನಂಬಿಕೆಗಳು, ಆಚರಣೆಗಳು, ಭೌತಿಕ ವಿವರಗಳು, ಪಾರಿಭಾಷಿಕ ಪದಗಳು, ನುಡಿಗಟ್ಟುಗಳ ಮುಖೇನ ಸಂಸ್ಕೃತಿಯನ್ನು ಪುನರಚಿಸುವ, ಗ್ರಹಿಸುವ ಪ್ರಯತ್ನ ನಡೆಯುತ್ತಿದೆ.

ಇವತ್ತಿನ ವಿಮರ್ಶೆ ನವ್ಯದ ಸಂದರ್ಭದಲ್ಲಿ ಚಾಲ್ತಿಗೆ ಬಂದ 'ಕೃತಿಕೇಂದ್ರಿತ ವಿಮರ್ಶೆ'ಯನ್ನು ಮತ್ತೊಂದು ರೀತಿಯಲ್ಲಿ ಅನುಸರಿಸುತ್ತಿದೆ. ಇದರ ಪ್ರಕಾರ, ಕೃತಿ ಸಂಸ್ಕೃತಿಯ ಉತ್ಪನ್ನವಾಗಿರುತ್ತದೆಯೇ ಹೊರತು ಅದು 'ಸೃಷ್ಟಿ'ಯಾಗಿರುವುದಿಲ್ಲ. ಈ ಕಾರಣದಿಂದ ಅದನ್ನು 'ಅನನ್ಯ'ವೆಂದು ಭಾವಿಸುವ ಬದಲು 'ಆಕರ'ವೆಂದು ಪರಿಗಣಿಸುವ ಪ್ರವೃತ್ತಿ ಬೆಳೆಯುತ್ತಿದೆ. ಸಂಸ್ಕೃತಿ ವಿಮರ್ಶೆಯು ಪ್ರಾಚೀನ ಪಠ್ಯಗಳನ್ನು ಓದುವಾಗ ಇದುವರೆವಿಗೂ ನಡೆದಿರುವ ಅಧ್ಯಯನಗಳನ್ನು ಗಮನಿಸಿ ನಮ್ಮ ಕಾಲದ ಸಾಂಸ್ಕೃತಿಕ ತಿಳುವಳಿಕೆಯ ಮುಖೇನ ಪಠ್ಯವನ್ನು ಗ್ರಹಿಸುವ, ಆಧುನಿಕ ಆಲೋಚನೆಗಳಿಂದ ವಿಶ್ಲೇಷಿಸುವ ಪ್ರಯತ್ನ ಮಾಡಲಾಗುತ್ತಿದೆ. ಈ ಮೂಲಕ ಆಧುನಿಕ ತಿಳುವಳಿಕೆಯಿಂದ ಪ್ರಾಚೀನ ಪಠ್ಯಗಳನ್ನು ಅರ್ಥಮಾಡಿಕೊಳ್ಳುವುದು ಒಂದು ಅನುಕೂಲವಾದರೆ ಸಮಕಾಲೀನ ಸನ್ನಿವೇಶದಲ್ಲಿಯೂ ಅದರ ಮಹತ್ವವನ್ನು ಕಂಡುಕೊಳ್ಳುವುದು ಮತ್ತೊಂದು ಅನುಕೂಲವಾಗಿದೆ. ಜೊತೆಗೆ ಪ್ರಾಚೀನ ಪಠ್ಯಗಳ ಅಧ್ಯಯನ ಇವತ್ತಿನ ತಿಳುವಳಿಕೆಗೆ ಹೊಸದನ್ನು ಸೇರಿಸುವ ಸಾಧ್ಯತೆ ಕೂಡಾ ಇದೆ. ಆದ್ದರಿಂದ ಪಠ್ಯವೊಂದರ ಸಾಂಸ್ಕೃತಿಕ ಓದು, ಕೃತಿಯನ್ನು ಹಲವು ಆಯಾಮಗಳಲ್ಲಿ ಗ್ರಹಿಸುವ ಮೂಲಕ ಸಮಕಾಲೀನ ಸನ್ನಿವೇಶದಲ್ಲಿ ಆರೋಗ್ಯಕರ ತಿಳುವಳಿಕೆಯೊಂದನ್ನು ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ.

ಈ ವಿಮರ್ಶಾ ಕ್ರಮದಲ್ಲಿ ಮುಖ್ಯವಾಗಿ ರಹಮತ್ ತರೀಕೆರೆ ('ನಾಥಪಂಥ', 'ಕದಳಿ ಹೊಕ್ಕು ಬಂದೆ', 'ನುಡಿಸಂಕರ', 'ಚಿಂತನೆಯ ಪಾಡು', ಇತ್ಯಾದಿ) ಬಸವರಾಜ ಕಲ್ಗುಡಿ ('ನಕ್ಷೆ-ನಕ್ಷತ್ರ', 'ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ') ಮಲ್ಲೇಪುರಂ ವೆಂಕಟೇಶ ('ತಿಳಿವ ತೇಜದ ಮುಂದೆ'), ರಾಜೇಂದ್ರ ಚೆನ್ನಿ ('ಅಧ್ಯಯನ', 'ಅಮೂರ್ತತೆ ಮತ್ತು ಪರಿಸರ'), ಕೆ. ವಿ. ಸುಬ್ಬಣ್ಣ ('ಕವಿರಾಜಮಾರ್ಗ ಮತ್ತು ಪರಿಸರದ ಕನ್ನಡ ಸಾಹಿತ್ಯ', 'ಅರೆಶತಮಾನದ ಅಲೆ ಬರಹಗಳು') ರಾಜಾರಾಮ ಹೆಗಡೆ ('ಗತಕಥನ', 'ಲೌಕಿಕ-ಅಲೌಕಿಕ'), ಡಿ. ಆರ್. ನಾಗರಾಜ ('ಸಂಸ್ಕೃತಿ ಕಥನ') ಬಾಲಗಂಗಾಧರನಾಥ ('ಪೂರ್ವಾವಲೋಕನ', 'ಸ್ಮೃತಿ-ವಿಸ್ಮೃತಿ: ಭಾರತೀಯ ಸಂಸ್ಕೃತಿ') ಮೊದಲಾದ ವಿಮರ್ಶಕರು ಸಂಸ್ಕೃತಿ ವಿಮರ್ಶೆಯನ್ನು ಮುಂದುವರೆಸಿದ್ದಾರೆ.

ಸಾಹಿತ್ಯದ ಮರ್ಮವನ್ನು ಅರಿಯಬೇಕೆಂದು ಕಾಲಕಾಲಕ್ಕೆ ಹೊಸ ಹೊಸ ವಿಮರ್ಶಾ ವಿಧಾನಗಳು ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಬಂದ ಹೊಸದರಲ್ಲಿ ಇದುವರೆವಿಗೂ ಚಾಲ್ತಿಯಲ್ಲಿದ್ದ ವಿಮರ್ಶಾ ಸಿದ್ಧಾಂತಗಳಿಗಿಂತ ನೂತನವಾದ ಒಳನೋಟಗಳನ್ನು ಕೊಡುವ ಮೂಲಕ ಎಲ್ಲರ ಗಮನವನ್ನು ಕೇಂದ್ರೀಕರಿಸುತ್ತದೆ. ಇಂತಹ ವಿಮರ್ಶಾ ವಿಧಾನ/ಸಿದ್ಧಾಂತಗಳಿಂದಲೇ 'ಸಾಹಿತ್ಯ ವಿಮರ್ಶೆ' ಪರೋಕ್ಷವಾಗಿ ತನ್ನ ತತ್ವ, ಸ್ವರೂಪ, ಉದ್ದೇಶ, ವಿಮರ್ಶೆಯ ಉಪಕರಣಗಳು ಮತ್ತು ಮಾನದಂಡಗಳನ್ನು ರೂಪಿಸಿಕೊಳ್ಳುತ್ತದೆ. ಆದ್ದರಿಂದ ವಿಮರ್ಶೆಗೆಂದೇ ಒಂದು ಸ್ವಾಯತ್ತವಾದ ವಿಧಿವಿಧಾನಗಳಿಲ್ಲ. ಇದು ಅಕ್ಷರಶ; ಸಾಹಿತ್ಯೋಪಜೀವಿಯಾಗಿದೆ. ಸಂಸ್ಕೃತಿ ವಿಮರ್ಶೆ

ವಿಸ್ತೃತ ರೂಪಗಳಂತೆ ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಪಶ್ಚಿಮದಲ್ಲಿ 'ರಚನಾವಾದ' ಒಂದು ದೊಡ್ಡ ವಿಮರ್ಶಾ ಸಿದ್ದಾಂತವಾಗಿ ರೂಪುಗೊಂಡಿತು. ಕನ್ನಡದಲ್ಲಿಯೂ ಪ್ರಸ್ತುತ ಅದರ ಬಳಕೆ ಜೋರಾಗಿಯೇ ಇದೆ. 'ರಚನಾವಾದ'ವು ಸಾಹಿತ್ಯ ಕೃತಿಯ ವಿಶ್ಲೇಷಣೆಯಲ್ಲಿ ಕೃತಿಯ ಕಾಲ, ದೇಶ, ಮೊದಲಾದವನ್ನು ಮುಖ್ಯವಾಗಿ ಸ್ವೀಕರಿಸದೆ ಕೇವಲ ರಚನಾ ಬಂಧವನ್ನೆ ಬಲವಾಗಿ ಅವಲಂಬಿಸಿ ವಿಶ್ಲೇಷಣೆ ನಡೆಸುವುದರಿಂದ ಸಾಹಿತ್ಯ ವಿಮರ್ಶೆಯಲ್ಲಿ ಅದುವರೆವಿಗೂ ಇದ್ದ ವೈವಿಧ್ಯತೆಯ ಬದಲಿಗೆ ಒಂದೇ ವಿಚಾರದ ಮೇಲೆ ಭಿನ್ನ ಭಿನ್ನ ಪ್ರವೇಶಗಳನ್ನು ನೀಡುವ ಕಡೆಗೆ ಇದು ತನ್ನ ಗಮನ ನೀಡಿತು. ಆದರೆ ಕನ್ನಡದ ಪರಿಸರದಲ್ಲಿ ಕೃತಿಯ ರಚನಾ ಬಂಧವನ್ನು ಅವಲಂಬಿಸಿ ಕೃತಿ ರಚನೆಯಾದ ಸಮಾಜದ ಸಾಂಸ್ಕೃತಿಕ ವಿವರಗಳನ್ನು ಗುರುತಿಸಲು ಪ್ರಯತ್ನಿಸಿತು.

ಸಾಂಸ್ಕೃತಿಕ ವಿಮರ್ಶೆಯೂ ಸೇರಿದಂತೆ ಈ ಸಂದರ್ಭದ ಗದ್ಯವು ಸಾಂಪ್ರದಾಯಿಕವಾದ ಲವಲವಿಕೆಯ ಗದ್ಯದ ಬದಲು ಬಲು ಬಿಗಿಯಾದ ಬಂಧದಲ್ಲಿ ವಿಮರ್ಶೆ ಕನ್ನಡದಲ್ಲೂ ರಚನೆಯಾಗತೊಡಗಿತು. ಕೆಲವೊಮ್ಮೆ ವಿಮರ್ಶೆಗಿಂತ ಕೃತಿಯೇ ಸಹೃದಯರಿಗೆ ಸುಲಭವಾಗಿ ಅರ್ಥವಾಗತೊಡಗಿತು. ಕನ್ನಡದಲ್ಲಿ ಆರಂಭದ ವಿಮರ್ಶೆ ಕನ್ನಡ ಸಾಹಿತ್ಯ ಪರಂಪರೆಯನ್ನು ಸಹೃದಯರಿಗೆ ಪರಿಚಯಿಸುವುದರ ಜೊತೆಗೆ ಅವರ ಅಭಿರುಚಿ, ನಿರ್ಮಾಣದ ಬಗ್ಗೆಯೂ ಆಸ್ಥೆ ವಹಿಸಿತ್ತು. ಆದರೆ ಪ್ರಸ್ತುತ ವಿಮರ್ಶೆಯನ್ನು ಸಹೃದಯರು ಓದಲಿಕ್ಕೆ ಮತ್ತೊಂದಷ್ಟು ಸಹಾಯಕ ಗ್ರಂಥಗಳು ಬೇಕಾದ ಅನಿವಾರ್ಯತೆ ಇದೆ. ವಾಸ್ತವವಾಗಿ ಕನ್ನಡದಲ್ಲಿ ಎರಡು ರೀತಿಯ ವಿಮರ್ಶಾ ಬರವಣಿಗೆಯ ಸಂಪ್ರದಾಯಗಳಿವೆ. ಮೊದಲನೆಯದು ವಿವಿಧ ಸಿದ್ಧಾಂತಗಳನ್ನು ಅನ್ವಯಿಸಿ, ಪಾರಿಭಾಷಿಕ ಪದಗಳ ಮೂಲಕ ತುಂಬಾ ಗಂಭೀರವಾದ ಗದ್ಯದಲ್ಲಿ ವಿಮರ್ಶೆ ಬರೆಯುವುದು. ಈ ಬರವಣಿಗೆ ಕೇವಲ ವೃತ್ತಿಪರ ವಿಮರ್ಶಕರಿಗೆ ಮಾತ್ರ ಸಂವಹನ ಸಾಧಿಸುತ್ತದೆ.

ಇನ್ನೊಂದು ಬಗೆಯ ಸಾಂಸ್ಕೃತಿಕ ವಿಮರ್ಶಾ ಬರವಣಿಗೆ ಎಂದರೆ ತಾನು ಮತ್ತು ತನ್ನ ಓದುಗ ಇಬ್ಬರೂ ಸಮಾನರು ಎಂದು ಭಾವಿಸಿ ಕೃತಿಯನ್ನು ಎದುರುಗೊಳ್ಳುತ್ತಾರೆ. ಮೇಲುನೋಟಕ್ಕೆ ಕ್ಲಿಷ್ಟವೆಂದು ಕಾಣಿಸುವ ವಿಷಯಗಳನ್ನೂ ಸರಳವಾಗಿ ವಿವರಿಸಲಿಕ್ಕೆ ಸಾಧ್ಯವೆಂದು ಭಾವಿಸಿ ಬರೆಯುವಂಥವರು. ಇವರ ಪ್ರಕಾರ ಯಾವುದೇ ಕೃತಿಯೊಂದರ ಬಗ್ಗೆ ಬರೆಯುವಾಗಲೂ ಅವರು ಆ ಕೃತಿಯ ಕಥೆಯನ್ನು ಮತ್ತೊಮ್ಮೆ ಸಂಕ್ಷಿಪ್ತವಾಗಿ ಹೇಳುತ್ತಾ ಹೋಗುತ್ತಾರೆ. ಅಗತ್ಯವಿದ್ದೆಡೆ ಕೃತಿಯಿಂದ ದೀರ್ಘ ಉಲ್ಲೇಖಗಳನ್ನೂ ಮಡುತ್ತಾರೆ. ಹೀಗೆ ಮಾಡುವುದರಿಂದ ಆಗುವ ಅನುಕೂಲಗಳೆಂದರೆ ವ್ಯಾಪಕ ಓದಿನ ಹಿನ್ನೆಲೆಯಿಲ್ಲದ ಓದುಗನೂ ಕೂಡ ಇಂತಹ ಬರವಣಿಗೆಯನ್ನು ಆಪ್ತವಾಗಿ ಓದುಬಲ್ಲ. ಜೊತೆಗೆ ಇಂತಹ ವಿಮರ್ಶಾ ಬರವಣಿಗೆಗಳು ಓದುಗನಲ್ಲಿ ವಿಮರ್ಶಕನಿಗೆ ಸಮಾನವಾದ ಸಂವೇದನೆಯನ್ನು ಗುರುತಿಸಲು ಪ್ರಚೋದಿಸಲು ಸಾಧ್ಯವಾಗುತ್ತದೆ.

ಇತ್ತೀಚೆಗೆ ಪ್ರಕಟಗೊಳ್ಳುತ್ತಿರುವ ಕವನಸಂಗ್ರಹಗಳೂ ಸೇರಿದಂತೆ ಆಧುನಿಕ ಕಾವ್ಯದ ಮೇಲೆ ಸಾಂಸ್ಕೃತಿಕ ವಿಮರ್ಶೆಯು ಗಂಭೀರವಾದ ಚರ್ಚೆ ನಡೆಸುತ್ತಿದೆ. ಹೊಸ ಕವಿಗಳ ಕವಿತೆಗಳನ್ನು ಬೇಂದ್ರೆ, ಅಡಿಗ ಮೊದಲಾದ ಕನ್ನಡದ ಮುಖ್ಯ ಕವಿಕಾವ್ಯ ಪರಂಪರೆಯಲ್ಲಿಟ್ಟು ಅಭ್ಯಾಸ ಮಾಡುತ್ತಿರುವುದರಿಂದ ಕಳೆದ ದಶಕದಲ್ಲಿ ಕನ್ನಡ ಕಾವ್ಯದ ಮೇಲೆ ಗಂಭೀರ ವಿಮರ್ಶೆ ಬಂದಿರುವುದನ್ನು ಕಾಣಬಹುದು. ಕೆ. ವೈ. ನಾರಾಯಣಸ್ವಾಮಿ, ಸಿರಾಜ್ ಅಹಮದ್, ಎಚ್. ಎಸ್. ರಾಘವೇಂದ್ರ ರಾವ್, ಆರ್. ಸುಧೀಂದ್ರ ಕುಮಾರ್, ರಾಮಲಿಂಗಪ್ಪ ಟಿ. ಬೇಗೂರ್ ಮೊದಲಾದವರನ್ನು ಈ ಮಾರ್ಗದ ಮುಖ್ಯ ವಿಮರ್ಶಕರಾಗಿ ನೋಡಬಹುದು. ಹಾಗೆಯೆ ಇದರ ಮುಂದುವರೆದ ರೂಪವಾಗಿ ಕನ್ನಡದ ಶ್ರೇಷ್ಠ ಕತೆಗಳು, ಕಾದಂಬರಿಗಳು ಕಳೆದ ದಶಕದಲ್ಲಿ ರಂಗರೂಪವನ್ನು ಧರಿಸಿ ಯಶಸ್ವಿಯಾಗಿ ಪ್ರದರ್ಶನಗೊಂಡವು. ಪಂಪಭಾರತವೂ ಕೂಡಾ ನಾಟಕವಾಗಿ ರಂಗದ ಮೇಲೆ ಬಂದಿತು. ಇದರ ಜೊತೆಗೆ ಕುವೆಂಪು, ಕಾರ್ನಾಡ ಮೊದಲಾದ ಕನ್ನಡದ ಮುಖ್ಯ ನಾಟಕಕಾರರ ನಾಟಕಗಳ ಮೇಲೆ ಗಂಭೀರವಾದ ಅಧ್ಯಯನಗಳು ನಡೆದಿವೆ.

ಇಪ್ಪತ್ತೊಂದನೇ ಶತಮಾನದ ಕನ್ನಡದ ಸಾಂಸ್ಕೃತಿಕ ವಿಮರ್ಶೆಯಲ್ಲಿ ಎರಡು ಗಂಭೀರ ಲಕ್ಷಣಗಳಿವೆ. ಮೊದಲಿನಿಂದಲೂ ಎಲ್ಲಾ ವಿಷಯಗಳಲ್ಲಿ ಪಶ್ಚಿಮಕ್ಕೆ ಮುಖಮಾಡಿದ್ದ ನಾವು ವಿಮರ್ಶೆಗೂ–ಪಶ್ಚಿಮದ ಸ್ಟ್ರಕ್ಚರಲಿಸ್ಟರಿಂದ ಪ್ರೇರಣೆ ಪಡೆಯಲಾಯಿತು. ಇದರಿಂದಾಗಿ ಸಾಹಿತ್ಯ ವಿಮರ್ಶೆಯು ತನ್ನ 'ಮುಗ್ಧತೆ'ಯನ್ನು ಕಳೆದುಕೊಂಡು ಥಿಯರಿಯ ಕಡೆಗೆ ಮುಖಮಾಡಿದ್ದು ನಮಗೆಲ್ಲ ಗೊತ್ತಿದೆ. ಅದಕ್ಕೆ ಸಂವಾದಿಯೆನ್ನಬಹುದಾದ ಬೆಳವಣಿಗೆಯು ೧೯೯೦ರ ಬಳಿಕ ಜಾಗತೀಕರಣಗೊಂಡ ಭಾರತದಲ್ಲಿಯೂ ಆಗತೊಡಗಿತು. ಇದರಿಂದಾಗಿ ಸಾಹಿತ್ಯ ವಿಮರ್ಶಕರು ತಮ್ಮ ಬರವಣಿಗೆಯ ಆಕರ್ಷಕ ಪ್ರಬಂಧಗುಣವನ್ನು ಕಳೆದುಕೊಂಡು ಅರ್ಥವಾಗಲು ತಿಣುಕಾಡಬೇಕಾಯಿತು. ಆದರೆ ಈ ಲಕ್ಷಣ ಎಲ್ಲಾ ಕಡೆ ಏಕರೀತಿಯಲ್ಲಿ ಪ್ರಕಟಗೊಂಡಿಲ್ಲ.

ಡಿ. ಆರ್. ನಾಗರಾಜ್, ರಹಮತ್ ತರೀಕೆರೆ, ರಾಜೇಂದ್ರ ಚೆನ್ನಿ ಮೊದಲಾದವರು ವಸಾಹತೋತ್ತರ ಚಿಂತನೆಗಳಿಗೆ ಕನ್ನಡದಲ್ಲಿ ತೀವ್ರವಾಗಿ ಪ್ರತಿಕ್ರಿಯಿಸಿದರು. ತೃತೀಯ ಜಗತ್ತಿನ ದೇಶಗಳ ಸಂಸ್ಕೃತಿ ಮೇಲೆ ಪಶ್ಚಿಮ ತನ್ನ ಯಜಮಾನಿಕೆ ಸ್ಥಾಪಿಸಿರುವುದರ ವಿರುದ್ಧ ವಿಸ್ಮೃತಿ ಪರಿಕಲ್ಪನೆಯೊಂದಿಗೆ ಕನ್ನಡದಲ್ಲಿ ನಿರ್ವಸಾಹತೀಕರಣ ವಿಮರ್ಶೆಯನ್ನು ಡಿ. ಆರ್. ಎನ್. ಅವರು ಚಾಲನೆಗೆ ತಂದರು. ಅಕ್ಷರ ಚಿಂತನದ ಮೂಲಕ ದೇಶಿ ಜ್ಞಾನದ ಮೂಲಗಳನ್ನು ಶೋಧಿಸುವ ಪ್ರಯತ್ನ ಮಾಡಿದ ಅವರು "ಸಮಾಜಗಳಿಗೆ ವಿಚಿತ್ರ ರೀತಿಯ ಮರೆವು ಆವರಿಸುತ್ತದೆ. ಅದರಲ್ಲೂ ತಾನು ಚಿಂತಿಸುತ್ತಿದ್ದ, ಪ್ರತಿಕ್ರಿಯಿಸುತ್ತಿದ್ದ, ಭಾವಿಸುತ್ತಿದ್ದ ಕ್ರಮಗಳು ಮರೆತು ಹೋಗುವುದು ದೊಡ್ಡ ದುರಂತವೇ ಸರಿ. ವಸಾಹತುಶಾಹಿ ಅನಂತರದ ಭಾರತೀಯ ಸಮಾಜಕ್ಕೆ ಈ ರೀತಿಯ ವಿಸ್ಮೃತಿ ಈಗ ಆವರಿಸಿಬಿಟ್ಟಿದೆ. ನಮ್ಮ ಸಮಾಜದೊಳಗೆ ಅಂತರ್ಗತವಾಗಿದ್ದ ವೈವಿಧ್ಯಮಯ ವೈಚಾರಿಕ ರಚನೆಗಳು ಮರೆತು ಹೋಗಿರುವುದರಿಂದ ಈಗ ಲಭ್ಯವಿರುವ ಚಿಂತನಕ್ರಮಗಳು ಪೂರ್ಣವಾಗಿ

ಪಶ್ಚಿಮಮುಖಿಯಾಗಿಬಿಟ್ಟಿವೆ. ನಮ್ಮನ್ನು ಕಾಡುತ್ತಿರುವ ಜಿಕ್ಕಟ್ಟುಗಳನ್ನು ಅವುಗಳ ಮೂಲಕ ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈಗ ಪ್ರತಿಷ್ಠಿತವಾಗಿರುವ, ಅಧಿಕಾರಸ್ಥವಾಗಿರುವ, ಬಲಿಷ್ಠವಾಗಿರುವ ಚಿಂತನಕ್ರಮಗಳಿಗಿಂತ ಬೇರೆಯದನ್ನು ಹುಡುಕುವ"[೨೮] ಪ್ರಯತ್ನವನ್ನು ಮಾಡಿದರು. ಆದರೆ ನಾಗರಾಜರ ಈ ಆಲೋಚನೆ ಕೂಡಾ ಪಶ್ಚಿಮದ ಆಧುನಿಕೋತ್ತರ ಚಿಂತನೆಗಳಿಂದ ಪ್ರಭಾವಿತವಾದದ್ದು ಎಂಬುದನ್ನು ಮರೆಯುವಂತಿಲ್ಲ. ಆದರೆ ಇವರ ಚಿಂತನೆಯಿಂದ ಉತ್ತೇಜನಗೊಂಡ ಕೆ. ವಿ. ಅಕ್ಷರ, ಮನು ಚಕ್ರವರ್ತಿ. ರಾಜಾರಾಮ ಹೆಗಡೆ ಮೊದಲಾದವರು ಈ ಹಿನ್ನೆಲೆಯ ವಿಮರ್ಶೆಯಲ್ಲಿ ತೊಡಗಿದ್ದಾರೆ.

ಕನ್ನಡ ಸಾಹಿತ್ಯ ಇತಿಹಾಸದಲ್ಲಿ ೧೯೮೦ರ ದಶಕಕ್ಕೂ ಮುಂಚೆ ಕೆಲವು ಮುಸ್ಲಿಂ ಬರಹಗಾರರಿದ್ದರೂ ಅವರು ಕೂಡ ಕನ್ನಡ ಸಾಹಿತ್ಯದ ಅಂದಿನ ಪ್ರಮುಖ ಚಳವಳಿಯೊಂದಿಗೆ ಒಂದಾಗಿಯೋ, ಸಹಮತ ಹೊಂದಿಯೊ ಇದ್ದು ಬಿಡುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ಕೆ. ಎಸ್. ನಿಸಾರ್ ಅಹಮದ್ ಮತ್ತು ಬಿ. ಎ. ಸನದಿ ಅವರನ್ನು ಹೆಸರಿಸಬಹುದು. ಬಂಡಾಯ ಸಾಹಿತ್ಯದ ಉಗಮದೊಂದಿಗೆ ಹಲವು ಮುಸ್ಲಿಂ ಸಾಹಿತಿಗಳು ಕನ್ನಡದಲ್ಲಿ ಕಥೆ ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದರು. ಇವರು ತಮ್ಮ ಧರ್ಮದೊಳಗಿನ ಆಗುಹೋಗುಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ವಿಮರ್ಶಿಸುತ್ತಾ, ಹಿಂದೂ ಮತ್ತು ಮುಸ್ಲಿಂ ಮೂಲಭೂತವಾದಿಗಳಿಂದಾಗುತ್ತಿರುವ ಅನಾಹುತಗಳನ್ನು ಎತ್ತಿ ಹೇಳುತ್ತಾ, ಹಿಂದೂ ರಾಷ್ಟ್ರೀಯತೆ, ಒಂದು ಅಲ್ಪಸಂಖ್ಯಾತ ಸಮುದಾಯದ ಮೇಲೆ ನಡೆಸಬಹುದಾದ ದೌರ್ಜನ್ಯಗಳನ್ನು ಎತ್ತಿ ತೋರಿಸುತ್ತಾರೆ. ಇದರಲ್ಲಿ ಬೊಳುವಾರು ಮಹಮ್ಮದ್ ಕುಂಞ, ಸಾರಾ ಅಬೂಬಕರ್, ಫಕೀರ್ ಮಹಮ್ಮದ್ ಕಟ್ಪಾಡಿ, ಭಾನುಮುಷ್ತಾಕ್, ಅಬ್ದುಲ್ ರಷೀದ್ ಮುಂತಾದವರು ಮುಖ್ಯರಾದವರು. ಈ ಎಲ್ಲ ಸಾಹಿತಿಗಳೂ ದಕ್ಷಿಣ ಕನ್ನಡ ಜಿಲ್ಲೆಯಿಂದ, ಸುತ್ತಮುತ್ತಲಿನಿಂದ, ಕೇರಳದಲ್ಲಿನ ಕಾಸರಗೋಡಿನಿಂದ ಬಂದವರು. ಅದ್ದರಿಂದ ಇವರಲ್ಲಿ ಆ ಧರ್ಮದ, ಕೇರಳದ, ತುಳುನಾಡಿನ ವಿಶಿಷ್ಟ ಸಂಸ್ಕೃತಿಗಳ ವಿಭಿನ್ನ ಸಮ್ಮಿಶ್ರಣಗಳು ಕಾಣಬರುತ್ತವೆ.

ಸಂಸ್ಕೃತಿ ತಳೆಯುವ ವಿಭಿನ್ನ ರೂಪ, ವಿವಿಧ ಗುರುತುಗಳ ಮೇಲೆ ಅದು ಬೀರುವ ಪರಿಣಾಮಗಳು, ಆ 'ಗುರುತಿನ' ಸಮುದಾಯ ಅದರೊಂದಿಗೆ ನಡೆಸುವ ಸಂವಾದ ಇವೆಲ್ಲವುಗಳೂ ಇಲ್ಲಿ ಪ್ರಖರವಾಗಿ ಎದ್ದು ಕಾಣುತ್ತದೆ. ಕೆ. ವಿ. ನಾರಾಯಣ ಅವರ 'ಇನ್ನು ಕನ್ನಡಿಗಳು ಸಾಕು', ಡಿ. ಎನ್. ಶಂಕರ ಬಟ್ ಅವರ 'ಕನ್ನಡಕ್ಕೆ ಬೇಕು ಕನ್ನಡದ್ದೆ ವ್ಯಾಕರಣ', ರಹಮತ್ ತರೀಕೆರೆಯವರ 'ಕನ್ನಡಕ್ಕೆ ಬೇಕು ಕನ್ನಡ ಕಾವ್ಯ ಮೀಮಾಂಸೆ' ಎಂಬ ಆಲೋಚನೆಗಳು ಕನ್ನಡ ಸಾಹಿತ್ಯವನ್ನು ವಿಮರ್ಶಿಸಲು ಕನ್ನಡದ್ದೇ ವಿಮರ್ಶಾ ಮಾನದಂಡಗಳನ್ನು ರೂಪಿಸಿಕೊಳ್ಳಲು ಯತ್ನಿಸಲಾಗಿದೆ.

ಸಾಂಸ್ಕೃತಿಕ ವಿಮರ್ಶೆಯು ದಲಿತ – ಬಂಡಾಯ ಸಾಹಿತ್ಯದ ಅಬ್ಬರವಿದ್ದಾಗ ರೂಪಿಸಿಕೊಂಡ ಲಕ್ಷಣಗಳನ್ನು ಇಲ್ಲಿ ಪರಿಶೀಲಿಸಬಹುದು. ೧೯೮೦ರ ದಶಕದ ಕೊನೆಯ

ಭಾಗದವರೆಗೆ ವ್ಯಕ್ತ ರಾಜಕೀಯ ನಿಲುವಿನ ಸಾಹಿತ್ಯ ಬಂಡಾಯ, ದಲಿತ ಸಾಹಿತಿಗಳಿಂದ ಸೃಷ್ಟಿಯಾಯಿತು. ಆದರೆ ೧೯೮೦ರ ದಶಕದ ಮೊದಲ ಭಾಗದಲ್ಲಿ ಪ್ರಾರಂಭವಾದ ಗೋಕಾಕ್ ಚಳವಳಿ ನಂತರದ ವಿಶ್ವಕನ್ನಡ ಸಮ್ಮೇಳನಗಳು ಕನ್ನಡ ಚಳವಳಿಯನ್ನು ಪ್ರಬಲವಾಗಿ ಹುಟ್ಟುಹಾಕಿದವು. ಕನ್ನಡ ಚಳವಳಿ ಪ್ರಬಲವಾಗುತ್ತಿದ್ದಂತೆ ಬಂಡಾಯ ಸಾಹಿತಿಗಳನೇಕರು ಹಿಂದುಳಿದ ದಲಿತರ ಮಾತು ಬಿಟ್ಟು, ಕನ್ನಡಿಗರನ್ನು ಕುರಿತು ಮಾತನಾಡಲಾರಂಭಿಸಿದರು. ಕನ್ನಡದ ರಾಜಕಾರಣ, ಹಿಂದುಳಿದ ವರ್ಗ ಮತ್ತು ದಲಿತರ ರಾಜಕಾರಣ ಒಂದೇ ಎನ್ನುವಂಥ ವಾತಾವರಣ ಇಂದು ನಿರ್ಮಾಣವಾಗಿದೆ.

ಇದರೊಂದಿಗೆ ೧೯೮೦ರ ದಶಕದ ಕೊನೆಯ ಭಾಗದಲ್ಲಿ ಕನ್ನಡ ಪ್ರವೇಶಿಸಿದ ದೇಶಿವಾದ ಇಂದು ಸರ್ವವ್ಯಾಪಿಯಾಗಿದೆ. ಬಂಡಾಯ ಸಾಹಿತಿಗಳು, ದಲಿತ ಸಾಹಿತಿಗಳು, ಕನ್ನಡ ಚಳವಳಿಗಾರರು ಎಲ್ಲರೂ ದೇಶಿ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ದೇಶಿವಾದ ಆಧುನಿಕತೆಯ ಸಂದರ್ಭದಲ್ಲಿ ಆಧುನಿಕತೆಯನ್ನು ವಸಾಹತುಶಾಹಿ ಜೊತೆ ಸಮೀಕರಿಸಿ 'ಕೆಟ್ಟದು' ಎಂಬ ಹಣೆಪಟ್ಟಿ ಹಚ್ಚುತ್ತದೆ. ಆಧುನಿಕಪೂರ್ವ ಒಂದನ್ನು ಇಂದು ಕಲ್ಪಿಸಿಕೊಂಡು ಅದು ಸಕಲ ಸಮಸ್ಯೆಗಳಿಗೂ ಮದ್ದು ಎಂದು ನಂಬಲಾಗುತ್ತದೆ. ಇಂದು ದಲಿತ ರಾಜಕಾರಣ, ಮಹಿಳಾ ರಾಜಕಾರಣ, ಹಿಂದುಳಿದ ವರ್ಗಗಳ ರಾಜಕಾರಣ ದೇಶಿವಾದದ ತೆಕ್ಕೆಯಲ್ಲಿ ಕೂತು ಸ್ಥಳೀಯ ಸಂಸ್ಕೃತಿ, ಉಪಸಂಸ್ಕೃತಿ, ಪರ್ಯಾಯ ಸಂಸ್ಕೃತಿ, ದೇಶಿ ಸಂಸ್ಕೃತಿ, ಕಿರು ಸಂಸ್ಕೃತಿ, ಪ್ರತಿ ಸಂಸ್ಕೃತಿ, ಅವೈದಿಕ ಸಂಸ್ಕೃತಿ ಎಂಬ ನೆಲೆಯಲ್ಲಿ ನಿಂತು "ಸಂಸ್ಕೃತಿ" ವಾದವನ್ನು ಮಂಡಿಸುತ್ತಿವೆ. ಈ 'ಸಂಸ್ಕೃತಿ'ಯ ಪರಿಕಲ್ಪನೆ ಹಿಂದೆ ಹೇಳಿದಂತೆ ಆಧುನಿಕತೆಗೆ ವಿರೋಧಿಯಾದ 'ಆಧುನಿಕಪೂರ್ವ' ಎಂದು ಕರೆಯಲ್ಪಡುವ ಒಂದು ರಚನೆ.

ಬಡತನ, ಹಸಿವು, ಅಸಮಾನತೆ, ದೌರ್ಜನ್ಯಗಳಂತಹ ಪ್ರಶ್ನೆಗಳನ್ನೆತ್ತಿಕೊಂಡು ಆಧುನಿಕ ಶಿಕ್ಷಣ ಪಡೆದ (ಮೊಟ್ಟಮೊದಲ ಬಾರಿಗೆ) ಹಿಂದುಳಿದ, ದಲಿತ ವರ್ಗಗಳು ಆಧುನಿಕ ಚೌಕಟ್ಟಿನಲ್ಲಿ ಪ್ರಭುತ್ವದ ಮೇಲೆ ತಮ್ಮ ನ್ಯಾಯಯುತ ಪಾಲನ್ನು ನೀಡಲು ಒತ್ತಾಯಿಸಿ ಚಳವಳಿ ನಡೆಸಿದವು. ಈ ಆಶಯಗಳು ಅವರ ಸಾಹಿತ್ಯ ರಚನೆಯಲ್ಲೂ ಮೂಡಿದವು. ಆದರೆ ದೇಶಿವಾದ ಕನ್ನಡದ ಸಂದರ್ಭದಲ್ಲಿ ಸರ್ವವ್ಯಾಪಿಯಾದಂತೆ ಈ ಪ್ರಶ್ನೆಗಳು ಹಿಂದೆ ಸರಿದು 'ಅನನ್ಯತೆ', 'ಸಾಂಸ್ಕೃತಿಕ ಅಸ್ತಿತ್ವ', 'ಒಳದಾರಿ' ಮುಂತಾದ ಪರಿಕಲ್ಪನೆಗಳು ಹುಟ್ಟಿದವು. ಪ್ರಾದೇಶಿಕ ಅನನ್ಯತೆ ಅಥವಾ ಜಾತಿ ಅನನ್ಯತೆಯನ್ನು ಸೂಚಿಸಲು ಅನುವಾಗುವ ಪ್ರಾದೇಶಿಕ ಜಾತಿ ಆಚರಣೆಗಳ ವಿವರಗಳು ಸಾಹಿತ್ಯದಲ್ಲಿ (ಮುಖ್ಯವಾಗಿ ಕಥಾಸಾಹಿತ್ಯದಲ್ಲಿ) ಎದ್ದು ಕಾಣತೊಡಗಿದವು. ಆ ಕಥಾಸಾಹಿತ್ಯ ಮಾನವಶಾಸ್ತ್ರೀಯ ವಿವರಗಳನ್ನು ಕೊಡುವ, ಆ ಮೂಲಕ ಆ ಸಂಸ್ಕೃತಿಯ ಅನನ್ಯತೆ ಕಟ್ಟಿಕೊಳ್ಳುವ ಬರವಣಿಗೆಗಳಾಗಿವೆ ಎಂಬುದನ್ನು ಕನ್ನಡ ವಿಮರ್ಶೆ ಗುರುತಿಸಿದೆ.

ಸ್ವತಂತ್ರ ನಂತರದ ಭಾರತದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದಿಂದ ಅಕ್ಷರ ಪಡೆದ ಮೊದಲ ತಲಮಾರು ಸ್ಥಾಪಿಸಿದ ಸಂಘಟನೆಯೇ ಬಂಡಾಯ ಸಾಹಿತ್ಯ ಸಂಘಟನೆ. "ಖಡ್ಗವಾಗಲಿ ಕಾವ್ಯ: ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಅಂದರೆ ಸಾಹಿತ್ಯ

ಸಮಾಜಕ್ಕಾಗಿ ಎಂದು ತಿಳಿದು ಸಾಮಾಜಿಕ ನ್ಯಾಯಕ್ಕಾಗಿ ಸಾಹಿತ್ಯ ಬಳಸಿಕೊಳ್ಳಲು ಈ ಸಂಘಟನೆ ತೊಡಗಿತು. ಹೊಸ ಶತಮಾನ/ಇಪ್ಪತ್ತೊಂದನೇ ಶತಮಾನ ಜಗತ್ತನ್ನು ಬಹಳ ವೇಗದಲ್ಲಿ ಕೊಂಡೊಯ್ಯುತ್ತಿದೆ. ಮನುಷ್ಯ ಸಂಬಂಧಗಳೂ ಸೇರಿದಂತೆ ಮಾನವ ಜಗತ್ತು ಬಹು ಕಡಿಮೆ ಅವಧಿಯಲ್ಲಿ ಬಹಳ ಅಗಾಧವಾದ ಬದಲಾವಣೆಗಳಿಗೆ ಮುಖಾಮುಖಿಯಾಗುತ್ತಿದೆ. ಹಾಗೆಯೆ ಭಾರತದಂಥ ದೇಶದಲ್ಲಿ ಸಾಹಿತ್ಯ ಕೇವಲ ಮನೋರಂಜನೆಯ ಒಂದು ರೂಪವಾಗಿ ಉಳಿದಿಲ್ಲ; ಬದಲಿಗೆ ಜ್ಞಾನ ಮತ್ತು ಅಧಿಕಾರದ ರೂಪವಾಗಿ ಅದು ಬಳಕೆಯಾಗುತಿದೆ.

ಒಂದು ರೀತಿಯಲ್ಲಿ ಇಂದಿನ ವಿಮರ್ಶೆ 'ಕಣ್ಣಿ ಕಿತ್ತ ಕರು'ವಿನಂತಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಯಾವುದಾದರೊಂದು ಸಿದ್ಧಾಂತಕ್ಕೆ ಕಟ್ಟುಬಿದ್ದು ವಿಮರ್ಶೆ ರಚಿಸುವ ಪ್ರವೃತ್ತಿ ಕಡಿಮೆಯಾಗುತ್ತಿದೆ ಅಥವಾ ಇಲ್ಲವಾಗುತ್ತಿದೆ. ಉದಾಹರಣೆಗೆ ಆರಂಭದಲ್ಲಿ ಮಾರ್ಕ್ಸವಾದಿ ವಿಮರ್ಶಕರಾಗಿದ್ದ ಯು. ಆರ್. ಅನಂತಮೂರ್ತಿಯವರು ತಮ್ಮ ಇತ್ತೀಚಿನ ಕೃತಿಗಳಲ್ಲಿ (ಅವುಗಳೆಲ್ಲಾ ಅವರ ಭಾಷಣದ ಸಂಗ್ರಹಗಳಾಗಿವೆ) ಸಾಹಿತ್ಯವನ್ನಷ್ಟೇ ಗಂಭೀರವಾಗಿ ಗ್ರಹಿಸಿ ವಿಮರ್ಶಿಸದೆ ಏಕಕಾಲಕ್ಕೆ ಸಾಹಿತ್ಯ, ಸಂಸ್ಕೃತಿ, ರಾಜಕೀಯ, ಧರ್ಮ, ಶಿಕ್ಷಣ, ಮಾಧ್ಯಮ ಮೊದಲಾದ ಹಲವಾರು ವಿಚಾರಗಳಿಗೆ ಒಟ್ಟಿಗೆ ಪ್ರತಿಕಿಯಿಸಿರುವುದನ್ನು ನಾವು ವಿಮರ್ಶೆಯೆಂದೇ ಪರಿಗಣಿಸ ಬೇಕಾಗುತ್ತದೆ. ಈ ದೃಷ್ಟಿಯಿಂದಲೇ ಇವತ್ತಿನ ಸಾಹಿತ್ಯ ವಿಮರ್ಶೆ ಹಿಂದೆಂದಿಗಿಂತ ಹೆಚ್ಚು ಸಂಕೀರ್ಣ ಸ್ವರೂಪದ್ದಾಗಿದೆ.

ಇವತ್ತಿನ ಸಾಹಿತ್ಯ ವಿಮರ್ಶೆಯ ವೈವಿಧ್ಯತೆಗೆ ಮತ್ತೊಂದಿಷ್ಟು ಕಾರಣಗಳನ್ನು ಕಂಡುಕೊಳ್ಳುವುದಾದರೆ ತೇಜಸ್ವಿಯವರು ತಮ್ಮ ಮಾಯಾಲೋಕ ಕಾದಂಬರಿಯ ಪಾತ್ರವೊಂದರ ಮುಖಾಂತರ ಹೇಳಿಸುವಂತೆ "ಮುಂದುವರಿದ ರಾಷ್ಟ್ರವಾಗಬೇಕೆಂಬ ನಾಗಾಲೋಟದ ಸ್ಪರ್ಧೆಗಿಳಿದಿರುವ ಭಾರತವು ಮೇಲ್ನೈಗೆ ತಣ್ಣಗೆ ನಿದ್ರಿಸುತ್ತಿರುವಂತೆ ಕಂಡರೂ ಒಳಹೊಕ್ಕು ನೋಡಿದರೆ ಭಯಂಕರ ಅಲ್ಲೋಲಕಲ್ಲೋಲದ ಹೆದ್ದೆರೆಗಳ ಮೇಲೆ ತುಯ್ದಾಡುತ್ತಿರುವುದು ಕಾಣುತ್ತದೆ... ಇಲ್ಲದಿದ್ದರೆ ನಿಮ್ಮೊಂದು ವಾರದ ದಿನಚರಿಯಲ್ಲಿ ಒಂದು ಬ್ರಹತ್ ಕಾದಂಬರಿಗಾಗುವಷ್ಟು ಘಟನಾವಳಿಗಳೂ ಗೊಂದಲಗಳೂ ಕಿಕ್ಕಿರುವುದಕ್ಕೆ ನೀವು ಇನ್ನೇನು ತಾನೆ ವಿವರಣೆ ನೀಡಬಲ್ಲಿರಿ?"[೨೫] ಎನ್ನುವಂತೆ ಇಪ್ಪತ್ತೊಂದನೆ ಶತಮಾನವೆಂದರೆ ಜ್ಞಾನ-ವಿಜ್ಞಾನ-ತಂತ್ರಜ್ಞಾನದ ಸಮೃದ್ಧಿಯ ಕಾಲ. ಜಾಗತೀಕರಣದಿಂದ ಹಣಕಾಸಿನ ಹರಿವು ಹೆಚ್ಚಾಗಿದ್ದರೆ, ಮಾಹಿತಿ ತಂತ್ರಜ್ಞಾನ ಜನರ ನಡುವಿನ ಅಂತರವನ್ನು ಕಡಿಮೆ ಮಾಡಿದೆ.

ಹಾಗೆಯೆ ವಿಪರೀತವೆನಿಸಿರುವ ಪ್ರಸಾರ ಮಾಧ್ಯಮಗಳು ಸಾಮಾಜಿಕ ಜೀವನದ ಮೇಲೆ ಬೀರುತ್ತಿರುವ ಪ್ರಭಾವಗಳಿಂದ ಹಳ್ಳಿ ಹಾಗೂ ಗ್ರಾಮಗಳ ನಡುವಿನ ವ್ಯತ್ಯಾಸ ಅಳಿಸಿ ಹೋಗುತ್ತಿದ್ದು ಶಾಪಿಂಗ್ ಮಾಲ್, ಕಾರ್ಪೋರೇಟ್ ಕಂಪನಿಗಳ ಜಾಲಗಳಿಂದ ಹೊಸ ರೀತಿಯ ಸಂಸ್ಕೃತಿಯೊಂದು ವಿಕಸಿತವಾಗುತ್ತಿದೆ. ಮತ್ತೊಂದೆಡೆ ಕೃಷಿಯನ್ನೇ ಬೆನ್ನೆಲುಬಾಗಿ ಹೊಂದಿದ್ದ ದೇಶದಲ್ಲಿ ಮರಳಿ ಬಳಸಲಾಗದ ಬೀಜಗಳು, ಸಂಪೂರ್ಣ

ಯಾಂತ್ರೀಕರಣಗೊಂಡ ಕೃಷಿ, ಹೆಚ್ಚಾಗುತ್ತಿರುವ ಜಲಾಶಯಗಳು, ರಾಷ್ಟ್ರೀಯ ಉದ್ಯಾನವನಗಳು, ಗ್ರಾಮೀಣ ಪ್ರದೇಶದಲ್ಲಿ ಹೆಚ್ಚುತ್ತಿರುವ ಸಾರಿಗೆ ಸಂಪರ್ಕ, ಸಮಾನತೆಯ ಆಶಯಗಳನ್ನು ನುಚ್ಚುನೂರು ಮಾಡಿರುವ 'ಆರ್ಥಿಕ ಪ್ರಗತಿ'ಯ ಬಿಸಿಲುಗುದುರೆ, ಜಾತೀಯತೆಯ ಹುದುಲಿನಲ್ಲಿ ತನ್ನ ನಿಜದ ನೆಲೆಗಳನ್ನು ಕಳೆದುಕೊಳ್ಳುತ್ತಿರುವ ಸಾಮಾಜಿಕ ನ್ಯಾಯದ ತಿಳಿವಳಿಕೆ, 'ಲಾಭ'ವನ್ನೆ ಗುರಿಯಾಗಿಟ್ಟುಕೊಂಡು ಉಳಿದೆಲ್ಲವನ್ನೂ ಕಳೆದುಕೊಳ್ಳುತ್ತಿರುವ ಶಿಕ್ಷಣ, ವ್ಯಾಪರೀಕರಣದಲ್ಲಿ ತೇಲಿ ಮುಳುಗುತ್ತಿರುವ ಮಾಧ್ಯಮಗಳಿಂದಾಗಿ ಜಗತ್ತು ಹತ್ತಿರವಾಗುತ್ತಿದ್ದು ಮನುಷ್ಯ ದೂರವಾಗುತ್ತಿದ್ದಾನೆ. ಇವುಗಳ ಜೊತೆಗೆ ಇವತ್ತಿನ ಸಮಾಜದಲ್ಲಿರುವ ಒತ್ತಡದ ಬದುಕು, ಉದ್ವಿಗ್ನತೆ, ಧರ್ಮ ಮತ್ತು ಜಾತಿಯನ್ನು ಕೇಂದ್ರಸ್ಥಾನದಲ್ಲಿಟ್ಟು ನಡೆಸುವ ಹುನ್ನಾರಗಳು, ಪ್ರಜಾಪ್ರಭುತ್ವದ ಸರ್ಕಾರದಲ್ಲಿಯೆ ಸೌಲಭ್ಯಗಳಿಂದ ವಂಚಿತರಾಗಿರುವವರ ಕತ್ತಲೆಯ ಬದುಕು, ಕುರೂಪ ನಗ್ನ ವಾಸ್ತವ, ಕೋಮುದಂಗೆಯ ಉನ್ಮಾದ, ಇವುಗಳಿಂದ ಸಂವೇದನಾಶೀಲತೆಯ ಮೇಲಾದ ಪರಿಣಾಮ, ಭ್ರಷ್ಟ ರಾಜಕಾರಣಿಗಳು ಮಾಡಿದ ಪ್ರಜಾಪ್ರಭುತ್ವದ ವಿಕೃತೀಕರಣ ಇವೇ ಮೊದಲಾದವುಗಳಿಂದ ಆಘಾತಗೊಂಡು ನಿರ್ಮಾಣವಾಗುತ್ತಿರುವ ಸಾಹಿತ್ಯವನ್ನು ವಿಮರ್ಶಿಸಲು ಹೊಸ ರೀತಿಯ ವಿಮರ್ಶಾ ಮಾನದಂಡಗಳೇ ಬೇಕಾಗುತ್ತವೆ.

ಒಟ್ಟಿನಲ್ಲಿ, ಸಾಹಿತ್ಯದ ಓದು ಸಂಸ್ಕೃತಿ ವಿಮರ್ಶೆಯಾಗುವ ಪ್ರಕ್ರಿಯೆಯ ಹಿಂದೆ ಸ್ಥಳೀಯವಾದ ಮತ್ತು ಆಂತರಿಕ ಒತ್ತಡಗಳಿರುವಂತೆ ಜಾಗತಿಕವಾದ, ಬಾಹ್ಯವಾದ ಪ್ರೇರಣೆ ಮತ್ತು ಒತ್ತಡಗಳೆರಡೂ ಕೆಲಸ ಮಾಡಿರುವುದನ್ನು ಗಮನಿಸಬಹುದು. ಆಧುನಿಕೋತ್ತರ ಚಿಂತನೆಗಳು; ವಸಾಹತುಶಾಹಿ ಮತ್ತು ನವವಸಾಹತುಶಾಹಿಯ ದಾಳಿಗಳು; ಸಾಂಸ್ಕೃತಿಕ ವಿಮರ್ಶೆಗೆ ಒತ್ತಡಗಳನ್ನು ಮತ್ತು ಪ್ರೇರಣೆಗಳನ್ನು ನೀಡಿವೆ. ಆಂತರಿಕವಾಗಿ ಕೆಳವರ್ಗಗಳು, ದಲಿತರು, ಮಹಿಳೆಯರು, ಅಲ್ಪಸಂಖ್ಯಾತ ಸಮುದಾಯಗಳು ಶೈಕ್ಷಣಿಕ ವಲಯವನ್ನು ಪ್ರವೇಶಿಸಿದ ತರುವಾಯ ಈ ಸಮುದಾಯಗಳಿಗೆ ಹಳೆಯ ಚಿಂತನೆಗಳಿಂದ ಹೆಚ್ಚು ಪ್ರಯೋಜನವಿಲ್ಲವೆನಿಸಿತು. ಅಲ್ಲದೆ ಆ ಚಿಂತನೆಗಳಿಂದ ಸಮಾಜವನ್ನು ಅರಿಯಲು ಸಾಧ್ಯವಿಲ್ಲವೆನಿಸಿದಾಗ ಹೊಸ ಹೊಸ ಚಿಂತನೆಗಳಿಗೆ, ವಿಧಾನಗಳಿಗೆ ತುಡಿದಾಗ ಸಾಂಸ್ಕೃತಿಕ ವಿಮರ್ಶೆ ಸೂಕ್ತದಾರಿಯಾಗಿ ಕಾಣಿಸಿಕೊಂಡಿತು.

ಇವುಗಳ ಜೊತೆಗೆ ಸಾಹಿತ್ಯ ವಿಮರ್ಶೆಯಲ್ಲಿ ಕಾಲಕಾಲಕ್ಕೆ ಬದಲಾವಣೆಗಳಾಗುತ್ತಿರುತ್ತವೆ. ಹಾಗೆಯೇ ಸಾಂಸ್ಕೃತಿಕ ವಿಮರ್ಶೆಯಲ್ಲಿಯೂ ಸಹ. ವಿಮರ್ಶೆಯಲ್ಲಿ ಕಾಲಧರ್ಮವನ್ನು ಹೊರತುಪಡಿಸಿ ಕೇವಲ ಕಲಾತ್ಮಕವಾದ ನೆಲೆಗಳ ಪರಿಶೀಲನೆಯು, ಬಹುದೂರದ ನೋಟವನ್ನು ಕೊಡಲಾರದು. ಲೋಕದ ಅನುಭವವು, ಮನಸ್ಸಿನ ಒಳಗೆ ಹೋಗಿ, ಅಲ್ಲಿ ಮತ್ತೇನೋ ಆಗಿ ಹೊರಬರುವ ಪವಾಡವನ್ನು ವಿಮರ್ಶೆಯು ಸರಿಯಾಗಿ ಗ್ರಹಿಸಿ ಅಭಿವ್ಯಕ್ತಿಸಬೇಕಾದ ತುರ್ತಿನಲ್ಲಿದೆ. ಇದಕ್ಕಾಗಿ ಅದು ಮತ್ತೆ ಮತ್ತೆ ತನ್ನ ಹತ್ಯಾರಗಳನ್ನು ಸಿದ್ಧಡಿಸಿಕೊಳ್ಳಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇವತ್ತಿನ ಸಾಹಿತ್ಯದಲ್ಲಿ ಕೂಡಾ ಯಾವೊಂದು ಪಂಥವೂ ಪ್ರಧಾನವಾಗಿರದೆ ಎಲ್ಲವೂ ಏಕಕಾಲದಲ್ಲಿ

ಚಲಾವಣೆಗೊಳ್ಳುತ್ತಿವೆ. ಹಾಗೆಯೆ ವಿಮರ್ಶೆ ಕೂಡಾ ಯಾವೊಂದು ನಿರ್ದಿಷ್ಟ ಸಿದ್ಧಾಂತವನ್ನಿಟ್ಟುಕೊಂಡು ಇವತ್ತಿನ ಸಾಹಿತ್ಯವನ್ನು ಸಂಪೂರ್ಣವಾಗಿ ಗ್ರಹಿಸಲಾಗುತ್ತಿಲ್ಲ. ಆದ್ದರಿಂದಲೇ ಇವತ್ತಿನ ಕನ್ನಡ ಸಾಹಿತ್ಯ ವಿಮರ್ಶೆಯ ಸ್ವರೂಪ ಕೂಡಾ ದಿನದಿಂದ ದಿನಕ್ಕೆ ಬದಲಾವಣೆಗೊಳಗಾಗುತ್ತಿದೆ.

ಕನ್ನಡ ವಿಮರ್ಶೆಯನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ಹೊಸ ಪೀಳಿಗೆಯ ಬರಹಗಾರರಲ್ಲಿ ಆಧುನಿಕತೆ, ಪರಂಪರೆ, ಸಂಪ್ರದಾಯಗಳ ಬಗೆಗೆ ಗಂಭೀರವಾಗಿ ಯೋಚನೆ ಮಾಡುವ ಬೆಳವಣಿಗೆ ಇದೆ. ಜಗತ್ತಿನ ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳುತ್ತಲೇ ಕನ್ನಡದಲ್ಲಿ ತಮ್ಮ ಸಂವೇದನೆಯನ್ನು ರೂಪಿಸಿ ಅಭಿವ್ಯಕ್ತಿಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಜಯಂತ್ ಕಾಯ್ಕಿಣಿ, ವಿವೇಕ್ ಶಾನಭಾಗ್, ಮೊಗಳ್ಳಿ ಗಣೇಶ್, ವಸುದೇಂದ್ರ ಮೊದಲಾದವರು ಮೊದಲು ಜಾಗತೀಕರಣದ ಪರವಾಗಿದ್ದರೇನೋ ಎನಿಸುವಂತಿದ್ದರೂ, ಪ್ರಸ್ತುತ ಅದರಲ್ಲೇನೋ ಕೆಟ್ಟದಿದೆ ಎಂಬುದನ್ನು ಸ್ಪಷ್ಟವಾಗಿ ಗ್ರಹಿಸಿ ಅದರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಸಾಹಿತ್ಯ ಪಂಥ ಅಥವಾ ಚಳುವಳಿಗಳು ಒಂದು ಅನುಕೂಲಕ್ಕಾಗಿ ಮಾತ್ರ ಮಾಡಿಕೊಂಡ ಚೌಕಟ್ಟುಗಳಷ್ಟೇ. ನವ್ಯದಲ್ಲಿಯೇ ಹಲವಾರು ಭಿನ್ನತೆಗಳಿದ್ದವು. ಎಂದೂ, ಯಾವುದರಲ್ಲೂ ಏಕರೂಪತೆ ಇರಲಿಲ್ಲ. ಅದರಲ್ಲೂ ಇಂದಿನ ಕಾಲ ಅನೇಕ ಸ್ಥಿತ್ಯಂತರಗಳನ್ನು, ತವಕ ತಲ್ಲಣಗಳನ್ನು ಅಭಿವ್ಯಕ್ತಿಸುವ, ಪ್ರತಿನಿಧಿಸುವ, ವಿರೋಧಿಸುವ ಕಾಲ. ಇಂದಿನ ಕನ್ನಡದ ಮನಸ್ಸು ವಿರೋಧಾಭಾಸ, ವಿಪರ್ಯಾಸ, ದ್ವಂದ್ವ, ಪರಸ್ಪರ ವಿರೋಧಿ ನೆಲೆಗಳನ್ನು ಪ್ರತಿನಿಧಿಸುತ್ತಿದೆ. ಇದು ಕನ್ನಡದ ನಿಜವಾದ ಗುಣ ಕೂಡಾ. ಒಂದೇ ಸಿದ್ಧಾಂತ ಸರಿ ಎಂದು ಹೇಳದಿರುವಂತದ್ದು ಇದು.

ಇಂದು ಸಾಹಿತ್ಯ ಪಂಥಗಳಿಗೆ ಪ್ರೇರಕವಾಗಿದ್ದ ಚಳವಳಿಗಳ ಸ್ವರೂಪವೇ ಬದಲಾಗುತ್ತಿದ್ದು, ಅನೇಕ ಒಳಪದರುಗಳನ್ನು ಹುಟ್ಟಿಸಿಕೊಂಡಿವೆ. ಅದರಲ್ಲೂ ದಲಿತ ಚಳವಳಿಯ ಒಳಗೆನೇ ಹಲವು ಕವಲುಗಳು, ಒಳದಾರಿಗಳು ಮೂಡುತ್ತಿವೆ. ಅದರಲ್ಲಿ ಸಂಕುಚಿತವಾದ ಸಣ್ಣ ಪುಟ್ಟ ಒಳಜಗಳಗಳಿರಬಹುದಾದರೂ ಅದಕ್ಕಿಂತ ಮುಖ್ಯವಾಗಿ ಅಲ್ಲಿ ಪ್ರಾಮಾಣಿಕವಾಗಿಯೇ ಜಾತಿಗೆ ಸಂಬಂಧಪಟ್ಟಂತೆ, ಜಾಗತೀಕರಣ, ಒಳಮೀಸಲಾತಿ, ದಲಿತ ಆದಿಮ ಪ್ರಜ್ಞೆ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ತಾತ್ವಿಕ ಭಿನ್ನತೆಗಳಿವೆ. ದೇವನೂರು, ಸಿದ್ಧಲಿಂಗಯ್ಯ, ಕೋಟಗಾನಹಳ್ಳಿ ರಾಮಯ್ಯ, ಕೆ. ಬಿ. ಸಿದ್ದಯ್ಯ ಮುಂತಾದವರು ಇಂತಹ ತಾತ್ವಿಕ ಭಿನ್ನತೆಗಳನ್ನು ಗುರುತಿಸುತ್ತಿದ್ದಾರೆ.

ಸಾಂಸ್ಕೃತಿಕ ವಿಮರ್ಶೆ ಏಕೆ ಮುಖ್ಯವಾಗುತ್ತದೆಂದರೆ, ಸಾಂಸ್ಕೃತಿಕ ಜವಾಬ್ದಾರಿಯನ್ನು ಮರೆತ ವಿಮರ್ಶೆ ಕೇವಲ ಆಯಾ ಸಾಹಿತ್ಯಿಕ ಸಂದರ್ಭದ ಬಾಲಂಗೋಚಿ ಆಗುತ್ತದೆ. ವಿಮರ್ಶೆಯು ಸಾಮಾಜಿಕ ಮೌಲ್ಯಗಳಲ್ಲಿನ ಗತಿತಾರ್ಕಿಕತೆಯನ್ನು ಮತ್ತು ಚಲನಶೀಲತೆಯನ್ನು ಒಳಗೊಳ್ಳದೆ ಹೋದಾಗಲೇ, ಅದು ಹೆಚ್ಚು ಹೆಚ್ಚಾಗಿ ಕಲಾವಂತಿಕೆ, ತಂತ್ರಶೀಲತೆ ಮೊದಲಾದ ಸಾಹಿತ್ಯದ ಹೊರ ಸ್ವರೂಪದ

ಮೇಲೆ ಮುತುವರ್ಜಿ ವಹಿಸುತ್ತಾ ಹೋಗುತ್ತದೆ. ಇಂತಹ ರೂಪನಿಷ್ಠ ವಿಮರ್ಶೆಗೆ ಮೂಲತ: ಸಮಾಜ ಪರಿವರ್ತನೆಯ ಜವಾಬ್ದಾರಿ ಇರುವುದಿಲ್ಲ. ನಮ್ಮಲ್ಲಿ ಎರಡು ದಶಕದಿಂದ ಬಂದ ವಿಮರ್ಶೆ ಇಂಥ ಆಪಾದನೆಗೆ ಈಡಾಗಿದೆ. ಆದ್ದರಿಂದ ಹೊಸ ವಿಮರ್ಶೆಯು ಸಾಮಾಜಿಕ ಮತ್ತು ಸಾಹಿತ್ಯಿಕ ಮೌಲ್ಯಗಳನ್ನು ಗತಿತಾರ್ಕಿಕ ನಿಟ್ಟಿನಲ್ಲಿ ನಿಂತು, ಅವುಗಳ ಒಳಸಂಬಂಧವನ್ನು ಗ್ರಹಿಸಿಕೊಳ್ಳಬೇಕಾಗಿದೆ. ಇಂಥ ನೆಲೆಯಲ್ಲಿ ನಿಂತಾಗ ಪರಂಪರೆಯ ಕೆಲವು ಹಿಮ್ಮುಖ ಶಕ್ತಿಗಳು ಸವಾಲಾಗಿ ನಿಲ್ಲಬಹುದು ಅಥವಾ ಬೇರೆ ಅಂಗಿತೊಟ್ಟು ಬರಬಹುದು. ಇಲ್ಲವೆ ಶಾಮೀಲಾಗಿ ಬಿಡಬಹುದು. ಇವುಗಳನ್ನು ಎದುರಿಸಿ ನಿಲ್ಲುವಂಥ ವಿಮರ್ಶೆಗೆ ಒಂದು ತಾತ್ವಿಕ ನೆಲೆಗಟ್ಟು ಇರಬೇಕಾಗುತ್ತದೆ. ಅಲ್ಲದೆ ಅಂತಹ ಸವಾಲುಗಳಿಗೆ ಮುಖಾಮುಖಿಯಾಗುವ ಪ್ರಕ್ರಿಯೆಯಲ್ಲಿಯೇ ತಾತ್ವಿಕ ನೆಲೆಗಟ್ಟು ಹರಳುಗಟ್ಟಿಕೊಳ್ಳುತ್ತದೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಮರ್ಶೆಯ ಕಾರ್ಯನಿರ್ವಹಣೆ ಅತ್ಯಂತ ಗಂಭೀರ ಸ್ವರೂಪದ್ದಾಗಿದೆ.

ಸಮಾಜದ ಚಲನಶೀಲತೆಗೆ ಮತ್ತು ಬದುಕಿನ ವಿಕಾಸಕ್ಕೆ ಪೂರಕವಾಗುವ ಹಾಗೂ ಪ್ರೇರಕವಾಗುವ ಕ್ರಿಯೆಯಲ್ಲಿ ಸಾಹಿತ್ಯಕ್ಕಿರುವಷ್ಟೇ ಹೊಣೆ ಸಾಹಿತ್ಯ ವಿಮರ್ಶೆಗೂ ಉಂಟು. ಇಂಥ ಕ್ರಿಯೆಯಲ್ಲಿ ತನ್ನನ್ನು ಗುರುತಿಸಿಕೊಂಡಾಗಲೇ ವಿಮರ್ಶೆಗೆ ಹೊಸ ಶಕ್ತಿ ಮತ್ತು ಹೊಸ ಧೋರಣೆಗಳು ಸಂಚಯಿತವಾಗುತ್ತವೆ. ಮೌಲ್ಯ ಸಂಘರ್ಷಣೆಯ ಸಂದರ್ಭದಲ್ಲಿ ಶೋಷಣೆ ಮತ್ತು ಹೋರಾಟ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗುತ್ತದೆ. ಸಾಹಿತ್ಯ ವಿಮರ್ಶೆ ಇಂಥ ಘಟ್ಟದಲ್ಲಿ ಎರಡು ರೀತಿಯ ಕಾರ್ಯನಿರ್ವಹಣೆಯನ್ನು ಹೊತ್ತುಕೊಳ್ಳುತ್ತದೆ. ಒಂದು ಸಾಹಿತ್ಯಿಕ ವಿಚಾರಗಳಿಗೆ ಕಲಾತ್ಮಕ ನಿಲುವುಗಳಿಗೆ ಸಂಬಂಧಪಟ್ಟಂತೆ ಹಳೆಯ ಪರಿಕಲ್ಪನೆಗಳನ್ನು ಒಡೆದು ಅವುಗಳಲ್ಲಿ ಬದಲಾವಣೆಯನ್ನು ತರುವುದರ ಜೊತೆಗೆ ಜನ ಸಮುದಾಯದಲ್ಲಿ ಹೊಸ ಕಲಾತ್ಮಕ ಅಭಿರುಚಿಯನ್ನು ಬೆಳೆಸುವುದು, ಎರಡನೆಯದಾಗಿ ಸಾಹಿತ್ಯ ವಿಮರ್ಶೆ ಸಾಂಸ್ಕೃತಿಕವಾಗಿ ಒಂದು ಸಾಧನವೂ ಆಗಿರುವುದರಿಂದ ಯಜಮಾನ ಸಂಸ್ಕೃತಿಯೊಳಗಿನ ಪ್ರತಿಗಾಮೀ ವಿಚಾರ-ಭಾವನೆಗಳ ವಿರುದ್ಧ ಹೋರಾಡುವುದರ ಜೊತೆಗೆ ಪ್ರಗತಿಪರ ಆಲೋಚನೆಗಳನ್ನು ಬಿತ್ತುತ್ತಾ ಹೋಗುವುದು. ಕನ್ನಡದಲ್ಲಿ ಸಾಂಸ್ಕೃತಿಕ ವಿಮರ್ಶೆ ಈ ದಿಶೆಯಲ್ಲಿ ಸಾಗುತ್ತಿದೆ ಎಂದು ಹೇಳಬಹುದು.

ನಮ್ಮ ಹಿಂದಿನ ಗುರುತುಗಳು ಅಳಿಸಿ ಹೋಗುತ್ತಿರುವ ವೇಗ ಅದೆಷ್ಟು ಭಯಾನಕವಾಗಿದೆ ಎಂದರೆ ಈ ಕ್ಷಣದ ಇರವು ಇನ್ನೊಂದು ಕ್ಷಣದ ನೆನಪು ಮಾತ್ರ ಆಗಿರಲು ಸಾಧ್ಯವಿದೆ. ನೆಲಗುರುರುತುಗಳು ಅಷ್ಟು ಕ್ಷಿಪ್ರಗತಿಯಲ್ಲಿ ಅಳಿಸಿ ಹೋಗುವಂತಹ ಕಾಲಘಟ್ಟದಲ್ಲಿ ಮುಂದಿನ ಭವಿಷ್ಯಕ್ಕೆ ಬೇಕಾದ ನೆಲನಿಷ್ಠ ರಾಜಕಾರಣವನ್ನು ಕಟ್ಟುವುದು ದುಸ್ತರವಾಗಿದೆ. ನಮ್ಮ ಕುರುಹುಗಳು ಮಹತ್ವದ್ದಾಗಿ ಕಾಣಿಸದಿದ್ದಾಗ ಅವು ಬರೀ ಸಂಪನ್ಮೂಲವಾಗಿ ಕಾಣಿಸತೊಡಗುತ್ತವೆ. ಹಾಗಾದಾಗ ಅವನ್ನು ದೋಚಬೇಕು. ಅದನ್ನು ವ್ಯಾಪಾರೀ ಹಿತಾಸಕ್ತಿಗೆ ಕೊಡಬೇಕು. ಅದರ ಮೂಲಕ ಲಾಭದ ಆರ್ಥಿಕತೆಯನ್ನು

ಸೃಷ್ಟಿಸಬೇಕು ಎನ್ನುವುದನ್ನು ವಸಾಹತುಶಾಹಿ ಆಳ್ವಿಕೆ ನಮಗೆ ಹೇಳಿಕೊಟ್ಟಿದೆ. ನಮ್ಮೆಲ್ಲಾ ಜ್ಞಾನಶಿಸ್ತುಗಳು ಕೈಗಾರಿಕಾ ಕ್ರಾಂತಿಯಿಂದಾದವು. ಅಂತಹ ಜ್ಞಾನಶಿಸ್ತುಗಳಿಂದ ನಮ್ಮ ಬದುಕು ಮತ್ತು ಸಾಹಿತ್ಯವನ್ನು ಅರ್ಥೈಸುವಲ್ಲಿ ಎಚ್ಚರಿಕೆಯಿಂದ ಮುನ್ನೆಡೆಯಬೇಕಿದೆ.

೪.೫ ಅಲಕ್ಷಿತ ಪಠ್ಯಗಳ ವಿಮರ್ಶೆ

ಒಂದು ಭಾಷೆಯ ಸಾಹಿತ್ಯ, ಸಂಸ್ಕೃತಿ, ವಿವೇಕವನ್ನು ಕುರಿತು ಮಾತನಾಡುವಾಗ ನಾವು ಕೇವಲ ಶಿಷ್ಟ ಸಾಹಿತ್ಯವನ್ನು, ದಾಖಲಾಗಿರುವುದನ್ನು, ಪ್ರಧಾನ ನೆಲೆಯಲ್ಲಿರುವದನ್ನಷ್ಟೆ ಗ್ರಹಿಸುವಂತಿಲ್ಲ. ಹಾಗೇನಾದರೂ ನಮ್ಮ ತಿಳಿವಳಿಕೆಯನ್ನು ಆ ರೀತಿಯ ಸಂಪನ್ಮೂಲಗಳಿಗಷ್ಟೆ ಸೀಮೀತಗೊಳಿಸಿದರೆ ನಮ್ಮ ಅಧ್ಯಯನ ಅಪೂರ್ಣವಾಗುತ್ತದೆ. ಶಿಷ್ಟ ಸಾಹಿತ್ಯವನ್ನು ಗ್ರಹಿಸುವಷ್ಟೆ ಗಂಭಿರವಾಗಿ, ಅಲಿಖಿತ ಸಾಹಿತ್ಯವನ್ನೂ, ಪ್ರಧಾನ ನೆಲೆಯಲ್ಲಿರುವ ವಿಚಾರಗಳಿಗೆ ಕೊಡುವಷ್ಟೆ ಮಹತ್ವವನ್ನು ಅಂಚಿನ ಸಮುದಾಯಗಳ ವಿಚಾರಗಳಿಗೂ ನೀಡಿದರೆ ಆಗ ಮಾತ್ರ ಒಂದು ಸಮಗ್ರವಾದ ಒಳನೋಟವನ್ನು ಯಾವುದೇ ಭಾಷೆಯೊಂದರ ಸಾಹಿತ್ಯ, ಸಂಸ್ಕೃತಿ, ವಿವೇಕಗಳನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಆಧುನಿಕೋತ್ತರವಾದದ ಚಿಂತನೆಯ ಪ್ರಕಾರ ಯಾವೂ ವಿಚಾರವೂ ನಗಣ್ಯವಲ್ಲವಾದ್ದರಿಂದ ಮತ್ತು ನಮ್ಮ ಸಧ್ಯದ ತಲ್ಲಣಗಳಿಗೆ ನಮ್ಮ ದೇಶಿ ತಿಳಿವಳಿಕೆಯಲ್ಲಿಯೇ ಪರಿಹಾರಗಳನ್ನು ಅರಸಬೇಕೆಂಬ ವಿಚಾರ ಬೆಳೆಯುತ್ತಿರುವುದರಿಂದ, ಇದುವರೆವಿಗೂ ಮುಖ್ಯ ವಾಹಿನಿಯಿಂದ ದೂರವಿದ್ದ ಪಠ್ಯ ಮತ್ತು ಸಂಗತಿಗಳನ್ನು ಕಳೆದ ದಶಕದಲ್ಲಿ ಗಂಭೀರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಯಾರೂ ಅಮುಖ್ಯರಲ್ಲ, ಯಾವುದೂ ಯಕಃಶ್ಚಿತವಲ್ಲ ಎಂಬ ನೆಲೆಯಲ್ಲಿ ಕಳೆದ ದಶಕದಲ್ಲಿ ಕನ್ನಡ ಪ್ರದೇಶದಲ್ಲಿರುವ ಬುಡಕಟ್ಟುಗಳ ಸಾಹಿತ್ಯ, ತತ್ವಪದ ಸಾಹಿತ್ಯ ಮತ್ತು ಮರೆಯಲ್ಲಿದ್ದ ಮುಸ್ಲಿಂ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡಿರುವುದನ್ನು ಈ ಭಾಗದಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಈ ಕ್ಷೇತ್ರದಲ್ಲಿ ಕಳೆದ ದಶಕದವರೆಗೆ ಅಧ್ಯಯನಗಳೇ ಆಗಿರಲಿಲ್ಲವೆಂದು ಅರ್ಥವಲ್ಲ; ಬದಲಿಗೆ ಕಳೆದ ದಶಕದಲ್ಲಿ ಈ ಕ್ಷೇತ್ರಗಳ ಮೇಲೆ ಬಹಳ ಗಂಭೀರವಾದ ಅಧ್ಯಯನ ನಡೆದಿದೆ.

ಬುಡಕಟ್ಟು ಸಾಹಿತ್ಯ

ಬುಡಕಟ್ಟು ಸಾಹಿತ್ಯವನ್ನು ಗ್ರಹಿಸುವ ಮೊದಲು ಅವರ ಇವತ್ತಿನ ಬದುಕಿನ ದುರ್ದೆಸೆಗಳ ಕಡೆ ಸ್ವಲ್ಪ ಗಮನಿಸಬೇಕಾಗಿದೆ. ವರ್ತಮಾನದಲ್ಲಿ ಆದಿವಾಸಿಗಳ ಮತ್ತು ಆದಿವಾಸಿಗಳ ಸಬಲೀಕರಣದ ಕುರಿತ ನಮ್ಮ ಆಶಯಗಳನ್ನು ಪುನಾರಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಬುಡಕಟ್ಟುಗಳು ಇಂದು ಪ್ರಭುತ್ವ ಹುಟ್ಟು ಹಾಕಿರುವ ಅನೇಕ ಸಮಸ್ಯೆಗಳಿಂದ ನರಳುತ್ತಿವೆ. ಆದಿವಾಸಿಗಳು ಸಾವಿರಾರು ವರ್ಷಗಳಿಂದ ಅನುಭವಿಸುತ್ತಿರುವ ಕಷ್ಟಗಳಿಗೆ ಅನೇಕರು ಮತ್ತಷ್ಟು ದುಮ್ಮಾನಗಳನ್ನು ಸೇರಿಸುತ್ತಿದ್ದಾರೆ. ಜನತಂತ್ರದಲ್ಲಿ ಜನರ

ಮತಗಳ ಮೂಲಕ ಆಯ್ಕೆಯಾಗುವ ಸರಕಾರಗಳು ಸ್ಥಳೀಯ ಜನ ಸಮುದಾಯಗಳ ಹಿತಗಳನ್ನು ಕಾಯದೆ ಮಾರುಕಟ್ಟೆ ಶಕ್ತಿಗಳ ಪರವಾಗಿ ನಿಂತಿವೆ. ಇಂದು ಆದಿವಾಸಿಯಾದಿಯಾಗಿ ದುಡಿವ ಸಮುದಾಯಗಳು ತಮ್ಮ ವರ್ತಮಾನದ ಸ್ಥಿತಿಗತಿಗಳ ಉತ್ತಮಿಕೆಗೆ ತಮ್ಮ ಭೂತಕಾಲವನ್ನು ಹಿಂದಿರುಗಿ ನೋಡುವಂತೆ ಮಾಡಲಾಗಿದೆ. ವರ್ತಮಾನದಲ್ಲಿ ತಮ್ಮನ್ನು ಸಬಲೀಕರಿಸಲು ಪುರಾಣ ಮತ್ತು ಚರಿತ್ರೆಗಳನ್ನು ಸಮುದಾಯಗಳು ಆಶ್ರಯಿಸುತ್ತಿವೆ.

“ವಾಸ್ತವದಲ್ಲಿ ಬುಡಕಟ್ಟುಗಳು ನಮ್ಮದೇ ಸಮಾಜದ ಬೇರುಗಳು. ಸ್ಥಳೀಯ ಜೀವನಾನುಭವದ ಮೂಲಕ ಸಮಷ್ಟಿ ದರ್ಶನದ ಸಂಚಯಕ್ಕೆ ಕಾರಣವಾದ ನಮ್ಮ ಆದಿಮ ಸಮಾಜಗಳು ಇಂದು ಆತ್ಮಪ್ರತ್ಯಯದ ಬದುಕನ್ನು ಕಳೆದುಕೊಳ್ಳುತ್ತಿವೆ. ದಟ್ಟ ಕಾಡುಗಳ ನಡುವೆ ಸರಳವಾಗಿ ಸಮತಾವಾದಿಗಳಾಗಿ ಬದುಕಿದ್ದ ಈ ಸಮುದಾಯಗಳು ತಮ್ಮ ಸುತ್ತಲಿರುವ ಸಂಪತ್ತನ್ನು ಸಾವಿರಾರು ವರ್ಷಗಳಿಂದ ಮುಂದಿನ ತಲೆಮಾರಿಗೆ ಉಳಿಸಿಕೊಂಡೇ ಬಂದಿವೆ. ವರ್ತಮಾನದಲ್ಲಿ ಆದಿವಾಸಿಗಳ ಮತ್ತು ಆದಿವಾಸಿಗಳ ಸಬಲೀಕರಣದ ಕುರಿತ ನಮ್ಮ ಆಶಯಗಳನ್ನು ಪುನಾರಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ.”[೨೦] ಬುಡಕಟ್ಟುಗಳು ಇಂದು ಪ್ರಭುತ್ವ ಹುಟ್ಟು ಹಾಕಿರುವ ಅನೇಕ ಸಮಸ್ಯೆಗಳಿಂದ ನರಳುತ್ತಿವೆ. ಆದಿವಾಸಿಗಳು ಸಾವಿರಾರು ವರ್ಷಗಳಿಂದ ಅನುಭವಿಸುತ್ತಿರುವ ಕಷ್ಟಗಳಿಗೆ ಅನೇಕರು ಅನೇಕ ದುಮ್ಮಾನಗಳನ್ನು ಸೇರಿಸುತ್ತಿದ್ದಾರೆ. ಜನತಂತ್ರದಲ್ಲಿ ಜನರ ಮತಗಳ ಮೂಲಕ ಆಯ್ಕೆಯಾಗುವ ಸರಕಾರಗಳು ಸ್ಥಳೀಯ ಜನ ಸಮುದಾಯಗಳ ಹಿತಗಳನ್ನು ಕಾಯದೆ ಮಾರುಕಟ್ಟೆ ಶಕ್ತಿಗಳ ಪರವಾಗಿ ನಿಂತಿವೆ. ಇಂದು ಆದಿವಾಸಿಯಾದಿಯಾಗಿ ದುಡಿವ ಸಮುದಾಯಗಳು ತಮ್ಮ ವರ್ತಮಾನದ ಸ್ಥಿತಿಗತಿಗಳ ಉತ್ತಮಿಕೆಗೆ ತಮ್ಮ ಭೂತಕಾಲವನ್ನು ಹಿಂದಿರುಗಿ ನೋಡುವಂತೆ ಮಾಡಲಾಗಿದೆ.

ವರ್ತಮಾನದಲ್ಲಿ ತಮ್ಮನ್ನು ಸಬಲೀಕರಿಸಲು ಪುರಾಣ ಮತ್ತು ಚರಿತ್ರೆಗಳನ್ನು ಸಮುದಾಯಗಳು ಆಶ್ರಯಿಸುತ್ತಿವೆ. ಪುರಾಣ ಮತ್ತು ಚರಿತ್ರೆಯಲ್ಲಿ ಬದುಕಿದ್ದಿರಬಹುದಾದ ವ್ಯಕ್ತಿಗಳನ್ನು ಸಮುದಾಯಗಳು ವರ್ತಮಾನದಲ್ಲಿ ಆರಾಧಿಸುವ ಪರಂಪರೆ ಶುರುವಾಗಿದೆ. ಆಯಾ ಜಾತಿ ಸಂಘಟನೆಗಳು ಹೀಗೆ ತಮ್ಮ ತಮ್ಮ ಸಮುದಾಯಗಳ ಪರಂಪರೆಗಳನ್ನು ಹುಡುಕಾಡಿ ಅಲ್ಲಿರುವ ಪುರಾಣದ ಪ್ರತಿಮೆಯೊಂದನ್ನು ತಂದು ಲಾಂಛನಗಳಾಗಿಸುತ್ತಿವೆ. ವರ್ತಮಾನದಲ್ಲಿ ಸಮುದಾಯಗಳು ತಮ್ಮ ಆತ್ಮಪ್ರತ್ಯಯಗಳನ್ನು ಬಿಂಬಿಸಲು ಈ ಬಗೆಯ ಪ್ರಯತ್ನ ಒಂದು ಹಂತದವರೆಗೆ ಸಮುದಾಯಗಳ ಕೈಹಿಡಿಯಬಹುದು. ಆದರೆ ಯಾವತ್ತೂ ಗಾಯ ಮಾಡುತ್ತಲೇ ಬಂದ ಪರಂಪರೆಯಲ್ಲಿಯೇ ತಮ್ಮ ಅನನ್ಯತೆಯ ಲಾಂಛನಗಳನ್ನು ಹುಡುಕಾಡುವ ಈ ಪ್ರಯತ್ನ ವರ್ತಮಾನದಲ್ಲಿ ಸಮುದಾಯಗಳನ್ನು ಹೇಗೆ ಸಬಲೀಕರಿಸಬಲ್ಲದು ಎಂಬುದನ್ನು ಕಾದು ನೋಡಬೇಕಿದೆ.

ಚರಿತ್ರೆ, ಪರಂಪರೆ ಮತ್ತು ಪುರಾಣಗಳ ಹೆಸರಲ್ಲಿ ಈಗಾಗಲೆ ಒಂದು ಧಾರ್ಮಿಕ ಆವೇಶ ದೇಶದಲ್ಲಿ ಒಂದು ಬಗೆಯ ಫ್ಯಾಸಿಸ್ಟ್ ರಾಜಕಾರಣವನ್ನು ಹುಟ್ಟು ಹಾಕಿದೆ.

ಸಾಂಸ್ಕೃತಿಕ ಅನನ್ಯತೆ, ಪಾರಂಪರಿಕ ಜ್ಞಾನ ಕುರಿತು ಮಾತಾಡುತ್ತ ದುಡಿವ ಸಮುದಾಯಗಳ ವರ್ತಮಾನದ ಸ್ಥಿತಿಗತಿಗಳನ್ನೇ ಮರೆವಿಗೆ ತಳ್ಳುತ್ತಿದ್ದಾರೆ. ಪುರಾಣದ ವ್ಯಕ್ತಿತ್ವವೊಂದು ಒಂದು ಸಮುದಾಯದ ವರ್ತಮಾನದ ಲೌಕಿಕದ ಬದುಕನ್ನು ಹಸನು ಮಾಡಬಲ್ಲದು ಎಂಬ ನಂಬಿಕೆ ಬೆಳೆಯುತ್ತಿದೆ. ಸಮುದಾಯಗಳು ಆರಾಧಿಸುವ ಅವರ ಪುರಾಣದ ರೂಪಕಗಳ ಹೆಸರಿನಲ್ಲಿ ಸಮುದಾಯ ಭವನಗಳು, ನಗರಗಳ ಸರ್ಕಲ್ಲುಗಳು ನಿರ್ಮಾಣಗೊಳ್ಳುತ್ತಿವೆ. ಮಾರುಕಟ್ಟೆ ಶಕ್ತಿಗಳು ಮತ್ತು ಸ್ಥಳೀಯ ಪ್ರಭುತ್ವ ನಿಜ ವರ್ತಮಾನವನ್ನು ಮರೆಸಲು ಸಮುದಾಯಗಳ ಮುಂದೆ ಹೀಗೆ ಪುರಾಣದ ಪ್ರತಿಮೆಗಳನ್ನು ತಂದು ನಿಲ್ಲಿಸುತ್ತಿವೆ.

ಬಹುತೇಕ ಎಲ್ಲ ಸಮುದಾಯಗಳು ವರ್ತಮಾನದ ತಮ್ಮ ಹಿಂಜರಿಕೆ ಮತ್ತು ಬಡತನಗಳನ್ನು ಮೀರಿ ನಿಲ್ಲಲು ಪುರಾಣಗಳ ಕಡೆ ಮುಖ ಮಾಡಿ ನಿಂತಿವೆ. "ಮಾರುಕಟ್ಟೆ ಶಕ್ತಿಗಳು ಈ ನಂಬಿಕೆಗಳನ್ನು ಧಾರ್ಮಿಕ ಉನ್ಮಾದವನ್ನಾಗಿ ರೂಪಾಂತರಿಸುತ್ತಿವೆ. ಈ ಬಗೆಯ ಉನ್ಮಾದ ಸಮುದಾಯಗಳ ಅಂತಸ್ಥ ಜಗತ್ತಿನ ನೈಜ ಸ್ಮೃತಿಗಳನ್ನು ನಾಶ ಮಾಡುತ್ತಿದೆ. ಸರಕಾರ, ಸರಕಾರದ ಬುದ್ಧಿಜೀವಿಗಳು ಮತ್ತು ಸಾಮ್ರಾಜ್ಯಶಾಹಿ ಫಂಡಿನ ಮೂಲಕ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಪರಂಪರೆಯನ್ನು ವಿನಾಕಾರಣ ಆರಾಧಿಸುವ ಈ ಪ್ರವೃತ್ತಿಯನ್ನು ವಿಪರೀತವಾಗಿ ಬೆಂಬಲಿಸುತ್ತಿವೆ. ಯಾವ ಪರಂಪರೆ ಅಸಮಾನತೆಯ ಹೆಸರಲ್ಲಿ ಈ ಸಮುದಾಯಗಳನ್ನು ವಂಚಿಸುತ್ತಾ ಬಂದಿತ್ತೊ, ಯಾವ ಪುರಾಣಗಳು ಈ ಸಮುದಾಯಗಳನ್ನು ಕತ್ತಲಲ್ಲಿಟ್ಟಿದ್ದವೊ, ಆ ಪುರಾಣ ಮತ್ತು ಪರಂಪರೆಯ ಪ್ರತಿಮೆಗಳೇ ಸಮುದಾಯಗಳ ಗೊತ್ತು ಗುರಿಗಳನ್ನಾಗಿಸಲಾಗಿದೆ."[೩೧] ವರ್ತಮಾನದ ಕಡು ವಾಸ್ತವಗಳನ್ನು ಅನುಸಂಧಾನ ಮಾಡುವಾಗ ಸಮುದಾಯಗಳು ತಮ್ಮ ಹತಾರುಗಳನ್ನು ಪರಂಪರೆಯಲ್ಲಿ ಹುಡುಕುವುದೇ ಒಂದು ವ್ಯಂಗ್ಯ. ವರ್ತಮಾನದಲ್ಲಿ ಜಾಗತಿಕ ಮಾರುಕಟ್ಟೆ ಶಕ್ತಿಗಳು ನಿಜ ಶತ್ರುಗಳಾಗಿ ನಿಂತಿವೆ. ಜೊತೆಗೆ ಈ ಜಾಗತಿಕ ಶಕ್ತಿಗಳು ಇಲ್ಲಿ ಬೇರು ಬಿಡಲು ಸ್ಥಳೀಯ ಮಧ್ಯವರ್ತಿಗಳು ನೆರವಿಗೆ ನಿಂತಿದ್ದಾರೆ.

ಈ ಬಗೆಯ ಸಾಂಸ್ಕೃತಿಕ ಅನನ್ಯತೆಯ ಕುರಿತ ಚರ್ಚೆಗಳಲ್ಲಿ ಸಮುದಾಯಗಳ ಚಹರೆಗಳ ಬಗ್ಗೆ ರೋಮಾಂಚಕ ವಿವರಗಳು ಬರುವುದು ಸಾಮಾನ್ಯ ಸಂಗತಿಯಾಗಿದೆ. ಆದರೆ ಸಮುದಾಯಗಳ ಈ ಅನನ್ಯತೆಯ ಸಂಕೇತಗಳಲ್ಲಿ ತಿಳುವಳಿಕೆ ಮತ್ತು ತಿಳುವಳಿಕೆಗೆ ಕಾರಣವಾದ ಚಾರಿತ್ರಿಕ ಸಂಘರ್ಷಗಳೂ ಇರುವುದನ್ನು ಅಧ್ಯಯನಕಾರರು ಗಮನಿಸುವ ಪರಿಪಾಠ ನಮ್ಮಲ್ಲಿ ಬೆಳೆದುಬಂದಿಲ್ಲ. ಸಮುದಾಯಗಳನ್ನು ಗ್ರಹಿಸುವ ಮತ್ತು ಅರ್ಥೈಸುವ ಪಾಶ್ಚಿಮಾತ್ಯ ಅಧ್ಯಯನ ಕ್ರಮವೂ ಇದಕ್ಕೆ ಕಾರಣವಾಗಿರಬಹುದು. ಯಾವುದನ್ನು ಒಂದು ಸಮುದಾಯದ ಅನನ್ಯತೆ ಎಂದು ಭಾವಿಸುತ್ತೆವೋ, ಆ ಅನನ್ಯತೆ ಸಮುದಾಯದ ಆಳದ ನೋವಿನ ಫಲವೂ ಆಗಿರುತ್ತದೆ. ಸಾವಿರಾರು ವರ್ಷಗಳ ಕಾಲ ಇಲ್ಲಿ ಕೆಳಜಾತಿ ವರ್ಗಗಳ ಮೇಲೆ ನಡೆದ ದಮನದ ನಡುವೆಯೂ ದುಡಿವ ಸಮುದಾಯಗಳಲ್ಲಿ ನಗುವಿನ ಹಬ್ಬಗಳು ಮಾತ್ರವಿರುತ್ತವೆ ಎಂದು ಭಾವಿಸುವುದು ಚಾರಿತ್ರಿಕ ವ್ಯಂಗ್ಯವೇ ಸರಿ.

ಇನ್ನೂ ಆದಿವಾಸಿ, ಅಲೆಮಾರಿ ಮತ್ತು ಕೆಳಜಾತಿಗಳ ಸೃಷ್ಟಿಪುರಾಣಗಳನ್ನು ಗಮನಿಸಿದರೆ ಈ ಸಮುದಾಯಗಳ ಹುಟ್ಟಿನ ಕುರಿತು ಪುರಾಣದ ಕಲ್ಪನೆಯ ವೈಕಲ್ಯ ನಮ್ಮ ಅರಿವಿಗೆ ಬರುತ್ತದೆ. ಬಹುತೇಕ ಅಲೆಮಾರಿಗಳು, ಅವರ ಸೃಷ್ಟಿ ಪುರಾಣಗಳಲ್ಲಿ ಶಾಪಗ್ರಸ್ತರಾಗಿ ಭೂಮಿಗೆ ಬಂದವರು. ಈ ಸೃಷ್ಟಿಪುರಾಣಗಳಲ್ಲಿ ಆಯಾ ಸಮುದಾಯಗಳ ಮೂಲ ಪುರುಷ ಒಂದೋ ಶಾಪಗ್ರಸ್ತನಾಗಿ ಜೀವಿಸುತ್ತಾನೆ. ಇಲ್ಲವೆ ಶಾಶ್ವತವಾಗಿ ಅಂಗವೈಕಲ್ಯದಿಂದ ಹುಟ್ಟುತ್ತಾನೆ. ಇನ್ನು ಕೆಲವು ಅಲೆಮಾರಿ ಬುಡಕಟ್ಟುಗಳ ಮೂಲ ಪುರುಷರು ತಮ್ಮ ಆಸ್ತಿಪಾಸ್ತಿಗಳನ್ನು ಇನ್ನೊಬ್ಬರಿಗಾಗಿ ಕಳೆದುಕೊಂಡು ನಿರ್ಗತಿಕರಾಗಿರುತ್ತಾರೆ. ಇಲ್ಲವೇ ಕೆಲವು ಸಮುದಾಯಗಳ ಮೂಲ ಪುರುಷರು ತಮ್ಮ ದೈವದಿಂದಲೇ 'ಸಮಾಜದಲ್ಲಿ ಬೇಡಿಕೊಂಡು ತಿಂದು ಬದುಕು' ಎಂಬ ಶಾಪದಿಂದಲೇ ಅವತರಿಸುತ್ತಾರೆ. ಯಾಕೆ ಈ ಶಾಪಗ್ರಸ್ತ ಅಂಗವೈಕಲ್ಯದ ಹುಟ್ಟು? ಯಾಕೆ ಸಮುದಾಯಗಳು ತಮ್ಮ ಸೃಷ್ಟಿಪುರಾಣಗಳನ್ನು ಹೀಗೆ ಆತ್ಮನಿಂದನೆಯ ರೂಪದಲ್ಲಿ ಕಟ್ಟಿಕೊಳ್ಳುತ್ತಿವೆಯೆ ಎಂಬುದರ ಅಧ್ಯಯನ ನಡೆಯಬೇಕಾದ ಅಗತ್ಯವಿದೆ.

ಕನ್ನಡದ ಮುಖ್ಯ ಅಲಿಖಿತ ಮಹಾಕಾವ್ಯಗಳಾದ ಮಲೆ ಮಹದೇಶ್ವರ ಕಾವ್ಯ ಮತ್ತು ಮಂಟೇಸ್ವಾಮಿ ಕಾವ್ಯ, ಜುಂಜಪ್ಪ ಕಾವ್ಯ, ಮೈಲಾರಲಿಂಗ ಕಾವ್ಯಗಳನ್ನು ಜಾನಪದ ಮಹಾಕಾವ್ಯಗಳೆಂದು ಗುರುತಿಸಿ ಅಧ್ಯಯನ ನಡೆಸಿದರೂ, ನಂತರದ ಬೆಳವಣಿಗೆಯಲ್ಲಿ ಅವುಗಳನ್ನು ಬುಡಕಟ್ಟು ಮಹಾಕಾವ್ಯಗಳೆಂದೇ ಗ್ರಹಿಸಲಾಗಿದ್ದು ಅವುಗಳ ಆಧ್ಯಯನ ಕಳೆದ ದಶಕದಲ್ಲಿ ಹೆಚ್ಚಾಗಿ ನಡೆದಿದೆ. ಕರ್ನಾಟಕದಲ್ಲಿ ಸಾಮಾನ್ಯವಾಗಿ ಈ ಎಲ್ಲಾ ಕಾವ್ಯಗಳ ಗಾಯನ ಮತ್ತು ಆಚರಣೆ ತಳಸಮುದಾಯಗಳಲ್ಲಿ ಹೆಚ್ಚಾಗಿದೆ. ಆದರೆ ಈ ಬುಡಕಟ್ಟು ಮಹಾಕಾವ್ಯಗಳನ್ನು ತಳಸಮುದಾಯಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ಏಕೆಂದರೆ ಈ ಕಾವ್ಯಗಳಲ್ಲಿ ಇಡೀ ಸಮಾಜದ ಅಸ್ಮಿತೆ, ಬದುಕಿನ ಬೇರೆ ಬೇರೆ ರೂಪಕಗಳು ನಮ್ಮ ಒಟ್ಟೂ ಬದುಕನ್ನು ರೂಪಿಸುವ ವಿನ್ಯಾಸವಾಗಿ ಪ್ರಕಟಗೊಂಡಿವೆ. ಈ ಮಹಾಕಾವ್ಯಗಳ ನಾಯಕರನ್ನು ರಾಜಕೀಯ ಸಂಕೇತವಾಗಿ ನೋಡಿದರೆ ಅವುಗಳಿಗೆ ಸಂಕುಚಿತತೆ ಮೂಡುತ್ತದೆ. ಈ ಕಾವ್ಯಗಳಲ್ಲಿ ಪುರಾಣ, ಇತಿಹಾಸದ ನೆಲೆಗಟ್ಟಿನಲ್ಲಿ ರೂಪುಗೊಂಡ ಸಾಂಸ್ಕೃತಿಕ ಆಯಾಮ ಮತ್ತು ವಿವೇಕ ಇರುವುದನ್ನು ನಾವು ಗುರುತಿಸಬೇಕು. ಬುಡಕಟ್ಟು ಕಾವ್ಯಗಳಲ್ಲಿ ಪ್ರತಿರೋಧದ ನೆಲೆ ಎನ್ನುವುದು ಕೇಡಿನ ಕತೆಗಳಿಗೆ ಪರ್ಯಾಯವಾಗಿ ರೂಪುಗೊಂಡಿವೆ. ಈ ಕಾರಣಕ್ಕೆ ಇಲ್ಲಿನ ಕಥನಗಳನ್ನು ಜನಪದ ಕಥನ ಎನ್ನುವುದಕ್ಕಿಂತ ಮಾನವ ಕಥನ ಎನ್ನುವುದು ಸೂಕ್ತ.

"ಮಲೆಮಹದೇಶ್ವರ ಕಾವ್ಯದಲ್ಲಿ ಗಂಡಿನ ಅಧಿಕಾರ ಕೇಂದ್ರವನ್ನು ಹೆಣ್ಣು ಪ್ರಶ್ನಿಸುವ ಕ್ರಮ ಕೇವಲ ಹೆಣ್ಣಿನ ಕಥನವಲ್ಲ. ಬದಲಾಗಿ ಅದು ವಿವೇಕವನ್ನು ಜಾಗೃತವಾಗಿ ಒಳಗಿನಿಂದಲೇ ಕಟ್ಟಿಕೊಂಡ ಕನ್ನಡದ ಜೀವದ್ರವ್ಯ. ನಿಜಕ್ಕೂ 'ಧರೆಗೆ ದೊಡ್ಡವರು' ಯಾರು ಎಂಬುದನ್ನು ವಿಶ್ಲೇಷಿಸಿದ್ದು ಈ ಕಾವ್ಯಗಳ ವೈಶಿಷ್ಟ್ಯತೆ. ಮಂಟೇಸ್ವಾಮಿ ಕಾವ್ಯದಲ್ಲಿ ಗಂಡು ಮೂಲಭೂತವಾದದ ವಿರುದ್ಧ ಪ್ರತಿರೋಧದ ಧ್ವನಿ ಸಾಂಸ್ಕೃತಿಕ ದಂಗೆಕೋರತನದ

ರೂಪಕವಾಗಿ ಮೂಡಿದೆ. ಸ್ಥಾಪಿತ ಮೌಲ್ಯಗಳೊಳಗೆ ಸಿಲುಕಿ ನರಳುತ್ತಿರುವ ಪಾತ್ರಗಳಿಗೆ ಬಿಡುಗಡೆಯ ದಾರಿ ತೋರಿಸಿರುವುದು ಬುಡಕಟ್ಟು ಕಾವ್ಯ"[೩೨]ವಾಗಿದ್ದು ಅದು ಲೋಕದ ಅರಿವನ್ನು ಗಳಿಸಿಕೊಳ್ಳಲು ನಡೆದ ಪ್ರಯತ್ನವೇ ಹೊರತು, ಅದರ ಹಿಂದೆ ಇತರೆ ಜೀವವಿರೋಧಿಯ ನಿರ್ದಿಷ್ಟ ಉದ್ದೇಶಗಳು ಇರಲಿಲ್ಲ. ಇಷ್ಟಲ್ಲದೆ ನಮ್ಮ ಸಮಕಾಲೀನ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲೂ ಈ ಕಾವ್ಯದಲ್ಲಿ ಮಾದರಿಗಳು ಇವೆ ಎನ್ನುವುದನ್ನು ಹುಡುಕುವ ಹೊಸ ಜ್ಞಾನ ಮೀಮಾಂಸೆ ಕಟ್ಟಿಕೊಳ್ಳುವ ಪ್ರಯತ್ನ ನಡೆದಿದೆ.

ವಿಸ್ತಾರವಾದ ಜ್ಞಾನಲೋಕ ಬುಡಕಟ್ಟು ಮಹಾಕಾವ್ಯಗಳಲ್ಲಿ ಇವೆ ಎಂಬುದನ್ನು ಇದುವರೆಗಿನ ಅಧ್ಯಯನಗಳು ಸ್ಥಿರೀಕರಿಸಿವೆ. ದೈವೀಕತೆಯನ್ನು ಮಾನವೀಕರಣಗೊಳಿಸಿರುವ ಪ್ರಕ್ರಿಯೆ ಇಲ್ಲಿ ನಡೆದಿದೆ. ಮನುಷ್ಯ ಕೇಂದ್ರಿತ ಅಹಂಕಾರವನ್ನು ಮುರಿದು ನಮ್ಮ ಪರಿಸರವನ್ನು ಕಾಪಾಡಿಕೊಳ್ಳಬೇಕಾದ ಅಗತ್ಯಕ್ಕೆ ಒತ್ತು ಕೊಟ್ಟಿರುವಲ್ಲಿ ಬುಡಕಟ್ಟು ಕಾವ್ಯಗಳ ಸಮಕಾಲೀನತೆ ಅಡಗಿದೆ. ಸಾಂಪ್ರದಾಯಿಕ ಚರಿತ್ರೆಗೆ ಭಿನ್ನವಾದ, ಹೊಸ ದೃಷ್ಟಿಕೋನದಲ್ಲಿ ಬುಡಕಟ್ಟು ಮಹಾ ಕಾವ್ಯಗಳ ಅಧ್ಯಯನ ನಡೆಯುತ್ತಿದೆ.

"ರಾಮಾಯಣ, ಮಹಾಭಾರತಗಳನ್ನು ಮಾತ್ರ ಮಹಾಕಾವ್ಯಗಳೆಂದು ಪರಿಗಣಿಸುವ ಮನೋಭಾವವಿದೆ. ಆದರೆ, ಅಕ್ಷರವೇ ಗೊತ್ತಿಲ್ಲದ ಬುಡಕಟ್ಟು ಜನಾಂಗದವರು ರಚಿಸಿದ ಇಪ್ಪತ್ತೆರಡು ಮಹಾಕಾವ್ಯಗಳು ಕನ್ನಡದ ದೊಡ್ಡ ಶಕ್ತಿ. ಇಂತಹ ದೊಡ್ಡ ಪರಂಪರೆಯ ಮೌಖಿಕ ಮಹಾಕಾವ್ಯಗಳನ್ನು ನಿರ್ಲಕ್ಷಿಸುವ ಧೋರಣೆ ಸುಶಿಕ್ಷಿತರಲ್ಲಿದೆ. ರಾಮಾಯಣ, ಮಹಾಭಾರತದ ಕಥಾನಾಯಕರು ಸದ್ವಂಶಸ್ಥರು. ಆದರೆ, ಜನಪದ ಕಾವ್ಯಗಳಲ್ಲಿನ ಮಂಟೇಸ್ವಾಮಿ, ಮಲೆಮಹದೇಶ್ವರ, ಜುಂಜಪ್ಪ ಮುಂತಾದ ನಾಯಕರು ಹಿನ್ನೆಲೆಗಳಿಲ್ಲದ, ಕೆಳವರ್ಗದ ನಾಯಕರಾಗಿದ್ದಾರೆ. ರಾಮಾಯಣವು ರಾಜ್ಯ ವಿಸ್ತರಣೆ, ಮತ್ತೊಬ್ಬರನ್ನು ವಶಪಡಿಸಿಕೊಳ್ಳುವ, ಭೂಮಿ ವಿಸ್ತರಣೆಯ ಕಥೆಯಾಗಿದೆ. ಹಾಗೆ ವಶಪಡಿಸಿಕೊಂಡ ಭೂಮಿಯನ್ನು ಹಂಚಿಕೊಳ್ಳುವ ಕಥೆಯನ್ನು ಮಹಾಭಾರತ ಹೇಳುತ್ತದೆ. ಆದರೆ, ಬುಡಕಟ್ಟು ಮಹಾಕಾವ್ಯಗಳ ನಾಯಕರು ಯುದ್ಧ, ರಕ್ತಪಾತ ಮಾಡುವುದಿಲ್ಲ. ಬುಡಕಟ್ಟು ಮಹಾಕಾವ್ಯಗಳು ಮನುಷ್ಯತ್ವ ತುಂಬುವ ಸೆಲೆಗಳಾಗಿವೆ."[೩೩] ಆಧುನಿಕತೆ ಅರಣ್ಯ ನಾಶದ ಕಥನವಾದರೆ, ಬುಡಕಟ್ಟು ಕಥನಗಳು ಪರಿಸರ, ಪ್ರಾಣಿ, ಪಕ್ಷಿಗಳ ಸಂರಕ್ಷಣೆಯ ಕಥನಗಳಾಗಿವೆ. ಅರಣ್ಯ ರಕ್ಷಣೆಯ ಮಹತ್ವ ಕಟ್ಟಿಕೊಡುತ್ತವೆ. ಸಕಲ ಜೀವರಾಶಿಗಳೂ ಬದುಕಬೇಕೆಂಬ ವಿಶಾಲ ಹೃದಯ ಬುಡಕಟ್ಟು ಕಾವ್ಯಗಳಲ್ಲಿದ್ದು, ಸ್ವಾರ್ಥಪರವಾದ ಶಿಷ್ಟ ಸಾಹಿತ್ಯಕ್ಕೂ, ದಯಾಪರವಾದ ಬುಡಕಟ್ಟು ಸಾಹಿತ್ಯಕ್ಕೂ ನಡುವೆ ಇರಬಹುದಾದ ವ್ಯತ್ಯಾಸಗಳನ್ನು ಬುಡಕಟ್ಟು ಕಾವ್ಯಗಳ ಅಧ್ಯಯನ ತೆರೆದಿಡುತ್ತಿದೆ.

ತತ್ವಪದಗಳು

ಕನ್ನಡದಲ್ಲಿ ವಚನ ಸಾಹಿತ್ಯ, ದಾಸ ಸಾಹಿತ್ಯದಂತೆ ತತ್ವಪದ ಸಾಹಿತ್ಯವೂ ಸುಮಾರು ೧೭ನೇ ಶತಮಾನದಿಂದ ಆರಂಭವಾಗಿದೆ. ಜನಪದದಂತೆ ಕೇವಲ ಮೌಖಿಕ

ಸಾಹಿತ್ಯವಾಗಿದ್ದ ಇದರ ಅಧ್ಯಯನ, ವಚನ ಸಾಹಿತ್ಯ, ದಾಸ ಸಾಹಿತ್ಯಕ್ಕೆ ಹೋಲಿಸಿದರೆ, ಹೆಚ್ಚಾಗಿ ನಡೆದಿರಲಿಲ್ಲ. ಆದರೆ ಕಳೆದ ದಶಕದಲ್ಲಿ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಮತ್ತು ವೈಯಕ್ತಿಕ ನೆಲೆಗಳಲ್ಲಿ ಇದರ ಅಧ್ಯಯನ ಹೆಚ್ಚಾಗಿ ನಡೆದಿದೆ.

ಹೊಸಗನ್ನಡ ಕಾವ್ಯದ ವಿವಿಧ ಅಭಿವ್ಯಕ್ತಿಗಳಾದ ಭಾವಗೀತೆ, ಮುಕ್ತ ಛಂದ, ಪ್ರತಿಮಾಕಾವ್ಯ ಮತ್ತು ಸಮಾಜವಾದಿ ಕಾವ್ಯಗಳ ರೂಪಗಳ ಮೂಲವನ್ನು ಪಶ್ಚಿಮದ ಕಾವ್ಯ ಪ್ರಕಾರಗಳಲ್ಲಿ ಹುಡುಕುವ ಪರಿಪಾಠವಿದೆ. ಕನ್ನಡದ ತತ್ವಪದಗಳು ಭಿನ್ನವಾದ ಸತ್ಯವನ್ನು ಹೇಳುತ್ತವೆ. ಹೊಸಗನ್ನಡ ಕಾವ್ಯದ ಈ ಎಲ್ಲ ರೂಪಗಳ ಮೂಲ ಮಾದರಿಗಳನ್ನು ತತ್ವಪದಗಳಲ್ಲಿ ಕಾಣಬಹುದಾಗಿದೆ. ವಸಾಹಾತುಶಾಹಿ ಕಾಲಘಟ್ಟದಲ್ಲಿ ಧರ್ಮಜಾತಿಗಳಲ್ಲಿ ಕಳೆದು ಹೋಗಿರುವ ತನ್ನ ಸಮುದಾಯವನ್ನು ವಸಾಹತು ವಿರೋಧಿ ಚಳುವಳಿಗೆ ಸಿದ್ಧಪಡಿಸುವ ಆತ್ಯಂತಿಕ ಆಶಯವಾಗಿ ಸೌಹಾರ್ದತೆ ಪ್ರತಿಪಾದನೆಗೊಂಡಿದೆ. ಅದು ಸರ್ವರನ್ನೂ ಮುಟ್ಟಬೇಕಾದರೆ ಕೇವಲ ಪದ್ಯವಾದರೆ ಸಾಲದು ಮಾಂತ್ರಿಕ ಕಾವ್ಯವೇ ಆಗಬೇಕು. ಆ ಮಾಂತ್ರಿಕತೆ ಈ ತತ್ವಪದಕ್ಕಿದೆ. ತತ್ವಪದಗಳು ಬಯಲಾಟ, ಸಣ್ಣಾಟ, ಲಾವಣಿ, ಗೀಗಿ ಪದ, ಬುಲಾಯಿ ಹಾಡು, ಸವಾಲ್ ಜವಾಬ್ ಮುಂತಾದ ಅನೇಕ ಪ್ರಕಾರಗಳಲ್ಲಿ ರಚನೆಗೊಂಡಿವೆ.

ತತ್ವಪದಗಳ ಹಿನ್ನಲೆ ಕನ್ನಡದ ಇತರೆ ಸಾಹಿತ್ಯ ಪ್ರಕಾರಗಳಿಗಿಂತ ಭಿನ್ನವಾಗಿದ್ದು, “ಸ್ವಾತಂತ್ರಪೂರ್ವ ಮೂರು ಶತಮಾನಗಳ ಕಾಲಾವಧಿಯಲ್ಲಿ ಜನಸಮುದಾಯಗಳಿಗೆ ನೆಮ್ಮದಿ ಇರಲಿಲ್ಲ. ಯಾರು ಯಾರಿಗೆ ಸಂಬಂಧವೇ ಇಲ್ಲ ಎಂಬ ವಾತಾವರಣ ನಿರ್ಮಾಣವಾಗಿತ್ತು. ಅಧಿಕಾರ ಸ್ಥಾಪನೆಗೆ ರಾಜ ಪ್ರಭುತ್ವಗಳು ಹೋರಾಟ ನಡೆಸಿದ್ದವು. ಪ್ರಬಲವಾದ ಧರ್ಮಗಳು, ನಾಯಕತ್ವ ಹೊಂದಿದ ಮಠಮಾನ್ಯಗಳು ತಮ್ಮ ಅಸಿತ್ವಕ್ಕಾಗಿ ಹೋರಾಟ ನಡೆಸಿದ್ದವು. ಸಮಾಜಗಳು ತಮ್ಮತನ ಹೊಂದಲು ಹೆಣಗಾಡುತ್ತಿದ್ದವು. ಧರ್ಮ, ಸಮಾಜ, ಭಾಷೆ, ಸಂಸ್ಕೃತಿ ಸಂಕರಗೊಂಡ ಕಾಲ ಅದು. ಇಂಥ ಗೊಂದಲದ ಸ್ಥಿತಿಯಲ್ಲಿ ತತ್ವಪದಕಾರರು ಹುಟ್ಟಿ ಬೆಳೆದು ಅಸಾಂಸ್ಥಿಕವಾದ ನೆಲೆಯಲ್ಲಿ ಜನಸಮುದಾಯಗಳ ನಡುವಿದ್ದು”[೩೪] ಜನಸಾಮಾನ್ಯರ ಬದುಕನ್ನು ಸಹನೀಯವಾಗಿಸಲು ಯತ್ನಿಸಿದರು. ಆದ್ದರಿಂದಲೆ ಇದನ್ನು ಕನ್ನಡ ವಚನ ಸಾಹಿತ್ಯ, ದಾಸ ಸಾಹಿತ್ಯಗಳ ಅಧ್ಯಯನ ಪರಂಪರೆಯಲ್ಲಿ ಗ್ರಹಿಸಬೇಕಾಗಿದೆ. ಈ ಮೂರೂ ಸಾಹಿತ್ಯ ಪಂಥಗಳು ಸಾಹಿತ್ಯವನ್ನು ಜನಸಾಮಾನ್ಯರ ಹಿತಕ್ಕಾಗಿ ಬಳಸಲು ಯತ್ನಿಸಿವೆ.

ವಚನದಂತೆ ತತ್ವಪದ ಪ್ರಕಾರಕ್ಕೂ ಶಿವಶರಣರೇ ಮೊದಲಿಗರು ಎಂಬ ಅಭಿಪ್ರಾಯವಿದೆಯಾದರೂ ಈ ಪ್ರಕಾರ ವ್ಯಾಪಕವಾದದ್ದು ಹಾಗೂ ಪರಿಣಾಮಕಾರಿಯಾದದ್ದು ೧೭, ೧೮ನೇ ಶತಮಾನಗಳ ಸಂದರ್ಭದಲ್ಲಿ. ಶಿವಶರಣರಲ್ಲಿ ಬೀಜಾಂಕುರವಾಗಿದ್ದದ್ದು, ನಿಜಗುಣ ಶಿವಯೋಗಿ ಮುಂತಾದವರಲ್ಲಿ ಕುಡಿಯೊಡೆದು, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫರ ಹೊತ್ತಿಗೆ ದಾಂಗುಡಿಯಿಟ್ಟು ವಸಾಹತುಶಾಹಿ ಕಾಲದಲ್ಲಿ ಭರ್ಜಿ ಸುಗ್ಗಿ ಮಾಡಿದ ಈ ತತ್ವಪದ ಪ್ರಕಾರವು ಕನ್ನಡ ಸಾಹಿತ್ಯ ಚರಿತ್ರೆಕಾರರ

ಅವಜ್ಞೆಗೆ ಒಳಗಾದದ್ದೂ ಇದೆ. ೧೭ರಿಂದ ೨೦ನೇ ಶತಮಾನದ ಅವಧಿಯಲ್ಲಿ ಕನ್ನಡ ನಾಡು ಮತ್ತು ಗಡಿಭಾಗಗಳುದ್ದಕ್ಕೂ ನೂರಾರು ತತ್ವಪದಕಾರರು ಸಾವಿರಾರು ಕೃತಿಗಳನ್ನು ರಚಿಸಿ ಹರವಿ ಹೋಗಿದ್ದಾರೆ.

ಅನುಭಾವದಿಂದ ಹುಟ್ಟಿ ಬಂದ ಈ ಪದಗಳು ಜನಪದರ ನಿಧಿಗಳಾಗಿ ಮೌಖಿಕ ಪರಂಪರೆಯಲ್ಲಿಯೇ ದಾಖಲಾಗುತ್ತ ಬೆಳೆದು ಬಂದಿವೆ. ಜನಸಾಮಾನ್ಯರ, ದುಡಿಯುವ ವರ್ಗದವರ ಪರವಾಗಿ ಸೃಷ್ಟಿಯಾದ ಅವು ತನ್ನಲ್ಲಿ ಗರ್ಭೀಕರಿಸಿಕೊಂಡಿರುವ ಜೀವನಾ–ನುಭವದಿಂದಾಗಿ ಚಲನಶೀಲತೆಯನ್ನು ಮೈಗೂಡಿಸಿಕೊಂಡಿವೆ. ಶಿವಯೋಗಿ, ಸಾಧು, ಸಂತ, ಮೌಲ್ವಿ, ಮುಲ್ಲಾಗಳಾದಿಯಾಗಿ ಸಾಮಾನ್ಯ ಸಂಸಾರಿಗಳು ಕೂಡ ಇವುಗಳನ್ನು ರಚಿಸಿ ಕನ್ನಡ ಸಾಹಿತ್ಯ ಪರಂಪರೆಗೆ ವೈವಿಧ್ಯವನ್ನು ತಂದು ಕೊಟ್ಟರು. ಸಾಮಾನ್ಯ ಲೋಕಾನುಭಾವದಿಂದ ಉನ್ನತ ದಾರ್ಶನಿಕ ನಿಲುವುಗಳವರೆಗೆ ಇದರ ಹರಹು ಇದೆ.

ಶರಣ, ಸಂತ, ಆರೂಢ, ನಾಥ, ಸಿದ್ಧ, ಶಾಕ್ತ, ಸೂಫಿ ಮುಂತಾದ ಆಯಾ ಕಾಲದ ಸಂವೇದನೆಗಳನ್ನು ಅನುರಣಿಸುತ್ತಿರುವ ಇವುಗಳ ವ್ಯಾಪ್ತಿ ತುಂಬಾ ವೈವಿಧ್ಯಪೂರ್ಣವಾಗಿದೆ. ಸ್ಥಗಿತಗೊಂಡಿದ್ದ ಸನಾತನತೆಗೆ ಸೆಡ್ಡು ಹೊಡೆದು ಪರ್ಯಾಯ ದಾರ್ಶನಿಕತೆಯನ್ನು ಇವು ಆರಂಭಿಸಿದವು. ಇಂಥ ಜೀವಂತ ಪರಂಪರೆಯೊಂದು ಶಿಷ್ಟ ಸಾಹಿತ್ಯ ಚರಿತ್ರೆಯ ಪರಿಧಿಯಿಂದ ದೂರವೇ ಉಳಿಯಲು ಕಾರಣವಾಗಿರಬಹುದಾದ ಅಂಶಗಳನ್ನು ಕುರಿತು ಅಧ್ಯಯನ ನಡೆಯುತ್ತಿದೆ. ಉದ್ದೇಶಪೂರ್ವಕವಾಗಿ ಇವುಗಳನ್ನು ಅವಗಣಿಸಿಲ್ಲದಿದ್ದರೂ ವಸಾಹತುಶಾಹಿ ಸಂದರ್ಭದಲ್ಲಿ, ಹೊಸ ಸಾಹಿತ್ಯದ ಎದುರಿನಲ್ಲಿ ಈ ದೇಶಿ ರಚನಾ ಸಾಹಿತ್ಯವನ್ನು ನಿರ್ಲಕ್ಷಿಸಿಸಲಾಗಿದೆ.

ಆಧುನಿಕ ಯುರೋಪಿನ ಸಾಹಿತ್ಯಕ ವಾದಗಳು, ಸಾಹಿತ್ಯರೂಪ ಮತ್ತು ಪರಿಕಲ್ಪನೆಗಳನ್ನು ಮೈಗೂಡಿಸಿಕೊಳ್ಳುವ ಭರದಲ್ಲಿ ಜನಪದರ ಜೀವನಾಡಿಯಾಗಿದ್ದ ಗುರು–ಶಿಷ್ಯ ಪರಂಪರೆಯ ಭಜನಾ ಪದಗಳು ಪಾಮರರ ಅಕಾರಣ ಚಟುವಟಿಕೆಗಳೆಂದೇ ಪರಿಗಣಿತವಾದವು. ಕುತೂಹಲಕ್ಕಾಗಿ ಅಲ್ಲಲ್ಲಿ ಕ್ವಚಿತ್ ಸಂಪಾದನೆ, ಅಧ್ಯಯನಕ್ಕೆ ಒದಗಿ ಬಂದರೂ ಅವು ಶುದ್ಧ ಜಾನಪದೀಯ ರೂಪವೆಂದೇ ಗುರುತಿಸುವ ಪ್ರಯತ್ನಗಳಾದವು. ಅವುಗಳನ್ನು ಪಾಶ್ಚಾತ್ಯ ಜಾನಪದೀಯ ಸಿದ್ಧಾಂತಗಳ ಅಡಿಯಲ್ಲಿ ನಿಷ್ಕರ್ಷೆ ಮಾಡುವ ಹವ್ಯಾಸವು ಬೆಳೆಯಿತು. ಈ ವಸಾಹತುಶಾಹಿ ಚಿಂತನಾ ಪರಿಪ್ರೇಕ್ಷವು ತತ್ವಪದ ಪರಂಪರೆಯ ವೈವಿಧ್ಯಮಯ ಬಹುಮುಖೀ ನೆಲೆಗಳನ್ನು ಶೋಧಿಸುವ ಪ್ರಯತ್ನ ಮಾಡಲಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ವಸಾಹತು ರಾಜಕಾರಣದ ಸಮ್ಮುಖದಲ್ಲಿ ಅಸೀಮ ಧಾರಣಾ–ಶಕ್ತಿಯನ್ನು ತೋರಿದ್ದ ಇವುಗಳ ರಚನೆಕಾರರ ಬದುಕಿನ ಭಿತ್ತಿಗಳನ್ನು ವಿಸ್ಮೃತಿಗೆ ತಳ್ಳಲಾಯಿತು. ಆದರೆ ಆಧುನಿಕ ಕಾಲಘಟ್ಟದಿಂದ ಆಧುನಿಕೋತ್ತರವಾದ ಮತ್ತು ಕಾರ್ಪೊರೇಟ್ ಜೀವನಶೈಲಿಯ ಈ ಹೊತ್ತಲ್ಲೂ ಗುರು–ಶಿಷ್ಯ ಪರಂಪರೆಯ ಅನುಭಾವಿಕ

ನೆಲೆಯ ತತ್ವಪದಗಳು ನಿರಂತರವಾಗಿ ಬದುಕಿನ ಲಹರಿಗಳಾಗಿ ಹರಳುಗಟ್ಟುತ್ತಲೇ ಇದ್ದು, ಅನುಭಾವಿ ಪದ, ಪದರುಗಳ ಭಜನೆ ಮೇಳಗಳ ಮೂಲಕ ಸಮಕಾಲೀನಗೊಳ್ಳುತ್ತಿವೆ. ಏಕತಾರಿಯ ಶ್ರುತಿ, ಸೋಬತಿಯ ನಿಗಿನಿಗಿ ಕೆಂಡದ ಧುನಿಯ ಬೆಳಕಿನಲ್ಲಿ ಬೆಳ್ಳಂಬೆಳಗಿ–ನವರೆಗೆ ನಡೆಯುವ ಪದ ಸಮಾರಾಧನೆಯ ಲೋಕವೇ ಬೇರೆ. ನಿಸರ್ಗ ನಿರ್ಮಿತ ಎಲ್ಲ ಕಷ್ಟ, ಕಾರ್ಪಣ್ಯ ಮತ್ತು ಮನುಷ್ಯ ಸಮಾಜ ನಿರ್ಮಿತ ದರ್ಪ, ದಬ್ಬಾಳಿಕೆ, ದೌರ್ಬಲ್ಯಗಳ ನಡುವೆಯೂ ಜೀವ–ಭಾವವನ್ನು ಕಾಪಿಟ್ಟು ಸುಮ್ಮನೆ ಕರುಣೆಯ ಸಾಗರವಾಗಿ ತುಂಬಿ ಹರಿಯುವ ಲಹರಿಯೇ ಬೇರೆ. ಇಂಥ ಅಮೂಲ್ಯ, ಅಮಿತ ಜೀವನ ಪ್ರೀತಿಯನ್ನು ತಾತ್ವಿಕ ಗಟ್ಟಿತನದೊಂದಿಗೆ ತುಂಬಿ ಕೊಡುವ ಭಜನೆಯ ಸುತ್ತಲಿನ ಬದುಕು ಮತ್ತು ಸಾಹಿತ್ಯ ಎರಡನ್ನೂ ಅನುಸಂಧಾನಗೊಳಿಸುವ ಬಹುದೊಡ್ಡ ಕೆಲಸವನ್ನು ಇಂದಿಗೂ ತತ್ವಪದಗಳು ಮಾಡುತ್ತಿವೆ.

"ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಉಳಿದೆಲ್ಲ ಶಿಷ್ಟ ಸಾಹಿತ್ಯವು ಸಂಪಾದನೆ, ಪರಿಷ್ಕರಣೆ, ಪ್ರಸಾರ, ಅಧ್ಯಯನ, ಅಧ್ಯಾಪನದಂಥ ಅಕಡೆಮಿಕ್ ಶಿಸ್ತಿಗೆ ತೆರೆದುಕೊಂಡಂತೆ ತತ್ವಪದ ರಚನಾ ಪ್ರಕಾರ ತೆರೆದುಕೊಳ್ಳಲೇ ಇಲ್ಲ. ಎರಡನೆಯದಾಗಿ ಪ್ರಚಾರ, ಪ್ರಸಾರಗಳ ಬಗೆಗೆ ದಿವ್ಯ ನಿರ್ಲಕ್ಷ್ಯ, ಸಾಹಿತ್ಯೋದ್ಯಮದಿಂದ ಉದ್ದೇಶಪೂರ್ವಕ ಅಂತರ ಇಟ್ಟುಕೊಳ್ಳುವ ಈ ಮಂದಿ ಪ್ರಧಾನ ಧಾರೆಯಿಂದ ದೂರವೇ ಉಳಿದರು. ಹೀಗಾಗಿ ಆಧುನಿಕ ಚರಿತ್ರೆಕಾರರ ಕೈಗೆ ಇವರು ದಕ್ಕಿದ್ದು ತುಂಬಾ ಕಡಿಮೆ. ಹಾಗೆ ನೋಡಿದರೆ ವಚನ ಸಾಹಿತ್ಯವೂ ಪ್ರಗತಿಪರ ವಿದ್ವತ್ ಲೋಕಕ್ಕೆ ತುಂಬಾ ತಡವಾಗಿಯೇ ಒದಗಿಬಂದಿದೆ."[೩೭] ಆದರೆ ಬಂದದ್ದು ತಡವಾದರೂ ಕಳೆದ ದಶಕದಲ್ಲಿ ತತ್ವಪದಗಳನ್ನು ಬಿಡಿಬಿಡಿಯಾಗಿ ಮತ್ತು ಇಡಿಯಾಗಿ ಅಧ್ಯಯನ ನಡೆಸಲಾಗಿದೆ. ಮುಖ್ಯವಾಗಿ ಇವು ಗುರು – ಶಿಷ್ಯ ಪರಂಪರೆಯ ದೀಕ್ಷೆ, ಭಜನಾ ಲೋಕದ ಹಾಡುಗಾರಿಕೆಯ ಮೇಳದಲ್ಲಿ ಹುಟ್ಟಿಕೊಂಡಿರುವುದರಿಂದ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳಂತೆ ಇವು ಅಧ್ಯಯನಕ್ಕೆ ಒಳಗಾಗಿ ಶಾಸ್ತ್ರೀಯ ಸಂಪಾದನೆ, ಪ್ರಕಟಣೆಗಳಿಗೆ ಲಭ್ಯವಾಗಲಿಲ್ಲ. ವಚನಗಳಿಗೆ ಕನಿಷ್ಠಪಕ್ಷ ವೀರಶೈವ ಮಠ–ಮಾನ್ಯಗಳಲ್ಲಿ ಧಾರ್ಮಿಕ ನೆಲೆಗಟ್ಟಾದರೂ ಸಿಕ್ಕಿದರೆ ತತ್ವಪದಗಳಿಗೆ ಆ ಅವಕಾಶವೂ ಸಿಗಲಿಲ್ಲ.

ವಾಸ್ತವವಾಗಿ, ಅನುಭಾವಿಕವಾಗಿ ಉತ್ಕೃಷ್ಟವಾದ, ಸಾಹಿತ್ಯಕ ಸತ್ವವುಳ್ಳ ರಚನೆಗಳನ್ನು ನೀಡಿ ಇವರು ನಿಜವಾದ ಅರ್ಥದಲ್ಲಿ ಕನ್ನಡ ಸಾಹಿತ್ಯವನ್ನು ಶ್ರೀಮಂತ–ಗೊಳಿಸಿದ್ದಾರೆ. ಕರ್ನಾಟಕದ ಉದ್ದಗಲಕ್ಕೂ ಇಂಥ ತತ್ವಪದಗಳ ರಾಶಿ ಹೇರಳವಾಗಿ ಹರಡಿಕೊಂಡಿದೆ. ಜನಪದ ಸಾಹಿತ್ಯದಂತಹ ಈ ಪದಗಳ ಮೂಲಕರ್ತೃ, ಮೂಲ ಪಾಠ ನಿಷ್ಕರ್ಷಿಸುವುದು ತುಂಬಾ ಕಷ್ಟದ ಸಂಗತಿ. ಎಲ್ಲಕ್ಕಿಂತ ಹೆಚ್ಚಾಗಿ ಗ್ರಾಮೀಣರು ಈ ಕ್ಷಣಕ್ಕೂ ಪದಗಳನ್ನು ರಚಿಸುತ್ತಲೇ ಇದ್ದಾರೆ. ಹೀಗಾಗಿ ಕಾಲಮಿತಿ, ಕರ್ತೃ ನಿರ್ಣಯ, ಮೂಲ ಪತ್ರ ನಿರ್ಣಯ ಇವೆಲ್ಲ ಸವಾಲಿನ ಕೆಲಸವೇ ಸರಿ. ಪದಗಳ ವಸ್ತು, ಭಾಷೆ, ತಂತ್ರ, ಸಿದ್ಧಾಂತಗಳಿಗೆ ಸಂಬಂಧಪಟ್ಟಂತೆ ತುಂಬಾ ವೈವಿಧ್ಯ, ಸಂಕೀರ್ಣತೆ ಇದೆ. ಯಾವುದನ್ನು

ನಿರ್ದಿಷ್ಟವಾಗಿ ತತ್ವಪದ ಎಂದು ಗುರುತಿಸಬೇಕು ಎಂಬುದರ ಬಗೆಗೆ ವಿದ್ವತ್ ವಲಯದಲ್ಲಿ ಗೊಂದಲಗಳಿವೆ.

ಉದಾಹರಣೆಗೆ, ತತ್ವಪದಕಾರರಲ್ಲಿ ಮುಖ್ಯರಾದ ಕಡಕೋಳ ಮಡಿವಾಳಪ್ಪನವರ ತತ್ವಪದಗಳು ತತ್ವಪದಕಾರರ ಧಾರ್ಮಿಕ ಸೌಹಾರ್ದತೆಯ ಪರಿಕಲ್ಪನೆಯ ಸ್ವರೂಪವನ್ನು ಹಾಗೂ ಅದರ ಹಿಂದಿರುವ ತಾತ್ವಿಕ–ವಿನ್ಯಾಸಗಳನ್ನು ಖಚಿತವಾಗಿ ನಿರೂಪಿಸುತ್ತವೆ. ಸ್ಥಾಪಿತ ಧರ್ಮಗಳು ಜಡಗೊಂಡು ಆಂತರಿಕವಾಗಿ ಪುರೋಹಿತಶಾಹಿ ಮತ್ತು ಮೌಢ್ಯಗಳನ್ನು ಬೆಳೆಸಿ ಜನಸಮುದಾಯವನ್ನು ಶೋಷಿಸುತ್ತಿದ್ದವು ಹಾಗೂ ಜಡಗೊಂಡ ಧರ್ಮಗಳು ಪರಸ್ಪರ ದ್ವೇಷ ಅಸಹನೀಯತೆಗಳ ಕಾರಣದಿಂದ ಧಾರ್ಮಿಕ ಹಿಂಸೆಗೆ ವೇದಿಕೆಯಾಗುತ್ತಿದ್ದವು. ಈ ಬಗೆಯ ಧಾರ್ಮಿಕ ಹಿಂಸೆಗೆ ಪರ್ಯಾಯವಾಗಿ ಎಲ್ಲ ಧರ್ಮಜಾತಿ ಜನಾಂಗಗಳ ಜನಸಮುದಾಯಗಳು ಸೌಹಾರ್ದತೆಯಿಂದ ಬದುಕನ್ನು ರೂಪಿಸಿಕೊಳ್ಳಬೇಕೆಂಬ ಒತ್ತಾಸೆಯಿಂದ 'ಸಾಮರಸ್ಯ'ದ ತಾತ್ವಿಕತೆಯನ್ನು ಈ ತತ್ವಪದಗಳಲ್ಲಿ ಪ್ರತಿಪಾದಿಸಲಾಗಿದೆ. ಒಂದು ವಿಶ್ವಾತ್ಮಕವಾದ ಸೌಹಾರ್ದತಾ ತತ್ವವನ್ನು ಪ್ರತಿಪಾದಿಸುವದರ ಹಿಂದೆ, ನೋವು ಅಪಮಾನ ಹಿಂಸೆ ಹಾಗೂ ಸಂಘರ್ಷಗಳಿಂದ ಕೂಡಿದ ವ್ಯಕ್ತಿಗತ ಹಾಗೂ ಸಾಮಾಜಿಕ ಬದುಕುಗಳ ಒತ್ತಡಗಳಿವೆ.ಈ ದೃಷ್ಟಿಯಿಂದ ತತ್ವಪದಗಳು ವಿಶೇಷ ಅಧ್ಯಯನವನ್ನು ಬಯಸುತ್ತವೆ.

ತತ್ವಪದಕಾರರಲ್ಲಿಯೇ ಹೆಚ್ಚು ಅಧ್ಯಯನಕ್ಕೆ ಒಳಗಾಗಿರುವ ಕಡಕೋಳ ಮಡಿವಾಳಪ್ಪ ಅತ್ಯಂತ ಪ್ರಯೋಗಶೀಲ ಕವಿ. ಭಾವಗೀತಾತ್ಮಕವಾದ ಅಸಂಖ್ಯ ಲಯಗಳ ಸೃಷ್ಟಿ, ಭಾಷೆಯ ಮೇಲಿನ ಅಪರಿಮಿತವಾದ ಹಿಡಿತ, ಎತ್ತ ಸಿಕ್ಕಂತ ಶಬ್ದಗಳನ್ನು ಒಗ್ಗಿಸಿಕೊಳ್ಳುವ ತಾಂತ್ರಿಕತೆ, ಆಡುನುಡಿ ಮತ್ತು ಜನಪದ ಪಡೆನುಡಿಗಳ ಸಹಜ ಬಳಕೆ, ಶಬ್ದಗಳ ಜತೆಗಿನ ಗುದ್ದಾಟ – ಹೀಗೆ ಹಲವಾರು ವೈಶಿಷ್ಟ್ಯಗಳಿಂದ ಕಡಕೋಳ ಮಡಿವಾಳಪ್ಪನವರ ತತ್ವಪದಗಳು ಭಾವಗೀತೆಗಳಂತೆ ಕೇಳಿಸುತ್ತವೆ. ಅಪಮಾನಿತ ಬದುಕಿನ ಸಂಕಟ, ಉಗ್ರವಾದ ಪ್ರತಿಭಟನೆ ಹಾಗೂ ಹೊಸ ಪರ್ಯಾಯಗಳ ಶೋಧ ಅವನ ಬದುಕು ಮತ್ತು ಸೃಜನಶೀಲತೆಯ ಮುಖ್ಯ ಲಕ್ಷಣಗಳಾಗಿರುವದರಿಂದ ಭಾಷಿಕವಾಗಿ, ಪ್ರತಿಮಾ ವಿಧಾನದಲ್ಲಿ ಅದರ ಪರಿಣಾಮವನ್ನು ಗುರುತಿಸಬಹುದಾಗಿದೆ. ಧಾರ್ಮಿಕ ಹಿಂಸೆ ಮತ್ತು ಸೌಹಾರ್ದತೆಗಳ ನಡುವಿನ ಸಂಘರ್ಷದಲ್ಲಿ ಈ ಬಗೆಯ ಅಭಿವ್ಯಕ್ತಿಕ್ರಮ ರೂಪತಾಳಿದೆ. "ಬೇಂದ್ರೆಯವರ ನಾದಮಯತೆ, ಅಡಿಗರ ಪ್ರತಿಮಾ ವಿಧಾನ, ಕುವೆಂಪು ಅವರ ಸಾಂಸ್ಥಿಕ ವ್ಯವಸ್ಥೆಯ ಪ್ರತಿಭಟನಾ ಮಾದರಿ, ಸಿದ್ಧಲಿಂಗಯ್ಯನವರ ಆವೇಶ, ಆಕ್ರೋಶ, ಚಂಪಾ ಅವರ ವಿಡಂಬನೆಗಳೆಲ್ಲವೂ ಕಡಕೋಳ ಮಡಿವಾಳಪ್ಪನ ತತ್ವಪದಗಳಲ್ಲಿ ಕಂಡುಬರುತ್ತವೆ."[೩೬] ಸಿಟ್ಟು ಆಕ್ರೋಶಗಳನ್ನು ವ್ಯಕ್ತಪಡಿಸುವಾಗ ಭಾಷಿಕವಾದ ಯಾವುದೇ ಮಡಿಮೈಲಿಗೆಯನ್ನು ಧಿಕ್ಕರಿಸಿರುವ ಕಾರಣಕ್ಕೆ ಇವನ ತತ್ವಪದಗಳಿಗೆ ದೊಡ್ಡ ಶಕ್ತಿಯೇ ಲಭಿಸಿದಂತಾಗಿದೆ. ವೈವಿಧ್ಯತೆ, ಬಹುತ್ವ ಮತ್ತು ಸರ್ವತ್ವಗಳನ್ನು ಗೌರವಿಸುವ ಪ್ರೀತಿಸುವ

ಮನಸ್ಥಿತಿಯ ಕಾರಣದಿಂದ ಕಡಕೋಳ ಮಡಿವಾಳಪ್ಪನವರ ತತ್ವಪದಗಳು ಬಹುರೂಪಿಯಾಗಿವೆ.

ತತ್ವಪದಗಳ ಶಕ್ತಿ ಇರುವುದೇ ಅವುಗಳ ನಾದಮಯತೆಯಲ್ಲಿ, ಲಯಗಾರಿಕೆಯಲ್ಲಿ. ಹಿಂಸೆಯಿಂದ ತುಂಬಿದ ಜಗತ್ತಿನ ಸಂಕಟಗಳಿಗೆ ಸ್ಪಂದಿಸಿದ ನೋವುಂಡ ಜೀವ ಧ್ಯಾನಸ್ಥ ಸ್ಥಿತಿಯಲ್ಲಿ ಅದಕ್ಕೆ ಪರ್ಯಾಯವನ್ನು ಕಂಡುಕೊಂಡಾಗ ತನ್ಮಯೀ ಸ್ಥಿತಿಯಲ್ಲಿ ಸಹಜವಾಗಿ ಸ್ಫುರಿಸಿದ ಲಯವಿದು. ಲಯವೆನ್ನುವದು ಕವಿಗೆ ಸಿದ್ಧ ಕಾಲುವೆಯಲ್ಲ, ಕವಿ ವಸ್ತುವಿನೊಂದಿಗೆ ತಾಳುವ ತಾದಾಂತ್ಯದಲ್ಲಿ ಚಿಂತನೆಯು ಭಾವನೆ, ಸಂವೇದನೆಯಾಗಿ ಲಯರೂಪವನ್ನು ಧರಿಸುತ್ತವೆ. ನೋವು ಮತ್ತು ಉತ್ಸಾಹಗಳೆರಡೂ ಒಂದುಗೂಡಿದಂತಿದೆ. ಮಾತ್ರಗಣ ಮತ್ತು ಅಂಶಗಣಗಳ ಮಿಶ್ರಣದ ಕಾರಣದಿಂದ ತಾಳ ಮತ್ತು ರಾಗಗಳು ಸಮ್ಮಿಳನಗೊಂಡು ಹೊಸ ಅನುಭವವನ್ನು ನೀಡುತ್ತವೆ. ಸಂವೇದನೆಯನ್ನು ತಲುಪಿಸಲು ಶಬ್ದ ಅರ್ಥಗಳು ಮಾತ್ರ ಮಾಧ್ಯಮವಲ್ಲ, ಲಯವೂ ಆ ಕೆಲಸವನ್ನು ಮಾಡಬಲ್ಲುದು. ಕನ್ನಡ ಕಾವ್ಯದುದ್ದಕ್ಕೂ ಪುನರಾವರ್ತನೆ ಈ ಕಾರಣದಿಂದಲೇ ಅಭಿವ್ಯಕ್ತಿಗೊಂಡಿದೆ. ಈ ಪದ್ಯಗಳಲ್ಲಿ ಶಬ್ದ ಅರ್ಥಗಳಾಚೆ ಲಯ ತನ್ನಷ್ಟಕ್ಕೆ ತಾನೇ ಪುನರಾವರ್ತನೆಗೊಳ್ಳುತ್ತ ಸೌಹಾರ್ದತಾ ತತ್ವವನ್ನು ಅಭಿವ್ಯಕ್ತಿಸುವಲ್ಲಿ ಮತ್ತು ಓದುಗರಿಗೆ ತಲುಪಿಸುವಲ್ಲಿ ಸಹಾಯಕವಾಗಿದೆ, ತುಂಬ ತೀವ್ರವಾದ ಒಳಗೊಳ್ಳುವಿಕೆಯಿಂದ ಮಾತ್ರ ಇದು ಸಾಧ್ಯ. ಇಲ್ಲವಾದರೆ ಲಯದ ಕೃತಕತೆ ಎದ್ದು ಕಾಣುತ್ತದೆ.

ಈ ತತ್ವಪದಗಳ ಅಭಿವ್ಯಕ್ತಿಕ್ರಮದ ಇನ್ನೊಂದು ಮುಖ್ಯ ಶಕ್ತಿ ಎಂದರೆ ನಿರರ್ಗಳವಾದ ಅನುಪ್ರಾಸಗಳ ಬಳಕೆ. ಶಬ್ದಾರ್ಥಗಳ ಹಂಗನ್ನು ಹರಿದು ಪ್ರಾಸಾನುಪ್ರಾಸದ ಚೆಲುವಿಗೆ ಒಳಗಾದ ಮನಸ್ಥಿತಿಯನ್ನು ಗುರುತಿಸಬಹುದು. ಕವಿಯು ಅಭಿವ್ಯಕ್ತಪಡಿಸಬೇಕೆಂದಿರುವ ವಿಷಯದ ಮೇಲಿನ ಅಪರಿಮಿತ ಹಿಡಿತ ಸಂಪೂರ್ಣ ಒಳಗೊಳ್ಳುವಿಕೆ ಹಾಗು ಕವಿಯ ಶ್ರೀಮಂತ ಶಬ್ಧಭಂಡಾರದಿಂದ ಮಾತ್ರ ಇದು ಸಾಧ್ಯ. ಅನುಪ್ರಾಸವೇ ಅರ್ಥಸಂವಾಹಕವಾಗುವ ಮಾದರಿಯಿದು. ಧಾರ್ಮಿಕ ಸೌಹಾರ್ದತೆಯನ್ನು ಧ್ಯಾನಸ್ಥ ಸ್ಥಿತಿಯಲ್ಲಿ ಪ್ರತಿಪಾದಿಸಿದ ಕಾರಣದಿಂದ ಇಂಥ ಅಭಿವ್ಯಕ್ತಿ ಸಾಧ್ಯವಾಗಿದೆ. ಈ ತತ್ವಪದಗಳ ಅಭಿವ್ಯಕ್ತಿಯಲ್ಲಿ ಕಂಡುಬರುವ ಇನ್ನೊಂದು ಪ್ರಮುಖ ಗುಣವೆಂದರೆ ಹೊಸ ಶಬ್ಧಗಳ ಸೃಷ್ಟಿ. ಹಾಗೂ ಇರುವ ಶಬ್ದಗಳಿಗೆ ಹೊಸ ಅರ್ಥಗಳ ಹುಟ್ಟು. ಇದು ಪ್ರತಿಭಾವಂತ ಕವಿಗಳಿಂದ ಮಾತ್ರ ಸಾಧ್ಯವಿದ್ದು, ಅದಕ್ಕೆ ತತ್ವಪದಗಳಲ್ಲಿ ಹೇರಳವಾಗಿ ಉದಾಹರಣೆಗಳು ದೊರೆಯುತ್ತವೆ. ಹಾಗೆಯೇ ಪರಸ್ಪರ ಪದ ಪ್ರಯೋಗಗಳು ಆ ಪರಿಸರದಲ್ಲಿ ಮತ್ತೊಂದು ಹೊಸ ಅರ್ಥಕ್ಕೆ ನೆಗೆಯುವ ಕ್ರಮವನ್ನೂ ಗುರುತಿಸಬಹುದು. ಜಾರ, ಚೋರ ಮತ್ತು ಬೀರ ಪೀರ ವೈರುಧ್ಯಗಳಾಗಿರುವಂತೆಯೇ ಬೀರ–ಶಿವ ಎಂದುಕೊಂಡರೆ ಜಾರಚೋರ ಕೃಷ್ಣನಾಗಿಬಿಡುತ್ತಾನೆ. ಪೀರ ಇಸ್ಲಾಮನ್ನು ಧ್ವನಿಸುತ್ತಾನೆ. ಸರ್ವಧರ್ಮಗಳಿಗೂ ಶರಣಾರ್ಥಿಯೆಂಬ ಹೊಸ ಅರ್ಥವೇ ಹೊರಹೊಮ್ಮುತ್ತದೆ.

ಒಟ್ಟಾರೆ ತತ್ವಪದಗಳ ತಾತ್ವಿಕತೆಯನ್ನು ಗುರುತಿಸುವುದಾದರೆ, "ತತ್ವಪದಕಾರರ ಪಂಥವು ವಿಚಾರ ಮತ್ತು ಆಚರಣಾ ಪಂಥ ಎರಡೂ ಆಗಿರುವುದರಿಂದ ಸಮೂಹದ ಜೀವನ ಮೀಮಾಂಸೆಯನ್ನು ನೇರವಾಗಿ ಅನುಸಂಧಾನ ಮಾಡುತ್ತದೆ. ಸಮೂಹದ ಸಂಕಟವನ್ನು ತನ್ನ ಸಂಕಟವಾಗಿಸಿಕೊಳ್ಳುವ ತತ್ವಪದಕಾರರ ಪರಂಪರೆಯು ಜನರ ನಡುವೆ ಜೀವಂತವಾಗಿರುವುದಕ್ಕೆ ಕಾರಣ ಅದು ದೇಹದ ಸಂಕಟಗಳ ಮತ್ತು ದು:ಖದ ಅನುಸಂಧಾನದಲ್ಲಿ ತೊಡಗುತ್ತದೆ. ಇಂದ್ರಿಯ ಸಮೇತ ಬಾಳುವ ಮನುಷ್ಯನ ಎಲ್ಲ ಕಷ್ಟ ಕೋಟಲೆಗಳನ್ನು ಲೌಕಿಕದ ನೆಲೆಯಲ್ಲಿಯೇ ಕನ್ನಡದ ಪ್ರಧಾನ ಧಾರೆ ಪರಿಭಾವಿಸಿ ಅನುಸಂಧಾನ ಮಾಡಿರುವುದನ್ನು ತತ್ವಪದಗಳಲ್ಲಿ ಕಾಣಬಹುದಾಗಿದೆ."[೩೭] ಆ ಮೂಲಕ ತತ್ವಪದಗಳು ಜೀವನ್ಮುಖಿ ಕಾವ್ಯಗಳಾಗಿ ರೂಪುತಳೆಯಲು ಇದ್ದ ಒತ್ತಡಗಳೇನೆಂಬುದನ್ನು ಗ್ರಹಿಸಬಹುದು.

ಮುಸ್ಲಿಂ ಸಾಹಿತ್ಯ

ವಾಸ್ತವವಾಗಿ ಕನ್ನಡದಲ್ಲಿ ಮೊದಲಿಗೆ ಮುಸ್ಲಿಂ ಸಾಹಿತ್ಯ ಕಾಣಿಸಿಕೊಂಡಿದ್ದು ತತ್ವಪದಗಳ ಮೂಲಕವೆ. ನಂತರ ಹೊಸ ತಲೆಮಾರಿನ ಬರಹಗಾರರಲ್ಲಿ ಮುಖ್ಯವಾಗಿ ಸಾಹಿತ್ಯಲೋಕಕ್ಕೆ ಪ್ರವೇಶಿಸಿದವರಿಂದ ತಮ್ಮ ಸುತ್ತಲಿನ ಪರಿಸರ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಯ ನೆಲೆಯಲ್ಲಿ ಸಾಹಿತ್ಯ ಕೃಷಿ ವಿಫುಲವಾಗಿ ನಡೆದಿದೆ. ದಲಿತ-ಬಂಡಾಯದ ಮಾದರಿಯಲ್ಲಿ ಮುಸ್ಲಿಂ ಸಂವೇದನೆಯ ಸಾಹಿತ್ಯ ವಿಮರ್ಶೆಯೂ ಹಲವು ನಿಟ್ಟಿನಲ್ಲಿ ಹೊರಹೊಮ್ಮುತ್ತಿದೆ. ಇಂದು ಮುಸ್ಲಿಂ ಸಮುದಾಯವು ಸಂಕಷ್ಟದ ಸ್ಥಿತಿಯಲ್ಲಿದೆ. ಹಿಂದೆ ದಲಿತರು ಅಸ್ಪೃಶ್ಯತೆಯನ್ನು ಹೀನಾಯವಾಗಿ ಅನುಭವಿಸಿ, ನೋವು-ಅಪಮಾನಗಳಿಂದ ನರಳಿದಂತಹ ಸ್ಥಿತಿ ಇಂದು ಮುಸ್ಲಿಮರಿಗೂ ಆಗುತ್ತಿದ್ದು, ದಲಿತರಂತೆ ಮುಸ್ಲಿಮರೂ ಚಳುವಳಿಯನ್ನು ಆರಂಭಿಸಿ ಮುಸ್ಲಿಂ ಸಂವೇದನೆ ಬರವಣಿಗೆಯ ಮೂಲಕ ತೀವ್ರತೆರನಾಗಿ ಅಭಿವ್ಯಕ್ತಿಯನ್ನು ಸಾಧಿಸಬೇಕೆಂಬ ಹಂಬಲ ಮುಸ್ಲಿಂ ಸಮುದಾಯದ ಸಾಹಿತಿಗಳಿಂದ ವ್ಯಕ್ತವಾಗುತ್ತಿದೆ.

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಬರಹಗಾರರಲ್ಲಿ ವಿಶಿಷ್ಟ ಸಂವೇದನೆ ಇದೆ. ಎಪ್ಪತ್ತರ ದಶಕದಲ್ಲಿ ಆರಂಭವಾದ ಮುಸ್ಲಿಂ ಸಂವೇದನೆಯ ಬರಹಗಳು ಸಮುದಾಯದೊಳಗಿನ ಅನೇಕ ಸಾಮಾಜಿಕ ಬದಲಾವಣೆಗಳಿಗೂ ಕಾರಣವಾಗಿವೆ. ಸಾರಾ ಅಬೂಬಕರ್, ಫಕೀರ್ ಮಹ್ಮದ್ ಕಟ್ಪಾಡಿ, ಬೋಳವಾರ ಮಹಮದ್ ಕುಂಞ, ರಂಜಾನ್ ದರ್ಗಾ, ಬಾನು ಮುಸ್ತಾಕ್, ರಹಮತ್ ತರಿಕೆರೆ, ಕೆ. ಶರೀಫಾ, ಪೀರಭಾಷಾ ಬಿ., ಡಾ. ಮಿರ್ಜಾ ಬಷೀರ್, ಅಬ್ದುಲ್ ರಷೀದ್ ಮೊದಲಾದ ಅನೇಕ ಹಿರಿಯ ತಲೆಮಾರಿನ ಬರಹಗಾರರು ತಮ್ಮ ಬರಹಗಳಿಂದ ಸಮಾಜದೊಳಗಿನ ಮೌಢ್ಯವನ್ನು ಪ್ರಶ್ನಿಸಿದ್ದಾರೆ. ಆದರೆ ಮುಸ್ಲಿಂ ಸಮಾಜದೊಳಗಿನ ಅನುಭವಗಳನ್ನು, ಸಂವೇದನೆಗಳನ್ನು ಸೃಜನಶೀಲ ಬರಹಕ್ಕಷ್ಟೇ ಸೀಮಿತಗೊಳಿಸಿಕೊಂಡಿದ್ದು, ವಿಮರ್ಶಾತ್ಮಕವಾಗಿ ಅಭಿವ್ಯಕ್ತಿಸುವ ಪ್ರಯತ್ನಗಳು ಕಡಿಮೆ. ಆದರೆ, ಇವತ್ತಿನ ಸೃಜನಶೀಲ ಸಾಹಿತ್ಯವೂ ಸೀಮಿತಾರ್ಥದಲ್ಲಿ ಸೃಜನಶೀಲ ವಿಮರ್ಶೆಯಾಗಿಯೂ ಕೆಲಸ ಮಾಡುವುದರಿಂದ ಇಂದಿನ ಅಸಹಿಷ್ಣುತೆಯ

ಕಾಲಸಂದರ್ಭದಲ್ಲಿ ಹೊಸ ತಲೆಮಾರಿನ ಮುಸ್ಲಿಂ ಬರಹಗಾರರ ಸಾಹಿತ್ಯವನ್ನು ಭಿನ್ನ ಬಗೆಯಲ್ಲಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ.

ಹೊಸ ತಲೆಮಾರಿನ ಬರಹಗಾರರಲ್ಲಿ ಮುಖ್ಯರಾದ ದಸ್ತಗಿರಿ ದಿನ್ನಿ, ಆರೀಫ್ ರಾಜ್, ಅಬ್ಬಾಸ ಮೇಲಿನಮನೆ, ಇರ್ಷಾದ್ ಉಪ್ಪಿನಂಗಡಿ, ಮುರ್ತುಜಾ ಬೇಗಂ, ಮಲ್ನಾಡ್ ಮಹೆಬೂಬ, ಮಸ್ತಾನ್ ಬಿರಾದಾರ, ಎ. ಎಸ್. ಮಕಾನದಾರ ಮೊದಲಾದವರು ಹೊಸ ರೀತಿಯ ಆಲೋಚನೆಗಳಿಂದ ತಮ್ಮ ಬರಹಗಳಲ್ಲಿ ವೈಚಾರಿಕತೆಯನ್ನು ಅಳವಡಿಸಿಕೊಳ್ಳುತ್ತಿರುವ ರೀತಿ, ಪ್ರಶ್ನಿಸುವ ಮನೋಭಾವ ಬೆಳಸಿಕೊಳ್ಳುತ್ತಿದ್ದಾರೆ.

ಮುಸ್ಲಿಂ ಸಂವೇದನೆಯನ್ನು ಕನ್ನಡ ಸಾಹಿತ್ಯದ ಮುಖ್ಯ ವಾಹಿನಿಗೆ ಜೋಡಿಸಬೇಕೆಂಬ ಕಳಕಳಿ ಹೊಂದಿರುವ ಡಾ. ಮುಮ್ತಾಜ್ ಬೇಗಂ ಅವರ ಹೇಳಿಕೆಯನ್ನು ಈ ಸಂದರ್ಭದಲ್ಲಿ ಪರಿಶೀಲಿಸಬಹುದು. “ಹೊಸ ತಲೆಮಾರಿನ ಬರಹಗಾರರಲ್ಲಿ ಮುಖ್ಯವಾಗಿ ಸಾಹಿತ್ಯಲೋಕಕ್ಕೆ ಪ್ರವೇಶಿಸಿದವರಿಂದ ತಮ್ಮ ಸುತ್ತಲಿನ ಪರಿಸರ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಯ ನೆಲೆಯಲ್ಲಿ ಸಾಹಿತ್ಯ ಕೃಷಿ ವಿಫುಲವಾಗಿದೆ. ಆದರೆ ಇಂದು ಅಗತ್ಯವಿರುವುದು ದಲಿತಬಂಡಾಯದ ಮಾದರಿ ಮುಸ್ಲಿಂ ಸಂವೇದನೆ. ಇದು ಹಲವು ನಿಟ್ಟಿನಲ್ಲಿ ಗಟ್ಟಿಗೊಂಡು ಹೊರಹೊಮ್ಮುವ ಅಗತ್ಯವಿದೆ. ಹೀಗೆಂದಾಕ್ಷಣ ಸಮುದಾಯದೊಳಗಿನ ನಕಾರಾತ್ಮಕ ಗುಣಗಳಷ್ಟೇ ಅಲ್ಲದೇ, ಸಕಾರಾತ್ಮಕ ಗುಣಗಳು ವ್ಯಕ್ತವಾಗಬೇಕು. ಅಲ್ಲದೇ ಸಮಕಾಲೀನ ಸಮಾಜ ಮತ್ತು ಮುಸ್ಲಿಂ ಪ್ರಜ್ಞೆ ಸ್ಪಂದಿಸುವ ರೀತಿ, ಎದುರಿಸುತ್ತಿರುವ ಸಮಸ್ಯೆಯನ್ನು ಅನಾವರಣಗೊಳಿಸುವ ಅನಿವಾರ್ಯತೆ ಇದೆ.”[೩೮] ಇತರ ಸಮುದಾಯದವರೊಂದಿಗೆ ಸೌಹಾರ್ದತೆಯ ಬದುಕನ್ನು ಕಟ್ಟಿಕೊಂಡು, ಮುಸ್ಲಿಂ ಸಂವೇದನೆಯ ಅನನ್ಯತೆಯನ್ನು ಸಾಹಿತ್ಯದ ವಸ್ತುವಾಗಿಸಿಕೊಳ್ಳಬೇಕಿದೆ. ಇಂತಹ ಬರಹಗಳು ಬಂದಾಗ ಮಾತ್ರ ಮುಸ್ಲಿಂ ಸಮುದಾಯ ಪ್ರಜ್ಞೆಯ ನೆಲೆಯಲ್ಲಿ ಹೊಸ ಚಳುವಳಿ ಕಟ್ಟಲು ಸಾಧ್ಯವಾಗುತ್ತದೆ. ನುಡಿಸಂಕರ, ಅಮಿರ್ ಬಾಯಿ ಕರ್ನಾಟಕಿ, ಸೂಫಿ ಪಂಥ, ಸೂಫಿ ಕತೆಗಳನ್ನು ಕುರಿತ ಅಧ್ಯಯನಗಳ ಮೂಲಕ ಕನ್ನಡಕ್ಕೆ ಮುಸ್ಲಿಂ ಲೋಕವನ್ನು ತೆರೆಯುವ ಪ್ರಯತ್ನಗಳು ನಡೆಯುತ್ತಿವೆ.

ಅಡಿಟಿಪ್ಪಣಿಗಳು:

೧. ಚಲಪತಿ ಆರ್., ಕನ್ನಡ ಅರಿವಿನ 'ಕಟ್ಟುನುಡಿ'ಯ ಸಂಕಟ, ಅನಿಕೇತನ ಡಾಟ್ ಕಾಮ್, ೦೬-೦೬-೨೦೧೬
೨. ವಿಜಯಶಂಕರ ಎಸ್. ಆರ್., ಒಳದನಿ, ಸಪ್ನ ಬುಕ್ ಹೌಸ್, ಬೆಂಗಳೂರು – ೨೦೧೫, ಪುಟ – ೧೪೫
೩. ವಿಜಯಶಂಕರ ಎಸ್. ಆರ್., ನಿಜಗುಣ, ಸಪ್ನ ಬುಕ್ ಹೌಸ್, ಬೆಂಗಳೂರು – ೨೦೧೫, ಪುಟ – ೯೭
೪. ವಿಜಯಶಂಕರ ಎಸ್. ಆರ್., ಅಪ್ರಮೇಯ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೭, ಪುಟ – ೨೮೬
೫. ಅದೇ, ಪುಟ – ೮೬
೬. ಶಂಕರ್ ಡಿ. ಎ., ಲೇಖನ : ಹೊಸ ವಿಮರ್ಶೆ ಎಂದರೆ ಬರೀ ಅನುವಾದವೇ?, ಕನ್ನಡ ಪ್ರಭ ದಿನಪತ್ರಿಕೆ, ದಿನಾಂಕ ೦೨-೦೩-೨೦೧೩ ಮೈಸೂರು.
೭. ಅಕ್ಷರ ಕೆ. ವಿ., ಟಿ. ಪಿ. ಅಶೋಕ ಅವರ 'ಸಾಹಿತ್ಯ ಸಂಬಂಧ' ಕೃತಿಗೆ ಬರೆದ ಮುನ್ನುಡಿ. ಅಕ್ಷರ ಪ್ರಕಾಶನ ೨೦೦೮
೮. ಅಶೋಕ ಟಿ. ಪಿ., ಸಾಹಿತ್ಯ ಸಂಬಂಧ, ಅಕ್ಷರ ಪ್ರಕಾಶನ, ೨೦೧೧, ಪುಟ – ೧೦೪
೯. ಬರಗೂರು ರಾಮಚಂದ್ರಪ್ಪ, ಸಾಹಿತ್ಯ ಮತ್ತು ರಾಜಕಾರಣ, ಸಮತಾ ಪ್ರಕಾಶನ, ಪುಟ – ೮೫
೧೦.ಗೋಪಾಲ ಕೃಷ್ಣ ಅಡಿಗ ಎಮ್. ನಡೆದು ಬಂದ ದಾರಿ, ಕಾವ್ಯಾಲಯ ಪ್ರಕಾಶನ, ಮೈಸೂರು– ೧೯೫೨, ಮುನ್ನುಡಿ
೧೧. ಬರಗೂರು ರಾಮಚಂದ್ರಪ್ಪ, ಅನುಸಂಧಾನ, ಅಂಕಿತ ಪ್ರಕಾಶನ, ೨೦೧೩ ಪುಟ – ೨೬೩
೧೨.ಬರಗೂರು ರಾಮಚಂದ್ರಪ್ಪ, 'ನವ್ಯದ ಮರುಕಳಿಕೆಗೆ ಮುಖಾಮುಖಿ', ಪ್ರಜಾವಾಣಿ. ೧೦-೦೭-೨೦೧೨
೧೩.ಅದೇ ಲೇಖನ,
೧೪.ದೇವಯ್ಯ ಹರವೆ : ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೯೧ ಪುಟ – ೧೭
೧೫. ಮೊಗಳ್ಳಿ ಗಣೇಶ್, ಲೇಖನ : ಬ್ರಾಹ್ಮಣ ವಿಮರ್ಶೆ ಮತ್ತು ದೇವನೂರು–ಮೊಗಳ್ಳಿ ಗಣೇಶ್ ಅವರ 'ತಕರಾರು' ನಮ್ಮ ಬನವಾಸಿ, ಜನವರಿ, ೨೦೧೨
೧೬.ಅದೇ ಲೇಖನ,
೧೭.ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ : ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಬೆಂಗಳೂರು ೧೯೯೪, ಪುಟ – ೨೩

೧೮.ಉಷಾ ಎಂ., ಜನಪ್ರಿಯ–ಗಂಭೀರ ಸಾಹಿತ್ಯ ಪರಕಲ್ಪನೆ, ಸುರುಚಿ, ಸಿ. ವಿ. ಜಿ. ಪಬ್ಲಿಕೇಶನ್, ಬೆಂಗಳೂರು, ೨೦೦೪, ಪುಟ – ೩೪
೧೯.ಉಷಾ ಎಂ., ಕನ್ನಡದ ಮೊದಲ ವಸ್ತುನಿಷ್ಠ ವಿಮರ್ಶೆಯ ಸುತ್ತ, ಸುರುಚಿ, ಸಿ. ವಿ. ಜಿ ಪಬ್ಲಿಕೇಷನ್, ಬೆಂಗಳೂರು, ೨೦೦೪, ಪು – ೮೩
೨೦.ಸ್ತ್ರೀವಾದ ಎನ್ನುವುದು ಬದುಕಿನ ಒಂದು ಕ್ರಮ : ಡಾ. ಎಮ್ ಎಸ್ ಆಶಾದೇವಿ ದ ಸಂಡೆ ಇಂಡಿಯನ್, ೦೫–೧೬–೨೦೧೨
೨೧.ಅದೇ ಲೇಖನ
೨೨.ಆಶಾದೇವಿ ಎಂ. ಎಸ್., ನಾರೀಕೇಳಾ. ಪ್ರಜಾವಾಣಿ, ೧೪–೧೦–೨೦೧೫
೨೩.ಅದೇ ಲೇಖನ,
೨೪.ತಾರಿಣಿ ಶುಭದಾಯಿನಿ, ಕನ್ನಡ ಸಾಹಿತ್ಯ : ಸ್ತ್ರೀಸಂವೇದನೆಯ ನೆಲೆಗಳು, ೧೬–೧೧–೨೦೧೧ (ಬೆಂ.ವಿ.ವಿ. ಕನ್ನಡ ಆಧ್ಯಾಪಕರ ಕಾರ್ಯಾಗರದಲ್ಲಿ ಮಂಡಿಸಿದ ಪ್ರಬಂಧ.)
೨೫.ಅದೇ,
೨೬.ಎಮ್. ಎಸ್. ಆಶಾದೇವಿ, ಸ್ತ್ರೀಮತವನ್ನುತ್ತರಿಸಲಾಗದೆ?, ಅಕ್ಷರ ಪ್ರಕಾಶನ, ಹೆಗ್ಗೊಡು, ೨೦೦೬, ಪುಟ – ೩೧
೨೭.ಸುಮಿತ್ರಾಬಾಯಿ ಬಿ. ಎನ್., ನಾರಿನುಡಿ ಮಾದರಿಗಳ ಕಟ್ಟೋಣದತ್ತ, ಪ್ರಜಾವಾಣಿ ಪತ್ರಿಕೆ, ೦೭–೦೧–೨೦೧೨
೨೮.ನಾಗರಾಜು ಡಿ.ಆರ್., ೧೯೯೬. ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಪುಟ – ೧೬೫
೨೯.ಪೂರ್ಣಚಂದ್ರ ತೇಜಸ್ವಿ, ಮಾಯಾಲೋಕ, ಪುಸ್ತಕ ಪ್ರಕಾಶನ, ಮೈಸೂರು, ೨೦೦೬ ಪುಟ – ೧೭
೩೦.ಪ್ರಭಾಕರ್ ಎ. ಎಸ್., 'ಬುಡಕಟ್ಟು ಮೀಮಾಂಸೆ', ಜನವರಿ ೦೨ ೨೦೧೬ ಅನಿಕೇತನ ಡಾಟ್ ಕಾಮ್
೩೧.ಅದೇ ಲೇಖನ
೩೨.ಮೇಟಿ ಮಲ್ಲಿಕಾರ್ಜುನ 'ವಿಸ್ತಾರವಾದ ಪ್ರತಿಮಾಲೋಕವನ್ನು ಒಳಗೊಂಡಿರುವುದೇ ಬುಡಕಟ್ಟು ಮಹಾಕಾವ್ಯಗಳ ಶೇಷತೆಯಾಗಿದೆ' ಪ್ರಜಾವಾಣಿ, ೨೮–೦೩–೨೦೧೭
೩೩.ಬೋರಲಿಂಗಯ್ಯ ಹಿ.ಚಿ., 'ಬುಡಕಟ್ಟು ಕಾವ್ಯಗಳಿಗೆ ಮಾನವೀಯತೆ ನೆಲೆ', ವಿಜಯಕರ್ನಾಟಕ, ೨೮–೦೩–೨೦೧೭
೩೪.ಅಮರೇಶ ನುಗಡೋಣಿ, ತತ್ವಪದ ಸಾಹಿತ್ಯ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೪, ಪುಟ – ೧೦೮
೩೫.ಮೀನಾಕ್ಷಿ ಬಾಳಿ, ತತ್ವಪದ ಸಮಗ್ರ ಸಂಪಾದನೆ..., ಪ್ರಜಾವಾಣಿ ೧೨–೦೧–೨೦೧೪

೩೬.ಒಕ್ಕುಂದ ಎಂ. ಡಿ., ಶಿಶುನಾಳ ಶರೀಪರ ತತ್ವಪದ ೦೫-೧೬-೨೦೧೬ ಅನಿಕೇತನ ಡಾಟ್ ಕಾಮ್

೩೭.ನಟರಾಜ ಬೂದಾಳು ಎಸ್. ತತ್ವಪದಕಾರರ ತಾತ್ವಿಕ ನೆಲೆಗಳು, ಮೆಕ್ಕಲು, ಸಂ. ಲಕ್ಷ್ಮಣ ಕೊಡಸೆ, ಎಚ್. ದಂಡಪ್ಪ) ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೭ ಪುಟ – ೧೨೩

೩೮.ಮುಮ್ತಾಜ್ ಬೇಗಂ, 'ಮುಸ್ಲಿಂ ಸಂವೇದನೆ ಮತ್ತು ಚಳವಳಿಗೆ ದಲಿತಬಂಡಾಯ ಮಾದರಿಯಾಗಬೇಕಿದೆ' ಮಾಧ್ಯಮನೆಟ್, ೦೬-೦೫-೦೧೬

ಅಧ್ಯಾಯ – ಐದು

ಕನ್ನಡ ವಿಮರ್ಶೆ : ಸಾಮಾನ್ಯ ಪ್ರವೃತ್ತಿಗಳು

ಕಳೆದ ಅಧ್ಯಾಯದಲ್ಲಿ ಕನ್ನಡ ವಿಮರ್ಶೆಯ ಪ್ರಧಾನ ಪ್ರವೃತ್ತಿಗಳನ್ನು ವಿಶ್ಲೇಷಿಸಲಾಗಿದ್ದು, ಈ ಅಧ್ಯಾಯದಲ್ಲಿ ಕನ್ನಡ ವಿಮರ್ಶೆಯ ಇನ್ನುಳಿದ ಸಾಮಾನ್ಯ ಪ್ರವೃತ್ತಿಗಳನ್ನು ಪರಿಶೀಲಿಸುವ ಉದ್ದೇಶವಿದೆ. ಈ ಅಧ್ಯಾಯದಲ್ಲಿ ಗುರುತಿಸುವ ಪ್ರವೃತ್ತಿಗಳು ಕನ್ನಡದ ಸಾಮಾಜಿಕ ವಿಮರ್ಶೆ, ಸಾಂಸ್ಕೃತಿಕ ವಿಮರ್ಶೆ, ಸ್ತ್ರೀವಾದಿ ವಿಮರ್ಶೆಗಳಲ್ಲಿ ಆಂಶಿಕವಾಗಿ ಅಥವ ಪೂರ್ಣವಾಗಿ ಪ್ರಕಟಗೊಂಡಿರಬಹುದಾದ ಸಾಧ್ಯತೆಗಳಿವೆಯಾದರೂ, ಅಲ್ಲಿ ಒಟ್ಟು ವಿಮರ್ಶಾ ಧೋರಣೆಗೆ ಪೂರಕವಾಗಿ ಇವುಗಳ ಬಳಕೆಯಾಗಿವೆ. ಆದರೆ ಪ್ರಸ್ತುತ ಈ ಅಧ್ಯಾಯದಲ್ಲಿ ಅವುಗಳನ್ನು ಬಿಡಿಬಿಡಿಯಾಗಿ ವಿವರಿಸಲು ಪ್ರಯತ್ನಿಸಲಾಗಿದೆ. ಕನ್ನಡ ವಿಮರ್ಶೆಯ ಸಾಮಾನ್ಯ ಪ್ರವೃತ್ತಿಗಳು ಬಹಳಷ್ಟಿವೆಯಾದರೂ ಕಳೆದ ದಶಕದಲ್ಲಿ ಹೆಚ್ಚು ಮುನ್ನೆಲೆಗೆ ಬಂದ ಕೆಲವನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಇವತ್ತಿನ ಒಟ್ಟು ಕನ್ನಡ ಸಾಹಿತ್ಯ ವಿಮರ್ಶೆಯ ಒಳಗನ್ನು ಗಮನಿಸುವುದಾದರೆ ಅದು ಸ್ಥಿತ್ಯಂತರ ಸ್ಥಿತಿಯಲ್ಲಿದೆ. ಇಂದು ವಿಮರ್ಶೆಯು ನವೋದಯ, ನವ್ಯ, ದಲಿತ, ಬಂಡಾಯ, ಸ್ತ್ರೀವಾದಿ ಹಂತಗಳನ್ನು ಹಾಯ್ದು ಈಗ ಬಹುಮುಖಿ ಅಧ್ಯಯನದತ್ತ, ಬಹುಸಂಸ್ಕೃತಿ ನೆಲೆಗಳತ್ತ ಮುಖಮಾಡಿದೆ. ಕಳೆದ ಎರಡು ದಶಕದಲ್ಲಿ ಕಾಣಿಸಿಕೊಂಡ ಜಾಗತೀಕರಣ ಮತ್ತು ತಂತ್ರಜ್ಞಾನದ ಆವಿಷ್ಕಾರಗಳು ವಿಮರ್ಶಾ ಕ್ಷೇತ್ರದಲ್ಲಿ ಹೊಸ ಸಂಚಲನವನ್ನು ಉಂಟು ಮಾಡಿದ್ದು, ವಿಮರ್ಶೆಯನ್ನು ಇನ್ನಷ್ಟು ಸೂಕ್ಷ್ಮ ಮತ್ತು ವಿಸ್ತೃತ ನೆಲೆಗಳನ್ನು ಎಡತಾಕುವಂತೆ ಮಾಡುತ್ತಿವೆ. ಹೀಗಾಗಿ ವಿಮರ್ಶೆಯ ವ್ಯಾಪ್ತಿ ಹಿಂದೆಂದಿಗಿಂತ ಇಂದು ವಿಭಿನ್ನ ಹಿನ್ನೆಲೆಯ ವಿಸ್ತರಣೆಗಳನ್ನು ಪಡೆದುಕೊಳ್ಳುತ್ತಿದೆ.

ಈ ರೀತಿ ವಿಸ್ತೃತಗೊಳ್ಳುತ್ತಿರುವ ವಿಮರ್ಶೆಯ ವ್ಯಾಪ್ತಿ ಒಮ್ಮೊಮ್ಮೆ ನಿಶ್ಚಿತ ಸ್ವರೂಪವಿಲ್ಲದೆ ಅರಾಜಕತೆಯಿಂದ ಕೂಡಿದೆ ಎನಿಸಿದರೂ ಈ ಮೂಲಕ ವಿಮರ್ಶೆ ಹೊಸ ಪರಿಕಲ್ಪನೆಗಳನ್ನು ತನ್ನೊಳಗೆ ರೂಪಿಸಿಕೊಳ್ಳುತ್ತಿದೆ ಎಂದೆನಿಸುತ್ತಿದೆ. ಕುವೆಂಪು ಅವರು ಬಹಳ ಹಿಂದೆಯೇ ಬರೆದಂತೆ "ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ"[1] ಎನ್ನುವ ಸಬಾಲ್ಟ್ರನ್ ಚಿಂತನೆಗಳನ್ನು ವಿಮರ್ಶೆ ಒಳಗೊಳ್ಳುತ್ತಿದೆ. ಅಷ್ಟೆ ಅಲ್ಲ ಇದುವರೆಗಿನ ವಿಮರ್ಶೆಯ ಆಶಯಗಳು, ಉದ್ದೇಶಗಳಲ್ಲಿಯೇ ಗಂಭೀರವಾದ ಬದಲಾವಣೆಯನ್ನು ರೂಪಿಸಿಕೊಳ್ಳುತ್ತಿದೆ.

ಇದಕ್ಕೆ ನಿದರ್ಶನವಾಗಿ, ಹೊಸತಲೆಮಾರಿನ ಬೇರೆಬೇರೆ ವಿಮರ್ಶಕರ ನಡುವಣ ಸಾಹಿತ್ಯಿಕ ಧೋರಣೆ, ಬರಹದ ಆಯ್ಕೆ ಮತ್ತು ವಿಧಾನಗಳಲ್ಲಿರುವ ಸ್ವಾರಸ್ಯಕರ ವ್ಯತ್ಯಾಸ

ಮತ್ತು ಹೋಲಿಕೆಗಳನ್ನು ಗಮನಿಸಬಹುದು; ವಿಮರ್ಶೆಯನ್ನು ಬರೆಯುವಲ್ಲಿ ಬೇರೆಬೇರೆ ಮಾದರಿಗಳು ಇರುವುದನ್ನು ಗುರುತಿಸುವುದು ಮತ್ತು ಅವು ಯಾಕೆ ಬಂದಿವೆ ಅವುಗಳ ಪರಿಣಾಮವೇನು ಎಂದು ವಿಶ್ಲೇಷಿಸುವುದು; ಬೇರೆಬೇರೆ ವಿಮರ್ಶಕರ ಸಾಮಾಜಿಕ ಮತ್ತು ಸೈದ್ಧಾಂತಿಕ ಹಿನ್ನೆಲೆಗಳನ್ನು ಅರಿತು ಅವು ಹೇಗೆ ವಿಮರ್ಶೆಯಲ್ಲಿ ಕೆಲಸ ಮಾಡಿವೆ ಅಥವಾ ಮಾಡಿಲ್ಲ ಎಂಬುದನ್ನು ಗಮನಿಸುವುದು; ಭಾಷೆಯ ಬಳಕೆಯಲ್ಲಿ ವಿಮರ್ಶಕರು ಮಾಡಿರುವ ಸಾಧನೆಯನ್ನು ಗುರುತಿಸುವುದು; ಯಾವ ವಿಮರ್ಶಕರ ಪ್ರಭಾವ ಮತ್ತು ಪ್ರೇರಣೆಗಳು ಕೆಲಸ ಮಾಡಿವೆ ಎಂಬುದನ್ನು ಗುರುತಿಸುವುದು. ವಿಮರ್ಶೆಯಲ್ಲಿ ಹೊಸ ತಲೆಮಾರು ಹಿರಿಯ ತಲೆಮಾರು ಎಂಬ ವಿಭಜನೆ ಕೃತಕವಾದುದು. ಹಲವು ತಲೆಮಾರುಗಳು ಕೂಡಿ ಸಮಕಾಲೀನ ವಿಮರ್ಶೆಯನ್ನು ರೂಪಿಸುತ್ತಿರುತ್ತವೆ. ಆದರೂ ಈ ವಿಭಜನೆಯನ್ನು ಅಧ್ಯಯನಕ್ಕೋಸ್ಕರ ಮಾಡಿಕೊಳ್ಳಲಾಗಿದೆ. ಹೀಗೆ ಮಾಡಿಕೊಂಡು ಅಧ್ಯಯನ ಮಾಡುವಾಗಲೂ ಪ್ರಾಸಂಗಿಕವಾಗಿ ಬೇರೆ ತಲೆಮಾರುಗಳ ವಿಮರ್ಶೆಯನ್ನು ಇಲ್ಲಿ ಗಮನಿಸಲಾಗಿದೆ.

ಇವತ್ತಿನ ಸಾಹಿತ್ಯ ವಿಮರ್ಶೆಯು ಯಾವ ಯಾವ ಮಾದರಿಗಳಲ್ಲಿ ಪ್ರಕಟಗೊಳ್ಳುತ್ತಿದೆಯೆಂಬುದನ್ನು ಪರಿಶೀಲಿಸಿದರೆ ಅದು ಪುಸ್ತಕ ವಿಮರ್ಶೆ, ಬಿಡಿ ಲೇಖನ, ಆಯಾ ಕೃತಿಗಳಿಗೆ ಬರೆದ ಮುನ್ನುಡಿ ಹಾಗೂ ಪಿಎಚ್. ಡಿ. ಪದವಿಗಾಗಿ ಸಂಶೋಧನೆ ನಡೆಸಿದ ವಿಶ್ಲೇಷಣಾತ್ಮಕ ಕೃತಿಗಳಲ್ಲಿ ಕನ್ನಡ ವಿಮರ್ಶೆ ಪ್ರಕಟಗೊಳ್ಳುತ್ತಿರುವುದನ್ನು ನೋಡಬಹುದು. ಇತ್ತೀಚಿನ ಪಿಎಚ್. ಡಿ. ಅಧ್ಯಯನಗಳಲ್ಲಿ ಸಾಹಿತ್ಯ ಅಥವಾ ವ್ಯಕ್ತಿಯ ಸಾಂಸ್ಕೃತಿಕ ಕೆಲಸಗಳನ್ನು ನಿರ್ವಹಿಸುವಾಗ ಕೆಲಮಟ್ಟಿಗೆ ವಿಮರ್ಶೆ ನಡೆದಿರುತ್ತದೆ. ಆದ್ದರಿಂದ ಅಂತಹ ಪಿಎಚ್. ಡಿ. ಕೃತಿಗಳನ್ನು ವಿಶ್ಲೇಷಣಾತ್ಮಕ ವಿಮರ್ಶೆಯ ಪಟ್ಟಿಯಲ್ಲಿ ಸೇರಿಸಲಾಗಿದೆ.

೫.೧ ಸಾಹಿತ್ಯಿಕ ವಾಗ್ವಾದಗಳ ಮೂಲಕ ವಿಮರ್ಶೆ

ಮೊದಲಿಗೆ ಕನ್ನಡ ವಿಮರ್ಶೆಯ ಸಾಮನ್ಯ ಪ್ರವೃತ್ತಿಗಳನ್ನು ಗುರುತಿಸುವಾಗ ಕಳೆದ ದಶಕದಲ್ಲಿ ಮುಖ್ಯವಾಗಿ ನಡೆದಿರುವ ಸಾಹಿತ್ಯಿಕ ವಾಗ್ವಾದಗಳು ಮತ್ತು ಆ ಮೂಲಕ ಪ್ರಕಟಗೊಂಡಿರುವ ಹೊಸ ವಿಮರ್ಶಾ ಕ್ರಮಗಳನ್ನು ಗಮನಿಸಬಹುದು. ಕನ್ನಡ ಸಾಹಿತ್ಯ ಚರಿತ್ರೆ ಮತ್ತು ವಿಮರ್ಶಾ ಪರಂಪರೆಯನ್ನು ಭಿನ್ನವಾಗಿ ಕಟ್ಟುವ ಪ್ರಯತ್ನಗಳು ನಿರಂತರವಾಗಿ ನಡೆದಿವೆ. ಅದು ಈಗಲೂ ನಿಂತಿಲ್ಲ. ಅಂತಹ ಸಂದರ್ಭಗಳಲ್ಲಿಯೇ ಕನ್ನಡ ವಿಮರ್ಶೆ ಬಹಳಷ್ಟು ತೀಕ್ಷ್ಣವಾಗಿ ಮೂಡಿಬಂದಿದೆ. ಕಳೆದ ಶತಮಾನದಲ್ಲಿ ಮುಖ್ಯವಾಗಿ ನಡೆದ ಸಾಹಿತ್ಯಿಕ ವಾಗ್ವಾದಗಳಾದ, 'ಆದಿಪ್ರಾಸ' (೧೯೧೧), 'ನಾವಲು' (೧೯೧೭), 'ರುದ್ರ ನಾಟಕ' (೧೯೪೧), 'ಶೂದ್ರ ತಪಸ್ವಿ' (೧೯೪೪), 'ಅಶ್ಲೀಲ ಸಾಹಿತ್ಯ' (೧೯೫೨), 'ಚೆನ್ನಬಸವ ನಾಯಕ' (೧೯೫೬), 'ಬೂಸಾ ಸಾಹಿತ್ಯ' (೧೯೭೩), 'ದಲಿತ ದೃಷ್ಟಿಕೋನ' (೧೯೮೦), ಶ್ರೇಷ್ಠತೆ'ಯ ಪ್ರಶ್ನೆ (೧೯೯೦), 'ಸಂಗ್ಯಾ ಬಾಳ್ಯಾ' (೨೦೦೫) 'ಆನು ದೇವ

ಹೊರಗಣವನು' (೨೦೦೭) 'ದೇಶಕಾಲ', (೨೦೧೨) 'ಆವರಣ' (೨೦೧೩) ವಚನಗಳು ಮತ್ತು ಜಾತೀಯತೆ' (೨೦೧೩) ಹೀಗೆ ಹತ್ತಾರು ಪ್ರಮುಖ ಸಂಗತಿಗಳು ಹುಟ್ಟಿಸಿದ ವಾಗ್ವಾದಗಳನ್ನು ಕನ್ನಡ ವಿಮರ್ಶೆ ಕಂಡಿದೆ. ಈ ವಾಗ್ವಾದಗಳು ಸಾಹಿತ್ಯ ಮತ್ತು ಸಾಮಾಜಿಕ ನಂಬಿಕೆಗಳಲ್ಲಾದ ಪಲ್ಲಟಗಳ ದಾಖಲೆಯಂತಿವೆ. ಲಿಂಗಬೇಧ ಮತ್ತು ಜಾತಿ ಶ್ರೇಣೀಕರಣದ ನೆಲೆಯಲ್ಲಿ ಸಾಹಿತ್ಯವನ್ನು ನೋಡುವ ದೃಷ್ಟಿಕೋನದಲ್ಲಾದ ಬದಲಾವಣೆಗಳನ್ನು ಇವು ಬಿಂಬಿಸುತ್ತವೆ.

ಇಲ್ಲಿನ ವಾಗ್ವಾದಗಳಲ್ಲಿ ಮುಖ್ಯವಾಗಿ ಗೋವಿಂದ ಪೈ, ತಿರುಮಲಾಂಬ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ.ಎಂ.ಶ್ರೀಕಂಠಯ್ಯ, ದ.ರಾ.ಬೇಂದ್ರೆ, ಎಂ.ಜಿ. ಕೃಷ್ಣಮೂರ್ತಿ, ಕುವೆಂಪು, ಅನಕೃ, ನಿರಂಜನ, ಬಿ. ಕೃಷ್ಣಪ್ಪ, ಬಿ. ಬಸವಲಿಂಗಪ್ಪ, ಸಿದ್ದಲಿಂಗಯ್ಯ, ಯು. ಆರ್. ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಕೆ. ವಿ. ಸುಬ್ಬಣ್ಣ, ಪಿ. ಲಂಕೇಶ್, ಎಂ. ಎಂ. ಕಲಬುರ್ಗಿ, ಚಂದ್ರಶೇಖರ ಕಂಬಾರ, ಕುರ್ತಕೋಟಿ, ಡಂಕಿನ್ ಝಳಕಿ, ಬಾಲಗಂಗಾಧರ, ಎಚ್. ಎಸ್. ಶಿವಪ್ರಕಾಶ ಮುಂತಾದವರ ಚಿಂತನೆಗಳಿದ್ದು, ಅವುಗಳ ಮೇಲೆ ಚರ್ಚೆ ಬೆಳೆಸಲಾಗಿದೆ. ಈ ವಾಗ್ವಾದಗಳು ಮುಖ್ಯವಾಗಿ ಸಾಹಿತ್ಯ ಪರಿಕಲ್ಪನೆಗೆ, ಸಾಹಿತ್ಯ ಕೃತಿಗಳ ವಿಮರ್ಶೆಯ ವಿಧಾನಕ್ಕೆ, ಅನುವಾದದ ಸ್ವರೂಪಕ್ಕೆ, ಸಂಪಾದನೆಯ ತತ್ವಕ್ಕೆ, ಭಾಷೆಯ ಬಳಕೆಗೆ, ಛಂದಸ್ಸಿನ ನಿಯಮೋಲ್ಲಂಘನೆಗೆ, ಸಾಹಿತ್ಯದ ಓದಿಗೆ ಸಂಬಂಧಿಸಿವೆ.

ಇಂತಹ ವಾಗ್ವಾದಗಳು ಕೇವಲ ಸಾಹಿತ್ಯಕ ಚರ್ಚೆ ಮಾತ್ರವಾಗಿರದೆ, ಮುಂದುವರೆದು ಸಾಮಾಜಿಕ ಚರ್ಚೆಯ ಆಯಾಮವನ್ನು ಪಡೆದುಕೊಳ್ಳುತ್ತವೆ. ಅದು ರಾಜಕೀಯ ವಿದ್ಯಮಾನದ ಚರ್ಚೆಯಾಗಿಯೂ ವಿಸ್ತರಣೆ ಪಡೆದು ಸಾಂಸ್ಕೃತಿಕ ವಾಗ್ವಾದವಾಗುವ ಆಯಾಮ ಇಲ್ಲಿನ ಚರ್ಚೆಗಳಿಗಿದೆ. ಈ ಕಾರಣಕ್ಕಾಗಿ ಶುದ್ಧ ಸಾಹಿತ್ಯದ ಲೋಕಕ್ಕೆ ಹೊಸ ಪ್ರಕಾರದ ನೆಲೆಯಲ್ಲಿ ನಾವಲು, ರುದ್ರನಾಟಕ; ಲಿಂಗದ ನೆಲೆಯಲ್ಲಿ ಮಹಿಳೆ; ಜಾತಿಯ ನೆಲೆಯಲ್ಲಿ ದಲಿತ ಕೆಳಜಾತಿಗಳು ಪ್ರವೇಶಿಸಿದಾಗಲೂ ಅವು ವಾಗ್ವಾದದ ಮೂಲಕ ತನ್ನ ಪ್ರವೇಶವನ್ನು ಗಟ್ಟಿಗೊಳಿಸಿಕೊಂಡಿವೆ. "ರುದ್ರನಾಟಕ ವಾಗ್ವಾದದಲ್ಲಿ ಪಶ್ಚಿಮದ ಸಾಹಿತ್ಯ ಪ್ರಕಾರವೊಂದರ ಪ್ರವೇಶ, ನಾವಲು ವಾಗ್ವಾದದಲ್ಲಿ ಮಹಿಳೆಯ ಸಾಹಿತ್ಯ ಪ್ರವೇಶ; ಶೂದ್ರ ತಪಸ್ವಿ, ದಲಿತ ದೃಷ್ಟಿಕೋನ, ಬೂಸಾ ಸಾಹಿತ್ಯದ ವಾಗ್ವಾದಗಳಲ್ಲಿ ದಲಿತ ಸಾಹಿತ್ಯದ ಪರೀಕ್ಷೆಯೂ ನಡೆದಿದೆ. ಅದರ ಮುಂದುವರೆದ ಭಾಗವಾಗಿ ಇಪ್ಪತ್ತೊಂದನೇ ಶತಮಾನದಲ್ಲಿ 'ವಚನಗಳು ಜಾತಿವಿರೋಧಿಗಳೇ', ಜಾತೀಯತೆ ಮತ್ತು ಮೀಸಲಾತಿ, 'ಮಧ್ಯಮ ಮಾರ್ಗ' ಮೊದಲಾದ ವಾಗ್ವಾದಗಳು ಕನ್ನಡ ಸಾಹಿತ್ಯ ಲೋಕದಲ್ಲಿ ನಡೆದಿವೆ."[೨] ಇವುಗಳಲ್ಲಿ ಎಲ್ಲವೂ ಕನ್ನಡ ಸಾಹಿತ್ಯಕ್ಕೆ, ವಿಮರ್ಶೆಗೆ ನೇರವಾಗಿ ಸಂಬಂಧಪಟ್ಟಿಲ್ಲವಾದರೂ ಕನ್ನಡದ ಬಹುಪಾಲು ಸಾಹಿತಿಗಳು ಮತ್ತು ವಿಮರ್ಶಕರು ಇಂತಹ ವಾಗ್ವಾದಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದರಿಂದ ಅವುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಪರಿಶೀಲಿಸಲು ಉದ್ದೇಶಿಸಲಾಗಿದೆ.

ಕಳೆದ ದಶಕದ ಮುಖ್ಯ ವಾಗ್ವಾದಗಳಲ್ಲಿ ಮೊದಲಿಗೆ 'ಸಂಗ್ಯಾ ಬಾಳ್ಯಾ' ನಾಟಕ ಕುರಿತ ಚರ್ಚೆಯನ್ನು ನೋಡಬಹುದು. ಮೊದಲಿಗೆ ಉತ್ತರ ಕರ್ನಾಟಕದ ಡಪ್ಪಿನಾಟವಾಗಿದ್ದ ಇದನ್ನು ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತುಕೋಟಿ ಇವರಿಬ್ಬರೂ ಕೂಡಿ ೧೯೬೬ ರಲ್ಲಿ ಸಂಪಾದಿಸಿ ಪ್ರಕಟಿಸುತ್ತಾರೆ. ವಾಸ್ತವವಾಗಿ ಪತ್ತಾರ ಮಾಸ್ತರ ಎಂದು ಕರೆಯಲಾಗುತ್ತಿದೆ ಬೈಲವಾಡದ ರಾಯಪ್ಪ ಎಂಬವವರು ಇದನ್ನು ಬರೆದಿದ್ದಾರೆಂಬ ಪ್ರತೀತಿಯೂ ಇದೆ. ಆದರೆ ಈ ನಾಟಕದ ಬಗ್ಗೆ ಚರ್ಚೆ ಮತ್ತು ವಾಗ್ವಾದ ಶುರುವಾಗಿದ್ದು ೨೦೦೫ರಲ್ಲಿ ಎಂ. ಎಂ. ಕಲ್ಬುರ್ಗಿಯವರು 'ಖರೆಖರೆ ಸಂಗ್ಯಾಬಾಳ್ಯಾ' ನಾಟಕವನ್ನು ಬರೆದಾಗ, ನಾಟಕದಲ್ಲಿ ಪರಸ್ಪರ ಎರಡು ಸಮುದಾಯಗಳ, ಎರಡು ಮನೆತನಗಳ ನಡುವಿನ ದ್ವೇಷವನ್ನು ಹೊಂದಿದ್ದು ಕಂಬಾರರು ಪ್ರಕಟಿಸಿದ್ದ ನಾಟಕದಿಂದ ಮುಖ್ಯ ಪಾತ್ರಧಾರಿಯಾದ ಗಂಗಿ ಮತ್ತು ಗಂಗಿಯ ಮನೆತನ, ಸಮುದಾಯದವರಿಗೆ ನೋವಾಗಿದ್ದು, ಆದ ಅನಾಹುತವನ್ನು ಸರಿ ಮಾಡುವ ಸಲುವಾಗಿ ಈ ನಾಟಕ ರಚಿಸಿದ್ದಾಗಿ ಕಲ್ಬುರ್ಗಿವರು ಹೇಳುತ್ತಾರೆ. "ಸಜ್ಜನರ ಮೇಲೆಯೂ ಸುಳ್ಳು ಶಾಬ್ದಿಕ ಹಲ್ಲೆ (ಬ್ಲಾಕ್‌ಮೇಲ್) ವಿಜೃಂಭಿಸುತ್ತಿರುವ ಕಾಲವಿದು. ನೂರು ವರ್ಷಗಳ ಹಿಂದೆ ನಿರಪರಾಧಿ ಗಂಗಿಯ ವಿಷಯದಲ್ಲಿ ಸೃಷ್ಟಿಯಾದ ಇಂಥ ಒಂದು ಹಲ್ಲೆಗೆ ಅಕ್ಷರರೂಪ ಕೊಡಲು ಮಾಡಿದ ಪ್ರಯತ್ನ, ಈ ಸಣ್ಣಾಟ. ಹೀಗಾಗಿ ಗಂಗಿಯ ವಿಗ್ರಹಭಂಜನೆ ಮಾಡುತ್ತಾ, ಇಂದು ರಂಗದ ಮೇಲೆ ವಿಜೃಂಭಿಸುತ್ತಿರುವ ಆ ಸಂಗ್ಯಾ-ಬಾಳ್ಯಾ ಸಣ್ಣಾಟ ಮತ್ತು ಈ 'ಖರೇಖರೇ ಸಂಗ್ಯಾ-ಬಾಳ್ಯ' ಸಣ್ಣಾಟ ಮುಖಾಮುಖಿ ಸೃಷ್ಟಿಯೆನಿಸಿವೆ"[೩] ಎಂಬ ಹೇಳಿಕೆಯಿಂದ ಖರೆ ಯಾವುದು, ಸುಳ್ಳು ಯಾವುದು ಎಂಬುದರ ಚರ್ಚೆ ಆರಂಭವಾಗಿ ನಂತರ ಎರಡು ಸಮುದಾಯಗಳ ನಡುವಿನ ತಿಕ್ಕಾಟವಾಗಿ ಬೆಳೆಯಿತು. ಸಾಹಿತ್ಯ ಕೃತಿಯನ್ನು ಸಾಹಿತ್ಯವಾಗಿ ಓದಿಕೊಳ್ಳದೆ, ಒಪ್ಪಿಕೊಳ್ಳದೆ, ಐತಿಹಾಸಿಕ ವಿಚಾರಗಳನ್ನು ಆರೋಪಿಸಿ ಅದನ್ನು ಸಾಹಿತ್ಯೇತರ ಕಾರಣಗಳಿಗಾಗಿ ಜಗ್ಗಾಡುವುದನ್ನು ಅಂದಿನ ಪ್ರಜ್ಞಾವಂತ ಸಮುದಾಯ ವಿರೋಧಿಸಿತು.

ಸಾಹಿತ್ಯ ಕೃತಿಯ ಸೃಷ್ಟಿಶೀಲತೆಯನ್ನು ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ಮೀಮಾಂಸೆಯ ಆಯಾಮದಲ್ಲಿಟ್ಟು ಚರ್ಚಿಸುವುದಕ್ಕೂ, ಕೃತಿಯೊಂದರ ಐತಿಹಾಸಿಕ ವಿಚಾರಗಳನ್ನಿಟ್ಟುಕೊಂಡು ಚರ್ಚೆ ಬೆಳಸುವುದಕ್ಕೂ ಇರುವ ವ್ಯತ್ಯಾಸಗಳು ಈ ವಾಗ್ವಾದದಲ್ಲಿ ಸ್ಪಷ್ಟವಾಗಿ ಗೋಚರಿಸಿದವು. ಕಂಬಾರರ ನಾಟಕಕ್ಕೆ ಪ್ರತಿಯಾಗಿ ಕಲ್ಬುರ್ಗಿಯವರ ನಾಟಕದ ರಚನೆ, ಸೃಜನಶೀಲ ಕಥಾವಸ್ತುವನ್ನು ಸಮುದಾಯದ ಹಿತಾಸಕ್ತಿಯ ಪರವಾಗಿ ಬಳಸಿಕೊಳ್ಳುವುದರಿಂದ ವರ್ತಮಾನದಲ್ಲಿ ಆಯಾ ಸಮುದಾಯಗಳಲ್ಲಿ ಉಂಟಾಗುವ ಘರ್ಷಣೆಗಳನ್ನೆ ಮುಖ್ಯ ಚರ್ಚೆಯಾಗಿ ಸ್ವೀಕರಿಸಿ ಸಾಹಿತ್ಯ ಕೃತಿಯೊಂದನ್ನು ಅದರ ಭಾಷೆ, ಶೈಲಿ, ಕಥನಕಲೆಗಳ ಹಿನ್ನೆಲೆ ನೋಡುವ ಸಂದರ್ಭದಿಂದ ವಂಚಿತವಾಯಿತು. ಸಂಗ್ಯಾಬಾಳ್ಯಾ ನಾಟಕದಂತಹ ಚರ್ಚೆಗಳು ನಂತರದ ದೇಶಕಾಲ ಪತ್ರಿಕೆ, ಅನುದೇವ ಹೊರಗಣವನು ಎಂಬ ಸಂಶೋಧನಾ ಗ್ರಂಥ, ಆವರಣ ಮತ್ತು ಡುಂಢಿ ಕಾದಂಬರಿಗಳ ವಿಚಾರದಲ್ಲೂ ಮುಂದುವರೆದಿರುವುದನ್ನು ಗಮನಿಸಬಹುದು.

ಕೇವಲ ವಸ್ತುವಿನ ಕಾರಣಕ್ಕೆ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ವಾದ ಹೂಡುವ, ಗಲಾಟೆ ಎಬ್ಬಿಸುವ ಗುಂಪುಗಳಲ್ಲಿ ಮುಖ್ಯವಾಗಿ ಬಲಪಂಥೀಯ ಆಲೋಚನೆಯುಳ್ಳವರೇ ಹೆಚ್ಚಿರುತ್ತಾರೆ. ಸಮಾಜದಿಂದ ಈಗಾಗಲೇ ಒಪ್ಪಿತವಾಗಿರುವ, ಬಹುಸಂಖ್ಯಾತರ ಹಿತ ಕಾಯುವ ಯಾವ ನಿಲುವನ್ನೂ ಬದಲಾಯಿಸಲು, ವಿಮರ್ಶಿಸಲು ಇವು ಅವಕಾಶ ಕೊಡುವುದಿಲ್ಲ. ಆದರೆ ಇಂತಹ ಆಲೋಚನೆ ಮತ್ತು ಕಾರ್ಯಸೂಚಿಗಳು ಇತ್ತೀಚೆಗೆ ಎಡಪಂಥೀಯ ಸಂಘಟನೆಗಳಲ್ಲಿಯೂ ಕಾಣಿಸಿಕೊಳ್ಳುತ್ತಿರುವ ಬಗ್ಗೆ ಅಸಮಧಾನ ಶುರುವಾಗಿದೆ. ೨೦೦೫ರಲ್ಲಿ ಆರಂಭವಾದ ದೇಶಕಾಲ ತ್ರೈಮಾಸಿಕವು ಕನ್ನಡ ಸಾಹಿತ್ಯ ವಲಯದಲ್ಲಿ ತನ್ನ ಗುಣಮಟ್ಟಕ್ಕಾಗಿ ಹೆಸರು ಮಾಡಿತ್ತು. ಅದಕ್ಕೆ ಐದು ವರ್ಷ ತುಂಬಿದ ಸಂದರ್ಭದಲ್ಲಿ ತಂದ 'ದೇಶಕಾಲ ವಿಶೇಷಾಂಕ'ದಿಂದ ವಿವಾದಕ್ಕೀಡಾಯಿತು. ಈ ಪತ್ರಿಕೆಯು ಕನ್ನಡದಲ್ಲಿ ಹೊಸ ರೀತಿಯ ಬ್ರಾಹ್ಮಣಶಾಹಿಯನ್ನು ತರುತ್ತಿದೆ. ಮೇಲ್ವರ್ಗದವರ ಲೇಖನಗಳನ್ನು ಮಾತ್ರ ಪ್ರಕಟಿಸುತ್ತದೆ ಎಂದು ಚರ್ಚೆ ಶುರುವಾಯಿತು. ಇದನ್ನು ದೇಶಕಾಲ ವಾಗ್ವಾದಕ್ಕೆ ಬರೆದ ಪ್ರತಿಕ್ರಿಯೆಯಲ್ಲಿ ಸಮಾಜವಾದಿ ಚಿಂತಕರಾದ ಡಿ. ಎಸ್. ನಾಗಭೂಷಣ್ ಹೀಗೆ ಗುರುತಿಸುತ್ತಾರೆ.

"ಮೇಲ್ನೋಟಕ್ಕೆ ಇದು, ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ವೈದಿಕ ಸಂಸ್ಕೃತಿ ಬೀಸುತ್ತಿರುವ ಏಕರೂಪಿ ಆಯ್ಕೆ ಮತ್ತು ಅಭಿರುಚಿಗಳ ಜಾಲದ ಬಗೆಗಿನ ತನ್ನ ತೀಕ್ಷ್ಣ ನೋಟ ಮತ್ತು ಮಾತುಗಳಿಂದಾಗಿ; ಬ್ರಾಹ್ಮಣರಾಗಿ ನೋಡಿದರೆ ಬ್ರಾಹ್ಮಣ ವಿರೋಧಿಯಾಗಿಯೂ, ಶೂದ್ರರಾಗಿ ನೋಡಿದರೆ ಶೂದ್ರ ಪರವಾಗಿಯೂ ಕಾಣುತ್ತದೆ. ಆದರೆ ಈ ಎರಡೂ ನೋಟಗಳನ್ನು ಧಿಕ್ಕರಿಸಿ ನೋಡಬಲ್ಲವರಿಗೆ, ಅದು ಜಾತಿ ವಿರೋಧಿಯಾಗಿ ತನ್ನ ಸಂಸ್ಕೃತಿ ವಿಶ್ಲೇಷಣೆಯನ್ನು ಮಂಡಿಸುತ್ತಾ ಭಾರತದ ಬದುಕಿನ ಜೀವಸತ್ವವಾದ ಬಹು ಸಂಸ್ಕೃತಿಯ ಸಮಾಜಕ್ಕಾಗಿ ಹಂಬಲಿಸುತ್ತಿರುವುದು ಗೊತ್ತಾಗುತ್ತದೆ. ಆದರೆ ನಮ್ಮ ಸಮಾಜ ತೇಜಸ್ವಿ ಹೇಳುವ ಅರ್ಥದಲ್ಲಿನ ಜಾತಿ ವಿರೋಧಿ ನಿಲುವನ್ನು ತಳೆಯಲಾಗದೆ, ಸದಾ ವೇಷ ಮತ್ತು ಭಾಷೆಗಳನ್ನು ಬದಲಾಯಿಸುತ್ತಾ ತನ್ನ ಬೌದ್ಧಿಕ ನಾಯಕತ್ವವನ್ನು ಭದ್ರ ಮಾಡಿಕೊಳ್ಳುತ್ತಾ ಹೋಗುತ್ತಿರುವ ಬ್ರಾಹ್ಮಣ ಪುರೋಹಿತಶಾಹಿಯ ರಾಜಕಾರಣ ಹಾಗೂ ಆದಷ್ಟೂ ತನ್ನ ಜಾತಿಗಷ್ಟೇ ಲೌಕಿಕ ಲಾಭಗಳನ್ನು ಗೆಬರಿಕೊಳ್ಳಲು ಹವಣಿಸುವುದರಾಚೆಗೆ ಬೆಳೆಯಲು ನಿರಾಕರಿಸುತ್ತಿರುವ ಸಾಮಾಜಿಕ ನ್ಯಾಯದ ವಿಷವ್ಯೂಹಕ್ಕೆ ಸಿಕ್ಕ ಶೂದ್ರ ರಾಜಕಾರಣಗಳಿಂದಾಗಿ; ಎಂದೂ ಮುಗಿಯಲಾರದ ಜಾತಿ ಸಂಘರ್ಷದ ಮನೋಸ್ಥಿತಿಯಲ್ಲೇ ತೊಳಲಾಡುವಂತಹ ಪರಿಸ್ಥಿತಿಗೆ ಈಡಾಗಿದೆ. ಇದರಿಂದಾಗಿ ಈ ಚಿಂತನೆ ಬ್ರಾಹ್ಮಣ ವಿರೋಧಿ ಮತ್ತು ಶೂದ್ರಪರವೆಂಬ ಎರಡು ಜಾತಿವಾದಿ ನೋಟಗಳಿಗಷ್ಟೇ ಸಿಗುತ್ತಾ ಕಳೆದು ಹೋಗಿದೆ. ದೇಶಕಾಲ ಕುರಿತ ಸದರಿ ಚರ್ಚೆಯಲ್ಲೂ ನಾನು ಕಾಣುವುದು ಈ ಪರಿಸ್ಥಿತಿಯನ್ನೇ. ಹಾಗಾಗಿ ಅದು ಇನ್ನೊಂದು ಎಂದೂ ಮುಗಿಯಲಾರದ ಚರ್ಚೆಯಾಗಿಯೇ ಉಳಿಯುವ ಅಪಾಯವನ್ನು ಎದುರಿಸುತ್ತಿರುವುದು."[೬] ಈ ಮೂಲಕ ಇಡೀ ಸಮಾಜವೇ ಅಸಹಿಷ್ಣುತೆಯೆಡೆಗೆ ಸಾಗುತ್ತಿರುವ ಸೂಚನೆಗಳು ಕಾಣುತ್ತಿವೆ.

ಆದರೆ ಸೃಜನಶೀಲ ಮತ್ತು ಅರ್ಥಪೂರ್ಣ ಸಾಹಿತ್ಯ ಚರ್ಚೆಗೆ ಎಲ್ಲಾ ಪಂಥಗಳನ್ನು, ಮತ್ತು ಎಲ್ಲಾ ಪೂರ್ವಗ್ರಹಗಳನ್ನು ಮೀರಿ ಭಿನ್ನ ವಾದಗಳನ್ನು ತಾಳ್ಮೆಯಿಂದ ಕೇಳುವ, ಭಿನ್ನ ಮತಗಳೊಂದಿಗೆ ಅನುಸಂಧಾನ ನಡೆಸುವ ಸನ್ನಿವೇಶಗಳೇ ನಿರ್ಮಾಣವಾಗುತ್ತಿಲ್ಲ. ತಮ್ಮ ಅಭಿಪ್ರಾಯಗಳನ್ನು ಅವುಗಳನ್ನು ಒಪ್ಪದವರೊಡನೆ ಹಂಚಿಕೊಳ್ಳುವ ಯಾವ ಪ್ರಕ್ರಿಯೆಗಳೂ ಇಂದು ನಿರ್ಮಾಣಗೊಳ್ಳುತ್ತಿಲ್ಲ. "ಕರ್ನಾಟಕದಲ್ಲಿ ಇಂದು ನಡೆಯುವ ಯಾವುದೇ ಸಾಹಿತ್ಯ ಸಮಾರಂಭಗಳು ವ್ಯಕ್ತಿಕೇಂದ್ರಿತ, ಅನಗತ್ಯ ವೈಭವೀಕರಣ, ಎಡಬಲಗಳ ಅತಿರೇಕದ ಕಿತ್ತಾಟ, ರಾಜಕೀಯದೊಂದಿಗೆ ಅಪವಿತ್ರ ಮೈತ್ರಿ, ಜಾತಿ–ಮತ–ಪಂಥಗಳ ಮೇಲಾಟದ ಜತೆಗೆ ಜೊಳ್ಳು ಸಾಹಿತಿ–ಸಾಹಿತ್ಯಗಳ ಕುರಿತ ಚರ್ವಿತ ಚರ್ವಣದ ತೌಡುಕುಟ್ಟುವ ಕೆಲಸ"[೫] ನಡೆಯುತ್ತಿದೆಯೆಂಬ ಆಕ್ರೋಶದ ದನಿಗೂ ಇವತ್ತಿನ ಸಂದರ್ಭ ಪಕ್ಕಾಗುತ್ತಿದೆ. ಈಚಿನ ವರ್ಷಗಳಲ್ಲಿ ಓದುಗರು ಬರಹಗಾರರು, ಸಾಹಿತ್ಯಲೋಕದ ಮಾನದಂಡಗಳು ನಿರೀಕ್ಷೆಗಳು ಎಲ್ಲವೂ ಬದಲಾಗಿದೆ. ಈ ಎಲ್ಲ ಬದಲಾವಣೆಗಳು ಒಳ್ಳೆಯ ದಿಕ್ಕಿನಲ್ಲಿ ಕೂಡ ಇಲ್ಲದೆ ಇರಬಹುದು. ಆದರೆ ಬದಲಾದ ಬದಲಾಗುತ್ತಿರುವ ವಾತಾವರಣ ಹೊಸ ವೇದಿಕೆ, ಹೊಸ ಸಂಘಟನೆಗಳನ್ನು ಬಯಸುತ್ತದೆ. ನಾವೆಲ್ಲರೂ ನಮಗಿಂತ ಭಿನ್ನವಾಗಿ ಆಲೋಚಿಸುವವರ ಜತೆ, ಬರೆಯುವವರ ಜತೆ ಒಡನಾಡುತ್ತಲೇ ಕಲಿಯಬೇಕಾಗುತ್ತದೆ. ಸೈದ್ಧಾಂತಿಕವಾಗಿ, ವೈಚಾರಿಕವಾಗಿ ಒಂದೇ ನಿಲುವುಳ್ಳವರು ಮಾತ್ರ ಒಂದೇ ಕಡೆ ಸೇರಬೇಕೆಂಬ ಒಂದು ನಾಡಿನ ಸಮಗ್ರ ಅಭಿವೃದ್ಧಿಗೆ ಸೂಕ್ತವಾದುದಲ್ಲ. ತಮ್ಮ ಸೈದ್ಧಾಂತಿಕ ನಿಲುವುಗಳು ಬದಲಾಯಿಸಿಕೊಳ್ಳದೆ, ಅದನ್ನು ಬೇರೆ ಬೇರೆ ಸಿದ್ಧಾಂತಗಳ ಮುಖಾಮುಖಿಯಲ್ಲಿ ಗಟ್ಟಿಯಾಗಿಸಿಕೊಳ್ಳುವ ಪ್ರಯತ್ನ ನಡೆದರೆ ಮಾತ್ರ, ಕವಿರಾಜಮಾರ್ಗಕಾರನ "ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮುಮ್, ಪರಧರ್ಮಮ್"[೬] ಎಂಬ ನೆಲದ ನಿಲುವನ್ನು ಮಾನ್ಯಮಾಡಿ ಮುಂದುವರೆಸಿಕೊಂಡು ಹೋದಂತಾಗುತ್ತದೆ.

ಯಾವುದೇ ಸಮಾಜದಲ್ಲಿಯೂ ವಿಮರ್ಶೆ ಒಂದು ಸಾಮಾಜಿಕ ವಿವೇಕ. ಇದು ಸಾಹಿತ್ಯಕ್ಕೆ ಮಾತ್ರ ಅನ್ವಯಿಸುವ ಮಾತಲ್ಲ, ಎಲ್ಲ ಕ್ಷೇತ್ರಗಳಲ್ಲೂ ಸರಿ ತಪ್ಪುಗಳ ಬಗೆಗಿನ ಚರ್ಚೆ, ಸಂವಾದ ಅತ್ಯಗತ್ಯ. ಆಗ ಮಾತ್ರ ಅರ್ಥಪೂರ್ಣ ಬೆಳವಣಿಗೆ ಸಾಧ್ಯ. ವ್ಯಕ್ತಿಯಾಗಲೀ, ಸಂಸ್ಥೆಯಾಗಲೀ ಎಲ್ಲರಿಗೂ ಶಕ್ತಿ ದೌರ್ಬಲ್ಯಗಳು ಇದ್ದೇ ಇರುತ್ತವೆ. ಅದನ್ನು ಸಕಾರಣವಾಗಿ ತಿಳಿಸಿ ಹೇಳುವುದೇ ವಿಮರ್ಶೆ. ಇಂಥ ವಿಮರ್ಶೆ ದೌರ್ಬಲ್ಯವನ್ನು ಮೀರಲು, ಇತ್ಯಾತ್ಮಕ ಶಕ್ತಿಯನ್ನು ಸಂಚಯಿಸಿಕೊಳ್ಳಲು ನೆರವಾಗುತ್ತದೆ. ಆಗ ಅಪೌಷ್ಟಿಕತೆಯಿಂದಾಗಲೀ, ಅನಗತ್ಯ ಬೊಜ್ಜಿನಿಂದಾಗಲೀ ಸಮಾಜ ನರಳುವುದಿಲ್ಲ. ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ವಿಮರ್ಶೆಯ ಪಾತ್ರ ಅತ್ಯಂತ ಮಹತ್ವದ್ದು.

ಆದರೆ "ನಮ್ಮ ಸಾಮಾಜಿಕ ರಚನೆಯ ವಿನ್ಯಾಸವನ್ನು ಬಹುಮಟ್ಟಿಗೆ ರೂಪಿಸಿ ಪ್ರಭಾವಿಸುವ ಅಧಿಕಾರ ಕೇಂದ್ರಗಳಾದ ಧರ್ಮ ಹಾಗೂ ರಾಜಕೀಯ ವಿಮರ್ಶೆಯನ್ನು ಸಹಿಸುವುದಿಲ್ಲ. ಇವು ಬಯಸುವುದು ಅಧೀನ ಮನೋಭಾವವನ್ನು, ಜೀ ಹುಜೂರ್

ಹಿಂಬಾಲಕರನ್ನು. ಇವರಿಬ್ಬರಲ್ಲೂ ಅನೇಕ ಸಾಮ್ಯಗಳಿವೆ, ಹೊಂದಾಣಿಕೆಯಿದೆ. ಇದೇ ಪ್ರವೃತ್ತಿ, ಸಾಂಸ್ಕೃತಿಕ ರಂಗದಲ್ಲೂ ಕಾಣಿಸಿಕೊಂಡರೆ ಆಗ ಅದು ಸಾಮಾಜಿಕವಾಗಿ ಅತ್ಯಂತ ಅಪಾಯದ ಸ್ಥಿತಿ. ಅಂಥ ಸಮಾಜ ರೋಗಗ್ರಸ್ತ ಸಮಾಜ. ಆರಂಕುಸವಿಟ್ಟರೂ ತನ್ನಂತರಂಗಕ್ಕೆ ಪ್ರಾಮಾಣಿಕವಾಗಿರುವ ಮನಃಸ್ಥಿತಿಯೇ ಸಾಹಿತ್ಯದ ಮೂಲದ್ರವ್ಯ; ಕಲೆಯ ಶಕ್ತಿ. ಇಂಥ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೇ ಆಗಾಗ ಧರ್ಮ, ರಾಜಕೀಯ ಶಕ್ತಿಗಳು ದಮನ ಮಾಡಲು ಪ್ರಯತ್ನಿಸುವುದು."[2] ಇಂತವುಗಳ ವಿರುದ್ಧ ಸದಾ ಎಚ್ಚರದಿಂದಿರಬೇಕಾದ ಕೆಲಸವನ್ನು ವಿಮರ್ಶೆ ನಿರ್ವಹಿಸಬೇಕಾಗುತ್ತದೆ.

ಸಾಹಿತ್ಯ, ಅದೆಷ್ಟೇ ಸಾಮಾಜಿಕ–ರಾಜಕೀಯ ಸತ್ವವನ್ನು ಗಳಿಸಿಕೊಂಡರೂ, ಅದು ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಳ್ಳದೆ ಸಾಹಿತ್ಯವಾಗಿ ಉಳಿಯಬೇಕು. ಅಂದರೆ ಅದು ಮನುಷ್ಯನನ್ನು ಒಳಗಿಂದ ಅಲ್ಲಾಡಿಸಬೇಕು. ಹೊರಗಿಂದ ಅಲ್ಲ. ಅದು ಹೊರಗಿಂದ ಅಲ್ಲಾಡಿಸ ಹೊರಟಷ್ಟೂ ಅದು ತನ್ನ ಸತ್ವವನ್ನು ಕಳೆದುಕೊಂಡು ಸಾಹಿತ್ಯವಾಗಿ ತನ್ನ ವಿಶ್ವಾಸಾರ್ಹತೆಯನ್ನೂ ಕಳೆದುಕೊಳ್ಳುತ್ತದೆ. ಇಂದು ಸಾಹಿತ್ಯ ಪಂಥಗಳಿಗೆ ಪ್ರೇರಕವಾಗಿದ್ದ ಚಳವಳಿಗಳ ಸ್ವರೂಪವೇ ಬದಲಾಗುತ್ತಿದ್ದು, ಅನೇಕ ಒಳಪದರುಗಳನ್ನು ಹುಟ್ಟಿಸಿಕೊಂಡಿವೆ. ಅದರಲ್ಲೂ ದಲಿತ ಚಳವಳಿಯ ಒಳಗೆನೇ ಹಲವು ಕವಲುಗಳು ಒಳದಾರಿಗಳು ಮೂಡುತ್ತಿವೆ. ಅದರಲ್ಲಿ ಸಂಕುಚಿತವಾದ ಸಣ್ಣ ಪುಟ್ಟ ಒಳಜಗಳಗಳಿರಬಹುದಾದರೂ ಅದಕ್ಕಿಂತ ಮುಖ್ಯವಾಗಿ ಅಲ್ಲಿ ಪ್ರಾಮಾಣಿಕವಾಗಿಯೇ ಜಾತಿಗೆ ಸಂಬಂಧ ಪಟ್ಟಂತೆ, ಜಾಗತೀಕರಣ, ಒಳಮೀಸಲಾತಿ, ದಲಿತ ಆದಿಮ ಪ್ರಜ್ಞೆ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ತಾತ್ವಿಕ ಭಿನ್ನತೆಗಳಿವೆ. ದೇವನೂರು, ಸಿದ್ದಲಿಂಗಯ್ಯ, ಕೋಟಗಾನಹಳ್ಳಿ ರಾಮಯ್ಯ, ಕೆ. ಬಿ. ಸಿದ್ದಯ್ಯ ಮುಂತಾದವರು ಇಂತಹ ತಾತ್ವಿಕ ಭಿನ್ನತೆಗಳನ್ನು ಗುರುತಿಸುತ್ತಿದ್ದಾರೆ.

ಸಾಹಿತ್ಯದಲ್ಲಿ ವಾಗ್ವಾದಗಳು ಏರ್ಪಡಲು ಅವುಗಳ ಭಿನ್ನ ಓದುಗಳೂ ಕಾರಣವಾಗಿರುತ್ತವೆ. ಸಾಹಿತ್ಯದ ಓದು ಸಂಸ್ಕೃತಿ ವಿಮರ್ಶೆಯಾಗುವ ಪ್ರಕ್ರಿಯೆಯ ಹಿಂದೆ ಸ್ಥಳೀಯವಾದ ಮತ್ತು ಆಂತರಿಕ ಒತ್ತಡಗಳಿರುವಂತೆ ಜಾಗತಿಕವಾದ, ಬಾಹ್ಯವಾದ ಪ್ರೇರಣೆ ಮತ್ತು ಒತ್ತಡಗಳೆರಡೂ ಕೆಲಸ ಮಾಡಿರುವುದನ್ನು ಗಮನಿಸಬಹುದು. ಆಧುನಿಕೋತ್ತರ ಚಿಂತನೆಗಳು; ವಸಾಹತುಶಾಹಿ ಮತ್ತು ನವವಸಾಹತುಶಾಹಿಯ ದಾಳಿಗಳು; ಸಾಂಸ್ಕೃತಿಕ ವಿಮರ್ಶೆಗೆ ಒತ್ತಡಗಳನ್ನು ಮತ್ತು ಪ್ರೇರಣೆಗಳನ್ನು ನೀಡಿವೆ. ಆಂತರಿಕವಾಗಿ ಕೆಳವರ್ಗಗಳು, ದಲಿತರು, ಮಹಿಳೆಯರು, ಅಲ್ಪಸಂಖ್ಯಾತ ಸಮುದಾಯಗಳು ಶೈಕ್ಷಣಿಕ ವಲಯವನ್ನು ಪ್ರವೇಶಿಸಿದ ತರುವಾಯ ಈ ಸಮುದಾಯಗಳಿಗೆ ಹಳೆಯ ಚಿಂತನೆಗಳಿಂದ ಹೆಚ್ಚು ಪ್ರಯೋಜನವಿಲ್ಲವೆನಿಸಿತು. ಅಲ್ಲದೆ ಆ ಚಿಂತನೆಗಳಿಂದ ಸಮಾಜವನ್ನು ಅರಿಯಲು ಸಾಧ್ಯವಿಲ್ಲವೆನಿಸಿದಾಗ ಹೊಸ ಹೊಸ ಚಿಂತನೆಗಳಿಗೆ, ವಿಧಾನಗಳಿಗೆ ತುಡಿದಾಗ ಸಾಂಸ್ಕೃತಿಕ ವಿಮರ್ಶೆ ಸೂಕ್ತದಾರಿಯಾಗಿ ಕಾಣಿಸಿಕೊಂಡಿತು. ಈ ರೀತಿಯ ಹೊಸ ರೀತಿಯ ವಿಶ್ಲೇಷಣೆ ಸಾಂಪ್ರದಾಯಿಕ ವಿಚಾರಗಳಿಗೆ ವ್ಯತಿರಿಕ್ತವಾದಾಗೆಲ್ಲಾ ವಾಗ್ವಾದಗಳು ರೂಪುಗೊಂಡಿವೆ.

೫.೨ ಪುಸ್ತಕ ವಿಮರ್ಶೆ ಮತ್ತು ಲೇಖನ ವಿಮರ್ಶೆ

ಇವತ್ತಿನ ವಿಮರ್ಶೆಯನ್ನು ಪರಿಶೀಲಿಸಿದರೆ ಪ್ರಸ್ತುತ ಪ್ರಕಟಗೊಳ್ಳುವ ಮುಖ್ಯ ಕೃತಿಗಳ ವಿಮರ್ಶೆ ಮೊದಲು ದಕ್ಕುವುದು ಪತ್ರಿಕೆ ಅಥವಾ ನಿಯತಕಾಲಿಕೆಗಳಲ್ಲಿ. ಪತ್ರಿಕೆಗಳಲ್ಲಿ ಪ್ರಕಟವಾಗಿರುವುದರ ಮೂಲಕ ಪುಸ್ತಕ ವಿಮರ್ಶೆಯ ಸಮಕಾಲೀನ ಸ್ವರೂಪವನ್ನು ಗಮನಿಸುವುದಾದರೆ ವಿಮರ್ಶೆಯಲ್ಲಿ ಮುಖ್ಯವಾಗಿ ಪುಸ್ತಕದ ಪರಿಚಯ ಮತ್ತು ಸದ್ಯದ ಅಸ್ಮಿತೆ, ಪರಂಪರೆಗೆ ಅದು ಕೊಡುವ ಅವಕಾಶ, ಮುಂದುವರೆಸುವ ಗುಣ ಇತ್ಯಾದಿಗಳನ್ನು ಪರಿಶೀಲಿಸಲಾಗಿರುತ್ತದೆ. ಕೃತಿಯ ಬಗೆಗೆ ತುಂಬಾ ಗಂಭೀರವಾದ ಒಳನೋಟಗಳು ಇಂತಹ ವಿಮರ್ಶೆಗಳಲ್ಲಿ ಕಾಣುವ ಸಂಭವವಿಲ್ಲದಿದ್ದರೂ ಪ್ರಸಕ್ತದ ಒಟ್ಟು ನಾಡಿಮಿಡಿತವನ್ನು ಹಿಡಿಯಲು ಪ್ರಯತ್ನಿಸಿರುವುದು ವ್ಯಕ್ತವಾಗುತ್ತದೆ. ಪುಸ್ತಕ ವಿಮರ್ಶೆಯ ವ್ಯಾಪ್ತಿಯನ್ನು ಗಮನಿಸಿದರೆ ಅದು ವಿವಿಧ ರೂಪ, ಆಯಾಮಗಳಲ್ಲಿ ಬೆಳೆಯುತ್ತಿದೆ. ಅದು ಕೇವಲ ಬರಹಗೊಂಡು ಮುದ್ರಣ ರೂಪದಲ್ಲಿ ಅಭಿವ್ಯಕ್ತಿಯಾಗುವ ಪ್ರಕಾರವಾಗಿ ಉಳಿದಿಲ್ಲ. ಪುಸ್ತಕ ವಿಮರ್ಶೆ ಇಂದು ಮೌಖಿಕ ರೂಪದಲ್ಲಿ, ಚರ್ಚೆಯ ಸಂದರ್ಭದಲ್ಲಿ ಬೆಳೆಯುತ್ತಿದೆ. ಆದರೆ ಇದಕ್ಕೆ ಲಿಖಿತ ದಾಖಲೆಗಳಿಲ್ಲವಾದರೂ ಪರಿಣಾಮ ದೃಷ್ಟಿಯಿಂದ, ಮೌಖಿಕ ಪುಸ್ತಕ ವಿಮರ್ಶೆಯು ಮುಖ್ಯವಾಗಿದೆ.

ಜೊತೆಗೆ ಸಾಮಾನ್ಯ ಓದುಗರನ್ನು ಗುರಿಯಾಗಿಸಿಕೊಂಡಿರುವ ಪುಸ್ತಕ ವಿಮರ್ಶೆಯಲ್ಲಿ ಸಾದ್ಯವಾದಷ್ಟು ಪಾರಿಭಾಷಿಕ ಪದಗಳನ್ನು ನಿವಾರಿಸಿ ಸುಲಭ ಶೈಲಿಯ ಬರವಣಿಗೆ ಜನರಿಗೆ ತಲುಪಿಸುವ ಪ್ರಯತ್ನ ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಆ ಪತ್ರಿಕೆಯ ಮನೋಧರ್ಮ ಕೂಡ ವಿಮರ್ಶೆಯನ್ನು ಪ್ರಭಾವಿಸುವ ಸಾಧ್ಯತೆಗಳಿರುತ್ತವೆ. ಇದು ಸೈದ್ಧಾಂತಿಕ ಹಿನ್ನೆಲೆಗೆ ಸಂಬಂಧಿಸಿದ್ದರೂ ಒಂದೇ ಅಚ್ಚಿನ ವಿಮರ್ಶೆ ಭಿನ್ನ ನಿಲುವುಗಳನ್ನು ಏಕಕಾಲದಲ್ಲಿ ದಾಖಲಿಸುವ ಪ್ರಯತ್ನ ನಡೆದಿರುತ್ತದೆ. ಈ ರೀತಿಯ ಬರವಣಿಗೆಯನ್ನು ಸಂದೀಪ ನಾಯಕ, ನಟರಾಜ ಬೂದಾಳ, ಚ. ಹ. ರಘುನಾಥ, ಟಿ. ಪಿ. ಅಶೋಕ, ಮೊದಲಾದವರು ಕೆಲಸ ಮಾಡಿದ್ದಾರೆ.

ಆದರೆ ಕನ್ನಡದಲ್ಲಿ ಪುಸ್ತಕ ವಿಮರ್ಶೆಯ ಸ್ಥಾನವನ್ನು ನಟರಾಜ್ ಹುಳಿಯಾರ್ ಹೀಗೆ ಗುರುತಿಸುತ್ತಾರೆ. ಸ್ವತಃ ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆ ಬರೆದು ಅನುಭವವಿರುವ ಅವರು, “ಅಲ್ಲಲ್ಲಿ ಕಾಣುವ ಕೆಲವರ ಉದಾಹರಣೆಗಳನ್ನು ಬಿಟ್ಟರೆ, ಕನ್ನಡ ಪುಸ್ತಕ ವಿಮರ್ಶೆ ಒಟ್ಟಾರೆಯಾಗಿ ಹಾವೂ ಸಾಯಬಾರದು ಕೋಲು ಮುರಿಯಬಾರದು ಎಂಬ ಧಾಟಿಯಲ್ಲೇ ಇದೆ. ಹಾಗೂ ವಿಮರ್ಶೆ ಬರೆಯುವ ಅನೇಕರು ಸಹಭೋಜನದ ವಿರಾಮ ಶೈಲಿಯನ್ನು ಆನಂದದಿಂದ ಮೈಗೂಡಿಸಿಕೊಂಡೇ ಮುಂದುವರೆದಿದ್ದಾರೆ. ಕನ್ನಡದಲ್ಲಿ ವಿಮರ್ಶೆ ಇನ್ನಷ್ಟು ಖಚಿತವಾಗಬೇಕು, ಆಳವಾಗಬೇಕು, ನಿಷ್ಠುರವಾಗಬೇಕು ಎಂದು ಗಂಭೀರ ಸಾಹಿತ್ಯಾಭ್ಯಾಸಿಗಳು ಬಯಸುತ್ತಿದ್ದಾರೆ.”[೮] ಎಂದು ಅಭಿಪ್ರಾಯ ಪಡುತ್ತಾರೆ.

"ಹಿಂದೆ ವಿಮರ್ಶೆಯ ಕೆಲಸವನ್ನು ಕೆಲವೇ ಕೆಲವು ಪತ್ರಿಕೆಗಳಾದರೂ ಸಮರ್ಥವಾಗಿ ಮಾಡುತ್ತಿದ್ದವು. ಸಾಹಿತ್ಯಿಕ ಪತ್ರಿಕೆಗಳಲ್ಲಿಯೂ ವಿಮರ್ಶೆ ಎನ್ನುವುದು ಅರ್ಥಪೂರ್ಣ ಸಂವಾದಕ್ಕೆ ಎಡೆಮಾಡಿಕೊಡುತ್ತಿತ್ತು. ಇವತ್ತು ಪತ್ರಿಕೆಗಳಲ್ಲಿ ವಿಮರ್ಶೆಗೆ ಜಾಗದ ಅಥವಾ ಜಾಗವೆಂದರೆ ಅದು ಹಣವನ್ನು ತರುವ ಜಾಹಿರಾತಿಗಾಗಿ ಮೀಸಲು. ಎಷ್ಟು ಚುಟುಕಾಗಿ ವಿಮರ್ಶೆ ಇದ್ದರೆ ಅದು ತನಗೆ ಲಾಭ ಎಂದು ಭಾವಿಸುವ ಪತ್ರಿಕೆಗಳೇ ಹೆಚ್ಚು." ವಿಮರ್ಶೆ ಎನ್ನುವ ಬರಹ ಇಲ್ಲದಿದ್ದರೂ ಪತ್ರಿಕೆಯ ಪ್ರಸಾರ ಸಂಖ್ಯೆ ಇಳಿಯುವುದಿಲ್ಲ. ಕೆಲವೇ ವರ್ಷಗಳ ಹಿಂದೆ ಈ ಪರಿಸ್ಥಿತಿ ಇರಲಿಲ್ಲ. ವಿಮರ್ಶೆ ಎನ್ನುವುದು ಸಾಹಿತ್ಯಿಕ ಹೊಣೆಗಾರಿಕೆ, ಸಾಮಾಜಿಕ ಬದ್ಧತೆ ಎನ್ನುವಂತೆ ಪತ್ರಿಕೆಗಳು ಭಾವಿಸಿದಂತೆ ತೋರುತ್ತಿತ್ತು. ವರ್ಷದಲ್ಲಿ ಬರುವ ಎಲ್ಲ ವಿಮರ್ಶೆಗಳನ್ನು ಸಂಗ್ರಹಿಸಿ ಇಟ್ಟುಕೊಂಡರೆ, ವರ್ಷದ ಪ್ರಮುಖ ಕೃತಿಗಳ ಮೌಲ್ಯಮಾಪನವಾಗುತ್ತಿತ್ತು. ಕನ್ನಡದ ಮುಖ್ಯ ವಿಮರ್ಶಕರು ಉತ್ಸಾಹದಿಂದ ವಿಮರ್ಶೆಯನ್ನು ಬರೆಯುತ್ತಿದ್ದರು, ಘಟಿಸುವುದು, ವ್ಯಂಗ್ಯವಾಡುವುದು, ಕಾಲೆಳೆಯುವುದು ಇದ್ದರೂ, ಉತ್ತಮ ಕೃತಿಗಳಿಗೆ ಸಿಕ್ಕಬೇಕಾದ ನ್ಯಾಯ ಸಿಕ್ಕೇ ಸಿಕ್ಕುತ್ತದೆ ಎಂಬ ಭರವಸೆಯ ಧ್ವನಿಗಳು ಓದುಗರ ಕಣ್ತಪ್ಪದಂತೆ ಈ ವಿಮರ್ಶೆಗಳು ನೋಡಿಕೊಳ್ಳುತ್ತಿದ್ದವು. ದೊಡ್ಡ ಪತ್ರಿಕೆಗಳ ಪುರವಣಿಗಳಲ್ಲಿ ಈ ಕಾರ್ಯ ಶಿಸ್ತುಬದ್ಧವಾಗಿ ನಡೆಯುತ್ತಿತ್ತು.

ಲೇಖನ ವಿಮರ್ಶೆಯು ಕನ್ನಡ ವಿಮರ್ಶೆಯಲ್ಲಿ ಪ್ರಕಟಗೊಳ್ಳುತ್ತಿರುವ ಮತ್ತೊಂದು ಮುಖ್ಯ ಮಾಧ್ಯಮವಾಗಿದೆ. ಜೊತೆಗೆ ಕನ್ನಡ ವಿಮರ್ಶೆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಮುಖ್ಯ ಕೊಂಡಿಗಳಲ್ಲಿ ಇದು ಒಂದಾಗಿದೆ. ಪುಸ್ತಕ ವಿಮರ್ಶೆಗೆ ಹೋಲಿಸಿದರೆ ಲೇಖನ ವಿಮರ್ಶೆ ಅದಕ್ಕಿಂತ ಕೊಂಚ ವಿಸ್ತೃತವಾದ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಇಲ್ಲಿ ಕೃತಿ ಅಥವಾ ಕೃತಿಕಾರರ ನಿಲುವುಗಳನ್ನು ತಲಸ್ಪರ್ಶಿಯಾಗಿ ಕೂಲಂಕುಶವಾಗಿ ಪರಿಶೀಲಿಸಲಾಗಿರುತ್ತದೆ. ಲೇಖಕರ ವೈಯಕ್ತಿಕ ಹಿನ್ನೆಲೆಗಳಿಗೆ ಅನುಗುಣವಾಗಿ ಅವರ ಸೈದ್ಧಾಂತಿಕ ಹಿನ್ನೆಲೆಗಳು ಕೂಡ ಅವರ ವಿಮರ್ಶಾ ಲೇಖನಗಳಲ್ಲಿನ ನಿಲುವುಗಳನ್ನು ಪ್ರಭಾವಿಸಿರುತ್ತವೆ.

ಹೊಸತಲೆಮಾರಿನ ವಿಮರ್ಶೆಯನ್ನೂ ಒಳಗೊಂಡಂತೆ, ಕನ್ನಡ ವಿಮರ್ಶೆಯ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ ಮುಖ್ಯವಾಗಿದೆ. ದಿನಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಯ ರೂಪದಲ್ಲಿ ಇದ್ದರೆ, ಸಾಹಿತ್ಯಿಕ ಪತ್ರಿಕೆಗಳಲ್ಲಿ ಇದು ಲೇಖನಗಳ ರೂಪದಲ್ಲಿದೆ. ವೈರುಧ್ಯವೆಂದರೆ, ಈಗ ಗಂಭೀರವಾಗಿ ದೀರ್ಘವಾಗಿ ಸಾಹಿತ್ಯದ ಯಾವುದಾದರೂ ಒಂದು ವಿಷಯವನ್ನು ತೆಗೆದುಕೊಂಡು, ವಿಮರ್ಶೆಯ ಲೇಖನವನ್ನು ಬರೆದು ಪ್ರಕಟಿಸಲು ಬೇಕಾದ ಪತ್ರಿಕೆಗಳೇ ಇಲ್ಲ. ಶೂದ್ರ, ಸಂಕ್ರಮಣ, ಅನ್ವೇಷಣೆ, ರುಜುವಾತು, ಸಂವಾದ ಮೊದಲಾದ ಪತ್ರಿಕೆಗಳು ಕ್ರಿಯಾಶೀಲವಾಗಿದ್ದ ಎಂಬತ್ತು – ತೊಂಬತ್ತರ ದಶಕಕ್ಕೆ ಹೋಲಿಸಿದರೆ, ಸಧ್ಯದ ಬಿಕ್ಕಟ್ಟು ಗೋಚರಿಸುತ್ತದೆ. ಇಂದು ಸಾಹಿತ್ಯ ವಿಮರ್ಶೆಗೆಂದೇ ಮೀಸಲಾದ ಪತ್ರಿಕೆಗಳ ಸಂಖ್ಯೆ ಬಹಳ ಕಮ್ಮಿ. ವಿಶ್ವವಿದ್ಯಾಲಯದ ಪತ್ರಿಕೆಗಳು

ಅನಿಯಮಿತವಾಗಿ ಎಷ್ಟೊ ವರ್ಷಗಳಾಗಿವೆ. ಇದು ಹೊಸತಲೆಮಾರಿನ ವಿಮರ್ಶೆಯು ಬೆಳೆಯದಿರಲು ಪರೋಕ್ಷ ಕಾರಣಗಳಲ್ಲಿ ಒಂದಾಗಿದೆ. ಆದರೂ ಬಹುತೇಕ ಹೊಸಬರ ವಿಮರ್ಶಾ ಬರೆಹಗಳನ್ನು ಪ್ರಕಟಿಸುವ ಪತ್ರಿಕೆಗಳೆಂದರೆ, ಸಂಕ್ರಮಣ, ಹೊಸತು, ಸಂಚಯ, ಅರುಹು-ಕುರುಹು ಮತ್ತು ಕ್ವಚಿತ್ತಾಗಿ ಚಿಂತನ-ಬಯಲು. ಈ ಪತ್ರಿಕೆಗಳು ತಮ್ಮ ಸಾಮಾಜಿಕ ರಾಜಕೀಯ ಚಿಂತನೆಗಳಿಗೆ ಹೆಸರಾದವು. ಹೀಗಾಗಿ ಸಹಜವಾಗಿಯೇ ಅಲ್ಲಿನ ವಿಮರ್ಶೆಗಳ ಸಾಂಸ್ಕೃತಿಕ ಚಿಂತನೆಯ ಮಾದರಿಯಲ್ಲಿವೆ. ಬರುವ ಲೇಖನಗಳು ಪತ್ರಿಕೆಗಳ ಧೋರಣೆಯನ್ನು ರೂಪಿಸುವುದಕ್ಕಿಂತಲೂ ಕನ್ನಡದಲ್ಲಿ ಪತ್ರಿಕೆಗಳ ಧೋರಣೆಗಳು ಬರೆಹದ ವಿಮರ್ಶೆಯ ಸ್ವರೂಪವನ್ನು ನಿರ್ಧರಿಸುವ ಸನ್ನಿವೇಶವು ಮೊದಲಿಂದಲೂ ಇದೆ.

ಇನ್ನು ಪುಸ್ತಕ ವಿಮರ್ಶೆಯು ಪತ್ರಿಕೆಗಳಲ್ಲಿ ಜೀವಂತವಾಗಿದ್ದರೂ, ಅದು ವಿಮರ್ಶೆಯ ಬೆಳವಣಿಗೆ ಮೊದಲ ಮೆಟ್ಟಿಲಂತೆ, ಪೂರ್ವಪೀಠಿಕೆಯಂತೆ ಕೆಲಸ ಮಾಡಬಹುದು. ಆದರೆ ಅನೇಕ ಕೃತಿಗಳಿಗೆ ಆರಂಭವೂ ಅಂತಿಮವೂ ಅದೇ ಆಗಿಬಿಡುತ್ತದೆ. ಪತ್ರಿಕೆಗಳಲ್ಲಿ ಈ ಕಾರ್ಯ ನಿರ್ವಹಿಸುವ ಅನೇಕ ವಿಮರ್ಶನ ಪ್ರಜ್ಞೆಯಿರುವ ಲೇಖಕರು, ಪುಸ್ತಕ ವಿಮರ್ಶೆಗೆ ವೃತ್ತಿಯ ಕಾರಣದಿಂದಲೂ ಸೀಮಿತಗೊಂಡಿರುವುದು ಇದಕ್ಕೆ ಸಾಕ್ಷಿ. ಇದಕ್ಕೆ ಹೋಲಿಸಿದರೆ, ದಿನ ಪತ್ರಿಕೆಗಳ ಭಾನುವಾರದ ಪುರವಣಿಗಳು ಲೇಖನ ರೂಪಿಯಾದ ಸಂಕ್ಷಿಪ್ತ ಲೇಖನಗಳಿಗೆ ಕೆಲವೊಮ್ಮೆ ಅವಕಾಶ ಕಲ್ಪಿಸುತ್ತವೆ. ಆದರೆ ಇಲ್ಲಿರುವ ಅವಕಾಶದಲ್ಲೂ ಗಂಭೀರವಾದ ದೀರ್ಘವಾದ ಬರೆಹಗಳು ಬರುವುದಿಲ್ಲ. ಜತೆಗೆ 'ಸಾಮಾನ್ಯ' ಓದುಗರಿಗೆ ಪರಿಚಯಾತ್ಮಕವಾಗಿ ಬರೆಯುವುದಕ್ಕೆ ಹೆಚ್ಚಿನ ಉತ್ತೇಜನ ನೀಡಲಾಗುತ್ತದೆ. ಆದರೆ ಇದೇ ಭಾಗದಲ್ಲಿ ಮತ್ತು ನಿಯಮಿತವಾದ ಅಂಕಣಗಳ ರೂಪದಲ್ಲಿ ಅನೇಕರು ಅತ್ಯುತ್ತಮವಾದ ವಿಮರ್ಶೆಯನ್ನು ಬರೆದಿರುವರು.

ನಟರಾಜ ಹುಳಿಯಾರರ 'ಗಾಳಿಬೆಳಕು' ಹಾಗೂ ಜೋಗಿಯವರ 'ಜಾನಕಿ ಕಾಲಂ'ನ ಅತ್ಯುತ್ತಮ ವಿಮರ್ಶನ ಬರೆಹಗಳು, ಎಮ್. ಎಸ್. ಆಶಾದೇವಿಯವರ ನಾರಿಕೇಳಾ, ವಿನಯಾ ಒಕ್ಕುಂದ ಅವರ 'ದಂದುಗ' ಮೊದಲಾದವು ಪತ್ರಿಕೆಗಳಲ್ಲೇ ಪ್ರಕಟವಾಗುತ್ತಿವೆ. ಆದರೆ ಅಲ್ಲಿ ಕೂಡ ಸಾಹಿತ್ಯಕ ಪತ್ರಿಕೋದ್ಯಮದ ಚೌಕಟ್ಟಿನೊಳಗೆ ವಿಮರ್ಶೆಯು ಅಸ್ತಿತ್ವವನ್ನು ಪಡೆದುಕೊಳ್ಳುವುದು. ಅಂಕಣಗಳಲ್ಲಿ ಬೇರೆಬೇರೆ ವಿಷಯಗಳ ಮೇಲೂ ಬರೆಯುವ ಅಗತ್ಯವಿರುವುದರಿಂದ ಅಲ್ಲಿ ಸಾಹಿತ್ಯ ವಿಮರ್ಶೆಯನ್ನು ಮಾತ್ರ ನಿರೀಕ್ಷಿಸುವುದು ಸಾಧ್ಯವಿಲ್ಲ. ಪತ್ರಿಕೆಗಳಿಗೆ ಬರೆಯುವುದರಿಂದ ವಿಮರ್ಶೆಯು ಜನಪ್ರಿಯಗೊಳ್ಳುತ್ತದೆ. ಆದರೆ ಅದನ್ನು ಸಾಮಾನ್ಯೀಕರಿಸುವುದರಿಂದ ಗುಣಮಟ್ಟ ಅಳ್ಳಕಗೊಳ್ಳುತ್ತದೆ. ಇದರ ಸಮಸ್ಯೆ ವಿಮರ್ಶಕರಲ್ಲಿಲ್ಲ. ವಿಮರ್ಶೆಗೆ ಒಳಪಡುವ ಕೃತಿಗಳಲ್ಲೂ ಅಲ್ಲ. ಇದು ಪತ್ರಿಕೆಯ ಮಾಧ್ಯಮದಲ್ಲಿಯೇ ಇದೆ.

ಬರಹದ ಗಾತ್ರ ಮತ್ತು ಅದರ ತಾತ್ವಿಕ ನಿಲುವುಗಳ ಮೇಲೆ ಪತ್ರಿಕಾ ಮಾಲೀಕರ ಒತ್ತಡಗಳಿದ್ದಾಗೂ, ಜಿ. ಬಿ. ಹರೀಶ, ವಿನಯಾ ಒಕ್ಕುಂದ, ಮಂಜುನಾಥ ಲತಾ ಮೊದಲಾದವರು ಉತ್ತಮ ಪುಸ್ತಕ ವಿಮರ್ಶೆ ಸೃಷ್ಟಿಸುತ್ತಿದ್ದಾರೆ. ಆದರೆ ಪುಸ್ತಕ

ವಿಮರ್ಶೆಯಿಂದ ಹೊರಬಾರದ ಉಳಿದವರೂ ಇದ್ದಾರೆ. ಇದು ಅವರು ಪತ್ರಿಕೆಯ ಉದ್ಯೋಗಿಗಳಾಗಿರುವುದರಿಂದ ಮಾಡಬೇಕಾದ ಕರ್ತವ್ಯದ ಭಾಗವಾಗಿದೆ. ಹೀಗಾಗಿ ಅಲ್ಲಿ ಇಷ್ಟವಿಲ್ಲದಿದ್ದರೂ ಬರೆಯುವ ಒತ್ತಾಯವು ಅಥವಾ ಹಾಗೆ ಬರೆಯುವಂತೆ ಮಾಡಿರುವ ಅನಿವಾರ್ಯತೆ ಗ್ರಂಥಕರ್ತರ ಮೇಲೆ ಇದೆ. ಹಿಂದೆ ಇದ್ದಂತೆ ಈಗ ಪುಸ್ತಕ ವಿಮರ್ಶೆಯು ಕನ್ನಡದಲ್ಲಿ ಅಷ್ಟೊಂದು ಪ್ರಧಾನವಾಗಿಲ್ಲ. ಹಿಂದೆ ಕಾಳೇಗೌಡ ನಾಗಾವಾರ, ಜಿ. ಎಸ್. ಆಮೂರ, ಗಿರಡ್ಡಿ ಗೋವಿಂದರಾಜ, ಟಿ. ಪಿ. ಅಶೋಕ, ಬರಗೂರು ರಾಮಚಂದ್ರಪ್ಪ ಮುಂತಾದವರೆಲ್ಲ ಪುಸ್ತಕ ವಿಮರ್ಶೆ ಬರೆಯುತ್ತಿದ್ದರು. ಆದರೆ ಪರಿಸ್ಥಿತಿ ಈಗ ಹಾಗಿಲ್ಲ. ಕೆಲವರು ಪ್ರತಿಭಾವಂತರಿದ್ದರೂ, ಬರೆಯುತ್ತಿರುವವರೆಲ್ಲಾ ಕನ್ನಡ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದಾರೆ ಎನಿಸುವುದಿಲ್ಲ. ಕೆಲವರಿಗೆ ಪುಸ್ತಕ ವಿಮರ್ಶೆ ಅನಿವಾರ್ಯವಾಗಿದ್ದು, ಅವರಿಗೆ ಪುಸ್ತಕ ವಿಮರ್ಶೆಯಿಂದ ಹೊರಬರಲು ಸಾಧ್ಯವಾಗದ ವಾತಾವರಣವೂ ಇದೆ. ಪತ್ರಿಕೋದ್ಯಮದ ವೃತ್ತಿಪರ ಒತ್ತಾಯಗಳಿಂದ ಅವರು ಪುಸ್ತಕ ವಿಮರ್ಶೆ ಬರೆಯಬೇಕಾಗಿರುತ್ತದೆ.

ಇಂತಹ ಲೇಖನಗಳು ಸಾಮಾನ್ಯವಾಗಿ ಸಾಹಿತ್ಯಿಕ ಪತ್ರಿಕೆಗಳಿಗೆ ಮತ್ತು ವಿಚಾರ ಸಂಕಿರಣಗಳಿಗಾಗಿ ರಚಿಸಲ್ಪಟ್ಟವಾಗಿರುತ್ತವೆ. ಈ ಕ್ಷೇತ್ರದಲ್ಲಿ ಹೆಚ್ಚು ಅಧ್ಯಾಪಕ ವೃತ್ತಿಯವರೇ ತೊಡಗಿಸಿಕೊಂಡಿರುತ್ತಾರೆ. ನಿರ್ದಿಷ್ಟ ವಿಷಯಗಳ ಮೇಲೆ ಏರ್ಪಡಿಸಿದ ಸೆಮಿನಾರುಗಳಲ್ಲಿ ಒಂದು ವಿಷಯವನ್ನು ಕುರಿತು ಭಿನ್ನ ದೃಷ್ಟಿಕೋನ ಮತ್ತು ಹಿನ್ನೆಲೆಗಳಲ್ಲಿ ವಿಚಾರಗಳು ಮಂಡನೆಯಾಗುವುದರಿಂದ ಸಾಮಾನ್ಯವಾಗಿ ವಿಮರ್ಶಾ ಲೇಖನಗಳು ನಿರ್ದಿಷ್ಟ ವಿಷಯಗಳನ್ನು ವಿವರವಾಗಿ ಚರ್ಚಿಸುವ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಎಂ. ಎಸ್. ಆಶಾದೇವಿ, ತಾರಿಣಿ ಶುಭದಾಯಿನಿ, ರಾಮಲಿಂಗಪ್ಪ ಟಿ. ಬೇಗೂರು, ನಟರಾಜ ಬೂದಾಳು, ನಟರಾಜ ಹುಳಿಯಾರ, ಕೆ. ವೈ. ನಾರಾಯಣಸ್ವಾಮಿ, ಲೋಕೇಶ ಅಗಸನಕಟ್ಟೆ, ಮೊಗಳ್ಳಿ ಗಣೇಶ, ಮಾಧವ ಪೆರಾಜೆ, ಕಾ. ವೆಂ. ಶ್ರೀ., ವಿನಯಾ ಒಕ್ಕುಂದ, ಮೇಟಿ ಮಲ್ಲಿಕಾರ್ಜುನ, ರಾಜೇಂದ್ರ ಚೆನ್ನಿ, ಹರೀಶ ಜಿ. ಬಿ. ಮೊದಲಾದವರನ್ನು ಈ ದಿಶೆಯಲ್ಲಿ ಹೆಸರಿಸಬಹುದು.

ಇವತ್ತಿನ ವಿಮರ್ಶೆಯ ಮುಖ್ಯ ಹೊಳಹುಗಳು ಕೆಲ ಕೃತಿಗಳ ಮುನ್ನುಡಿ–ಬೆನ್ನುಡಿಗಳ ಮೂಲಕವೂ ಕಾಣಿಸಿಕೊಳ್ಳುತ್ತವೆ. ಮುನ್ನುಡಿ ಬೆನ್ನುಡಿಗಳ ವಿಮರ್ಶಾ ಪರಂಪರೆಗೆ ಹೇಗೆ ಸೇರಿಕೊಳ್ಳುತ್ತವೆಂದು ಪರಿಶೀಲಿಸುವುದಾದರೆ ತಾವು ಮುನ್ನುಡಿ ಬರೆಯುತ್ತಿರುವ ಕೃತಿಯನ್ನು ಮುಖ್ಯವಾಗಿಟ್ಟುಕೊಂಡು ಅದರ ಹಿನ್ನೆಲೆಯಲ್ಲಿ ಆ ಸಾಹಿತ್ಯ ಪ್ರಕಾರದ ಕಾಲದ ಬಗ್ಗೆ, ಬೆಳವಣಿಗೆಯ ಬಗ್ಗೆ ಬಹು ಮೌಲಿಕವಾದ ಅಭಿಪ್ರಾಯಗಳು ವ್ಯಕ್ತವಾಗಬಹುದು ಅಥವಾ ಕೆಲ ಹೊಸ ಸುಳುಹುಗಳು ಕೂಡ ಆ ಕಾಲದ ಸಾಹಿತ್ಯ ಅಭಿವ್ಯಕ್ತಿಯಲ್ಲಿ ಕಾಣಿಸಿಕೊಳ್ಳಬಹುದು.

ಇನ್ನು ಬೆನ್ನುಡಿ ಎಂದು ಕರೆಯುವ ಬರಹಗಳಲ್ಲಿ ಕಿರಿದರಲ್ಲಿ ಪಿರಿದರ್ಥವನ್ನು ಓಡಿದಿಡುವುದನ್ನು ಕಾಣಬಹುದು. ಸದರಿ ಪುಸ್ತಕದ ಅಥವ ಲೇಖಕನ ಒಟ್ಟು ಸಾಹಿತ್ಯದ

ನಿಲುವನ್ನು ದಿಕ್ಸೂಚಿಯಾಗಿ ಅಭಿವ್ಯಕ್ತಿಸಿರುವುದನ್ನು ಕಾಣಬಹುದು. ಎಚ್. ಎಸ್. ರಾಘವೇಂದ್ರರಾವ್ ಅವರ ಮುನ್ನುಡಿ ಬೆನ್ನುಡಿಗಳಲ್ಲಿ ಈ ಲಕ್ಷಣಗಳನ್ನು ಕಾಣಬಹುದು. ವಿಶ್ಲೇಷಣಾತ್ಮಕ ಕೃತಿಗಳು, ಪಿಎಚ್. ಡಿ. ಪ್ರಬಂಧಗಳು ಪ್ರತ್ಯಕ್ಷವಾಗಿ – ಪರೋಕ್ಷವಾಗಿ ಕನ್ನಡ ವಿಮರ್ಶೆಗೆ ತೊಡಗಿಕೊಂಡಿರುವುದನ್ನು ಕಾಣಬಹುದು. ಡಿ. ಆರ್. ನಾಗರಾಜ, ಜಿ. ಎಸ್. ಅಮೂರ ಮೊದಲಾದವರ ಮೇಲೆ ಬಂದಿರುವ ಪಿಎಚ್. ಡಿ. ಗ್ರಂಥಗಳು (ಡಿ. ಆರ್. ನಾಗರಾಜರ ಸಾಹಿತ್ಯಿಕ ಚಿಂತನೆಗಳು, ಕನ್ನಡ ಸಾಹಿತ್ಯ ವಿಮರ್ಶೆಗೆ ಜಿ. ಎಸ್. ಆಮೂರರ ಕೊಡುಗೆ.) ಪರೋಕ್ಷವಾಗಿ ಕನ್ನಡ ವಿಮರ್ಶೆಗೆ ಸಂಬಂಧಪಟ್ಟವುಗಳೇ ಆಗಿವೆ. ಮೇಲೆಸೂಚಿಸಿದ ಇಬ್ಬರು ಲೇಖಕರು ಕನ್ನಡ ಪ್ರಮುಖ ವಿಮರ್ಶಕರಾಗಿರುವುದರಿಂದ ಅವರ ಬಗ್ಗೆ ನಡೆದ ಪಿಎಚ್. ಡಿ. ಅಧ್ಯಯನಗಳು ಕೂಡ ಪರೋಕ್ಷವಾಗಿ ಕನ್ನಡ ವಿಮರ್ಶೆಯ ಅಧ್ಯಯನವೇ ಆಗುತ್ತದೆ.

ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿಕೊಳ್ಳಬೇಕಾದ ಮತ್ತೊಂದು ಸಂಗತಿಯೆಂದರೆ ಕನ್ನಡದಲ್ಲಿ ಕವಿತೆ, ಕಾದಂಬರಿ, ಕಥಾ ಪ್ರಕಾರಗಳಿಗಿರುವಂತಹ ಒಂದು ನಿರ್ದಿಷ್ಟ ಕೃತಿಕಾರ ಸಮೂಹವನ್ನು ನಾವು ವಿಮರ್ಶೆಯಲ್ಲಿ ಕಾಣಲಾಗುವುದಿಲ್ಲ. ರಾಜೇಂದ್ರ ಚೆನ್ನಿ, ಗಿರಡ್ಡಿ ಗೋವಿಂದರಾಜು, ರಹಮತ್ ತರಿಕೆರೆ ಮೊದಲಾದವರನ್ನು ಈ ದಿಶೆಯಲ್ಲಿ ಹೆಸರಿಸಬಹುದಾದರು ಮೊದಲಿಬ್ಬರು ವಿಮರ್ಶೆ ಜೊತೆಗೆ ಪ್ರಬಂಧ, ಕತೆಗಾರರಾಗಿ ಕಾಣಿಸಿಕೊಂಡಿದ್ದಾರೆ. ರಹಮತ್ ಸಂಸ್ಕೃತಿ ಚಿಂತಕರಾಗಿ, ತಳ ಸಮುದಾಯಗಳ ಸಂಸ್ಕೃತಿ ಅಧ್ಯಯನಕಾರರಾಗಿ ತಮ್ಮ ವೃತ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಆ ಕಾರಣಕ್ಕಾಗಿ ಕನ್ನಡದಲ್ಲಿ ವೃತ್ತಿಪರ ವಿಮರ್ಶಕರನ್ನು ಕಾಣುವುದು ಕಷ್ಟಸಾದ್ಯವಾಗಿದೆ.

ಪುಸ್ತಕ ವಿಮರ್ಶೆಗಳ ನಿಲುವುಗಳು ಕಾಲಮಾನಕ್ಕೆ ಅನುಗುಣವಾಗಿ ರೂಪಾಂತರವಾಗುತ್ತ ಬೆಳೆಯುತ್ತ ಬಂದಿರುವುದನ್ನು ಗುರುತಿಸಬಹುದು. ಆರಂಭ ಕಾಲದಲ್ಲಿ ಬರುತಿದ್ದ ಪುಸ್ತಕ ವಿಮರ್ಶೆಗಳು ಆತ್ಮೀಯವಾಗಿ ಪರಿಚಯಿಸುವ, ಮಾರಾಟಕ್ಕೆ ಉತ್ತೇಜಿಸುವ, ಸಹೃದಯತೆ ಮತ್ತು ಮಾಹಿತಿ ಒದಗಿಸುವ ನೆಲೆಯಲ್ಲಿದ್ದವು. ಈ ದೃಷ್ಟಿಕೋನ ಅವರ ಆ ಕಾಲಘಟ್ಟದ ವಿಮರ್ಶೆಯೂ ಹೌದು. "ಇಂದು ಕೆಲವು ಪತ್ರಿಕೆಗಳು ಪುಸ್ತಕ ವಿಮರ್ಶೆ ಪ್ರಕಟಿಸುವುದನ್ನು ನಿಲ್ಲಿಸುತ್ತಿವೆ. ಪುಸ್ತಕ ಪ್ರಕಟಣೆಯು ಒಂದು ಪಕ್ಕಾ ಉದ್ಯಮವಾಗಿ, ಪುಸ್ತಕಗಳು ಮಾರುಕಟ್ಟೆಯ ಸರಕಾಗಿ ರೂಪಿತವಾಗುತ್ತಿರುವುದರಿಂದ ಪುಸ್ತಕ ವಿಮರ್ಶೆ ಕೂಡಾ ಜಾಹೀರಾತಿನಂತೆ ವಾಣಿಜ್ಯೀಕರಣಗೊಳ್ಳಲು ಆರಂಭಿಸಿದೆ. ಹೀಗಾಗಿ ಪುಸ್ತಕ ವಿಮರ್ಶೆ ಒಂದು ರೀತಿಯಲ್ಲಿ ಅಗಾಧ ವ್ಯಾಪ್ತಿಯನ್ನೂ ಇನ್ನೊಂದು ರೀತಿಯಲ್ಲಿ ತನ್ನೊಳಗೆ ಕಿರಿದಾಗುವ ಈ ಎರಡೂ ವೈರುಧ್ಯಗಳನ್ನು ಪಡೆದುಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ."[೧೦] ಆದ್ದರಿಂದಾಗಿಯೇ ಇಂದು ವಿಮರ್ಶೆ ಎಂದರೆ ದಿನಪತ್ರಿಕೆಗಳಲ್ಲಿ ವಾರಕ್ಕೊಮ್ಮೆ ಬರುವ ಸಾಪ್ತಾಹಿಕ ಪುರವಣಿಯ ಕೃತಿ ಪರಿಚಯಗಳೇ ಎಂದು ಬಹುತೇಕರು ಭಾವಿಸುವಂತಿದೆ. ಧೀರ್ಘವಾದ ಮತ್ತು ಆಳವಾದ ಚಿಂತನೆಗಳು ಇಲ್ಲಿ ಕಾಣಿಸುವುದಿಲ್ಲ. ಅಕಾಡೆಮಿಕ್, ನಾನ್ ಅಕಾಡೆಮಿಕ್ ವಲಯವೆಂಬ

ಅಂತರಗಳು ಜಾಸ್ತಿಯಾಗುತ್ತಿವೆ. ವಿಮರ್ಶೆ ಜನಸಾಮಾನ್ಯರಿಗೂ ಸರಿಯಾದ ರೀತಿಯಲ್ಲಿ ಅರ್ಥವಾಗಬೇಕು ಎಂಬ ನಿಲುವು ಕೆಲವು ಪತ್ರಿಕೆಗಳಿಗೆ ಇದ್ದರೆ, ಕೆಲವು ಪತ್ರಿಕೆಗಳಿಗೆ ಇಂಥವರೆ ವಿಮರ್ಶೆ ಬರೆಯಬೇಕೆಂಬ ಹಠವಿದೆ. ಇತ್ತೀಚೆಗೆ ವಿಮರ್ಶೆಯ ರಾಜಕಾರಣವೂ ಪ್ರಾರಂಭವಾಗಿದೆ. ಕೆಲವು ಬರಹಗಳಲ್ಲಿ ಗಂಭೀರ ಒಳನೋಟಗಳು ಇದ್ದರೆ, ಕೆಲವು ಬರಹಗಳು ಪರಿಚಯಾತ್ಮಕವಾಗಿರುತ್ತವೆ.

ಪತ್ರಿಕಾ ವಿಮರ್ಶೆಗಳಲ್ಲಿ ಪ್ರಕಟಗೊಳ್ಳುವ ಅಂಕಣಗಳು ವಿಮರ್ಶೆಯೋ, ವಿಚಾರವೋ ಎಂಬ ಪ್ರಶ್ನೆಯೂ ಮೂಡುತ್ತಿದೆ. "ಕೆಲವು ಅಂಕಣಗಳು ಇಂದಿಗೂ ಪ್ರಬುದ್ಧತೆಯನ್ನು ಪಡೆದುಕೊಳ್ಳುತ್ತಿವೆ. ಸಮಕಾಲೀನ ಸಮಸ್ಯೆಗಳನ್ನೆ ಪ್ರಧಾನವಾಗಿಟ್ಟುಕೊಂಡು ಸಾಪ್ತಾಹಿಕಗಳಲ್ಲಿ ಬರುವ ವಿಮರ್ಶೆಗಿಂತ ಅಂಕಣ ಬರಹಗಳಲ್ಲಿನ ವಿಚಾರಗಳೇ ಕೆಲವು ಬಾರಿ ಗಂಭೀರತೆಯನ್ನು ಪಡೆದುಕೊಳ್ಳುತ್ತಿದೆ. ವಿಮರ್ಶೆ ಹೆಸರಿನಲ್ಲಿ ಇಂದು ಸಮಕಾಲೀನ ರಾಜಕಾರಣ, ಸಾಮಜಿಕ ಸ್ಥಿತಿಗತಿ, ಪರಿಸರ ಇವುಗಳನ್ನು ಕುರಿತು ಪ್ರಖರ ಚಿಂತನಾಕ್ರಮಗಳು ಹರಿದು ಬರುತ್ತಿವೆ."[೧೧] ಇವತ್ತಿನ ವಿಮರ್ಶಾ ಪ್ರಕಾರ ಸಂಕರಗೊಳ್ಳುತ್ತಿರುವ ಹಿಂದೆ ಪತ್ರಿಕೆಗಳ ಈ ಪಾತ್ರವಿದೆ.

ಇವತ್ತಿನ ಲೇಖನ ವಿಮರ್ಶೆ ರೂಪುಗೊಳ್ಳುವಲ್ಲಿ ದಿನಪತ್ರಿಕೆಗಳ ಜೊತೆಗೆ ಈ ಕೆಳಕಂಡ ಸಾಹಿತ್ಯಿಕ ಪತ್ರಿಕೆಗಳೂ ಕನ್ನಡ ವಿಮರ್ಶೆ ಬೆಳವಣಿಗೆಗೆ ಕಾರಣವಾಗುತ್ತಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಕಂಡಂತೆ ಸಂಗ್ರಹಿಸಲಾಗಿದೆ. ಅರಿವು-ಬರಹ (ಅರಿವು-ಬರಹ ಟ್ರಸ್ಟ್-ಕೊಣಾಜೆ, ಮಂಗಳೂರು), ಶಬ್ದಗುಣ (ವಸಂತ ಬನ್ನಾಡಿ-ಕುಂದಾಪುರ), ಕನ್ನಡ ಅಧ್ಯಯನ (ಹಂಪಿ ವಿಶ್ವವಿದ್ಯಾಲಯ), ಅರುಹು-ಕುರುಹು (೨೦೦೯-ಎಚ್.ಎಸ್.ಉಮೇಶ್-ಸಂ, ಮೈಸೂರು), ಮಾತು-ಕತೆ (ನೀನಾಸಂ, ಹೆಗ್ಗೋಡು, ಶಿವಮೊಗ್ಗ), ಸಂಕುಲ (ಡಾ.ವಿಜಯಾ, ಬಿ.ಸುರೇಶ್-ಬೆಂಗಳೂರು), ಸಂಕಲನ (ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಹೇಮಾ ಪಟ್ಟಣಶೆಟ್ಟಿ), ಅಭಿವ್ಯಕ್ತಿ (ಕರ್ನಾಟಕ ಸಂಘ, ಮಂಡ್ಯ), ಚಿಂತನ – ಬಯಲು (ರೇಷ್ಮಾ ಜಿ. ಭಟ್, ಬಂಟ್ವಾಳ), ದೇಶಕಾಲ (ವಿವೇಕ ಶಾನುಭಾಗ, ಬೆಂಗಳೂರು) ಸಂಚಯ (ಡಿ. ವಿ. ಪ್ರಹ್ಲಾದ್, ಬೆಂಗಳೂರು) ಇತ್ಯಾದಿ ಅನೇಕ ಪತ್ರಿಕೆಗಳು ಹುಟ್ಟಿಕೊಂಡು ಗಮನಾರ್ಹ ಕೆಲಸವನ್ನು ಮಾಡಿದವು. ಇವಗಳಲ್ಲಿ ಕೆಲವು ಈಗ ಸ್ಥಗಿತಗೊಂಡಿವೆ; ಮತ್ತೆ ಕೆಲವು ಇನ್ನೂ ಕ್ರಿಯಾಶೀಲವಾಗಿವೆ.

೫.೩ ಪ್ರಾದೇಶಿಕ ವಿಮರ್ಶೆ ಮತ್ತು ಬಲಪಂಥೀಯ ವಿಮರ್ಶೆ

ಇವತ್ತಿನ ಸಾಹಿತ್ಯ ವಿಮರ್ಶೆಯನ್ನು ಗಮನಿಸುವಾಗ ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ, ಬೇರೆ ಬೇರೆ ರೀತಿಯಲ್ಲಿ ಪ್ರಕಟಗೊಳ್ಳುತ್ತಿರುವುದನ್ನು ಕಾಣಬಹುದು. ಇದಕ್ಕೆ ಆಯಾ ಪ್ರದೇಶದಲ್ಲಿರುವ ಪ್ರಮುಖ ಜನ ಸಮುದಾಯಗಳು, ವಿಶ್ವವಿದ್ಯಾಲಯಗಳು, ಅಲ್ಲಿ ಪಠ್ಯ ಪುಸ್ತಕ ವ್ಯವಸ್ಥೆ ಮತ್ತು ಅಧ್ಯಾಪಕ ಸಮುದಾಯ ಮೊದಲಾದವು ಕಾರಣಗಳಾಗಿವೆ. ಸಾಹಿತ್ಯ ವಿಮರ್ಶಕರೆಂದು ಹೆಸರು ಮಾಡಿರುವ ಬಹುತೇಕರು ಬೆಂಗಳೂರು ಮೈಸೂರು

ಭಾಗದ ದಕ್ಷಿಣ ಕರ್ನಾಟಕದಿಂದ ಬಂದಿದ್ದರೆ ಉತ್ತರ ಕರ್ನಾಟಕದಿಂದ ಬಂದಿರುವ ಬಹುತೇಕ ವಿಮರ್ಶಕರು ವಚನ ಸಾಹಿತ್ಯದ ಬಗ್ಗೆ ಮತ್ತು ತತ್ವ ಪದಗಳ ಬಗ್ಗೆ ಗಮನ ಹರಿಸಿರುವುದನ್ನು ಕಾಣಬಹುದು. ಹಾಗೆಯೇ ಮಂಗಳೂರು ಭಾಗದಿಂದ ಬರುವ ವಿದ್ವಾಂಸರು ಪಂಡಿತ ಪರಂಪರೆಯ ಹಿನ್ನೆಲೆಯಾದ್ದರಿಂದ ಅಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚು ಒಲವಿರುವುದು ಕಂಡುಬರುತ್ತದೆ. ಮತ್ತು ಧಾರ್ಮಿಕ ಸೂಕ್ಷ್ಮ ಪ್ರದೇಶವಾಗಿ ಪರಿವರ್ತನೆ ಹೊಂದುತ್ತಿರುವ ಅಲ್ಲಿ ಸಂಪ್ರದಾಯ ಮತ್ತು ವೈಚಾರಿಕತೆಯ ಪರ/ವಿರೋಧ ಮನೋಭಾವವು ಮುಕ್ತವಾಗಿಯೇ ಪ್ರಕಟಗೊಳ್ಳುತ್ತಿರುವುದನ್ನು ಕಾಣಬಹುದು.

ಹಾಗೆಯೇ ಜನಪದ ಸಾಹಿತ್ಯದ ಮೇಲೆ ಬರುತ್ತಿರುವ ವಿಮರ್ಶೆ ಗಮನಿಸುವುದಾದರೆ ದಕ್ಷಿಣ ಕರ್ನಾಟಕದಿಂದ ಮಲೆಮಹದೇಶ್ವರ ಮಂಟೇಸ್ವಾಮಿ ಕಾವ್ಯಗಳ ಬಗ್ಗೆ ಹೆಚ್ಚು ವಿಮರ್ಶೆಯಿದ್ದರೆ ಕರಾವಳಿಯಲ್ಲಿ ಯಕ್ಷಗಾನ, ಪಾಡ್ದನಗಳ ಮೇಲೆ ಗಮನ ಕೇಂದ್ರೀಕರಿಸಿರುವುದನ್ನು ಕಾಣಬಹುದು. ಉತ್ತರ ಕರ್ನಾಟಕದಲ್ಲಿ ಬಯಲಾಟ, ಲಾವಣಿ, ತತ್ವಪದಕಾರರು ಅವರ ಅಧ್ಯಯನದ ಪ್ರಮುಖ ಭಾಗವಾಗಿರುವುದನ್ನು ಮನಗಾಣಬಹುದು. ಹೀಗೆ ಇವತ್ತಿನ ಕನ್ನಡ ವಿಮರ್ಶೆಯಲ್ಲಿ ಸ್ವಲ್ಪ ಮಟ್ಟಿಗೆ ಪ್ರಾದೇಶಿಕತೆಯ ವೈಶಿಷ್ಟಗಳು ಕಾಣಿಸಿಕೊಳ್ಳುತ್ತವೆ. ಇದೊಂದು ಬಹು ಮುಖ್ಯವಾದ ಪ್ರವೃತ್ತಿಯಾಗಿ ಕಂಡುಬರುವುದಿಲ್ಲವಾದರೂ ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ನಡೆಯುವ ಹೆಚ್ಚು ಹೆಚ್ಚು ಸಂಶೋಧನೆಗಳು ಆಯಾ ಪ್ರದೇಶಕ್ಕೆ ವಿಶೇಷವಾಗಿ ಸೀಮಿತವಾಗಿರುವ ವಿಷಯ ಕಂಡುಬರುತ್ತದೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ನವ್ಯ ಸಾಹಿತ್ಯ ಸಂದರ್ಭದಲ್ಲಿ ಆಧುನಿಕ ವಿಮರ್ಶೆ ಅಥವಾ ರೂಪನಿಷ್ಠ ವಿಮರ್ಶೆ ಹೆಚ್ಚಾಗಿ ಚಾಲ್ತಿಗೆ ಬಂತು. ಆ ಸಂದರ್ಭದಲ್ಲಿ ವಿಶ್ವವಿದ್ಯಾಲಯದಲ್ಲಿದ್ದ ಜಿ. ಹೆಚ್. ನಾಯಕ್ ಮತ್ತು ಎಚ್. ಎಮ್. ಚನ್ನಯ್ಯ ಮುಂತಾದ ವಿಮರ್ಶಕರು ಆ ರೀತಿ ಯೋಚಿಸುವ ಒಂದು ವಿದ್ಯಾರ್ಥಿ ವರ್ಗವನ್ನೆ ಸೃಷ್ಟಿಸಿದರು. ಆನಂತರ ಅರವಿಂದ ಮಾಲಗತ್ತಿ, ಸಿ. ಪಿ. ಸಿ ದ್ಧಾಶ್ರಮ ಮೊದಲಾದವರು ದಲಿತ ಸಾಹಿತ್ಯದ ಅಧ್ಯಯನ ಹೆಚ್ಚಾಗಿ ನಡೆಯುವಂತೆ ಪ್ರಭಾವಿಸಿದ ಉದಾಹರಣೆಗಳಿವೆ. ಅಂದರೆ ವಿಶ್ವವಿದ್ಯಾಲಯದ ವಾತಾವರಣ ಮತ್ತು ಅಲ್ಲಿರುವ ಅಧ್ಯಾಪಕರ ದೃಷ್ಟಿಕೋನಗಳು ಆಯಾ ಭಾಗದ ವಿಮರ್ಶಾ ಸ್ವರೂಪ ರೂಪಗೊಳ್ಳಲು ಕಾರಣರಾದರು.

ಇವತ್ತಿನ ಕನ್ನಡ ವಿಮರ್ಶೆಯ ವೈವಿಧ್ಯತೆಗೆ ವಿಮರ್ಶಕರ ಸಾಮಾಜಿಕ ಹಿನ್ನೆಲೆಯು ಕಾರಣವಾಗಿರುತ್ತದೆ. ಆರಂಭದ ಕನ್ನಡ ವಿಮರ್ಶಕರಲ್ಲಿ ಹೆಚ್ಚಿನವರು ಆಂಗ್ಲ ಅಧ್ಯಾಪಕರಾಗಿದ್ದರು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲ್‌ಸ್ತರಕ್ಕೆ ಸೇರಿದವರಾಗಿದ್ದರು. ಜೊತೆಗೆ ವಿಮರ್ಶೆಯ ಪಾಂಡಿತ್ಯ ಮತ್ತು ಚಿಂತನೆಯನ್ನು ಬಯಸುವುದರಿಂದ ಇದು ಸೃಜನಕ್ರಿಯೆಗಿಂತ ಭಿನ್ನವಾದುದಾಗಿದ್ದು ವಿಮರ್ಶಾ ಕಾರ್ಯದಲ್ಲಿ ತೊಡಗಲು ಸಿದ್ಧತೆ ಬೇಕಾಗುತ್ತದೆ. ಆದರೆ ಕಳೆದ ದಶಕದಲ್ಲಿ ಬಂದ ಕನ್ನಡ ವಿಮರ್ಶೆಯನ್ನು

ಗಮನಿಸುವುದಾದರೆ ಈ ವಿಷಯದಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ಗಮನಿಸಬಹುದು.

ಕಳೆದೆರಡು ದಶಕಗಳಲ್ಲಿ ಭಿನ್ನ ಭಿನ್ನ ಸಮುದಾಯದವರು ಅಕ್ಷರಲೋಕಕ್ಕೆ ತೆರೆದುಕೊಂಡಿದ್ದರಿಂದ ಅವರಿಂದ ಅಪಾರ ಸೃಜನಶೀಲ ಸಾಹಿತ್ಯ ರಚನೆಯಾಯಿತು. ಮತ್ತು ಅದನ್ನು ಮೌಲ್ಯಮಾಪನ ಮಾಡುವ ಬಗೆಯನ್ನು ಅವರೇ ರೂಪಿಸಲು ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿ ಇದುವರೆವಿಗೂ ವಿಮರ್ಶೆಯಲ್ಲಿ ಮುಖ್ಯ ಪಾಶ್ಚಾತ್ಯ ತತ್ವಗಳನ್ನೆ ಅನುಸರಿಸುತ್ತಿದ್ದ ವಿಮರ್ಶೆ ಇಲ್ಲಿ ಬದಲಾವಣೆ ಹೊಂದಿ ಸ್ಥಳೀಯ – ದೇಸಿ ಪರಿಕಲ್ಪನೆಗಳನ್ನಾಧರಿಸಿ ವಿಮರ್ಶೆ ಹುಟ್ಟಿಕೊಳ್ಳಲಾರಂಭಿಸಿತು. ದಲಿತ ಸಾಹಿತ್ಯವನ್ನು ಮೌಲ್ಯಮಾಪನ ಮಾಡಲು ಹೊಸ ಪರಿಕಲ್ಪನೆಗಳು ಹುಟ್ಟಿಕೊಂಡಿದ್ದಕ್ಕೆ ಮುಖ್ಯ ಕಾರಣಗಳು; ಇದುವರೆವಿಗೂ ರಚನೆಗೊಳ್ಳುತ್ತಿದ್ದ ಸಾಹಿತ್ಯ ಮತ್ತು ಅದನ್ನು ಮೌಲ್ಯಮಾಪನ ಮಾಡುತ್ತಿದ್ದ ವರ್ಗ ಮತ್ತು ಅಭಿರುಚಿಗಳು ಹೆಚ್ಚು ಕಡಿಮೆ ಒಂದೇ ಆಗಿರುತ್ತಿದ್ದವು. ಆದರೆ ಭಿನ್ನ ರೀತಿಯ ಸಾಹಿತ್ಯ ಬಂದ ಮೇಲೆ ಮೊದಲಿನವರ ಸಾಂಪ್ರದಾಯಿಕ ದೃಷ್ಟಿಕೋನದ ಜೊತೆಗೆ ಬಲವಾದ ಭಿನ್ನಮತ ಸಾಧಿಸಿ ತಮ್ಮ ಸಾಹಿತ್ಯವನ್ನು ನಿರಾಕರಿಸುವ, ಅವಮಾನಿಸುವ ಮಾನದಂಡಗಳ ವಿರುದ್ಧ ಸಿಡಿದೆದ್ದು ಸಾಹಿತ್ಯ ವಿಮರ್ಶೆಯ ಮಾಮೂಲಿ ಮಾನದಂಡಗಳಿಗಿಂತ ಮುಖ್ಯವಾಗಿ ದಲಿತ–ಬಂಡಾಯ ಚಳುವಳಿಗಳ ಸಿದ್ಧಾಂತಗಳ ಪ್ರೇರಣೆಯಿಂದ ಈ ವಿಮರ್ಶೆ ರೂಪುಗೊಳ್ಳತೊಡಗಿತು.

ಆದ್ದರಿಂದ ಕಳೆದ ದಶಕದಲ್ಲಿ ಕಾಣಿಸಿಕೊಂಡ ವಿಮರ್ಶೆಯಲ್ಲಿ ಸಮುದಾಯದ ರಾಜಕಾರಣದ ತಿಳುವಳಿಕೆಯನ್ನು ಒಂದು ಸ್ಥಳೀಯ ಮಾನದಂಡವಾಗಿ ಅಳವಡಿಸಿಕೊಳ್ಳಲಾಗಿದೆ. ಇದಕ್ಕೆ ಕನ್ನಡ ಸಾಹಿತ್ಯ ಪರಂಪರೆಯಿಂದಲೇ ರೂಪಿಸಿಕೊಂಡಿರುವ ತಾತ್ವಿಕ ಹಿನ್ನೆಲೆಯಿದೆ. ಆದರೆ ಈ ಹಿನ್ನೆಲೆಯ ವಿಮರ್ಶೆಗೆ ಸಾಹಿತ್ಯಕ್ಕಿರುವ ವಿಶ್ವಾತ್ಮಕ ಪರಿಕಲ್ಪನೆಗಳು ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಕನ್ನಡ ವಿಮರ್ಶೆಯಲ್ಲಿ ತೊಡಗಿಕೊಂಡಿರುವ ಮುಖ್ಯ ವಿಮರ್ಶಕರೆಂದರೆ ವಡ್ಡಗೆರೆ ನಾಗರಾಜಯ್ಯ, ಕೊಟಗಾನಹಳ್ಳಿ ರಾಮಯ್ಯ, ರಘೋತ್ತಮ ಹೊ. ಬ., ರವಿಕುಮಾರ ನೀಹ, ಅಪ್ಪಗೆರೆ ಸೋಮಶೇಖರ, ಸುಭಾಷ ರಾಜಮನೆ, ಕೆ ಎಲ್ಲಪ್ಪ ಮೊದಲಾದವರು.

ಇಂದಿನ ವಿಮರ್ಶೆಯ ದೃಷ್ಟಿಕೋನ ವಿಚಿತ್ರ ಬಗೆಯ ಪ್ರಾದೇಶಿಕ ಮನೋಭಾವದಿಂದ ಸೊರಗಿದಂತೆ ಕಾಣಿಸುತ್ತದೆ. ಹಾಗೆ ನೋಡಿದರೆ ಪ್ರಾದೇಶಿಕತೆ ಎಂದು ಸಾಮಾನ್ಯವಾಗಿ ವಿವರಿಸಲಾಗುವ ಗುಣಗಳಿಗೆ ಇದು ವಿರುದ್ಧವಾಗಿದೆ. ಕನ್ನಡ ವಿಮರ್ಶೆ ಇಂತಹ ಬರಹಗಾರರ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ಅವರನ್ನು ಕನ್ನಡ ಸಂಸ್ಕೃತಿ ಸಾಹಿತ್ಯ ಪರಂಪರೆಗಳ ಚೌಕಟ್ಟಿನೊಳಗೆ ಮಾತ್ರ ನೋಡುತ್ತದೆಯೇ ಹೊರತು, ಬೌದ್ಧಿಕವಾಗಿ–ಸೃಜನಶೀಲವಾಗಿ ಅವರ ದೇಶವ್ಯಾಪಿ–ವಿಶ್ವವ್ಯಾಪಿ ಆಯಾಮಗಳನ್ನು ಗುರುತಿಸಲು ಹೋಗುವುದಿಲ್ಲ. ಇದಕ್ಕೆ ಕಾರಣ "ಸಾಹಿತ್ಯ ಅಥವಾ ಸಾಹಿತ್ಯ ವಿಮರ್ಶೆ ಎಂಬುದು ಬದುಕಿನ ಇತರೆಲ್ಲ ವಿದ್ಯಮಾನಗಳಂತೆ ಈಗ ಒಂದು ಪರಿಣಿತಿಯ

ವಿಷಯವಾಗಿ ಉಳಿಯದೆ, ಕೆಟ್ಟ ಅರ್ಥದಲ್ಲಿ ಪ್ರಜಾಪ್ರಭುತ್ವೀಕರಣಕ್ಕೆ ಒಳಗಾಗಿ; ಹೆಚ್ಚು ಜನರ 'ಬೆಂಬಲ' ಪಡೆದದ್ದೇ ಅತ್ಯುತ್ತಮವಾದದ್ದು ಎಂಬತಂಹ ಪರಿಸ್ಥಿತಿ ಉಂಟಾಗಿದೆ. ಇಂತಹ ಸಂದರ್ಭದಲ್ಲಿ, ಹೇಳಬೇಕಾದ್ದನ್ನು ನಿರ್ಭಿಡೆಯಿಂದ ಮತ್ತು ನಿಸ್ಸಂದಿಗ್ಧವಾಗಿ ಹೇಳುವ ಧೈರ್ಯ ಮತ್ತು ಪ್ರಾಮಾಣಿಕತೆಗಳಲ್ಲೇ ಇಂದಿನ ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಯ ನಿಜವಾದ ಮೌಲ್ಯಗಳು ಹುಟ್ಟಬಲ್ಲವಾಗಿವೆ. ಇಂದು ಕನ್ನಡ ಸಾಹಿತ್ಯ ವಿಮರ್ಶೆ ಎಲ್ಲ ಹುಸಿ ವಿನಯ, ಸಜ್ಜನಿಕೆ, ದಾರಿ ತಪ್ಪಿಸುವ ಅಮೂರ್ತ ಬೌದ್ಧಿಕತೆ ಮತ್ತು ನಮ್ಮ ದೃಷ್ಟಿ ದಿಗಂತಗಳನ್ನು ಮಿತಗೊಳಿಸಿ, ನಮ್ಮ ನೋಟವನ್ನು ವಿಕ್ಷಿಪ್ತಗೊಳಿಸುವ ಕಟು(ರಾಜಕೀಯ) ಸೈದ್ಧಾಂತಿಕತೆಗಳನ್ನು ಮೀರಿ ಮತ್ತೆ ಸಾಹಿತ್ಯದ ಆವೃತತೆ ಮತ್ತು ಸ್ವಾಯತ್ತತೆಗಳನ್ನು ಮರುಸ್ಥಾಪಿಸುವ ಪ್ರಯತ್ನದಲ್ಲಿದೆ."[೧೩] ಹೀಗೆ ಮಾಡಿದಾಗ ಮಾತ್ರ ಕನ್ನಡದಲ್ಲಿ ಪ್ರಾದೇಶಿಕವಾಗಿ ರೂಪುಗೊಳ್ಳುತ್ತಿರುವ ವಿಮರ್ಶೆಯ ಮಿತಿಗಳನ್ನು ಮೀರಲು ಸಾಧ್ಯವಾಗುತ್ತದೆ.

ಬಲಪಂಥೀಯ ವಿಮರ್ಶೆ

ಆರಂಭದಿಂದಲೂ ಕನ್ನಡ ಸಾಹಿತ್ಯ ಆಶಯದಲ್ಲಿ ಪ್ರಗತಿಪರವಾದ ಒಲವನ್ನು ಪ್ರಕಟಿಸಿದೆ. ವಿಮರ್ಶೆ ಕೂಡ ಇದನ್ನೆ ಪೋಷಿಸಿಕೊಂಡು ಹೋಗಿದೆ. ಕುವೆಂಪು ಅವರಲ್ಲಿ ಇದು ನಿಚ್ಚಳವಾಗಿ ಕಾಣಿಸಿಕೊಂಡರೆ ಪ್ರಗತಿಶೀಲ ಸಂದರ್ಭದಲ್ಲಿ ಅವರ ಘೋಷಣೆ ಮಾಡಿಕೊಂಡು ಸಾಹಿತ್ಯ ಸಮಾಜಕ್ಕಾಗಿ ಎಂದು ಬರೆಯ ಹೊರಟರು. ನವ್ಯದ ಸಂದರ್ಭದಲ್ಲಿ ಸಾಹಿತ್ಯ ವ್ಯಕ್ತಿವಾದದ ಹಾದಿಹಿಡಿದರು ಅದು ಎಲ್ಲೂ ಮತೀಯವಾದವನ್ನು, ಸಂಪ್ರದಾಯವನ್ನು ಪಾಲಿಸುವ ಆದರ್ಶ ಮಾಡಿಕೊಳ್ಳುವ ಪ್ರಯತ್ನ ನಡೆಯಲ್ಲಿ ನಡೆದು ಬಂದ ದಾರಿಯ ಕಡೆಗೆ ಕಣ್ಣು ತಿರುಗಿಸಬೇಡ ಎಂದೇ ಅದು ಹೇಳಿತು. ಆನಂತರ ಬಂದ ದಲಿತ – ಬಂಡಾಯ ಸಾಹಿತ್ಯದ ಮುಖ್ಯ ಆಶಯವೇ ಎಡಪಂಥೀಯವಾಗಿತ್ತು.

ಆದರೆ ೯೦ರ ದಶಕದ ನಂತರ ಸಮಾಜದಲ್ಲಿ ಗಂಭೀರವಾದ ಬದಲಾವಣೆಗಳೂ ಕಾಣಿಸಿಕೊಂಡವು. ಅದುವರೆವಿಗೂ ಸುಪ್ತವಾಗಿದ್ದ ಕೋಮುದ್ವೇಷ ಹೆಚ್ಚಾಗಿ ಪ್ರಕಟಗೊಳ್ಳಲಾರಂಭಿಸಿತು. ಇದರ ಪ್ರತಿಕ್ರಿಯೆ ಸಾಹಿತ್ಯ ಕ್ಷೇತ್ರದಲ್ಲೂ ಕಾಣಿಸಿಕೊಳ್ಳಲಾರಂಭಿಸಿತು. ಜನಪ್ರಿಯ ಕಾದಂಬರಿಕಾರರಾದ ಎಸ್. ಎಲ್. ಭೈರಪ್ಪನವರನ್ನು ಹಿಂದೂ ಸನಾತನ ತತ್ವಗಳನ್ನು ತಮ್ಮ ಕೃತಿಗಳ ಮೂಲಕ ಪ್ರಚಾರಪಡಿಸುತ್ತಿದ್ದಾರೆಂದು ತೀರ್ಮಾನಿಸಲಾಗಿದೆ. ಅಡಿಗರ ಕೊನೆ–ಕೊನೆಯ ಪದ್ಯಗಳಲ್ಲಿ ಅವರನ್ನು ಸಂಪ್ರದಾಯವಾದಿ ಎಂದು ತೀರ್ಮಾನಿಸಲಾಗುತ್ತಿದೆ. ಹಾಗೆಯೇ ವಿಮರ್ಶಾ ಕ್ಷೇತ್ರದಲ್ಲಿ ಕೂಡ ಅಜಕ್ಕಳ ಗಿರೀಶಭಟ್, ಜಿ. ಬಿ. ಹರೀಶ, ರಾಜಾರಾಮ ಹೆಗಡೆ, ಡಂಕಿನ ಝಳಕಿ ಮೊದಲಾದವರನ್ನು ಸಂಪ್ರದಾಯವಾದಿ, ಸನಾತನ ಹಿನ್ನೆಲೆಯಿಂದ ಪ್ರಭಾವಿತವಾದ ವಿಮರ್ಶಕರೆಂದು ಗುರುತಿಸಲಾಗುತ್ತಿದೆ. ಇದಕ್ಕೆ ಭೈರಪ್ಪನವರ ಆವರಣ ಕೃತಿಗೆ ಬಂದ ಟೀಕೆಗಳಿಗೆ ಪ್ರತಿಯಾಗಿ ಅಜ್ಜಕ್ಕಳ ಗಿರೀಶ ಭಟ್ ಅವರು 'ಬುದ್ಧಿಜೀವಿ ವರ್ಸಸ್ ಬೌದ್ಧಿಕ

ಸ್ವಾತಂತ್ರ್ಯ' ಎಂಬ ಕೃತಿ ತಂದಿದ್ದು, ಜಿ. ಬಿ. ಹರೀಶ ತಮ್ಮ ಸಾಹಿತ್ಯ ಕೃತಿಗಳ ವಿಶ್ಲೇಷಣೆಗೆ ಪಶ್ಚಿಮದ ತತ್ವಗಳ ಬದಲಾಗಿ ಆನಂದ ಕುಮಾರಸ್ವಾಮಿ ಅವರ ಕಲಾಮೀಮಾಂಸೆಯನ್ನು ಹೆಚ್ಚು ಅನುಸರಿಸಿರುವುದು. ಹಾಗೆಯೆ ರಾಜರಾಮ ಹೆಗಡೆ, ಡಂಕಿನ ಝಳಕಿ ಇವರು ವಚನಗಳ ವಿಶ್ಲೇಷಣೆಗೆ ಅನುಸರಿಸುತ್ತಿರುವ ನಿಯಮಗಳಿಂದಾಗಿ ಇವರನ್ನು ಬಲಪಂಥೀಯ ಹಿನ್ನೆಲೆಯ ವಿಮರ್ಶಕರೆಂದು ಗುರುತಿಸಲಾಗುತ್ತಿದೆ.

ಸಾಹಿತ್ಯ ವಿಮರ್ಶೆಯಲ್ಲಿ ಜಾತಿಕೇಂದ್ರಿತ, ಲೇಖಕ ಕೇಂದ್ರಿತ, ಪಂಥಕೇಂದ್ರಿತ ಪ್ರದೇಶ ಕೇಂದ್ರಿತ ನಿಲುವುಗಳ ವ್ಯಕ್ತವಾಗುತ್ತ ಬಂದಿವೆ. ಕುವೆಂಪು ಬೇಂದ್ರೆ ಅಡಿಗರನ್ನು ಕುರಿತ ಸಾಹಿತ್ಯ ವಿಮರ್ಶೆಯಲ್ಲಿ ಜಾತಿಯ ಒಲವು ಕೆಲಸ ಮಾಡಿರುವುದನ್ನು ಗಮನಿಸಬಹುದು. ಇನ್ನು ನವ್ಯ ನವೋದಯ ದಲಿತ ಬಂಡಾಯ ಪಂಥಗಳ ಒಲವು ತನಗೆ ತಾನೇ ಎದ್ದುಕಾಣುವಂತಿದೆ. ಆದರೂ ಕನ್ನಡ ವಿಮರ್ಶೆಯಲ್ಲಿ ಬಲಪಂಥೀಯ ಮತೀಯವಾದವು ಪ್ರಕಟವಾದದ್ದು ಕಡಿಮೆ. ಆದರೆ, ಅದು ಹೊಸತಲೆಮಾರಿನ ಕೆಲವು ವಿಮರ್ಶಕರಲ್ಲಿ ಕಾಣಿಸಿಕೊಂಡಿದೆ. ಈ ಆಸಕ್ತಿಯು ಬ್ರಾಹ್ಮಣ ಲೇಖಕರಲ್ಲಿಯೇ ಕಾಣಿಸಿಕೊಂಡಿರುವುದು ಸಾಮಾಜಿಕವಾಗಿ ಒಂದು ಗಮನಾರ್ಹ ಸಂಗತಿ. ಭಾರತದ ಬಲಪಂಥೀಯತೆಯು ಬ್ರಾಹ್ಮಣವಾದದ ಆಧುನಿಕ ರೂಪಾಂತರವಾಗಿರುವುದರಿಂದ ಇದು ಸಹಜವೇ ಆಗಿದೆ.

ಆದರೆ ಎಲ್ಲ ಬ್ರಾಹ್ಮಣ ಸಮುದಾಯದಿಂದ ಬಂದ ವಿಮರ್ಶಕರು ಈ ರೀತಿಯ ಬಲಪಂಥೀಯತೆಗೆ ಮಾರುಹೋಗಿಲ್ಲ. ಸರ್ಜಾಶಂಕರ್, ಶ್ರೀಪಾದಭಟ್, ಆನಂದ ಋಗ್ವೇದಿ ಮೊದಲಾದವರಲ್ಲಿ ಇದನ್ನು ಕಾಣುವುದಿಲ್ಲ. ಇದನ್ನು ಪ್ರಕಟಿಸುತ್ತಿರುವವರಲ್ಲಿ ಜಿ. ಬಿ. ಹರೀಶ್, ಹಾಗೂ ಗಿರೀಶ ಭಟ್ ಅಜಕ್ಕಳ ಅವರು ಮುಖ್ಯರು. ಇವರ ವಿಮರ್ಶೆಯು ಬಲಪಂಥೀಯವಾಗಲು ಕಾರಣ, ಬಲಪಂಥೀಯ ಲೇಖಕರಾದ ಎಸ್. ಎಲ್. ಭೈರಪ್ಪನವರನ್ನು ಎಡಪಂಥೀಯ, ಸ್ತ್ರೀವಾದಿ, ಪ್ರಗತಿಪರ ಲೇಖಕರ ವಿಮರ್ಶೆಯನ್ನು ವಿರೋಧಿಸುವ ಪ್ರಕ್ರಿಯೆಯಲ್ಲಿ ರೂಪುತಳೆದಿರುವುದು ಗಮನಾರ್ಹ. ಬಲಪಂಥೀಯತೆಯು ಒಂದು ಸಿದ್ಧಾಂತವಾಗಿ ಕನ್ನಡ ವಿಮರ್ಶೆಯನ್ನು ಅಂಬೇಡ್ಕರ್‌ವಾದ, ಲೋಹಿಯಾವಾದ, ಮಾರ್ಕ್ಸ್‌ವಾದಗಳ ಹಾಗೆ ಪ್ರವೇಶ ಮಾಡಿಲ್ಲ. ಬದಲಿಗೆ ಬಲಪಂಥೀಯ ಲೇಖಕರ ಪರವಾಗಿ ನಿಲ್ಲುವ ಮೂಲಕ ಇದು ಪ್ರವೇಶ ಮಾಡುತ್ತಿದೆ. ಈ ದಿಸೆಯಲ್ಲಿ ಅಜಕ್ಕಳ ಅವರ ಬುದ್ಧಿಜೀವಿ ವರ್ಸಸ್ ಆವರಣ ಕೃತಿಯನ್ನು ಗಮನಿಸಬಹುದು. ಒಂದು ಕೃತಿಯ ಅಥವಾ ವಿಮರ್ಶೆಯ ಸೈದ್ಧಾಂತಿಕತೆ ಏನೇ ಆದರೂ, ಅದರಲ್ಲಿ ವಿದ್ವತ್ತು ಮತ್ತು ಒಳನೋಟಗಳು ಇವೆಯೇ ಎಂಬುದು ಮುಖ್ಯವಾದುದು. ಆದರೆ ಕನ್ನಡದಲ್ಲಿ ಹೊಸತಲೆಮಾರಿನ ಬಲಪಂಥೀಯ ಒಲವಿನ ಲೇಖಕರಲ್ಲಿ ಇವು ಕಾಣುವುದಿಲ್ಲ. ಈ ಕೃತಿಯಲ್ಲಿ ಬೌದ್ಧಿಕತೆಯ ಬಗ್ಗೆ ಇರುವ ಅಸಹನೆಯನ್ನು ಈ ಹಿನ್ನೆಲೆಯಿಂದ ಅರ್ಥಮಾಡಿಕೊಳ್ಳಬಹುದು. ಅಜಕ್ಕಳ ಅವರು ಸಂಘಪರಿವಾರದ ಪ್ರಭಾವ ದಟ್ಟವಾಗಿರುವ ಕರಾವಳಿಯ ಭಾಗದಿಂದ ಬಂದವರು ಎಂಬುದು ಗಮನಾರ್ಹವಾಗಿದೆ. ಇದು ಕನ್ನಡ ವಿಮರ್ಶೆಯನ್ನು ಪ್ರಾದೇಶಿಕ ಸನ್ನಿವೇಶಗಳು ಪ್ರಭಾವಿಸುತ್ತಿರುವುದಕ್ಕೆ ಇನ್ನೊಂದು ನಿದರ್ಶನವಾಗಿದೆ.

ಹೊಸತಲೆಮಾರಿನ ವಿಮರ್ಶಕರಲ್ಲಿ ಜನಪದ ಸಾಹಿತ್ಯ ಮತ್ತು ಪರಂಪರೆಯ ಬಗ್ಗೆ ಚಿಂತನೆ ನಡೆಸುತ್ತಿರುವ ಹಲವಾರು ಜನ ವಿಮರ್ಶಕರಿದ್ದಾರೆ. ಅವರಲ್ಲಿ ಅರುಣ್ ಜೋಳದಕೂಡ್ಲಿಗಿ, ಮಹದೇವ ಶಂಕನಪುರ, ಮುಖ್ಯರು. ಜನಪದ ಸಾಹಿತ್ಯದಲ್ಲಿ ನೂರಾರು ಜನ ಪಿಎಚ್. ಡಿ. ಸಂಶೋಧನೆ ನಡೆಸುತ್ತಿರುವರಾದರೂ, ಸ್ವತಂತ್ರವಾಗಿ ಜನಪದ ಸಾಹಿತ್ಯವನ್ನು ಪುನರ್ ವ್ಯಾಖ್ಯಾನ ಪುನರ್‌ವಿಶ್ಲೇಷಣೆ ಮಾಡುವವರು ಬಹಳ ಕಡಿಮೆಯಿದ್ದಾರೆ. ಅರುಣ್ ಜೋಳದ ಕೂಡ್ಲಿಗಿ ಅವರಲ್ಲಿ ಸಾಹಿತ್ಯದ ವಿಶ್ಲೇಷಣೆಗಿಂತ ಜನಪದ ಸಿದ್ಧಾಂತಗಳ ಮೇಲೆ, ಕೆಲವು ಜನಪದ ಆಚರಣಲೋಕಗಳ ಮೇಲೆ, ಅದರ ಆಧುನಿಕ ರೂಪಾಂತರಗಳ ಹೊಸತರಹದ ಚರ್ಚೆಗಳು ಕಾಣುತ್ತವೆ. ಆದರೆ ಸಾಹಿತ್ಯ ಕೃತಿಗಳ ವಿಶ್ಲೇಷಣೆಯು ಕಡಿಮೆ. ಒಮ್ಮೊಮ್ಮೆ ಜನಪದ ಸಾಹಿತ್ಯದ ಬಗ್ಗೆ ಈ ಗಮನ ಕಡಿಮೆಯಾಗಲು ಸಾಂಸ್ಕೃತಿಕ ವಿಮರ್ಶೆಯ ಹೆಸರಲ್ಲಿ ಶುರುವಾಗಿರುವ ವಿಮರ್ಶನ ಮಾದರಿಯೂ ಒಂದು ಕಾರಣವೆನ್ನಬಹುದು.

ಇದು ಸಾಹಿತ್ಯದ ಚಾರಿತ್ರಿಕ ವಿಶ್ಲೇಷಣೆಯ ಬಗ್ಗೆ ಗಮನ ಕೊಡುವಷ್ಟು ಅದರ ಭಾಷಿಕ ವಿನ್ಯಾಸದ ಮೇಲೆ, ಅದರ ಕಲಾತ್ಮಕತೆಯ ಮೇಲೆ ಗಮನ ಕೊಡುವುದಿಲ್ಲ. ಆದ್ದರಿಂದ ಜನಪದ ಸಾಹಿತ್ಯವನ್ನು ಸಾಹಿತ್ಯವಾಗಿಯೂ ನೋಡುವ ದೃಷ್ಟಿಕೋನಗಳ ಅಗತ್ಯ ಇದೆ. ಅನೇಕ ಸಲ ಜನಪದ ಹಿನ್ನೆಲೆಯವರಿಗೆ, ಅವರಿಗಿರುವ ಪಠ್ಯಕ್ರಮದ ಕಾರಣದಿಂದ ಅದರ ಮಾನವಶಾಸ್ತ್ರೀಯ ಆಯಾಮದ ಬಗ್ಗೆ ಹೆಚ್ಚು ಅಧ್ಯಯನವಿರುತ್ತದೆ. ಎ. ಕೆ. ರಾಮಾನುಜನ್ ಅವರು ಈ ಎರಡೂ ಆಯಾಮಗಳ ಬಗ್ಗೆ ಗಮನ ಹರಿಸಿದ್ದರು. ಡಿ. ಆರ್. ನಾಗರಾಜ ಅವರು ಭಿಕ್ಷಕ್ಕೆ ಶಿವ ಬರುವ ಹಾಡನ್ನು ಲಂಕೇಶ್ ಅವರು ಎಲ್ಲೋ ಜೋಗಪ್ಪ ನಿನ್ನ ಅರಮನೆ ಹಾಡನ್ನು ವಿಶ್ಲೇಷಿಸಿರುವ ರೀತಿಯ ಬರಹಗಳು ಹೊಸತಲೆಮಾರಿನ ವಿಮರ್ಶಕರಲ್ಲಿ ಕಂಡು ಬರುತ್ತಿಲ್ಲ.

೫.೪ ವಿಮರ್ಶಕರ ಸಾಮಾಜಿಕ ಹಿನ್ನೆಲೆ ಮತ್ತು ಸಂವೇದನೆಗಳ ಪ್ರಭಾವ

ಹೊಸತಲೆಮಾರಿನ ವಿಮರ್ಶೆಯಲ್ಲಿ ಬೇರೆಬೇರೆ ಸಮುದಾಯದ ಭಾಗವಹಿಸುವಿಕೆಯ ಪ್ರಮಾಣವು ಹಿಂದೆಂದಿಗಿಂತ ಹೆಚ್ಚಾಗಿದೆ. ಸಾಮಾನ್ಯವಾಗಿ ಸಾಹಿತ್ಯ ವಿಮರ್ಶೆಯು ಕತೆ ಕಾದಂಬರಿ ಕಾವ್ಯಗಳಿಗೆ ಹೋಲಿಸಿದರೆ, ಸಾಮಾಜಿಕವಾಗಿ ಮೇಲುಜಾತಿಯಿಂದ ಬಂದವರು ತೊಡಗಿಕೊಂಡಿರುವ ಪ್ರಕಾರವಾಗಿತ್ತು. ಇದನ್ನು ಒಂದು ಸಾಮಾಜಿಕ ವಸ್ತುಸ್ಥಿತಿಯ ಸಂಗತಿಯಾಗಿ ಗುರುತಿಸಬಹುದೇ ಹೊರತು ಧೋರಣೆಯ ವಿಷಯದಲ್ಲಿ ಅಲ್ಲ. ಇದಕ್ಕೆ ಕಾರಣ, ಸಾಹಿತ್ಯ ವಿಮರ್ಶೆಯು ಅನುಭವ ಪ್ರಧಾನವಾದ ಪ್ರಕಾರವಾಗಿರದೆ, ಚಿಂತನೆ ಮತ್ತು ವಿದ್ವತ್ತಿನ ಸಿದ್ಧತೆಯನ್ನು ಬೇಡುವಂತಹ ಪ್ರಕಾರವಾಗಿದ್ದುದು. ಮುಖ್ಯವಾಗಿ ಅದರ ಸಿದ್ಧಾಂತಗಳು ಪಶ್ಚಿಮದವಾಗಿದ್ದು ಅವು ಇಂಗ್ಲೀಷಿನಲ್ಲಿ ಇರುತ್ತಿದ್ದುದು. ಇಂಗ್ಲೀಷು ದಲಿತರಿಗೆ ಬಿಡುಗಡೆಯ ಸಾಧನವಾಗಿ ಈಗ ದಲಿತ ಚಿಂತಕರು ಪ್ರತಿಪಾದಿಸುತ್ತಿದ್ದರೂ, ಶೈಕ್ಷಣಿಕವಾಗಿ ಗ್ರಾಮೀಣ ಹಿನ್ನೆಲೆಯಿಂದ ಬಂದ

ದಲಿತ ಮತ್ತು ಕೆಳಜಾತಿಯ ವಿದ್ಯಾರ್ಥಿಗಳಿಗೆ ಅದಿನ್ನೂ ಕಬ್ಬಿಣದ ಕಡಲೆಯಾಗಿಯೇ ಇರುವುದು ವಾಸ್ತವವಾಗಿದೆ.

ಆದರೆ ಈ ಸನ್ನಿವೇಶವು ಎಪ್ಪತ್ತರ ದಶಕದ ಬಳಿಕ ಕೊಂಚ ಬದಲಾಗಿದೆ. ಕೆಳಜಾತಿಯ ದಲಿತ ಮತ್ತು ಮಹಿಳಾ ಸ್ತರಗಳಿಂದ ಬಂದವರು ಸಹ ವಿಮರ್ಶೆಯನ್ನು ಬರೆಯತೊಡಗಿದರು. ಇವರಿಗೆ ಸಾಹಿತ್ಯದ ಅಧ್ಯಯನ, ವಿಮರ್ಶಾ ತತ್ವಗಳ ಅರಿವು ಮುಖ್ಯವಾಗಿರುವ ಬದಲು, ಸಾಹಿತ್ಯವನ್ನು ನೋಡುವ ಸಾಂಪ್ರದಾಯಿಕ ದೃಷ್ಟಿಕೋನದ ಜತೆಗೆ ಭಿನ್ನಮತ, ತಮ್ಮನ್ನು ನಿರಾಕರಿಸುವ ಅಪಮಾನಿಸುವ ಸಾಹಿತ್ಯ ಕೃತಿಗಳ ಅಥವಾ ಲೇಖಕರ ಸಾಹಿತ್ಯದ ಜತೆಗೆ ತಾತ್ವಿಕ ಜಗಳ ಮುಖ್ಯವಾಗಿವೆ. ಹಿರಿಯ ತಲೆಮಾರಿಗೆ ಸೇರಿದ ಬಿ. ಕೃಷ್ಣಪ್ಪ, ದೇವಯ್ಯ ಹರವೆ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯನವರು ಬರೆದ ಸಾಹಿತ್ಯ ವಿಮರ್ಶೆಯನ್ನು ಗಮನಿಸಿದರೆ, ಅಲ್ಲಿ ಪಶ್ಚಿಮದ ಸಿದ್ಧಾಂತಗಳ ಪ್ರೇರಣೆಗಿಂತ ಚಳುವಳಿಯಿಂದ ಬಂದ ಸೈದ್ಧಾಂತಿಕ ತಿಳುವಳಿಕೆಯೇ ಮುಖ್ಯವಾಗಿ ಕೆಲಸ ಮಾಡಿರುವುದನ್ನು ಗಮನಿಸಬಹುದು. ಹೀಗಾಗಿ ಹೊಸತಲೆಮಾರಿನ ವಿಮರ್ಶೆಯಲ್ಲಿ ಸಮುದಾಯದ ರಾಜಕಾರಣದ ಭಾಗವಾಗಿರುವ ಒಂದು ಬಗೆಯ ಸ್ಥಳೀಯತೆಯ ಆಯಾಮವಿದೆ. ಕನ್ನಡ ಸಾಹಿತ್ಯ ಕೃತಿಗಳ ಓದಿನಿಂದಲೇ ರೂಪುತಳೆದಿರುವ ಪರಂಪರೆಯ ಪರಿಕಲ್ಪನೆಯಿದೆ. ಇದು ಅದರ ಶಕ್ತಿಯಾಗಿರುವಂತೆಯೇ ಮಿತಿಯೂ ಆಗಿದೆ. ಯಾಕೆಂದರೆ ಭಾರತದ ಬೇರೆಬೇರೆ ಭಾಷೆಗಳಲ್ಲಿ ಜಗತ್ತಿನ ಬೇರೆಬೇರೆ ಸಾಹಿತ್ಯ ಪರಂಪರೆಗಳ ಜತೆ ಕೊಡುಕೊಳುವಿಕೆಯ ಆಯಾಮವು ಅದಕ್ಕೆ ಕಡಿಮೆಯಾಗಿದೆ. ಕೆ. ಯಲ್ಲಪ್ಪ, ಸುಭಾಷ್ ರಾಜಮಾನೆ, ವಡ್ಡಗೆರೆ ನಾಗರಾಜಯ್ಯ, ಹೊ. ಬ. ರಘೋತ್ತಮ, ರವಿಕುಮಾರ್, ಅಪ್ಪಗೆರೆ ಸೋಮಶೇಖರ ಮೊದಲಾದವರು ಈ ಸಂದರ್ಭದ ಮುಖ್ಯ ದಲಿತ ವಿಮರ್ಶಕರಾಗಿ ಕಾಣುವರು.

ಇವತ್ತಿನ ವಿಮರ್ಶೆಯ ಹಿಂದಿನ ಒತ್ತಡಗಳು ಬಹು ವೈವಿಧ್ಯಮಯವಾಗಿದ್ದು ಇಂತಹ ಎರಡು ಬರಹಗಳನ್ನು ಇಲ್ಲಿ ನೋಡಬಹುದು. "ಮುಖ್ಯವಾಗಿ ಸಾಂಸ್ಕೃತಿಕ ಓದು ಈ ಬರವಣಿಗೆಯ ಮುಖ್ಯಭಿತ್ತಿ. ಮಾಮೂಲಿ ವಿಮರ್ಶೆಯ ಮಾನದಂಡಗಳು ಇಲ್ಲಿ ಗೈರು. ಹೊಸತಾದುದು ಅದ್ಭುತವಾದುದೂ ಇರಲಿಕ್ಕಿಲ್ಲ. ಆದರೆ ವ್ಯಕ್ತಿನಿಷ್ಠ ಗ್ರಹಿಕೆಯು ಸಮಷ್ಠಿ ಪ್ರಜ್ಞೆಯಾಗಿ ಮಾಗುತ್ತಿರುವ ಪ್ರಕ್ರಿಯೆ ಕಂಡುಬಂದಲ್ಲಿ ಬರೆಯಲು ಹಾಕಿದ ಶ್ರಮ ಸಾರ್ಥಕ"[೧೪] ಎಂಬ ಭಾವಗಳು ವ್ಯಕ್ತವಾಗಿವೆ. ಸಾಹಿತ್ಯ ವಿಮರ್ಶೆಯ ಹುಟ್ಟಿನ ಹಿನ್ನೆಲೆಗೆ ಯಾವಯಾವ ಪರಿಸ್ಥಿತಿಗಳು ಕಾರಣವಾಗಿರಬಹುದೆಂಬುದನ್ನು ಇಲ್ಲಿ ನೋಡಬಹುದು.

ಮತ್ತೊಂದು ಹೇಳಿಕೆಯನ್ನು ಗಮನಿಸುವುದಾದರೆ, "ಇಲ್ಲಿನ ಆಯಾ ಲೇಖನಗಳ ಸ್ವರೂಪ ಮತ್ತು ಧೋರಣೆಗಳು ಆಯಾ ಸಾಂದರ್ಭಿಕತೆಯ ರಾಜಕಾರಣದಿಂದ ರೂಪಿತವಾಗಿವೆ. ಅಷ್ಟಿದ್ದೂ ಇಲ್ಲಿನ ಬರಹಗಳೆಲ್ಲವೂ ವ್ಯಕ್ತಿನಿಷ್ಠವೇ ಆಗಿವೆ. ಓದುಗನ ವ್ಯುತ್ಪತ್ತಿ, ಮನೋಭೂಮಿಕೆ ಪತ್ರಿಕೆಗಳು ಬರೆಹದ ಹಿಂದೆ ಕೆಲಸ ಮಾಡುವ ಹಾಗೇ, ಓದುಗನ ಸಂವೇದನೆಯನ್ನು ನಿಯಂತ್ರಿಸುವಲ್ಲಿ ಬಾಹ್ಯ ಸಂದರ್ಭಗಳು ಸದಾ ಕೆಲಸ

ಮಾಡುತ್ತಿರುತ್ತವೆಯಲ್ಲವೇ? ಹಾಗೆ ನೋಡಿದರೆ ಸಂಪೂರ್ಣ ವ್ಯಕ್ತಿನಿಷ್ಠ, ಸಂಪೂರ್ಣ ವಸ್ತುನಿಷ್ಠ ಬರಹಗಳು ಎಂದೂ ಹುಟ್ಟಲಾರವು. ಸಾಂದರ್ಭಿಕತೆಯ ರಾಜಕಾರಣದಿಂದ ತಪ್ಪಿಸಿಕೊಂಡು ಯಾವ ಬರೆಹವೂ ಜನಿಸಲು ಸಾಧ್ಯವಿಲ್ಲ. ಹೀಗಾಗಿ ಇಲ್ಲಿನ ಎಲ್ಲ ಲೇಖನಗಳೂ ವ್ಯಕ್ತಿ, ವಸ್ತು ಸಂದರ್ಭಗಳೆಲ್ಲವೂ ನುಡಿಗೊಂಡ ಫಲಗಳಾಗಿವೆ. ಈ ಕಾರಣಕ್ಕಾಗೇ ಇಲ್ಲಿನ ಲೇಖನಗಳಿಗೆ ಕೆಲ ಮಿತಿಗಳು ಉಂಟಾಗಿವೆ. ಪಠ್ಯನಿರ್ಮಾಣ ಸಂದರ್ಭಗಳ ಹೊರತಾಗಿಯೂ ಇಲ್ಲಿನ ಲೇಖನಗಳು ಬದುಕುತ್ತವೆ ಎಂದಾದರೆ ನಾನು ಧನ್ಯ. ಯಾವುದೋ ಕೆಲ ಕಾರಣಗಳಿಗಾಗಿ ಹುಟ್ಟಿದ ಮಕ್ಕಳು ಇನ್ನಾವುದೋ ಕಾರಣಗಳಿಗಾಗಿ ದುಡಿಯುತ್ತವೆ ಎಂದಾಗ ಮಾತ್ರವೇ ಬದುಕು ಸಾಗುವುದು. ಇಲ್ಲಿನ ಲೇಖನಗಳು ಇನ್ಯಾವ್ಯಾವುದೋ ಕಾರಣಗಳಿಗೆ ದುಡಿಯುತ್ತವೆ ಎನ್ನುವುದಾದರೆ, ಈ ಬರಹಕ್ಕೊಂದು ಸಾರ್ಥಕ್ಯ. ಇಲ್ಲದಿದ್ದರೆ ಇದು ಬರೀ ಲಿಪಿ ವ್ಯಾಯಾಮವಾದೀತು"[೧೫]

ಹಿರಿಯ ತಲೆಮಾರಿನ ವಿಮರ್ಶಕರ ಜೊತೆ ಹೊಸತಲೆಮಾರಿನ ವಿಮರ್ಶಕರನ್ನು ಹೋಲಿಸಿದರೆ, ಹೊಸಬರಲ್ಲಿ ವಿಮರ್ಶೆಯ ಉತ್ಸಾಹವಿದೆ. ಆದರೆ ಇವರಲ್ಲಿ ಸಾಮಾನ್ಯವಾಗಿ ಹಿರಿಯ ವಿಮರ್ಶಕರ ಚೌಕಟ್ಟುಗಳ ಮುಂದುವರಿಕೆಯೇ ಹೆಚ್ಚಾಗಿದೆ. ಅವರ ಚೌಕಟ್ಟುಗಳನ್ನು ಮುರಿದು ಹೊಸ ಚೌಕಟ್ಟುಗಳನ್ನು ಶೋಧಿಸುವ ಯತ್ನವಿದೆಯಾದರೂ ಒಟ್ಟಾರೆ ಅದು ಕಡಿಮೆ. ಸೃಜನಶೀಲವಾದ ಹೊಸ ಕಥನಕ್ರಮವಾಗಲಿ, ಹೊಸ ತಾತ್ವಿಕ ಚೌಕಟ್ಟುಗಳ ಮಂಡನೆಯಾಗಲಿ ಮಾಡುವ ವಿದ್ವತ್ ದುಡುಕಿಲ್ಲ. ದುರ್ಬಲ ಲೇಖಕರ ಬಗ್ಗೆಯೊ, ಜೀವವಿರೋಧಿ ಸಂಸ್ಥೆಗಳ ಬಗ್ಗೆಯೊ ಉದಾರವಾದಿಯಾಗಿ ಬರೆಯಬಲ್ಲ ವಿಮರ್ಶಕರು ನಿಷ್ಠೂರವಾಗಿ ತಮ್ಮ ಅಭಿಪ್ರಾಯಗಳನ್ನು ದಾಖಲಾಗಿಸುವುದಿಲ್ಲ. ತಮಗೆ ಒಂದು ಕೃತಿ ಅರ್ಥವಾಗಿಲ್ಲ, ಜಡವಾಗಿದೆ, ರೋಚಕತೆಯಿಂದ ಕೂಡಿದ್ದ ತೆಳು ಅನುಭವ ಕೊಡುತ್ತದೆ, ಸದಾಶಯ ಘೋಷಣೆಗಳಿಂದ ಕೂಡಿದೆ ಹೊರತು ಕಾವ್ಯವಾಗಿಲ್ಲ ಎಂಬ ತರತಮ ಪ್ರಜ್ಞೆಯ ಸರಳವಾದ ಪ್ರಾಮಾಣಿಕ ಮಾತನ್ನು ಹೇಳುವುದು ಮುಖ್ಯವೆನಿಸುತ್ತದೆ. ಈ ದೃಷ್ಟಿಯಿಂದ ಲಂಕೇಶ, ಡಿ. ಆರ್. ನಾಗರಾಜ, ಜಿ. ಎಚ್. ನಾಯಕ, ಕುರ್ತಕೋಟಿ, ಎಂ. ಜಿ. ಕೃಷ್ಣಮೂರ್ತಿ ಮುಂತಾದವರ ವಿಮರ್ಶಾ ಬರಹದ ಖಚಿತತೆ ಹೊಸತಲೆಮಾರಿನವರಲ್ಲಿ ಕಡಿಮೆ ಇದೆ ಎಂದು ಅನಿಸುತ್ತದೆ. ಬಹಳ ಸಲ ವಯೋ ಸಹಜವಾದ ಹಿಂಜರಿಕೆಯೋ, ನಿರ್ದಿಷ್ಟ ತಾತ್ವಿಕತೆ ಕೊರತೆ, ಅಧ್ಯಯನದ ಬಲವೊ, ಸಾಹಿತ್ಯ ಕೃತಿಯನ್ನು ಎಷ್ಟೆ ಮೆಚ್ಚಿದರೂ, ವಿಶ್ಲೇಷಣೆ ಮಾಡಿದರೂ ಕಡೆಗೆ ಅದು ಸಾಹಿತ್ಯವಾಗಿ ಗೆದ್ದಿದೆಯೊ ಇಲ್ಲವೊ ಜೀವಂತವೊ ಜಡವೊ ಎಂಬ ಪ್ರಶ್ನೆಯನ್ನು ಮುಖಾಮುಖಿ ಮಾಡದಿರುವುದು. ಕೆಲವೊಮ್ಮೆ ಜಾತಿ ಪಂಗಡ ಉಪಪಂಗಡದ ಅನುಭವ ಲೋಕವನ್ನು ಕೃತಿಯು ಬಳಸಿಕೊಂಡಿದೆ ಎಂಬ ಮಮಕಾರಗಳು ಕೂಡ ಸಾಂಸ್ಕೃತಿಕ ವಿಶ್ಲೇಷಣೆಯ ಹೆಸರಲ್ಲಿ ಈ ಬಗೆಯ ಮೌಲ್ಯಮಾಪನದ ಪ್ರಜ್ಞೆಯನ್ನು ಮಸಕಾಗಿಸಿರುವ ಸಾಧ್ಯತೆಯಿದೆ.

ಎಂಬತ್ತರ ದಶಕದ ದಲಿತ ಬಂಡಾಯ ಚಳುವಳಿಯ ಪರಿಣಾಮವಾಗಿ ದಲಿತ, ಮಹಿಳಾ, ಮುಸ್ಲಿಂ ಸಮಾಜದ ಹಿನ್ನೆಲೆಗಳಿಂದ ಬಂದ ಲೇಖಕರು ಬರವಣಿಗೆ ಮಾಡಲು

ಆರಂಭಿಸಿದರಷ್ಟೆ. (೨೧ನೇ ಶತಮಾನದ ಮೊದಲ ದಶಕಗಳಲ್ಲಿ ಇದಕ್ಕೆ ಬುಡಕಟ್ಟು ಅಲೆಮಾರಿ ಹಿನ್ನೆಲೆಯ ಲೇಖಕರೂ ಸೇರಿಕೊಂಡರು.) ಈ ಬರವಣಿಗೆಯು ಸಾಮಾಜಿಕ ಅನುಭವ ಮತ್ತು ಸಂವೇದನೆಗಳ ಆಧಾರದಲ್ಲಿ ವಿಮರ್ಶೆ ಮಾಡುವಂತಹ ವಿಧಾನವನ್ನೂ ಪರಿಭಾಷೆಗಳನ್ನೂ ಹುಟ್ಟುಹಾಕಿತು. ಈ ವಿಧಾನದಲ್ಲಿ ದೊಡ್ಡ ಪ್ರಮಾಣದಲ್ಲಿ ಪಿಎಚ್. ಡಿ. ಸಂಶೋಧನೆಗಳು ಶುರುವಾದವು. ಈ ವಿಧಾನದಲ್ಲಿ ಸಾಹಿತ್ಯದಲ್ಲಿ ಪ್ರಕಟವಾಗಿರುವ ಅನುಭವ, ಲೋಕದೃಷ್ಟಿ ಮತ್ತು ಸಂವೇದನೆಗಳು ವಿಮರ್ಶೆಯಲ್ಲಿ ಆದ್ಯತೆಯನ್ನು ಪಡೆದವು. ಆದರೆ ಇವುಗಳ ಭರದಲ್ಲಿ ಬರೆಹವು ಕಲಾಕೃತಿಯಾಗಿ ಹೇಗೆ ಅಭಿವ್ಯಕ್ತಿಗೊಂಡಿವೆ ಎಂಬ ರೂಪದ ಪ್ರಶ್ನೆಯು ಪ್ರಮುಖವಾಗಲಿಲ್ಲ. ಇದು ಕೃತಿಯ ಆಶಯ ಮತ್ತು ಧೋರಣೆಯನ್ನು ಪ್ರಧಾನವಾಗಿರಿಸಿಕೊಂಡ ಎಲ್ಲ ವಿಮರ್ಶೆಗಳ ಸಮಸ್ಯೆಯಾಗಿದೆ.

ಈ ವಿಧಾನವು ಒಂದು ಬಗೆಯಲ್ಲಿ ಸಾಹಿತ್ಯ ವಿಮರ್ಶೆಯ ಪರಿಕರಗಳನ್ನು ಬಳಸುವುದಕ್ಕಿಂತಲೂ ಸಮಾಜಶಾಸ್ತ್ರದ ಪರಿಕರಗಳನ್ನು ಹೆಚ್ಚು ಬಳಸತೊಡಗಿದೆ. ಇದರ ಜತೆಗೆ ಲೇಖಕರ ಅಥವಾ ಅವರ ಬರೆಹದಲ್ಲಿರುವ ವರ್ಗದ ಪ್ರಶ್ನೆಗಳೂ ಮಿಳಿತವಾದವು. ಜನಪದ ಪಠ್ಯಗಳನ್ನು ಸಹ ಇದೇ ಮಾದರಿಯಲ್ಲಿ ನೋಡುವುದು ಆರಂಭವಾಗಿದೆ. ಈ ಮಾದರಿಯಲ್ಲಿ ಅನೇಕ ಸಂವೇದನಶೀಲವಾದ ವಿಮರ್ಶೆಗಳು ಬಂದಿವೆಯಾದರೂ. ಇದು ಸಾಹಿತ್ಯಕ ಸಂವೇದನೆಯನ್ನು ಕಳೆದುಕೊಂಡಿದ್ದು, ಈ ಮಾದರಿಯು ಜಡತೆಯ ಕಡೆಗೆ ವಿಮರ್ಶೆಯನ್ನು ಕೊಂಡೊಯ್ಯುತ್ತಿದೆ. ಈ ನೆಲೆಯ ವಿಮರ್ಶೆಯು ಹೆಚ್ಚಾಗಿ ಹೊಸತಲೆಮಾರಿನಲ್ಲಿ ಮುಂದುವರೆಯುತ್ತಿದೆ. ಅದರಲ್ಲೂ ದಲಿತ ಮತ್ತು ಮಹಿಳೆಯರ ವಿಮರ್ಶೆಯಲ್ಲಿ ಇದು ಎದ್ದು ಕಾಣುವುದು. ಇದು ಬರೆಯುವ ಲೇಖಕರ, ಅವರು ಬರೆದ ಬರೆಹಕ್ಕೆ ಸಾಮಾಜಿಕವಾದ ರಿಯಾಯಿತಿಯನ್ನು ಕೇಳುವಂತೆ, ಸಾಂಸ್ಕೃತಿಕವಾಗಿ ಅದನ್ನು ಸಮರ್ಥಿಸುವ ಮಾದರಿಯಲ್ಲಿ ಹುಟ್ಟತೊಡಗಿದ್ದು, ಇದರಿಂದ ತಾವು ಮೆಚ್ಚಿರುವ ಲೇಖಕರ ಸಾಹಿತ್ಯದಲ್ಲಿರುವ ಸೂಕ್ಷ್ಮವಾದ ಸಾಧನೆಗಳನ್ನು ನೋಡುವ ಸಂದರ್ಭವನ್ನು ಇಲ್ಲವಾಗಿಸುತ್ತಿದೆ. ಉದಾಹರಣೆಗೆ "ಕಳೆದ ೨೦ ವರ್ಷಗಳಿಂದೀಚೆಗೆ ಕನ್ನಡ ಕಾವ್ಯ ಹೊಸ ರೂಪಕಗಳ ಶೋಧನೆಗೆ ಮತ್ತು ಆಶಯಗಳಿಗೆ ಮುಖಮಾಡಿದೆ. ಚಳುವಳಿಗಳ ಭಾರವಿಲ್ಲದೆ ಈ ಅನೇಕ ಕವಿಗಳು ಬರೆಯುತ್ತಿದ್ದಾರೆ. ಆದರೂ ದಲಿತ ಅನುಭವಗಳನ್ನು ಮೈಗೂಡಿಸಿಕೊಂಡ ಕನ್ನಡ ಕಾವ್ಯ ಜಗತ್ತಿಗೆ ಪ್ರವೇಶ ಮಾಡುತ್ತಿರುವ ಹಲವು ಯುವ ಕವಿಗಳಿಗೆ ಬೇರೆ ಬೇರೆ ಸವಾಲುಗಳನ್ನು ಎದುರಿಸಬೇಕಾಗಿದೆ. ಕಾವ್ಯದ ಲಯ ಮತ್ತು ಚೌಕಟ್ಟುಗಳ ವಿಚಾರಗಳಲ್ಲಿ ಹಾಗೂ ವರ್ತಮಾನದ ಸಂಗತಿಗಳನ್ನು ಪರಂಪರೆಯನ್ನು ಅರಗಿಸಿಕೊಳ್ಳುವ ತವಕಗಳಲ್ಲಿ ಇದ್ದಿರಬಹುದು."[೧೬] ಆದರೆ ವಿಮರ್ಶೆ ಕಾವ್ಯವನ್ನೂ ಈ ಮೇಲಿನಂತೆ ಗ್ರಹಿಸದೆ ಹೋದರೆ ಇವತ್ತಿನ ಕಾವ್ಯ, ಕತೆಗಳು ಸಕಾರಣವಾಗಿದ್ದೂ ಅದನ್ನು ಸರಿಯಾಗಿ ಗುರುತಿಸದಿರುವ ಸಾಧ್ಯತೆಯಿದೆ.

ಹೊಸತಲೆಮಾರಿನ ಕೆಲವರು ಪ್ರಕಾರ ಕೇಂದ್ರಿತವಾಗಿ ವಿಮರ್ಶೆ ಮಾಡುತ್ತಿದ್ದಾರೆ. ಅದರಲ್ಲೂ ಕಾವ್ಯಕೇಂದ್ರಿತ ವಿಮರ್ಶೆಯನ್ನೇ ಮಾಡುವ ಹಲವಾರು ವಿಮರ್ಶಕರಿದ್ದಾರೆ.

ಇದರಿಂದ ವಿಮರ್ಶೆಯಲ್ಲಿ ಒಂದು ಬಗೆಯ ಬಹುತ್ವದ ಆಯಾಮ ಇಲ್ಲವಾಗುತ್ತದೆಯಾದರೂ, ಇದರ ಅಗತ್ಯವಿದೆ. ಯಾಕೆಂದರೆ ಪ್ರಕಾರಕೇಂದ್ರಿತ ವಿಮರ್ಶೆಯಿಂದ ಒಂದು ಬಗೆಯ ಸೂಕ್ಷ್ಮ ಓದು ಸಾಧ್ಯವಾಗುತ್ತದೆ. ಮತ್ತು ಆಯಾ ಪ್ರಕಾರದ ಪರಂಪರೆಯ ಹಿನ್ನೆಲೆಯಲ್ಲಿ ಹೊಸ ಕವಿಗಳನ್ನಿಟ್ಟು ನೋಡುವ ಒಂದು ವಿಧಾನವು ಸಾಧ್ಯವಾಗುತ್ತದೆ. ಕಿ. ರಂ. ಮುಂತಾದವರು ಕಾವ್ಯದ ವಿಶ್ಲೇಷಣೆಗೆ ತಮ್ಮನ್ನು ತೆತ್ತುಕೊಂಡು ಹೇಗೆ ಒಳನೋಟಗಳನ್ನು ಕೊಡಬಲ್ಲವರಾಗಿದ್ದರು ಎಂಬುದನ್ನು ಇಲ್ಲಿ ನೆನೆಯಬಹುದು. ಈ ಹಿನ್ನೆಲೆಯಲ್ಲಿ ಸಿರಾಜ್ ಅಹಮದ್, ಸುರೇಶ ನಾಗಲಮಡಿಕೆ ಹಾಗೂ ಆರ್. ಸುಧೀಂದ್ರಕುಮಾರ್ ಅವರ ವಿಮರ್ಶೆಯನ್ನು ಗಮನಿಸಬಹುದು.

ಆದರೆ ಈ ಬಗೆಯ ಪ್ರಕಾರ ಕೇಂದ್ರಿತ ವಿಮರ್ಶೆಯನ್ನು ಇತರೆ ಪ್ರಕಾರಗಳಲ್ಲಿ ಕಾಣುವುದಿಲ್ಲ. ಆಮೂರರು ಕನ್ನಡದ ಕಥನಸಾಹಿತ್ಯದ ಬಗ್ಗೆ ಬರೆಯುತ್ತಿದ್ದರು. ಕುರ್ತಕೋಟಿಯವರು ಕವಿಕೇಂದ್ರಿತವಾದ ವಿಮರ್ಶೆಯನ್ನು ಮಾಡಬಲ್ಲವರಾಗಿದ್ದರು. ಕನ್ನಡದಲ್ಲಿ ಕೆಲವು ಹೊಸತಲೆಮಾರಿನ ವಿಮರ್ಶಕರು, ತಾವು ಹೀಗೆ ಒಬ್ಬೊಬ್ಬ ಕವಿನಿಷ್ಠ ವಿಮರ್ಶೆಯ ಬರಹ ಮಾಡುತ್ತಿದ್ದಾರೆ. ಸಿದ್ದಲಿಂಗಯ್ಯ, ಶಿವಪ್ರಕಾಶ್, ಭೈರಪ್ಪ, ದೇವನೂರ ಮಹಾದೇವ, ತೇಜಸ್ವಿ ಅವರಿಗೆ ಸಂಬಂಧಿಸಿದಂತೆ ಈ ಬಗೆಯ ಲೇಖಕ ಕೇಂದ್ರಿತ ವಿಮರ್ಶೆಯನ್ನು ಕಾಣಬಹುದು. ಲೇಖಕ ಕೇಂದ್ರಿತ ವಿಮರ್ಶೆಯ ಸಮಸ್ಯೆಯೆಂದರೆ, ವ್ಯಕ್ತಿನಿಷ್ಠರಾಗಿ ಪರಂಪರೆಯ ಅಥವಾ ಸಮಕಾಲೀನ ಸಾಹಿತ್ಯವನ್ನು ಸರಿಯಾಗಿ ಗುರುತಿಸಲಾಗದೆ ಹೋಗುವುದು, ಸಾಹಿತ್ಯ ಪರಂಪರೆಯ ಭಿತ್ತಿಯ ಬಲ ಕಳೆದುಹೋಗುವುದು. ಇದರಲ್ಲಿ ಒಂದು ಬಗೆಯ ಅಭಿಮಾನವೇ ಮುಖ್ಯವಾಗಿದ್ದು, ಅದು ಆಯಾ ಲೇಖಕರ ಬಗ್ಗೆ ಹೊಸ ನೋಟಗಳನ್ನು ಕೊಡಲು ಸಾಧ್ಯವಾಗಿಲ್ಲ. ಲೇಖಕ ಕೇಂದ್ರಿತ ವಿಮರ್ಶೆಯು ಇತರ ಲೇಖಕರನ್ನು ದ್ವೇಷಿಸುವ ಆಯಾಮವನ್ನೂ ಪಡೆದುಕೊಂಡಿರುವುದುಂಟು. ಈ ಪರಂಪರೆಯ ಭಿತ್ತಿ ಮೂರ್ತವಾಗಿ ದೃಢವಾಗಿ ಹಿನ್ನೆಲೆಯಲ್ಲಿ ಇರುವುದು.

ಕನ್ನಡ ಸಾಹಿತ್ಯ ವಿಮರ್ಶೆಯು ಕನ್ನಡ ಕೃತಿಗಳ ಚರ್ಚೆ ಮಾಡುವಾಗಲೂ ಅಂತರ್ ಪಠ್ಯೀಯತೆಯ ವಿಧಾನದಲ್ಲೋ ಸಾಹಿತ್ಯ ವಿಮರ್ಶೆಯ ತತ್ವಗಳ ನೆಲೆಯಲ್ಲೋ ಪಶ್ಚಿಮ ಸಾಹಿತ್ಯದ ಜತೆ (ಭಾರತೀಯ ಭಾಷೆಗಳ ಸಾಹಿತ್ಯಕ್ಕಿಂತ ಹೆಚ್ಚಾಗಿ) ನೆನಪುಗಳಿಂದ ರೂಪುಗೊಂಡಿದೆ. ಇದನ್ನು ಚನ್ನಯ್ಯ, ಎಂ. ಜಿ. ಕೆ., ಅನಂತಮೂರ್ತಿ, ರಾಜೇಂದ್ರ ಚೆನ್ನಿ, ಗಿರಡ್ಡಿ, ಪೋಲಂಕಿ, ಡಿ. ಆರ್. ನಾಗರಾಜ, ಪುಣೇಕರ, ಆಮೂರ, ನಟರಾಜ ಹುಳಿಯಾರ್, ವಿಜಯಶಂಕರ್, ರಾಘವೇಂದ್ರರಾವ್ ಮುಂತಾದವರ ವಿಮರ್ಶೆಗಳಲ್ಲಿ ಇದನ್ನು ಕಾಣಬಹುದು. ಕನ್ನಡ ಪಠ್ಯಗಳ ನೆನಪಿನಲ್ಲೇ ವಿಮರ್ಶೆ ರೂಪುಗೊಳ್ಳುವುದಕ್ಕೆ ಕೆ. ವಿ. ನಾರಾಯಣ, ಕಲ್ಗುಡಿ, ಎಚ್. ಎಸ್. ರಾಘವೇಂದ್ರರಾವ್ ಅವರ ಬರಹಗಳೇ ಉತ್ತಮ ನಿದರ್ಶನ. ಈ ಹಿನ್ನೆಲೆಯಲ್ಲಿ ಹೊಸತಲೆಮಾರಿನ ವಿಮರ್ಶಕರಲ್ಲಿ ಆಂಗ್ಲ ಸಾಹಿತ್ಯದಿಂದ ಬಂದವರ ಸಂಖ್ಯೆ ಬಹಳ ಕಡಿಮೆ ಕಾಣುವುದು. ಸಿರಾಜ್ ಅಹಮದ್, ತಾರಿಣಿ

ಶುಭದಾಯಿನಿ, ವಿಜಯಕುಮಾರ್ ಬೋರಟ್ಟಿ, ಬಿ. ವಿ. ತಾರಕೇಶ್ವರ ಮಾತ್ರ ಕಾಣುತ್ತಾರೆ. ಇವರಲ್ಲಿಯಾದರೂ ಪಶ್ಚಿಮದ ಸಾಹಿತ್ಯದ ತುಲನೆಯನ್ನಾಗಲಿ, ಪಶ್ಚಿಮದ ಸಾಹಿತ್ಯ ತತ್ವಗಳ ನೆರವಾಗಲಿ ಹೆಚ್ಚಾಗಿ ಕಾಣುವುದಿಲ್ಲ. ಕನ್ನಡ ಪಠ್ಯಗಳನ್ನು ಕರ್ನಾಟಕದ ಸನ್ನಿವೇಶಗಳನ್ನು ಮುಖ್ಯ ಭಿತ್ತಿಯಾಗಿಟ್ಟುಕೊಂಡು ವಿಮರ್ಶೆ ಬೆಳೆಯುತ್ತದೆ. ಇದರಿಂದ ಕನ್ನಡ ವಿಮರ್ಶೆಗೆ ಒಂದು ಬಗೆಯ ದೇಶೀಯತೆಯ ಆಯಾಮವು ಬಂದಿದ್ದರೂ, ಪಶ್ಚಿಮದ ಸಾಹಿತ್ಯ ತತ್ವಗಳ ಜತೆಗಿದ್ದ ಸಂಪರ್ಕವು ಗಮನಾರ್ಹವಾಗಿ ಕಡಿಮೆಯಾಗಿದೆ.

ಶತಮಾನದ ಸಾಹಿತ್ಯ ವಿಮರ್ಶೆ ಸಂಕಲನದಲ್ಲಿ, ಕನ್ನಡದಲ್ಲಿ ಹೊಸ ತಲೆಮಾರಿನಲ್ಲಿ ವಿಮರ್ಶಕರೇ ಕಾಣುತ್ತಿಲ್ಲವೆಂದು, ಸಂಪಾದಕರಾದ ಎಚ್. ಎಸ್. ರಾಘವೇಂದ್ರರಾವ್ ಆತಂಕ ವ್ಯಕ್ತಪಡಿಸಿದ್ದರು. ಆದರೆ ಸಿರಾಜ್ ಅಹಮದ್, ವಿನಯಾ, ತಾರಿಣಿ ಶುಭದಾಯಿನಿ, ಸುರೇಶ ನಾಗಲಮಡಿಕೆ, ರಂಗನಾಥ ಕಂಟನಕುಂಟೆ, ಅರುಣ ಜೋಳದ ಕೂಡ್ಲಿಗಿ– ಮುಂತಾದವರು ಹೊಸ ತಲೆಮಾರಿನ ಮುಖ್ಯ ವಿಮರ್ಶಕರು ಎಂದು ಗುರುತಿಸಬಹುದು. ಆದರೂ ಕನ್ನಡ ವಿಮರ್ಶೆ ಬಿಕ್ಕಟ್ಟಿನಲ್ಲಿರುವ ಪ್ರಕಾರದಂತೆಯೇ ಕಾಣುತ್ತಿದೆ. ಕನ್ನಡದ ಕಾವ್ಯ ಮತ್ತು ಕಾದಂಬರಿ ಪ್ರಕಾರದಲ್ಲಿ ಮಹಿಳೆಯರು ಹೆಚ್ಚು ತೊಡಗಿಕೊಂಡಿದ್ದಾರೆ. ಸಣ್ಣಕತೆ ಹಾಗೂ ವಿಮರ್ಶೆಯಲ್ಲಿ ಅವರ ಸಂಖ್ಯೆ ಕಡಿಮೆ. ಈ ಹಿನ್ನೆಲೆಯಲ್ಲಿ ಲೇಖಕಿಯರು ಸಾಹಿತ್ಯದ ಮೌಲ್ಯಮಾಪನ ಮಾಡುವ ಕೆಲಸಕ್ಕೆ ಒಂದು ಸಾಂಸ್ಕೃತಿಕ ಮಹತ್ವವಿದೆ. ಒಬ್ಬ ಸಂವೇದನಶೀಲ ಮಹಿಳೆ, ನಮ್ಮ ಮಹತ್ವದ ಲೇಖಕರ ಬಗ್ಗೆ ಕಲಾಶಕ್ತಿಗಿಂತ, ಹೆಣ್ಣಿನ ಬಗ್ಗೆ ಅವರು ತಾಳಿರುವ ಧೋರಣೆಯ ಬಗ್ಗೆ ಯಾಕೆ ಸೆನ್ಸಿಟಿವ್ ಆಗುತ್ತಾರೆ? ಒಬ್ಬ ದೊಡ್ಡ ಲೇಖಕ ಬರೆದ ಆತ್ಮಕತೆಯ ಚಾರಿತ್ರಿಕ ಮಹತ್ವಕ್ಕಿಂತ, ಆತ ನಿಡುಗಾಲ ತನ್ನ ಜೀವನ ಸಂಗಾತಿಯಾಗಿದ್ದ ಮಡದಿಯ ಬಗ್ಗೆ ಮೌನವಹಿಸುವುದು ಆಕೆಗೆ ಯಾಕೆ ಕಾಡುತ್ತದೆ? ಈ ಪ್ರಶ್ನೆಗಳನ್ನು ನಾವು ಗಂಭೀರವಾಗಿ ಪರಿಶೀಲಿಸಬೇಕು. ಇಲ್ಲದಿದ್ದರೆ ದಲಿತವನ್ನು ಒಳಗೊಂಡಂತೆ ಎಲ್ಲ ಬಗೆಯ ಸಂವೇದನ ಪ್ರಧಾನ ಓದನ್ನು ನಿರಾಕರಿಸುವ ಅಸೂಕ್ಷ್ಮತೆ ಉಂಟಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗುತ್ತಿರುವ ಭಾಷೆಯೇ ಪ್ರಧಾನವಾಗಿ ಪುರುಷವಾಚಿ. ಹೀಗಾಗಿಯೇ ಆಶಾದೇವಿ, ವಿನಯಾ ಒಕ್ಕುಂದ ಬರೆಯುವಾಗ, ಕನ್ನಡದ ಮುಖ್ಯಧಾರೆಯ ವಿಮರ್ಶೆ ಕಾಣಿಸದ ಕೆಲವು ನೋಟಗಳನ್ನು ಅವರು ಕಾಣಿಸುವ ಸಾಧ್ಯತೆಗಳಿವೆ.

ಕನ್ನಡದಲ್ಲಿ ಕೇವಲ ವಿಮರ್ಶೆಯನ್ನು ಬರೆಯುವ ಜಿ. ಎಚ್. ನಾಯಕ, ಜಿ. ಎಸ್. ಆಮೂರ, ಡಿ. ಆರ್. ನಾಗರಾಜ, ಟಿ. ಪಿ. ಅಶೋಕ ಮೊದಲಾದವರಂತೆ ವೃತ್ತಿಪರ ವಿಮರ್ಶಕರು ಯಾವಾಗಲೂ ಕಡಿಮೆ. ವಿಮರ್ಶೆಯ ಜತೆ ಇತರೆ ಪ್ರಕಾರಗಳಲ್ಲಿಯೂ ಕೆಲಸ ಮಾಡುವವರೇ ಹೆಚ್ಚು. ಕುವೆಂಪು, ಬೇಂದ್ರೆ, ಜಿ. ಎಸ್. ಎಸ್., ಅನಂತಮೂರ್ತಿ, ಲಂಕೇಶ್, ಚನ್ನಯ್ಯ, ಆಮೂರ ಮುಂತಾದವರು ಇದಕ್ಕೆ ಸಾಕ್ಷಿ. ವೃತ್ತಿಪರ ವಿಮರ್ಶಕರಂತೆ ಕಾಣುವ ಕೀರ್ತಿನಾಥ ಕುರ್ತಕೋಟಿಯವರು ನಾಟಕವನ್ನು, ಗಿರಡ್ಡಿಯವರು ಕತೆ ಮತ್ತು ಹಾಸ್ಯಪ್ರಬಂಧಗಳನ್ನು ರಚಿಸಿರುವರು. ಈ ಪ್ರವೃತ್ತಿ ನಂತರ ಬಂದ ಗಣೇಶ್ ಮೊಗಳ್ಳಿ,

ನಟರಾಜ್ ಹುಳಿಯಾರ್, ಜೋಗಿ ಮುಂತಾದವರಲ್ಲಿಯೂ ಕಾಣುತ್ತೇವೆ. ಇವರ ವಿಮರ್ಶೆಯನ್ನು ಕತೆಯಂತೆ ಓದಬಹುದು. ಇವರು ಕವಿತೆ ಕತೆ ಕಾದಂಬರಿಗಳ ಜತೆ ವಿಮರ್ಶೆ ಬರೆದವರು. ಈ ಪರಂಪರೆಯು ಹೊಸತಲೆಮಾರಿನಲ್ಲಿಯೂ ಮುಂದುವರೆದಂತೆ ಕಾಣುವುದು. ಕತೆ ಮತ್ತು ಕಾವ್ಯರಚನೆಯ ಜತೆಗೆ ವಿಮರ್ಶೆ ಬರೆಯುತ್ತಿರುವ ವಿಕ್ರಮ ವಿಸಾಜಿ, ರಂಗನಾಥ ಕಂಟನಕುಂಟೆ, ವಿನಯಾ, ಸಿರಾಜ್ ಅಹಮದ್, ವಕ್ಕುಂದ, ತಾರಿಣಿ ಶುಭದಾಯಿನಿ, ಅರುಣ್ ಜೋಳದಕೂಡ್ಲಿಗಿ, ಅನುಪಮಾ ಸಂದೀಪ ಪಾಟೀಲ; ಸಂಶೋಧಕರಾಗಿದ್ದು ವಿಮರ್ಶೆ ಬರೆಯುವ ಹರೀಶ ಜಿ. ಬಿ., ಪ್ರಭಾಕರ ಎ. ಎಸ್. ಮೊದಲಾದವರನ್ನು ಕಾಣುತ್ತೇವೆ. ಆದರೆ, ಕೇವಲ ವಿಮರ್ಶೆಯನ್ನು ಬರೆಯುವವರಿಗೂ ಇತರೆ ಪ್ರಕಾರಗಳಲ್ಲಿ ಕೆಲಸ ಮಾಡುತ್ತ ವಿಮರ್ಶೆ ಬರೆಯುವವರಿಗೂ ಅಭಿವ್ಯಕ್ತಿ ವಿನ್ಯಾಸದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸಗಳಿರುತ್ತವೆ.

ಇಡೀ ಹೊಸತಲೆಮಾರಿನ ವಿಮರ್ಶೆಯು ಒಂದು ಬಗೆಯ ದಲಿತ ಬಂಡಾಯ ಪ್ರಗತಿಪರ ನಿಲುವಿನಿಂದ ಸಾಂಸ್ಕೃತಿಕ ಅಧ್ಯಯನಗಳ ಮಾದರಿಯಿಂದ ಕೂಡಿರುವಾಗ, ಇದಕ್ಕೆ ಏಕೈಕ ಅಪವಾದವೆಂಬಂತೆ ತೋರುವುದು ಸುಧೀಂದ್ರ ಕುಮಾರ್ ಅವರ ವಿಮರ್ಶೆ. ಸುಧೀಂದ್ರ ಕುಮಾರ್ ಅವರ ಬಹುತೇಕ ವಿಮರ್ಶೆಯು ಕಾವ್ಯಕೇಂದ್ರಿತವಾಗಿದ್ದು, ಅವರ ಮಾದರಿಯ ಕಾವ್ಯ ಎಸ್. ಮಂಜುನಾಥ್ ಅಥವಾ ಅಡಿಗರ ಮಾದರಿಯದಾಗಿದೆ. ಅಂದರೆ ಭಾಷೆಯನ್ನು ಬಳಸಿ ಕವಿ ಮಾಡುವ ಸೂಕ್ಷ್ಮ ಆಟಗಳನ್ನು ಕಲಾತ್ಮಕತೆಯನ್ನು ಅವರ ವಿಮರ್ಶೆ ದೊಡ್ಡ ಮೌಲ್ಯವಾಗಿ ಪರಿಭಾವಿಸಿದೆ. ಇದರ ಸಮಸ್ಯೆಯೆಂದರೆ, ಈ ಅಪೇಕ್ಷೆಯಲ್ಲಿ ಹೊಸತಲೆಮಾರಿನ ಕಾವ್ಯವನ್ನು ಅದು ನೋಡುತ್ತಿರುವುದು. ಹೀಗಾಗಿ ಅವರು ಹೊಸತಲೆಮಾರಿನ ಕವಿಗಳ ಮೇಲೆ ಬರೆದ ಪುಸ್ತಕ ವಿಮರ್ಶೆ ಮತ್ತು ವಿಮರ್ಶೆಗಳು, ಬಹುತೇಕ ನಿರಾಕರಣೆಯ ಧಾಟಿಯಲ್ಲಿವೆ. ಹೀಗಾಗಲು ಕಾರಣ, ನಿರ್ದಿಷ್ಟ ಕಾವ್ಯದ ಮಾದರಿಯನ್ನು ಎಲ್ಲ ಕಡೆ ಅಪೇಕ್ಷಿಸುವುದೊ, ಹೊಸತಲೆಮಾರಿನ ಕಾವ್ಯವೇ ಹೊಸದನ್ನು ಸಾಧಿಸುತ್ತಿಲ್ಲ ಅದರಲ್ಲಿ ವ್ಯಕ್ತಿವಿಶಿಷ್ಟವಾದ ಸಾಧನೆಯಿಲ್ಲ ಎಂಬ ತೀವ್ರ ಅಸಹನೆಯೊ, ಪ್ರತಿತಲೆಮಾರಿನ ಅಥವಾ ಪ್ರತಿಕವಿಯ ಕಾವ್ಯವನ್ನು ಅವರವರ ಹಿನ್ನೆಲೆಯಿಂದ ಗಮನಿಸುವ ಅಗತ್ಯವಿದೆ ಎಂದು ಭಾವಿಸದೆ ಇರುವುದರಿಂದ ಹೀಗಾಗಿದೆ ಎನಿಸುತ್ತದೆ.

ಪ್ರತಿ ವಿಮರ್ಶಕರೂ ನಿರ್ದಿಷ್ಟ ಕೃತಿಯನ್ನೊ ಲೇಖಕರನ್ನೊ ವಿಮರ್ಶಿಸುವಾಗ, ಅವರ ಹಿಂದೆ ಒಂದು ಸಾಹಿತ್ಯಕ ಪರಂಪರೆಯ ಪರಿಕಲ್ಪನೆಯು ಕೆಲಸ ಮಾಡುತ್ತಿರುತ್ತದೆ. ಇದು ಒಬ್ಬರಿಗಿಂತ ಒಬ್ಬರದು ಭಿನ್ನವಾಗಿರುತ್ತದೆ. ಈ ಪರಿಕಲ್ಪನೆಯು ಅವರೇ ತಮ್ಮ ಓದು ಅಭಿರುಚಿ ಸಿದ್ಧಾಂತ ಲೋಕದೃಷ್ಟಿಯ ಹಿನ್ನೆಲೆಯಲ್ಲಿ ಕಟ್ಟಿಕೊಂಡಿದ್ದಾಗಿರುತ್ತದೆ. ಕೆಲವರ ಪರಂಪರೆಯಲ್ಲಿ ಕುವೆಂಪು ಇರುವುದಿಲ್ಲ. ಕೆಲವರಲ್ಲಿ ಅಡಿಗರು ಗೈರುಹಾಜರಾಗಿರುತ್ತಾರೆ. ಕೆಲವರ ಪರಂಪರೆಯ ಪರಿಕಲ್ಪನೆಯಲ್ಲಿ ಶರಣರು ಇಲ್ಲ. ಕೆಲವರಲ್ಲಿ ದಾಸಸಾಹಿತ್ಯವಿಲ್ಲ. ಇದು ವಿಮರ್ಶಕರು ಮಾತ್ರವಲ್ಲದೆ ಸೃಜನಶೀಲ ಲೇಖಕರಲ್ಲಿಯೂ ಅವರದ್ದೇ ಆದ

ಪರಂಪರೆಯ ಪರಿಕಲ್ಪನೆಯೊಂದು ಇರುತ್ತದೆ. ಕುವೆಂಪು, ತೇಜಸ್ವಿ ಅವರಲ್ಲಿ ವಚನಕಾರರು ಇಲ್ಲದಿರುವುದನ್ನು ಈ ಹಿನ್ನೆಲೆಯಲ್ಲಿ ನೆನೆಪಿಸಿಕೊಳ್ಳಬಹುದು.

ಕನ್ನಡದಲ್ಲಿ ಆಧುನಿಕ ಪೂರ್ವ ಸಾಹಿತ್ಯವನ್ನು ಕುರಿತು ಓದುವವರೂ ಬರೆಯುವವರೂ ಹೊಸ ತಲೆಮಾರಿನಲ್ಲಿ ಕಡಿಮೆಯಾಗುತ್ತಿದ್ದಾರೆ ಎಂಬ ಆರೋಪವಿದೆ. ಆಪಾದನೆಯ ದನಿಯಲ್ಲಿರುವ ಈ ಮಾತಿಗೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಬಂದ ಬಳಿಕ ಒಂದು ಬಲವೂ ಬಂದಂತಿದೆ. ಈ ಆಪಾದನೆಯಲ್ಲಿ ನಿಜವಿರಬಹುದು. ಸಮಸ್ಯೆಯೆಂದರೆ, ಈ ಆಪಾದನೆಯಲ್ಲಿ ಹಳಗನ್ನಡವನ್ನು ಸರಾಗವಾಗಿ ಓದುವ ಮತ್ತು ಅರ್ಥೈಸುವ ಕುಶಲತೆಯನ್ನು ಮಾತ್ರ ಅಪೇಕ್ಷಿಸುತ್ತಿರುವುದು; ಹಳಗನ್ನಡ ಸಾಹಿತ್ಯವನ್ನು ಅನುಸಂಧಾನ ಮಾಡುವ ದೃಷ್ಟಿಕೋನ ಮತ್ತು ವಿಧಾನ ಯಾವುದು, ಓದುವ ಮತ್ತು ಅರ್ಥೈಸುವ ಕುಶಲತೆಗಳು ಯಾವ ಉದ್ದೇಶಕ್ಕಾಗಿ ಎಂಬ ಪ್ರಶ್ನೆಗಳು ಅಮುಖ್ಯವಾಗಿರುವುದು. ಈಗಲೂ ಕಾಲೇಜುಗಳಲ್ಲಿ 'ಶಬ್ದಮಣಿ ದರ್ಪಣ'ವನ್ನೊ 'ಪಂಪಭಾರತ'ವನ್ನೊ ರನ್ನನ 'ಗದಾಯುದ್ಧ'ವನ್ನೊ ನಿರರ್ಗಳವಾಗಿ ಓದುವ ಮತ್ತು ಅದನ್ನು ವಿವರಿಸುವ ಕುಶಲತೆಯನ್ನೇ ಪಾಂಡಿತ್ಯವೆನ್ನುವ ಗ್ರಹಿಕೆ ದಟ್ಟವಾಗಿದೆ. ಶಾಸನಗಳನ್ನು ನಿರಾಳವಾಗಿ ಓದುವ ಕುಶಲತೆಯುಳ್ಳವರು, ಫಾರಸಿ ಇಲ್ಲವೇ ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದವರೂ ನಮ್ಮಲ್ಲಿದ್ದು ಅವರಿಗೆ ಸಿಕ್ಕಿರುವ ಮಾನ್ಯತೆಯು ಭಾಷಿಕ ಕುಶಲತೆಗೊ ಅರ್ಥೈಸುವ ದೃಷ್ಟಿಕೋನಕ್ಕೊ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬಹುದು. ಪಾಂಡಿತ್ಯದಲ್ಲಿ ಇರಬೇಕಾದ ಈ ಭಾಷಿಕ ಕುಶಲತೆಯ ಮಹತ್ವವನ್ನು ಅಲ್ಲಗಳೆಯದೆ, ಅದು ಯಾವ ಕಾರಣಕ್ಕಾಗಿ ಬಳಕೆಗೊಳ್ಳುತ್ತಿದೆ ಅಥವಾ ಬಳಕೆಗೊಳ್ಳಬೇಕಾಗಿದೆ ಎಂಬ ಪ್ರಶ್ನೆಯನ್ನು ಎತ್ತಬೇಕಿದೆ.

ಕನ್ನಡ ವಿಮರ್ಶೆಯ ಬಹುಪಾಲು ಭಾಗವು ಅಧ್ಯಾಪನ ವೃತ್ತಿಯ ಉಪಉತ್ಪನ್ನವಾಗಿದೆ. ತರಗತಿಯ ವಿಸ್ತರಣೆಯಾಗಿ ಹುಟ್ಟುವ ವಿಮರ್ಶೆಯಲ್ಲಿ ಕಾಣಬರುವ ಮಿತಿಗಳು ಎಂದರೆ, ಸಾರಾಂಶೀಕರಣ. ಅದರಲ್ಲೂ ವಚನ ಸಾಹಿತ್ಯವನ್ನು ಕುರಿತ ಬರೆಹಗಳಲ್ಲಿ ಇಂತಹ ವಿಮರ್ಶೆ ಪ್ರಕಟಗೊಳ್ಳುತ್ತದೆ. ಸುಂದರವಾಗಿ ಧ್ವನಿಪೂರ್ಣವಾಗಿರುವ ವಚನಗಳನ್ನು ಜನಪದ ತ್ರಿಪದಿಗಳನ್ನೊ ಹಿಂಡಿ ನೀರಸವಾಗಿ ಸಾರಾಂಶ ಹೇಳುವುದನ್ನೇ ವಿಮರ್ಶೆ ವಿಶ್ಲೇಷಣೆ ಎಂಬ ಮಾದರಿಯು ಬಹಳ ಜನಪ್ರಿಯವಾಗಿದೆ. ಅದು ಉತ್ತರ ಕರ್ನಾಟಕ ಭಾಗದಲ್ಲಿ ತುಂಬ ಕಾಣುತ್ತದೆ. ಈ ಮಾದರಿಯಲ್ಲಿ ಹುಟ್ಟುವ ಮೌಲ್ಯಮಾಪನದ ಹಂಗನ್ನು ಕಡಿಮೆಮಾಡಿಕೊಂಡು, ಆಯ್ದ ಪದ್ಯಗಳನ್ನು ಇಟ್ಟುಕೊಂಡು ಹುಟ್ಟುವ ರಸವಿಮರ್ಶೆಯಲ್ಲಿ ಕಾಣುವ ರಮ್ಯೋತ್ಸಾಹದ ಒಳನೋಟಗಳು ಕೂಡ ಇಲ್ಲಿ ಕಾಣುವುದಿಲ್ಲ. ತಾತ್ವೀಕರಣದ ಕೊರತೆ ಇದರ ಇನ್ನೊಂದು ಮಗ್ಗುಲಾಗಿದೆ. ಇದನ್ನು ಸೈದ್ಧಾಂತೀಕರಣದ ಬಡತನ ಎಂದು ರಾಜೇಂದ್ರ ಚೆನ್ನಿಯವರು ಕರೆಯುತ್ತಾರೆ. ಕೃತಿಪರಿಚಯದ ಆಚೆ, ಸಾರಾಂಶೀಕರಣದ ಆಚೆ ಕೃತಿಯ ಬಗ್ಗೆ ತಾತ್ವಿಕ ಹೇಳಿಕೆ ಮಾಡಬೇಕಿದೆ ಎಂಬುದರ ಎಚ್ಚರ ಇರದಿರುವುದರ ಸಮಸ್ಯೆಯಾಗಿದೆ. ಇದಕ್ಕೆ ಹೋಲಿಸಿದರೆ, ಶಿವಸುಂದರ್, ಶ್ರೀಪಾದಭಟ್,

ಸಂದೀಪನಾಯಕ, ಸುಧೀಂದ್ರಕುಮಾರ್, ಮಂಜುನಾಥ ಲತಾ, ವಸ್ತಾರೆ, ವಸುಧೇಂದ್ರ ಮುಂತಾದವರು ಬರೆದಿರುವ ವಿಮರ್ಶೆಯಲ್ಲಿ ಹೊಸ ಲವಲವಿಕೆಯ ದಣಿವಿರದ ಭಾಷೆಯನ್ನು ಕಾಣಬಹುದು.

ವಿಮರ್ಶೆಯು ಆರಂಭದಲ್ಲಿ ಮೇಲ್ವರ್ಗದವರೇ ಹೆಚ್ಚಿದ್ದ ಕ್ಷೇತ್ರವಾಗಿತ್ತು. ಅದಕ್ಕೆ ಕೆಳಜಾತಿ, ದಲಿತ, ಮುಸ್ಲಿಂ ಮಹಿಳೆಯರು ಬಂದಿರುವುದರಿಂದ, ಹೊಸ ದೃಷ್ಟಿಕೋನಗಳ ಮತ್ತು ಅನುಭವಗಳ ಪ್ರವೇಶವಾಗಿದೆ. ಕತೆ, ಕಾದಂಬರಿ, ಕಾವ್ಯಗಳಂತಹ ಪ್ರಕಾರಗಳಲ್ಲಿ ಬರೆಯುವಾಗ ಅನುಭವದ ಆವಿಷ್ಕಾರವು ಮುಖ್ಯವಾಗಿರುತ್ತದೆ. ವಿಮರ್ಶೆ ಚಿಂತನೆಗಳಲ್ಲಿ ಸಿದ್ಧಾಂತ ತತ್ವ ಮೌಲ್ಯಮಾಪನ ತರ್ಕಬದ್ಧತೆ ಮುಂತಾದ ಬುದ್ಧಿಗೆ ಸಂಬಂಧಿಸಿದ ಕೆಲಸಗಳು ಮುಖ್ಯವಾಗಿರುತ್ತವೆ. ಆದರೆ ದಲಿತ ಕೆಳಜಾತಿಯ ವಿಮರ್ಶಕರು ಇನ್ನೂ ವಿಮರ್ಶೆಯನ್ನು ಅನುಭವವನ್ನು ಆವಿಷ್ಕರಿಸುವ ಪ್ರಕಾರವನ್ನಾಗಿಯೇ ನೋಡುತ್ತಿರುವಂತೆ ಕಾಣುತ್ತದೆ. ಆದ್ದರಿಂದಲೇ ಅವರು ಕೃತಿ ವಿಮರ್ಶೆಯಲ್ಲಿ ಸಮುದಾಯದ ಅನುಭವಗಳನ್ನು ಬೆರೆಸುತ್ತಿದ್ದರೆ. ಸಾಹಿತ್ಯ ವಿಮರ್ಶೆಯನ್ನು ಚಿಂತನೆಯನ್ನಾಗಿ ಮಾಡಿದ್ದಾರೆ. ಬೌದ್ಧಿಕತೆಗಿಂತ ಭಾವನಾತ್ಮಕತೆಯನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಇದು ವಿಮರ್ಶೆಯನ್ನು ಯಾವುದೊ ಮಾದರಿಯಲ್ಲಿ ಮಾತ್ರ ಅಪೇಕ್ಷಿಸಬೇಕು ಎಂದು ಅರ್ಥವಲ್ಲ. ಹೊಸ ಅನುಭವಲೋಕಗಳು ಹೊಸ ಕಥನಕ್ರಮಗಳು ಕೂಡ ಸೃಜನಶೀಲ ಸಾಹಿತ್ಯದಂತೆ ವಿಮರ್ಶೆಗೂ ಅಗತ್ಯವಾಗಿವೆ. ನಟರಾಜ್ ಹುಳಿಯಾರ್ ಅವರ ಇಂತೀ ನಮಸ್ಕಾರಗಳು ಕೃತಿಯಲ್ಲಿ ಇಂತಹ ಕಥನಕ್ರಮವು ಬಂದಿದೆ. ಆದರೆ ವಿಮರ್ಶೆಯು ಬುದ್ಧಿಪ್ರಧಾನವಾದ ಒಂದು ಶಿಸ್ತು ಮತ್ತು ತಾತ್ವಿಕತೆಯು ಇಲ್ಲಿ ಮುಖ್ಯವಾಗಿದೆ ಎಂಬುದು ಮನಗಾಣದಿದ್ದರೆ ವಿಮರ್ಶೆಯಲ್ಲಿ ದೊಡ್ಡದನ್ನು ಸಾಧಿಸುವುದು ಕಷ್ಟವಾಗುವುದು.

ಕನ್ನಡದ ವಿಮರ್ಶೆಯ ಮತ್ತೊಂದು ಮುಖ್ಯ ಲಕ್ಷಣವೆಂದರೆ, ಅದು ಕೇವಲ ಸಾಹಿತ್ಯಕವಾಗದೆ ಇರುವುದು, ಅದು ಲೋಕಚಿಂತನೆಯೂ ಆಗಿ ರೂಪಾಂತರಗೊಂಡಿರುವುದು. ಹಾಗೆ ವಿಮರ್ಶೆಯನ್ನು ಕೇವಲ ಸಾಹಿತ್ಯಕವಾಗಿರುವಂತೆ ಯತ್ನಿಸಿದರು ನವ್ಯರು. ಆದರೂ ಈ ಮಾತನ್ನು ಜಿ. ಎಚ್. ನಾಯಕ, ಎಂ. ಜಿ. ಕೆ. ಗಿರಡ್ಡಿ ಗೋವಿಂದರಾಜ ಮೊದಲಾದವರ ವಿಷಯದಲ್ಲಿ ಈ ಮಾತು ಹೇಳಬಹುದಾದಂತೆ ಅನಂತಮೂರ್ತಿ ಅವರ ವಿಮರ್ಶೆಯ ವಿಷಯದಲ್ಲಿ ಹೇಳಲಾಗದು. 'ಭಾರತೀಯ ಸಂಸ್ಕೃತಿ ಕನ್ನಡ ಲೇಖಕ' ಲೇಖನದಲ್ಲಿ ಸಾಹಿತ್ಯ ಕೃತಿಗಳ ಮೂಲಕ ತಾತ್ವಿಕ ಚರ್ಚೆಯನ್ನು ಅನಂತಮೂರ್ತಿ ಮಾಡುತ್ತಾರೆ. ಸಾಹಿತ್ಯ ವಿಮರ್ಶೆಯು ತಾತ್ವಿಕ ಚರ್ಚೆಯಾಗಿ ಅಂದರೆ ಸಾಮಾಜಿಕ ರಾಜಕೀಯ ಚರ್ಚೆಯಾಗಿ ರೂಪಾಂತರಗೊಳ್ಳುವ ಕ್ರಿಯೆ ಎಪ್ಪತ್ತರ ದಶಕದಲ್ಲಿ ದೊಡ್ಡ ಮಟ್ಟದಲ್ಲಿ ಆಯಿತು. ಶಿವಾನಂದ ಎಸ್. ಆರ್ಕೆ ಮಣಿಪಾಲ, ಬರಗೂರು ರಾಮಚಂದ್ರಪ್ಪ ಮುಂತಾದವರ ಬರೆಹದಲ್ಲಿ ಇದನ್ನು ಕಾಣಬಹುದು. ಅದರಲ್ಲೂ ದಲಿತ ಚಿಂತನೆ, ಮಹಿಳಾವಾದಿ ವಿಮರ್ಶೆಗಳಲ್ಲಿ ಈ ರೂಪಾಂತರವು ತಪ್ಪದೇ ಸಂಭವಿಸಿದೆ. ಸುಮಿತ್ರಾಬಾಯಿ, ವಿಜಯಾ ದಬ್ಬೆಯಿಂದ ಹಿಡಿದು ಆಶಾದೇವಿಯವರ ತನಕ ಇದನ್ನು

ನೋಡಬಹುದು. ಇದನ್ನು ರೂಪಾಂತರ ಪ್ರಕ್ರಿಯೆಯು ಸುಧೀಂದ್ರ ಕುಮಾರ್ ಮುಂತಾದವರನ್ನು ಹೊರತು ಪಡಿಸಿದರೆ, ಬಹುತೇಕ ಹೊಸ ತಲೆಮಾರಿನ ವಿಮರ್ಶೆಯಲ್ಲಿ ಮುಂದುವರೆದಿದೆ. ಇದರಿಂದ ಸಾಹಿತ್ಯ ವಿಮರ್ಶೆಯಲ್ಲಿ ಕೇವಲ ಸಾಹಿತ್ಯಿಕ ಎನ್ನಬಹುದಾದ ನೆಲೆಯಿಂದ ತಪ್ಪಿಸಿಕೊಂಡಿದ್ದು. ಇದರಿಂದ ಉಂಟಾದ ಕಷ್ಟವೆಂದರೆ, ಸಾಹಿತ್ಯದ ಅಭಿವ್ಯಕ್ತಿಕ್ರಮ ಅದರಿಂದ ಉಂಟಾಗಿರುವ ಕಲಾತ್ಮಕ ಸೋಲುಗೆಲುವುಗಳನ್ನು ನೋಡುವ ದೃಷ್ಟಿಯು ಮಂಕಾಗಿ ಹೋಯಿತು. ಬಹುಶ: ಇದು ಎಲ್ಲ ದಮನಿತ ಸಮಾಜಗಳಲ್ಲಿ ಸಾಹಿತ್ಯ ವಿಮರ್ಶೆಯು ಹೀಗೆಯೇ ಕಾರ್ಯನಿರ್ವಹಿಸಬೇಕಾದ ಅಗತ್ಯವಿದೆ.

೫.೫ ಅಂತರ್ಜಾಲದಲ್ಲಿ ವಿಮರ್ಶೆ

ಕನ್ನಡದಲ್ಲಿ ಈಗ ಹೊಸತಲೆಮಾರಿನವರು ಪತ್ರಿಕೆ ಅಭಿನಂದನ ಗ್ರಂಥಗಳಲ್ಲಿ ಬರೆಯುವುದು ಸಾಕಷ್ಟು ಹಳೆಯ ಪದ್ಧತಿಯಾಗಿದೆ. ಈಗ ಅಂತರ್ಜಾಲದ ಪತ್ರಿಕೆಗಳಲ್ಲಿ ಮತ್ತು ಬ್ಲಾಗುಗಳಲ್ಲಿ ಕೂಡ ಸಾಹಿತ್ಯ ವಿಮರ್ಶೆ ಪ್ರಕಟವಾಗುತ್ತಿದೆ. ಇದು ಮಾಧ್ಯಮದ ಹೊಸತನದ ಪ್ರಶ್ನೆ ಮಾತ್ರವಾಗಿಲ್ಲ. ಮುದ್ರಿತ ಸಾಹಿತ್ಯ ಓದುವ ವರ್ಗಕ್ಕಿಂತ ಭಿನ್ನವಾದ ತಂತ್ರಜ್ಞಾನದ ಮೇಲೆ ಹಿಡಿತ ಸೌಲಭ್ಯ ಇರುವ ಹೊಸ ವರ್ಗಕ್ಕಾಗಿ ಬರೆಯುವಾಗ, ಬರವಣಿಗೆಯ ಸ್ವರೂಪವೂ ಬದಲಾಗುತ್ತದೆ. ವಿಮರ್ಶೆಯು ಬರೆಯುವವರ ಮೇಲೆ ಬರೆಹಕ್ಕೆ ಕಾರಣವಾಗಿರುವ ಸಾಹಿತ್ಯ ಕೃತಿಯ ಮೇಲೆ ಮಾತ್ರವಲ್ಲ, ಓದುವವರು ಯಾರು ಎಂಬುದರ ಮೇಲೂ ತನ್ನ ಚಹರೆ ಬದಲಿಕೊಳ್ಳಬಲ್ಲದು. ಈ-ವಿಮರ್ಶೆಯು ಎರಡನೆಯ ಹಂತದಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗುವುದುಂಟು. ಸಮಸ್ಯೆಯೆಂದರೆ, ತಂತ್ರಜ್ಞಾನದ ನೆರವಿಲ್ಲದವರಿಗೆ ಇದು ತಲುಪುವುದಿಲ್ಲ. ವಿದೇಶಗಳಲ್ಲಿ ಎಲ್ಲೊ ಇರುವ ಸಾಹಿತ್ಯಾಸಕ್ತರಲ್ಲಿ ಇದು ಲೇಖಕರ ಬಗ್ಗೆ ಕೃತಿಯ ಬಗ್ಗೆ ಆಸಕ್ತಿ ಕೆರಳಿಸುವ ಕೆಲಸ ಮಾಡಬಲ್ಲದು. ಇದು ಮೂಲ ಸಾಹಿತ್ಯ ಕೃತಿಗಳು – ಪಠ್ಯಗಳಾಗಿ ಸಿಗುವ ವ್ಯವಸ್ಥೆಗೂ ಕಾರಣವಾಗಬಹುದು. ಆದರೂ ಇದರ ಪ್ರಮಾಣ ಕಡಿಮೆಯಿದೆ.

ಕನ್ನಡದಲ್ಲಿ ಪ್ರಕಟವಾಗುತ್ತಿರುವ ಅಂತರ್ಜಾಲ ವಿಮರ್ಶೆಯನ್ನು ಕುರಿತು ಜಿ. ಬಿ. ಹರೀಶ ಅವರ ಹೇಳಿಕೆಯನ್ನು ವಿವರವಾಗಿ ಗಮನಿಸಬಹುದು. "ಪಂಥಾತೀತ ಇಂಟರ್‌ನೆಟ್ ವಿಮರ್ಶೆ ಈಗ (ಯಾವ ಪಂಥಕ್ಕೂ ಸೇರದ) ವಿಮರ್ಶೆ ಕನ್ನಡದಲ್ಲಿ ಹೊಸ ರೂಪ ತಳೆದಿದೆ. ಹಿಂದೆ ಸಾಹಿತ್ಯ ಜನಮುಖಿಯಾಗಬೇಕು ಎಂಬ ಕೂಗಿತ್ತು, ೭೦–೮೦ರ ದಶಕದಲ್ಲಿ. ಆಗ ಸಾಹಿತ್ಯವನ್ನು ಕ್ರಮಬದ್ಧವಾಗಿ ಓದಿದವರು ವಿಮರ್ಶೆಯನ್ನು ಮಾಡುತ್ತಿದ್ದರು. ೧೯೯೨ ನಂತರ ಕ್ರಮೇಣ ನವ್ಯೋತ್ತರ ಸಾಹಿತ್ಯ ಹೊಸ ಹೊರಳು ತೆಗೆದುಕೊಂಡಿತು. ವಿವಿಧ ರೀತಿಯ ವೃತ್ತಿಗಳಲ್ಲಿ ಕೆಲಸ ಮಾಡುವವರು ಸಾಹಿತ್ಯ ಬರೆಯತೊಡಗಿದರು. ಕ್ರಮೇಣ ಸಾಹಿತಿಗಳಾದ ಪೂರ್ಣಚಂದ್ರ ತೇಜಸ್ವಿ, ಯು. ಆರ್. ಅನಂತಮೂರ್ತಿ, ಓ. ಎಲ್. ನಾಗಭೂಷಣಸ್ವಾಮಿ, ಹೆಚ್. ಎಸ್. ರಾಘವೇಂದ್ರ ರಾವ್, ರಹಮತ್ ತರೀಕೆರೆ, ನಂತರ ಬಂದ ವಸುಧೇಂದ್ರ, ನಾಗರಾಜ ವಸ್ತಾರೆ, ಹಳಬರಾದ ಪಿ. ಪಿ. ನಾರಾಯಣ, ಶಾಸನ ವಿದ್ವಾಂಸರಾದ ಕೆ. ಆರ್. ಗಣೇಶ್"[೧೭] ಮೊದಲಾದವರು

ಕಂಪ್ಯೂಟರ್‌ನಲ್ಲಿ ಕನ್ನಡ ಲೇಖನಗಳನ್ನು ಬರೆಯತೊಡಗಿದರು ಎನ್ನುವ ಅವರು, ಇದುವರೆವಿಗೂ ಕನ್ನಡ ಸಾಹಿತ್ಯ ಕಂಪ್ಯೂಟರನ ಸಹಾಯ ಪಡೆಯುತ್ತಿದ್ದರೆ ನಂತರ ಬಂದ ತಲೆಮಾರು ಕಂಪ್ಯೂಟರ್ ವೃತ್ತಿಪರರಾಗಿದ್ದು "ವಿದ್ಯುನ್ಮಾನ ಉಪಕರಣ ಬಳಸಿ ಕೆಲಸ ಮಾಡುವ ತರುಣ ತರುಣಿಯರು ಯಾಹೂ, ರಿಡಿಫ್‌ಮೇಲ್, ಜಿ–ಮೇಲ್ ಬಳಸತೊಡಗಿದರು. ಇಲ್ಲಿಂದ ವಿಮರ್ಶೆ ವಿಮರ್ಶಕರ ವಲಯದ ಸೀಮಿತತೆ ಕಳಚಿಕೊಂಡು ಸಮಾನ ಆಸಕ್ತರ ನಡುವೆ ನಡೆಯುವ ವ್ಯಾಪಾರ ಆಯಿತು. ಕವನಗಳನ್ನು ಟೈಪಿಸಿ, ಅಲ್ಲೇ ತಿದ್ದಿ ಮೇಲ್ ಕಳುಹಿಸುವುದು, ಆಫೀಸಿಗೆ ಹೋಗುವಾಗ ಸ್ವಂತದ ಅಥವಾ ಕಚೇರಿಯ ಲ್ಯಾಪ್‌ಟಾಪ್‌ನಲ್ಲಿ ಕತೆ, ಪ್ರಬಂಧ ಸಿದ್ಧಪಡಿಸುವುದು, ಬಳಿಕ ಆಫೀಸಿಗೆ ಹೋದಾಗ ಅದನ್ನು ತಮ್ಮ ಮಿತ್ರರಿಗೆ ಈ ಮೇಲ್ ಇರುವ ಸಾಹಿತಿಗಳಿಗೆ ಕಳುಹಿಸುವುದು ನಡೆಯಿತು. ಆಗ ಅವರುಗಳು ಮರಳಿ ನೀಡುತ್ತಿದ್ದ ಚುಟುಕಾದ ಇಲ್ಲವೇ ವಿವರವಾದ ಬರಹ ರೂಪದ ಸಲಹೆಗಳು ವಿಮರ್ಶೆಯಾದವು. ಇವುಗಳ ಒಳಗೇ ಕನ್ನಡದಲ್ಲಿ ಅಕಡೆಮಿಕ್ ಕಲ್ಪನೆ ಮೀರಿದ ಹೊಸ ಬಗೆಯ ವಿಮರ್ಶೆ ನಡೆದಿದೆ, ಆದರೆ ಅದರ ಹೆಜ್ಜೆಗುರುತುಗಳು 'ಕನ್ನೆಯ ಸ್ನೇಹದಂತೆ' ಗುಪ್ತವಾಗಿದೆ."[೧೮] ಎನ್ನುವ ಇವರು ಅಂತರ್ಜಾಲದಲ್ಲಿ ಪ್ರಕಟವಾಗುತ್ತಿರುವ ವಿಮರ್ಶೆ ಪಂಥಾತೀತವಾಗಿದ್ದು ಅದರ ಲಕ್ಷಣಗಳನ್ನು ಸ್ಪಷ್ಟಪಡಿಸಿಕೊಳ್ಳಲು ಗಂಭೀರವಾಗಿ ಅಧ್ಯಯನ ಮಾಡಬೇಕಿದೆ ಎಂದು ಅಭಿಪ್ರಾಯಪಡುತ್ತಾರೆ.

ಅಂತರ್ಜಾಲ ವಿಮರ್ಶೆಯಲ್ಲಿ ಗೋಜಲು ಬಹಳವಾಗಿದೆ. ಅಮೂರ್ತ ವಿಚಾರಗಳನ್ನು ಸರಿಯಾಗಿ ಭಾಷೆಯಲ್ಲಿ ರೂಪಿಸಿಕೊಳ್ಳಲಾಗದ ದೌರ್ಬಲ್ಯ ಕೆಲವರದು; ಬುದ್ಧಿಪೂರ್ವಕವಾಗಿ ಗದ್ಯವನ್ನು ಕಾವ್ಯಾತ್ಮಕಗೊಳಿಸುವ ಹವ್ಯಾಸ ಕೆಲವರದು; ಹೊಸ ಹೊಸ ಪಾರಿಭಾಷಿಕ ಶಬ್ಧಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ತಂದು ಸುರಿಯುವ ಪ್ರದರ್ಶನಪ್ರಿಯತೆ ಕೆಲವರದು; ಸಣ್ಣ ಸರಳ ವಿಚಾರಗಳಿಗೂ ದೊಡ್ಡ ದೊಡ್ಡ ಸಂಕೀರ್ಣ ರೂಪಕಗಳನ್ನು ಹುಟ್ಟಿಸುವ ಹುಚ್ಚು ಮತ್ತೆ ಕೆಲವರದು. ಕೆಲವರ ವಾಕ್ಯ ರಚನೆಯೂ ಗೊಂದಲದ ಚಕ್ರವ್ಯೂಹ. ಇದಕ್ಕಿಂತ ಬಹಳ ಮುಖ್ಯವಾದ ಕಾರಣವೆಂದರೆ ಸರಿಯಾದ ಗ್ರಹಿಕೆಯ ಕೊರತೆ; ತಿಳುವಳಿಕೆಯ ಗೋಜಲುಗಳೆಲ್ಲ ಇಂದಿನ ಅಂತರ್ಜಾಲ ವಿಮರ್ಶಾ ಬರವಣಿಗೆಯಲ್ಲಿ ಪ್ರತಿಬಿಂಬಿತವಾಗುತ್ತದೆ.

ಅಂತರ್ಜಾಲದ ಬಿಡಿ ಲೇಖನಗಳಲ್ಲದೆ ಸಂಕಲನಗಳಲ್ಲಿ ಕಾಣಿಸಿಕೊಂಡಿರುವ ವಿಮರ್ಶೆಯು ಮೌಖಿಕವಾಗಿ ಸಭೆಯಲ್ಲಿ ಹಾಗೂ ಪತ್ರಿಕೆಗಳಲ್ಲಿ ಮುದ್ರಣ ರೂಪದಲ್ಲಿ ತನ್ನ ಇರವನ್ನು ತೋರಿರುತ್ತದೆ. ಸಾಹಿತ್ಯದ ಮರ್ಮವನ್ನು ಅರಿಯಬೇಕೆಂದು ಕಾಲಕಾಲಕ್ಕೆ ಹೊಸ ಹೊಸ ವಿಮರ್ಶಾ ವಿಧಾನಗಳು ಹುಟ್ಟಿಕೊಳ್ಳುತ್ತಲೇ ಇರುತ್ತದೆ. ಬಂದ ಹೊಸದರಲ್ಲಿ ಇದುವರೆವಿಗೂ ಚಾಲ್ತಿಯಲ್ಲಿದ್ದ ವಿಮರ್ಶಾ ಸಿದ್ಧಾಂತಗಳಿಗಿಂತ ನೂತನವಾದ ಒಳನೋಟಗಳನ್ನು ಕೊಡುವ ಮೂಲಕ ಎಲ್ಲರ ಗಮನವನ್ನು ಕೇಂದ್ರೀಕರಿಸುತ್ತದೆ. ಇಂತಹ ವಿಮರ್ಶಾ ವಿಧಾನ/ಸಿದ್ಧಾಂತಗಳಿಂದಲೇ 'ಸಾಹಿತ್ಯ ವಿಮರ್ಶೆ' ಪರೋಕ್ಷವಾಗಿ ತನ್ನ ತತ್ವ,

ಸ್ವರೂಪ, ಉದ್ದೇಶ, ವಿಮರ್ಶೆಯ ಉಪಕರಣಗಳು ಮತ್ತು ಮಾನದಂಡಗಳನ್ನು ರೂಪಿಸಿಕೊಳ್ಳುತ್ತದೆ. ಆದ್ದರಿಂದ ವಿಮರ್ಶೆಗೆಂದೇ ಒಂದು ಸ್ವಾಯತ್ತವಾದ ವಿಧಿವಿಧಾನಗಳಿಲ್ಲ.

ಮೇಲೆ ತಿಳಿಸಿದ ಮುಖ್ಯ ಪ್ರವೃತ್ತಿಗಳಲ್ಲದೆ ಕಳೆದ ದಶಕದ ವಿಮರ್ಶೆಗೆ ಪೂರಕವಾಗಿ ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಪಶ್ಚಿಮದಲ್ಲಿ 'ರಚನಾವಾದ' ಒಂದು ದೊಡ್ಡ ವಿಮರ್ಶಾ ಸಿದ್ಧಾಂತವಾಗಿ ರೂಪುಗೊಂಡಿತು. ಕನ್ನಡದಲ್ಲಿಯೋ ಪ್ರಸ್ತುತ ಅದರ ಬಳಕೆ ಜೋರಾಗಿಯೇ ಇದೆ. ರಚನಾವಾದವು ಸಾಹಿತ್ಯ ಕೃತಿಯ ವಿಶ್ಲೇಷಣೆಯಲ್ಲಿ ಕೃತಿಯ ಕಾಲ, ದೇಶ, ಸಂಸ್ಕೃತಿ ಮೊದಲಾದವನ್ನು ಮುಖ್ಯವಾಗಿ ಸ್ವೀಕರಿಸದೆ ಕೇವಲ ರಚನಾ ಬಂಧವನ್ನೆ ಬಲವಾಗಿ ಅವಲಂಬಿಸಿ ವಿಶ್ಲೇಷಣೆ ನಡೆಸುವುದರಿಂದ ಸಾಹಿತ್ಯ ವಿಮರ್ಶೆಯಲ್ಲಿ ಅದುವರೆವಿಗೂ ಇದ್ದ ವೈವಿದ್ಯತೆಯ ಬದಲಿಗೆ ಒಂದೇ ವಿಚಾರದ ಮೇಲೆ ಭಿನ್ನ ಭಿನ್ನ ಪ್ರವೇಶಗಳನ್ನು ನೀಡುವ ಕಡೆಗೆ ಇದು ತನ್ನ ಗಮನ ನೀಡಿತು. ವಿಮರ್ಶೆಯ ಸಾಂಪ್ರದಾಯಿಕವಾದ ಲವಲವಿಕೆಯ ಗದ್ಯದ ಬದಲು ಬಲು ಬಿಗಿಯಾದ ಬಂಧದಲ್ಲಿ ವಿಮರ್ಶೆ ಕನ್ನಡದಲ್ಲೂ ರಚನೆಯಾಗತೊಡಗಿತು. ಕೆಲವೊಮ್ಮೆ ವಿಮರ್ಶೆಗಿಂತ ಕೃತಿಯೇ ಸಹೃದಯರಿಗೆ ಸುಲಭವಾಗಿ ಅರ್ಥವಾಗತೊಡಗಿತು. ಕನ್ನಡದಲ್ಲಿ ಆರಂಭದ ವಿಮರ್ಶೆ ಕನ್ನಡ ಸಾಹಿತ್ಯ ಪರಂಪರೆಯನ್ನು ಸಹೃದಯರಿಗೆ ಪರಿಚಯಿಸುವುದರ ಜೊತೆಗೆ ಅವರ ಅಭಿರುಚಿ, ನಿರ್ಮಾಣದ ಬಗ್ಗೆಯೂ ಆಸ್ಥೆ ವಹಿಸಿತ್ತು.

ಆದರೆ ಪ್ರಸ್ತುತ ವಿಮರ್ಶೆಯನ್ನು ಸಹೃದಯರು ಓದಲಿಕ್ಕೆ ಮತ್ತೊಂದಷ್ಟು ಸಹಾಯಕ ಗ್ರಂಥಗಳು ಬೇಕಾದ ಅನಿವಾರ್ಯತೆ ಇದೆ. "ಕನ್ನಡದ ವಿಮರ್ಶೆಗೆ ಆವರಿಸಿರುವ ಅನೇಕ ಜಡತೆ ಮತ್ತು ಇಕ್ಕಟ್ಟುಗಳಿಗೆ ಮದ್ದೆಂದರೆ, ಬರೆಹ ಮಾಡುವ ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ವಿಮರ್ಶೆ ಬರೆಯುವುದು. ವಿಮರ್ಶೆ ಮಾಡಲೆಂದೇ ಇರುವ ಒಂದು ತಜ್ಞವೈದ್ಯರ ಮೀಸಲುಪಡೆಯ ಕಲ್ಪನೆಯನ್ನು ನಾಶಮಾಡುವುದು. ಆಗ ಸಾಹಿತ್ಯ ವಿಮರ್ಶೆ ಹೊಸ ಹೊಸ ಭಾಷೆ ಮತ್ತು ಚಿಂತನೆಯಿಂದ ಬಹುತ್ವವನ್ನು ಪಡೆಯುತ್ತದೆ."[೧೯] ಈ ಹೇಳಿಕೆಯ ಹಿಂದೆ ಆಧುನಿಕೋತ್ತರ ಚಿಂತನೆಗಳಿವೆ ಎನಿಸಿದರೂ ವಿಮರ್ಶೆಯ ಬರ ನೀಗಿಸಲು ಮತ್ತು ವೈವಿಧ್ಯತೆ ಸಾಧಿಸಲು ಈ ರೀತಿಯ ವಿಮರ್ಶಾ ರಚನೆಯ ಅಗತ್ಯವಿದೆ.

ವಾಸ್ತವವಾಗಿ ಕನ್ನಡದಲ್ಲಿ ಎರಡು ರೀತಿಯ ವಿಮರ್ಶಾ ಬರವಣಿಗೆಯ ಸಂಪ್ರದಾಯಗಳಿವೆ. ಮೊದಲನೆಯದು ವಿವಿಧ ಸಿದ್ಧಾಂತಗಳನ್ನು ಅನ್ವಯಿಸಿ, ಪಾರಿಭಾಷಿಕ ಪದಗಳ ಮೂಲಕ ತುಂಬಾ ಗಂಭೀರವಾದ ಗದ್ಯದಲ್ಲಿ ವಿಮರ್ಶೆ ಬರೆಯುವುದು. ಈ ಬರವಣಿಗೆ ಕೇವಲ ವೃತ್ತಿಪರ ವಿಮರ್ಶಕರಿಗೆ ಮಾತ್ರ ಸಂವಹನ ಸಾಧಿಸುತ್ತದೆ. ಇನ್ನೊಂದು ಬಗೆಯ ವಿಮರ್ಶಾ ಬರವಣಿಗೆ ಎಂದರೆ ತಾನು ಮತ್ತು ತನ್ನ ಓದುಗ ಇಬ್ಬರೂ ಸಮಾನರು ಎಂದು ಭಾವಿಸಿ ಕೃತಿಯನ್ನು ಎದುರುಗೊಳ್ಳುತ್ತಾರೆ. ಮೇಲುನೋಟಕ್ಕೆ ಕ್ಲಿಷ್ಟವೆಂದು ಕಾಣಿಸುವ ವಿಷಯಗಳನ್ನೂ ಸರಳವಾಗಿ ವಿವರಿಸಲಿಕ್ಕೆ ಸಾಧ್ಯವೆಂದು ಭಾವಿಸಿ

ಬರೆಯುವಂಥವರು. ಇವರ ಪ್ರಕಾರ ಯಾವುದೇ ಕೃತಿಯೊಂದರ ಬಗ್ಗೆ ಬರೆಯುವಾಗಲೂ ಅವರು ಆ ಕೃತಿಯ ಕಥೆಯನ್ನು ಮತ್ತೊಮ್ಮೆ ಸಂಕ್ಷಿಪ್ತವಾಗಿ ಹೇಳುತ್ತಾ ಹೋಗುತ್ತಾರೆ. ಅಗತ್ಯವಿದ್ದೆಡೆ ಕೃತಿಯಿಂದ ದೀರ್ಘ ಉಲ್ಲೇಖಗಳನ್ನೂ ಮಡುತ್ತಾರೆ. ಹೀಗೆ ಮಾಡುವುದರಿಂದ ಆಗುವ ಅನುಕೂಲಗಳೆಂದರೆ ವ್ಯಾಪಕ ಓದಿನ ಹಿನ್ನೆಲೆಯಿಲ್ಲದ ಓದುಗನೂ ಕೂಡ ಇಂತಹ ಬರವಣಿಗೆಯನ್ನು ಆಪ್ತವಾಗಿ ಓದಬಲ್ಲ. ಜೊತೆಗೆ ಇಂತಹ ವಿಮರ್ಶಾ ಬರವಣಿಗೆಗಳು ಓದುಗನಲ್ಲಿ ವಿಮರ್ಶಕನಿಗೆ ಸಮಾನವಾದ ಸಂವೇದನೆಯನ್ನು ಗುರುತಿಸಲು ಪ್ರಚೋದಿಸಲು ಸಾಧ್ಯವಾಗುತ್ತವೆ. ಆದ್ದರಿಂದ ಸಿದ್ಧಾಂತಗಳ ಭಾರವಿಲ್ಲದ ವಿಮರ್ಶೆ ಇವತ್ತಿನ ಅಗತ್ಯವಾಗಿದೆ.

ಹಸಿರು ವಿಮರ್ಶೆ

ಸಾಹಿತ್ಯ ಕೃತಿಯೊಂದರ ಹುಟ್ಟು ಅದರ ಸಮಕಾಲೀನ ಆಲೋಚನೆಗಳ ಜೊತೆಗೆ ರಾಜಕೀಯ, ಆರ್ಥಿಕ, ಸಾಮಾಜಿಕ ವಿಚಾರಗಳನ್ನು, ಪರಂಪರೆಯ ವಿಚಾರಗಳನ್ನು ಒಳಗೊಂಡಿರುತ್ತದೆ. ಇಂತಹ ಕೃತಿಯ ಗುಣಾವಗುಣಗಳ ಮೌಲ್ಯಮಾಪನಕ್ಕೆ ತೊಡಗುವ ವಿಮರ್ಶೆ ಬಹುಶಿಸ್ತೀಯ ಹಿನ್ನೆಲೆಯಲ್ಲಿ ಕೃತಿಯನ್ನು ಪರಿಶೀಲಿಸುತ್ತದೆ. ಒಂದೇ ಕಾಲದಲ್ಲಿ ಬರೆಯುವ ವಿಮರ್ಶಕರಲ್ಲೂ ಭಿನ್ನ ಭಿನ್ನವಾದ ಶೈಲಿ, ವಸ್ತುವಿನ ಆಯ್ಕೆ, ನಿರ್ವಹಣಾ ವಿಧಾನಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಒಂದು ದೊಡ್ಡ ಜನಾಂದೋಲನವಾಗಿರುವ ಪರಿಸರ ಕಾಳಜಿಯು ಸಾಹಿತ್ಯ ವಿಮರ್ಶೆಯಲ್ಲಿಯೂ ತನ್ನ ಪ್ರಭಾವ ಬೀರುತ್ತಿದೆ. ಎಕೋ ಕ್ರಿಟಿಸಿಸಂ ಎಂಬ ಹೆಸರಿನೊಂದಿಗೆ ಕಳೆದೆರಡು ದಶಕದಿಂದ ಅಮೇರಿಕಾದಲ್ಲಿ ಸಕ್ರಿಯವಾಗಿ ಕನ್ನಡದಲ್ಲಿ ಇದನ್ನು ಪ್ರೊ. ಚಂದ್ರಶೇಖರ ನಂಗಲಿಯವರು ಚಾಲನೆಗೆ ತರುತ್ತಿದ್ದಾರೆ.

ಕಾಡು ಮತ್ತು ತೋಪು, ನೆಲಮುಟ್ಟುವ ಪ್ರೀತಿ, ನಾನಿಲ್ಲುವಳಲ್ಲ, ನಿರ್ಬೀಜೀಕರಣವೆಂಬ ವಿರಾಟ್ ಸ್ವರೂಪ, ಈಗಳೇ ಸಾಧ್ಯ ಮೊದಲಾದ ಕೃತಿಯಲ್ಲಿ ಕನ್ನಡ ಸಾಹಿತ್ಯ ಕೃತಿಗಳನ್ನು ಪರಿಸರ ತತ್ವಗಳ ಹಿನ್ನೆಲೆಯಲ್ಲಿ ಅಭ್ಯಸಿಸುವ ಪ್ರಯತ್ನ ನಡೆಸಿದ್ದಾರೆ. ಉದಾ:ಗೆ ಕೆ.ಎಸ್ ನರಸಿಂಹಸ್ವಾಮಿಯವರ 'ಬಳೆಗಾರನ ಹಾಡು' ಕವಿತೆಯ 'ಹಿಂಡಬಾರದು ದುಂಡುಮಲ್ಲಿಗೆಯ ದಂಡೆಯನು, ಒಣಗಬಾರದು ಒಡಲ ಚಿಲುಮೆ' ಎಂಬ ನುಡಿಗಳನ್ನು ಬಸುರಿ ಮತ್ತು ಭೂಮಿತಾಯಿ ಎರಡೂ ದೃಷ್ಟಿಯಿಂದಲೂ ನೋಡಬಹುದು. "ಹೆಣ್ಣನ್ನು ಹಿಂಡುವ ಗಂಡಿನ ದರ್ಬಾರು ಮತ್ತು ಭೂಮಿತಾಯಿಯನ್ನು ಹಿಂಡುವ 'ಪೌರುಷ' ಪ್ರಧಾನ ನಾಗರೀಕತೆಯ ವಿಜೃಂಭಣೆಯಿಂದ ಹೆಣ್ಣು ಹಾಗೂ ಭೂಮಿತಾಯಿ ಒಟ್ಟಿಗೆ ನಲುಗುತ್ತಿರುವ ಅರ್ಥ ಸ್ಫುರಣೆಯಾಗುತ್ತದೆ"[20] ಎನ್ನುತ್ತಾರೆ.

ಸಂಸಾರದ ಸಣ್ಣ ಬಿಕ್ಕಟ್ಟನ್ನು ಪ್ರಾಕೃತಿಕ ವೈಪರೀತ್ಯದೊಂದಿಗೆ ಹೋಲಿಸುವುದು ಕೊಂಚ ಅತಿ ಎನಿಸಿದರೂ ಈ ಹೊತ್ತಿನ ಪರಿಸರ ಸಂದರ್ಭಕ್ಕೆ ಅದು ಬಹಳ ಅರ್ಥಪೂರ್ಣ ಮಾತಾಗುತ್ತದೆ. ಪರಿಸರ ಪರ ಎಂಬುದನ್ನು ಜೀವಪರ ಎಂದೂ

ಅರ್ಥೈಸುವುದಾದರೆ ಹಸಿರು ವಿಮರ್ಶೆ ಇವತ್ತಿನ ಕನ್ನಡ ಸಾಹಿತ್ಯ ವಿಮರ್ಶೆಯ ದಿಕ್ಸೂಚಿಯಾಗಬಹುದು.

ಸಾಹಿತ್ಯ ಮತ್ತು ಭೌತಿಕ ಪರಿಸರದ ನಡುವಿನ ಸಂಬಂಧ ಕುರಿತು ಅಧ್ಯಯನ ಮಾಡುವುದನ್ನು ಹಸಿರು ವಿಮರ್ಶೆ ಎಂದು ಕರೆಯಬಹುದು. ಮೊದಲಿಗೆ ಇದನ್ನು ಚೆರಿಲ್ ಗ್ಲಾಟ್ ಫಿಲ್ವಿ ಮತ್ತು ಹೆರಾಲ್ಡ್ ಫ್ರೇಮ್ ಸಂಪಾದಿಸಿದ ದಿ ಇಕೋ ಕ್ರಿಟಿಸಿಸಂ ರೀಡರ್-ಲ್ಯಾಂಡ್ ಮಾರ್ಕ್ಸ್ ಇನ್ ಅವರ 'ಇಕಾಲಜಿ 1996' ಎಂಬ ಕೃತಿಯೊಂದಿಗೆ ಹಸಿರು ವಿಮರ್ಶೆಯ ಆರಂಭವನ್ನು ಗುರುತಿಸಬಹುದು. ಇದು ಸಂರಚನಾವಾದಿಗಳ 'ಪ್ರತಿಯೊಂದು ಸಂಗತಿಯೂ ಸಾಮಾಜಿಕ ಹಾಗೂ ಭಾಷಿಕ ನಿರ್ಮಿತ' ಎಂಬ ಅಪಕಲ್ಪನೆಯನ್ನು ತಿರಸ್ಕರಿಸಿ ಪ್ರಕೃತಿಯು ನಿಜವಾಗಿಯೂ ಅಸ್ತಿತ್ವದಲ್ಲಿದೆ. ಇದು ನಮ್ಮ ಮೇಲೆ ಪರಿಣಾಮ ಬೀರುತ್ತದೆ. ಒಂದು ಪಕ್ಷ ಅದನ್ನು ಸರಿಯಾಗಿ ನಡೆಸಿಕೊಳ್ಳದಿದ್ದರೆ ನಮ್ಮನ್ನು ಸರ್ವನಾಶ ಮಾಡುತ್ತದೆ ಎಂಬುದು ಪರಿಸರ ವಿಮರ್ಶೆಯ ಸ್ಥೂಲ ತತ್ವ. ಇದನ್ನು ಸಾಹಿತ್ಯ ಕೃತಿಗಳಲ್ಲಿ ಪ್ರತಿಪಾದಿತವಾಗಿರುವ ಬಗೆಯನ್ನು ಕಂಡುಕೊಳ್ಳುವುದೇ ಹಸಿರು ವಿಮರ್ಶೆಯಾಗಿರುತ್ತದೆ.

ಸಾಹಿತ್ಯ ಕೃತಿಯೊಂದು ಭೌತಿಕ ಪರಿಸರದಿಂದ ಪ್ರೇರಣೆ ಪಡೆದು ತನ್ನಲ್ಲಿ ಮರುಸೃಷ್ಟಿಸುವ ಕ್ರಮವನ್ನು ಸೂಕ್ಷ್ಮವಾಗಿ ಗ್ರಹಿಸುವ ಹಸಿರು ವಿಮರ್ಶೆ ಸಾಹಿತ್ಯದ ಕಾಳಜಿ ಮನುಷ್ಯ ಕೇಂದ್ರದಿಂದ ಜೀವಕೇಂದ್ರವಾಗುವ ಕಡೆಗೆ ನಡೆಯಬೇಕೆಂದು ಒತ್ತಾಯಿಸುತ್ತದೆ. ಕನ್ನಡದಲ್ಲಿ ಪುತಿನ ಅವರ ಗೋಕುಲ ನಿರ್ಗಮನ, ಎಸ್. ಜಿ. ಸಿದ್ದರಾಮಯ್ಯನವರ ಕೆರೆಬಳಗ, ಕೃಷ್ಣಮೂರ್ತಿ ಹನೂರವರ ನಿಕ್ಷೇಪ, ಪೂರ್ಣಚಂದ್ರ ತೇಜಸ್ವಿಯವರ ಪರಿಸರ ಕೃತಿಗಳು ಹಾಗೂ ಬಿ. ಜಿ. ಎಲ್ ಸ್ವಾಮಿಯವರ ಕೆಲ ಬರಹಗಳ ಹಿಂದೆ ಈ ಹಸಿರು ವಿಮರ್ಶೆ ಸೂಕ್ಷ್ಮವಾಗಿ ಕೆಲಸ ಮಾಡಿದೆ ಎಂದು ಊಹಿಸಬಹುದು.

ಒಟ್ಟಾರೆ, ಕನ್ನಡ ವಿಮರ್ಶೆಯನ್ನು ರೂಪಿಸಿರುವ ಮೂರು ಮುಖ್ಯ ಒತ್ತಾಸೆಗಳೆಂದರೆ, ಪತ್ರಿಕೆಗಳು, ವಿಚಾರ ಸಂಕಿರಣಗಳು ಹಾಗೂ ತರಗತಿಗಳು. ಶಿಕ್ಷಣ ವ್ಯವಸ್ಥೆಯ ಭಾಗವಾಗಿರುವ ಸಾಹಿತ್ಯದ ಅಧ್ಯಯನವು ಪರೋಕ್ಷವಾಗಿ ಸಾಹಿತ್ಯ ವಿಮರ್ಶೆಯ ತರಭೇತಿ ಜಾಗದಂತೆ ಕಾಣುತ್ತದೆ. ಕನ್ನಡದಲ್ಲಿ ವಿಮರ್ಶೆ ಪಡೆದಿರುವ ಪಠ್ಯ ಅಥವಾ ಲೇಖಕರನ್ನು ಪಟ್ಟಿಮಾಡಿದರೆ, ಅವು ಪಠ್ಯಕ್ರಮದ ಭಾಗವಾಗಿರುವುದಕ್ಕೂ ಸಂಬಂಧವಿರುವುದು ತಿಳಿಯುತ್ತದೆ. ಎರಡನೆಯದಾಗಿ ಅಕಾಡೆಮಿ ವಿಶ್ವವಿದ್ಯಾಲಯ ಹಾಗೂ ಕಾಲೇಜು, ಸಂಘ ಸಂಸ್ಥೆಗಳು ಮಾಡುವ ವಿಚಾರ ಸಂಕಿರಣಗಳು ಬೇರೆಬೇರೆ ಲೇಖಕರನ್ನು ಅಥವಾ ಪಠ್ಯಗಳನ್ನು ಚರ್ಚೆಗೆ ಕೈಗೆತ್ತಿಕೊಂಡಿವೆ. ಇದಕ್ಕೆ ಆಯಾ ಪಠ್ಯ ಇಲ್ಲವೇ ಲೇಖಕರ ಸಾವು, ಜನ್ಮಶತಾಬ್ದಿ, ಪ್ರಶಸ್ತಿಗಳು ಕಾರಣವಾಗಿವೆ. ಹೀಗೆ ತರಗತಿ ಮತ್ತು ವಿಚಾರ ಸಂಕಿರಣಗಳಲ್ಲಿ ವಿಮರ್ಶೆಯು ಮೌಖಿಕವಾಗಿ ಅಭಿವ್ಯಕ್ತಿಗೊಂಡ ಮೇಲೆ ಮುದ್ರಣ ರೂಪದಲ್ಲಿ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಹೊಸತಲೆಮಾರಿನ ವಿಮರ್ಶಕರೂ ಒಳಗೊಂಡಂತೆ ತಮ್ಮ ಮುನ್ನುಡಿಯಲ್ಲಿ ಲೇಖನಗಳನ್ನು ಪ್ರಕಟಿಸಿದ ವಿಚಾರ ಸಂಕಿರಣ

ಏರ್ಪಡಿಸಿದ್ದ ಸಂಸ್ಥೆಗಳನ್ನೂ ಅವನ್ನು ಪ್ರಕಟಿಸಿದ ಪತ್ರಿಕೆಗಳನ್ನು ಸ್ಮರಿಸಿರುವುದನ್ನು ನೋಡಬಹುದು.

ಇವತ್ತಿನ ವಿಮರ್ಶೆಯ ವ್ಯಾಪ್ತಿಯು ದೊಡ್ಡದಾಗಿದ್ದು "ವಿಮರ್ಶೆಯು, ಸಾಹಿತ್ಯಕೃತಿಗಳನ್ನು ಅವಲಂಬಿಸಿದ 'ಸೆಕೆಂಡರಿ' ಚಟುವಟಿಕೆಯಲ್ಲ. ಅದು ಕೂಡ ಲೋಕದಿಂದ ಕಲಿಯುವ, ಲೋಕವನ್ನು ಗ್ರಹಿಸುವ, ಹಾಗೂ ಲೋಕವನ್ನು ಕಟ್ಟಿಕೊಡುವ ಬಗೆಯೇ ಆಗಿದೆ. ವಿಮರ್ಶಕಿಯು ಸಾಹಿತ್ಯ, ಸಂಗೀತ, ಶಿಲ್ಪ ಮುಂತಾದ ಕಲಾಕೃತಿಗಳನ್ನು ಒಳಗೊಳ್ಳುತ್ತಿರುವಂತೆ, ಅವುಗಳ ಸಂಗಡ ಮಾತಾಡುತ್ತಿರುವಂತೆ ಕಂಡರೂ ವಾಸ್ತವದಲ್ಲಿ ಅವಳು ಆ ಕೃತಿಗಳನ್ನು ತಾನು ಬಲ್ಲ ಅನುಭವ, ವಿಚಾರ, ಭಾವನೆ ಮತ್ತು ನಿಲುವುಗಳೊಂದಿಗೆ ತಾಳೆ ಹಾಕುತ್ತಿರುತ್ತಾಳೆ. ತಾನು ಬಳಸುವ ಕಲಾಕೃತಿಗಳ ಅಂತರಂಗವನ್ನು ರೂಪಿಸುವ ಸಾಹಿತ್ಯತತ್ವ ಮತ್ತು ಅವುಗಳ ಆಶಯಗಳನ್ನು ರೂಪಿಸುವ ಜೀವನತತ್ವ ಮತ್ತು ಅಷ್ಟೇ ಮುಖ್ಯವಾಗಿ ಇವೆರಡನ್ನು ಒಂದಾಗಿ ಬೆಸೆಯಬಲ್ಲ ಕೌಶಲ ಮಹಿಳೆಯರ ತಿಳಿವಳಿಕೆಯ ವ್ಯಾಪ್ತಿಯಲ್ಲಿ ಬರುತ್ತವೆ."[೨೧]

ಕನ್ನಡ ವಿಮರ್ಶೆಯನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ಹೊಸ ಪೀಳಿಗೆಯ ಬರಹಗಾರರಲ್ಲಿ ಆಧುನಿಕತೆ, ಪರಂಪರೆ, ಸಂಪ್ರದಾಯಗಳ ಬಗೆಗೆ ಗಂಭೀರವಾಗಿ ಯೋಚನೆ ಮಾಡುವ ಬೆಳವಣಿಗೆ ಇದೆ. ಜಗತ್ತಿನ ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳುತ್ತಲೇ ಕನ್ನಡದಲ್ಲಿ ತಮ್ಮ ಸಂವೇದನೆಯನ್ನು ರೂಪಿಸಿ ಅಭಿವ್ಯಕ್ತಿಗೊಳಿಸುವಲ್ಲಿ ಪ್ರಯತ್ನಿಸುತ್ತಿದ್ದಾರೆ. ಜಯಂತ್ ಕಾಯ್ಕಿಣಿ, ವಿವೇಕ್ ಶಾನಭಾಗ್, ಮೊಗಳ್ಳಿ ಗಣೇಶ್, ವಸುದೇಂದ್ರ ಮೊದಲಾದವರು ಮೊದಲು ಜಾಗತೀಕರಣದ ಪರವಾಗಿದ್ದರೇನೋ ಎನಿಸುವಂತಿದ್ದರೂ, ಪ್ರಸ್ತುತ ಅದರಲ್ಲೇನೋ ಕೆಟ್ಟದಿದೆ ಎಂಬುದನ್ನು ಸ್ಪಷ್ಟವಾಗಿ ಗ್ರಹಿಸಿ ಅದರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಸಾಹಿತ್ಯ ಪಂಥ ಅಥವಾ ಚಳುವಳಿಗಳು ಒಂದು ಅನುಕೂಲಕ್ಕಾಗಿ ಮಾತ್ರ ಮಾಡಿಕೊಂಡ ಚೌಕಟ್ಟುಗಳಷ್ಟೇ. ನವ್ಯದಲ್ಲಿಯೇ ಹಲವಾರು ಭಿನ್ನತೆಗಳಿದ್ದವು. ಎಂದೂ, ಯಾವುದರಲ್ಲೂ ಏಕರೂಪತೆ ಇರಲಿಲ್ಲ. ಅದರಲ್ಲೂ ಇಂದಿನ ಕಾಲ ಅನೇಕ ಸ್ಥಿತ್ಯಂತರಗಳನ್ನು, ತವಕ ತಲ್ಲಣಗಳನ್ನು ಅಭಿವ್ಯಕ್ತಿಸುವ, ಪ್ರತಿನಿಧಿಸುವ, ವಿರೋಧಿಸುವ ಕಾಲ. ಇಂದಿನ ಕನ್ನಡದ ಮನಸ್ಸು ವಿರೋಧಾಭಾಸ, ವಿಪರ್ಯಾಸ, ದ್ವಂದ್ವ, ಪರಸ್ಪರ ವಿರೋಧಿ ನೆಲೆಗಳನ್ನು ಪ್ರತಿನಿಧಿಸುತ್ತಿದೆ. ಇದು ಕನ್ನಡದ ನಿಜವಾದ ಗುಣ ಕೂಡಾ. ಒಂದೇ ಸಿದ್ಧಾಂತ ಸರಿ ಎಂದು ಹೇಳದಿರುವಂತದ್ದು ಇದು.

ಎಲ್ಲ ಕಾಲದಲ್ಲಿಯೂ ವಿಭಿನ್ನ ಚಳುವಳಿಗಳ/ಸಮುದಾಯಗಳ ಮುಖವಾಣಿಯಾದ ವಿಮರ್ಶೆಯೂ ಇರುತ್ತದೆ. ತಾನು ಹಾಗಿಲ್ಲವೆಂದು 'ಹೇಳಿಕೊಳ್ಳುವ' ವಿಮರ್ಶೆಯೂ ಇರುತ್ತದೆ. ಎಲ್ಲ ವಿಮರ್ಶೆಯೂ ಹಳೆಯ ಪರಂಪರೆಗಳೊಂದಿಗೆ ಜಗಳ ಆಡುತ್ತಿರುತ್ತದೆ, ಆಯ್ಕೆ ಮಾಡಿಕೊಳ್ಳುತ್ತದೆ, ಅವುಗಳನ್ನು ತನಗೆ ಬೇಕಾದ ಹಾಗೆ ವಿವರಿಸುತ್ತದೆ ಅಥವಾ ಅದರ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಿಸುತ್ತದೆ. ಅಥವಾ ಪರಂಪರೆಯೊಳಗೇ

ಇದ್ದರೂ ಇಲ್ಲದಂತಿದ್ದ 'ನೆಲದ ಮರೆಯ ನಿಧಾನ'ಗಳನ್ನು ಹುಡುಕಿ ತೋರಿಸುತ್ತದೆ. ನಾವು ನಮ್ಮ ಕಾಲವನ್ನು ನೋಡುವ ರೀತಿಯೇ, ನಮ್ಮ ಇಂದಿನ ಅಗತ್ಯವೇ ಕಳೆದ ಕಾಲದ ಬರವಣಿಗೆಯನ್ನು ನೋಡುವ ಬಗೆಗಳನ್ನೂ ತೀರ್ಮಾನ ಮಾಡುತ್ತದೆ. ಸಂಸ್ಕೃತದ ಹೆಗಲ ಮೇಲೆ ಕುಳಿತುಕೊಂಡು ಮಾಡುತ್ತಿದ್ದ ತಪ್ಪುಹಾದಿಯ ಪ್ರಯಾಣವು, ಕ್ರಮೇಣ ಪಡುವಣದ ದಿಕ್ಕಿಗೆ ತಿರುಗಿಕೊಂಡಿತು. ಪಾಶ್ಚಾತ್ಯ ಸಾಹಿತ್ಯಮೀಮಾಂಸೆಯು ನಮ್ಮ ಬಳಕೆಯ ಉಪಕರಣವಾಯಿತು. ಆ ಕಡೆಯಿಂದ ಬಂದ ಕಥೆ, ಕಾದಂಬರಿ, ಭಾವಗೀತೆ, ನಾಟಕಗಳ ಸಂಗಡವೇ ಅವುಗಳನ್ನು ಕಾಣುವ ಬಗೆಗಳೂ ಆಮದಾಗಿ ಬಂದವು. ಇವುಗಳನ್ನು ನಮ್ಮದೇ ಆದ ಆಲೋಚನೆಯ ಹಾದಿಗಳಿಗೆ ಕಸಿಮಾಡಿ, ಕೆಲವು 'ಹೈಬ್ರಿಡ್' ವಿಧಾನಗಳನ್ನು ರೂಪಿಸಿಕೊಂಡಾಗಿದೆ. ದಿನಕಳೆದಂತೆ ಹಳೆಯದು, ಹೊಸದು ಎಲ್ಲಕ್ಕೂ ಒಂದೇ ಬಗೆಯ ವಿಧಾನಗಳನ್ನು ಬಳಸಿಕೊಳ್ಳುವುದು ಅನಿವಾರ್ಯವಾಗಬಹುದು.

ಹೀಗೆ ತಂದುಕೊಂಡಿದ್ದು ಕೇವಲ ಸಾಹಿತ್ಯ ತತ್ವವನ್ನು ಮಾತ್ರ ಅಲ್ಲ. ಜೀವನ ಮತ್ತು ಸಮಾಜಗಳನ್ನು ಅರ್ಥ ಮಾಡಿಕೊಳ್ಳುವ ಬಗೆಗಳನ್ನೂ ಅಲ್ಲಿಂದಲೇ ಕಲಿಯಲಾಗಿದೆ. ನಮ್ಮ ಜೀವನಕ್ರಮದಲ್ಲಿ ಆಗುವ ಬದಲಾವಣೆಗಳಿಗೂ ಸಾಹಿತ್ಯವನ್ನು ನೊಡುವ ಬಗೆಗೂ ಹತ್ತಿರದ ಸಂಬಂಧವಿದೆ. ಇಲ್ಲಿ ಮುಖ್ಯವಾಗಿ ನೋಡಬೇಕಾದ ವಿಷಯವೆಂದರೆ, 'ಸಾಹಿತ್ಯವನ್ನು ಕುರಿತ ಆಲೋಚನೆಗಳು ತಾವು ಹುಟ್ಟಿದ ಪ್ರದೇಶ, ಕಾಲ ಮತ್ತು ಚಾರಿತ್ರಕ ಸಂದರ್ಭಗಳಿಂದ ಕಟ್ಟಿಹಾಕಿಸಿಕೊಳ್ಳುವುದೋ ಅಥವಾ ಅದು ಎಲ್ಲ ಕಾಲಕ್ಕೂ ಹೊಂದಿಕೊಳ್ಳುತ್ತದೆಯೋ ಎನ್ನುವುದು. ಜೊತೆಗೆ ವಿಮರ್ಶೆಯನ್ನು ಬರೆಯುವ ಭಾಷೆಯಲ್ಲಿ ಬದಲಾವಣೆಯಾಗುವುದು ಈಗ ಅನಿವಾರ್ಯವಾಗಿದೆ. ಏಕೆಂದರೆ, ಕನ್ನಡ ಅಥವಾ ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರು ಮಾತ್ರವೇ ಸಾಹಿತ್ಯದ ರಚನೆ, ಓದು ಮತ್ತು ವಿಮರ್ಶೆಗಳಲ್ಲಿ ತೊಡಗಿಕೊಳ್ಳುತ್ತಿದ್ದ ಕಾಲ ಹಿಂದೆ ಉಳಿಯಿತು. ಇಂದು ವಿಮರ್ಶೆಯ ಪರಿಭಾಷೆಯ ನೆರವಿಲ್ಲದೆ ವಿಮರ್ಶೆಯನ್ನು ಬರೆಯಬೇಕಾದ ಬಿಕ್ಕಟ್ಟು ಮೂಡಿಬಂದಿದೆ. ಇಲ್ಲವಾದರೆ, ನಾವು ಬರೆದುದನ್ನು ಯಾರೋ ಕೆಲವರು ಮಾತ್ರ ಓದಿ ವಿಮರ್ಶೆ ಜನಸಾಮಾನ್ಯರಿಂದ ದೂರವಾಗುವ ಆತಂಕ ಎದುರಿಸುತ್ತಿದೆ.

ಒಟ್ಟಾರೆ, ಇಪ್ಪತ್ತನೆಯ ಶತಮಾನದಂಚಿನ ಈ ಮಾಹಿತಿ ಪ್ರವಾಹದ ಕಾಲದಲ್ಲಿ ಹೊಸ ಪ್ರಭಾವಗಳು, ಹೊಸ ಮಾಧ್ಯಮಗಳ ಸವಾಲುಗಳು, ಹೊಸ ಜ್ಞಾನಮಾರ್ಗಗಳ ಬಗ್ಗೆ ಅರಿವೇ ಇಲ್ಲದೆ ಕೇವಲ ಅಂತಸ್ಫೂರ್ತಿಯನ್ನೆ ಬಳಸಿಕೊಂಡ ದೊಡ್ಡ ಬರಹವನ್ನು ಸೃಷ್ಟಿಸಲಾಗುವುದಿಲ್ಲ. "ನಾವೆಲ್ಲ ಭಾರತೀಯ ಕಾವ್ಯಮೀಮಾಂಸೆಯ 'ರಸಾನುಭವ'ದಲ್ಲೇ ಸ್ಥಗಿತಗೊಂಡಿದ್ದರೆ ನವ್ಯರ ಪ್ರಾಯೋಗಿಕ ವಿಮರ್ಶೆಯಿಂದ ಕೃತಿ ಬೆಳೆಯುವುದನ್ನು ಕಂಡುಕೊಳ್ಳುತ್ತಿರಲಿಲ್ಲ. ಅದೇ ರೀತಿ, ನಾವು ಪ್ರಾಯೋಗಿಕ ವಿಮರ್ಶೆಯಲ್ಲೇ ನಿಂತಿದ್ದರೆ, ಡಿ. ಆರ್. ನಾಗರಾಜ್ ಥರದವರ ಸಂಸ್ಕೃತಿ ವಿಮರ್ಶೆಯ ಸಾಧ್ಯತೆಗಳನ್ನೇ ಅರಿಯದೇ ಹೋಗಿರುತ್ತಿದ್ದೆವು. ಪಶ್ಚಿಮದಲ್ಲಿ ಆಧುನಿಕೋತ್ತರ ಓದು ಬೆಳೆಯದಿದ್ದರೆ ಸ್ತ್ರೀವಾದ, ಮಾರ್ಕ್ಸ್‌ವಾದ, ಓದುಗ ಕೇಂದ್ರಿತ ವಿಮರ್ಶೆ ಇವಕ್ಕೆಲ್ಲಾ ಹೊಸ ರೂಪ ಬರುತ್ತಿರಲಿಲ್ಲ.

ಸಾಹಿತ್ಯ ಜಗತ್ತಿನ ಧೀಮಂತರು ನಮ್ಮ ಕಾಲದ ಮಾಹಿತಿ ಪ್ರವಾಹದೆದುರು ಹೀಗೆ ವಿಭಿನ್ನ ರೀತಿಗಳಲ್ಲಿ ಈಜದಿದ್ದರೆ, ಅತಿಸೂಕ್ಷ್ಮವಾದ ಓದುಗಳನ್ನು ರೂಪಿಸದಿದ್ದರೆ ಸಾಹಿತ್ಯ ತನ್ನ ವಿಶಿಷ್ಟ ಸೃಷ್ಟಿಯ ಸವಲತ್ತನ್ನೂ, ಹಕ್ಕನ್ನೂ ರಕ್ಷಿಸಿಕೊಳ್ಳಲಾರದು"[೨೨] ಎಂಬ ಅಭಿಪ್ರಾಯವಿದೆ.

ಕಳೆದ ದಶಕದ ವಿಮರ್ಶೆಯನ್ನು ಅಮೂಲಾಗ್ರವಾಗಿ ಪರಿಶೀಲಿಸಿದಾಗ ಇವತ್ತಿನ ವಿಮರ್ಶೆ ಸಾಹಿತ್ಯ ನಿರ್ವಚನದಾಚೆಗೆ ಸಮಕಾಲೀನ ರಾಜಕಾರಣದ ಅನಾಹುತಕಾರಿ ಬೆಳವಣಿಗೆಗಳನ್ನೂ, ಅದು ಕನ್ನಡ ಸಾಂಸ್ಕೃತಿಕ ಲೋಕವನ್ನು ಕಲುಷಿತಗೊಳಿಸುತ್ತಿರುವುದನ್ನೂ ವಿವರಿಸುತ್ತಿದೆ. ಸಮಕಾಲೀನ ಸಂದರ್ಭ ಹೆಚ್ಚು ಸಂಕೀರ್ಣವಾಗಿ ಸಾಮಾಜಿಕ ಮತ್ತು ಸಾಹಿತ್ಯಿಕ ಪ್ರಶ್ನೆಗಳನ್ನು ನಮ್ಮೆದುರಿಗೆ ಇಡುತ್ತಿದ್ದು ಅದಕ್ಕೆ ಉತ್ತರ ಕಂಡುಕೊಳ್ಳಬೇಕಾದ ಗಂಭೀರ ಜವಬ್ದಾರಿ ಇಂದಿನ ವಿಮರ್ಶೆಗಿದೆ. ಕೃತಿಯೊಂದರ ಹೊಸ ನೋಟಕ್ರಮದಿಂದ ಅದರ ಬಹುಸ್ತರೀಯತೆಯನ್ನು ಗುರುತಿಸಬಹುದಾಗಿದ್ದು, ಅದರ ಬಹುಸಾಂಸ್ಕೃತಿಕತೆ, ಬಹುಭಾಷಿಕತೆಗಳ ಮೂಲಕ ಅದರ ಸುತ್ತಲಿನ ಲೋಕವನ್ನು ಹೊಸನೋಟಕ್ರಮದಿಂದ ಅರಿಯುವ ಸಾಧ್ಯತೆಗಳಿವೆ. ಸಧ್ಯ ಕನ್ನಡ ವಿಮರ್ಶೆ ಆ ಕಡೆಗೆ ತನ್ನ ಗಮನ ನೆಟ್ಟಿದೆ.

ಜೊತೆಗೆ ಇವತ್ತಿನ ವಿಮರ್ಶೆಯನ್ನು ಪ್ರಭಾವಿಸುತ್ತಿರುವ ವಿಚಾರಗಳಲ್ಲಿ ನವವಸಾಹತುಶಾಹಿಯೂ ಒಂದಾಗಿದೆ. "ಇಂದು ನವವಸಾಹತುಶಾಹಿಯು ನಮ್ಮ ಬದುಕನ್ನು ಆಕ್ರಮಿಸಿದೆ. ಹಾಗಾಗಿ ನಮ್ಮ ವಿಮರ್ಶೆ ಹೆಚ್ಚು ಪಾರದರ್ಶಕವಾಗಬೇಕಾದುದು ಅಗತ್ಯ. ವಸಾಹತುಶಾಹಿ ನಮ್ಮ ಸಂಪತ್ತನ್ನು ಲೂಟಿ ಮಾಡುವ ಮುಖ್ಯ ಉದ್ದೇಶದಿಂದ ನಮ್ಮನ್ನು ಪರಕೀಯರ ಅವಲಂಬನೆಗೆ ಒಳಗು ಮಾಡಿತ್ತು. ಆದರೆ ನವವಸಾಹತುಶಾಹಿಯ ಪರಿಣಾಮ ಇನ್ನೂ ಗಂಭೀರ. ಇದು ನಮ್ಮನ್ನು ಅಸಹಾಯಕರನ್ನಾಗಿ ಮಾತ್ರವಲ್ಲ, ತೀರಾ ಅಶಕ್ತರನ್ನಾಗಿ ಮಾಡುವಂಥ ಪ್ರವೃತ್ತಿಯುಳ್ಳದ್ದು"[೨೩] ಇದರ ಎಚ್ಚರಿಕೆಯಲ್ಲಿ ಇವತ್ತಿನ ವಿಮರ್ಶೆ ರಚನೆಯಾಗಬೇಕಾದ ಅನಿವಾರ್ಯತೆಯನ್ನು ಈ ಹೇಳಿಕೆ ದೃಢೀಕರಿಸುತ್ತದೆ.

ಇವತ್ತಿನ ವಿಮರ್ಶೆಯ ಮತ್ತೊಂದು ಪ್ರವೃತ್ತಿಯಾಗಿ ಸೀಮಾತೀತ ವಿಮರ್ಶೆಯು ಕಾಣಿಸಿಕೊಂಡಿದ್ದು, ಇದು ದಲಿತ ವಿಮರ್ಶೆಯ ಮತ್ತೊಂದು ಚೌಕಟ್ಟಾಗಿದ್ದು ಅಂಬೇಡ್ಕರ್‌ವಾದವನ್ನು ಹೆಚ್ಚಾಗಿ ಅವಲಂಬಿಸಿದೆ. "ನವೋದಯದ್ದು ರಸವಿಮರ್ಶೆ. ಅದರ ವಿಮರ್ಶೆಯಲ್ಲಿ ಪರಿಚಯಾತ್ಮಕತೆ ಹೆಚ್ಚಾಗಿತ್ತು.. ನವ್ಯದ ಸಂದರ್ಭದಲ್ಲಿ ನಿಜವಾದ ವಿಮರ್ಶಾ ಶಕ್ತಿ ಕಾಣಿಸಿಕೊಂಡಿತು. ಆದರೆ ಇದು ಪಶ್ಚಿಮದ ಎರವಲಾಗಿತ್ತು. ಆದರೆ ದಲಿತ ಬಂಡಾಯ ಸಾಹಿತ್ಯಗಳಲ್ಲಿ ವಿದ್ಯುತ್ ಸಂಚಾರ ರೀತಿಯ ವಿಮರ್ಶೆ ನಡೆಯಿತು. ಬಂಡಾಯದ ಸಾಹಿತ್ಯಿಕ ವಿಮರ್ಶೆ ರಹಮತ್, ಆರ್. ಕೆ. ಮಣಿಪಾಲ್, ಡಿ. ಆರ್. ನಾಗರಾಜ್ ಪುರುಷೋತ್ತಮ ಬಿಳಿಮಲೆ ಮೊದಲಾದವರು ಬಾಹ್ಯ ಮಾನದಂಡಗಳನ್ನು ಅನುಸರಿಸಿ ವಿಮರ್ಶೆ ಮಾಡಿದರು. ಅಂದರೆ ಬಂಡಾಯ ವಿಮರ್ಶೆ ಮಾರ್ಕ್ಸ್‌ವಾದಿ ಮತ್ತು ಸಮಾಜವಾದಿ ಚಿಂತನೆಗಳನ್ನು ನೆಚ್ಚಿಕೊಂಡಿತು ಆದರೆ ಬೆಳೆಯಲಿಲ್ಲ. ಆದರೆ ದಲಿತ ಮತ್ತು ಸ್ತ್ರೀವಾದಿಗಳು ಒರಿಜಿನಲ್ಲಾಗಿ ಅಂಬೇಡ್ಕರ್ ಚಿಂತನೆಯನ್ನು ಆಶ್ರಯಿಸಿದರು. ಮಾರ್ಕ್ಸ್

ಮತ್ತು ಲೋಹಿಯಾ ಬಿಟ್ಟು ನಿಚ್ಚಳವಾಗಿ ಇಂದು ಅಂಬೇಡ್ಕರ್‌ವಾದ ಹಿಡಿದಿರೋದು ದಲಿತ-ಸೀಮಾತೀತ ವಿಮರ್ಶೆ. ಕನ್ನಡ ಸಾಹಿತ್ಯ ಬೂಸಾ ಎಂಬುದು ಸೀಮಾತೀತ ವಿಮರ್ಶೆಗೆ ಬುನಾದಿ"[೨೪] ಎನ್ನುತ್ತಾರೆ, ಸೀಮಾತೀತ ವಿಮರ್ಶಾ ಸಂಪುಟಗಳ ಸಂಪಾದಕರಾದ ಮಾಲಗತ್ತಿಯವರು.

ಸಮಕಾಲೀನ ವಿಮರ್ಶಾ ಪ್ರವೃತ್ತಿಗೆ ಬಂದರೆ ಎರಡು ರೀತಿಯ ಬೆಳವಣಿಗೆಗಳನ್ನು ಗಮನಿಸಬಹುದು. ಉತ್ತಮ ಸಾಹಿತ್ಯವನ್ನು ಓದುಗರಿಗೆ ಹೇಗೆ ಆಪ್ತ ಮಾಡಬಹುದು, ಇದಕ್ಕೆ ಬೇಕಾದ ವಿಮರ್ಶಾ ಬರವಣಿಗೆ, ಪುಸ್ತಕ ಸಮೀಕ್ಷೆಗಳ ಮಾದರಿ ಯಾವುದು, ಸಮೂಹ ಮಾಧ್ಯಮಗಳ ಪ್ರಭಾವ ಮತ್ತು ವ್ಯಾಪ್ತಿಯನ್ನು ಇದಕ್ಕಾಗಿ ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ಕ್ರಿಯಾಶೀಲ ಆಲೋಚನೆಗಳು ಕಡಿಮೆ. "ಸಮೂಹ ಮಾಧ್ಯಮಗಳಲ್ಲಿ ಬರೆಯುವ ಅವಕಾಶ ಸಿಕ್ಕಾಗಲೆಲ್ಲ ವಿಶಾಲ ಓದುಗ ವರ್ಗವನ್ನು ಗಮನಿಸದೆ, ಅವರ ವಿವೇಚನಾಶಕ್ತಿಯನ್ನು ಗೌರವಿಸದೆ, ತಮ್ಮ ತಮ್ಮ ಒಲವು, ಪೂರ್ವಗ್ರಹ ಮತ್ತು ಸ್ವಪ್ರತಿಷ್ಠೆಗಳನ್ನು ಓದುಗರ ಮೇಲೆ ಹೇರುವ ಸಮೀಕ್ಷಕರು ವಿಮರ್ಶಕರಿಂದ ಓದುಗ ಸಂಸ್ಕೃತಿಗೂ, ಸಾಹಿತ್ಯ ವಿಮರ್ಶೆಗೂ ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ. ಈ ಸ್ತರದ ಸಮೀಕ್ಷೆ-ವಿಮರ್ಶೆಗಳಿಂದ ದೂರ ಉಳಿಯುವ ಮಡಿವಂತ ವಿಮರ್ಶಕರಿಂದಲೂ ಓದುಗ ಸಂಸ್ಕೃತಿಗೆ ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ."[೨೫] ಆದ್ದರಿಂದಲೇ ಇಂದು ಸಾಹಿತ್ಯಕ್ಕೆ ವಿಮರ್ಶೆಯ ಅಗತ್ಯವಿಲ್ಲ ಎನ್ನುವ ಓದುಗ ವರ್ಗ ಮತ್ತು ಸಾಹಿತಿಗಳ ವರ್ಗಗಳೆರಡೂ ಉದಯಿಸುತ್ತಿವೆ.

ಒಟ್ಟಾರೆ ಎಲ್ಲಾ ವಿಮರ್ಶಾ ಪ್ರವೃತ್ತಿಗಳನ್ನು ಪರಿಶೀಲಿಸಿದಾಗ ನಿಜವಾದ ವಿಮರ್ಶೆಯೆನ್ನುವುದು ತತ್ವ, ಪಂಥಗಳನ್ನು ಹಿನ್ನೆಲೆಯಾಗಿಟ್ಟುಕೊಳ್ಳುವುದಕ್ಕಿಂತ ಮುಖ್ಯವಾಗಿ ಸಮಕಾಲೀನ ಸಮಾಜ ಮತ್ತು ಜನರಿಗೆ ಉತ್ತರದಾಯಿತ್ವವಾಗಿರಬೇಕಾಗುತ್ತದೆ. ತೇಜಸ್ವಿಯವರು ಅಭಿಪ್ರಾಯ ಪಡುವಂತೆ, "ಒಂದು ವಿಮರ್ಶೆ ಮೂಲಭೂತವಾಗಿ ಶ್ರೇಷ್ಠವಾಗುವುದು ಅದರ ತತ್ವ ವಿಮರ್ಶೆಯಿಂದಲೂ ಅಲ್ಲ ಅಥವಾ ಕೃತಿನಿಷ್ಠ ವಿಮರ್ಶೆಯಿಂದಲೂ ಅಲ್ಲ. ತನ್ನ ಭಾಷೆ ಮತ್ತು ಜನಾಂಗದ ಬಗ್ಗೆ ತನಗಿರಬೇಕಾದ ನೈತಿಕ ಹೊಣೆಗಾರಿಕೆಯನ್ನು ತಿಳಿದಾಗ ಮಾತ್ರ ಸಾಧ್ಯ. ಇದಿಲ್ಲದ ಹುಳ್ಳ ಮನಸ್ಸು ಕೃತಿನಿಷ್ಠ ವಿಮರ್ಶೆ ಮಾಡಿದರೂ ತತ್ವ ವಿಮರ್ಶೆ ಮಾಡಿದರೂ ತನ್ನ ಮೌಲ್ಯಮಾಪನದ, ಅಳತೆಗೋಲಿನ ಉದ್ದಗಲಗಳನ್ನು ನಿರಂತರ ಬದಲಾಯಿಸುತ್ತಾ ಇರುತ್ತದೆ".[೨೬] ಅಂತಹ ವಿಮರ್ಶೆ ಮಾತ್ರ ಎಲ್ಲಾ ಕಾಲದಲ್ಲಿಯೂ ಮಾನ್ಯವಾಗಲು ಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು

೧. ಕುವೆಂಪು, ಮಲೆಗಳಲ್ಲಿ ಮದುಮಗಳು, ಕುವೆಂಪು ರಾಷ್ಟ್ರೀಯ ಪ್ರತಿಷ್ಠಾನ, ಕುಪ್ಪಳಿ, ೨೦೧೧, ಮುನ್ನುಡಿ
೨. ರಹಮತ್ ತರೀಕೆರೆ, ಕನ್ನಡ ಸಾಹಿತ್ಯ ವಾಗ್ವಾದಗಳು, ೨೦೧೨ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ – ೧೨
೩. ಕಲ್ಬುರ್ಗಿ ಎಂ. ಎಂ., ಖರೆಖರೆ ಸಂಗ್ಯಾಬಾಳ್ಯಾ, ಮುನ್ನುಡಿ, ಧಾರವಾಡ ೨೦೦೫
೪. ನಾಗಭೂಷಣ ಡಿ. ಎಸ್., ದೇಶಕಾಲ ವಾಗ್ವಾದ ಲಡಾಯಿ ಪ್ರಕಾಶನ ೦೩–೦೬–೨೦೧೧
೫. ಸತ್ಯನಾರಾಯಣ ಕೆ., ಎತ್ತ ಸಾಗುತ್ತಿದೆ ಕನ್ನಡ ಬೌದ್ಧಿಕ ಜಗತ್ತು, ೧೧–೦೨–೨೦೧೭, ನಿಲುಮೆ
೬. ಕೆ. ವಿ. ಸುಬ್ಬಣ್ಣ, ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧, ಪುಟ – ೧೫
೭. ನರಹಳ್ಳಿ ಬಾಲಸುಬ್ರಹ್ಮಣ್ಯ, ವಾಗ್ವಾದ ಪರಂಪರೆಯ ವಾರಸುದಾರರು ನಾವು, ಪ್ರಜಾವಾಣಿ ದೇಶಕಾಲ ಸಾಹಿತ್ಯ ಪುರವಣಿ, ೦೩.೦೩.೨೦೧೩
೮. ನಟರಾಜ್ ಹುಳಿಯಾರ್, ಗಾಳಿಬೆಳಕು, ಪಲ್ಲವ ಪ್ರಕಾಶನ, ಚನ್ನಪಟ್ಟನ, ೨೦೧೧, ಪುಟ – ೫೭
೯. ಬಸವರಾಜ್ ಜಿ. ಪಿ., ಸಾಹಿತ್ಯ ಪತ್ರಿಕೆಗಳು, ಅವಧಿ ಡಾಟ್‌ಕಾಮ್ ೦೭–೧೧–೨೦೧೨
೧೦.ರವಿಕುಮಾರ ನೀಹ, ನೆರಳಿಲ್ಲದ ಕಾಯ, ಕಿಟಕಿ ಪ್ರಕಾಶನ, ಮೈಸೂರು ೨೦೧೩, ಪುಟ ೫೫
೧೧. ಪ್ರಸಾದಸ್ವಾಮಿ, ನಿರ್ವಚನ, ನನ್ನ ಮಾತು, ಲಡಾಯಿ ಪ್ರಕಾಶನ, ೨೦೧೫, ಮುನ್ನುಡಿ.
೧೨.ಸುರೇಶ ನಾಗಲಮಡಿಕೆ ಎನ್. ಸಾಹಿತ್ಯ ವಿಮರ್ಶೆ; ಇಂದಿನ ದಿಕ್ಕು ದೆಸೆಗಳು (ಮೆಕ್ಕಲು, ಸಂ. ಲಕ್ಷ್ಮಣ ಕೊಡಸೆ, ಎಚ್. ದಂಡಪ್ಪ) ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೭ ಪುಟ –೧೧೩
೧೩.ಡಿ ಎಸ್ ನಾಗಭೂಷಣ, ರೂಪರೂಪಗಳನು ದಾಟಿ ಮುನ್ನುಡಿ, ನೆಲಮನೆ ಪ್ರಕಾಶನ, ೨೦೧೩, ಪುಟ – ೧೮
೧೪.ವೆಂಕಟಗಿರಿ ದಳವಾಯಿ, ನೆನಕೆಯೊಂದಿಗೆ, ನಾನು ನೀನು ಆನು, ಪಲ್ಲವ ಪ್ರಕಾಶನ, ೨೦೧೨, ಮುನ್ನುಡಿ,
೧೫. ರಾಮಲಿಂಗಪ್ಪ ಟಿ. ಬೇಗೂರು, ಮಾರ್ಗಾಂತರ, ಸಪ್ನ ಬುಕ್ ಹೌಸ್. ೨೦೧೩. ಮುನ್ನುಡಿ
೧೬.ಡಿ. ಎಸ್. ನಾಗಭೂಷಣ, ರೂಪರೂಪಗಳನು ದಾಟಿ, ಸಮಗ್ರ ವಿಮರ್ಶೆ ಸಂಪುಟ, ನೆಲಮನೆ ಪ್ರಕಾಶನ, ೨೦೧೩, ಪುಟ–೫೬೫

೧೭.ಜಿ. ಬಿ. ಹರೀಶ್, ಕನ್ನಡ ವಿಮರ್ಶೆಯ ನಿಜವಾದ ಸಮಸ್ಯೆ ಏನು? ಚುಕ್ಕು ಬುಕ್ಕು, ೧೫-೦೫-೨೦೧೪

೧೮.ಅದೇ,

೧೯.ರಹಮತ್ ತರೀಕೆರೆ, ಹೊಸ ತಲೆಮಾರಿನ ತಲ್ಲಣ, ಪ್ರಸಾರಂಗ, ಕನ್ನಡ ಹಂಪಿ, ೨೦೦೮ ಪುಟ – ೧೭೧

೨೦.ಚಂದ್ರಶೇಖರ ನಂಗಲಿ, ಈಗಳೇ ಸಾಧ್ಯ, ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ, ಬೆಂಗಳೂರು, ೨೦೧೦, ಪುಟ – 65

೨೧.ರಹಮತ್ ತರೀಕೆರೆ, ಹೊಸ ತಲೆಮಾರಿನ ತಲ್ಲಣ, ಪ್ರಸಾರಂಗ, ಕನ್ನಡ ಹಂಪಿ, ೨೦೦೮ ಪುಟ – ೧೭೨

೨೨.ನಟರಾಜ್ ಹುಳಿಯಾರ್, ಗಾಳಿಬೆಳಕು, ಪಲ್ಲವ ಪ್ರಕಾಶನ, ಚನ್ನಪಟ್ಟನ, ೨೦೧೧, ಪುಟ – ೧೦೧

೨೩.ವಿಠ್ಠಲರಾವ್ ಟಿ. ಗಾಯಕ್ವಾಡ್, ಇಂದಿನ ಕನ್ನಡ ವಿಮರ್ಶೆ, ಶೋಧ ಪರಿಶೋಧ, ಜುಲೈ ೨೦೧೨, ಪುಟ – ೩೨

೨೪.ಅರವಿಂದ ಮಾಲಗತ್ತಿ, ಸೀಮಾತೀತ ವಿಮರ್ಶೆ ಸಂಪುಟಗಳ ಬಿಡುಗಡೆ ಸಂದರ್ಭದಲ್ಲಿ ಆಡಿದ ಮಾತುಗಳು, ಮೈಸೂರು ೧೪-೦೭-೨೦೧೩

೨೫.ಕೆ. ಸತ್ಯನಾರಾಯಣ, ಒಳ ಕಥನ: ವಿಮರ್ಶೆಯೆಂಬುದು ಸಾಹಿತ್ಯದ ಆತ್ಮಜ್ಞಾನ ೨೫-೦೬-೨೦೧೭, ವಿಜಯಕರ್ನಾಟಕ

೨೬.ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಾಕಾಶನ, ಮೈಸೂರು, ೨೦೦೮. ಪು – ೧೮೫

ಅಧ್ಯಾಯ – ಆರು

ಕನ್ನಡ ವಿಮರ್ಶೆಯ ಪ್ರವೃತ್ತಿಗಳು : ಭಿನ್ನ ತಲೆಮಾರುಗಳ ನಡುವೆ

ಇಪ್ಪತ್ತೊಂದನೇ ಶತಮಾನದಲ್ಲಿ ವಿಜ್ಞಾನ ತಂತ್ರಜ್ಞಾನಗಳು ಅಪಾರ ಅಭಿವೃದ್ಧಿಯನ್ನು ಸಾಧಿಸಿವೆ. ಇವು ಏಕಕಾಲಕ್ಕೆ ಜನಸಾಮಾನ್ಯರಲ್ಲಿ ಭಯ ಮತ್ತು ಬೆರಗು ಎರಡನ್ನೂ ಮೂಡಿಸಿವೆ. ದೃಶ್ಯ ಮಾದ್ಯಮ ಸೇರಿದಂತೆ ವಿವಿಧ ಮಾದ್ಯಮಗಳು ಮನುಷ್ಯನ ಬದುಕಿನ ಮೇಲೆ ವಿಚಿತ್ರ ಪರಿಣಾಮಗಳನ್ನು ಉಂಟು ಮಡುತ್ತಿವೆ. ಶಿಕ್ಷಣ ಕ್ಷೇತ್ರದಲ್ಲಿ ಮಾನವಿಕ ವಿಭಾಗಗಳು ಕಳೆಗುಂದಿದಂತೆ ಕಾಣುತ್ತಿವೆ. ಆದರೂ ವಿಜ್ಞಾನ, ತಂತ್ರಜ್ಞಾನಗಳ ಹೊಸ ಹೊಸ ಆವಿಷ್ಕಾರಗಳ ನಡುವೆ ಲಲಿತ ಕಲೆಗಳು, ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯಗಳು ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಪುನರ್ ಸೃಷ್ಟಿಗೊಳ್ಳುತ್ತ ಹೊಸ ರಕ್ತ ಸಂಚಾರವನ್ನು ಪಡೆಯುತ್ತಿವೆ. ಸಾಹಿತ್ಯಾಧ್ಯಯನವೂ ಇದರ ಪಲಾನುಭವಿಯಾಗುವ ಹಾದಿಯಲ್ಲಿದೆ.

ಸಮೃದ್ಧ ಸಾಹಿತ್ಯ ಪರಂಪರೆಯಿರುವ ಕನ್ನಡದಲ್ಲಿ ಅಪಾರ ಪ್ರಮಾಣದ ಪ್ರಾಚೀನ ಸಾಹಿತ್ಯ ಇರುವುದಾದರೂ ಅದರ ಓದು ಮತ್ತು ಚಿಂತನೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಇಂದು ಹೆಚ್ಚಾಗಿ ಶೈಕ್ಷಣಿಕ ವಲಯದಲ್ಲಿ ಪಠ್ಯದ ಭಾಗವಾಗಿ ಅದು ಚಾಲ್ತಿಯಲ್ಲಿದೆಯಾದರೂ ಪ್ರಾಚೀನ ಸಾಹಿತ್ಯದ ನಿಯಮದ ಅನುಸಂಧಾನ ಗಂಭೀರವಾಗಿ ನಡೆಯುತ್ತಿಲ್ಲ. ನಮ್ಮ ಬಹುತೇಕ ಅಭಿಪ್ರಾಯಗಳು ಈಗಾಗಲೇ ನಾವು ಹಳಗನ್ನಡ ಪಂಡಿತರು ರೂಪಿಸಿಕೊಟ್ಟಿರುವ ಮಾದರಿಗಳನ್ನೇ ಅವಲಂಬಿಸಿದೆ. ಇಂತಹ ಸಂದರ್ಭದಲ್ಲಿ ಸಂಸ್ಕೃತಿ ವಿಮರ್ಶೆಯ ನೆಪದಲ್ಲಿ ಹಳಗನ್ನಡ ಕೃತಿಗಳ ಅಧ್ಯಯನ ನಡೆಯುತ್ತಿರುವುದು ಉತ್ತಮ ಬೆಳವಣಿಗೆ ಆಗಿದೆ.

ಇಪ್ಪತ್ತೊಂದನೆ ಶತಮಾನದಲ್ಲಿ ಸಾಹಿತ್ಯ, ಪರಂಪರೆ, ಸಂಸ್ಕೃತಿ, ಚರಿತ್ರೆ ಮೊದಲಾದ ಪರಿಕಲ್ಪನೆಗಳಿಗೆ ಇದ್ದ ಅರ್ಥ ಬದಲಾಗಿದೆ, ವಿಸ್ತಾರವಾಗಿದೆ. ಇವೆಲ್ಲವನ್ನು ಈಗ 'ರಚನೆ'ಗಳು ಎಂಬುದಾಗಿ ಗ್ರಹಿಸಲಾಗುತ್ತಿದೆ. ಈ ದಿಶೆಯಲ್ಲಿ ಸಾಹಿತ್ಯವೂ ಈ ಪರಿಕಲ್ಪನೆಗಳ ಹಾಗೆ ಅರ್ಥ ವಿಸ್ತಾರವನ್ನು ಪಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಶಿಷ್ಟ, ಜನಪದ, ಧಾರ್ಮಿಕ ಕೃತಿಗಳೆಲ್ಲವನ್ನು ಅವು 'ಭಾಷಿಕ ರಚನೆ'ಗಳು ಎಂದು ಗ್ರಹಿಸಿ ಅಧ್ಯಯನ ಮಾಡುವ ಪರಿಪಾಠ ಬೆಳೆಯುತ್ತಿದೆ.

ಯಾವುದೇ ಭಾಷೆಯ ಸಾಹಿತ್ಯವೊಂದರ ಅಧ್ಯಯನ, ವಿವರಣೆ, ವಿಶ್ಲೇಷಣೆ ಮತ್ತು ಮೌಲ್ಯಮಾಪನದ ರೂಪದಲ್ಲಿ ಕಾಣಿಸಿಕೊಳ್ಳುವ ವಿಮರ್ಶೆಯು ಆಯಾ ಭಾಷೆಯ ಸಾಹಿತ್ಯದ ಸ್ಥಿತಿಗತಿ ಮತ್ತು ಆ ಸಮಾಜದ ಸ್ವಾಸ್ಥ್ಯಕ್ಕೆ ಕನ್ನಡಿ ಹಿಡಿಯುವ ಕೆಲಸ

ಮಾಡುತ್ತದೆ. ಇಂತಹ ವಿಮರ್ಶೆಯ ಅಧ್ಯಯನ ಸಾಹಿತ್ಯದ ಗುಣಮಟ್ಟ – ಸ್ಥಾನಗಳನ್ನು ನಿರ್ದೇಶಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

ವೈಚಾರಿಕ ತಳಹದಿಯನ್ನು ಹೊಂದಿರುವ ವಿಮರ್ಶೆಯು ಸದಾ ಶಾಶ್ವತ ಎನ್ನುವ ಒಂದೇ ಸಿದ್ಧಾಂತದಲ್ಲಿ ನಿರೂಪಣೆಗೊಳ್ಳುತ್ತದೆ ಎನ್ನಲಾಗುವುದಿಲ್ಲ. ವರ್ಷದಿಂದ ವರ್ಷಕ್ಕೆ ಹೊಸ ರೀತಿಯ ವಿಮರ್ಶೆ ಸಿದ್ಧಾಂತಗಳ ತಾತ್ವಿಕತೆಗಳು ಚಲಾವಣೆಗೆ ಬರುತ್ತಲೇ ಇವೆ. ವಿಮರ್ಶಕನ ಮನೋಧರ್ಮ, ಬದುಕಿನ ಹಿನ್ನೆಲೆ ಮೊದಲಾದವು ಕೂಡ ವಿಮರ್ಶಾ ಸಿದ್ಧಾಂತಗಳ ಮೇಲೆ ಪ್ರಭಾವ ಬೀರುತ್ತಿರುತ್ತವೆ.

ಕನ್ನಡ ವಿಮರ್ಶೆ ಇಂದು ಪಡೆದುಕೊಂಡಿರುವ ವೈವಿಧ್ಯಮಯ ಲಕ್ಷಣಗಳನ್ನು, ಭಿನ್ನ ಭಿನ್ನ ಪ್ರವೃತ್ತಿಗಳನ್ನು ಗ್ರಹಿಸಲು ಕಳೆದ ದಶಕದಲ್ಲಿ ಪ್ರಕಟಗೊಂಡಿರುವ ವಿಮರ್ಶಾ ಲೇಖನಗಳು ಮತ್ತು ಕೃತಿಗಳನ್ನು ಪರಿಶೀಲಿಸಲು ಈ ಅಧ್ಯಾಯದಲ್ಲಿ ಉದ್ದೇಶಿಸಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಮತ್ತು ವಿಮರ್ಶೆಯಲ್ಲಾಗಿರುವ ಪಲ್ಲಟಗಳ ಶೋಧಕ್ಕಾಗಿ ಕಳೆದ ದಶಕದಲ್ಲಿ ಬಂದಿರುವ ಹಿರಿಯ ತಲೆಮಾರಿನ ವಿಮರ್ಶಕರ ಬರಹಗಳನ್ನು ಮೊದಲು ಅಧ್ಯಯನ ಮಾಡಿ ನಂತರ ಹೊಸ ತಲೆಮಾರಿನ ವಿಮರ್ಶಕರ ಬರಹಗಳನ್ನು ಪರಿಶೀಲಿಸಲು ಉದ್ದೇಶಿಸಲಾಗಿದೆ. ನಂತರ ಎರಡೂ ತಲೆಮಾರಿನ ವಿಮರ್ಶೆಯ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಚರ್ಚಿಸಲಾಗುವುದು.

ಅಧ್ಯಯನಕ್ಕೆ ಪೂರಕವಾಗಿ ಭಿನ್ನ ತಲೆಮಾರುಗಳ ನಡುವಿನ ಕನ್ನಡ ವಿಮರ್ಶೆಯ ಪ್ರವೃತ್ತಿಗಳನ್ನು ಕಂಡುಕೊಳ್ಳುವ ಸಲುವಾಗಿ ಕಳೆದ ದಶಕದಲ್ಲಿ ತುಂಬ ಸಕ್ರಿಯವಾಗಿದ್ದ, ಪ್ರಮುಖ ಹತ್ತು ವಿಮರ್ಶಕರನ್ನು ಇಲ್ಲಿ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ವಿಮರ್ಶೆ ವಿಸ್ತಾರ ಮತ್ತು ವೈವಿಧ್ಯತೆಗಾಗಿ ಯು. ಆರ್. ಅನಂತಮೂರ್ತಿಯವರನ್ನೂ, ವಿಮರ್ಶೆಯನ್ನು ವ್ರತನಿಷ್ಠತೆಯಿಂದ ಅನುಸರಿಸಿಕೊಂಡು ಬಂದದ್ದಾಕ್ಕಾಗಿ ಜಿ. ಎಸ್. ಆಮೂರ ಅವರನ್ನೂ, ಕಳೆದ ಐದು ದಶಕದಗಳಿಂದ ವಿಮರ್ಶೆ ಬರೆಯುತ್ತಿದ್ದರೂ ದಲಿತ, ಬಂಡಾಯ, ಸ್ತ್ರೀವಾದಿ ವಿಮರ್ಶೆಗಳಿಂದ ಹೆಚ್ಚಾಗಿ ಪ್ರಭಾವಿತವಾಗದೇ ತಮ್ಮದೇ ವಿಮರ್ಶಾ ವಿಧಾನಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವುದಕ್ಕಾಗಿ ಗಿರಡ್ಡಿ ಗೋವಿಂದರಾಜ ಅವರನ್ನೂ, ನವ್ಯದಿಂದ ಸಮಕಾಲೀನ ಸಂದರ್ಭದವರೆವಿಗೂ ಕನ್ನಡ ವಿಮರ್ಶೆಯ ಪರಿಳಿತಗಳಲ್ಲಿ ನಿಕಟವಾಗಿ ತೊಡಗಿಸಿಕೊಂಡಿರುವ, ಕನ್ನಡ ವಿಮರ್ಶೆಯಂತೆಯೇ ತನ್ನ ವಿಮರ್ಶೆಯನ್ನೂ ಕಾಲಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಬಂದ ಎಚ್. ಎಸ್. ರಾಘವೇಂದ್ರರಾವ್ ಅವರನ್ನೂ, ಕನ್ನಡ ವಿಮರ್ಶೆಯನ್ನು ಆಧುನಿಕೋತ್ತರ ಚಿಂತನೆಗಳ ಜೊತೆ ಅನುಸಂಧಾನ ಮಾಡುತ್ತಿರುವ ಕಾರಣಕ್ಕಾಗಿ ರಾಜೇಂದ್ರ ಚೆನ್ನಿಯವರನ್ನೂ ಅಧ್ಯಯನ ಮಾಡಲಾಗಿದೆ.

ಮುಂದುವರೆದು, ಕನ್ನಡ ವಿಮರ್ಶೆಯನ್ನು ಸಮರ್ಥ ಸೃಜನಶೀಲ ಪ್ರಕಾರವೆಂಬಂತೆ ಸ್ವೋಪಜ್ಞವಾದ ವಿಮರ್ಶೆ ರಚಿಸುತ್ತಿರುವ ರಹಮತ್

ತರೀಕೆರೆಯವರನ್ನೂ, ಕನ್ನಡದಲ್ಲಿ ಸ್ತ್ರೀವಾದಿ ವಿಮರ್ಶೆಯನ್ನು ಆರಂಭಿಸಿದ ಮುಖ್ಯ ವಿಮರ್ಶಕರಲ್ಲಿ ಒಬ್ಬರಾದ ಬಿ. ಎನ್. ಸುಮಿತ್ರಾಬಾಯಿಯವರನ್ನು, ಸಾಂಪ್ರದಾಯಿಕವಾದ ಸ್ತ್ರೀವಾದಿ ವಿಮರ್ಶೆಗಾಗಿ ಇಲ್ಲಿ ಗಮನಿಸಿದ್ದು, ಅದರ ಮುಂದುವರಿಕೆ ಮತ್ತು ವಿಸ್ತೃತತೆಗಾಗಿ ಎಮ್. ಎಸ್. ಆಶಾದೇವಿಯವರ ವಿಮರ್ಶೆಯನ್ನು ಅಧ್ಯಯನ ಮಾಡಲಾಗಿದೆ. ಮುಖ್ಯವಾಗಿ ಕಳೆದ ದಶಕದಲ್ಲಿ ವಿಮರ್ಶೆ ಆರಂಭಿಸಿದ ವಿನಯಾ ಒಕ್ಕುಂದ ಮತ್ತು ತಾರಿಣಿ ಶುಭದಾಯಿನಿಯವರನ್ನು ಇವತ್ತಿನ ರೂಪಾಂತರಗೊಂಡ ಸ್ತ್ರೀವಾದಿ ಅಧ್ಯಯನಕ್ಕೆ ಪೂರಕವಾಗಿ ಗ್ರಹಿಸಿದ್ದರೆ, ವಿವಿಧ ಸಾಮಾಜಿಕ ಸ್ತರಗಳಿಂದ ಸಾಹಿತ್ಯ ಅಧ್ಯಯನ ಮಾಡುತ್ತಿರುವ ಕಳೆದ ದಶಕದ ಹೊಸ ತಲೆಮಾರಿನ ರಂಗನಾಥ ಕಂಟನಕುಂಟೆ, ಸುರೇಶ ನಾಗಲಮಡಿಕೆ, ಎಮ್. ಡಿ. ಒಕ್ಕುಂದ, ಜಿ. ಬಿ. ಹರೀಶ ಅವರನ್ನು ಗ್ರಹಿಸಲಾಗಿದೆ.

ಒಟ್ಟಾರೆ ಕಳೆದ ದಶಕದ ಕನ್ನಡ ವಿಮರ್ಶೆಯ ಪ್ರವೃತ್ತಿಗಳು ಭಿನ್ನ ತಲೆಮಾರುಗಳ ನಡುವೆ ಹೇಗೆ ಮೂಡಿಬಂದಿವೆ ಎಂಬುದನ್ನು ಕಂಡುಕೊಳ್ಳಲು ಈ ಮೇಲಿನ ವಿಮರ್ಶಕರನ್ನು ಬಿಡಿಬಿಡಿಯಾಗಿ ಮತ್ತು ಇಡಿಯಾಗಿ ಅಧ್ಯಯನ ಮಾಡಲಾಗಿದೆ. ಆದರೆ ಈ ಅಧ್ಯಾಯದಲ್ಲಿ ಮೇಲ್ಕಂಡ ವಿಮರ್ಶಕರಲ್ಲದೆ ಸಂದರ್ಭಕ್ಕನುಸಾರವಾಗಿ ಇನ್ನುಳಿದ ವಿಮರ್ಶಕರ ನಿಲುವುಗಳನ್ನು ಕುರಿತು ಪ್ರಾಸಂಗಿಕವಾಗಿ ವಿಚಾರ ಮಾಡಲಾಗಿದೆ.

ಯು. ಆರ್. ಅನಂತಮೂರ್ತಿ

ಕಳೆದ ದಶಕದಲ್ಲಿ ಕನ್ನಡ ಸಾಹಿತ್ಯ ವಿಮರ್ಶಾ ಕ್ಷೇತ್ರದಲ್ಲಿ ಹೆಚ್ಚು ಸಕ್ರಿಯವಾಗಿದ್ದ ಅನಂತಮೂರ್ತಿಯವರು, ಅಡಿಗರ ಭೂಮಿಗೀತ ಕವನ ಸಂಕಲನಕ್ಕೆ ಬರೆದ ಮುನ್ನುಡಿಯಿಂದ ಕನ್ನಡದ ಒಬ್ಬ ಮುಖ್ಯ ಕೃತಿನಿಷ್ಠ ವಿಮರ್ಶಕರಾಗಿ ಹೊರಹೊಮ್ಮಿದರು. ನವೋದಯದ ಸಹೃದಯ ವಿಮರ್ಶೆಗೆ ಪ್ರತಿಯಾಗಿ ಕೃತಿನಿಷ್ಠ ವಿಮರ್ಶೆ ಹಾಗೂ ಅನುಭವನಿಷ್ಠ ವಿಮರ್ಶಾ ಪರಿಕಲ್ಪನೆಗಳನ್ನು ಬಳಸಿಕೊಂಡು ವಿಮರ್ಶೆಯೂ ಸೃಜನಶೀಲ ಸಾಹಿತ್ಯದಷ್ಟು ಗಂಭೀರವಾದುದು ಎಂದು ಪ್ರತಿಪಾದಿಸಿದರು. ಸಾಹಿತ್ಯದಲ್ಲಿ ಬ್ರಾಹ್ಮಣ-ಶೂದ್ರ, ಭಾರತೀಯ ಸಾಹಿತ್ಯದಲ್ಲಿ ಜಗಲಿ-ಹಿತ್ತಲು ಮುಂತಾದ ಸಂಕೇತಗಳನ್ನು ವಿಮರ್ಶಾ ಪರಿಕಲ್ಪನೆಗಳಾಗಿ ಮಾಡಿಕೊಂಡ ಅನಂತಮೂರ್ತಿಯವರು, ಸಾಹಿತ್ಯದಲ್ಲಿ ಅನುಭವವು ವೈಚಾರಿಕ ಮುಖಾಮುಖಿಯಲ್ಲಿ ಶೋಧಗೊಂಡು ಸತ್ವಯುತವಾಗಬೇಕೆಂದು ಅಪೇಕ್ಷಿಸುತ್ತಿದ್ದರು.

೧೯೮೦ರ ನಂತರ ದಲಿತ-ಬಂಡಾಯ ಮೊದಲಾದ ನವ್ಯೋತ್ತರ ಸಾಹಿತ್ಯ ಚಳುವಳಿಗಳು ಪ್ರಾಮುಖ್ಯತೆ ಪಡೆದಾಗ, ಆ ಕಾಲಘಟ್ಟದ ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕೀಯ ಎಲ್ಲಾ ನೆಲೆಗಳನ್ನು ಒಳಗೊಂಡ ಬದಲಾವಣೆಗೆ ವೈಚಾರಿಕ ಪ್ರತಿಕ್ರಿಯೆಯಂತೆ ಅನಂತಮೂರ್ತಿಯವರ ವಿಮರ್ಶೆ ರೂಪಗೊಳ್ಳತೊಡಗಿತು. ಕಳೆದ ದಶಕದಲ್ಲಿ ಸೃಜನಶೀಲ ಸಾಹಿತ್ಯಕ್ಕಿಂತ ಸೃಜನೇತರವಾದ ಬರಹವನ್ನೇ ಅನಂತಮೂರ್ತಿಯವರು ಹೆಚ್ಚಾಗಿ ಮಾಡಿದರು. ಅವರ 'ಯುಗಪಲ್ಲಟ', 'ವಾಲ್ಮೀಕಿಯ ನೆವದಲ್ಲಿ', 'ಮಾತು ಸೋತ ಭಾರತ',

'ಋಜುವಾತು', 'ಸದ್ಯ ಮತ್ತು ಶಾಶ್ವತ', 'ಕಾಲಮಾನ', 'ಆಚೀಚೆ' ಹಾಗೂ 'ರುಚಿಕರ ಕಹಿ ಸತ್ಯಗಳ ಕಾಲ' ಮೊದಲಾದ ಕೃತಿಗಳು ಅವರ ಭಾಷಣ, ಲೇಖನ, ಮುನ್ನುಡಿಗಳ ಸಂಕಲನವಾಗಿವೆ. ಇವುಗಳಾವುವೂ ಶಿಸ್ತುಬದ್ಧವಾದ ವಿಮರ್ಶೆಯ ಚೌಕಟ್ಟಿನೊಳಗೆಯೇ ರೂಪುಗೊಂಡ ಬರಹಗಳಲ್ಲ. ಬದಲಿಗೆ ವಿಮರ್ಶೆ ಇಪ್ಪತ್ತೊಂದನೇ ಶತಮಾನದಲ್ಲಿ ಪಡೆದುಕೊಂಡ ವೈವಿಧ್ಯತೆ ಮತ್ತು ಅಪಾರ ಸಾಧ್ಯತೆಗಳ ಒಂದು ನಿದರ್ಶನದಂತೆ ಕಂಡುಬರುತ್ತದೆ. "ವಿಮರ್ಶೆಯ ಒಳಗನ್ನು ಪ್ರವೇಶಿಸುತ್ತಿದ್ದಂತೆ ಇದರೊಳಗೆ ನಡೆಯುತ್ತಿರುವ ಸಂಚಲನಗಳ ಕಡೆ ನಮ್ಮ ಗಮನ ಹರಿಯುತ್ತದೆ. ವಿಮರ್ಶೆಯ ಸ್ಥಿತ್ಯಂತರಗಳು ನಿಧಾನವಾಗಿ ಬೇರೆ ಬೇರೆ ಹಂತಗಳನ್ನು ಹಾಯ್ದು ಬಂದಿದ್ದು ಈಗ ಬಹುಮುಖೀ ಅಧ್ಯಯನದತ್ತ, ಸಂಸ್ಕೃತಿ ನೆಲೆಗಳತ್ತ ಸಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಉಂಟಾದ ಸಂಚಲನಗಳು ವಿಮರ್ಶೆಯನ್ನು ಇನ್ನಷ್ಟು ನಿಷ್ಪಕ್ಷ, ವಿಸ್ತೃತ ನೆಲೆಗಳನ್ನು ಎಡತಾಕುವಂತೆ ಮಾಡುತ್ತವೆ. ಹೀಗಾಗಿ ವಿಮರ್ಶೆಯ ವ್ಯಾಪ್ತಿ, ಅಗಲ ವಿಸ್ತಾರವಾಗುತ್ತಿದೆ. ಈ ಪ್ರಕ್ರಿಯೆ ಸದ್ಯಕ್ಕೆ ಅರಾಜಕತೆ ವೈಲ್ಡರ್ ನೆಸ್ ಎಂಬಂತೆ ಕಂಡರೂ ಹೊಸ ಪರಿಕಲ್ಪನೆಗಳ ದಾರಿಯನ್ನು ತೆರೆದಿಡುವಂತದ್ದು."[೧] ಎಂಬ ಹೇಳಿಕೆಯ ಹಿನ್ನೆಲೆಯಲ್ಲಿ ಅನಂತಮೂರ್ತಿಯವರ ಬರಹದ ಹರಹನ್ನು ಗಮನಿಸಿದರೆ ಅವರ ವಿಮರ್ಶೆಯ ವೈವಿಧ್ಯತೆಯು ನಮಗೆ ಅರಿವಾಗುತ್ತದೆ.

ಆರಂಭದಲ್ಲಿ ಕೃತಿನಿಷ್ಠ ವಿಮರ್ಶಕರಾಗಿದ್ದ ಅನಂತಮೂರ್ತಿಯವರು ನಂತರ ಅನುಭವನಿಷ್ಠ ವಿಮರ್ಶಾ ವಿಧಾನಕ್ಕೆ ಹೊರಳಿದರು. 'ಕನ್ನಡ ಪರಂಪರೆ ಹಾಗೂ ನವೋದಯದ ಮುಖ್ಯ ಲೇಖಕರ ಸಂದರ್ಭಗಳಲ್ಲಿ ಪರೀಕ್ಷೆಗೆ ಒಳಗಾಗುತ್ತಿದ್ದ, ಅನಂತಮೂರ್ತಿಯವರು ಪ್ರತಿಪಾದಿಸುತ್ತಿದ್ದ 'ಅನುಭವನಿಷ್ಠ ವಿಮರ್ಶಾ ವಿಧಾನ' ನವ್ಯದ ಒಂದು ಪ್ರಮುಖ ಲಕ್ಷಣವಾಗಿದ್ದು ಸಾಹಿತ್ಯದಿಂದ ದೊರೆಯುವ ಅನುಭವ ಹಾಗೂ ಶಾಸ್ತ್ರಬದ್ಧವಾದ ತತ್ವಗಳಿಂದ ದೊರೆಯುವ ಅನುಭವಗಳಿಗೆ ಮೂಲಭೂತವಾದ ವ್ಯತ್ಯಾಸಗಳಿಲ್ಲ ಎಂಬ ತಾತ್ವಿಕತೆ ಅನಂತಮೂರ್ತಿ ಅವರ ವಿಮರ್ಶಾ ವಿಧಾನದಲ್ಲಿ ಮುಖ್ಯವಾಗಿ ಕಂಡು ಬರುತ್ತದೆ. ಸಾಹಿತ್ಯ ಕೃತಿಗಳ ಒಳಗಿನ ಅನುಭವ ಲೋಕದಷ್ಟೇ ಸಾಮಾಜಿಕ ಅನುಭವ ಲೋಕವೂ ಮುಖ್ಯ ಎಂಬ ವಿಮರ್ಶಾ ನಿಲುವನ್ನು ಅವರ ಸಾಹಿತ್ಯ ವಿಮರ್ಶೆಯ ಪರಿಕಲ್ಪನೆಗೆ ಸೇರಿಸಿತು. ನಂತರ ದಲಿತ-ಬಂಡಾಯ ಸಾಹಿತ್ಯ ಮತ್ತು ಎಡಪಂಥೀಯ ವಿಮರ್ಶೆಯ ಪ್ರಭಾವ ಕನ್ನಡದಲ್ಲಿ ಮುಖ್ಯ ಧಾರೆಗೆ ಬಂದಾಗ ಅದಕ್ಕೆ ಪ್ರತಿಕ್ರಿಯಿಸುವ ಸಂದರ್ಭದಲ್ಲಿ ಅನಂತಮೂರ್ತಿಯ ವಿಮರ್ಶೆ ಆಕೃತಿನಿಷ್ಠ ವಿಮರ್ಶೆಯಿಂದ ರೂಪಕನಿಷ್ಠ ವಿಮರ್ಶೆಯಾಗಿ ಬೆಳೆಯಿತು ಮತ್ತು ಇದು ಆ ಕಾಲದ ಸಂಸ್ಕೃತಿ ವಿಮರ್ಶೆಯ ಸ್ವರೂಪಕ್ಕೆ ಬಹಳ ಹೊಂದುವಂತಿತ್ತು.

ಅಂದರೆ, ಅನಂತಮೂರ್ತಿಯವರ ವಿಮರ್ಶೆ ಆರಂಭದಲ್ಲಿ ಕೃತಿನಿಷ್ಠ ವಿಮರ್ಶೆಯಾಗಿಯೂ, ನಂತರ ಅನುಭವನಿಷ್ಠ ವಿಮರ್ಶೆಯಾಗಿಯೂ, ತೊಂಬತ್ತರ ದಶಕದ ನಂತರ ರೂಪಕನಿಷ್ಠ ವಿಮರ್ಶೆಯಾಗಿಯೂ ಮತ್ತು ಸಂಸ್ಕೃತಿ

ವಿಮರ್ಶೆಯಾಗಿಯೂ ರೂಪಾಂತರಗೊಂಡಿತು. ಕಳೆದ ದಶಕದ ಅವರ ಕೃತಿಗಳು ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕೀಯ ನೆಲೆಗಳನ್ನು ಬದುಕಿನ ಭಾಗವಾಗಿ ಗ್ರಹಿಸಿ ಆ ಮೂಲಕ ಸಾಹಿತ್ಯವನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿತು. ಈ ಸಂದರ್ಭದಲ್ಲಿ ರೂಪಕಗಳು ಅವರ ಪರಿಕರಗಳಾಗಿ ಮತ್ತು ತಂತ್ರಗಳಾಗಿ ಬಳಕೆಯಾದವು. ತಮ್ಮ ಅಪಾರ ಓದು ಮತ್ತು ಒಳನೋಟಗಳಿಂದ ಅನೇಕ ಕೃತಿಗಳ ಅನುಭವವನ್ನು ಸಾಂದರ್ಭಿಕ ನೆನಪುಗಳೊಂದಿಗೆ ಅನುಸಂದಾನಗೊಳಿಸಿ ಕನ್ನಡ ಸಂಸ್ಕೃತಿಯ ವಿಮರ್ಶೆಯನ್ನು ರೂಪಿಸುವಲ್ಲಿ ಸಫಲರಾದರು. ಆ ಮೂಲಕ ಸಾಹಿತ್ಯ ಕೃತಿಯಲ್ಲಿ ಸಂಸ್ಕೃತಿಯ ಭಾಗವಾಗಿ ಗ್ರಹಿಸುವ ಅನುಸಂಧಾನದಲ್ಲಿ ಅವರ ವಿಮರ್ಶಾ ತಾತ್ವಿಕತೆ ರೂಪಗೊಂಡಿದೆ. ಯಾವುದೇ ಸಾಹಿತ್ಯ ಪರಂಪರೆ ಮುಂದುವರೆಯುವ ಕ್ರಮ ಇಂಥವುಗಳಿಂದಲೇ ಎನ್ನಬಹುದು.

ಅನಂತಮೂರ್ತಿಯವರ ಸಾಹಿತ್ಯ ವಿಮರ್ಶೆಯ ಮತ್ತೊಂದು ಮುಖ್ಯ ಲಕ್ಷಣವೆಂದರೆ ಅವರೊಬ್ಬ ಸೃಜನಶೀಲ ಲೇಖಕರಾಗಿಯೂ ಅಪಾರ ಮೊತ್ತದ ವಿಮರ್ಶೆಯನ್ನು ಸೃಷ್ಟಿಸಿದ್ದು. ಏಕಕಾಲಕ್ಕೆ ಕನ್ನಡದಲ್ಲಿ ಸೃಜನ ಮತ್ತು ಸೃಜನೇತರ ಪ್ರಕಾರಗಳಲ್ಲಿ ಏಕ ರೀತಿಯ ಕೃಷಿ ಮಾಡಿದವರ ಸಂಖ್ಯೆ ಕಡಿಮೆ. ಆದರೆ ಅನಂತಮೂರ್ತಿಯವರು ಎರಡೂ ಪ್ರಕಾರಗಳಲ್ಲಿ ಬಹಳ ಗಂಭೀರವಾದ ಸಾಧನೆ ಮಾಡಿದ್ದಾರೆ. ಈ ರೀತಿ ಸೃಜನ ಸಾಹಿತ್ಯ ಮತ್ತು ವಿಮರ್ಶಾ ಸಾಹಿತ್ಯ ಎರಡನ್ನೂ ಸೃಷ್ಟಿಸುವ ಲೇಖಕರ ವಿಮರ್ಶೆಯ ಮೇಲೆ ಅವರ ಸೃಜನ ಶಕ್ತಿಯ ಛಾಪು ಬೀಳುವುದರಿಂದ ಅವರ ವಿಮರ್ಶೆ ಇತರೆ ವೃತ್ತಿಪರ ವಿಮರ್ಶಕರ ವಿಮರ್ಶೆಗಿಂತ ಭಿನ್ನವಾಗಿರುತ್ತದೆ. "ಒಂದು ದೃಷ್ಟಿಯಲ್ಲಿ ಅನಂತಮೂರ್ತಿಯವರ ವಿಮರ್ಶೆಯ ಅಂತಿಮ ಗುರಿ ಅವರು ನಿರ್ಮಿಸಿರುವ ಅಥವಾ ನಿರ್ಮಿಸಲಿರುವ ಕಥಾ ಸಾಹಿತ್ಯಕ್ಕೆ ಬೇಕಾದ ವಾಚಕ ವರ್ಗವನ್ನು ನಿರ್ಮಿಸುವುದು."[3] ಎಂಬ ಅಭಿಪ್ರಾಯ ಬಹುಮಟ್ಟಿಗೆ ನಿಜವಾಗಿದೆ. ಅವರ ಸಾಹಿತ್ಯ ವಿಮರ್ಶೆಯ ಮುಖ್ಯ ಗುರಿ ತಾನು ಪ್ರತಿಪಾದಿಸುವ ವಿಚಾರಗಳನ್ನು ಸ್ವೀಕರಿಸುವ ಒಂದು ವರ್ಗವನ್ನು ಸಕಾರಣವಾಗಿ ನಿರ್ಮಿಸುವುದೇ ಆಗಿದೆ. ಕೃತಿಯೊಂದರ ಅನುಭವಕ್ಕಿಂತ ಹೆಚ್ಚು ಕೃತಿಯ ಮೂಲಕ ಮತ್ತು ಅದಕ್ಕೆ ಪೂರಕವಾಗಿ ತಾನು ಪಡೆದ ಅನುಭವವನ್ನು ವಿವರಿಸುವುದೇ ಅವರ ವಿಮರ್ಶೆಯ ಮುಖ್ಯ ಆಶಯವಾಗಿದೆ.

ಅನಂತಮೂರ್ತಿಯವರ ಅನೇಕ ವಿಮರ್ಶಾತ್ಮಕ ಬರಹಗಳು ಅವರ ಭಾಷಣ ಹಾಗೂ ಪ್ರತಿಕ್ರಿಯೆ ರೂಪದ ಬರಹಗಳಾಗಿವೆ. ಉತ್ತಮ ಮಾತುಗಾರರಾಗಿದ್ದ ಅವರ ಅನೇಕ ಮುಖ್ಯ ವಿಮರ್ಶಾ ಬರಹಗಳು ಭಾಷಣದಿಂದ ಇಳಿಸಿದ ಬರಹ ರೂಪಗಳಾಗಿವೆ. ಅವರ ಸದ್ಯೋಜಾತ ಪ್ರತಿಭೆ ಹಾಗೂ ವರ್ತಮಾನಕ್ಕೆ ನೀಡುವ ತಕ್ಷಣದ ಪ್ರತಿಕ್ರಿಯೆಗಳಿಂದಾಗಿ ಅವರ ಸಾಹಿತ್ಯ ವಿಮರ್ಶೆ ಸಮಕಾಲೀನ ಸಾಂಸ್ಕೃತಿಕ ವಿವರಗಳನ್ನು ಹೆಚ್ಚು ಒಳಗೊಂಡಿದೆ.

ಕಳೆದ ದಶಕದಲ್ಲಿ ಸೃಜನಶೀಲ ಮತ್ತು ಸೃಜನೇತರ ಎಂಬ ಭೇಧಗಳನ್ನು ಅಳಿಸುವಂತೆ ಬರೆದ ಅನಂತಮೂರ್ತಿಯವರ ಒಟ್ಟು ಬರಹ ಮತ್ತು ನಿಲುವುಗಳನ್ನು

ಕುರಿತ ಈ ಹೇಳಿಕೆಯನ್ನು ಅನುಮೋದಿಸಬಹುದು. "ಘನ ವ್ಯಕ್ತಿತ್ವವೊಂದು ತನ್ನ ಆಯ್ಕೆಯ ಕ್ಷೇತ್ರ ಮತ್ತು ಮಾಧ್ಯಮಕ್ಕೆ ಬದ್ಧವಾಗಿ, ಅವುಗಳಲ್ಲಿನ ಅಸಾಧಾರಣ ಎನ್ನಬಹುದಾದ ಸಾಧನೆಗಳನ್ನೇ ಚಿಮ್ಮು ಹಲಗೆಯಾಗಿ ಮಾಡಿಕೊಂಡು ಸಮುದಾಯವನ್ನೇ ಆವರಿಸುವ ಅನನ್ಯ ಮಾದರಿಯೊಂದು ಅನಂತಮೂರ್ತಿಯವರ ವಿಷಯದಲ್ಲಿ ನಿಜವಾಗಿದೆ. ತನ್ನ ಕಾಲದ ಅಪ್ರಿಯ ಸತ್ಯಗಳಿಗೆ ಎದುರಾಗುವುದೇ ತನ್ನ ಸಮುದಾಯದ ಸೌಖ್ಯವನ್ನು ಕಾಯುವ ಬಗೆ ಎಂದು ಗಾಢವಾಗಿ ನಂಬಿರುವ ವ್ಯಕ್ತಿ ಅನಂತಮೂರ್ತಿ. ಆದ್ದರಿಂದಲೇ ವ್ಯಕ್ತಿಪ್ರಜ್ಞೆಯಲ್ಲಿ ಆರಂಭವಾದ ಇವರ ಹುಡುಕಾಟ ಮನುಷ್ಯ ಸಂಕಟದ ಆದಿಮ ನೆಲೆಯನ್ನು ಮುಟ್ಟಿರುವಂತೆ ಕಾಣಿಸುತ್ತದೆ. ಇವರ ಸಾಹಿತ್ಯಿಕ ಬರವಣಿಗೆ, ಸಾರ್ವಜನಿಕ ಭಾಷಣಗಳು, ರಾಜಕೀಯ ನಿಲುವುಗಳು, ಸಾಂಸ್ಕೃತಿಕ ವಾಗ್ವಾದಗಳು, ಗಣಿಗಾರಿಕೆ ವಿರೋಧಿ, ಪರಿಸರಪರ ಹೋರಾಟ, ಸಾಮಾನ್ಯ ಶಾಲೆಯ ಹಂಬಲ ಈ ಎಲ್ಲವನ್ನೂ ಅಖಂಡವಾಗಿಯೇ ನೋಡಬೇಕು. ಈ ಎಲ್ಲವೂ ಅವರಿಗೆ ಸಮಾನ ಮಹತ್ವದ, ಜೀವನ್ಮರಣ ಪ್ರಶ್ನೆಗಳಾಗಿ ಕಾಣಿಸುತ್ತವೆ."[೨೩] ಎಂಬಲ್ಲಿ ಅವರ ವಿಮರ್ಶೆಯ ಸಂಕೀರ್ಣ ಸ್ವರೂಪವನ್ನು ಗ್ರಹಿಸಬಹುದು ಮತ್ತು ಕನ್ನಡ ವಿಮರ್ಶೆ ಕಳೆದ ದಶಕದಲ್ಲಿ ಪಡೆದುಕೊಂಡ ವಿಸ್ತಾರವನ್ನು ಊಹಿಸಬಹುದು.

ಜಿ.ಎಸ್ ಆಮೂರ

ಕನ್ನಡದ ಹಿರಿಯ ತಲೆಮಾರಿನ ವಿಮರ್ಶಕರಲ್ಲಿ ಮುಖ್ಯರಾಗಿರುವ ಆಮೂರ ಅವರು ಕನ್ನಡದ ಕೆಲವೇ ವ್ಯಕ್ತಿಪರ ವಿಮರ್ಶಕರಲ್ಲಿ ಒಬ್ಬರು. ಇಂಗ್ಲೀಷ್ ಮತ್ತು ಕನ್ನಡ ಸಾಹಿತ್ಯ ಕ್ಷೇತ್ರಗಳಲ್ಲಿ ಅಪಾರ ಪಾಂಡಿತ್ಯ, ಸೂಕ್ಷ್ಮ ಸಂವೇದನೆ ಹಾಗೂ ಸಮತೋಲನ ವಿಮರ್ಶೆಯಿಂದ ಕನ್ನಡದ ಪ್ರಮುಖ ವಿಮರ್ಶಕರಾಗಿ ಗುರುತಿಸಿಕೊಂಡಿರುವ ಜಿ. ಎಸ್. ಆಮೂರ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಡವಾಗಿ ಪ್ರವೇಶಿಸಿದರೂ ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಅಪಾರ ಕೃಷಿ ನಡೆಸಿದ್ದಾರೆ.

ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯಗಳೆರಡರಲ್ಲೂ ಪ್ರಭುತ್ವ ಹೊಂದಿ ಎರಡು ಭಾಷೆಗಳಲ್ಲೂ ವಿಮರ್ಶಾ ಕೃತಿಗಳನ್ನು ಪ್ರಕಟಿಸಿರುವ ಆಮೂರರು ಕನ್ನಡದಲ್ಲಿ ಮುಖ್ಯವಾಗಿ ಪ್ರಕಾರ ವಿಮರ್ಶಕರಾಗಿ ಗುರುತಿಸಿಕೊಂಡಿದ್ದಾರೆ. 'ಭುವನದ ಭಾಗ್ಯ', 'ಆಧುನಿಕ ಸಾಹಿತ್ಯದ ವಿರಾಟ ಪುರುಷ'ದಂತಹ ಕೃತಿಗಳನ್ನು ವ್ಯಕ್ತಿ ಸಾಹಿತ್ಯ ಕುರಿತು ರಚಿಸಿದ್ದಾರಾದರೂ, 'ಕನ್ನಡ ಕಥನ ಸಾಹಿತ್ಯ – ಕಾದಂಬರಿ' ಕನ್ನಡ ಸಾಹಿತ್ಯ – ಸಣ್ಣಕತೆ' ಈ ಕೃತಿಗಳು ಕನ್ನಡ ವಿಮರ್ಶಾ ಕ್ಷೇತ್ರದ ಮೇಲೆ ಹೆಚ್ಚು ಪ್ರಭಾವ ಬೀರಿವೆ. ಆಮೂರರು ಕಳೆದ ದಶಕದಲ್ಲಿ ಪ್ರಕಟಿಸಿದ ಬೇಂದ್ರೆ ಕಾವ್ಯದ ಪ್ರತಿಮಾ ಲೋಕ (೨೦೦೦), ಅಮೃತವಾಹಿನಿ (೨೦೦೦), ಕಥನಶಾಸ್ತ್ರ (೨೦೦೧), ಸೀಮೋಲ್ಲಂಘನ (೨೦೦೩), ನಿಂದ ಹೆಜ್ಜೆ (೨೦೦೪), ಕೊರಳು–ಕೊಳಲು (೨೦೦೫), ಮೊದಲಾದ ಕೃತಿಗಳು ಅವರು ವಿಮರ್ಶಾ ಕ್ಷೇತ್ರದಲ್ಲಿ ಎಷ್ಟು ಗಂಭೀರವಾಗಿ ತೊಡಗಿಸಿಕೊಂಡಿದ್ದಾರೆ ಎಂಬುದನ್ನು ಮನದಟ್ಟು ಮಾಡಿಕೊಡುತ್ತದೆ.

ಆಮೂರ ವಿಮರ್ಶಾ ಸ್ವರೂಪವೆಂದರೆ ಕನ್ನಡದ ಪ್ರತಿಯೊಂದು ಸಾಹಿತ್ಯ ಪ್ರಕಾರವನ್ನು ಸಮಗ್ರವಾಗಿ ಅಧ್ಯಯನ ಮಾಡಿ, ಗಂಭೀರ ಕೃತಿಗಳನ್ನು ಒಂದೆಡೆ ಸಂಗ್ರಹಿಸಿ ಪಟ್ಟಿ ಮಾಡುತ್ತಾರೆ. ಇದರ ಜೊತೆಗೆ ಒಟ್ಟು ಸಾಹಿತ್ಯ ಕೃತಿಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಸ್ಮಿತೆಯನ್ನು ಬೆಳೆಸುವ, ವಿಸ್ತರಿಸುವ ಪ್ರಯತ್ನದ ಕೃತಿಗಳನ್ನು ಗಂಭೀರವಾಗಿ ಪರಿಗಣಿಸುವ ಮೂಲಕ ಕನ್ನಡ ಸಾಹಿತ್ಯ ಪರಂಪರೆಯ ಕೊಂಡಿಗಳನ್ನು ಜೋಡಿಸುವ ಕೆಲಸವನ್ನು ಮಾಡುತ್ತಾರೆ. ಅವರ 'ಕಥನಶಾಸ್ತ್ರ' ಕೃತಿಯಲ್ಲಿ ಕಥನ ವಿಶ್ಲೇಷಣೆಗೆ ಬೇಕಾದ ಮೌಲಿಕ ಪರಿಕಲ್ಪನೆಗಳಿಗೆಲ್ಲಾ ಕನ್ನಡದಲ್ಲಿ ಸಂವಾದಿ ಪದಗಳನ್ನು ನೀಡುವುದರೊಂದಿಗೆ ಕನ್ನಡದ ಕಥನ ಸಾಹಿತ್ಯದಿಂದ ಸೂಕ್ತ ಉದಾಹರಣೆಗಳನ್ನು ಆಯ್ದುಕೊಳ್ಳುತ್ತಾರೆ. ಈ ಮೂಲಕ ಸಿದ್ಧಾಂತವೊಂದು ಕನ್ನಡದೊಳಗೆ ಕನ್ನಡದ್ದೇ ಎನ್ನುವಂತೆ ಬೆಳೆಯುವ ಹಾಗೆ ಮಾಡುತ್ತಾರೆ. ಹಾಗೆಯೇ ಇವರು ನಿರ್ದಿಷ್ಟ ವ್ಯಕ್ತಿಗಳ ಕುರಿತ ವಿಮರ್ಶೆಯ ಸಂದರ್ಭದಲ್ಲೂ ಆಯಾ ಲೇಖಕರ ತಾತ್ವಿಕ ಚಿಂತನೆಗಳನ್ನು ಕ್ರೂಢೀಕರಿಸಿ ಶಾಸ್ತ್ರದ ಚೌಕಟ್ಟಿಗೆ ಅಳವಡಿಸಿ ನಂತರ ವಿಶ್ಲೇಷಣೆ-ವ್ಯಾಖ್ಯಾನ ನಡೆಸುತ್ತಾರೆ.

ಆರಂಭದಲ್ಲಿ ಕೃತಿನಿಷ್ಠ ವಿಮರ್ಶಕರಂತೆ ತೋರಿಸಿಕೊಳ್ಳುವ ಆಮೂರರು ಸಾಹಿತ್ಯ ಕೃತಿಯ ಪ್ರಕಾರವನ್ನೇ ಪ್ರಧಾನವಾಗಿಟ್ಟುಕೊಂಡು ಅಧ್ಯಯನ ನಡೆಸಿದ್ದಾರೆ. ಆದರೆ ಕಳೆದ ದಶಕದ ವಿಮರ್ಶಾ ಸಾಹಿತ್ಯವನ್ನು ಪರಿಶೀಲಿಸಿದರೆ ವಿಮರ್ಶೆಯ ಬಹುತ್ವವನ್ನು, ಬಹುಮುಖತೆಯನ್ನು ಅವರು ಒಪ್ಪಿಕೊಳ್ಳುವುದರ ಜೊತೆಗೆ ಅದನ್ನು ಸ್ವಾಗತಿಸುತ್ತಿದ್ದಾರೆ ಎನಿಸುತ್ತದೆ. ಎಪ್ಪತ್ತರ ದಶಕದಲ್ಲಿ ಸಂಕ್ರಮಣ ಪತ್ರಿಕೆಗೆ ಬರೆದ ಲೇಖನವೊಂದರಲ್ಲಿ ಸಾಹಿತ್ಯದಲ್ಲಿ ರಾಷ್ಟ್ರೀಯತೆಗೆ ಅವಕಾಶವೇ ಇಲ್ಲವೆಂಬ ಅಲಿಪ್ತ ಅನಿಕೇತನ ಧೋರಣೆ ತಾಳಿದ್ದ ಅವರು ಈಗ ಗಾಢವಾದ ರಾಜಕೀಯ ಪ್ರಜ್ಞೆ ಇರುವ ನಮ್ಮದೇ ಆದ ಪರಂಪರೆ ('ಸಾತ್ವಿಕ ಪಥ', 'ಅಮೃತವಾಹಿನಿ')ಯ ಶೋಧ ಹಾಗೂ ಅದನ್ನು ಪ್ರತಿಷ್ಠಾಪಿಸುವ ಕಡೆಗೆ ಚಲಿಸುತ್ತಿದ್ದಾರೆ.

ಇವರ ವಿಮರ್ಶೆಯ ಮತ್ತೊಂದು ಮುಖ್ಯ ಲಕ್ಷಣವೆಂದರೆ, ಸಾಹಿತ್ಯ ಪ್ರಕಾರಗಳನ್ನು ಕೇಂದ್ರೀಕರಿಸಿ ವಿಮರ್ಶೆಯಲ್ಲಿ ತೊಡಗಿರುವುದು. ಬಹುತೇಕ ನವ್ಯ ವಿಮರ್ಶೆಯ ಮಾನದಂಡಗಳನ್ನು ಅನುಸರಿಸಿ ಸಾಹಿತ್ಯ ಕೃತಿ ಪ್ರವೇಶಿಸುವ ಇವರು ಕೃತಿ ಕೇಂದ್ರಿತ ವಿಮರ್ಶೆಯನ್ನು ಹೆಚ್ಚಾಗಿ ಕೈಗೊಳ್ಳುತ್ತಾರೆ. "ವೈಯಕ್ತಿಕವಾಗಿ ನನಗೆ ಕೃತಿಯ ಅಸ್ತಿತ್ವವನ್ನು ಕೃತಿಕಾರನ ಆಶಯ, ಕೃತಿಯ ಆಶಯ ಹಾಗೂ ಓದುಗನ ಆಶಯಗಳ ಅರ್ಥಚಕ್ರದಲ್ಲಿ ಗುರುತಿಸುವ ಏಕೋನ ಸಿದ್ಧಾಂತ ಸಮರ್ಪಕವೆನಿಸುತ್ತದೆ."[6] ಎಂದು ಆಮೂರರು ತಮ್ಮ ವಿಮರ್ಶಾ ನೆಲೆಗಳನ್ನು ಗುರುತಿಸಿಕೊಳ್ಳುತ್ತಾರೆ. ಆದರೆ ಅವರ ಒಟ್ಟು ಸಾಹಿತ್ಯ ವಿಮರ್ಶಾ ಕೃತಿಗಳನ್ನು ಗಮನಿಸಿದರೆ ಅವರದು ವಾಚಕ ಕೇಂದ್ರಿತ ವಿಮರ್ಶೆಯೂ ಅಲ್ಲ, ಕರ್ತೃಕೇಂದ್ರಿತ ವಿಮರ್ಶೆಯೂ ಅಲ್ಲ, ಬದಲಿಗೆ ಕೃತಿ-ಕೇಂದ್ರಿತ ವಿಮರ್ಶೆ ಎನಿಸುತ್ತದೆ. ಏಕೆಂದರೆ ಅವರ ವಿಶ್ಲೇಷಣೆ-ವ್ಯಾಖ್ಯಾನ-ತೀರ್ಮಾನ ಎಲ್ಲವೂ ಕೃತಿಯ ಸುತ್ತಲೇ ತಿರುಗುತ್ತದೆ.

ಆಮೂರರ ವಿಮರ್ಶೆಯ ಮತ್ತೊಂದು ಲಕ್ಷಣವೆಂದರೆ ಕೃತಿಯೊಂದರ ಸಮಗ್ರ ವಿವರಗಳನ್ನು ಕಟ್ಟಿಕೊಡಲು ಯತ್ನಿಸುವುದು ಇದರಿಂದ ಲೇಖನಗಳು ಬಹುತೇಕ ಪರಿಚಯಾತ್ಮಕ ನೆಲೆಯಲ್ಲಿಯೇ ನಿಂತುಬಿಡುತ್ತದೆ. ಒಂದೆರಡು ಸಾಧಾರಣೀಕೃತ ಹೇಳಿಕೆಗಳಲ್ಲಿಯೇ ಲೇಖನಗಳು ಮಣಿದು ಹೋಗುತ್ತವೆ. ಆದರೆ ಇವರು ಕಾರ್ನಾಡರ ನಾಟಕಗಳನ್ನು ಕುರಿತ 'ಭಾರತೀಯ ರಂಗಭೂಮಿ ಮತ್ತು ಗಿರೀಶ್ ಕಾರ್ನಾಡರ ನಾಟಕಗಳು – ಒಂದು ವಿಮರ್ಶಾತ್ಮಕ ಅಧ್ಯಯನ,' ಕೃತಿಯಲ್ಲಿ ನಡೆಸಿರುವ ವ್ಯಾಪಕ ವಿಶ್ಲೇಷಣೆ ಮತ್ತು ಅರ್ಥಪೂರ್ಣ ವ್ಯಾಖ್ಯಾನಗಳಿಂದ ಭಿನ್ನವಾಗುತ್ತಾರೆ. ನಾಟಕಗಳ ವಿಶ್ಲೇಷಣೆಯಲ್ಲಿ ನಾಟಕೀಕರಿಸುವ ಘರ್ಷಣೆಯ ಸ್ವರೂಪ, ನಾಟಕಗಳ ಶಿಲ್ಪ, ಪಾತ್ರ ವಿನ್ಯಾಸ ಇವೆಲ್ಲವನ್ನು ಸಾಧಾರವಾಗಿ, ಅಧಿಕೃತವಾಗಿ ಗುರುತಿಸುತ್ತಾರೆ. ಇವತ್ತಿನ ಭಾರತೀಯ ಸಂದರ್ಭದಲ್ಲಿ ಕಾರ್ನಾಡರು ಏಕೆ ಮಹತ್ವದ ನಾಟಕಕಾರರಾಗುತ್ತಾರೆ ಎಂಬ ಪ್ರಶ್ನೆಯನ್ನೆತ್ತಿ ಆಮೂರರು ಹೀಗೆ ನಿರ್ಣಯ ನೀಡುತ್ತಾರೆ. "ತಲೆಮಾರುಗಳ ವೈಚಾರಿಕ ಅಂತರ, ಧರ್ಮ–ರಾಜಕೀಯಗಳ ಸಂಘರ್ಷ, ಲೈಂಗಿಕ ಸಮಸ್ಯೆಗಳು, ಕ್ರಾಂತಿಯ ಸೋಲು–ಗೆಲುವುಗಳು ಇಂಥ ಜೀವಾಳದ ಪ್ರಶ್ನೆಗಳಿಗೆ ಅವರು ತೋರುವ 'ಸೂಕ್ಷ್ಮ ಹಾಗೂ ವಿವೇಕಪೂರ್ಣ ಸ್ಪಂದನ ಮತ್ತು ತಮ್ಮ ದರ್ಶನಗಳಿಗೆ ಅರ್ಥಪೂರ್ಣವಾದ ನಾಟ್ಯರೂಪಕಗಳನ್ನು ಸೃಷ್ಟಿಸಿರುವುದರಲ್ಲಿ ಅವರು ದೊರಕಿಸುವ ಯಶಸ್ಸು ಇವುಗಳ ಕಾರಣ."[೫] ಎಂಬ ಬಹು ಮೌಲಿಕ ನಿರ್ಣಯಕ್ಕೆ ತಲುಪುತ್ತಾರೆ. ಆ ಮೂಲಕ ಕಾರ್ನಾಡರ ನಾಟಕಗಳಿಗೆ ಒಂದು ಉಪಯುಕ್ತವಾದ ಪ್ರವೇಶಿಕೆಯನ್ನು ನೀಡುತ್ತಾರೆ.

ಆಮೂರರು ಯಾವುದೇ ವಿಷಯವನ್ನು ಕುರಿತು ಬರೆದ ಲೇಖನಗಳಲ್ಲಿ ಹೊಸತನವನ್ನು ಕಾಣಲಾಗದಿದ್ದರೂ ಪ್ರತಿಯೊಂದು ಲೇಖನವೂ ಕ್ರಮಬದ್ಧವಾಗಿ, ಸಂಬಂಧಿಸಿದ ವಸ್ತುವನ್ನು ನೋಡುವ ದೃಷ್ಟಿಕೋನದಲ್ಲಿ ಮತ್ತು ಅಭಿವ್ಯಕ್ತಿ ಕ್ರಮದಲ್ಲಿ ಆಗಿರುವ ಸೂಕ್ಷ್ಮ ಬದಲಾವಣೆಗಳನ್ನು ದಾಖಲಿಸುತ್ತವೆ. ಇಂತಹ ಸಮಗ್ರತೆಯಿಂದಾಗಿ ಕೆಲವು ಅರ್ಥಪೂರ್ಣ ಒಳನೋಟಗಳನ್ನು ನೀಡಲು ಸಾಧ್ಯವಾಗುತ್ತದೆ. ಉದಾಹರಣೆಗೆ ಅವರ 'ಸಾತ್ವಿಕ ಪಥ' ಕೃತಿಯಲ್ಲಿರುವ 'ಅವಳ ಕತೆಗಳು' ಎಂಬ ಲೇಖನ ಆಧುನಿಕ ಕನ್ನಡ ಸ್ತ್ರೀ ಕಥಾ ಸಾಹಿತ್ಯವನ್ನು ನಾಲ್ಕು ಪೀಳಿಗೆಗಳಲ್ಲಿ ವರ್ಗೀಕರಿಸಿ ಪೀಳಿಗೆಯಿಂದ ಪೀಳಿಗೆಗೆ ಆಗಿರುವ ಬದಲಾವಣೆ ಮತ್ತು ಬೆಳವಣಿಗೆಗಳನ್ನು ಗುರುತಿಸುತ್ತಾ ಹೋಗುತ್ತಾರೆ. ಮೊದಲನೆ ಪೀಳಿಗೆಯ ಲೇಖಕಿಯರು ಎದುರಿಸಿದ್ದ ಪ್ರಶ್ನೆ ಸಾಮಾಜಿಕವಾದದ್ದಾದರೆ, ಎರಡನೆ ಪೀಳಿಗೆಯವರಲ್ಲಿ ಅಸ್ಮಿತೆಯ ಅರಿವು ಜಾಗೃತವಾಗಿದೆ. ಮೂರನೆ ಪೀಳಿಗೆಯವರಲ್ಲಿ ಮುಖ್ಯವಾದ ಆತ್ಮಪ್ರಜ್ಞೆ ಮತ್ತು ದ್ವಂದ್ವಗಳ ಅರಿವು ಮತ್ತು ಇವತ್ತಿನ ಪೀಳಿಗೆಯವರಿಗೆ ಮುಖ್ಯವಾಗಿರುವ ಸಾಂಸ್ಕೃತಿಕ, ಚಾರಿತ್ರಿಕ ಅರಿವನ್ನು ಕುರಿತು ವಿಶದವಾಗಿ ಹೇಳುವ ಮೂಲಕ ಮಹಿಳಾ ಸಾಹಿತ್ಯವನ್ನು ಕುರಿತ ಪ್ರಮುಖ ಆಕರವಾಗುವಂತೆ ಅಧ್ಯಯನ ನಡೆಸಿದ್ದಾರೆ.

ಕನ್ನಡ ಸಾಹಿತ್ಯ ಸೇರಿದಂತೆ ಭಾರತೀಯ ಸಾಹಿತ್ಯದ ಬಗ್ಗೆ ಆಮೂರರ ವಿಮರ್ಶೆಯ ದೊಡ್ಡ ಆಕ್ಷೇಪ ಎಂದರೆ ಪಶ್ಚಿಮದ ಮಾನದಂಡಗಳಿಂದ ಅಳೆದಾಗ ನಮ್ಮ ಅತ್ಯಂತ ಮಹತ್ವದ ಲೇಖಕರೂ ಅವರಿಗೆ ತೂಗುವುದಿಲ್ಲ ಎನ್ನುವುದು. ಉದಾಹರಣೆಗೆ ಬಂಗಾಳಿಯಲ್ಲಿ ಬರೆಯುವ ಮಹಾಶ್ವೇತದೇವಿ ದೊಡ್ಡಲೇಖಕಿಯಾದರೂ ವಿಶ್ವಮಟ್ಟದಲ್ಲಿ ಮಾನ್ಯತೆ ಪಡೆದಿಲ್ಲ. ಅವರಿಗೆ ಹೋಲಿಸಿದರೆ ಅರುಂಧತಿರಾಯ್ ಅಷ್ಟು ಶ್ರೇಷ್ಠ ಲೇಖಕಿಯಲ್ಲದಿದ್ದರೂ, ಇಂಗ್ಲೀಷ್ ಭಾಷೆ ಮತ್ತು ಮಾನದಂಡಗಳಲ್ಲಿ ಬರೆಯುವುದರಿಂದ ವಿಶ್ವಮಟ್ಟದ ಲೇಖಕಿಯಾಗಿ ಹೊರಹೊಮ್ಮಿದ್ದಾರೆ ಎಂದು ಅಭಿಪ್ರಾಯಪಡುತ್ತಾರೆ. ಹಾಗೆಯೇ ಭಾರತೀಯ ಕಾವ್ಯ ಮೀಮಾಂಸೆಯನ್ನು ಆಧುನೀಕರಿಸುವ, ಜಗತ್ತಿಗೆ ಸರಿಯಾಗಿ ತಿಳಿಸುವಲ್ಲಿ ನಾವು ಸೋತಿದ್ದೇವೆ ಎಂದೂ ಹೇಳುತ್ತಾರೆ. ಇವರ ಈ ನಿಲುವಿನ ಬಗ್ಗೆ ಕನ್ನಡ ಲೇಖಕರಲ್ಲಿಯೇ ಅಪಸ್ವರಗಳಿವೆ. ಯಾವುದೇ ಭಾಷೆಯ ಸಾಹಿತ್ಯ ತನ್ನ ಆತ್ಯಂತಿಕೆಯನ್ನು ಸಾಧಿಸಬೇಕಾದದ್ದು ಅದರ ಸ್ವಂತ ನೆಲೆಯಲ್ಲಿಯೇ ಹೊರತು, ಬೇರೆ ಭಾಷೆ, ಸಂದರ್ಭಗಳಲ್ಲಿ ಅದು ಗಳಿಸಿಕೊಳ್ಳುವ ಯಶಸ್ಸಿನಿಂದಲ್ಲ.

ಆಮೂರರ 'ಕನ್ನಡ ಕಥನ ಸಾಹಿತ್ಯ – ಸಣ್ಣಕತೆ' ಕೃತಿಯ ಕನ್ನಡ ಸಣ್ಣಕತೆಗಳ ಗಂಭೀರ ಅಧ್ಯಯನವಾಗಿದೆ. ಕಥೆಗಳ ಹುಟ್ಟು ಬೆಳವಣಿಗೆಯನ್ನು ಕನ್ನಡದಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಚರ್ಚಿಸಿ, ಕನ್ನಡ ಕಥಾ ಪರಂಪರೆಯನ್ನು ಗಂಭೀರವಾಗಿ ವಿಶ್ಲೇಷಿಸುತ್ತಾರೆ. ಕನ್ನಡದಲ್ಲಿ ಸಣ್ಣಕತೆಗಳನ್ನು ಕುರಿತು ಇದುವರೆವಿಗೂ ಬಂದಿರುವ ವಿಮರ್ಶೆಯ ಮುಖ್ಯ ತೀರ್ಮಾನಗಳನ್ನು ಗಮನಿಸಿ ಅದರ ಮುಂದುವರಿಕೆಯಂತೆ ಇವರ ಅಧ್ಯಯನ ನಡೆದಿದೆ. ಜೊತೆಗೆ ಕತೆ, ಕೃತಿಗಳ ಅಂತ:ಸಂಬಂಧವನ್ನು ತೌಲನಿಕವಾಗಿ ಗ್ರಹಿಸುತ್ತಾರೆ. ತಮ್ಮ ವ್ಯಾಪಕ ಓದಿನಿಂದಾಗಿ ಕನ್ನಡದ ಕಥೆಗಳ ವಿಕಾಸ ಕ್ರಮವನ್ನೂ ತಾವು ಸೂಕ್ಷ್ಮವಾಗಿ ತೆರೆದಿಡುತ್ತಾರೆ.

ಒಟ್ಟಿನಲ್ಲಿ ಆಮೂರ ಅವರ ವಿಮರ್ಶೆ ಕನ್ನಡ–ಇಂಗ್ಲೀಷ್–ಸಂಸ್ಕೃತ ಸಾಹಿತ್ಯಗಳ ವ್ಯಾಪಕ ಪಾಂಡಿತ್ಯ, ಆಳವಾದ ಕೃತಿ ವಿಶ್ಲೇಷಣೆಯ ಮೂಲಕವೇ ಕೃತಿಗೆ ಕಾರಣವಾದ ಸಾಮಾಜಿಕ–ಸಾಂಸ್ಕೃತಿಕ ಪರಿಸರದ ವಿಶ್ಲೇಷಣೆ, ಸೂಕ್ಷ್ಮ ತೌಲನಿಕ ವಿಮರ್ಶೆಯ ಮೂಲಕ ಹಾಗೂ ಕಾಲಕಾಲಕ್ಕೆ ಇತರ ವಿಮರ್ಶಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಗಮನಿಸಿ, ಅವುಗಳಿಗೆ ಪ್ರತಿಕ್ರಿಯಿಸಿ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಆ ಮೂಲಕ ಸಂವಾದ ರೂಪದಲ್ಲಿ ವಿಮರ್ಶೆ ಬೆಳೆಯಲು ಹಾದಿ ನಿರ್ಮಿಸಿಕೊಡುತ್ತಾರೆ.

ಗಿರಡ್ಡಿ ಗೋವಿಂದರಾಜ

ಸಮಕಾಲೀನ ಕನ್ನಡ ವಿಮರ್ಶಕರಲ್ಲಿ ಗಿರಡ್ಡಿ ಗೋವಿಂದರಾಜ ಮುಖ್ಯರಾದವರು. ಕಳೆದ ನಾಲ್ಕು ದಶಕಗಳಿಂದ ಕನ್ನಡದಲ್ಲಿ ಮೌಲ್ಯಯುತ ಸಾಹಿತ್ಯ ವಿಮರ್ಶೆಯನ್ನು ಬರೆಯುತ್ತಾ ಬಂದಿದ್ದಾರೆ. ಯಾವುದೇ ಕೃತಿಯ ಕುರಿತು ಅದರ ತೀಕ್ಷ್ಣ ವಿಶ್ಲೇಷಣಾ ಕ್ರಮ ಮತ್ತು ಆ ವಿಶ್ಲೇಷಣೆಯ ಆಧಾರದ ಮೇಲೆ ಅದು ಕೊಡುವ ತೀರ್ಮಾನಗಳು ಮತ್ತು

ಎಲ್ಲರಿಗೂ ಅರ್ಥವಾಗಬೇಕೆಂಬ ರೀತಿಯಲ್ಲಿ ಬರೆದ ಸರಳ ಆದರೆ ಸಶಕ್ತ ಗದ್ಯ ಅವರ ವಿಮರ್ಶೆಯ ವೈಶಿಷ್ಟ್ಯಗಳು.

ಈವರಗಿನ ಇವರ ಎಲ್ಲ ವಿಮರ್ಶಾ ಕೃತಿಗಳನ್ನು ಮೂರು ಸಂಪುಟಗಳಲ್ಲಿ (ಸಮಗ್ರ ವಿಮರ್ಶೆ ೧, ೨ ಮತ್ತು ೩) ಪ್ರಕಟಿಸಿದ್ದು, ಕನ್ನಡದ ಕೆಲವೇ ವೃತ್ತಿಪರ ವಿಮರ್ಶಕರಲ್ಲಿ ಒಬ್ಬರಾಗಿದ್ದಾರೆ. ಇತ್ತೀಚೆಗೆ ಕೇವಲ ವಿಮರ್ಶಾ ಬರವಣಿಗೆ ಏಕತಾನತೆಯಿಂದ ದಣಿದವರಂತೆ ಕಾಣುತ್ತಿದ್ದು, ಪ್ರಬಂಧಗಳ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇತ್ತೀಚೆಗಿನ ಅವರ ಸಮಗ್ರ ವಿಮರ್ಶೆಯ ಮೂರು ಸಂಪುಟಗಳಲ್ಲದೆ, ವಿಮರ್ಶಾ ಲೇಖನಗಳ ಮೂರು ಸಂಕಲನಗಳು ಪ್ರಕಟಗೊಂಡಿವೆ. 'ಪ್ರಮಾಣು' 'ಕಲ್ಪಿತ ವಾಸ್ತವ : ಕನ್ನಡ ಸಣ್ಣ ಕಥೆ' ಮತ್ತು 'ವಿಲಂಬಿತ' ಇವುಗಳನ್ನು ಹೊರತು ಪಡಿಸಿದರೆ 'ಹಿಡಿಯದ ಹಾದಿ' ಎಂಬ ಪ್ರಬಂಧ ಸಂಕಲನ, 'ಸಾಹಿತ್ಯ ಲೋಕದ ಸುತ್ತ-ಮುತ್ತ' ಎಂಬ ಸಾಹಿತ್ಯ ಪಠ್ಯೇತರ ವಿಷಯಗಳನ್ನೊಳಗೊಂಡ ಕೃತಿಯನ್ನು ಪ್ರಕಟಿಸಿದ್ದಾರೆ.

ಇಂಗ್ಲೀಷ್ ಅಧ್ಯಾಪಕರಾಗಿದ್ದುಕೊಂಡು ಪ್ರಾಚೀನ ಕನ್ನಡ ಸಾಹಿತ್ಯವನ್ನು ಹೆಚ್ಚು ವಿಮರ್ಶೆಗೆ ಒಳಪಡಿಸಿದ ಕೆಲವೇ ವಿಮರ್ಶಕರಲ್ಲಿ ಇವರೂ ಒಬ್ಬರು. ಅದರಲ್ಲೂ ಅವರು ಪಶ್ಚಿಮದ ವಿಮರ್ಶಾ ಮಾನದಂಡಗಳನ್ನಿಟ್ಟುಕೊಂಡು ಜನ್ನನ ಯಶೋಧರ ಚರಿತೆಗೆ ಬರೆದಿರುವ ವಿಮರ್ಶೆ ಗಂಭೀರವಾದುದಾಗಿದೆ. ಹಾಗೆಯೇ, ನವೋದಯ, ನವ್ಯ ಸಾಹಿತ್ಯ ಕೃತಿಗಳ ಬಗ್ಗೆಯೂ ವಿಪುಲವಾದ ವಿಮರ್ಶೆ ಸೃಷ್ಟಿಸಿರುವ ಅವರು ನವ್ಯೋತ್ತರ ಸಾಹಿತ್ಯ ಕೃತಿಗಳ ಕಡೆಗೆ ಗಮನ ಹರಿಸಿರುವುದು ಕಡಿಮೆ. ಜೊತೆಗೆ ಆಧುನಿಕ ಗದ್ಯ ಸಾಹಿತ್ಯವನ್ನು ಕುರಿತು ಅವರು ಹೆಚ್ಚು ವಿಮರ್ಶೆ ಬರೆದಿದ್ದಾರೆ.

ಗಿರಡ್ಡಿಯವರು ವಿವಿಧ ವಿಮರ್ಶಾ ಪ್ರಸ್ಥಾನಗಳನ್ನು ಪರಿಚಯಿಸಿ ಅವುಗಳನ್ನು ಪ್ರಾಯೋಗಿಕವಾಗಿ ಪರಿಶೀಲಿಸುತ್ತಾರೆ. ಅಂತಹ ಸಂದರ್ಭದಲ್ಲಿ ಅದನ್ನು ಕನ್ನಡದ ಜಾಯಮಾನಕ್ಕು ಒಗ್ಗಿಸುವ ಪ್ರಯತ್ನವನ್ನೂ ಮಾಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಅವರು ಶೈಲಿಶಾಸ್ತ್ರೀಯ ಪರಿಕಲ್ಪನೆಗಳನ್ನು ಅನ್ವಯಿಸಿ ವಚನಗಳ ರಚನಾ ವಿನ್ಯಾಸವನ್ನು ಕುರಿತು ಬರೆದ ಅವರ ವಚನ ವಿನ್ಯಾಸ ಕೃತಿ ಮತ್ತು ಪರಂಪರೆಯ ಜೊತೆಗಿನ ಅನುಸಂಧಾನದ ಪ್ರಯತ್ನ ಜನ್ನನ ಯಶೋಧರ ಚರಿತೆಯ ವಿಮರ್ಶೆಗಳನ್ನು ನೋಡಬಹುದು. ಮತ್ತೊಂದು ಮುಖ್ಯ ಲೇಖನ 'ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆಯವರ ಕಾವ್ಯ'. ಈ ಲೇಖನ ಕಾವ್ಯ ಪರಂಪರೆಯೊಂದಿಗೆ ಬೇಂದ್ರೆ ಹೊಂದಿದ್ದ ಸಂಬಂಧವನ್ನು ಶೋಧಿಸುತ್ತದೆ. ಪಂಪ, ಹರಿಹರ, ಲಕ್ಷ್ಮೀಶ ಇವರ ಕಾವ್ಯ, ವಚನ ಸಾಹಿತ್ಯ, ಕೀರ್ತನೆ, ತತ್ವಪದ, ಜನಪದ ಸಾಹಿತ್ಯ, ಅನುಭಾವ ಕಾವ್ಯ ಮೊದಲಾದವುಗಳೊಂದಿಗೆ ಮುಖಾಮುಖಿಯಾಗಿರುವುದನ್ನು ಆ ಮೂಲಕ ಅದು ಪ್ರೇರಣೆ, ಪ್ರಭಾವಗಳನ್ನು ಸ್ವೀಕರಿಸಿ ಅರಗಿಸಿಕೊಂಡು ಸ್ವಂತಿಕೆಯಾಗಿ ಒಡಮೂಡಿ ಸಮೃದ್ಧವಾಗಿರುವುದನ್ನು ನಮ್ಮ ಗಮನಕ್ಕೆ ತರುತ್ತಾರೆ. ಅವರ ಕಾವ್ಯ ಪರಿಶೀಲನೆಯಲ್ಲಿ ಸೂಕ್ಷ್ಮವಾದ ಮನಸ್ಸು, ಸಂವೇದನಾಶೀಲತೆ ಅಂತರ್ಗತವಾಗಿವೆ. ಹಾಗೆಯೇ ಕನ್ನಡದಲ್ಲಿ

ಕಾದಂಬರಿ ಮೀಮಾಂಸೆ ದುರ್ಲಭವಾಗಿದ್ದ ಸಂದರ್ಭದಲ್ಲಿ ಗಿರಡ್ಡಿಯವರು ಕನ್ನಡ ಕಾದಂಬರಿಗಳನ್ನು ಕುರಿತು ಗಂಭೀರ ವಿಮರ್ಶೆಯನ್ನು ಪ್ರಕಟಿಸಿದರು.

ಪ್ರಾಚೀನ ಮತ್ತು ಆಧುನಿಕ ಚಿಂತನೆಗಳೆರಡನ್ನೂ ಬೆಸೆಯುವ ಮೂಲಕ ತಮ್ಮ ವಿಮರ್ಶೆಯನ್ನು ಕೈಗೊಳ್ಳುವ ಅವರು ನವ್ಯ ವಿಮರ್ಶೆಯ ಸೂಕ್ಷ್ಮ ಅವಲೋಕನ ಶಕ್ತಿಯನ್ನು ತಮ್ಮ ಬರಹಗಳಲ್ಲಿ ಒಳಗೊಳ್ಳುತ್ತಾರೆ ಮತ್ತು ಇದಕ್ಕೆ ಪೂರಕವಾಗಿ ಕೃತಿಯ ಭಾಷೆಯನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಕೃತಿ ಮತ್ತು ಕೃತಿಕಾರನ ಅನ್ವೇಷಣೆಯ ಜೊತೆ ಕನ್ನಡ ಸಂಸ್ಕೃತಿಯ ವಿಸ್ತರಣೆ, ವಿಶ್ಲೇಷಣೆ ನಡೆದಿದೆಯೇ ಎಂದು ಪರಿಶೀಲಿಸುವ ಮೂಲಕ ಸಾಂಸ್ಕೃತಿಕ ವಿಮರ್ಶೆಯ ಆಯಾಮಗಳನ್ನು ತಮ್ಮ ಕೃತಿಗಳಲ್ಲಿ ತರುತ್ತಾರೆ. ಅವರೇ ಒಂದೆಡೆ ಹೇಳಿರುವಂತೆ "ಕನ್ನಡ ವಿಮರ್ಶೆಯ ಮುಖ್ಯ ಧಾರೆ ಇವತ್ತಿನ ಯಾವುದೇ ಒಂದು ನಿರ್ದಿಷ್ಟ ವಿಮರ್ಶಾ ಸಿದ್ಧಾಂತಕ್ಕೆ ಕಟ್ಟುಬಿದ್ದಿಲ್ಲ. ಅನೇಕ ಸಿದ್ಧಾಂತಗಳು ಒದಗಿಸಿರುವ ಒಳನೋಟಗಳನ್ನು ಬಳಸಿಕೊಂಡು ಅದು ತನ್ನದೆಯಾದ ಒಂದು ಇಕ್ಲೆಕ್ಟಿಕ್ (ECLETIC) ಮಾದರಿಯನ್ನು ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಳ್ಳುತ್ತಿರುವಂತೆ ಕಾಣುತ್ತದೆ. ಇದರಲ್ಲಿ ಪಾಶ್ಚಾತ್ಯ ಮಾದರಿಗಳ ಜೊತೆಗೆ ದೇಶೀ ಮಾದರಿಗಳು ಸೇರಿಕೊಂಡಿವೆ...."[1] ಎಂದು ಅಭಿಪ್ರಾಯ ಪಡುತ್ತಾರೆ.

ಕನ್ನಡದ ಮುಖ್ಯ ವಿಮರ್ಶಕರಲ್ಲಿ ಗಿರಡ್ಡಿ ಗೋವಿಂದರಾಜರು ಒಬ್ಬರಾಗಿದ್ದರೂ, ಅವರ ವಿಮರ್ಶೆ ಹೆಚ್ಚಾಗಿ ಪ್ರಾಚೀನ ಕನ್ನಡ ಸಾಹಿತ್ಯವನ್ನೆ ಕೇಂದ್ರೀಕರಿಸಿದೆ. ಹೊಸಗನ್ನಡಕ್ಕೆ ಬಂದರೆ ನವೋದಯದ ಮುಖ್ಯ ಲೇಖಕರಿಗೆ ಅವರ ವಿಮರ್ಶೆ ನಿಲ್ಲುತ್ತದೆ. "ಯಶೋಧರ ಚರಿತೆಯ ಬಗ್ಗೆ ಬರೆಯುವಾಗ ತೋರಿಸುವ ನಿರ್ಮಲತೆಯನ್ನು, 'ಕ್ಲಿಪ್ ಜಾಯಿಂಟ್' ಬಗ್ಗೆಯೋ, 'ವಂಶವೃಕ್ಷ'ದ ಬಗ್ಗೆಯೋ ಬರೆಯುವಾಗ ತೋರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಗಿರಡ್ಡಿಯವರ ಪ್ರತಿಭೆಯ ಸಮಗ್ರ ದರ್ಶನವಾಗುವುದು ವಚನಗಳು, ಜನಪದ ಸಾಹಿತ್ಯ, ಯಶೋಧರ ಚರಿತೆ ಮುಂತಾದ, ಕಾಲದೇಶಗಳಲ್ಲಿ ಸಾಕಷ್ಟು ದೂರವಿರುವ ಕೃತಿಗಳ ಬಗ್ಗೆ ಬರೆಯುವಾಗ ಮಾತ್ರ"[2] ಎಂಬ ಅಭಿಪ್ರಾಯಗಳು ಉಂಟಾಗಿವೆ. ಆ ಕಾರಣದಿಂದ ಸಮಕಾಲೀನ ಕನ್ನಡ ಸಾಹಿತ್ಯ ಕುರಿತ ಇವರ ವಿಮರ್ಶೆ ಬಹುತೇಕ ಬಂದಿಲ್ಲವೆಂದೇ ತೀರ್ಮಾನಿಸಬೇಕಾಗುತ್ತದೆ. ಜೊತೆಗೆ ಕಳೆದ ದಶಕದಿಂದ ಅವರು ವಿಮರ್ಶಾ ಬರವಣಿಗೆಗಿಂತ ಸೃಜನಶೀಲ ಪ್ರಕಾರಗಳ ರಚನೆಯ ಮೇಲೆ ತಮ್ಮ ಗಮನ ಕೇಂದ್ರೀಕರಿಸಿದ್ದಾರೆ.

ಎಚ್. ಎಸ್. ರಾಘವೇಂದ್ರರಾವ್

ನವ್ಯದ ಬದ್ಧತೆ ಮತ್ತು ನವ್ಯೋತ್ತರ ಸಾಹಿತ್ಯ ತತ್ವಗಳ ಅಳವಡಿಕೆಯನ್ನು ತಮ್ಮ ವಿಮರ್ಶಾ ಬರಹದುದ್ದಕ್ಕೂ ಉಳಿಸಿಕೊಂಡು ಬಂದಿರುವ ಕನ್ನಡದ ಮುಖ್ಯ ವಿಮರ್ಶಕರೆಂದರೆ ಎಚ್. ಎಸ್. ರಾಘವೇಂದ್ರರಾವ್ ಅವರು. ಅಂದಿನಿಂದ ಇಂದಿನವರೆಗೆ ಸಾಹಿತ್ಯದಲ್ಲಿ ಉಳಿದುಕೊಂಡು ಬಂದಿರುವ ಕೆಲವು ನಂಬಿಕೆಗಳು, ಲಕ್ಷಣಗಳ ಜೊತೆಯಲ್ಲೇ

ಒಟ್ಟು ಪರಿಸರದಲ್ಲಿ ಆಗಿರುವ ಬದಲಾವಣೆಗಳನ್ನೂ ಅವರು ಸಾವಧಾನದಿಂದ ಪರಿಶೀಲಿಸುತ್ತಾರೆ. ಗುರಿಯಿಲ್ಲದ ಹಿಂಸಾಪರತೆ, ಜಾಗತೀಕರಣ, ವ್ಯಾಪಾರೀಕರಣಗಳ ಅವಕಾಶವಾದ, ಹುಸಿ ಮತ್ತು ದಿಟಗಳ ನಡುವಿನ ಅಂತರವನ್ನೇ ಅಳಿಸಿಹಾಕಿರುವ ಕಲುಷಿತ ಅಲೋಚನಾಕ್ರಮ, ಸೂಕ್ಷ್ಮವಾಗಿ ಮೊಳಕೆ ಒಡೆಯುತ್ತಿರುವ ಜಾತೀಯತೆ, ಇವೆಲ್ಲ ಹುಟ್ಟಿಸುತ್ತಿರುವ ಆತಂಕ, ಕಳವಳ ಇವರ ಬರಹಗಳ ಹಿಂದಿದೆ. ಅವರ ದೃಷ್ಟಿಯಲ್ಲಿ ವಿಮರ್ಶಕನೂ ಸೃಷ್ಟಿಶೀಲ ಸಾಹಿತಿಗಳ ದಾರಿಯಲ್ಲೇ ನಡೆಯುತ್ತಿರುವ ಪಯಣಿಗ. ಅವರು. 'ವಿಮರ್ಶೆ ನಮ್ಮ ಸುತ್ತಲಿನ ಬದುಕು ಮತ್ತು ಸಮಾಜಗಳನ್ನು ಕಾಣುವ, ತಿಳಿದುಕೊಳ್ಳುವ, ಅದರ ಒಳಸುಳಿಗಳನ್ನು ಗ್ರಹಿಸುವ ಉಪಕರಣ'ವೆಂದು ತಿಳಿಯುತ್ತಾರೆ. ಸಾಹಿತ್ಯ ಚರಿತ್ರೆಯ ಕೃತಕ ನಿರ್ಮಾಣಗಳಿಗಿಂತ ಭಿನ್ನವಾಗಿ ವಾಸ್ತವದ ಸಾಂಸ್ಕೃತಿಕ ಲೋಕದ ಸ್ವರೂಪ ಹೇಗಿದ್ದೀತೆಂಬ ಕುತೂಹಲದ ಹುಡುಕಾಟ ಅವರ ಒಟ್ಟು ವಿಮರ್ಶೆಯ ಶೋಧವಾಗಿದೆ.

ಕನ್ನಡ ಸಾಹಿತ್ಯವೂ ಸೇರಿದಂತೆ ಒಟ್ಟು ಪರಂಪರೆ ಆಧುನಿಕಗೊಳ್ಳುವಾಗ ಸಾತತ್ಯವನ್ನು ಕಾಪಾಡಿಕೊಳ್ಳುವ ಯತ್ನದಲ್ಲಿ ಅಥವಾ ಸಾತತ್ಯ ಉಳಿಸಿಕೊಳ್ಳುತ್ತಲೇ ಆಧುನಿಕಗೊಳ್ಳುವ ತಹತಹದಲ್ಲಿ ಗಳಿಸಿದ್ದೆಷ್ಟು, ಕಳೆದದ್ದೆಷ್ಟು ಎಂದು ಪ್ರಶ್ನಿಸಿಕೊಳ್ಳುವ ಇವರು, ಅಕ್ಷರಲೋಕದ ಅಂಚಿನ ಸುಪ್ತ ಜಾನಪದದ ಲೋಕದರ್ಶನದಲ್ಲಿ ಒಟ್ಟು ಸಮುದಾಯದ ಅನುಭವದ ಎದೆಬಡಿತ ಕೇಳಬಹುದೆಂದು ಅಭಿಪ್ರಾಯಪಡುತ್ತಾರೆ. ಸಾಹಿತ್ಯ ಚರಿತ್ರೆಯ ರಚಿತ ಆಕೃತಿಗಿಂತ ಬೇರೆಯೇ ಆಗಿರಬಹುದಾದ ನಿಜ ಜೀವನದರ್ಶನವನ್ನು ಅನುಸಂಧಾನ ಮಾಡುವ ಅಪೇಕ್ಷೆ ಅವರ ಎಲ್ಲಾ ಬರಹಗಳ ಹಿಂದಿದೆ. ಇದು ಎಚ್. ಎಸ್. ಆರ್. ಕ್ರಿಯಾಶೀಲವಾಗಿ ವಿಮರ್ಶಾ ಬರಹಗಳಲ್ಲಿ ತೊಡಗಿಕೊಂಡ ಕಾಲಘಟ್ಟದಲ್ಲಿ– ಅಂದರೆ ಸರಿಸುಮಾರು ಕಳೆದ ನಾಲ್ಕು ದಶಕಗಳಲ್ಲಿ– ಒಟ್ಟಾರೆಯಾಗಿ ಕನ್ನಡ ಸಾಹಿತ್ಯ ತುಂಬ ಆಸಕ್ತಿಯಿಂದ ಪರಿಶೀಲಿಸಿದ ಮಹತ್ವದೊಂದು ಸವಾಲು. ಲೇಖಕರೇ ಹೇಳುವಂತೆ– 'ವಿಮರ್ಶೆಯು ಸಂಸ್ಕೃತಿ– ಸಮಾಜ ಕೇಂದ್ರಿತವಾದ ನೆಲೆಗಳನ್ನು ವಿಪುಲವಾಗಿ ಪಡೆದುಕೊಂಡಿದ್ದು ಈ ಅವಧಿಯಲ್ಲಿಯೇ'. ಇಲ್ಲಿಂದ ಮುಂದೆ ಎಚ್. ಎಸ್. ಆರ್ ಇನ್ನೊಂದು ಮುಖ್ಯ ಪ್ರಶ್ನೆ ಕೇಳಿಕೊಳ್ಳುತ್ತಾರೆ: 'ಕನ್ನಡ ಸೃಜನಶೀಲ ಸಾಹಿತ್ಯವು ಎದುರಿಸಿದ, ಬಿಡಿಸಿದ ಸಾಮಾಜಿಕ– ಸಾಂಸ್ಕೃತಿಕ ಸವಾಲುಗಳನ್ನು ಅಷ್ಟೇ ಸಂಕೀರ್ಣವಾಗಿ, ವೈವಿಧ್ಯಮಯವಾಗಿ ವಿಮರ್ಶೆಯು ಅನುಸಂಧಾನ ಮಾಡಿದೆಯೇ ಎಂದಲು ಪ್ರಶ್ನಿಸುತ್ತಾರೆ. ಕನ್ನಡ ವಿಮರ್ಶೆಯಲ್ಲಿ ಅಂಥ ಅಪರೂಪದ ಹೊಳಹುಗಳಿರುವುದಾದರೂ ಸ್ವಯಂಪೂರ್ಣವಾದ ಲೋಕದರ್ಶನ ಮೂಡಿರುವ ಕುರಿತು ಅವರು ಸಂಶಯ ತಾಳುತ್ತಾರೆ. ವಾಸ್ತವಿಕವಾಗಿ ಸ್ವತಃ ರಾಘವೇಂದ್ರರಾವ್ ಅವರ ಬರಹಗಳು ಆ ನಿಟ್ಟಿನಲ್ಲಿ ಸಾಕಷ್ಟು ದೂರ ನಡೆದಿವೆ. 'ವಿಮರ್ಶೆಯು ಸಹಪ್ರಯಾಣ ಮಾತ್ರವಾಗದೆ ಸ್ವತಂತ್ರವಾದ ಹುಡುಕಾಟವೂ ಆಗಿರುತ್ತದೆ' ಎಂಬುದು ಅವರ ಖಚಿತವಾದ ನಿಲುವು.

ಇಪ್ಪತ್ತನೆಯ ಶತಮಾನದ ಕನ್ನಡ ಜನಪದದ ಚಲನಶೀಲತೆಯನ್ನು ಕುರಿತು ಸಂವಹನಶೀಲವಲ್ಲದ ಬಿಗಿ ಆಕೃತಿಗಿಂತ ಸರಳ ನುಡಿಗಟ್ಟುಗಳು ಮುಖ್ಯವೆಂಬ ಕವಿಯ ನಿಲುವಿಗೂ, ಸಮಾಜದ ಅಪೇಕ್ಷೆಗಳಿಗೂ ಇರಬಹುದಾದ ಸಂಬಂಧದ ಕುರಿತು ಅವರ ಬರಹಗಳು ಚಿಂತಿಸುತ್ತವೆ. ರಾಮಚಂದ್ರ ಶರ್ಮರ 'ಸಮಗ್ರಕಾವ್ಯ'ಕ್ಕೆ ಬರೆದ ಮುನ್ನುಡಿಯಲ್ಲಿ ಆಧುನಿಕ ಕನ್ನಡ ಕಾವ್ಯಸೃಷ್ಟಿಯ ಸಾಂಸ್ಕೃತಿಕ ಸನ್ನಿವೇಶದ ಅಪೇಕ್ಷೆಗಳಿಂದ, ಅವಶ್ಯಕತೆಗಳಿಂದ ಭಿನ್ನವಾಗಿಯೇ ಉಳಿದ ಅವರ ಕಾವ್ಯಭಾಷೆ, ಅನುಭವ ಪ್ರಪಂಚಗಳ ಜಿಕ್ಕಟ್ಟನ್ನು ಕುರಿತ ಇವರು ಮಾಡಿರುವ ಪರಿಶೀಲನೆ; ಮನೆ ಜಗಳ ಮತ್ತು ಹೊರಗಿನ ಮಾರಿಗಳೆರಡನ್ನೂ ಏಕಕಾಲಕ್ಕೆ ಎದುರಿಸಬೇಕಾಗಿರುವ ದಲಿತ ಕಾವ್ಯದೆದುರಿಗಿರುವ ಪಂಥಹ್ವಾನದ ಕುರಿತ ವಿವೇಚನೆ – ಇವು ರಾಘವೇಂದ್ರರಾವ್ ಅವರ ವಿಮರ್ಶಾ ಬರಹಗಳು ಕೃತಿಸಮೀಕ್ಷೆಯ ಒಟ್ಟೊಟ್ಟಿಗೇ ಇಡಿಯ ಕನ್ನಡ ಸಾಹಿತ್ಯ, ಸಂಸ್ಕೃತಿ, ಸಮಾಜದ ಸಂಕೀರ್ಣ ಸಮಸ್ಯೆಗಳನ್ನು ಎದುರುಗೊಳ್ಳುವ ಬಗೆಯನ್ನು ತೋರುವ ಉದಾಹರಣೆ

ಹೊಸದಾಗಿ ಕಾವ್ಯರಚನೆಗೆ ತೊಡಗಿದವರಿಂದ ಹಿಡಿದು ಹಿರಿಯ ಮುಖ್ಯಲೇಖಕರ ಕೃತಿಗಳವರೆಗೂ ಇವರು ಮುನ್ನುಡಿಗಳನ್ನು ಬರೆದಿದ್ದಾರೆ. ಆ ಎಲ್ಲ ಬರಹಗಳ ಹಿಂದೆ ಶಿಕ್ಷಣದ ಶ್ರದ್ಧೆ, ಶಿಸ್ತಿನಿಂದ, ವಯೋಮಾನದ ದೃಷ್ಟಿಯಿಂದ ಮಾತ್ರವಲ್ಲ, ಪಂಥ ಪ್ರವೃತ್ತಿಗಳ ನೆಲೆಗಳಿಂದಲೂ ಇಲ್ಲಿಯ ಮುನ್ನುಡಿಗಳು ಬಹಳ ಗಂಭೀರವಾಗಿವೆ. ಅವರ ವಿಮರ್ಶನ ಪ್ರಜ್ಞೆಯು ಈ ಎಲ್ಲ ವೈವಿಧ್ಯಗಳನ್ನೂ ಸಹಜ ಕುತೂಹಲ ಮತ್ತು ವಿನಯದಿಂದ ಮುಟ್ಟಲು, ಅರಿಯಲು ಬಯಸುತ್ತದೆ ಎಂಬುದು ಅದರ ಸ್ಥಾನವನ್ನು ವಿಶಿಷ್ಟಗೊಳಿಸಿದೆ. ಹಾಗೆಂದು ಅವರದು ನಿರ್ಮಮ ಧೋರಣೆಯಲ್ಲ. ಅದು ಒಟ್ಟಾರೆಯಾಗಿ ಸೃಷ್ಟಿಶೀಲವಾದ ಎಲ್ಲ ಕೃತಿಗಳನ್ನೂ, ಕೃತಿಕಾರರನ್ನೂ ಗೌರವದಿಂದ ಕಾಣುವಂಥದು. ಒಟ್ಟು ಕನ್ನಡ ಸಾಹಿತ್ಯದ ಗತಿ, ಕ್ರಿಯಾಶೀಲತೆಗಳನ್ನು ಪರಂಪರೆಯ ಹಿನ್ನೆಲೆಯಲ್ಲಿಗ್ರಹಿಸಲು ಪ್ರಯತ್ನಿಸುವ ಇವರು, "ವಿಮರ್ಶೆಯು ಯಾವಾಗಲೂ ಸಾಹಿತ್ಯ ಕೃತಿಗಳ ವಿಶ್ಲೇಷಣೆ, ವಿಮರ್ಶೆಗಳಿಗೆ ಮೀಸಲಾದ ಪರಾವಲಂಬೀ ಚಟುವಟಿಕೆಯಾಗಿಲ್ಲ. ಬದಲಾಗಿ ಒಂದು ಸಂಸ್ಕೃತಿಯು ಸ್ವಾಭಿಮುಖವಾಗಿ ತೊಡಗಿಕೊಂಡು ಜ್ಞಾನಸೃಷ್ಟಿ ಮಾಡುವ ಜವಾಬ್ದಾರಿ ಹೊತ್ತುಕೊಂಡಾಗ ನಡೆಯುವ ಎಲ್ಲ ಪವಾಡಗಳೂ ಸಾಹಿತ್ಯ ವಿಮರ್ಶೆಯಲ್ಲಿಯೂ ಒಂದು ಮಿತಿಯೊಳಗೆ ನಡೆದಿವೆ" ಎಂದು ಹೇಳುತ್ತಾರೆ. ಆದರೆ ಕನ್ನಡದ ಎಲ್ಲಾ ವಿಮರ್ಶೆ ಈ ಮಟ್ಟದಲ್ಲ ರಚನೆಗೊಂಡಿಲ್ಲ ಎಂದು ಅದರ ಮಿತಿಯತ್ತಲೂ ಗಮನ ಸೆಳೆಯುತ್ತಾರೆ.

ಜೀವಂತವಾದ ಕೃತಿಯು ಓದುಗನ ಮನಸಿನಲ್ಲಿ ಅಸಂಖ್ಯ ಸಾಧ್ಯತೆಗಳನ್ನು ಕಂಡುಕೊಳ್ಳುತ್ತದೆ. ಆದ್ದರಿಂದಲೇ ವಿಮರ್ಶೆ–ವಿಶ್ಲೇಷಣೆಗಳಿಗೆ ಅಲ್ಪಾಯುಷ್ಯದ ಶಾಪವಿರುತ್ತದೆ. ಅವು 'ತಾವು ರಚಿತವಾಗುತ್ತಿರುವ ಕಾಲದ ಒತ್ತಡಗಳಿಗೆ ಹಿಡಿದ ಕನ್ನಡಿಗಳು' ಎನ್ನುವ ಇವರು, ಸಾಹಿತ್ಯದ ಯಾವ ನೆಲೆಗಳು ಯಾಕೆ ಮುನ್ನೆಲೆಗೆ ಬರುತ್ತವೆ ಎಂಬುದಕ್ಕೂ, ಅದನ್ನು ಯಾವಾಗ ಯಾರು ಓದುತ್ತಾರೆ ಎಂಬುದಕ್ಕೂ ನಿಕಟ ಸಂಬಂಧವಿದೆ ಎಂದು ಪ್ರತಿಪಾದಿಸುತ್ತಾರೆ. ಕಳೆದ ಸರಿಸುಮಾರು ನೂರು ವರ್ಷಗಳಲ್ಲಿ

ನಮ್ಮ ಸಂಸ್ಕೃತಿಗಳು ಗಳಿಸಿಕೊಂಡಿದ್ದು, ಕಳೆದುಕೊಂಡಿದ್ದು, ಬೇಕೆಂದೇ ಬದಿಗೆ ತಳ್ಳಿದ್ದು ಎಲ್ಲವನ್ನೂ ಮತ್ತೊಮ್ಮೆ ನೋಡುವ, ಕಾಪಾಡಿಕೊಳ್ಳುವ ಕೆಲಸವು ಈಗಾಗಲೇ ಮೊದಲಾಗಿದೆ ಮತ್ತು ರಾಘವೇಂದ್ರರಾವ್ ಅವರೂ ಕೂಡ ತಮ್ಮೆಲ್ಲ ವಿಮರ್ಶಾ ಸಾಹಿತ್ಯದೊಡನೆ ಆ ಕೆಲಸದಲ್ಲಿ ಪ್ರೀತಿಯಿಂದ ತೊಡಗಿಕೊಂಡಿದ್ದಾರೆ. 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇದು ನಿಧಿಧ್ಯಾಸದ ಕಾಲ' ಎನ್ನುವ ಇವರು ನಮ್ಮ ಲೋಕದೃಷ್ಟಿಯೇ ನಮ್ಮ ಲೋಕದರ್ಶನವನ್ನೂ ರೂಪಿಸುವುದಾದರೂ ಕನ್ನಡಕ ಕಡಿವಾಣವಾಗಬಾರದು ಎಂಬ ಆತಂಕ ಅವರದು. ಎಂಥ ಖಚಿತವಾದ ಧೋರಣೆಯೂ, ತನಗಿರುವ ವಿನಯದ ಮೂಲಕವೇ ಲೋಕವನ್ನು ಸಮೀಪಿಸಬೇಕೆಂಬ, ಒಂದು ಕೃತಿಯ ಅನುಭವವನ್ನು ಅದರ ಸಮಕಾಲೀನ ಸಂದರ್ಭ, ಸಾಹಿತ್ಯ ಪರಂಪರೆಯ ಸಾತತ್ಯ ಹಾಗೂ ಇತರ ಶಿಸ್ತುಗಳಿಂದಲೂ ಆವಾಹಿತವಾದ ವಿಶ್ಲೇಷಣಾ ಸಾಮರ್ಥ್ಯ ಇವುಗಳಿಂದ ಪಡೆಯುವುದು ಅವರ ವಿಮರ್ಶಾಕ್ರಮ ಎಂಬುದು ಮೇಲುನೋಟಕ್ಕೆ ತಿಳಿಯುತ್ತದೆ."" ಎನ್ನುತ್ತಾರೆ.

ಇಂದಿನ ಸಾಹಿತ್ಯ ವಿಮರ್ಶೆಯ ಸನ್ನಿವೇಶದಲ್ಲಿ 'ರೂಪನಿಷ್ಠ' ಸಾಹಿತ್ಯ ವಿಮರ್ಶೆಗೂ ಬಂಡಾಯ ಪರವಾದ 'ಆಶಯನಿಷ್ಠ' ವಿಮರ್ಶೆಗೂ ನಡುವೆ ಹುಟ್ಟಿಕೊಂಡಿರುವ ಸಂಘರ್ಷದಲ್ಲಿ ಶಂಬಾ ಅವರು ಅಚ್ಚರಿ ಹುಟ್ಟಿಸುವಷ್ಟು ಬಂಡಾಯ ಪರವಾದ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ ಎನ್ನುವ ಎಚ್. ಎಸ್. ಆರ್., ಸಾಹಿತ್ಯ ಪರಂಪರೆ ಹಾಗೂ ವಿಚಾರ ವಿಮರ್ಶೆಗಳ ಸಾತತ್ಯವನ್ನೂ, ಸೂಕ್ಷ್ಮವಾಗಿ ಗ್ರಹಿಸುವ, ಮೌಲ್ಯಮಾಪನ ಮಾಡುವ ಕ್ರಮವನ್ನು ಅರಿಯಬಹುದು. ಎಚ್. ಎಸ್. ಆರ್. ತಮ್ಮ ಸಮಕಾಲೀನ ಹಾಗೂ ಕಿರಿಯ ಬರಹಗಾರರ ಬಗೆಗೆ ಬರೆಯುವಾಗ ಕನಿಷ್ಠ ಅವರ ಬಗ್ಗೆ ಈ ತನಕ ಬಂದ ಗಮನಿಸಬೇಕಾದ ವಿಮರ್ಶೆಯ ವಿವರಗಳನ್ನು ಪೂರಕ ಓದಿನ ರೀತಿಯಲ್ಲಿ ಪ್ರತ್ಯೇಕವಾಗಿ ಲೇಖನದ ಕೊನೆಯಲ್ಲಿ ಸೂಚಿಸುವುದು ಕೂಡಾ ಸಾಹಿತ್ಯ ಸಂವಾದಕ್ಕೆ ಅನುಕೂಲ. ಹಿರಿಯ ಬರಹಗಾರರ ಬಗ್ಗೆ ನಡೆದ ಮುಖ್ಯ ಚರ್ಚೆಯನ್ನು ಗುರುತಿಸುವ ಹಾಗೆ ಸಮಕಾಲೀನ ಹಾಗೂ ಕಿರಿಯ ಬರಹಗಾರರ ಬಗ್ಗೆ ನಡೆದ ಚರ್ಚೆಯನ್ನು ಗುರುತಿಸುವುದು ವಿಮರ್ಶೆಯ ಎಲ್ಲ ಕಾಲದ ಅಗತ್ಯ. ಸಮಕಾಲೀನ ಬರಹಗಾರರ ಬಗೆಗೆ ಬಂದಿರುವ ವಿಮರ್ಶೆಯ ಜಾಡು ಹಿಡಿಯುವುದು ಸುಲಭವಲ್ಲ. ಆದರೂ ಸಾಧ್ಯವಾದಷ್ಟು ಮಟ್ಟಿಗೆ ಅದು ವಿಮರ್ಶೆಯ ಇಂದಿನ ಅಗತ್ಯವಾದ್ದರಿಂದ ಎಚ್. ಎಸ್. ಆರ್. ತಪ್ಪದೇ ಆ ಕೆಲಸ ಮಾಡುತ್ತಾರೆ.

ಒಟ್ಟಿನಲ್ಲಿ ಎಚ್. ಎಸ್. ಆರ್. ಅವರ ವಿಮರ್ಶಾ ವಿಧಾನ ಏನು ಎಂದು ಹೇಳಬೇಕಾದರೆ ಅದಕ್ಕೆ ಸರಳ ಉತ್ತರಗಳಿಲ್ಲ ಎಂಬುದು ಸತ್ಯ. ಒಂದು ಕೃತಿಯ ಅನುಭವವನ್ನು ಅದರ ಸಮಕಾಲೀನ ಸಂದರ್ಭ, ಸಾಹಿತ್ಯ ಪರಂಪರೆಯ ಸಾತತ್ಯ ಹಾಗೂ ಇತರ ಶಿಸ್ತುಗಳಿಂದಲೂ ಆವಾಹಿತವಾದ ವಿಶ್ಲೇಷಣಾ ಸಾಮರ್ಥ್ಯ– ಇವುಗಳಿಂದ ಪಡೆಯುವುದು ಅವರ ವಿಮರ್ಶಾಕ್ರಮ ಎಂಬುದು ಮೇಲುನೋಟಕ್ಕೆ ತಿಳಿಯುತ್ತದೆ. ಆದರೆ ಅದು ಯಾವುದೇ ಒಂದು ನಿಶ್ಚಿತ ವಿಮರ್ಶಾ ವಿಧಾನದಲ್ಲಿ ಬಂದಿಯಾದ ಕ್ರಮವಲ್ಲ.

ತಾನು ಕೃತಿಯಿಂದ ಪಡೆದದ್ದನ್ನು ಕೇವಲ ವಿವರಿಸುವ ಕ್ರಮವೂ ಎಚ್. ಎಸ್. ಆರ್. ಅವರದ್ದಲ್ಲ. ಹಾಗೆಂದು ವಿಶ್ಲೇಷಣೆಯಿಂದಲೇ ವಿಚಾರ ಸೃಷ್ಟಿಸುವ ಕ್ರಮವೂ ಅಲ್ಲ. ಒಡೆದು ನೋಡಿದರೂ ಇಡಿಯಾಗಿ ಗ್ರಹಿಸುವುದು ಹೇಗೆ ಎಂಬುದರ ಬಗ್ಗೆ ಇವರ ವಿಮರ್ಶೆಯ ಧ್ಯಾನ ಇರುತ್ತದೆ. ಓದಿನ ಪಾಂಡಿತ್ಯ ಹಾಗೂ ಸ್ವಂತ ಪ್ರತಿಭೆ ಎರಡೂ ಒಟ್ಟು ಸೇರಿ ಕೃತಿಯ ಸತ್ವ ಏನು ಎಂಬುದನ್ನು ಅವರ ವಿಮರ್ಶಾ ಬರಹಗಳು ಪ್ರಸ್ತುತಪಡಿಸುತ್ತವೆ.

ರಾಜೇಂದ್ರ ಚೆನ್ನಿ

ಯಾವುದೇ ಸಿದ್ಧಾಂತಗಳನ್ನು ಹೇರದೆ ಸರಳವಾಗಿ ಆದರೆ ಗಂಭೀರವಾಗಿ ವಿಮರ್ಶೆ ಬರೆಯುತ್ತಿರುವವರಲ್ಲಿ ರಾಜೇಂದ್ರ ಚೆನ್ನಿ ಪ್ರಮುಖರು. ಸಾಹಿತ್ಯ ವಿಮರ್ಶೆ ಎಷ್ಟೇ ತಾತ್ವಿಕವಾಗಿ ಬೆಳೆಯುತ್ತಿದ್ದರೂ ಅದರಲ್ಲಿ ವ್ಯಕ್ತಿನಿಷ್ಠ ನೋಟವೂ ಒಂದು ಪ್ರಧಾನ ಆಯಾಮವಾಗಿ ಕ್ರಿಯಾಶೀಲವಾಗಿರುತ್ತದೆ ಎಂಬುದನ್ನು ಅಲ್ಲಗಳೆಯುವುದಿಲ್ಲ. ಚೆನ್ನಿಯವರ ದೃಷ್ಟಿಯಲ್ಲಿ ಸಾಹಿತ್ಯ ಅಧ್ಯಯನವೆಂಬುದೇ ಒಂದು ರೀತಿಯಲ್ಲಿ ಮಾನವನ ಅಂತರಂಗದ ಚೈತನ್ಯಶೀಲತೆಯ ಒಂದು ಅಧ್ಯಯನವೂ ಆಗಿರುವುದರಿಂದ, ವಿಮರ್ಶಕನೂ ಒಬ್ಬ ವ್ಯಕ್ತಿಯಾಗಿ ಅದಕ್ಕೆ ಒಂದು ವೈಯಕ್ತಿಕ ನೆಲೆಯಲ್ಲಿ ಪ್ರತಿಕ್ರಿಯಿಸುತ್ತಲೇ ತನ್ನ ಸಾಹಿತ್ಯ ಮೀಮಂಸೆಯನ್ನು ಕಟ್ಟಿಕೊಳ್ಳುತ್ತಿರುತ್ತಾನೆ. ಆದರೆ ಆ ವಿಮರ್ಶಕನ ವೈಯಕ್ತಿಕತೆ ಎಷ್ಟರ ಮಟ್ಟಿಗೆ ಸಾಹಿತ್ಯದ ಆಂತರಿಕ ಸ್ವಾಯತ್ತತೆಗೆ ಭಂಗಬಾರದಂತೆ ಅದನ್ನು ಅರ್ಥಮಾಡಿಕೊಳ್ಳಲು ಯತ್ನಿಸುತ್ತದೆ ಎಂಬುದರ ಮೇಲೆ ವಿಮರ್ಶೆಯ ಗುಣಮಟ್ಟ ನಿರ್ಧರಿತವಾಗುತ್ತದೆ.

ಚೆನ್ನಿ ಅವರ ವಿಮರ್ಶಾ ಬರಹಗಳು ಸಿದ್ಧಾಂತದಿಂದ ಜಡವಾಗುವುದಿಲ್ಲ. ಆಳವಾದ ಬದ್ದತೆ ಹಾಗೂ ಓದಿನಿಂದ ಆರಂಭಗೊಳ್ಳುವ ಅವರ ವಿಮರ್ಶೆಯಲ್ಲಿ ತಾತ್ವಿಕತೆಯ ಜೊತೆಗೆ ಮರುಪೂರಕವಾಗಿ ಸಿದ್ದಾಂತ ಕಾಣಿಸಿಕೊಳ್ಳುತ್ತದೆ. ಜಾಗತೀಕರಣದ ವಿರುದ್ಧ ಹೋರಾಡುವುದು ವಿಫಲ ಪ್ರಯತ್ನ ಎಂಬ ಹುನ್ನಾರವೊಂದು ಹಬ್ಬಿದೆ. ಅವುಗಳ ನಡುವೆಯೂ ಸಾಮಾಜಿಕ ಕಳಕಳಿ ಹಾಗೂ ಜೀವನ ಪ್ರೀತಿಯಿಂದ ವಿಮರ್ಶೆಯಲ್ಲಿ ತೊಡಗುವುದು ಸಣ್ಣ ಮಾತಲ್ಲ. ಇದನ್ನ ಚೆನ್ನಿ ಪರಿಪಕ್ವ ಪ್ರವೃತ್ತಿಯಾಗಿಸಿಕೊಂಡಿದ್ದಾರೆ.

ರಾಜೇಂದ್ರ ಚೆನ್ನಿಯವರು ಮೊದಲಿನಿಂದಲೂ ಸಿದ್ಧಾಂತಗಳ ಹೇರಿಕೆಯಿಂದ ಪ್ರಜ್ಞಾಪೂರಕವಾಗಿ ತಮ್ಮ ವಿಮರ್ಶಾ ಮಾನದಂಡಗಳನ್ನು ಪ್ರತ್ಯೇಕಗೊಳಿಸಿಕೊಳ್ಳುತ್ತಾರೆ. ಇವರ 'ಸದ್ಯದ ಹಂಗು' ಕೃತಿಯ 'ಸಿದ್ಧಾಂತಗಳ ಪಡಿನೆಳಲಲ್ಲಿ' ಎಂಬ ಲೇಖನ ಸಾಹಿತ್ಯ ವಿಮರ್ಶೆ, ಸಾಹಿತ್ಯ ತತ್ವ ಹಾಗೂ ಸಂಸ್ಕೃತಿ ವಿಮರ್ಶೆಗಳು ಇಂದು ಜಗತ್ತಿನಾದ್ಯಂತ ಎದುರಿಸುತ್ತಿರುವ ಸವಾಲುಗಳನ್ನು ಮುಖಾಮುಖಿಯಾಗಿಸುತ್ತದೆ. ಅದರಲ್ಲೂ ಸಮಾಜ ವಿಜ್ಞಾನಗಳ ಧೃತರಾಷ್ಟ್ರಲಿಂಗನದಿಂದ ಭಗ್ನವಾಗುತ್ತಿರುವ ಸಾಹಿತ್ಯ ಗ್ರಹಿಕೆಗಳ ಸ್ವಾಯತ್ತತೆಯನ್ನು ಮರಳಿ ಪಡೆಯುವ ತವಕ ಇವರ ಬರಹಗಳಲ್ಲಿ ತೀವ್ರವಾಗಿದೆ.

ಸದ್ಯ ನಮಗೆ ನಿಜವಾಗಿಯೂ ಬೇಕಿರುವುದು ಸಾಹಿತ್ಯವೋ ಅಥವಾ ಸಮಕಾಲೀನ ಸಮಾಜ ಮತ್ತು ರಾಜಕಾರಣಕ್ಕೆ ತೀವ್ರವಾಗಿ ಪ್ರತಿಕ್ರಿಯಿಸುವುದೋ ಎಂಬುದರ ಕಡೆಗೆ ಸಾಹಿತ್ಯ ವಿಮರ್ಶೆಯನ್ನ ಕೊಂಡೊಯ್ಯುವ ಚೆನ್ನಿಯವರು; ಯಾವುದೇ ವಿಮರ್ಶೆ ಆಯಾ ಕೃತಿಗಳ ಒಳಗಿನಿಂದ ಮೂಡುವ ಜ್ಞಾನ ಹಾಗೂ ಅನುಭವಗಳ ಗ್ರಹಿಕೆಗೆ ಪೂರಕವಾಗಿ ಮೈತಳೆಯಬೇಕು ಮತ್ತು ಸಾಮಾಜಿಕ ಸಂಗತಿಗಳನ್ನು ಚರ್ಚಿಸಲು ಇಂತಹ ಸಾಹಿತ್ಯ ವಿಮರ್ಶೆಯ ವಿಶಿಷ್ಟ ಜ್ಞಾನವನ್ನು ಗಂಭೀರವಾಗಿ ಪರಿಶೀಲಿಸಬೇಕೆಂದು ಒತ್ತಾಯಿಸುತ್ತಾರೆ.

ಒಂದು ದೃಷ್ಟಿಯಲ್ಲಿ ಲೋಕದ ಇತರೆ ಜ್ಞಾನ ಶಿಸ್ತುಗಳಿಂದ ಸಾಹಿತ್ಯ ವಿಶ್ಲೇಷಿಸುವ, ವ್ಯಾಖ್ಯಾನಿಸುವ ಪ್ರಯತ್ನ ನಡೆದರೆ, ಚೆನ್ನಿಯವರು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವಿಮರ್ಶಾ ಪರಿಕಲ್ಪನೆಗಳ ಅನುಸಂಧಾನದಿಂದಾಗಿ ತಮ್ಮದೇ ಶೈಲಿಯಲ್ಲಿ ಕೃತಿ ಪರೀಕ್ಷೆ ಸಿದ್ಧಾಂತಗಳ ವಿಶ್ಲೇಷಣೆ ಹಾಗೂ ತಾತ್ವಿಕ ಮಾರ್ಗಗಳ ಪರಿಶೀಲನೆ ನಡೆಸುತ್ತಾರೆ. ಒಟ್ಟಿನಲ್ಲಿ ಸಾಹಿತ್ಯ ಕೃತಿಗಳನ್ನು, ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರಶ್ನೆಗಳನ್ನು ಸಧ್ಯದ ಹಂಗಿನಲ್ಲಿ ನೋಡುವುದರ ಜೊತೆಗೆ ಎಲ್ಲ ಕಾಲಕ್ಕೂ ಪ್ರಸ್ತುತವಾಗಬಲ್ಲ ವ್ಯಾಪಕ ವಿಶ್ಲೇಷಣೆಯ ಕ್ರಮಗಳನ್ನು ರೂಪಿಸುವ ಕ್ರಮ ಇವರ ಬರಹಗಳಲ್ಲಿದೆ.

ಸಾಹಿತ್ಯ, ಅದೆಷ್ಟೇ ಸಾಮಾಜಿಕ-ರಾಜಕೀಯ ಸತ್ವವನ್ನು ಗಳಿಸಿಕೊಂಡರೂ, ಅದು ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಳ್ಳದೆ ಸಾಹಿತ್ಯವಾಗಿ ಉಳಿಯಬೇಕು. ಅಂದರೆ ಅದು ಮನುಷ್ಯನನ್ನು ಒಳಗಿಂದ ಅಲ್ಲಾಡಿಸಬೇಕು. ಹೊರಗಿಂದ ಅಲ್ಲ. ಅದು ಹೊರಗಿಂದ ಅಲ್ಲಾಡಿಸ ಹೊರಟಷ್ಟೂ ಅದು ತನ್ನ ಸತ್ವವನ್ನು ಕಳೆದುಕೊಂಡು ಸಾಹಿತ್ಯವಾಗಿ ತನ್ನ ವಿಶ್ವಾಸಾರ್ಹತೆಯನ್ನೂ ಕಳೆದುಕೊಳ್ಳುತ್ತದೆ. ಇದು ನಮ್ಮ ಸಾಹಿತ್ಯ ಪರಂಪರೆಗೇ ಮಾಡುವ ಅನ್ಯಾಯ. ಅತ್ತ ನವ್ಯದ ಅತಿ ವಿಶಿಷ್ಟ ಸಾಹಿತ್ಯ ಮೀಮಾಂಸೆಯ ಮಡಿವಂತಿಕೆಯ ಕಾಟದಿಂದಾಗಿಯೂ, ಇತ್ತ ಅದರ ಸಾಂಸ್ಕೃತಿಕ ರಾಜಕಾರಣ ವಿರುದ್ಧ ಸೆಟೆದೆದ್ದ ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟವು ಸಾಹಿತ್ಯ ಗುಣದ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ನಿರಾಕರಿಸಿದ ನಿಲುವಿನಿಂದಾಗಿ ಸಾಹಿತ್ಯದಲ್ಲಿ ಸಾಮಾಜಿಕತೆ ಜೊತೆಗೆ ಕಲಾತ್ಮಕತೆಯೂ ಮುಖ್ಯ ಎಂಬುದು ತೀರ್ಮಾನವಾಯಿತು.

ಒಂದು ಕೃತಿ ಸಾಹಿತ್ಯ ಕೃತಿ ಹೌದೋ ಅಲ್ಲವೋ ಎಂದು ನಿರ್ಧರಿಸಲಿಕ್ಕೆ ಸಾಹಿತ್ಯಿಕ ಮಾನದಂಡಗಳು ಸಾಕಾಗುತ್ತವೆ. ಆದರೆ ಅದು ಶ್ರೇಷ್ಠ ಸಾಹಿತ್ಯ ಕೃತಿ ಹೌದೋ ಅಲ್ಲವೋ ಎಂಬುದನ್ನು ನಿರ್ಧರಿಸಲು ಸಾಹಿತ್ಯಿಕ ಮಾನದಂಡಗಳು ಸಾಕಾಗುವುದಿಲ್ಲ. ಸಾಹಿತ್ಯ ವಿಮರ್ಶೆಯಲ್ಲಿ ಜೀವನದ ಮೌಲ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟವನು ಎಲಿಯೆಟ್. ಸಾಮಾಜಿಕ ಜೀವನದಲ್ಲಿ ನಿಧಾನವಾಗಿ ಇಲ್ಲವೇ ತೀವ್ರವಾಗಿ ಬದಲಾವಣೆಗಳು ನಡೆದೇ ಇರುತ್ತದೆ. ಸಾಹಿತ್ಯ ಈ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಧ್ವನಿಪೂರ್ಣವಾಗಿ ಚಿತ್ರಿಸುತ್ತದೆ. ಹಾಗೆ ಚಿತ್ರಿಸುವಾಗ ತನಗೆ ಒಗ್ಗದ ಸಾಹಿತ್ಯಿಕ ನಿರ್ಬಂಧಗಳನ್ನು ಮುರಿದು ಹೊಸ ಚೌಕಟ್ಟುಗಳನ್ನು ನಿರ್ಮಿಸಿಕೊಳ್ಳುತ್ತದೆ. ಉದಾ:ಗೆ ಈಚಿನ ದಿನಗಳಲ್ಲಿ ಕಾಣುತ್ತಿರುವ ಸಾಹಿತ್ಯ ಪ್ರಕಾರಗಳೇ ಸಾಕು ಎನ್ನುವ ಅವರು ಇಂದು ಯಾವುದೇ ಸಾಹಿತ್ಯಿಕ

ಚಳುವಳಿಗಳು ಕ್ರಿಯಾಶೀಲವಾಗದಿರಲು ಕಾರಣಗಳನ್ನು ಕಾರ್ಪೊರೇಟ್ ರಂಗದಲ್ಲಿ ಗುರುತಿಸುತ್ತಾರೆ "ಬರಹಗಾರರ ಒಕ್ಕೂಟದ ಸಂದರ್ಭದದಿಂದ ಆರಂಭವಾಗಿದ್ದ ಶೂದ್ರ ಸಂವೇದನೆಯ ಚಳುವಳಿಗಳು ಈಗ ಬಸವಳಿದು ಹೋಗಿದ್ದರಿಂದ ಕನ್ನಡದಲ್ಲಿ ಈಗ ಒಂದು ಕಾರ್ಪೋರೇಟ್-ಬ್ರಾಹ್ಮಣಶಾಹಿ ಮತ್ತೆ ಪ್ರಬಲವಾಗಿದೆ. ಅದು ಪ್ರತಿಭಾವಂತ ಶೂದ್ರ-ದಲಿತ ಬರಹಗಾರರನ್ನು ನಯವಾಗಿ ನಿರ್ವೀರ್ಯಗೊಳಿಸಿದೆ."[೧೦] ಆ ಮೂಲಕ ಕನ್ನಡ ಸಾಹಿತ್ಯದಲ್ಲಿ ಅನೂಚಾನವಾಗಿ ಬಂದಿದ್ದ ಜನಪರ ದೃಷ್ಟಿಕೋನಕ್ಕೆ ಧಕ್ಕೆ ಒದಗಿದೆ ಎಂದು ಭಾವಿಸುತ್ತಾರೆ.

ಮುಂದುವರೆದು ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಗತಕಾಲದ ವಿಚಾರಗಳು ಮೂಡಿಬರುತ್ತಿದ್ದು "ಪ್ರಾಯಶ: 'ಗಾಂಧಿಬಂದ' ದಂಥ ಒಂದೆರೆಡು ಕೃತಿಗಳನ್ನು ಬಿಟ್ಟರೆ ಎರಡು ದಶಕಗಳ ಯಾವ ಕೃತಿ ನಮ್ಮ ಸಧ್ಯದ ಚರಿತ್ರೆಯನ್ನು ಎದುರು ಹಾಕಿಕೊಂಡಿದೆ. ತಮ್ಮ ಅದ್ಭುತವಾದ ಕಥನ ಪ್ರತಿಭೆಯನ್ನು ಈ ಕಾಲದ ಕಾದಂಬರಿಗಳು ಗತಕಾಲದ ಅನ್ವೇಷಣೆಗೆ ಮಾತ್ರ ಯಾಕೆ ಮೀಸಲಿಟ್ಟಿವೆ? ನಮ್ಮ ಬದುಕಿನ ಅತಿದೊಡ್ಡ ಪಲ್ಲಟಗಳ ಈ ಸಂದರ್ಭದಲ್ಲಿ ಅವುಗಳಿಗೆ ಸ್ಪಂದಿಸಿದ ಒಂದೇ ಇಂದು ಕೃತಿ ಯಾಕೆ ಬಂದಿಲ್ಲ? ಆದರೂ ನಮ್ಮ ವಿಮರ್ಶಕರು ವಿವೇಚನೆಯೇ ಇಲ್ಲದ ಸಂಭ್ರಮದಿಂದ ಯಾಕೆ ಬರೆಯುತ್ತಿದ್ದಾರೆ?"[೧೧] ಎಂದು ಪ್ರಶ್ನಿಸುತ್ತಾರೆ. ಯಾವುದೇ ಸಾಹಿತ್ಯ ಮೌಲಿಕವಾಗಬೇಕಾದರೆ ಸಮಕಾಲೀನ ಸಮಾಜವನ್ನು ತನ್ನ ಕೃತಿಗಳಲ್ಲಿ ಒಡಮೂಡಿಸಬೇಕು. ಆದರೆ ಸಮಕಾಲೀನ ಸಾಹಿತ್ಯ ತಕ್ಷಣದ ಅನುಭವಗಳನ್ನು ಸಾಹಿತ್ಯವಾಗಿಸುವಲ್ಲಿ ಸೋತಿದೆ ಎನ್ನುತ್ತಾರೆ.

ಬಿ.ಎನ್. ಸುಮಿತ್ರಾಬಾಯಿ

ಕನ್ನಡದ ಮಹಿಳಾ ಸಾಹಿತ್ಯ ವಿಮರ್ಶಕರಲ್ಲಿ ಪ್ರಮುಖರು. ತೊಂಬತ್ತರ ದಶಕದಿಂದಲೇ ಕ್ರಿಯಾಶೀಲರಾಗಿದ್ದಾರೆ. ಕನ್ನಡ ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆಯನ್ನು ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಗಳು ಮತ್ತು ಸ್ತ್ರೀವಾದಿ ವಿಮರ್ಶೆಗಳು ಪ್ರಭಾವಿಸಿವೆಯಾದರೂ, ಅವುಗಳ ಜೊತೆಗೆ ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳ ವಿಶ್ಲೇಷಣೆಯಿಂದ ಕನ್ನಡದಲ್ಲಿ ಅಸ್ತಿತ್ವದಲ್ಲಿದ್ದಿರಬಹುದು. ಮಹಿಳಾ ಪರ ಆಲೋಚನೆಗಳನ್ನು ಶೋಧಿಸಿದವರಲ್ಲಿ ಮುಖ್ಯರು. ಸಾರ್ವತ್ರಿಕದೆಡೆಗೆ (೧೯೮೭) ವಿಚಯ (೧೯೯೫) ಸರಹದ್ದುಗಳ ಆಚೆ-ಈಚೆ (೨೦೦೯) ಇವರ ಪ್ರಮುಖ ವಿಮರ್ಶಾ ಕೃತಿಗಳು. ಅವರ ಸರಹದ್ದುಗಳ ಆಚೆ-ಈಚೆ ಕೃತಿಯಲ್ಲಿರುವ ಲೇಖನಗಳು-ಕನ್ನಡದ ಸ್ತ್ರೀವಾದಿ ವಿಮರ್ಶೆ ಮತ್ತು ಸಾಂಸ್ಕೃತಿಕ ವಿಮರ್ಶೆಗಳೆರಡನ್ನು ಒಗ್ಗೂಡಿಸಿ ನಡೆಸಿರುವ ಅಧ್ಯಯನ ಎನಿಸುತ್ತದೆ. ಉದಾಹರಣೆಗೆ 'ಆದಿಪುರಾಣದಲ್ಲಿ ಸ್ತ್ರೀಪ್ರಪಂಚದ ಬಳಕೆ' ಎಂಬ ಲೇಖನದಲ್ಲಿ ಇದುವರೆವಿಗೂ ಪಂಪನ ಆದಿಪುರಾಣವನ್ನು ಧಾರ್ಮಿಕ ಕೃತಿಯಾಗಿ, ಅಲೌಕಿಕ ಕಾವ್ಯವಾಗಿ, ಕಾವ್ಯಧರ್ಮ ಸ್ಥಾಪನೆಯ ನೆಲೆಯೆಲ್ಲಿಯೂ ಪರಿಶೀಲಿಸಲಾಗಿತ್ತು. ಆದರೆ ಸುಮಿತ್ರಾಬಾಯಿಯವರ ಪಂಪ ಮತ್ತು ಆತನ ಕಾವ್ಯಗಳನ್ನು ಭಿನ್ನವಾದ ನೆಲೆಯಲ್ಲಿ ವಿಶ್ಲೇಷಿಸಿದರು.

ಪಂಪ ಮೂಲತ; ಸಂಸ್ಕೃತ ಶಿಷ್ಟ ಕಾವ್ಯ ಪರಂಪರೆಯಿಂದ ಆಳವಾದ ಪ್ರಭಾವ ಪಡೆದರೂ ಅರ್ಥಪೂರ್ಣವಾದ ಪ್ರಾದೇಶಿಕ ಸತ್ವವನ್ನು ಸಾಧಿಸಿದ ಕವಿ. ಆದರೆ ಆತನ ಕಾವ್ಯದಲ್ಲಿನ ಮಹಿಳಾ ಪಾತ್ರಗಳ ದೃಷ್ಟಿಕೋನದಲ್ಲಿ ಈ ಪ್ರಾದೇಶಿಕ ಸಂಸ್ಕೃತಿಯ ಅಂದರೆ ದೇಸಿ ಸಂಸ್ಕೃತಿಯ ಮೌಲ್ಯಗಳು ವ್ಯಕ್ತವಾಗಿಲ್ಲ. ಸಂಸ್ಕೃತ ಶಿಷ್ಟ ಕಾವ್ಯ ಪರಂಪರೆಯ ಸಾಂಪ್ರದಾಯಿಕ ಸ್ತ್ರೀ ದೋರಣೆಯೇ ಪ್ರಧಾನವಾಗಿ ಪಡಿಮೂಡಿದೆ. ಹೀಗಾಗಿ ಲಿಂಗಾಧಾರಿತ ಅಧ್ಯಯನದ ದೃಷ್ಟಿಕೋನದಿಂದ ಪಂಪನ ಕಾವ್ಯದ ಸ್ತ್ರೀಪಾತ್ರ ಚಿತ್ರಣದ ವಿಶ್ಲೇಷಣೆಗೆ ಹೆಚ್ಚು ಉಪಯುಕ್ತತೆ ಇಲ್ಲವೆಂಬುದು ಸುಮಿತ್ರಾಬಾಯಿಯವರ ಅಭಿಮತ. ಆದಿಪುರಾಣದಲ್ಲಿ ಬರುವ ಸ್ತ್ರೀಪಾತ್ರಗಳನ್ನು 'ಸ್ತ್ರೀ ಪ್ರಪಂಚದ ಸೃಷ್ಟಿ ಮತ್ತು ಸ್ತ್ರೀಪ್ರಪಂಚದ ಬಳಕೆ ಎಂಬುದಾಗಿ ವಿಭಾಗಿಸಿಕೊಂಡು ವಿಶ್ಲೇಷಣೆ ನಡೆಸುವ ಇವರು, ಪಂಪ ಸ್ತ್ರೀಪಾತ್ರಗಳನ್ನು'ಸರಕು'ಗಳಂತೆ ಭಾವಿಸಿರುವುದಾಗಿ ಅಭಿಪ್ರಾಯಪಡುತ್ತಾರೆ. ಇದಕ್ಕೆ ಪೂರಕವಾಗಿ ಸ್ತ್ರೀಜನಾಂಗಕ್ಕೆ ಮುಕ್ತಿಯಿಲ್ಲ ಎಂಬ ಜೈನಧರ್ಮದ ನಿಯಮವನ್ನು ಪರಿಶೀಲಿಸಿ ಪಂಪ ಮತ್ತು ಆತನ ಸಮಕಾಲೀನ ಸಮಾಜ ಹಾಗೂ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಹೇಗೆ ಕಾಣಲಾಗುತ್ತಿತ್ತು ಎಂಬುದರ ಬಗ್ಗೆ ಒಳನೋಟಗಳನ್ನು ನೀಡುತ್ತಾರೆ.

"ಪಂಪನ ಆದಿಪುರಾಣದಲ್ಲಿ ಸ್ತ್ರೀ ಪುರುಷರ ಬದುಕಿನ ಅತ್ಯಂತ ಪರಿಪೂರ್ಣ ಸಂಬಂಧ ವಿವೇಚನೆ ಇಷ್ಟೇ ಎಂಬುದನ್ನು ಗಮನಿಸಬೇಕು. ವಾಸ್ತವದಲ್ಲಿ ಕನ್ನಡ ನಾಡಿನ ದ್ರಾವಿಡ ಸಂಸ್ಕೃತಿಯ ಮೂಲದಿಂದ ಆತನ ಸ್ತ್ರೀ ಪ್ರಪಂಚ ಪ್ರಭಾವಿತವಾಗದಿದ್ದರೆ ಅಲ್ಲಿ ಹೆಣ್ಣು ಕೇವಲ ಹೆಂಗಸಾಗಷ್ಟೇ ಇರುವುದು ಸಾಧ್ಯವಿರುತ್ತಿದ್ದಿಲ್ಲ. ಅಲ್ಲಿ ತಾಯಿಯೂ, ಮಗಳು, ಸೋದರಿಯರೂ, ಅಂಥದ್ದೇ ಸ್ಥಾನಗಳಲ್ಲಿ ವಾತ್ಸಲ್ಯ, ಭಕ್ತಿ, ಗೌರವ ಭಾವಗಳಿಂದ ನೋಡಬಲ್ಲ ಸ್ತ್ರೀ ಸೌಜನ್ಯದ ಲಕ್ಷಣವೂ ಇದ್ದೇ ಇರುತ್ತಿತ್ತು"[೨] ಎಂದು ಹೇಳುವ ಮಾತುಗಳು ಪಠ್ಯದ ಸಾಮಜಿಕಾನುಸಂಧಾನದ ಪ್ರಮುಖ ಪರಿಕಲ್ಪನೆಯಾದ ಲಿಂಗ ಸಂವೇದನೆಗೂ, ಸಂಸ್ಕೃತಿ ಸಂದರ್ಭದ ಸ್ವರೂಪಕ್ಕೂ ಇರುವ ಸಾವಯವ ಸಂಬಂಧ ಕುರಿತು ಬೆಳಕು ಚೆಲ್ಲುತ್ತವೆ. ಸುಮಿತ್ರಾಬಾಯಿಯವರ ಒಟ್ಟು ವಿಮರ್ಶಾ ದೃಷ್ಟಿಕೋನಗಳನ್ನು ಗಮನಿಸಿದರೆ ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ ವಿಮರ್ಶಾ ವಿಧಾನ ರೂಪುಗೊಂಡು ವ್ಯಾಪಕವಾಗಿ ಮುನ್ನೆಲೆಗೆ ಬಂದಂತೆಲ್ಲಾ ಸಾಹಿತ್ಯಾತ್ಮಕ ವಸ್ತುನಿಷ್ಠ ವಿಮರ್ಶಾ ವಿಧಾನದ ಮಿತಿಗಳು ಹೆಚ್ಚು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಾ ಬರಲಾರಂಭಿಸಿದವು. ಹಾಗೆಯೇ ಪ್ರಸ್ತುತ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಯ ಸಾಂಸ್ಕೃತಿಕಾನುಸಂಧಾನ ವಿಧಾನ ವ್ಯಾಪಕವಾಗಿ ಪ್ರವರ್ದಮಾನಕ್ಕೆ ಬಂದಂತೆಲ್ಲಾ, ಸಾಂಪ್ರದಾಯಿಕ ಸ್ತ್ರೀವಾದಿ ವಿಮರ್ಶೆಯ ಸಾಮಾಜಿಕಾನುಸಂಧಾನ ವಿಧಾನದ ಪರಿಮಿತಿಗಳು ಬೆಳಕಿಗೆ ಬರುತ್ತಿರುವುದನ್ನು ಸಹ ಗಮನಿಸಬಹುದು. ಇವುಗಳ ಹಿನ್ನೆಲೆಯಲ್ಲಿ ಸುಮಿತ್ರಾಬಾಯಿಯವರ ವಿಮರ್ಶೆಯ ಕನ್ನಡ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಯ ಒಂದು ಅತ್ಯಂತ ಮಹತ್ವಪೂರ್ಣ ಅಭಿವ್ಯಕ್ತಿಯಾಗಿದೆ.

ಕಳೆದ ಮೂರು ದಶಕಗಳಿಗೂ ಮೀರಿ ನಿರಂತರವಾಗಿ ಸಾಹಿತ್ಯಿಕ ಅನುಸಂಧಾನದಲ್ಲಿ ತೊಡಗಿಸಿಕೊಂಡಿರುವ ಇವರು, ಯಾವುದೇ ಪ್ರಾಚೀನ ಕೃತಿಯನ್ನು

ಕುರಿತು ಹೇಳುವಾಗ ಅದನ್ನು ಆಧುನಿಕ ಪ್ರಸ್ತುತತೆಯ ನಿಟ್ಟಿನಲ್ಲಿ ಪರಿಶೀಲಿಸುವಂತೆಯೇ. ಆಧುನಿಕ ಕೃತಿಯನ್ನು ವಿಮರ್ಶೆಗೆ ಒಡ್ಡುವಾಗ ಪಾರಂಪರಿಕವಾಗಿ ಅದು ಪಡೆಯಬಹುದಾದ ಅರ್ಥವನ್ನು ವಿವೇಚಿಸುತ್ತಾರೆ. ಜನಪರ ಸಂಸ್ಕೃತಿಯನ್ನು ಕುರಿತು ಹೇಳುವಾಗ, ಇಂದಿನ ಕೊಳ್ಳುಬಾಕ ಸಂಸ್ಕೃತಿಯನ್ನು ಉತ್ತೇಜಿಸುವ, ಸ್ನಾಯುಬಲದಿಂದ ಹೆಚ್ಚುತ್ತಿರುವ ದ್ವೇಷ, ಅಸಹನೆ, ಹಿಂಸೆ ಮುಂತಾದವುಗಳು ಇಂದಿನ ಜೀವನ ಕ್ರಮದಲ್ಲಿ ಹೇಗೆ ಅನಿವಾರ್ಯವಾಗಿ ಬಿಟ್ಟಿದೆ ಎಂಬುದನ್ನು ವಿವೇಚಿಸುವ ಸಂದರ್ಭದಲ್ಲಿ, ಗಾಂಧೀಜಿಯವರ ಸರಳತೆ, ಪ್ರೀತಿಸುವ ಶಕ್ತಿ, ಪ್ರಾಮಾಣಿಕತೆ ಹಾಗೂ ಸಮುದಾಯದ ಬಗೆಗಿನ ಕಾಳಜಿಗಳ ಬಗ್ಗೆ ಗಮನ ಹರಿಯುವಂತೆ ಮಾಡುತ್ತಾರೆ.

ರಹಮತ್ ತರೀಕೆರೆ

ಕನ್ನಡದ ಪ್ರಸಿದ್ಧ ಸಂಸ್ಕೃತಿ ಚಿಂತಕರು ಹಾಗೂ ವಿಮರ್ಶಕರಾದ ರಹಮತ್ ತರೀಕೆರೆಯವರು 'ಪ್ರತಿಸಂಸ್ಕೃತಿ', 'ಮರದೊಳಗಿನ ಕಿಚ್ಚು', 'ಸಂಸ್ಕೃತಿ ಚಿಂತನೆ', 'ಕತ್ತಿಯಂಚಿನದಾರಿ', 'ಚಿಂತನೆಯ ಪಾಡು', 'ಕರ್ನಾಟಕದ ಸೂಫಿಗಳು' ಹಾಗೂ 'ಕರ್ನಾಟಕದ ನಾಥಪಂಥ' ಮುಂತಾದವು ರಹಮತ್ ತರೀಕೆರೆ ಅವರ ವಿಮರ್ಶಾ ಗ್ರಂಥಗಳಾಗಿವೆ. 'ಮಾತು ತಲೆ ಎತ್ತುವ ಬಗೆ', 'ಇಲ್ಲಿ ಯಾರೂ ಮುಖ್ಯರಲ್ಲ' ಮುಂತಾದವು ಅವರ ಸಂಶೋಧನಾ ಕೃತಿಗಳು. 'ಸಾಂಸ್ಕೃತಿಕ ಅಧ್ಯಯನ', 'ಧರ್ಮಪರೀಕ್ಷೆ', 'ವಸಾಹತು ಪ್ರಜ್ಞೆ ಮತ್ತು ವಿಮೋಚನೆ', 'ಧರ್ಮವಿಶ್ವಕೋಶ', 'ಹೊಸ ತಲೆಮಾರಿನ ತಲ್ಲಣ', 'ಕವಿರಾಜಮಾರ್ಗ ಸಾಂಸ್ಕೃತಿಕ ಮುಖಾಮುಖಿ', 'ಅಕ್ಕನ ವಚನಗಳು ಸಾಂಸ್ಕೃತಿಕ ಮುಖಾಮುಖಿ', 'ಕುಮಾರವ್ಯಾಸ ಸಾಂಸ್ಕೃತಿಕ ಮುಖಾಮುಖಿ', 'ಇಂಗ್ಲಿಷ್ ಗೀತೆಗಳು ಸಾಂಸ್ಕೃತಿಕ ಮುಖಾಮುಖಿ', 'ಮಲೆಗಳಲ್ಲಿ ಮದುಮಗಳು ಸಾಂಸ್ಕೃತಿಕ ಮುಖಾಮುಖಿ', 'ತನ್ನತನದ ಹುಡುಕಾಟ' ಮುಂತಾದವು ಅವರ ವೈಶಿಷ್ಟ್ಯಪೂರ್ಣ ಚಿಂತನ ಕೃತಿಗಳು. 'ಲೋಕವಿರೋಧಿಗಳ ಜತೆಯಲ್ಲಿ', 'ಐವರು ಹೇಳಿದ ಜನಪದ ಕಥೆಗಳು' ಮುಂತಾದವು ಸಂಪಾದಿತ ಕೃತಿಗಳು.

"ಇದೊಂದು ಬಿಕ್ಕಟ್ಟಿನ ಕಾಲ. ನನ್ನ ತಲೆಮಾರಿನ ಅನೇಕರ ನಡೆ ನುಡಿಗಳ ನಡುವೆ ಕಾಣಿಸಿಕೊಳ್ಳುವ ಕಷ್ಟ ಕೂಡ. ನಮ್ಮ ನಾಡಿನ ಚರಿತ್ರೆಯಲ್ಲಿ ಯಾವೊತ್ತೂ ಇಷ್ಟೊಂದು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ. ಜಗತ್ತಿನ ದೊಡ್ಡ ಮಿಲಿಟರಿ ಶಕ್ತಿಗಳು, ಕೋಮುವಾದ, ಪ್ರಭುತ್ವಗಳು ಹುಟ್ಟಿಸುವ ಕ್ರೌರ್ಯ, ಅದಕ್ಕೆ ಎದುರಾಗಿ ಹುಟ್ಟಿಕೊಂಡ ಜನರ ಪ್ರತಿರೋಧಗಳು, ಮಧ್ಯಮವರ್ಗದ ಅವಕಾಶವಾದೀ ವರ್ತನೆ, ಜನರಿಗಾಗಿ ಕೆಲಸ ಮಾಡುವ ಚಳವಳಿಗಾರರ ದಮನ – ಇವೆಲ್ಲವೂ ನಮ್ಮ ಓದು ಮತ್ತು ಬರಹಗಳ ಮೇಲೆ ಹೇಗೋ ಆವರಿಸಿಕೊಂಡಿವೆ. ಇವನ್ನು ಮರೆತು ಬರೆಯುವಂತಿಲ್ಲ. ಮರೆಯದೆ ಬರೆದರೆ, ಬರೆದ ಬರೆಹ ಆತ್ಮವಿಶ್ವಾಸ ಕೂಡುವುದಕ್ಕೆ ಬದಲಾಗಿ ಪ್ರಶ್ನೆಯಾಗಿ ಎದುರು ನಿಂತು ಕಾಡುತ್ತದೆ. ಇದನ್ನೇ ಕತ್ತಿಯಂಚಿನ ದಾರಿಯಲ್ಲಿ

ನಡೆಯುವ ಕಷ್ಟ ಎಂದು ನಾನು ಭಾವಿಸಿದ್ದೇನೆ. ಕತ್ತಿಯ ಅಲಗಿನ ಮೇಲೆ ನಡೆದರೆ ಕಾಲು ಕತ್ತರಿಸಿ ಹೋಗುತ್ತದೆ. ಅದನ್ನು ಬಾಗಿ ಎತ್ತಿಕೊಂಡರೆ ಕೈಯ ಆಯುಧವಾಗುತ್ತದೆ. ಅದನ್ನು ಸ್ವವಿಮರ್ಶೆಯನ್ನಾಗಿ ಮಾಡಿ ಚುಚ್ಚಿಕೊಂಡರೆ ನಮ್ಮ ಒಡಲಲ್ಲಿ ಮುರಿದು ನೋವುಂಟು ಮಾಡುತ್ತದೆ....."[೨೩] ಎಂದು ಆತಂಕ ವ್ಯಕ್ತಪಡಿಸುವ ಇವರು ಕನ್ನಡ ವಿಮರ್ಶೆಗೆ ಅಪಾರ ವೈವಿಧ್ಯತೆಯನ್ನು ತಂದುಕೊಟ್ಟಿದ್ದಾರೆ. ಸಾಹಿತ್ಯ ಕೃತಿಗಳಷ್ಟೆ ವಿಮರ್ಶೆಯ ವಸ್ತುಗಳಲ್ಲ. ಸಮಾಜದ ವಿವಿಧ ಸಮುದಾಯಗಳು, ಆಚರಣೆಗಳು, ಭಾಷೆ, ಸಂಸ್ಕೃತಿ ಎಲ್ಲವೂ ಇವರ ವಿಮರ್ಶೆಯ ವ್ಯಾಪ್ತಿಗೆ ಸೇರುತ್ತವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ವಾತಂತ್ರ್ಯ ನಂತರ ನಡೆದ ಚಳುವಳಿಗಳು ಕನ್ನಡ ಸಾಹಿತ್ಯಕ್ಕೆ ಸರಿಯಾದ ತಳಹದಿಯನ್ನು ನಿರ್ಮಿಸಿದವು. ವಾಸ್ತವವಾಗಿ ಚಳುವಳಿಯೆಂದರೆ ಜನಸಮುದಾಯಗಳ ಆಲೋಚನಾ ಕ್ರಮವನ್ನು ರೂಪಿಸಬಲ್ಲ ಮತ್ತು ಅವರನ್ನು ಕ್ರಿಯೆಗೆ ತೊಡಗಿಸಬಲ್ಲ ಸಾಮಾಜಿಕ ಬದಲಾವಣೆಯ ಶಕ್ತಿ. ಆದರೆ, ಸಧ್ಯ ಕರ್ನಾಟಕದಲ್ಲಿ ಕಸುವುಳ್ಳ ಚಳುವಳಿಗಳು ಇಲ್ಲದಿರಲಿ ಅಥವಾ ಇದ್ದರೂ ಅವುಗಳು ಕ್ಷೀಣದೆಸೆಯಲ್ಲಿರುವ ಕಾರಣಗಳಲ್ಲಿ ಮುಖ್ಯವಾದುದು; ಜಾಗತೀಕರಣದ ಭಾಗವಾಗಿ ಬಂದಿರುವ ಮಾರುಕಟ್ಟೆ ಆರ್ಥಿಕತೆಯು ಬದುಕನ್ನು ವ್ಯಾಪಕವಾಗಿ ಆಚರಿಸುತ್ತಿರುವುದು. ಇದಕ್ಕೆ ಪೂರಕವಾಗಿ ಜಾಗತೀಕರಣವನ್ನು ಗ್ರಹಿಸುವ ಮತ್ತು ಅದನ್ನು ಮುಖಾಮುಖಿ ಮಾಡುವ ವಿಷಯದಲ್ಲಿ ಅಗಾಧವಾದ ತಾತ್ವಿಕ ಅಸ್ಪಷ್ಟತೆ ಇರುವುದು ಇವತ್ತಿನ ಚಳುವಳಿ ರಹಿತ ಸ್ಥಿತಿಗೆ ಕಾರಣವೆನ್ನುತ್ತಾರೆ.

ಇವತ್ತಿನ ಸಾಹಿತ್ಯ – ಸಂಸ್ಕೃತಿ ಚಿಂತನೆಗಳು ರಿಯಾಲಿಟಿ ಶೋಗಳಾಗುತ್ತಿವೆ. ಸರಕು ಸಂಸ್ಕೃತಿಯ ಭಾಗಗಳಾಗುತ್ತಿವೆ. ಪತ್ರಿಕೆ/ಮಾಧ್ಯಮಗಳಲ್ಲಿ ಸಾಹಿತ್ಯಿಕ ಚರ್ಚೆ ಅಥವಾ ಪುಸ್ತಕ ವಿಮರ್ಶೆಗೆ ಜಾಗವೇ ಇರುವುದಿಲ್ಲ ಅಥವಾ ಅದು ಬೇಕಾಗಿಯೇ ಇಲ್ಲ. ಕೆಲವೊಮ್ಮೆ ಅಂತಹ ಜಾಗವಿದ್ದರೂ ಅದು ಆಧುನಿಕೋತ್ತರವಾದದ ಹೊಚ್ಚ ಹೊಸ ಸಾಹಿತ್ಯಿಕ ಸಾಂಸ್ಕೃತಿಕ ಸರಕಿನ ಸಮರ್ಥನೆಯಾಗಿ 'ಶುದ್ಧ ಸಾಹಿತ್ಯದ ಹೆಸರಿನಲ್ಲಿ ಪ್ರದರ್ಶನಗೊಳ್ಳುತ್ತದೆ. ಕಲ್ಪಿತ ವಾಸ್ತವದ ಹೆಸರಲ್ಲಿ ಸಾಮಾಜಿಕ ವಾಸ್ತವತೆಯ ಪರಿಕಲ್ಪನೆಯನ್ನೇ ಛಿದ್ರಗೊಳಿಸಲಾಗುತ್ತಿದೆ ಎಂಬುದು ಇವರ ಖಚಿತ ಅಭಿಪ್ರಾಯ

ಹೊಸ ತಲೆಮಾರಿನ ವಿಮರ್ಶೆ

ಇಪ್ಪತ್ತೊಂದನೆ ಶತಮಾನದ ಮೊದಲ ದಶಕದಲ್ಲಿ ಅಂದರೆ ಕ್ರಿ. ಶ. ೨೦೦೦ದಿಂದ ಈಚೆಗೆ ವಿಮರ್ಶೆಯಲ್ಲಿ ತೊಡಗಿರುವವರನ್ನು ಹೊಸತಲೆಮಾರಿನ ವಿಮರ್ಶಕರೆಂದು ಗುರುತಿಸಿದ್ದು, ಈ ಸಂದರ್ಭದ ಮುಖ್ಯ ವಿಮರ್ಶಕರು ಮತ್ತು ಮುಖ್ಯ ವಿಮರ್ಶಾ ಲೇಖನಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. "ಕನ್ನಡ ವಿಮರ್ಶೆ ಮೊದಲಿನ ಚುರುಕು, ಒಳನೋಟ, ಉತ್ಸಾಹಗಳನ್ನು, ಕಳೆದುಕೊಂಡು ಕಳೆಗುಂದಿದೆ ಎಂಬ ಅಸಮಾಧಾನ ಇಂದಿನ ಬಹಳಷ್ಟು ತರುಣರು ಬರೆಯುತ್ತಿರುವ ವಿಮರ್ಶೆ ತೊಡಕು–ತೊಡಕಾಗಿ, ಅರ್ಥವೇ ಆಗದ ಸ್ಥಿತಿಯನ್ನು ತಲುಪಿದೆ. ಅದಕ್ಕೆ ಮತ್ತೆ ಲವಲವಿಕೆಯನ್ನು

ಪಾರದರ್ಶಕತೆಯನ್ನು ತರುವ ಅವಶ್ಯಕತೆಯಿದೆ. ಹೀಗಾಗಿ ವಿಮರ್ಶೆಗೆ ಹೊಸದಾಗಿ ಏನು ಮಾಡಬೇಕೆಂಬ ಯೋಚನೆಯಲ್ಲಿ ವಿಮರ್ಶೆಯಿಂದಲೇ ದೂರ ಉಳಿದೆ. ಮುಂದೆ ವಿಮರ್ಶೆ ಬರೆದರೆ, ಅದಕ್ಕೆ ಲಲಿತ ಪ್ರಬಂಧದ ಲಾಲಿತ್ಯವಿರಬೇಕು. ವೈಯುಕ್ತಿಕ ಸ್ಪಂದನದ ಆಪ್ತತೆ ಇರಬೇಕು ಎಂದುಕೊಂಡು ಲಲಿತ ಪ್ರಬಂಧ, ವ್ಯಕ್ತಿ ಚಿತ್ರ, ಪ್ರಸಂಗಗಳ ಬರವಣಿಗೆಯಲ್ಲೂ ಒಂದಿಷ್ಟು ವಿಮರ್ಶೆಯನ್ನು ತರಲು ನೋಡಿದೆ. ಆದರೆ ಅದು ವಿಮರ್ಶೆಗೆ ಪರ್ಯಾಯವಾಗಲಾರದು ಎಂಬುದು ಸ್ಪಷ್ಟವೇ ಇದೆ."[೧೪] ಎಂಬ ಹೇಳಿಕೆಯು ಹೊಸ ತಲೆಮಾರಿನ ವಿಮರ್ಶೆಯ ಪರಿಶೀಲನೆಯ ಹಿನ್ನೆಲೆಯಲ್ಲಿ ಮುಖ್ಯವಾಗುತ್ತದೆ.

ಕಳೆದ ಒಂದು ದಶಕದಿಂದ ಕಾವ್ಯ ಮತ್ತು ವಿಮರ್ಶೆಯ ಕ್ಷೇತ್ರದಲ್ಲಿ ತಾರಿಣಿ ಶುಭದಾಯಿನಿ ಅವರು ಕೆಲಸ ಮಾಡುತ್ತಿದ್ದಾರೆ. ಅವರು ಈತನಕ 'ತೋಡಿರಾಗ' ಹಾಗೂ 'ಚಿತ್ತಗ್ಲಾನಿಯ ಮಾತು' ಕವನ ಸಂಕಲನಗಳನ್ನೂ 'ಹೆಡೆಯಂತಾಡುವ ಸೊಡರು' ಎಂಬ ವಿಮರ್ಶಾ ಸಂಕಲನವನ್ನೂ ಪ್ರಕಟಿಸಿದ್ದಾರೆ. ಭಾವಪ್ರಧಾನವೂ ಸಂಶ್ಲೇಷಣ ಪ್ರಧಾನವೂ ಆದ ಕಾವ್ಯ ಹಾಗೂ ತಾರ್ಕಿಕವೂ ವೈಚಾರಿಕವೂ ವಿಶ್ಲೇಷಣ ಪ್ರಧಾನವೂ ಆದ ವಿಮರ್ಶೆ– ಹೀಗೆ ಎರಡರಲ್ಲೂ ಅವರು ತಮ್ಮನ್ನು ಏಕಕಾಲದಲ್ಲಿ ತೊಡಗಿಸಿಕೊಂಡಿದ್ದಾರೆ.

ಕಾವ್ಯದ ಅಂತರ್ಮುಖಿತನಕ್ಕೆ ಹೋಲಿಸಿದರೆ ವಿಮರ್ಶೆಯಲ್ಲಿ ತಾರಿಣಿಯವರು ವಿಚಾರಗಳನ್ನು ಹೆಚ್ಚು ನಿರ್ಭಿಡೆಯಿಂದ ಅಭಿವ್ಯಕ್ತಿಸುತ್ತಾರೆ. ಇದು ವಿಮರ್ಶೆಯ ಪ್ರಕಾರದಲ್ಲೇ ಇರುವ ಒತ್ತಾಸೆ ಕೂಡ. ಇದರಿಂದ ಅವರಿಗೆ ಲೇಖಕರ ಲೋಕದೃಷ್ಟಿಯ ಮೇಲೆ, ಮೌಲ್ಯದ ನೆಲೆಯಿಂದ ಪ್ರಶ್ನೆಯನ್ನು ದಿಟ್ಟತನದಲ್ಲಿ ಎತ್ತುವುದೂ ಸಾಧ್ಯವಾಗಿದೆ. ಸಾಹಿತ್ಯದ ಬಗ್ಗೆ ಸೂಕ್ಷ್ಮವಾದ ಓದನ್ನುಳ್ಳ ತಾರಿಣಿಯವರದು ವಿವರಣಶೀಲ ಹಾದಿಗಿಂತ, ಪ್ರಶ್ನೆಗಳನ್ನು ಎತ್ತಿ ಕೃತಿಯನ್ನು ಮುಖಾಮುಖಿಯಾಗುವ ಹಾದಿ ಎನ್ನಬಹುದು. ಕನ್ನಡದ ಕೆಲವು ಕವಿಗಳಲ್ಲಿ ಕಾಣುತ್ತಿರುವ ರಮ್ಯತೆಯ ಸಮಸ್ಯೆ, ಎಸ್. ಜಿ. ಸಿದ್ಧರಾಮಯ್ಯ ಅವರು ಮಂಡಿಸುತ್ತಿರುವ ದೇಶಿ ಪರಿಕಲ್ಪನೆ, ವಸುಧೇಂದ್ರ ಅವರ ಬರೆಹದಲ್ಲಿ ಸಮಾಜದ ವಿಷಮತೆ, ವೈರುಧ್ಯಗಳ ಚಿತ್ರ ಕಡಿಮೆ ಇರುವ ಬಗ್ಗೆ, ಭೈರಪ್ಪನವರ ಹಿಂದುತ್ವದ ಸಿದ್ಧಾಂತದ ಮಂಡನೆ ಮೊದಲಾದ ಗಂಭೀರ ಪ್ರಶ್ನೆಗಳನ್ನು ಅವರು ತಮ್ಮ ವಿಮರ್ಶಾ ಬರಹದಲ್ಲಿ ಎತ್ತುತ್ತಾರೆ. ಜಿ. ಎಸ್. ಎಸ್., ಪ್ರತಿಭಾ ನಂದಕುಮಾರ್, ಪೂರ್ಣಚಂದ್ರ ತೇಜಸ್ವಿಯವರ ಬರೆಹದ ಬಗ್ಗೆ ಬಹಳ ಗಂಭೀರವಾದ ವಿಮರ್ಶೆ ಪ್ರಕಟಿಸಿದ್ದಾರೆ.

ಕನ್ನಡ ವಿಮರ್ಶೆಯಲ್ಲಿ ವಿಮರ್ಶಾತ್ಮಕ ನಿಷ್ಠುರತೆಯ ಮೊನಚು ಕಳೆದು ಹೋಗುತ್ತಾ, ಒಂದು ಬಗೆಯಲ್ಲಿ ಎಲ್ಲವನ್ನೂ ಸಾಧರಣೀಕರಿಸುವ ಉದಾರವಾದಿಯ, ಹೊಂದಾಣಿಕೆಯ ಸ್ವಭಾವದ ಮಾದರಿಗಳಿಗೆ ಪ್ರತಿಯಾಗಿ, ಸಮತೋಲನವಾದ ಮತ್ತು ವಿವೇಕಯುತವಾದ ವಿಮರ್ಶೆ ಪ್ರಕಟಿಸುತ್ತಿದ್ದಾರೆ. ಹಾಗೆಂದು ಇವರ ವಿಮರ್ಶಾ ಭಾಷೆ ಅನಗತ್ಯ ಗಾಂಭೀರ್ಯವನ್ನು ಪ್ರದರ್ಶಿಸುವುದಿಲ್ಲ. ಬದಲಿಗೆ ಸಿದ್ಧಾಂತಗಳ ಭಾರವಿಲ್ಲದೆ ಸರಳವಾಗಿ ಸಹಜವಾಗಿ ಒಳನೋಟಗಳನ್ನು ತೆರೆದಿಡುತ್ತಾರೆ. ತಾರಿಣಿಯವರು ಪತ್ರಿಕೆಗಳಲ್ಲಿ ಬರೆದ ವಿಮರ್ಶೆಗಳು ಕೂಡಾ ಅಧ್ಯಯನ ಪೂರ್ಣವಾಗಿವೆ. ಪರಿಚಯಾತ್ಮಕತೆ

ಮುಖ್ಯವಾಗಿರುವ ಈ ಬರೆಹದಲ್ಲೂ ಅವರು ಪ್ರಶ್ನೆಗಳನ್ನು ಎತ್ತುತ್ತಾರೆ. ಪಠ್ಯದ ಆಳಕ್ಕೆ ಹೋಗಲು, ತಾತ್ವೀಕರಣ ಹಂತಕ್ಕೆ ಚಲಿಸಲು ಹೆಚ್ಚು ಅವಕಾಶವಿಲ್ಲದ ಜಾಗವಿದು. ಆದರೂ ಅದರ ಮಿತಿಯಲ್ಲಿಯೇ ಉತ್ತಮ ಲೇಖನಗಳ್ನು ಪ್ರಕಟಿಸಿದ್ದಾರೆ.

ಇಂಗ್ಲಿಷ್ ಅಧ್ಯಾಪಕ ವೃತ್ತಿಯ ಹಿನ್ನೆಲೆಯ ಕಾರಣದಿಂದ ಇವರ ವಿಮರ್ಶೆಯಲ್ಲಿ ಪಶ್ಚಿಮದ ಲೇಖಕರ ಹೆಚ್ಚು ಉಲ್ಲೇಖಗಳಿವೆ. ಇವಕ್ಕೆ ಹೋಲಿಸಿದರೆ, ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಉಲ್ಲೇಖ ಕಡಿಮೆ. ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಹಂಗಿಲ್ಲದೆ ಸಾಹಿತ್ಯ ವಿಮರ್ಶೆ ಬರೆದರೆ ಪರಂಪರೆಯ ಹಿನ್ನೆಲೆಯ ಕೊರತೆ ಕಾಡುತ್ತದೆ. ಆಧುನಿಕ ಸಾಹಿತ್ಯಕ್ಕೆ ಸೀಮಿತಗೊಳಿಸಿಕೊಂಡಂತಿರುವ ಕೆಲವು ವಿಮರ್ಶಕರಲ್ಲಿ ಇದನ್ನು ಕಾಣಬಹುದು. ಆದರೆ ಸಮಕಾಲೀನವಾದ ಒಂದು ಕೃತಿಯ ಬಗ್ಗೆ ಮಾತಾಡುವಾಗಲೂ ಪರೋಕ್ಷವಾಗಿ ಒಟ್ಟು ಕನ್ನಡ ಸಾಹಿತ್ಯ ಪರಂಪರೆ ಕುರಿತ ನೋಟಗಳನ್ನು ಕೊಡುವ ಸಂದರ್ಭದಲ್ಲಿ ಇದರ ಅಭಾವ ಹೆಚ್ಚಾಗಿ ಕಾಡುತ್ತದೆ.

ಒಟ್ಟಿನಲ್ಲಿ ಆರ್. ತಾರಿಣಿ ಶುಭಾದಾಯಿನಿ ಮೂಲತಃ ಕವಯಿತ್ರಿಯಾದರೂ ಸಾಹಿತ್ಯ ವಿಮರ್ಶೆಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದಾರೆ. ವಿಮರ್ಶಾ ವಲಯದಲ್ಲಿ ಮಹಿಳೆಯರ ಸಾಧನೆ ಕಿರಿದು ಎನ್ನುವಾಗ, ವಿಮರ್ಶೆಯನ್ನು ಅಭಿವ್ಯಕ್ತಿಗೆ ಆಯ್ಕೆ ಮಾಡಿಕೊಂಡು ಮಹತ್ವದ ಸಾಧನೆಯನ್ನು ತೋರಿದ್ದಾರೆ. ಇವರ ವಿಮರ್ಶೆಗೆ ವಿಸ್ತಾರವಾದ ಓದು, ಪರಂಪರೆಯ ತಿಳುವಳಿಕೆ, ವಿಶೇಷ ಗ್ರಹಿಕೆಗಳಿರುವುದನ್ನು ಇವರ ಬರೆಹಗಳಲ್ಲಿರುವ ಸಾಹಿತ್ಯ ಪರಂಪರೆ, ಸಾಹಿತ್ಯ ಪಠ್ಯಗಳು ಮತ್ತು ಚಾರಿತ್ರಿಕ ಸಂದರ್ಭಗಳ ಅಂತರ್ ಸಂಬಂಧಗಳನ್ನು ಶೋಧಿಸುವ ಸಂದರ್ಭದಲ್ಲಿ ಕಾಣಬಹುದು. ಸಾಹಿತ್ಯ ಪಠ್ಯಗಳು, ಅವುಗಳ ಚಾರಿತ್ರಿಕ ಸಂದರ್ಭಗಳ ಮುಖಾಮುಖಿಯಲ್ಲಿ ಸಾಹಿತ್ಯದ ತಿಳುವಳಿಕೆಯನ್ನು ಇಡಿಯಾಗಿ ಗ್ರಹಿಸಿ ರೂಪಕಗಳಲ್ಲಿ ಹೇಳುವ ಬದಲು, ಪಠ್ಯಗಳಲ್ಲಿರುವ ಎಲ್ಲ ವಿವರಗಳನ್ನು ಬಿಡಿಬಿಡಿಯಾಗಿ ವಿಮರ್ಶೆಗೆ ಒಳಪಡಿಸುವ ಮೂಲಕ ಸಮಗ್ರವಾಗಿ ಗ್ರಹಿಸುವ ಗುಣ ಇವರ ಲೇಖನಗಳಲ್ಲಿವೆ. ಸಾಹಿತ್ಯ ವಿಮರ್ಶೆಯನ್ನು ಸೃಜನಶೀಲ ಪ್ರಕಾರವಾಗಿ ಪರಿಗಣಿಸಿ, ಈ ವಲಯವನ್ನು ಬಲಪಡಿಸುತ್ತಿರುವ ಕೆಲವೇ ವಿಮರ್ಶಕರಲ್ಲಿ ಇವರೂ ಒಬ್ಬರು.

ಕನ್ನಡದ ಹೊಸತಲೆಮಾರಿನ ವಿಮರ್ಶಕರಲ್ಲಿ ಎಮ್. ಡಿ. ಒಕ್ಕುಂದ ಅವರು ಪ್ರಮುಖರು. ಅಡಿಗರ ಕಾವ್ಯದ ಮೇಲಿನ ಅವರ ವಿಮರ್ಶೆ ಕನ್ನಡದಲ್ಲಿ ಹೆಚ್ಚು ಚರ್ಚೆಯನ್ನು ಹುಟ್ಟುಹಾಕಿದೆ. ಆದ್ದರಿಂದ ಇಲ್ಲಿ ಅದರ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ಕನ್ನಡದ ಬಹುಪಾಲು ಲೇಖಕರು ಕೋಮುವಾದಿ ಚಿಂತನೆಗಳನ್ನು ತಾತ್ವಿಕವಾಗಿ ವಿರೋಧಿಸಿದ್ದಾರೆ. ಇಲ್ಲವೇ ಅದನ್ನು ನಿರ್ಲಕ್ಷಿಸಿದ್ದಾರೆ. ಆ ಕುರಿತು ಮೌನವಹಿಸಿದವರಿದ್ದಾರೆ. ಬೆರಳೆಣಿಕೆಯ ಸಂಶೋಧಕರು ಕಾದಂಬರಿಕಾರರು ಬಲಪಂಥೀಯ ಕೋಮುವಾದದ ಪ್ರತಿಪಾದನೆಗೆ ತಮ್ಮ ಸಾಹಿತ್ಯಕ ಮಾಧ್ಯಮವನ್ನು ಬಳಸಿದ್ದಾರೆ. ಆದರೆ, ಗೋಪಾಲಕೃಷ್ಣ ಅಡಿಗರು ಕೋಮುವಾದಿ ಸಿದ್ಧಾಂತವನ್ನು ಮುಕ್ತವಾಗಿ ಬೆಂಬಲಿಸಿ ಬರೆದಂತಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಎಂ. ಗೋಪಾಲಕೃಷ್ಣ ಅಡಿಗರ 'ಮತ್ತೆ ಮೊಳಗಲಿ ಪಾಂಚಜನ್ಯ' ಕನ್ನಡದಲ್ಲಿ ಬಲಪಂಥೀಯ ಕೋಮುವಾದವನ್ನು ಅದರಲ್ಲಿ ಉಗ್ರ ತಾತ್ವಿಕ ಚೌಕಟ್ಟುಗಳು ಹಾಗೂ ಹಿಂಸಾತ್ಮಕ ಕಾರ್ಯಾಚರಣೆಯ ವಿಧಾನಗಳೊಂದಿಗೆ ಪ್ರತಿಪಾದಿಸುವ ಕವಿತೆಯಾಗಿದೆ ಎನ್ನುವ ಇವರು, ಕನ್ನಡ ಕಾವ್ಯಲೋಕಕ್ಕೆ ಅಸ್ಪೃಶ್ಯವಾಗಿ ಉಳಿದಿದ್ದ ತಿರಸ್ಕಾರಕ್ಕೆ ಬಾಧ್ಯಸ್ತವಾಗಿದ್ದ ಮುಕ್ತವಾಗಿ ಅಭಿವ್ಯಕ್ತಿಸಲು ಮುಜುಗರ ಹಾಗೂ ಅಪಮಾನದ ಸಂಗತಿಯಾಗಿದ್ದ ಹಿಂಸಾತ್ಮಕ ಕೋಮುವಾದಿ ಚಿಂತನಾಕ್ರಮವನ್ನು ಅಡಿಗರು ಕಾವ್ಯದಂಥ ಜೀವನ್ಮುಖಿ ಪ್ರಕಾರದಲ್ಲಿ ಅಭಿವ್ಯಕ್ತಿಸಿ ಸಾಹಿತ್ಯಕ ನ್ಯಾಯಬದ್ಧತೆಯನ್ನು ಒದಗಿಸಿದರು ಎಂದಿದ್ದಾರೆ. “ಜಾಗತೀಕರಣದ ನಂತರ ಕೋಮುವಾದಿ ರಾಜಕಾರಣ ತೀವ್ರ ಸ್ವರೂಪವನ್ನು ತಾಳಿದ ಮೇಲೆ ಕನ್ನಡ ಸಾಂಸ್ಕೃತಿಕ ಲೋಕದ ಕೆಲವು ಪ್ರಮುಖ ಹೆಸರುಗಳು ಕೋಮುವಾದಿ ರಾಜಕಾರಣದೊಂದಿಗೆ ಮುಕ್ತವಾಗಿ ಗುರುತಿಸಿಕೊಳ್ಳುವ ಧೈರ್ಯವನ್ನು ತೋರಿಸಿದ್ದರ ಹಿನ್ನೆಲೆಯಲ್ಲಿ ಅಡಿಗರಂಥ ಮಹತ್ವದ ಕವಿಯ ರಾಜಕೀಯ ಪ್ರತಿಗಾಮಿ ನಿಲುವು ಪ್ರೇರಣೆ ನೀಡಿರುವ ಸಾಧ್ಯತೆ ಇದೆ. ಕನ್ನಡ ಕಾವ್ಯಕ್ಕೆ ವಾಸ್ತವದ ರಕ್ತದಾನ ಮಾಡುವ ಹಾಗೂ ಮಣ್ಣಿನ ವಾಸನೆಯನ್ನು ತುಂಬುವ ಘೋಷಣೆಯನ್ನು ಮಾಡಿದ ಕವಿ ಬಲಪಂಥೀಯ ಕೋಮುವಾದದ ಹಿಂಸಾತ್ಮಕ ರಾಜಕಾರಣದ ಮಲಿನ ರಕ್ತವನ್ನು ಕನ್ನಡ ಸಾಹಿತ್ಯಕ್ಕೆ ದಾನಮಾಡಿದರು. ಮತಾಂಧತೆಯ ದುರ್ವಾಸನೆಯನ್ನು ತುಂಬಿದರು.”[೧೫] ಅಡಿಗರ ಈ ಚಲನೆ ಕನ್ನಡದ ಸಂವೇದನಾಶೀಲ ಮನಸ್ಸುಗಳನ್ನು ಬೆಚ್ಚಿಬೀಳಿಸಿದೆ. ಸೌಹಾರ್ದತೆಯ ಆಶಯದ ಬೇರುಗಳನ್ನೇ ಅಲುಗಾಡಿಸಿದೆ ಎಂದು ಹೇಳುತ್ತಾರೆ.

ಅಡಿಗರ ಕಾವ್ಯದಲ್ಲಿನ ಈ ಬೆಳವಣಿಗೆ ವಿಮರ್ಶಕರು ಕಂಡು ಕೊಂಡಿರುವ ಕಾರಣಗಳು ಇಂತಿವೆ. ಎಂಬತ್ತರ ದಶಕ ಭಾರತದಲ್ಲಿ ಕೋಮುವಾದಿ ಸಂಘಟನೆಗಳು ತಮ್ಮ ಬಲವನ್ನು ಕ್ರೋಢೀಕರಿಸಿಕೊಳ್ಳುತ್ತಿದ್ದ ಕಾಲ; ತೊಂಬತ್ತರ ದಶಕದ ಮುಕ್ತಮಾರುಕಟ್ಟೆಯ ಆರ್ಥಿಕತೆ ಹಾಗೂ ಕೋಮುವಾದೀ ರಾಜಕಾರಣದ ಮತೀಯತೆಗಳು ರೂಪು ಪಡೆಯುತ್ತಿದ್ದ ಕಾಲ. ಜಾಗತೀಕರಣದ ಒಪ್ಪಂದ ಹಾಗೂ ಅಡ್ವಾಣಿಯವರ ರಥಯಾತ್ರೆ ಮತ್ತು ಬಾಬ್ರಿ ಮಸೀದಿ ನಾಶದ ನೀಲನಕ್ಷೆಗಳು ಸಿದ್ಧವಾಗುತ್ತಿದ್ದ ಸನ್ನಿವೇಶ. ತೊಂಬತ್ತರ ದಶಕದ ಸಾಮ್ರಾಜ್ಯವಾದಿ ಹಾಗೂ ಕೋಮುವಾದಿ ಸ್ಫೋಟಗಳಿಗೆಲ್ಲ ಸ್ಫೋಟಕಗಳನ್ನು ಗರ್ಭೀಕರಿಸಿಕೊಳ್ಳುತ್ತಿದ್ದ ಕಾಲ. ಅಡಿಗರ ಈ ಕವಿತೆ ಕೂಡ ಒಂದು ಸ್ಫೋಟಕವೇ ಆಗಿದೆ. ಅಷ್ಟೊತ್ತಿಗಾಗಲೇ ಅಡಿಗರು ಸಂಪೂರ್ಣವಾಗಿ ಬಲಪಂಥೀಯ ಕೋಮುವಾದದ ಉಗ್ರ ಪ್ರತಿಪಾದಕರಾಗಿ ಮಾರ್ಪಟ್ಟಿರುವದನ್ನು ಈ ಕವಿತೆ ಶೇಕಡಾ ನೂರರಷ್ಟು ಸಾಬೀತುಪಡಿಸುತ್ತದೆ.

ಭೈರಪ್ಪನವರು ೨೦೦೦ದ ದಶಕದಲ್ಲಿ 'ಆವರಣ' ದಲ್ಲಿ ಪ್ರತಿಪಾದಿಸಿದ ಸಕಲ ಕೋಮುವಾದಿ ಸಿದ್ಧಾಂತದ ಆಯಾಮಗಳನ್ನು ಈ ಕವಿತೆ ಒಳಗೊಂಡಿದೆ. ಇದು ಅಡಿಗರ ಸಹಜ ಕಾವ್ಯವಲ್ಲ, ಕೋಮುವಾದಿ ಸಿದ್ಧಾಂತವನ್ನು ಅತ್ಯಂತ ಗಂಭೀರವಾಗಿ ಓದಿ ಅಧ್ಯಯನ ಮಾಡಿ ಅರಗಿಸಿಕೊಂಡು ಅದರ ಎಲ್ಲ ಆಯಾಮಗಳನ್ನು ಪರಿಪೂರ್ಣವಾಗಿ

ಒಳಗೊಳ್ಳುವ ಹಂಬಲದ ಉದ್ದೇಶಪೂರ್ವಕ ರಚನೆಯಂತೆ ಕಾಣುತ್ತದೆ. ಆದರೆ ಅಡಿಗರು ಆ ಸಿದ್ಧಾಂತವನ್ನು ತಮ್ಮ ನರನಾಡಿಗಳಲ್ಲೂ ಆವಾಹಿಸಿಕೊಂಡಿದ್ದರೆಂಬುದಕ್ಕೆ ಕವಿತೆಯ ಆವೇಶವೇ ಸಾಕ್ಷಿಯಾಗಿದೆ ಎನ್ನುವ ಇವರು, ಭೈರಪ್ಪನವರ ಆವರಣಕ್ಕೆ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಒಂದು ದೊಡ್ಡ ಪ್ರತಿರೋಧವೇ ವ್ಯಕ್ತವಾಯಿತು. ಅದು ಸಮುದಾಯವನ್ನು ಕೋಮುವಾದೀಕರಣಗೊಳಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿರಬಹುದು. ಆದರೆ ಅದರಲ್ಲಿ ಪ್ರತಿಪಾದನೆಗೊಂಡಿರುವುದು 'ದ್ವೇಷ ಮತ್ತು ಹಿಂಸೆಯ ಬರ್ಬರ ಫ್ಯಾಸಿಸ್ಟ್ ರಾಜಕೀಯ ನಿಲುವು' ಎಂಬ ಪ್ರತಿ ಚಿಂತನೆಯೂ ಪ್ರಚಾರ ಪಡೆಯಿತು. ಆದರೆ ಅಡಿಗರ ಸಾಹಿತ್ಯ ಕುರಿತು ಕನ್ನಡ ವಿಮರ್ಶೆ ಈ ಎಚ್ಚರವನ್ನು ದಾಖಲಿಸಲಿಲ್ಲ ಎನ್ನುತ್ತಾರೆ.

"ಆದರೆ ಇದಕ್ಕಿಂತ ಮೊದಲು ಧಾರ್ಮಿಕ ಹಿಂಸೆಯನ್ನು ಇಷ್ಟೊಂದು ವ್ಯವಸ್ಥಿತವಾಗಿ ಪ್ರತಿಪಾದಿಸಿದ ಅಡಿಗರ ಕವಿತೆಗೆ ಕನ್ನಡ ಸಾಂಸ್ಕೃತಿಕ ಲೋಕದ ಪ್ರತಿಕ್ರಿಯೆ ಯಾಕೆ 'ಮೌನ'ದ ಧಾಟಿಯಲ್ಲಿದೆ? ಲಕ್ಷ್ಮೀನಾರಾಯಣ ಭಟ್ಟರು ಹಾಗೂ ಕಿ.ರಂ. ನಾಗರಾಜ ಅವರು ಮುನ್ನುಡಿಗಳಲ್ಲಿ ಯಾಕೆ ಈ ಸಂಗತಿಯನ್ನು ಕುರಿತು ಮೌನವಹಿಸುತ್ತಾರೆ? ಜಿ.ರಾಜಶೇಖರ ಕೂಡ 'ಸುವರ್ಣಪುತ್ಥಳಿ'ಯ ಮುನ್ನುಡಿಯಲ್ಲಿ ಅಡಿಗರ ಈ ಪ್ರತಿಗಾಮಿ ರಾಜಕಾರಣವನ್ನು ಪ್ರಸ್ತಾಪಿಸಿಯೂ ಯಾಕೆ ರಕ್ಷಣಾತ್ಮಕವಾಗಿ ಮಾತನಾಡುತ್ತಾರೆ? ಆ ಕಾಲದ ದಲಿತ ಬಂಡಾಯ ಸಾಹಿತ್ಯ ವಿಮರ್ಶೆಗೆ ಇದು ಒಂದು ಮುಖ್ಯ ಪ್ರಶ್ನೆಯಾಗಿ ಕಾಡಲಿಲ್ಲವೇಕೆ? ಈ ಮೌನ ಕೂಡ ಪ್ರಶ್ನಾರ್ಹವಾಗುತ್ತದೆ. ಅಡಿಗರ ಕವಿವ್ಯಕ್ತಿತ್ವ ಕೊನೆಗಾಲದಲ್ಲಿ ತಲುಪಿದ ಈ ಅಪಾಯಕಾರಿ ಬದಲಾವಣೆಗೆ ಮರುಕವೂ ಅವರ ಬಗೆಗಿನ ಗೌರವವೂ ಕಾರಣವಾಗಿರಬಹುದು. 'ಕೋಮುವಾದ' ಆ ಕಾಲದಲ್ಲಿ ಸಾಂಸ್ಕೃತಿಕ ಚರ್ಚೆಯ ಮುನ್ನೆಲೆಗೆ ಇನ್ನೂ ಬಂದಿರಲಿಕ್ಕಿಲ್ಲ. ಬಂಡಾಯ ದಲಿತ ಚಳುವಳಿಗಳು ನಿಷ್ಕ್ರಿಯತೆ ಆರಂಭವಾಗಿರಬಹುದು. ಕನ್ನಡದಲ್ಲಿ ಹೊಸದಾಗಿ ರೂಪತಾಳತೊಡಗಿದ 'ಸಂಸ್ಕೃತಿ ವಿಮರ್ಶೆ'ಯ ಉದಾರವಾದಿ ನೆಲೆ ಕೂಡ ನಿರ್ಲಕ್ಷಿಸಿರಬಹುದು. 'ಕಾವ್ಯ'ಕ್ಕೆ ಇರುವ ಸೀಮಿತ ವರ್ಗದ ಓದುಗರ ಕಾರಣದಿಂದಲೂ ಇದನ್ನೊಂದು ಮುಖ್ಯ ಸಮಸ್ಯೆ ಎಂದು ಪರಿಗಣಿಸಿರಲಿಕ್ಕಿಲ್ಲ. ಭೈರಪ್ಪನವರ 'ಕಾದಂಬರಿ' ಕೋಮುವಾದಿ ಸಿದ್ಧಾಂತವನ್ನು ಜನಪ್ರಿಯಗೊಳಿಸಿದ ಪ್ರಮಾಣಕ್ಕೆ ಹೋಲಿಸಿದರೆ ಅಡಿಗರ ಕವಿತೆಯ ಪ್ರಭಾವ ತೀರ ಕಡಿಮೆ ಪ್ರಮಾಣದ್ದು. ಮುಸಲ್ಮಾನ ಸಮುದಾಯದ ಅಶಿಕ್ಷಿತತೆ ಮತ್ತು ಶಿಕ್ಷಿತ ಸಮುದಾಯ ಹಾಗೂ ಬುದ್ಧಿಜೀವಿವರ್ಗದ 'ಮೌನ' ಕೂಡ ಇದನ್ನೊಂದು ಮುಖ್ಯ ಸಾಂಸ್ಕೃತಿಕ ಸಮಸ್ಯೆಯನ್ನಾಗಿಸದಂತೆ ನೋಡಿಕೊಂಡಿದೆ."[೧೬] ಧರ್ಮಕಾರಣ, ಮಹಾಚೈತ್ರದಂಥ ಕೃತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಹೋರಾಡಿದ ಕರ್ನಾಟಕದಲ್ಲಿ 'ಮುಟ್ಟುಗೋಲಿಗೆ' ಯೋಗ್ಯವಾದ ಕೃತಿಯೊಂದನ್ನು ಮೌನವಾಗಿ ಸಹಿಸಿಕೊಂಡಿರುವುದಕ್ಕೆ ಹಿಂದೂ ಕೋಮುವಾದಕ್ಕೆ ಇರುವ ಉದಾರವಾದ ಬೆಂಬಲ ಹಾಗೂ ಅಲ್ಪಸಂಖ್ಯಾತರ ಸಂಕಟವನ್ನು ಮುಖ್ಯವೆಂದು ಪರಿಗಣಿಸಲಾಗದ ಸಾಮಾಜಿಕ ಸ್ಥಿತಿಗತಿಗಳು ಕಾರಣವಾದಂತೆ ತೋರುತ್ತದೆ. ಇಂತಹ ಸೂಕ್ಷ್ಮ ವಿಚಾರಗಳನ್ನೂ ಇಂದು

ಕನ್ನಡ ವಿಮರ್ಶೆ ತನ್ನ ಕೇಂದ್ರಕ್ಕೆಳೆತಂದು ಚರ್ಚಿಸಬೇಕಾದ ಅನಿವಾರ್ಯತೆಯಿದೆ ಎನ್ನುತ್ತಾರೆ.

ಆಧುನಿಕ ಕನ್ನಡ ಸಾಹಿತ್ಯದ ಮಾರ್ಗಕವಿಗಳ ಸಾಲಿನಲ್ಲಿ ಸ್ಥಾನ ಪಡೆದಿರುವ ಅಡಿಗರಂಥ ಬಹುದೊಡ್ಡ ಲೇಖಕ ಯಾಕೆ ಇಂಥ ಕೋಮುವಾದಿ ಸಿದ್ಧಾಂತವನ್ನು ತಮ್ಮ ಕಾವ್ಯದಲ್ಲಿ ಪ್ರತಿಪಾದಿಸಿದರೆಂಬ ಮುಖ್ಯವಾದ ಪ್ರಶ್ನೆಯನ್ನಿಟ್ಟುಕೊಂಡು ಮುಂದುವರೆಯುವ ಇವರು, ಈ ಪ್ರಶ್ನೆಗೆ ಹಲವು ನೆಲೆಗಳಿಂದ ಕಾರಣಗಳನ್ನು ಶೋಧಿಸುತ್ತಾರೆ. ಮೊದಲನೆಯದಾಗಿ ಭೈರಪ್ಪನವರಂತೆ ಅಡಿಗರಿಗೂ 'ಬ್ರಾಹ್ಮಣ್ಯ' ಆಳದಲ್ಲಿ ಒಪ್ಪಿತ ಮೌಲ್ಯವಾಗಿದ್ದು, ಆ ಅಂತಃಸತ್ವ ಸಮಯ ಬಂದಾಗ ಅಭಿವ್ಯಕ್ತಿಯನ್ನು ಪಡೆದಿರಬಹುದು. ಎರಡನೆಯದಾಗಿ, ೧೯೭೧ರಲ್ಲಿ ಅಡಿಗರು ಕಾಂಗ್ರೆಸ್ ವಿರೋಧಿ ರಾಜಕಾರಣದ ಭರದಲ್ಲಿ ಜನಸಂಘದಿಂದ ಲೋಕಸಭೆಗೆ ಸ್ಪರ್ಧಿಸಿದ ಮೇಲೆ ಆ ಸಿದ್ಧಾಂತದೊಂದಿಗಿನ ಒಡನಾಟ ಹೆಚ್ಚಾಗಿ ಅದನ್ನು ಒಪ್ಪಿಕೊಂಡಿರಬಹುದು. ಶೂದ್ರ, ದಲಿತ, ಅಲ್ಪಸಂಖ್ಯಾತ ಮತ್ತು ಮಹಿಳಾ ವರ್ಗಗಳ ಸಬಲೀಕರಣ ಬ್ರಾಹ್ಮಣ ವರ್ಗದಲ್ಲಿ ಹುಟ್ಟಿಸಿದ ಆತಂಕ, ಕ್ಷೋಭೆಗಳು ಕಾರಣವಾಗಿರಬಹುದು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶೂದ್ರಶಕ್ತಿಗಳು ರಾಜಕೀಯವಾಗಿ ಪ್ರಬಲವಾದವು. ಪ್ರಾದೇಶಿಕ ಪಕ್ಷಗಳು ಸಮಾಜವಾದಿ ಹೋರಾಟಗಳು ಶೂದ್ರಶಕ್ತಿಯ ಪ್ರಾಬಲ್ಯವನ್ನು ಹೆಚ್ಚಿಸಿದವು. ಮೀಸಲಾತಿಯ ಮೂಲಕ ದಲಿತ ಮತ್ತು ಹಿಂದುಳಿದ ವರ್ಗಗಳು ಶೈಕ್ಷಣಿಕ ಹಕ್ಕನ್ನು ಉದ್ಯೋಗದ ಹಕ್ಕನ್ನು ಪಡೆದು ಸಬಲೀಕರಣಗೊಂಡವು. ಅಲ್ಪಸಂಖ್ಯಾತ ಮತ್ತು ಮಹಿಳಾ ಸಮುದಾಯ ಕೂಡ ಮುಮ್ಮುಖವಾಗಿ ಚಲಿಸತೊಡಗಿತು. ಇಲ್ಲಿಯವರೆಗೆ ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿದ್ದ ಉದ್ಯೋಗಾವಕಾಶ ರಾಜಕೀಯ ಸಾಂಸ್ಕೃತಿಕ ಅವಕಾಶಗಳಲ್ಲಿ ಅವರೆಲ್ಲ ಪಾಲು ಬೇಡತೊಡಗಿದರು. ಆಗ ಭಾರತದ ಬ್ರಾಹ್ಮಣವರ್ಗ ಆತಂಕಕ್ಕೊಳಗಾಯಿತು. ಆದರೆ ಅಡಿಗರು ಆ ಕ್ಷೋಭೆಯನ್ನು ಕಾವ್ಯದಲ್ಲಿ ವಿವರಿಸುವದರ ಬದಲಾಗಿ ಹಿಂದುತ್ವದ ಚಿಂತನೆಗೆ ತೊಡಗುತ್ತಾರೆ. ಹಿಂದುತ್ವವು ಮೇಲ್ಜಾತಿ ಮೇಲ್ವರ್ಗಗಳಿಗೆ ಸೇರಿದ ಸುಶಿಕ್ಷಿತ ಹಿಂದೂಗಳ ಹಿತಕಾಯುವ ರಾಜಕೀಯವಾಗಿದೆ. ಆದ್ದರಿಂದ ನಮ್ಮ ಸಮಾಜದಲ್ಲಿರುವ ಜಾತಿ ಮತ್ತು ಲಿಂಗ ಅಸಮಾನತೆಯನ್ನು ಜತನವಾಗಿಡುವುದು ಅದರ ರಾಜಕೀಯ ಮುಖ್ಯ ಉದ್ದೇಶ. ಆದರೆ ಅದನ್ನು ಬಹಿರಂಗದಲ್ಲಿ ಅಲ್ಪಸಂಖ್ಯಾತರ ವಿರುದ್ಧದ ದ್ವೇಷವನ್ನು ಕೆರಳಿಸುವ ರಾಜಕೀಯ ರೂಪದಲ್ಲಿ ಪ್ರಕಟಿಸುತ್ತದೆ. ಹಿಂದುತ್ವದ ಈ ತಂತ್ರ ಅಡಿಗರ ಕಾವ್ಯದಲ್ಲಿ ನುಸುಳಿದೆ ಎಂಬುದನ್ನು ಒಕ್ಕುಂದ ಸೋದಾಹರಣವಾಗಿ ವಿವರಿಸುತ್ತಾರೆ.

ಲಂಕೇಶ್, ಅಡಿಗರ ಕಾವ್ಯವನ್ನು ಕುರಿತು ಬರೆಯುತ್ತ ಅವರ ಭಾಷೆಯ ಬಗ್ಗೆ ಸೂಕ್ಷ್ಮ ಒಳನೋಟಗಳನ್ನು ನೀಡಿದ್ದಾರೆ. "ಅಡಿಗರ ಪದ್ಯಗಳನ್ನು ಓದುವಾಗ ನನಗೆ ವಿಚಿತ್ರ ಅನ್ನಿಸುವುದು ಅವರ ಭಾಷೆ ಮತ್ತು ಪ್ರತಿಮೆಗಳು. ಶಂಕರಾಚಾರ್ಯರಂತೆ ತಮ್ಮ ಧರ್ಮವನ್ನು ಚೇತರಿಸುವ ಗೀಳು ಮತ್ತೆ ಮತ್ತೆ ಬರುವ ಅಶ್ವತ್ಥ ವಿವರ್ತ, ಪುತ್ರಕಾಮೇಷ್ಟಿ, ಪಿತೃಪಿತಾಮಹರು ಇತ್ಯಾದಿ ಪದಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಡಿಗರು ಕವಿಯಾಗಿ

ಬೆಳೆದಂತೆ ಸಮಾಜದ ಪರಿಸರದ ಬಗೆಗಿನ ಧೋರಣೆಗಳನ್ನು ಪ್ರಜಾತಂತ್ರ, ಜಾತಿವ್ಯವಸ್ಥೆ, ರಾಜಕೀಯ ಇತ್ಯಾದಿಗಳನ್ನು ಕುರಿತಾದ ಅವರು ಗ್ರಹಿಸಿರುವ ರೀತಿಯನ್ನು ಅವರ ಒಟ್ಟಾರೆ ಸಂಸ್ಕೃತ–ವೈದಿಕ ವಾಙ್ಮಯದ ಜೊತೆ ಅಭ್ಯಸಿಸಿದರೆ ಅವರ ಮನಃಸ್ಥಿತಿ ಮತ್ತು ಅವರ ಕಾವ್ಯದ ಮೌಲ್ಯಮಾಪನ ಸಾಧ್ಯವಾಗುತ್ತದೆ.”[೧೭] ಅಡಿಗರ ಕಾವ್ಯವನ್ನಾವರಿಸಿರುವ ಅವರ ಕಾವ್ಯದ ರೂಪವನ್ನು ವ್ಯಾಪಿಸಿರುವ ಸಂಸ್ಕೃತ ಭಾಷಾ ಕೋಶ, ಪ್ರತಿಮಾ ರೂಪಕಗಳು ಅವರ ಸಂವೇದನಾಕ್ರಮವನ್ನು ವಿವರಿಸುತ್ತವೆ ಎಂಬದರ ಹೊಳಹು ಈ ಮಾತುಗಳಲ್ಲಿರುವಂತೆ ಕಾಣುತ್ತದೆ. ಆದರೆ ಆ ಭಾಷೆಯ ನಿಲುವು ತಲುಪಬಹುದಾದ ಹಂತವನ್ನು ಅವರು ಸ್ಪಷ್ಟಪಡಿಸುವುದಿಲ್ಲ.

ಅಡಿಗರ ರಾಜಕೀಯ ನಿಲುವನ್ನು ಕುರಿತು ಮತ್ತು ಒಕ್ಕುಂದ ಅವರ ವಿಮರ್ಶೆಗೆ ಪ್ರತಿಕ್ರಿಯೆಯಾಗಿ ಜಿ. ರಾಜಶೇಖರ, ಕೆ. ಫಣಿರಾಜ, ಡಿ. ಎಸ್. ನಾಗಭೂಷಣ ಮೊದಲಾದವರ ಬರಹಗಳನ್ನು ನೋಡಬಹುದು. ಅವರ ಪ್ರಕಾರ ಅಡಿಗರು ಜನಸಂಘ ಮತ್ತು ಆನಂತರ ಭಾಜಪದ ಅಭ್ಯರ್ಥಿಯಾಗಿ ಚುನಾವಣೆಗಳಲ್ಲಿ ಭಾಗವಹಿಸಿದ್ದರ ಹಿಂದೆ ಹೆಚ್ಚು ಕಾಂಗ್ರೆಸ್ ವಿರೋಧಿ ಧೋರಣೆ ಇರಬಹುದೇ ಹೊರತು(ಅವರು ಆರಂಭದಲ್ಲಿ ಲೋಹಿಯಾ ಅಭಿಮಾನಿಯಾಗಿದ್ದರು) ಹಿಂದುತ್ವವಲ್ಲ ಎಂಬುದು. ಅವರ ಕಾಂಗ್ರೆಸ್ ವಿರೋಧಿ ಧೋರಣೆ ಕಾಲಕ್ರಮದಲ್ಲಿ ವಿಮರ್ಶಾತ್ಮಕವಾಗದೆ ಕುರುಡಾಗಿ, ಅವರನ್ನು ಹಿಂದುತ್ವದ ಕಡೆಗೆ ತಳ್ಳಿರಬಹುದು. ಈ ಮಧ್ಯೆ ಅವರು ಬರೆದ ‘ಮತ್ತೆ ಮೊಳಗಲಿ ಪಾಂಚಜನ್ಯ’, ‘ನಾನು ಹಿಂದೂ’, ‘ನಾನು ಬ್ರಾಹ್ಮಣ’ದಂತಹ ಅಗ್ಗದ ಪದ್ಯಗಳು, ಅವರು ಅಂತರ್ಯದಲ್ಲಿ ಎದುರಿಸುತ್ತಿದ್ದ ಈ ರಾಜಕೀಯ ಆಯ್ಕೆಯ ಬಿಕ್ಕಟ್ಟಿನಿಂದ ಪಾರಾಗಲು ಆರಿಸಿಕೊಂಡ ಸುಲಭ ಮಾರ್ಗದ ಫಲಗಳಾಗಿ ಮಾತ್ರ ಕಾಣುತ್ತವೆ. ಆ ಮಟ್ಟಿಗೆ ಅಡಿಗರು ರಾಜಕೀಯ ವ್ಯಕ್ತಿತ್ವವಾಗಿ ದುರ್ಬಲರೆಂದೇ ನಾಗಭೂಷಣ ಅವರ ಅಭಿಪ್ರಾಯ.

“ವ್ಯಕ್ತಿತ್ವದ ಈ ಬಿರುಕು ನವ್ಯದ ಹೆಗ್ಗುರುತಾಗಿದ್ದು, ಇದು ಲಂಕೇಶರನ್ನೂ ಸೇರಿದಂತೆ ಈ ಚಳುವಳಿಯ ಸಂಪರ್ಕಕ್ಕೆ ಬಂದ ಯಾರನ್ನೂ ಕಾಡದೇ ಬಿಟ್ಟಿಲ್ಲ ಎಂಬುದನ್ನು ನಾವು ಗಮನಿಸಬೇಕು. ಲಂಕೇಶರ ಸಾಹಿತ್ಯದಲ್ಲಿ ಮಾತ್ರವಲ್ಲ, ಪತ್ರಿಕೋದ್ಯಮದ ಬದುಕಿನಲ್ಲೂ ಇಂತಹ ಹಲವಾರು ಬಿರುಕು–ದೌರ್ಬಲ್ಯಗಳನ್ನು ನಾವು ಗಮನಿಸಬಹುದು. ಹಾಗೇ ಅಡಿಗರ ದೌರ್ಬಲ್ಯಗಳೂ, ಶಕ್ತಿಗಳೂ. ಅಡಿಗರಂತಹ ತೀವ್ರ ಸಂವೇದನಾಶೀಲ ಪ್ರತಿಭಾವಂತ ಕವಿ ಹಿಂದುತ್ವದಂತಹ ಬರಡು ಸಿದ್ಧಾಂತಕ್ಕೆ ಮರುಳಾಗಿರಲಾರರು.”[೧೮] ಮರುಳಾಗಿದ್ದಲ್ಲಿ, ಚಿಂತಾಮಣಿಯಲ್ಲಿ ಕಂಡ ಮುಖ, ಯಜಮಾನ ಬಂಡಾಯ, ಪ್ರೀತಿ, ಮೈಗೆ ಹಿತವಾದರೆ, ಸಂತೋಷವಾಗುತ್ತದೆ, ಶಾಂತವೇರಿಯ ಅಶಾಂತ ಸಂತದಂತಹ ಕವನಗಳನ್ನು ಬರೆಯಲಾರರು ಎಂಬುದು ಇವರ ತೀರ್ಮಾನ. ಒಕ್ಕುಂದ ಅವರು ಅಡಿಗರ ಬಗ್ಗೆ ತಳೆದ ನಿಲುವುಗಳು ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಗಂಭೀರವಾದ ಚರ್ಚೆಯನ್ನು ಹುಟ್ಟುಹಾಕಿದವು. ಸಮಕಾಲೀನ ಸಾಮಾಜಿಕ

ತಿಳಿವಳಿಕೆಯ ಮೂಲಕ ಸಾಹಿತ್ಯವನ್ನು ವಿಶ್ಲೇಷಿಸುವಾಗ ಉಂಟಾಗಬಹುದಾದ ದುಡುಕಿನ, ಬಿರುಸಿನ ತೀರ್ಮಾನಗಳಿಗೆ ಈ ಲೇಖನ ಸಾಕ್ಷಿಯಾಯಿತು.

ಹೊಸ ತಲೆಮಾರಿನ ಗ್ರಾಮೀಣ ಭಾಗದ ಲೇಖಕರು ಮತ್ತು ವಿಮರ್ಶಕರು ಇವತ್ತಿನ ಕನ್ನಡ ಸಾಹಿತ್ಯವನ್ನು ಗ್ರಹಿಸುತ್ತಿರುವ ಬಗೆಯೇ ಬೇರೆ ತೆರೆನಾಗಿದೆ. "ಜಾಗತೀಕರಣ ಮತ್ತು ಉದಾರೀಕರಣ ಹೊಸ ಬರಹಗಾರರ ಎದುರು ಹೊಸ ಸವಾಲುಗಳನ್ನು ಒಡ್ಡಿದೆ. ಭಾವಲೋಕ ಛಿದ್ರವಾಗಿದೆ.ಭಾವುಕ ಲೋಕ, ಕಲ್ಪನೆಯ ಲೋಕ ಕಾಣೆಯಾಗಿದೆ. ಮಾದ್ಯಮಗಳು ಅಂದರೆ ದೃಶ್ಯ ಮಾದ್ಯಮವಾದ ಟಿ.ವಿ., ಸಿನಿಮಾ, ಇಂಟರ್ ನೆಟ್, ಸ್ಮಾರ್ಟಫೋನ್ ಮನುಷ್ಯನ ಕಲ್ಪನಾ ಶಕ್ತಿಯನ್ನು ಕಸಿದುಕೊಂಡಿವೆ. ಧ್ವಂಸ ಮತ್ತು ವಿನಾಶ ಮಾತ್ರ ಕಣ್ಣೆದುರಿಗಿದೆ. ಆದರೂ ಗ್ರಾಮೀಣ ಭಾಗದ, ಗಡಿ ಭಾಗದ ಯುವಕರು ತಮ್ಮ ನೆಲೆಯಿಂದ ಬರೆಯುತ್ತಾರೆ. ಗುಲ್ಬರ್ಗಾ, ರಾಯಚೂರು, ಬಳ್ಳಾರಿಯ ಹಳ್ಳಿಯ ಯುವಕ/ ಯುವತಿ ಬರೆಯುವ ಕಾವ್ಯದ ಕಸುವು. ಬೆಂಗಳೂರಿನಲ್ಲಿ ಕುಳಿತು ಬರೆಯುವವರಿಗೆ ಬರಲಾರದು. ಆದರೆ ಆ ಗ್ರಾಮೀಣ ನೆಲೆಯ ಯುವಕರಿಗೆ ಬರೆದುದನ್ನು ಪ್ರಕಟಿಸಲು ಮಾದ್ಯಮವಿಲ್ಲ. ಅವರನ್ನು ಪ್ರೋತ್ಸಾಹಿಸುವವರಿಲ್ಲ. ಅವರ ಬರಹಗಳನ್ನು ವಿಮರ್ಶಿಸುವವರಿಲ್ಲ. ಇವತ್ತು ಮುನ್ನೆಲೆಯಲ್ಲಿರುವವರು ಮುನ್ನೆಲೆಯಲ್ಲಿದ್ದಾರೆ. ಹಿನ್ನೆಲೆಯವರು ಮುಂದಿನ ಸಾಲಿಗೆ ಬರುವುದು ಯಾವಾಗ? ತಳ ಸಮುದಾಯ ಮತ್ತು ಬುಡಕಟ್ಟು ಹುಡುಗನ ಕಾವ್ಯದ ಕಸುವು ಸಂಪುಟಗಟ್ಟಲೆ ಬರೆದವರ ಬರಹಕ್ಕಿಲ್ಲ. ಇದನ್ನು ಮಾದ್ಯಮಗಳು ಅರ್ಥ ಮಾಡಿಕೊಳ್ಳುತ್ತಿಲ್ಲ."[೧೯] ಎಂಬ ಚಿಂತನೆಗಳು ಅರಂಭವಾಗಿವೆ.

ಸಾಹಿತ್ಯದಲ್ಲಿ ಪಂಥಗಳು ಒಂದು ಮಿತಿಯನ್ನು ಸೃಷ್ಟಿಸುತ್ತವೆ. ನವೋದಯ ಪ್ರೀತಿ ಮತ್ತು ಆದರ್ಶವನ್ನು ಹೇಳಿತು. ಅಲ್ಲಿ ಒಂದು ವರ್ಗ ಅಥವಾ ಸಮುದಾಯದವರು ಹೆಚ್ಚಿದ್ದರು ಎಂಬ ಅಪಾದನೆ ಇದೆ. ನವ್ಯದಲ್ಲಿ ಬದುಕನ್ನು ನೋಡುವ ದೃಷ್ಟಿಕೋನ ಬದಲಾಯಿತು. ಬಂಡಾಯ ದಲಿತ ಎಂದರೆ ಅದು ಹಿಂದುಳಿದವರ ಅಭಿವ್ಯಕ್ತಿ, ದಲಿತರು ತಮ್ಮ ನೋವುಗಳಿಗೆ ಧ್ವನಿ ನೀಡಿದರು ಎಂಬ ಸೀಮಿತ ಹಣೆ ಪಟ್ಟಿಯಲ್ಲಿಟ್ಟೇ ವಿಮರ್ಶೆಯನ್ನು ನೋಡಲಾಯಿತು. ನವೋದಯ ಎಂದಾಕ್ಷಣ ಬೇಂದ್ರೆ ಕುವೆಂಪು ದೃಷ್ಟಿಯಲ್ಲಿ ಉಳಿದವರ ಸಾಹಿತ್ಯವನ್ನು ವಿಮರ್ಶಿಸಲಾಯಿತು. ಬೇಂದ್ರೆ-ಕುವೆಂಪು ಮಾದರಿಗಳನ್ನಿಟ್ಟು ಕೊಂಡೇ ಸಾಹಿತ್ಯವನ್ನು ತೂಗಿ ನೋಡಲಾಗುತ್ತಿದೆ. ನವ್ಯದಲ್ಲಿ ಅಡಿಗರದ್ದೇ ಮಾದರಿ. ದಲಿತ ಸಾಹಿತ್ಯ ಅಂದರೆ ಸಿದ್ದಲಿಂಗಯ್ಯ, ದೇವನೂರು ಮಹಾದೇವರ ಮಾದರಿಗಳನ್ನು ಇಟ್ಟುಕೊಂಡೇ ಉಳಿದ ಆ ಪ್ರಕಾರದ ಸಾಹಿತ್ಯವನ್ನು ವಿಮರ್ಶೆ ಮಾಡಲಾಗುತ್ತಿದೆ. ಆದರೆ ವ್ಯಕ್ತಿಕೇಂದ್ರಿತವಾಗಿ, ವ್ಯಕ್ತಿಯ ಕಣ್ಣಿನಿಂದ ಜಗತ್ತನ್ನು ನೋಡಬಾರದು. ಜಗತ್ತಿನ ದೃಷ್ಟಿಯಲ್ಲಿ ಸಾಹಿತ್ಯದ ಅವಲೋಕನ, ವಿಮರ್ಶೆ ನಡೆಯಬೇಕು ಎಂದು ಹೊಸ ತಲೆಮಾರಿನ ಲೇಖಕರು ಪ್ರತಿಪಾದಿಸುತ್ತಾರೆ.

ಕಳೆದ ದಶಕದಲ್ಲಿ ಬಂದ ಹೊಸ ತಲೆಮಾರಿನ ಮಹಿಳಾ ವಿಮರ್ಶೆಯ ಸ್ವರೂಪವನ್ನು ಗಮನಿಸುವುದಾದರೆ, ಕನ್ನಡದಲ್ಲಿ ಮಹಿಳಾ ಕವಿಗಳು ಮುಖ್ಯನೆಲೆಗೆ ಬಂದಿದ್ದಾರೆ ಮತ್ತು ಅವರು ತಮಗಾಗಿ ಬರೆಯುತ್ತಿದ್ದಾರೆ ಎನ್ನುವ ಮೂಲಕ ಪ್ರತಿಭಾ ನಂದಕುಮಾರ್ ಸದ್ಯದ ಕನ್ನಡ ಬರಹಲೋಕಕ್ಕೆ ಅಗತ್ಯವಾಗಿದ್ದ ವಾಗ್ವಾದವನ್ನು ಆರಂಭಿಸಿದ್ದಾರೆ. ಇದು ಕನ್ನಡ ಸಾಹಿತ್ಯ ಪರಂಪರೆ ಹೊಸ ಪಲ್ಲಟಕ್ಕೆ ಒಳಗಾದ ಕಾಲ. ಮಹಿಳೆಯರು ಅಭಿವ್ಯಕ್ತಿಯ ಹೊಸ ಹೊಸ ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಿದ್ದಾರೆ ಎಂಬ ಅಭಿಪ್ರಾಯವು ಸರಿಯಾದದ್ದು. ಆದರೆ ಮಹಿಳಾ ಬರಹಗಳ ಕುರಿತ ಅಭಿಪ್ರಾಯವು ಪುರುಷ ಬರಹಗಳಿಗೆ ಪ್ರತಿಯಾಗಿಯೇ ರೂಪುಗೊಳ್ಳಬೇಕಿಲ್ಲ. ಮಹಿಳಾ ಅಭಿವ್ಯಕ್ತಿಯು ಕನ್ನಡ ಸಾಹಿತ್ಯವನ್ನು ಪಲ್ಲಟಗೊಳಿಸಿದ ಪ್ರಕ್ರಿಯೆ ಆರಂಭವಾದದ್ದು ಎಂಭತ್ತರ ದಶಕದಲ್ಲಿಯೆ. ಇದಕ್ಕೆ ದಲಿತ–ಬಂಡಾಯ ಸಾಹಿತ್ಯದ ಮನೋಧರ್ಮ ಒಂದು ಪ್ರೇರಕವಾದರೆ, ಎಪ್ಪತ್ತರ ದಶಕದಲ್ಲಾಗಲೇ ಕನ್ನಡವನ್ನು ಪ್ರವೇಶಿಸಿದ ಸ್ತ್ರೀವಾದಿ ಚಿಂತನೆ ಮತ್ತೊಂದು ಪ್ರೇರಕವಾಗಿತ್ತು. ಮಹಿಳೆಯರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬರೆಯುತ್ತಿದ್ದಾರೆ ಎನ್ನುವ ಸಂಖ್ಯೆಯ ಆಧಾರದಲ್ಲಿ ಮಾತ್ರ ಈ ಅಭಿಪ್ರಾಯ ಮಂಡಿತವಾಗುವುದಿಲ್ಲ. ಅವರು ಏನನ್ನು ಬರೆಯುತ್ತಿದ್ದಾರೆ ಮತ್ತು ಹೇಗೆ ಬರೆಯುತ್ತಿದ್ದಾರೆ ಎನ್ನುವುದನ್ನು ಪರಿಗಣಿಸಿಯೂ ಈ ತೀರ್ಮಾನಕ್ಕೆ ಬರಬಹುದು.

ಇಂದಿಗೂ ಕನ್ನಡ ಸಾಹಿತ್ಯದಲ್ಲಿ ಪ್ರಧಾನ, ಉಪ ಎಂಬ ಧೋರಣೆ ಬಿಟ್ಟುಹೋಗಿಲ್ಲ. ಹಾಗಾಗಿಯೇ ಸಾಹಿತ್ಯದ ವಿಮರ್ಶಕರು ಹೊರಡಿಸುವ ತೀರ್ಮಾನಗಳಿಗೂ, ಸೃಜನಶೀಲತೆಯು ಒಡನುಡಿವ ಜೀವನದ ಅನುಭವಕ್ಕೂ ಸಂಘರ್ಷ ನಡೆದಿರುತ್ತದೆ. ಮಹಿಳಾ ಸಾಹಿತ್ಯದ ಸಂದರ್ಭದಲ್ಲಂತೂ ಈ ದೂರ ಇನ್ನೂ ಹೆಚ್ಚು. ತಿರುಮಲಾಂಬಾ ಅವರ ಕಾಲದಿಂದಲೂ ಇದು ಚಾಲ್ತಿಯಲ್ಲಿದೆ. ಸಾಹಿತ್ಯ ಚರಿತ್ರೆಯಲ್ಲಿ ಲೇಖಕಿಯರ ಚರಿತ್ರೆ ಯಾಕೆ ಇಲ್ಲವಾಗಿದೆ ಎಂಬುದೇ ಒಂದು ಚರಿತ್ರೆ. ಪಿತೃಪ್ರಧಾನ ದೃಷ್ಟಿಕೋನವು ಕೊಡಗಿನ ಗೌರಮ್ಮ ಮತ್ತು ತ್ರಿವೇಣಿ ಎಂಬ ಎರಡು ಗುರುತುಗಳನ್ನು ಮಾತ್ರ ಯಾಕಿಡುತ್ತದೆ? ಶ್ಯಾಮಲಾದೇವಿ ಬೆಳಗಾಂವಕರ, ಎಚ್. ವಿ. ಸಾವಿತ್ರಮ್ಮ ಇವರೆಲ್ಲ ಯಾಕೆ ಅಲಕ್ಷಿತರಾಗುತ್ತಾರೆ? ಈ ಆಯ್ದು ಕಟ್ಟುವ ತಂತ್ರ ಪಿತೃವ್ಯವಸ್ಥೆಯ ಚಿಂತನೆಯ ಹೆಗ್ಗುರುತಾಗಿದೆ. ಆದರೆ ಇಂತಹ ಚಿಂತನಾ ವಿಧಾನವು ಇಂದೂ ಕೂಡಾ ಮುಂದುವರೆದಿರುವುದು ವಿವಿಧ ಸಂದರ್ಭದಲ್ಲಿ ಕಂಡುಬರುತ್ತಿದೆ. ಇಷ್ಟಾದರೂ ಕನ್ನಡದಲ್ಲಿ ಮಹಿಳಾ ಸಾಹಿತ್ಯವನ್ನು ನೋಡುವ ಬಗೆಯಲ್ಲಿ ಅಂತಹ ಗಮನಾರ್ಹ ಬದಲಾವಣೆಗಳಾಗಿಲ್ಲ ಎಂಬ ಅನಾದಿ ಸಂಕಟ ಪ್ರತಿಭಾ ಅವರ ವಾದವನ್ನು ಪ್ರಭಾವಿಸಿದೆ.

ತೊಂಬತ್ತರ ದಶಕದಿಂದೀಚೆಗೆ ಕನ್ನಡ ಸಾಹಿತ್ಯದ ಧ್ಯೇಯ ಧೋರಣೆಗಳಲ್ಲಿ ಉಂಟಾದ ಬದಲಾವಣೆಯನ್ನು ಹಿರಿಯ ತಲೆಮಾರಿನ ಕೆಲವು ಸ್ತ್ರೀವಾದಿ ಲೇಖಕಿಯರು ಗಮನಿಸದೆ, ಮೊದಲಿನಂತೆಯೇ ಬರೆಯುತ್ತಿದ್ದಾರೆ. ಆದರೆ ಹೊಸ ತಲೆಮಾರಿನ ವಿಮರ್ಶಕರನ್ನು ಪುರುಷ ಚಿಂತನೆಯ ವಕ್ತಾರರು ಎಂದು ಪ್ರತಿಪಕ್ಷದಲ್ಲಿ ಇಡಲಾಗುವುದಿಲ್ಲ. ಏಕೆಂದರೆ ವಿಮರ್ಶಕರಲ್ಲಿ ಮಹಿಳೆಯರೂ ಇದ್ದಾರೆ. ಹಿರಿಯ ವಿಮರ್ಶಕರಾದ ಡಾ. ಜಿ.

ಎಸ್. ಶಿವರುದ್ರಪ್ಪ, ಡಾ. ಜಿ. ಎಸ್. ಅಮೂರ ಅವರನ್ನು ಮೊದಲು ಮಾಡಿಕೊಂಡು ವರ್ತಮಾನದ ವಿಮರ್ಶೆ ಕೂಡ ಮಹಿಳಾ ಬರಹವನ್ನು ಸಹೃದಯಿಯಾಗಿ ಸ್ವೀಕರಿಸಿದೆ. ಮಹಿಳಾ ಕೃತಿಗಳಿಗೆ ಬರೆದಿರುವ ಮುನ್ನುಡಿಗಳು ಮತ್ತು ಅಲ್ಲಿ ಮುನ್ನೆಲೆಗೆ ತರಲಾದ ಮುಖ್ಯ ಚರ್ಚೆಗಳನ್ನು ಗಮನಿಸಬಹುದು. ಎಚ್. ಎಸ್. ರಾಘವೇಂದ್ರರಾವ್, ಕೆ. ವಿ. ನಾರಾಯಣ, ನರಹಳ್ಳಿ ಬಾಲಸುಬ್ರಹ್ಮಣ್ಯ, ಓ. ಎಲ್. ನಾಗಭೂಷಣಸ್ವಾಮಿ, ರಹಮತ್ ತರೀಕೆರೆ ಮೊದಲಾದವರು ಗಂಭೀರವಾದ ಸ್ತ್ರೀವಾದಿ ವಿಮರ್ಶೆಯಲ್ಲಿ ತೊಡಗಿದ್ದಾರೆ. ಕೆಲವರನ್ನಾದರೂ ನೆನೆಯಲೇಬೇಕು.

ಒಂದು ಉದಾಹರಣೆಯನ್ನು ಗಮನಿಸುವುದಾದರೆ ಎಚ್. ಎಸ್. ಆರ್. ಅವರ 'ಕಣ್ಣ ಹನಿಗಳೆ ಕಾಣಿಕೆ' ಎಂಬ ಕೃತಿ. ಇದು ಮಹಿಳಾ ಬರಹಗಳಿಗೆ ಬರೆದ ಮುನ್ನುಡಿ–ಟಿಪ್ಪಣಿಗಳ ಸಂಕಲನ. ೧೯೭೪ ರಿಂದ ೨೦೧೨ ರ ವರೆಗಿನ ಅಭಿಪ್ರಾಯಗಳು ಇಲ್ಲಿವೆ. ಗಂಡಸರು ಸತ್ತು ಸ್ವರ್ಗ ಸೇರಿದರೆ ಅಪ್ಸರೆಯರಿದ್ದಂತೆ ಹೆಂಗಸರಿಗೆ ಅಪ್ಸರರು ಇದ್ದಾರೆ ಎಂಬ ಪ್ರಸ್ತಾಪವಿಲ್ಲ ಎನ್ನುವ ಸಾಮಾಜಿಕ ಸಂರಚನೆಯ ಶೋಧದಿಂದ ಹಿಡಿದು; ಲೇಖಕಿಯರು ಬರೆಯಬಹುದಾದ ಕುಸುಮಬಾಲೆ ಇನ್ನೂ ಬಂದಿಲ್ಲವೋ ಅಥವಾ ಅದು ಬಂದಿದ್ದರೂ ನಾವು ಗಂಡಸರು ಅದನ್ನು ಗುರುತಿಸಿಲ್ಲವೋ ಅಥವಾ ನೋಡಿಯೂ ಪಕ್ಕಕ್ಕೆ ತಳ್ಳಿದ್ದೇವೆಯೋ ಎನ್ನುವ ಸೂಕ್ಷ್ಮ ಒಳನೋಟಗಳು ಮತ್ತು ಹುಡುಕಾಟಗಳು ಇಲ್ಲಿವೆ. ಮಹಿಳಾ ಅಭಿವ್ಯಕ್ತಿಯ ಕಥನವನ್ನು ರೂಪಿಸುವ ಕ್ರಮ ಈ ಕೃತಿಯಲ್ಲಿದೆ. ಪ್ರಸ್ತುತ ಸಂದರ್ಭದಲ್ಲಿ ಸ್ತ್ರೀವಾದಿ ಚಿಂತನೆಯು ಕನ್ನಡ ಸಂವೇದನಾಶೀಲತೆಯನ್ನು ತೀವ್ರವಾಗಿ ಪ್ರಭಾವಿಸಿದೆ. ಮಹಿಳಾಪರ ನಿಲುವುಗಳು ಆಲೋಚನೆಯ ಭಾಗವಾಗಿ ಬೆರೆತಿವೆ. ಅನಾದಿಯಿಂದಲೂ ಸಾಹಿತ್ಯದಲ್ಲಿ ಹೆಣ್ಣು ಇದ್ದೇ ಇದ್ದಳು. ಅವಳು ಪಿತೃವ್ಯವಸ್ಥೆಯ ಪ್ರೇರಕಳೂ ಪೋಷಕಳೂ ಆಗಿ ಪುರುಷ ಚಿಂತನೆಯ ಕಟ್ಟೋಣದಲ್ಲಿ ಮೂಡಿದ್ದಳು. ಆದರೆ ಈಗ ಹೆಣ್ಣು ವ್ಯಕ್ತಿಯಾಗಿ, ತಪ್ಪು ಸರಿಗಳ ಒಳಿತು–ಕೆಡಕುಗಳ ಪಾಲುದಾರಳಾಗಿ ಒಟ್ಟೂ ಬದುಕಿನ ರಚನೆಯೊಳಗಿನ ಅನಿವಾರ್ಯತೆಯಾಗಿ ಅಗತ್ಯವೂ ಆಗಿ ಪ್ರತಿಪಾದಿತಳಾಗುತ್ತಿದ್ದಾಳೆ. ಅವಳ ಮನಸ್ಸನ್ನು, ಜಗತ್ತನ್ನು ಮಹಿಳಾ ಬರವಣಿಗೆಗಳು ಮಾತ್ರ ಅನಾವರಣಗೊಳಿಸಿಲ್ಲ. ಅದು ಒಟ್ಟೂ ಸಾಹಿತ್ಯದ ಸಂವೇದನೆಯೇ ಆಗಿ ಹರಹಿಕೊಂಡಿದೆ. ಇಷ್ಟಾದರೂ ಕನ್ನಡ ಸಂವೇದನಾಶೀಲತೆ ಮಹಿಳೆಯ ಕಣ್ಣಿಂದಲೂ ಜಗತ್ತನ್ನು ನೋಡುವ ಪ್ರಕ್ರಿಯೆಗೆ ಪೂರ್ಣವಾಗಿ ಒಳಗಾಗಿ ಬಿಟ್ಟಿದೆ ಎನ್ನಲಾಗದು. ಆದರೆ ಕಳೆದ ಕೆಲವು ದಶಕಗಳಿಗೆ ಹೋಲಿಸಿದರೆ ಕನ್ನಡ ಸಾಹಿತ್ಯದ ಮಹಿಳಾಪರ ದೃಷ್ಟಿಕೋನದಲ್ಲಿ ಮುಖ್ಯವಾದ ಪಲ್ಲಟಗಳು ಕಾಣಿಸಿಕೊಳ್ಳುತ್ತಿರುವುದು ನಿಜ.

ಆಧುನಿಕ ಕಾಲದಲ್ಲೂ ಮಹಿಳಾ ಬರಹ ಪುರುಷ ಹಿತಾಸಕ್ತಿಯ ಕೇಂದ್ರದಲ್ಲೇ ಸುತ್ತಿದೆ. ಸಂಯಮ, ತಾಳ್ಮೆ, ಬಿಡುಗಡೆ, ಪ್ರತಿರೋಧ ಈ ಎಲ್ಲ ಪರಿಭಾಷೆಗಳೂ ಪುರುಷ ನೆಲೆಯಿಂದಲೇ ಅರ್ಥೈಸಲ್ಪಡುತ್ತವೆ. ಮಹಿಳೆ ಬದುಕಿನ ಕಟ್ಟೋಣದಲ್ಲಿ ಈ ಎಲ್ಲವುಗಳನ್ನು ಅರ್ಥೈಸಿಕೊಳ್ಳುವ ಬಗೆ ಬೇರೆಯಾಗಿರುತ್ತವೆ. "ಗೃಹಕೃತ್ಯ ಪುರುಷ ಚಿಂತನೆಗೆ ಒಂದು ಕೆಲಸ. ಆದರೆ ಹೆಣ್ತನಕ್ಕೆ ಅದೊಂದು ಕರ್ತವ್ಯ ಮತ್ತು ಕೌಟುಂಬಿಕ ವಾತ್ಸಲ್ಯ. ಹೆಣ್ಣಿಗೆ ಅದು

[illegible]

ಕೌಶಲ ಮತ್ತು ಅಸ್ತಿತ್ವದ ಗುರುತು. ಪಿತೃವ್ಯವಸ್ಥೆಯ ರಾಜಕಾರಣ ಹಾಗೂ ಆ ರಾಜಕೀಯ ಸಂಹಿತೆಯನ್ನು ವಿವರಿಸುವ ಗುರುಮನೆಯಾಗಿ ಮನೆ ರೂಪುತಳೆಯುತ್ತದೆ. ಈ ಅಂತರಾಳವನ್ನು ಮೊಗೆದುಕೊಡಲು ಕನ್ನಡ ಪ್ರಜ್ಞೆ ಸಾಕಷ್ಟು ಒಳನೋಟವನ್ನು ಹರಿಸಬೇಕಿದೆ. ಅದಿಲ್ಲದಿದ್ದಾಗ ಮಹಿಳಾ ಬರಹದಲ್ಲಿ ಅಡಿಗೆಯ ಲೋಕವೋ, ಖಾಸಗಿ ದರ್ಬಾರೋ ಕಾಣಿಸುತ್ತದೆ"[೨೦] ಎಂದು ತಿಳಿಯಲಾಗುತ್ತದೆ.

ರಾಜಕೀಯ ಪ್ರಜ್ಞೆಯ ಕುರಿತ ಪಿತೃವ್ಯವಸ್ಥೆಯ ಪರಿಭಾಷೆ ಇಲ್ಲಿ ಅನ್ವಯವಾಗುವುದಿಲ್ಲ. ಹಾಗಾಗಿ ಮಹಿಳಾ ಕಾವ್ಯಮೀಮಾಂಸೆಯು ರೂಪುಗೊಳ್ಳಬೇಕಾದ ಅಗತ್ಯವನ್ನು ಸ್ತ್ರೀವಾದವು ಮುಂಚೂಣಿಗೆ ತರುತ್ತಿದೆ. ಇದಕ್ಕೆ ಬಂದ ಪ್ರತಿಕ್ರಿಯೆಗಳು ಬರಹದ ಕುರಿತ ಪ್ರಾಥಮಿಕ ತೊಡಕನ್ನು ಬಿಡಿಸಲು ಒತ್ತಾಯಿಸುತ್ತವೆ. ಲೇಖಕರು ಹೆಣ್ಣಾಗಲಿ, ಗಂಡಾಗಲಿ ಅವರ ಸಂವೇದನಾ ಸಾಧ್ಯತೆಯೇ ಬರಹವನ್ನು ರೂಪಿಸುವುದು. ಆದರೆ ಸಂವೇದನೆ ರೂಪಣಗೊಳ್ಳುವುದೇ ಜೀವವು ಬದುಕುವ, ಬೆಳೆಯುವ ಪರಿಸರದ ಪ್ರಭಾವದಲ್ಲಿ. ಬದುಕನ್ನು ಎಚ್ಚರದಿಂದ ಗಮನಿಸುವುದಕ್ಕಿಂತ ಮುಂಚೆಯೇ ಹೆಣ್ಣು–ಗಂಡು ಎಂಬ ಬೇಧ ನಿರ್ಮಾಣಗೊಂಡಿರುತ್ತದೆ. ಬೆಳೆಯುತ್ತ ಹೆಣ್ಣಾಗಿಯೋ ಗಂಡಾಗಿಯೋ ಮಾತ್ರವಲ್ಲ, ಹೆಣ್ಣಲ್ಲದೆಯೂ, ಗಂಡಲ್ಲದೆಯೂ ಬೆಳೆಯುತ್ತೇವೆ. ಅವಕಾಶಗಳು, ಆಸ್ಪದಗಳು ಈ ಗಡಿರೇಖೆಯೊಳಗೇ ದಕ್ಕುತ್ತವೆ ಅಥವಾ ತಪ್ಪುತ್ತವೆ. ಲಿಂಗವ್ಯವಸ್ಥೆಯು ಜೀವದ ಸಂವೇದನೆಯನ್ನು ನಿಯಂತ್ರಿಸುವ ಮತ್ತು ನಿರೂಪಿಸುವ ವ್ಯವಸ್ಥೆಯೂ ಹೌದು. ಇಂತಹ ಸಂಗತಿಗಳಿಂದ ಸಾಹಿತ್ಯದ ರಚನೆ ಮತ್ತು ವಿಶ್ಲೇಷಣೆಯಲ್ಲಿ ವ್ಯತ್ಯಾಸಗಳಾಗುವ ಸಂಭವವಿರುತ್ತವೆ. ಹಾಗಾಗಿ ಮಹಿಳಾ ಬರಹವನ್ನು ಓದುವ ಬದಲೀ ದೃಷ್ಟಿಕೋನದ ಅಗತ್ಯ ಕಾಣುತ್ತದೆ.

ಮಹಿಳಾವಾದವನ್ನು ಪುರುಷ ಪ್ರಧಾನ ವ್ಯವಸ್ಥೆಯೊಂದಿಗೆ ಪರ್ಯಾಯವಾಗಿ, ಮುಖಾಮುಖಿಯಾಗಿ ಕಟ್ಟುವುದರ ಬದಲಾಗಿ ಸೌಹರ್ದಯುತವಾಗಿ ಕಟ್ಟಬೇಕೆಂಬ ನಿಲುವುಳ್ಳ ವಿನಯಾ ಅವರು ಈ ಕಾರಣದಿಂದಾಗಿಯೇ ಆಂಗ್ಲ ಲೇಖಕಿಯಾದ ಶಶಿದೇಶಪಾಂಡೆಯವರ ಸ್ತ್ರೀವಾದಿ ಓದಿನ ಪೂರ್ವಕಲ್ಪಿತ ನೆಲೆಯ ಬಗ್ಗೆ ತಕರಾರೆತ್ತುತ್ತಾರೆ. ಬರಹವೇ ಒಂದು ಅಖಂಡ ಆಯಾಮ ಅದನ್ನು ಅದಾಗಿ ಮಾತ್ರ ನೋಡಬೇಕೆನ್ನುವುದು ಸೃಜನಶೀಲತೆಯ ಶಕ್ತಿ ನಿಜ. ಆದರೆ ಯಾವುದನ್ನು ಅನುಭವದ ಅನನ್ಯತೆ ಎನ್ನುತ್ತೇವೋ ಅದು ಲಿಂಗತಾರತಮ್ಯದಂತೆ ಹಲವು ತಾರತಮ್ಯಗಳ ಸಂತುಲಿತವೇ ಆಗಿರುತ್ತದೆ. ಬರಹಗಾರರೂ ವ್ಯಕ್ತಿಗಳೇ. ವ್ಯಕ್ತಿಗಳ ವ್ಯಕ್ತಿತ್ವ ಸಮುದಾಯದೊಂದಿಗಿನ ಹೊಕ್ಕುಬಳಕೆಯಲ್ಲಿಯೆ ರೂಪುಗೊಂಡಿರುತ್ತದೆ. ಆದ್ದರಿಂದ ವ್ಯಕ್ತಿಗಳು ಸಮೂಹದ ಭಾಗವೇ. ಬರಹವೂ ಸಮೂಹದ ಭಾಗವೇ. ಶಶಿ ದೇಶಪಾಂಡೆಯವರು ಬಂಡಾಯದ ಕಲ್ಪಿತವನ್ನು ಒಡೆಯುವ ಕ್ರಮ ತೀವ್ರವಾದದ್ದು. ಮಹಿಳೆಯಾಗಿ ಮತ್ತು ಲೇಖಕಿಯಾಗಿ ನಾನು ಬದಲಾಗುತ್ತೇನೆ ಎಂದು ಹೇಳುವಾಗ ಬರಹದ ಒಳಬಂಡಾಯವನ್ನವರು ಸೂಚಿಸುತ್ತಾರೆ. ಇದನ್ನೆಲ್ಲ ಸ್ತ್ರೀವಾದಿ ಚಿಂತನೆಯೂ ಹೇಳುತ್ತದೆ. ಮಹಿಳಾ

ಬರಹಗಾರರೆಲ್ಲರೂ ಸ್ತ್ರೀವಾದಿಗಳಲ್ಲ. ಹಾಗೆ ಸ್ತ್ರೀವಾದಿ ಚಿಂತನೆಯನ್ನು ಹೊಂದಿದವರು ಮಹಿಳೆಯರು ಮಾತ್ರವೇ ಆಗಬೇಕಾಗಿಲ್ಲ. ಸ್ತ್ರೀವಾದ ಎನ್ನುವುದು ಚಿಂತನಾ ವಿಧಾನವೇ ವಿನಃ ಜೈವಿಕತೆಯಲ್ಲ, ಜೈವಿಕತೆ ಅದನ್ನು ವಿವರಿಸಿಕೊಳ್ಳುವ ಕ್ರಮ ಅಷ್ಟೇ.

"ಸ್ತ್ರೀವಾದವೆನ್ನುವುದು ರೂಕ್ಷವಾದ ಸಿದ್ಧಾಂತ ಎಂದು ಹೊರಟರೆ ಆ ಚಿಂತನೆಯ ಪ್ರವೇಶ ಮತ್ತು ಸ್ಥಿತ್ಯಂತರಗಳನ್ನು ನಿರಾಕರಿಸಿದಂತಾಗುತ್ತದೆ. ಅದು ಭಾರತೀಯ ಸಮಾಜ ವ್ಯವಸ್ಥೆಯೊಳಗೆ ಸಾಕಷ್ಟು ಮಿದ್ದು ಹದವಾಗಿದೆ. ಕೃತಿಯೊಂದರ ಓದಿಗೆ ಹಲವು ಹಾದಿಗಳು ಯಾವತ್ತಿನಿಂದಲೂ ಇವೆ. ಸ್ತ್ರೀವಾದದ ಪ್ರವೇಶ ಮತ್ತೊಂದು ಸೀಳುಹಾದಿಯನ್ನು ಹಾಕಿಕೊಂಡಿದೆ. ಹಾಗೆಂದಾಕ್ಷಣ ಅದು ಉಳಿದವುಗಳನ್ನು ನಿರಾಕರಿಸುತ್ತದೆ ಎಂದಲ್ಲ. ಲಕ್ಷ್ಮೀಶ ಕವಿಯ 'ಸೀತಾಪರಿತ್ಯಾಗ' ಭಾಗದಲ್ಲಿ ಸೀತೆ ಲಕ್ಷ್ಮಣನಿಗೆ ನೆರವುಂಟು ತನಗೀಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು ಎಂಬ ಮಾತು ಸ್ತ್ರೀವಾದಿ ತಾತ್ವಿಕತೆ ಇಲ್ಲದಿದ್ದಾಗ ರಾಮನ ಬಗೆಗಿನ ಪ್ರೇಮವಾಗಿ ಕಾಣುತ್ತದೆ. ಸ್ತ್ರೀವಾದಿ ನೋಟಕ್ಕೆ ರಘುರಾಮನನ್ನು ನಿವಾಳಿಸಿ ಒಗೆವ ತೀಕ್ಷ್ಣ ವ್ಯಂಗ್ಯವಾಗಿ ಕಾಣುತ್ತದೆ. ಹಾಗೆಂದ ಮಾತ್ರಕ್ಕೆ ಕಾವ್ಯದ ಉಳಿದ ಸಾಧ್ಯತೆಗಳೇಕೆ ಮಸಕಾಗುತ್ತವೆ? ಮಲೆಗಳಲ್ಲಿ ಮದುಮಗಳು ಕೃತಿಯನ್ನು ದೇಯಿ, ತಿಮ್ಮಿ, ಪೀಂಚಲು ಮೂಲಕ ಪ್ರವೇಶಿಸಿದಾಗ ಅಗಮ್ಯವಾಗಿದ್ದ ಮತ್ತೊಂದು ಹಾದಿ ತೆರೆಯುತ್ತದೆಯೆ ವಿನಃ ಒಟ್ಟೂ ಕೃತಿಯ ಓದನ್ನು ಮೊಟಕುಗೊಳಿಸುತ್ತದೆಯೇ?"[೨೧] ಇದೊಂದು ಓದುವಿಕೆಯೇ ಅಲ್ಲ ಎನ್ನಲಾಗುವುದಿಲ್ಲ. ಸ್ತ್ರೀವಾದಿ ಓದು ಒಂದು ಪೂರ್ವಗ್ರಹ ಓದು. ಆದರದು ಕೃತಿಯ ಒಟ್ಟೂ ಕೇಂದ್ರವನ್ನು ಪ್ರವೇಶಿಸಲು ಇರುವ ದಾರಿ. ಇದು ಮಹಿಳಾ ಸಾಹಿತ್ಯವನ್ನು ಓದುವ ಕ್ರಮ ಮಾತ್ರವಲ್ಲ, ಒಟ್ಟೂ ಸಾಹಿತ್ಯವನ್ನೂ ಕಲೆಯನ್ನೂ ಬದುಕನ್ನೂ ಓದುವ ಕ್ರಮ ಬದಲಾಗಿದೆ ಎಂದು ಶ್ರೇಣೀಕೃತ ವ್ಯವಸ್ಥೆಯ ಮೇಲ್ತುದಿಯಲ್ಲಿದ್ದವರಿಗೆ ಯಾವತ್ತೂ ತೋರುತ್ತದೆ. ಕೆಳ ಅಂಚಿನ ಜಗತ್ತು, ಬದುಕು ಬದಲಾಗುತ್ತದೆ– ಬದಲಾಗಬೇಕಿದೆ– ಬದಲಾಗುತ್ತಿದೆ ಎಂಬ ಹುಡುಕಾಟದಲ್ಲಿರುತ್ತದೆ. ಇದು ಸ್ತ್ರೀವಾದಿ ಸಂಕಥನ. ಬರಹಗಾರ್ತಿ ಪರಂಪರೆಗೆ ಆತುಕೊಂಡಿರುವುದಿಲ್ಲ. ಆದರೆ ಅಂತಹ ವಾಸ್ತವವನ್ನು ಅಲಕ್ಷಿಸುವುದೂ ಇಲ್ಲ. ಸ್ತ್ರೀವಾದಿ ತಾತ್ವಿಕತೆಯ ಬದಲೀ ಓದು ಮಹಿಳಾ ಬರಹಕ್ಕೆ ಮಾತ್ರವಲ್ಲ. ಒಟ್ಟಾರೆ ಕಣ್ಣೋಟಕ್ಕೆ ಅಗತ್ಯವಾಗಿ ಬೇಕಾಗಿದೆ.

ಸಾಹಿತ್ಯ ವಿಮರ್ಶೆ ಹಲವು ದಾರಿಗಳಲ್ಲಿ ಸಾಗುತ್ತಿವೆ. ವಿವಿಧ ಸಾಮಾಜಿಕ ಸ್ತರಗಳ ನೆಲೆಗಳಿಂದ ಸಾಹಿತ್ಯವನ್ನು ಓದುವ ಬಗೆ ಇದೆ. ಈಚಿನ ದಿನಗಳಲ್ಲಿ ಸಾಂಸ್ಕೃತಿಕ ವಿಮರ್ಶೆ ಮುಂಚೂಣಿಯಲ್ಲಿದ್ದಂತೆ ಅನಿಸುತ್ತಿದೆಯಾದರು, ಸಾಹಿತ್ಯ ವಿಮರ್ಶೆ ತನ್ನ ದಾರಿಯಲ್ಲಿ ದಣಿದಂತೆ ಕಾಣುತ್ತಿದೆ. ಸಾಹಿತ್ಯವನ್ನು ಓದುವ, ಅರ್ಥೈಸುವ ವಿಧಾನಗಳು ತೆಳುವಾಗುತ್ತಿದೆ. ಇಂತಹ ಸಂದರ್ಭದಲ್ಲಿ ರಂಗನಾಥ ಕಂಟನಕುಂಟೆ ಅವರ 'ಓದಿನ ಜಾಡು' ಕೃತಿ ಸಾಹಿತ್ಯ, ಸಂಸ್ಕೃತಿಯನ್ನು ತನ್ನದಾಗಿಸಿಕೊಳ್ಳುವ ದಾರಿಗಳಿಗಾಗಿ ಹುಡುಕಾಟ ನಡೆಸಿದೆ. ಸಾಹಿತ್ಯ ಸೃಷ್ಟಿಯ ಸಾಂಸ್ಕೃತಿಕ ನೆಲೆಗಳು, ಸಂಸ್ಕೃತಿ ವಿಮರ್ಶೆಯಾಗಿ ಸಾಹಿತ್ಯದ ಓದು, ಸಾಂಸ್ಕೃತಿಕ ಓದಿನ ಪರಿಕಲ್ಪನೆಗಳ ತಾತ್ವಿಕ ತೊಡಕು, ಪರಿಕಲ್ಪನೆಗಳ ಅನುವಾದ ಮತ್ತು ವೈಚಾರಿಕತೆಯ

ಗೊಂದಲ, ಮಂಟೇಸ್ವಾಮಿ ಪರಂಪರೆಯ ಮುಖಾಮುಖಿಯ ಸವಾಲು, ಜಾನಪದ ಸಾಹಿತ್ಯದ ಜನಪರತೆಯ ಕುರಿತ ಅನುಮಾನಗಳು, ಕನ್ನಡ ರಾಷ್ಟ್ರೀಯತೆ ಚಿಂತನೆಯ ಹೆಜ್ಜೆಗುರುತುಗಳು, ಕಿರಂ ಕಣ್ಣಲ್ಲಿ ಸಾಹಿತ್ಯದ ಓದು, ಲಂಕೇಶ್– ಚೈತನ್ಯದ ನೆಲೆಗಳ ಶೋಧಕ ಹೀಗೆ ಸಾಹಿತ್ಯವನ್ನು ಬೇರೆ ಬೇರೆ ನೆಲೆಗಳಲ್ಲಿ, ವ್ಯಕ್ತಿಗಳ ಕಣ್ಣಲ್ಲಿ ಅರ್ಥೈಸುವ ಪ್ರಯತ್ನವನ್ನು ಲೇಖಕರು ಈ ಕೃತಿಯಲ್ಲಿ ಮಾಡುತ್ತಾರೆ.

ಕನಕನ ಲೋಕದೃಷ್ಟಿಯನ್ನು ವಿವೇಚಿಸುತ್ತ ಅದರಲ್ಲಿರುವ ಸಾಂಸ್ಕೃತಿಕ ರಾಜಕಾರಣವನ್ನು ಅವರು ಚರ್ಚಿಸುತ್ತಾರೆ. "ಕನಕನನ್ನು ನಮ್ಮ ಕಾಲದ ಜೊತೆಗೆ ಅನ್ವಯಿಸಿ ನೋಡುವದು ಎಷ್ಟು ಮುಖ್ಯವೋ ಅಷ್ಟೇ ಸಹಜ ಮತ್ತು ಮುಖ್ಯವಾಗಿ ಆತನ ಕಾಲದ ಧರ್ಮದ ಜೊತೆಗೂ ಹೋಲಿಸಿ ಅನ್ವಯಿಸಿ ಅಧ್ಯಯನ ಮಾಡುವ ಅಗತ್ಯವನ್ನು ಹೇಳುತ್ತಾರೆ. ಕನ್ನಡ ಕಥನಗಳಲ್ಲಿ ಭಾಷೆಯ ಬಳಕೆಯ ಬಗ್ಗೆ ಬರೆಯುತ್ತಾ, ಅಸಮಾನತೆಯ ವಿರುದ್ಧ ಹೊರಡುವ ಎಲ್ಲರೂ ಅಸಮಾನ ಭಾಷೆಯನ್ನು ಮುರಿದು ಹೊಸ ಭಾಷೆಯನ್ನು ಕಟ್ಟಿಕೊಳ್ಳಲು, ಹೊಸ ನುಡಿಗಟ್ಟನ್ನು ಸೃಷ್ಟಿಸಲು ಯತ್ನಿಸಬೇಕು ಎಂಬ ನಿಲವು ತಾಳುತ್ತಾರೆ."[೨೨] ಒಟ್ಟಂದದಲ್ಲಿ ವರ್ತಮಾನವನ್ನು ಕಾಡುತ್ತಿರುವ ಹಲವು ವಿಚಾರಗಳು, ಸಮಸ್ಯೆಗಳು, ನಮ್ಮ ಸಾಹಿತ್ಯ ಸಂಸ್ಕೃತಿಯಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿರುವ ತಾತ್ವಿಕ ತೊಡಕುಗಳ ಹಿನ್ನೆಲೆಯಲ್ಲಿ ಇಲ್ಲಿನ ಬರಹಗಳು ರೂಪು ತಳೆದಿವೆ.

ದೇವನೂರರ ಸಾಹಿತ್ಯವನ್ನು ವಿಶ್ಲೇಷಿಸುತ್ತಾ, ಅವರ ಕೃತಿಗಳಲ್ಲಿ ಲೋಕವಿಮರ್ಶೆಯ ಗುಣ ಮುಂದೆ ಬಂದಷ್ಟು ಆತ್ಮವಿಮರ್ಶೆಯ ಗುಣ ಮುನ್ನಡೆಗೆ ಬರುವುದಿಲ್ಲ ಎಂದು ಹೊಸ ತಲೆಮಾರಿನ ವಿಮರ್ಶೆ ಗುರುತಿಸುತ್ತದೆ. ಅವರು ತಮ್ಮನ್ನು ಒಂದು ಮನೋಧರ್ಮದ, ಒಂದು ಸಾಮಾಜಿಕ ಸ್ಥಿತಿಯ ಪ್ರತೀಕವಾಗಿಯೇ ಪರಿಭಾವಿಸಿಕೊಂಡು ಬರೆಯುತ್ತಾರೆ. ದೇವನೂರರು ವ್ಯಕ್ತಿಯಾಗಿ ಹೇಗೆ ಕಾಣುತ್ತಾರೆಂಬುದು ಅವರ ವಕ್ತಾರತನದಾಚೆಗೆ ಕುತೂಹಲಕರವಾಗಿಯೇ ಉಳಿಯುತ್ತದೆ. ಗಾಂಧಿ, ಅಂಬೇಡ್ಕರರಷ್ಟು ಬುದ್ಧ ಇನ್ನೂ ದೇವನೂರರ ಪ್ರಜ್ಞೆಯ ಭಾಗವಾಗಿಲ್ಲ; ದಲಿತ ಸಮಾಜದ ತಳದಲ್ಲಿರುವವರ ನೋವು–ನಲಿವುಗಳ ನೆಲೆಗಳನ್ನು ಗ್ರಹಿಸುವ ದೇವನೂರರ ಬರವಣಿಗೆ, ಚಿಂತನೆಯ ಕ್ರಮ ಸಮಕಾಲೀನ ದಲಿತ ಮತ್ತು ಭಾರತೀಯ ಸಮಾಜದ ವೈವಿಧ್ಯಮಯ ಪಲ್ಲಟಗಳನ್ನು ಮತ್ತು ಅದರ ಸೂಕ್ಷ್ಮತೆಗಳನ್ನು ಗ್ರಹಿಸುವುದಿಲ್ಲ; ಆದ್ದರಿಂದ ದೇವನೂರರ ಚಿಂತನೆಯ ಮಾದರಿ ಕಳೆದ ಶತಮಾನದ ಎಪ್ಪತ್ತು–ಎಂಬತ್ತರ ದಶಕಗಳಲ್ಲಿ ರೂಪುಗೊಂಡು ಅದೇ ಚೌಕಟ್ಟುಗಳಲ್ಲಿ ಸ್ಥಗಿತಗೊಂಡಿದೆ.

ಕನ್ನಡದಲ್ಲಿ ಸ್ತ್ರೀವಾದಿ ವಿಮರ್ಶೆ ಭಿನ್ನ ಭಿನ್ನ ಪಾತಳಿಗಳಲ್ಲಿ ಹರಿಯುತ್ತಿದೆ. ಜಾನಪದ ಸಾಹಿತ್ಯವನ್ನು ಮಹಿಳಾ ದೃಷ್ಟಿಕೋನದ ಹಿನ್ನೆಲೆಯಲ್ಲಿ ವಿವರಿಸಿರುವ ಗಾಯತ್ರಿ ನಾವಡ ಅವರು 'ಕೇಳಿಸುವ ದನಿಗಳು' 'ಕಾಣಿಸುವ ಪದಗಳು' ಎಂಬ ಗ್ರಹಿಕೆಗಳ ಮೂಲಕ ಸಮಾಜದಲ್ಲಿ ಗಂಡು–ಹೆಣ್ಣಿನ ಸ್ಥಿತಿಯನ್ನು ಪೃಥಕ್ಕರಿಸುತ್ತಾರೆ. 'ಕೇಳಿಸುವ ದನಿಗಳು'– ಗಂಡಿನ ಮಾತಿಗೂ ಅಸ್ತಿತ್ವಕ್ಕೂ, ಕಾಣಿಸುವ ಪದಗಳು–ಹೆಣ್ಣಿನ ಮೌನ ಮತ್ತು ಹೆಣ್ಣಿನ

ಅದೃಷ್ಟಕ್ಕೂ ಇರುವ ಸಂಬಂಧವನ್ನು, ಸಾಮಾಜಿಕ ಅಧಿಕಾರ ಮತ್ತು ಹೆಣ್ಣಿನ ಮೂಕತೆ ನಡುವೆ ಇರುವ ತಾರ್ಕಿಕ ಸಂಬಂಧವನ್ನು ಎತ್ತಿ ಹಿಡಿಯುವ ಬಗ್ಗೆ ಹೇಳುತ್ತಾರೆ. ಐತಿಹಾಸಿಕವಾಗಿ ಇದನ್ನು ನೋಡಿದಾಗ ಸತತವಾಗಿ ನಡೆದುಕೊಂಡು ಬಂದ ಸಮಾಜದ ಉತ್ಪಾದನೆಯೇ ಈ ಮಾತುಕತೆ ಎಂದು ನಾವು ಗ್ರಹಿಸಬಹುದು. ಹೆಣ್ಣಿನ ಅಸ್ಥಿತ್ವವನ್ನು ನಿಯಂತ್ರಿಸುವ ಸಮಾಜ ತನ್ನದೇ ಆದ ಹೆಣ್ಣಿನ ಇತಿಹಾಸವನ್ನು ಸೃಷ್ಟಿಸುತ್ತದೆ.

ಹೆಣ್ಣು ಮೌನವಾಗುವುದು, ಅದೃಶ್ಯವಾಗುವುದು ಎಂದರೆ ಮೂಲಭೂತವಾಗಿ ಒಂದೇ. ಹೆಣ್ಣನ್ನು ಎಲ್ಲ ಶೋಷಣೆಯನ್ನು ಸಹಿಸಿ ತ್ಯಾಗಮಹಿ ದೇವತೆಯ ಹಾಗೆ ಅಥವಾ ಎಲ್ಲವನ್ನೂ ಧಿಕ್ಕರಿಸಿ ಸಂಹರಿಸುವ ರಕ್ಕಸಿಯ ಹಾಗೆ ಚಿತ್ರಿಸಲಾಗುತ್ತದೆ. ಈ ಪ್ರಕ್ರಿಯೆ ಆಕಸ್ಮಿಕವೂ ಅಲ್ಲ, ವಿಪರ್ಯಾಸವೂ ಅಲ್ಲ, ದೇವತೆಯಾಗುವುದು ಎಂದರೆ ಗುಣಸಂಪನ್ನೆಯಾಗಿ, ತ್ಯಾಗಮಯಿಯಾಗಿ, ಸರ್ವ ತ್ಯಾಗಿಯಾಗಿ, ತನ್ನೆಲ್ಲತನವನ್ನು ಕಳೆದುಕೊಂಡು ನಿಜವಾಗಲೂ ಎಲ್ಲರಿಗೂ ಜೀವ ಶಕ್ತಿಯಾಗುವುದು ಎಂದರ್ಥ. ಅಂದರೆ ಹೆಣ್ಣಿನ ಈ ತ್ಯಾಗದ ಹಿಂದೆ ಗಂಡಿನ ಒತ್ತಾಸೆ, ಸ್ವಾರ್ಥ ಇರುತ್ತದೆ. ಇಂಥದ್ದನ್ನು ನಿರಾಕರಿಸಿದಾಗ ಆಕೆ ರಕ್ಕಸಿಯಾಗಿ ತನ್ನ ದನಿಯನ್ನು ತಾನೇ ಹುಡುಕಿಕೊಳ್ಳುವ ಪ್ರಯತ್ನಿಸುತ್ತಾಳೆ. ಈ ಪ್ರಯತ್ನ ಸಮಾಜದ ದನಿಯನ್ನು ಎದುರಿಸುವ ಸಮಾಜದ ಕಟ್ಟಳೆಗಳನ್ನು ಮೀರುವ ಯತ್ನವಾಗಿರುತ್ತದೆ.

ಸಾಮಾನ್ಯವಾಗಿ ಕನ್ನಡದಲ್ಲಿನ ಅನೇಕ ಸ್ತ್ರೀವಾದಿಗಳು ಆಧುನಿಕತೆಯ ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ಹೆಣ್ಣಿನ ರಕ್ಕಸಿತನವನ್ನು ಎವಿಲ್ ಆಗಿಯೇ ಕಾಣುತ್ತಾರೆ. ಹಿನ್ನೆಲೇ ಹುಡುಕುವ ಪ್ರಯತ್ನ ಕಾಣುವುದಿಲ್ಲ. ಆದರೆ ಗಾಯತ್ರಿ ನಾವಡ ಮುಖವಿಲ್ಲದ ಬರವಣಿಗೆ, ಶಿಷ್ಟಭಾಷೆ ಇಲ್ಲದ ಸ್ತ್ರೀಯರ ರೂಪಕಗಳು, ಪ್ರತಿಮೆಗಳು, ತಂತ್ರಗಳು, ಉಪಾಯಗಳನ್ನು ಮಹಿಳೆಯ ಅಸ್ಮಿತೆಯನ್ನು ಗ್ರಹಿಸುವಲ್ಲಿ ಬಳಸಿಕೊಳ್ಳುತ್ತಾರೆ. ಸಂಪ್ರದಾಯಸ್ಥ ಭಾರತೀಯ ಸಮಾಜದ ಬಗ್ಗೆ ಇರುವ ವೈಭವೀಕೃತ ನೋಟವನ್ನು ಪ್ರಶ್ನಿಸುವ ಸ್ತ್ರೀವಾದಿಗಳು. ಅದು ಮೇಲುವರ್ಗಕ್ಕೆ, ಆಳುವ ವರ್ಗಕ್ಕೆ ಸೀಮಿತವಾದದ್ದು. ಆದರೆ ಅದೇ ಸಂದರ್ಭದಲ್ಲಿ ತಳವರ್ಗದ ದಾಸಿಯವರ ಬದುಕು. ಸಾಂಸ್ಕೃತಿಕ ಅಸ್ಮಿತೆ ಇವೆಲ್ಲ ಹೇಗಿದ್ದವೆಂಬ ಪ್ರಶ್ನೆಗೆ ಉತ್ತರವಿಲ್ಲ ಎನ್ನುತ್ತಾರೆ. ಆದರೆ ಜಾನಪದ ಕಥನಗಳಲ್ಲಿ ಕವನಗಳಲ್ಲಿ ಇದಕ್ಕೆ ಉತ್ತರ ಕಂಡುಕೊಳ್ಳಬಹುದು ಎಂಬುದು ನಾವಡರ ವಾದ. ಆದ್ದರಿಂದಲೇ ಜಾನಪದ ಕತೆ ಕವನಗಳು, ಅಜ್ಜಿಯ ಕತೆಗಳು ಮತ್ತು ಪಾಡ್ದನಗಳಲ್ಲಿ ಬರುವ ಸ್ತ್ರೀ ಸಂವೇದನೆಗಳನ್ನು ಸಮರ್ಥವಾಗಿ ಗುರುತಿಸುತ್ತಾರೆ.

ಬಹುತೇಕ ವಿಮರ್ಶಕರು ತಮ್ಮ ಸಮಕಾಲೀನ ಲೇಖಕರ ಸಾಹಿತ್ಯವನ್ನು ಕುರಿತು ವಿಮರ್ಶಿಸುವುದು ಕಡಿಮೆ. ಆದರೆ ಹೊಸ ತಲೆಮಾರಿನ ಮುಖ್ಯ ವಿಮರ್ಶಕರಾದ ಸುರೇಶ ನಾಗಲಮಡಿಕೆಯವರು ತಮ್ಮ ವಾರಿಗೆ ಬರಹಗಾರರ ನಡುವೆ ಭಿನ್ನ ಹಾದಿಯನ್ನು ಹುಡುಕಿಕೊಂಡಿರುವಂತೆ ಕಾಣುವ ಇವರು ವಿಮರ್ಶೆಯನ್ನು ಆಸಕ್ತಿಕರ ಕ್ಷೇತ್ರವಾಗಿ ಆರಿಸಿಕೊಂಡು, ಅದನ್ನು ಸೃಜನಶೀಲ ಚಟುವಟಿಕೆಯೆಂಬಂತೆ ಎಲ್ಲ ವಯೋಮಾನದ

ಬರಹಗಾರರನ್ನು ಒಳಗೊಳ್ಳುತ್ತ ತಮ್ಮ ವಿಮರ್ಶೆಯನ್ನು ಪ್ರಕಟಿಸಿದ್ದಾರೆ. 'ಮುತ್ತು ಬಂದಿದೆ ಕೇರಿಗೆ' ಎಂಬ ತಮ್ಮ ಸಂಶೋಧನಾ ಕೃತಿಯಲ್ಲಿ ಕನಕದಾಸರನ್ನು ಸಮಕಾಲೀನಕ್ಕೆ ಅರ್ಥೈಸುವ ಕೆಲಸವನ್ನು, ಕಾಣ್ಕೆ ಕಣ್ಕಟ್ಟು ಎಂಬ ತಮ್ಮ ಎರಡನೆ ಕೃತಿಯಲ್ಲಿ, ತಾತ್ವಿಕತೆ, ಕಾವ್ಯ ಮತ್ತು ಕೃತಿ ಪರೀಕ್ಷೆಗಳನ್ನು ನಡೆಸಿದ್ದಾರೆ. ವಿಷಯ ವೈವಿಧ್ಯತೆಯನ್ನೊಳಗೊಂಡ ಈ ಕೃತಿಯಲ್ಲಿ ಹಿರಿಯ-ಕಿರಿಯ ಲೇಖಕರ ಕೃತಿಗಳ ಬಗ್ಗೆ, ಆಯಾ ಕಾಲಘಟ್ಟದ ಸಾಂಸ್ಕೃತಿಕ, ಧಾರ್ಮಿಕ, ರಾಜಕಾರಣದ ಬಗ್ಗೆ ಗಂಭೀರವಾದ ಒಳನೋಟಗಳನ್ನು ಪ್ರಕಟಿಸಿದ್ದಾರೆ.

'ಪಂಪನ ನುಡಿಗಣಿ ಮತ್ತು ಸಮಕಾಲೀನ ದಂದುಗಳು' ವಿಮರ್ಶಾ ಲೇಖನ, ಬರಹಗಾರರ ಕೃತಿಗಳಿಗೆ ಪದಕೋಶಗಳು ಇರಬೇಕಾದ ತುರ್ತು ಕಾರಣಗಳು ಮತ್ತು ಆ ಕಾರಣಗಳಿಗೆ ಉತ್ತರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿದೆ. ಆಯಾ ಕಾಲಗಟ್ಟದ ಬರಹಗಾರರಿಂದ ಬಳಸಲ್ಪಟ್ಟಿರುವ ನುಡಿಗಳು ಆಯಾ ಸಾಮಾಜಿಕ, ರಾಜಕೀಯ, ಧಾರ್ಮಿಕ ಸಂದರ್ಭಗಳಲ್ಲಿನ ಘಟನೆಗಳ ಮೇಲೆ ಈ ಲೇಖನ ಬೆಳಕು ಚೆಲ್ಲುವುದರೊಂದಿಗೆ ವರ್ತಮಾನ ಸಂದರ್ಭದಲ್ಲಿನ ಇಂಥವೇ ವಿದ್ಯಮಾನಗಳಿಗೆ ಪ್ರತಿಕ್ರಿಯೆಯಂತಿರುತ್ತದೆ ಎಂಬುದನ್ನು ನುಡಿಗಳ ಬಳಕೆಯ ವಿಚಾರವನ್ನು ಉಲ್ಲೇಖಿಸುವುದರ ಮೂಲಕ ಖಚಿತವಾದ ತಾರ್ಕಿಕ ನಿಲುವಿಗೆ ತಂದು ನಿಲ್ಲಿಸುತ್ತದೆ. ಇನ್ನು, ಸಿದ್ಧರಾಮನ ವಚನಗಳ ಕುರಿತಾದ ಟಿಪ್ಪಣಿ ರೂಪದ ಮಾತುಗಳಿರುವ 'ಲಿಂಗಧ್ಯಾನಿ ಸಿದ್ಧರಾಮೇಶ್ವರ' ವಿಮರ್ಶಾ ಲೇಖನವು ಹನ್ನೆರಡನೇ ಶತಮಾನದ ಸಾಮಾಜಿಕ, ರಾಜಕೀಯ, ಧಾರ್ಮಿಕ ಚರಿತ್ರೆಯನ್ನು ಸಿದ್ಧರಾಮನ ವಚನಗಳ ಮೂಲಕವೇ ಅರಿತುಕೊಳ್ಳಲು ಸಾಹಿತ್ಯ ಮತ್ತು ಧಾರ್ಮಿಕ ತತ್ವಗಳನ್ನು ಏಕತ್ರಗೊಳಿಸಿ ಚಿಂತನೆಗಿಳಿಯುತ್ತದೆ. ಸಿದ್ಧರಾಮನು, ವರ್ತಮಾನವನ್ನು ಎದುರುಗೊಳ್ಳುವಾಗ ಎಲ್ಲಕಾಲಕ್ಕೂ ಇರುವ ನೈತಿಕತೆಯ ಪಾತಳಿಯನ್ನು ಮೀರಿದ ಕ್ರಿಯೆಗಳ ಮೂಲವನ್ನು ಹುಡುಕಲು ತನ್ನ ವಚನಗಳಲ್ಲಿ ಗುರುತನದ ಮಹಿಮೆಯ ಮುಖಾಂತರವೇ ತನ್ನ ದೃಷ್ಟಿಕೋನವನ್ನು ರೂಪಿಸಿಕೊಂಡಿರುವ ಬಗೆಯನ್ನು ಸುರೇಶ್ ಅವರು ಖಚಿತವಾಗಿ ಗುರುತಿಸಿದ್ದಾರೆ.

ಸಂಸ್ಕೃತಿ ವಿಮರ್ಶೆ ಎಂದು ಹೆಸರಿಸಬಹುದಾದ, 'ಕಾಡಿನ ಹುಡುಗ ಸುಬ್ರಹ್ಮಣ್ಯನ ಸುತ್ತ' ಲೇಖನ, "ಸುಬ್ರಹ್ಮಣ್ಯನ ಪೌರಾಣಿಕ ನೆಲೆಗಳನ್ನು ಗುರುತಿಸುತ್ತಲೇ ಆತನ ಚರಿತ್ರೆಗೆ ಮಡಿವಂತಿಕೆಯನ್ನು ಯಾಕಾಗಿ ಸೇರಿಸಿದರು ಎಂಬುದರ ಹಿಂದಿನ ಕಾರಣಗಳಿಗೆ ಉತ್ತರವನ್ನು ಹುಡುಕಲು ಪ್ರಯತ್ನಿಸುತ್ತದೆ ಈ ಮೂಲಕ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಡೆಸ್ನಾನ ಪದ್ಧತಿಯನ್ನು ಪರಂಪರೆಯಾಗಿ ರೂಪಿಸುವ ಮೂಲಕ ಅಸಮ ಜಾತಿಗಳ ನಡುವಿನ ಅಂತರವನ್ನು ಈಗಲೂ ಕಾಪಿಟ್ಟುಕೊಂಡು ಹೋಗುತ್ತಿರುವ ಮೂಲಭೂತವಾದಿಗಳು ನಮ್ಮ ಸಂವಿಧಾನವನ್ನೇ ಅಪಮಾನಿಸುತ್ತಿದ್ದಾರೆ"[3] ಎಂದು ಕಟುವಾಗಿ ಟೀಕಿಸುತ್ತದೆ.

ಸಮಕಾಲೀನ ಕನ್ನಡ ಕತೆಗಳನ್ನು ಕುರಿತ ಮಹತ್ವದ ಲೇಖನ 'ನುಗಡೋಣಿ ಕಥೆಗಳಲ್ಲಿ ಗ್ರಾಮಲೋಕ ಮತ್ತು ಜಾತಿಸಂಕರ' ಲೇಖನ, ಅಮರೇಶ ನುಗಡೋಣಿಯವರ

ಕಥೆಗಳನ್ನೊಳಗೊಂಡತೆ ಕನ್ನಡ ಕತೆಗಳಲ್ಲಿ ಬರುವ ಗ್ರಾಮಲೋಕದಲ್ಲಿನ ಅಸಮ ವರ್ಣಗಳ ನಡುವಿನ ಸಂಬಂಧ, ಮನುಷ್ಯರ, ಸಮುದಾಯಗಳ ಆಳದ ದುರಂತಗಳನ್ನು ವಿಷಾದದೊಂದಿಗೆ ಪ್ರಕಟಿಸುವ ಕ್ರಮವನ್ನು ಗುರುತಿಸುತ್ತದೆ. ಕನಕದಾಸ ಗಂಭೀರ ಅಧ್ಯಯನದ ಛಾಯೆಯನ್ನು ಹೊಂದಿರುವ 'ಹರಿದಾಸ ಪಂಥ: ಒಂದು ನೋಟ' ವಿಮರ್ಶಾ ಲೇಖನ, ಮಠದ ಅಂಗಳದಲ್ಲಿ ಕಾಣಿಸಿಕೊಂಡ ಹರಿದಾಸ ಪಂಥದ ಕೀರ್ತನೆಗಳು ಮಠದ ಅಂಗಳದಾಚೆ ಬಂದು ಕಾಲದ ಸಿದ್ಧಾಂತಗಳನ್ನು ಒಳಗು ಮಾಡಿಕೊಳ್ಳುತ್ತ ಹೇಗೆ ಜನಮುಖಿಯಾದವು ಎಂಬುದನ್ನು ಶೋಧಿಸುತ್ತದೆ.

ಹೊಸ ತಲೆಮಾರಿನ ಮತ್ತೊರ್ವ ಮುಖ್ಯ ವಿಮರ್ಶಕರಾದ ಅರುಣ್ ಜೋಳದ ಕೂಡ್ಲಿಗಿಯವರ ಬರಹಗಳ ಹಿಂದಿನ ಪ್ರೇರಣೆಗಳನ್ನು ಗಮನಿಸಿದರೆ, ಹೊಸ ತಲೆಮಾರಿನ ವಿಮರ್ಶಕ ಆದ್ಯತೆಗಳೇನೆಂಬುದನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಅವರ ಮೊದಲ ವಿಮರ್ಶಾ ಸಂಕಲನ 'ಕನಸೊಡೆದದ್ದೆ' ಕೃತಿಯ ಮುನ್ನುಡಿಯಲ್ಲಿ "ಈ ಪುಸ್ತಕ ನಾನು ಆಗಾಗ ಬರೆದ ವಿಮರ್ಶೆಯ ಟಿಪ್ಪಣಿಗಳನ್ನು ಒಟ್ಟುಗೂಡಿಸಿದ ರೂಪ. ಇಲ್ಲಿನ ಬರಹಗಳಲ್ಲಿ ನನ್ನನ್ನು ನಾನೆ ಒರೆಗೆ ಹಚ್ಚಿಕೊಳ್ಳುವ ನೆಲೆಯಿದೆ ಅಥವಾ ವಿಮರ್ಶೆಯ ಪಟ್ಟುಗಳನ್ನು ಕಲಿಯುವ ಕಸರತ್ತಿನ ಭಾಗವಾಗಿಯೂ ಈ ಬರಹಗಳನ್ನು ಗಮನಿಸಬಹುದು."[೨೪] ಅಪ್ಪರಮಟ್ಟಿಗೆ ಪ್ರಾಥಮಿಕ ಹಂತದ ಬರಹಗಳಿವೆಂದು ಪ್ರಾಮಾಣಿಕವಾಗಿ ಹೇಳುವ ಅವರು, ಮುಖ್ಯವಾಗಿ ನಾನೊಬ್ಬ ಬರಹಗಾರನಾಗಿ ನನ್ನ ಕಾಲಕ್ಕೆ ಅಗತ್ಯವಾದ ಕೆಲವು ಸಂಗತಿಗಳ ಕುರಿತು ಮಾತನಾಡಿದ ಅಕ್ಷರರೂಪಿ ದಾಖಲೆಗಳಿವು ಎನ್ನುತ್ತಾರೆ. ಆ ಮೂಲಕ ಸಮಕಾಲೀನ ವಿಮರ್ಶೆಯು ಏಕೆ ಸಾಹಿತ್ಯೇತರವಾಗಿದೆ ಎಂದು ಸ್ಪಷ್ಟಪಡಿಸುತ್ತಾರೆ.

ಮುಂದುವರೆದು, "ಇಲ್ಲಿನ ನನ್ನ ವಿಮರ್ಶೆಯ ಟಿಪ್ಪಣಿಗಳು ಸಾಹಿತ್ಯವನ್ನು ಬೆಲೆಗಟ್ಟುವ ತುರ್ತಿನಿಂದ ಬರೆದವಲ್ಲ, ಬದಲಾಗಿ ನನ್ನ ಓದು ಮತ್ತು ಆಂತರಿಕ ತಿಳಿವಿನ ಒತ್ತಡಗಳನ್ನು ಹೊರ ಹಾಕಲು, ನನ್ನ ತಲೆಮಾರಿನ ಜತೆ ಒಂದು ಆರೋಗ್ಯಕರ ಸಂವಾದ ಬೆಳೆಸಲು ಬರೆದವು. ಇಲ್ಲಿ ಹಿರಿಯರ ಜತೆ ಮುಖಾಮುಖಿ ಮಾಡಿದ ಬರಹಗಳಿವೆ, ಸಾಹಿತ್ಯಕ ವಾಗ್ವಾದಗಳಿಗೆ ಎದುರಾದ ಕಟು ಟಿಪ್ಪಣಿಗಳಿವೆ, ಅಂತೆಯೇ ಹೊಸ ತಲೆಮಾರಿನ ಸಾಹಿತ್ಯದ ಚಹರೆಗಳನ್ನು ಗುರುತಿಸುವ ಪ್ರಯತ್ನವಿದೆ. ಈ ಪುಸ್ತಕದಲ್ಲಿ ಒಟ್ಟಾದ ಬರಹಗಳ ಸಮಾನ ಎಳೆಯೆಂದರೆ, ತನ್ನ ಕಾಲದ ಸಂಕಟಗಳ ಮೂಲಕ ಸಾಹಿತ್ಯವನ್ನು ನೋಡುವ ಕ್ರಮವಿದೆ. ಅಂತೆಯೇ ಶುದ್ಧಾಂಗವಾಗಿ ಸಾಹಿತ್ಯವೆಂದರೆ ಅದು ಕೇವಲ ಸಾಹಿತ್ಯ ಮಾತ್ರವಲ್ಲದೆ, ವರ್ತಮಾನದ ವಿದ್ಯಮಾನಗಳಿಗೂ ನಂಟು ಬೆಸೆಯಬೇಕೆಂಬ ನಂಬಿಕೆ ಇದರ ಬೆನ್ನಾಗಿದೆ. ಇಲ್ಲಿ ಕೃತಿನಿಷ್ಠ ಚರ್ಚೆ ಸಾಮಾಜಿಕ ಆಯಾಮ ಪಡೆದಿದೆ. ಹಾಗಾಗಿ ಸಾಹಿತ್ಯಕ ಚಟುವಟಿಕೆಗಳನ್ನು ಜೀವಪರವಾಗಿಯೂ, ಸಾಮಾಜಿಕ ನ್ಯಾಯದ ನೆಲೆಯಲ್ಲಿಯೂ ಪ್ರಶ್ನಿಸಲು ಸಾಧ್ಯವಾಗಿದೆ. ಹೊಸತಲೆಮಾರಿನ ಸಾಹಿತ್ಯವನ್ನು ನೋಡುವ ದೃಷ್ಟಿಕೋನವೂ, ಹೊಸತಲೆಮಾರಿನ ವಿಮರ್ಶೆಯ ಮಾದರಿಯೂ ಒಂದರೊಳಗೊಂದು

ಬೆರೆತಿದೆ."[೨೫] ಎನ್ನುತ್ತಾರೆ. ಆ ಮೂಲಕ ಸಮಕಾಲೀನ ಸಾಹಿತ್ಯ ವಿಮರ್ಶೆಯ ಉದ್ದೇಶಗಳು ಮತ್ತು ಅದರ ವೈವಿಧ್ಯತೆಗಳಿಗೆ ಒಂದು ಮಟ್ಟದ ನಿರ್ದಿಷ್ಟ ಚೌಕಟ್ಟುಗಳನ್ನು ಗುರುತಿಸುತ್ತಾರೆ.

ಹೊಸ ತಲೆಮಾರಿನ ಮುಖ್ಯ ವಿಮರ್ಶಕರಲ್ಲಿ ಆನಂದ ಋಗ್ವೇದಿಯವರು ಒಬ್ಬರು. ತಳಮಳದ ಹಾದಿ ಕೃತಿಯಲ್ಲಿ ಅವರ ವಿಮರ್ಶೆಯ ಹೊಳಹುಗಳನ್ನು ಕಾಣಬಹುದು. ಹಿ. ಚಿ. ಬೋರಲಿಂಗಯ್ಯ, ಬಾಳಾಸಾಹೇಬ ಲೋಕಾಪುರ, ಮಹಾಶ್ವೇತಾದೇವಿ, ಎಸ್. ಎಸ್. ಹಿರೇಮಠ, ಸುರೇಂದ್ರನಾಥ್, ಎಂ. ವ್ಯಾಸ ಮುಂತಾದವರ ಪುಸ್ತಕಗಳನ್ನು ಲೇಖಕರು ವಿಮರ್ಶಿಸಿದ್ದಾರೆ. ಇವೆಲ್ಲ ಅಕಾಡೆಮಿಕ್ ಶಿಸ್ತಿನ ಬರಹಗಳು. ಆದರೂ, ಲೇಖಕರು ತಾವು ಒಬ್ಬ ಓದುಗ ಎಂಬ ವಿನಯದಿಂದಲೇ ಈ ಪುಸ್ತಕಗಳನ್ನು ಪ್ರವೇಶಿಸುತ್ತಾರೆ. ಒಂದು ತಾತ್ವಿಕ ಅಭಿಪ್ರಾಯಗಳಿಗೆ ಬರುತ್ತಾರೆ. ಪುಸ್ತಕದ ಮೂರನೇ ಭಾಗದಲ್ಲಿ ಲೇಖಕರು ವಿವಿಧ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ್ದು ಹಾಗೂ ಅವರ ಮುನ್ನುಡಿಗಳು ಇವೆ. ಇಂದಿನ ಕಾಲದ ಹಾಗೂ ಇಂದು ಬರೆಯುತ್ತಿರುವ ಲೇಖಕರ ತಳಮಳವನ್ನು ಸರಿಯಾಗಿ ಇವು ವ್ಯಕ್ತಪಡಿಸುತ್ತವೆ ಎಂದು ಹೇಳಬಹುದು.

ಕನ್ನಡ ಕಥಾ ಸಾಹಿತ್ಯವನ್ನು ಕುರಿತ ಇವರ ಮುಖ್ಯ ಕೃತಿಯಾದ 'ಕಥಾಸ್ವರೂಪ'ದಲ್ಲಿ ಲಯ, ಶ್ರದ್ಧೆ, ಹಸಿವು, ಸ್ತ್ರೀತ್ವ ಮತ್ತು ಅಸ್ಮಿತೆ ಎಂಬ ಕಲ್ಪನೆಗಳನ್ನಿಟ್ಟುಕೊಂಡು ಇದುವರೆವಿಗೂ ಹೆಚ್ಚು ಚರ್ಚೆಯಾಗದ ಕನ್ನಡ ಕತೆಗಳನ್ನು ಅಧ್ಯಯನ ಮಾಡಿದ್ದಾರೆ. 'ಲಯ' ಪರಿಕಲ್ಪನೆಯನ್ನಿಟ್ಟುಕೊಂಡು ರಾಘವೇಂದ್ರ ಪಾಟೀಲರ ಕತೆಗಳನ್ನೂ, 'ಶ್ರದ್ಧೆಯ'ಯ ಪರಿಕಲ್ಪನೆಯನ್ನಿಟ್ಟುಕೊಂಡು ಬೋಳುವಾರ ಮೊಹಮ್ಮದ್ ಅವರ ಕತೆಗಳನ್ನೂ, 'ಸ್ತ್ರೀತ್ವ'ದ ಮಾದರಿಗೆ ವೈದೇಹಿಯವರ ಕತೆಗಳನ್ನೂ, 'ಹಸಿವು' ಪರಿಕಲ್ಪನೆಯನ್ನಿಟ್ಟುಕೊಂಡು ಕುಂ. ವೀರಭದ್ರಪ್ಪನವರ ಕತೆಗಳನ್ನಿಟ್ಟುಕೊಂಡು ಮತ್ತು 'ಅಸ್ಮಿತೆ'ಯ ಪರಿಕಲ್ಪನೆಯನ್ನಿಟ್ಟುಕೊಂಡು ಜಯಂತ ಕಾಯ್ಕಿಣಿಯವರ ಕತೆಗಳನ್ನೂ ಅಧ್ಯಯನ ಮಾಡಿದ್ದಾರೆ. "ಸಮಷ್ಟಿಯ ಪ್ರಜ್ಞೆ ವ್ಯಕ್ತಿ ಬದುಕಿನ ಸಾಧ್ಯತೆಗಳನ್ನು ನಿರ್ವಹಿಸಿದಂತೆ, ಸಮಾಜದ ಮೂಲಭೂತ ಘಟಕವಾದ ಮನುಷ್ಯ ಏಕಕಾಲಕ್ಕೆ ಅದರ ಶ್ರೇಣೀಕರಣ, ವರ್ಗ, ಆರ್ಥಿಕ ಆಯಾಮ, ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿಯೂ ಸಮಾಜದ ಆಂತರಿಕ ನಿರೂಪಕನಾಗಿ ಸಮಾಜದ ಎಲ್ಲಾ ಸಾಧ್ಯತೆ ಮತ್ತು ಮಿತಿಗಳ ಬಗ್ಗೆ"[೨೬] ಜಾಗ್ರತನಾಗಿರುವ ಬಗ್ಗೆ ಇವರ ಅಧ್ಯಯನ ಗಮನ ಹರಿಸಿದೆ. ಕನ್ನಡ ಕಥನ ಸಾಹಿತ್ಯವನ್ನು ಹೊಸ ಒಳನೋಟಗಳ ಮೂಲಕ, ಸಿದ್ಧ ಅಭಿಪ್ರಾಯಗಳಿಗೆ ಜೊತು ಬೀಳದೆ, ವಿಭಿನ್ನ ಒಳನೋಟಗಳ ಮೂಲಕ ಕನ್ನಡ ಕತೆಗಳನ್ನು ಅರಿಯಲು ಪ್ರಯತ್ನಿಸಿದ್ದಾರೆ.

ಅಡಿಟಿಪ್ಪಣಿಗಳು

೧. ತಾರಿಣಿ ಶುಭದಾಯಿನಿ, ಹೆಡೆಯಂತಾಡುವ ಸೊಡರು, ರೂಪ ಪ್ರಕಾಶನ, ಮೈಸೂರು, ೨೦೧೧, ಮುನ್ನುಡಿ.

೨. ದಾಮೋದರ್ ಬಿ., ಆಯಾಮಗಳು, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೭೩ ಪುಟ – ೬೪

೩. ಆಶಾದೇವಿ ಎಂ. ಎಸ್., ಸದ್ಯ ಮತ್ತು ಶಾಶ್ವತ, ಅಂಕಿತ ಪುಸ್ತಕ, ಬೆಂಗಳೂರು, ೨೦೦೮ ಹಿನ್ನುಡಿ

೪. ಅಮೂರ ಜಿ. ಎಸ್., ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳುರು, ೧೯೯೩, ಮುನ್ನುಡಿ.

೫. ಅಮೂರ ಜಿ. ಎಸ್., ಭಾರತೀಯ ರಂಗಭೂಮಿ ಮತ್ತು ಗಿರೀಶ್ ಕಾರ್ನಾಡರ ನಾಟಕಗಳು ಒಂದು ವಿಮರ್ಶಾತ್ಮಕ ಅಧ್ಯಯನ, ಮನೋಹರ ಗ್ರಂಥಮಾಲಾ, ಧಾರವಾಡ ೨೦೦೮, ಪುಟ – ೧೮೪

೬. ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ – ೨, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩, ಪುಟ – ೫೨೬

೭. ವಿದ್ಯಾಶಂಕರ ಎಸ್. ಮತ್ತು ಡಾ. ಜಿ. ಎಂ. ಹೆಗಡೆ (ಸಂ) : ಸಹೃದಯ ಸಂವಾದ (ಕನ್ನಡ ವಿಮರ್ಶೆಯ ಪರಂಪರೆ) ಜಿ.ಎಸ್. ಆಮೂರ ಅಭಿನಂದನ ಗ್ರಂಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು–೪೦, ೨೦೦೫ ಪುಟ – ೩೬೭

೮. ರಾಘವೇಂದ್ರ ರಾವ್ ಎಚ್.ಎಸ್., 'ವಿಮರ್ಶೆಯ ಪಲ್ಲಟಗಳು', ಪ್ರಜಾವಾಣಿ , ೧೦–೦೪–೨೦೧೨

೯. ರಾಘವೇಂದ್ರ ರಾವ್ ಎಚ್.ಎಸ್., 'ರಾಮಚಂದ್ರನ್ ಸಿ. ಎನ್. ಅವರ ಸಾಹಿತ್ಯ ವಿಮರ್ಶೆ –ಕೆಲವು ಟಿಪ್ಪಣಿಗಳು', ಪುಸ್ತಕಪ್ರೀತಿ ಡಾಟ್‌ಕಾಮ್, ಮಾರ್ಚಿ ೨೪, ೨೦೧೩

೧೦. ರಾಜೇಂದ್ರ ಚೆನ್ನಿ, ಎಂದಿಗೂ ಹೊಸದು ಅಭಿರುಚಿ ಪ್ರಕಾಶನ, ಮೈಸೂರು, ಪುಟ – ೨೬೩

೧೧. ಅದೇ, ಪುಟ – ೨೬೫

೧೨.ವಿಜಯಶಂಕರ ಎಸ್. ಆರ್., 'ಎಚ್.ಎಸ್.ಆರ್. ವಿಮರ್ಶೆ', ವಿಜಯವಾಣಿ, ೧೫.೦೨.೨೦೧೫

೧೩.ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬, ಮುನ್ನುಡಿ.

೧೪.ಸುಮಿತ್ರಾಬಾಯಿ ಬಿ. ಎನ್., ಸರಹದ್ದುಗಳ ಆಚೆ–ಈಚೆ, ಇಳಾ ಪ್ರಕಾಶನ ಬೆಂಳೂರು. ೨೦೦೯. ಪುಟ – ೪೩

೧೫. ಗಿರಡ್ಡಿ ಗೋವಿಂದರಾಜ, ವಿಲಂಬಿತ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೭, ಮುನ್ನುಡಿ

೧೬.ಒಕ್ಕುಂದ ಎಮ್. ಡಿ., ಅಡಿಗರ ಕೋಮುವಾದಿ ಕಾವ್ಯ, ಸಂಚಯ,ಸೆಪ್ಟಂಬರ್ ೨೦೧೧, ಪುಟ ೩೮

೧೭.ಲಂಕೇಶ್ ಪಿ., ಸಾಹಿತಿ ಸಾಹಿತ್ಯ ವಿಮರ್ಶೆ, ಲಂಕೇಶ ಪ್ರಕಾಶನ, ಬೆಂಗಳೂರು, ೨೦೧೧, ಪುಟ ೨೫೧

೧೮.ಒಕ್ಕುಂದ ಎಮ್. ಡಿ., 'ಕೋಮುವಾದಿ ನೆಲೆ ಹಾಗೂ ಎಂ. ಗೋಪಾಲಕೃಷ್ಣ ಅಡಿಗರ ಮತ್ತೆ ಮೊಳಗಲಿ ಪಾಂಚಜನ್ಯ', ಸಂಪಾದಕೀಯ ಡಾಟ್‌ಕಾಮ್, ೦೯-೦೯-೨೦೧೧

೧೯.ನಾಗಭೂಷಣ್ ಡಿ. ಎಸ್., 'ದೇಶಕಾಲ ವಾಗ್ವಾದ', ಸಂಪಾದಕೀಯ ಡಾಟ್‌ಕಾಮ್, ಜುಲೈ - ೨೦೧೨

೨೦.ಬಸವರಾಜ ಹೂಗಾರ, 'ಮನುಷ್ಯನ ಭಾವಲೋಕಛಿದ್ರವಾಗಿದೆ; ಮನುಷತ್ವದ ಹುಡುಕಾಟ ಮುಂದುವರಿದಿದೆ' ಲಡಾಯಿಪ್ರಕಾಶನ ಬ್ಲಾಗ್‌ಸ್ಪಾಟ್, ಅಕ್ಟೋಬರ್ ೨೦೧೪, ಸಂದರ್ಶನ: ನಾಗರಾಜ್ ಹರಪನಹಳ್ಳಿ,

೨೧.ವಿನಯಾ ಒಕ್ಕುಂದ ; ಸ್ತ್ರೀವಾದ ಒಡೆದಿಡಲಿಕ್ಕಲ್ಲ' ಪ್ರಜಾವಾಣಿ, ೨೪-೦೭-೨೦೧೩

೨೨.ರಂಗನಾಥ ಕಂಟನಕುಂಟೆ, ಓದಿನ ಜಾಡು, ಲಡಾಯಿ ಪ್ರಕಾಶನ ೨೦೧೬, ಪುಟ - ೭೮

೨೩.ಸುರೇಶ ನಾಗಲಮಡಿಕೆ, ಕಾಣ್ಕೆ ಕಣ್ಕಟ್ಟು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೫; ಪುಟ - ೧೭೪

೨೪.ಆನಂದ ಋಗ್ವೇದಿ, ಕಥಾಸ್ವರೂಪ, ರೂಪ ಪ್ರಕಾಶನ, ಮೈಸೂರು, ೨೦೧೧ ಪುಟ - ೩೦೨

೨೫.ಅರುಣ್ ಜೋಳದ ಕೂಡ್ಲಿಗಿ, ಕನಸೊಡೆದೆದ್ದೆ, ದೇಸಿ ಪುಸ್ತಕ ಪ್ರಕಾಶನ, ೨೦೧೫, ಲೇಖಕರ ಮಾತು

೨೬.ಅದೇ,

ಅಧ್ಯಾಯ – ಏಳು

ಅಧ್ಯಯನದ ಫಲಿತಗಳು

ಸಾಹಿತ್ಯ ಮತ್ತು ವಿಮರ್ಶೆಯ ನಡುವಣ ಸಂಬಂಧವು ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧದಷ್ಟೆ ಪ್ರಮುಖವಾದುದಾಗಿರುತ್ತದೆ. ಒಂದು ಸಾಹಿತ್ಯ ಕೃತಿ ಸಮಾಜದ ನಡುವೆ ಬಂದಾಗ ಸಮಾಜ ಅದಕ್ಕೆ ಒಂದಲ್ಲಾ ಒಂದು ರೀತಿಯ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ ಎಂಬ ಸಂಗತಿಯಲ್ಲಿಯೇ ವಿಮರ್ಶೆಯ ಮೂಲ ಸೆಲೆಯನ್ನು ಕಾಣಬಹುದು. ಇಲ್ಲಿ 'ಸಮಾಜ' ಎಂದರೆ ಒಂದು ಅಮೂರ್ತ ಪರಿಕಲ್ಪನೆ ಎಂದು ನೋಡಬೇಕಾಗಿಲ್ಲ. ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ಯಾವ ಶಕ್ತಿಗಳು ಅಸ್ತಿತ್ವದಲ್ಲಿವೆ, ಯಾವ ಶಕ್ತಿಗಳು ಆ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಆಳುತ್ತವೆ ಹಾಗೂ ತನ್ನ ಯಜಮಾನಿಕೆಯನ್ನು ಪ್ರತಿಷ್ಠಾಪಿಸಲು, ತನ್ನ ಹಿತಾಸಕ್ತಿಗಳನ್ನು ಸಲಹಿಕೊಂಡು ಬರಲು ತನ್ನದ್ದೇ ಆದ ಮೌಲ್ಯಾದರ್ಶಗಳನ್ನು–ಸಂಸ್ಕೃತಿಯನ್ನು ತಮ್ಮ ಅಧೀನಕ್ಕೊಳಗಾದ ಜನತೆಯಲ್ಲಿ ನೆಡುತ್ತಾ ಹೋಗುತ್ತವೆ ಎಂಬ ಅಂಶಗಳು ಮುಖ್ಯವಾಗುತ್ತವೆ. ಈ ಕಾರಣಕ್ಕಾಗಿ ರಾಜಕಾರಣ ಮತ್ತು ಸಂಸ್ಕೃತಿಯ ನಡುವೆ ಯಾವಾಗಲೂ ಒಂದು ಅವಿನಾಭಾವ ಸಂಬಂಧ ಬೆಸೆದುಕೊಂಡಿರುತ್ತದೆ ಎಂಬ ಸಂಗತಿಯನ್ನು ಮರೆಯುವಂತಿಲ್ಲ.

ಇಂತಹ ಸಂದರ್ಭದಲ್ಲಿ ಸಾಹಿತ್ಯ ಯಾರಿಗಾಗಿ ಮತ್ತು ಏತಕ್ಕಾಗಿ ಸೃಷ್ಟಿಯಾಗಿದೆ ಎಂಬ ಪ್ರಶ್ನೆಗಳು ನಿರ್ಣಾಯಕವಾಗುವಂತೆಯೇ ವಿಮರ್ಶೆಯೂ ಯಾವ ಶಕ್ತಿಗಳ ನೆಲೆಯಿಂದ ಮೂಡಿಬರುತ್ತದೆ ಮತ್ತು ಯಾರ ಪರವಾಗಿದೆ ಎಂಬ ಪ್ರಶ್ನೆಗಳೂ ಮುಖ್ಯವಾಗುತ್ತವೆ. ಯಾಕೆಂದರೆ ಸಾಹಿತ್ಯವಾಗಲಿ, ವಿಮರ್ಶೆಯಾಗಲಿ ಶೂನ್ಯದಿಂದ ಹುಟ್ಟುವುದಿಲ್ಲ ಹಾಗೂ ಕೇವಲ ಭಾವಜನ್ಯ–ಬುದ್ಧಿಜನ್ಯ ಆಗಿರುವುದಿಲ್ಲ. ಬದಲಾಗಿ ಇವೆರಡೂ ಆಯಾ ಕಾಲದೇಶಗಳ ಸಾಂಸ್ಕೃತಿಕ ನೆಲೆಯಿಂದ ಜೀವ ಪಡೆಯುತ್ತವೆ ಹಾಗೂ ಈ ಮೂಲಕ ಸಾಹಿತಿ ಮತ್ತು ವಿಮರ್ಶಕ ಒಂದು ಕಾಲಘಟ್ಟದ ಸಾಂಸ್ಕೃತಿಕ ಜವಬ್ದಾರಿಯನ್ನು ನಿರ್ವಹಿಸುತ್ತಿರುತ್ತಾರೆ ಎಂದು ಗ್ರಹಿಸಿಕೊಳ್ಳಬೇಕಾಗಿದೆ.

ಕಳೆದ ದಶಕದ ವಿಮರ್ಶೆಯನ್ನು ಅಮೂಲಾಗ್ರವಾಗಿ ಪರಿಶೀಲಿಸಿದಾಗ ಇವತ್ತಿನ ವಿಮರ್ಶೆ ಸಾಹಿತ್ಯ ನಿರ್ವಚನದಾಚೆಗೆ ಸಮಕಾಲೀನ ರಾಜಕಾರಣದ ಅನಾಹುತಕಾರಿ ಬೆಳವಣಿಗೆಗಳನ್ನೂ, ಅದು ಕನ್ನಡ ಸಾಂಸ್ಕೃತಿಕ ಲೋಕವನ್ನು ಕಲುಷಿತಗೊಳಿಸುತ್ತಿರುವುದನ್ನೂ ವಿವರಿಸುತ್ತಿದೆ. ಸಮಕಾಲೀನ ಸಂದರ್ಭ ಹೆಚ್ಚು ಸಂಕೀರ್ಣವಾಗಿ ಸಾಮಾಜಿಕ ಮತ್ತು ಸಾಹಿತ್ಯಿಕ ಪ್ರಶ್ನೆಗಳನ್ನು ನಮ್ಮೆದುರಿಗೆ ಇಡುತ್ತಿದ್ದು ಅದಕ್ಕೆ ಉತ್ತರ ಕಂಡುಕೊಳ್ಳಬೇಕಾದ ಗಂಭೀರ ಜವಬ್ದಾರಿ ಇಂದಿನ ವಿಮರ್ಶೆಗಿದೆ.

ಕೃತಿಯೊಂದರ ಹೊಸ ನೋಟಕ್ರಮದಿಂದ ಅದರ ಬಹುಸ್ತರೀಯತೆಯನ್ನು ಗುರುತಿಸಬಹುದಾಗಿದ್ದು, ಅದರ ಬಹುಸಾಂಸ್ಕೃತಿಕತೆ, ಬಹುಭಾಷಿಕತೆಗಳ ಮೂಲಕ ಅದರ ಸುತ್ತಲಿನ ಲೋಕವನ್ನು ಹೊಸನೋಟಕ್ರಮದಿಂದ ಅರಿಯುವ ಸಾಧ್ಯತೆಗಳಿವೆ. ಸಧ್ಯ ಕನ್ನಡ ವಿಮರ್ಶೆ ಆ ಕಡೆಗೆ ತನ್ನ ಗಮನ ನೆಟ್ಟಿದೆ ಎಂದು ಹೇಳಬಹುದು. ಜೊತೆಗೆ, ಅಂದಿನಿಂದ ಇಂದಿನವರೆಗೆ ಸಾಹಿತ್ಯದಲ್ಲಿ ಉಳಿದುಕೊಂಡು ಬಂದಿರುವ ಕೆಲವು ನಂಬಿಕೆಗಳು, ಲಕ್ಷಣಗಳ ಜೊತೆಯಲ್ಲೇ ಒಟ್ಟು ಪರಿಸರದಲ್ಲಿ ಆಗಿರುವ ಬದಲಾವಣೆಗಳನ್ನೂ ಇಂದಿನ ವಿಮರ್ಶೆ ಸಾವಧಾನದಿಂದ ಪರಿಶೀಲಿಸಲು ಯತ್ನಿಸುತ್ತಿದೆ.

ಇಪ್ಪತ್ತೊಂದನೆ ಶತಮಾನದ ವಿಮರ್ಶೆ ತನ್ನ ಕೇಂದ್ರವನ್ನು ಒಡೆಯುವ ಪ್ರಯತ್ನ ಮಾಡುತ್ತಿದೆ. ಇದು ಆಧುನಿಕೋತ್ತರ ಚಿಂತನೆಯ ಪ್ರಭಾವವೂ ಹೌದು. ಆದರೆ ಎಂಬತ್ತರ ದಶಕದ ವಿಮರ್ಶೆಗೂ ಇವತ್ತಿನ ವಿಮರ್ಶೆಗೂ ಆಶಯದ ದೃಷ್ಟಿಯಿಂದ ಅಂತಹ ಹೇಳಿಕೊಳ್ಳುವಂತಹ ವ್ಯತ್ಯಾಸಗಳು ಗೋಚರವಾಗಿಲ್ಲ. ಜೊತೆಗೆ ಇಂದಿನ ವಿಮರ್ಶಾ ಮಾದರಿಗಳನ್ನು ಯಾವುದೇ ಒಂದು ನಿಶ್ಚಿತ ತಾತ್ವಿಕತೆ ಹಿನ್ನೆಲೆಯಲ್ಲಿ ಗ್ರಹಿಸಲಾಗುವುದಿಲ್ಲ. ಬದಲಿಗೆ ತಮ್ಮ ನಿಲುವಿಗೆ ಪೂರಕವಾದ ಹಲವು ಸಿದ್ಧಾಂತಗಳನ್ನು ಬರಹಗಳಲ್ಲಿ ಒಳಗೊಳ್ಳಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವಸಾಹತುವಾಗಿದ್ದ ಭಾರತವು ತನ್ನ ಮೇಲೆ ಯಜಮಾನ್ಯ ತೋರಿಸುವ ಪಶ್ಚಿಮದಿಂದ ಹಲವು ತತ್ವ ಸಿದ್ಧಾಂತಗಳನ್ನು ಅಳವಡಿಸಿ ಕೊಳ್ಳುತ್ತಿರುವುದರಲ್ಲಿ ಹಿಂದೆ ಬಿದ್ದಿಲ್ಲ ಆದ್ದರಿಂದ ಇವತ್ತಿನ ವಿಮರ್ಶೆ ನಿರ್ದಿಷ್ಟವಾಗಿ ಒಂದು ಸಿದ್ಧಾಂತಕ್ಕೆ ಬದ್ಧವಾಗದೆ ಹಲವು ಸಿದ್ಧಾಂತಗಳನ್ನು ತನ್ನ ಲಕ್ಷಣಗಳನ್ನಾಗಿ, ಪ್ರವೃತ್ತಿಗಳಾಗಿ ಪ್ರಕಟಿಸುತ್ತಿದೆ.

ಈ ಎಲ್ಲಾ ಹಿನ್ನೆಲೆಗಳ ನಡುವೆ ಹೊಸ ಶತಮಾನದ ಕನ್ನಡ ವಿಮರ್ಶೆಯ ಪ್ರವೃತ್ತಿಗಳು ಎಂಬ ನಿಬಂಧದಲ್ಲಿ ಕಳೆದ ದಶಕದಲ್ಲಿ ಕನ್ನಡದಲ್ಲಿ ಬಂದ ಸಾಹಿತ್ಯ ವಿಮರ್ಶೆಯ ಅಧ್ಯಯನದಿಂದ ಈ ಕೆಳಕಂಡ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

- ಇದುವರೆವಿಗೂ ಕೇವಲ ಸಾಹಿತ್ಯ ನಿಷ್ಠವಾಗಿದ್ದ ವಿಮರ್ಶೆ ಇಂದು ಸಮಾಜ/ಸಂಸ್ಕೃತಿಯ ಪ್ರಧಾನ ಕೇಂದ್ರದಲ್ಲಿ ನಿಂತು ಸಾಹಿತ್ಯವನ್ನೇ ಪ್ರಚೋದಿಸುತ್ತಿದೆ. ಜೊತೆಗೆ ತನ್ನ ಸ್ವರೂಪದಲ್ಲಿಯೂ ಗಂಭೀರ ಬದಲಾವಣೆಗಳನ್ನು ಮಾಡಿಕೊಂಡಿದೆ. ಒಮ್ಮೊಮ್ಮೆ ನವ ವಸಾಹತುಷಾಹಿ ಪ್ರವೃತ್ತಿಯ ವಿರುದ್ಧ ಮೂಡಿಬರುತ್ತಿರುವ ಸೃಜನಾತ್ಮಕ ಸಾಹಿತ್ಯವೇ ವಿಮರ್ಶೆಯ ಕಾರ್ಯವನ್ನು ನಿರ್ವಹಿಸುತ್ತಿದೆ ಎನಿಸುತ್ತದೆ. ಆದ್ದರಿಂದ ಇವತ್ತಿನ ವಿಮರ್ಶೆಯನ್ನು ಸೃಜನಶೀಲ ಸಾಹಿತ್ಯದ ಪ್ರತಿಕ್ರಿಯೆಯಾಗಷ್ಟೆ ಗ್ರಹಿಸುವಂತಿಲ್ಲ.
- ಸಾಮಾನ್ಯವಾಗಿ ಸಾಹಿತ್ಯ ಪ್ರಕಾರವನ್ನೇ ಪ್ರಧಾನವಾಗಿಟ್ಟಕೊಂಡು ವಿಮರ್ಶೆಯಲ್ಲಿ ತೊಡಗಿಕೊಳ್ಳುವ ಪ್ರವೃತ್ತಿ ಕನ್ನಡದಲ್ಲಿ ಅಷ್ಟಾಗಿಲ್ಲ. ಆದರೆ ಸಾಹಿತ್ಯ ಪ್ರಕಾರವನ್ನೇ ಮುಖ್ಯವಾಗಿಟ್ಟುಕೊಂಡು ವಿಮರ್ಶೆ ನಡೆಸಿದರೆ ಕೃತಿಯೊಂದರ ಪೂರ್ಣ ಪ್ರಮಾಣದ ಸತ್ವ ಪ್ರಕಟಗೊಳ್ಳಲು ಸಹಾಯಕವಾಗುತ್ತದೆ ಮತ್ತು ಮಾಮೂಲಿ ವಿಮರ್ಶೆಗಿಂತ ಹೆಚ್ಚು ಒಳನೋಟಗಳನ್ನು ನೀಡುವುದಕ್ಕೆ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ

ಇತ್ತೀಚಿನ ವಿಮರ್ಶೆಯಲ್ಲಿ ಸಾಹಿತ್ಯ ಪ್ರಕಾರಗಳನ್ನೆ ಪ್ರಧಾನವಾಗಿಟ್ಟುಕೊಂಡು ಅಧ್ಯಯನ ಮಾಡುವ ಪ್ರವೃತ್ತಿ ಕಂಡುಬರುತ್ತಿದೆ.

- ಸಾಹಿತ್ಯ ಪ್ರಕಾರಗಳನ್ನು ಕೇಂದ್ರೀಕರಿಸಿ ವಿಮರ್ಶೆ ಪ್ರಕಟವಾಗುತ್ತಿರುವಂತೆಯೇ ಲೇಖಕ ಕೇಂದ್ರಿತ ವಿಮರ್ಶೆ ಕ್ವಚಿತ್ತಾಗಿ ಕನ್ನಡದಲ್ಲಿ ಕಾಣಿಸಿಕೊಳ್ಳುತ್ತಿದೆ. ಮುಖ್ಯವಾಗಿ ಹಳಗನ್ನಡ ಕವಿಗಳು, ಕುವೆಂಪು, ಬೇಂದ್ರೆ, ತೇಜಸ್ವಿ ಮೊದಲಾದವರನ್ನು ಕುರಿತು ಲೇಖಕ ಕೇಂದ್ರಿತ ವಿಮರ್ಶೆ ಪ್ರಕಟಗೊಳ್ಳುತ್ತಿದೆ.
- ಪ್ರಜಾಪ್ರಭುತ್ವ, ಜ್ಯಾತ್ಯಾತೀತತೆ, ವೈಜ್ಞಾನಿಕ ಸಮಾಜವಾದದ ಆದರ್ಶಗಳನ್ನು ಜನತೆಯಲ್ಲಿ ಹರಡುವುದು ಮತ್ತು ಅಸ್ಪ್ರಶ್ಯತೆ, ಜಾತಿವಾದ, ಕೋಮುವಾದದ ಅಪಾಯಗಳನ್ನು ಸಂಘಟನಾತ್ಮಕವಾಗಿ ಎದುರಿಸುವುದು, ಮೌಢ್ಯತೆ, ಲಿಂಗ ಅಸಮಾನತೆ, ಸಾಮಾಜಿಕ–ಆರ್ಥಿಕ ಅಸಮಾನತೆಯ ಕುರಿತು ಜಾಗೃತಿ ಮೂಡಿಸುವುದು ಕನ್ನಡ ಸಾಹಿತ್ಯ ವಿಮರ್ಶೆಯ ಮೂಲಕ ನಡೆಯುತ್ತಿದೆ.
- ದಲಿತ–ಬಂಡಾಯ ಸಾಹಿತ್ಯದ ಏರುಗಾಲದಲ್ಲಿ ಮರೆಯಾದಂತಿದ್ದ ನವ್ಯ ವಿಮರ್ಶೆ ಇಂದು ಹೊಸ ಕಸುವಿನಿಂದಿಗೆ ಕನ್ನಡ ವಿಮರ್ಶಾ ಸಾಹಿತ್ಯವನ್ನು ಪ್ರವೇಶಿಸಿದೆ. ಅದರಲ್ಲೂ ಕನ್ನಡ ಕಾವ್ಯವನ್ನು ಕುರಿತು ಬರುತ್ತಿರುವ ವಿಮರ್ಶೆಯಲ್ಲಿ ನವ್ಯ ವಿಮರ್ಶೆಯ ಲಕ್ಷಣಗಳನ್ನು ಕಾಣಬಹುದು. ಇದನ್ನು ಹೊಸ ರೀತಿಯ ರೂಪಕಾತ್ಮಕ ವಿಮರ್ಶೆ ಎಂದು ಕರೆದು ಚರ್ಚಿಸಲಾಗಿದೆ.
- ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಮೊದಲಾದ ಸಮಸ್ಯೆಗಳ ಹಿನ್ನೆಲೆಗಳಿಂದ ವಿಮರ್ಶೆಯಲ್ಲಿ ತೊಡಗುತ್ತಿದ್ದ ಬಂಡಾಯ ವಿಮರ್ಶೆಯು ಇಂದು ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಸಮಸ್ಯೆಗಳ ಹಿನ್ನೆಲೆಗಳಿಂದ ಸಾಹಿತ್ಯ ವಿಮರ್ಶೆಯನ್ನು ಪ್ರವೇಶಿಸುತ್ತಿದೆ.
- ಕನ್ನಡ ವಿಮರ್ಶೆಯ ಮುಖ್ಯ ಧಾರೆ ಇವತ್ತಿನ ಯಾವುದೇ ಒಂದು ನಿರ್ದಿಷ್ಟ ವಿಮರ್ಶಾ ಸಿದ್ಧಾಂತಕ್ಕೆ ಕಟ್ಟುಬಿದ್ದಿಲ್ಲ. ಅನೇಕ ಸಿದ್ಧಾಂತಗಳು ಒದಗಿಸಿರುವ ಒಳನೋಟಗಳನ್ನು ಬಳಸಿಕೊಂಡು ಅದು ತನ್ನದೇ ಆದ ಒಂದು ಇಕ್ಲೆಕ್ಟಿಕ್ (ECLETIC) ಮಾದರಿಯನ್ನು ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಳ್ಳುತ್ತಿರುವಂತೆ ಕಾಣುತ್ತದೆ. ಇದರಲ್ಲಿ ಪಾಶ್ಚಾತ್ಯ ಮಾದರಿಗಳ ಜೊತೆಗೆ ದೇಶೀ ಮಾದರಿಗಳು ಸೇರಿಕೊಂಡಿವೆ.
- ಅತಿಯಾದ ಪರಿಭಾಷೆಗಳು ಮತ್ತು ಸಿದ್ಧಾಂತಗಳಿಂದ ಇವತ್ತಿನ ಕನ್ನಡ ವಿಮರ್ಶೆ ಬಿಡುಗಡೆ ಪಡೆಯಲು ಹವಣಿಸಿದೆ. ನವ್ಯದ ಸಂದರ್ಭದಲ್ಲಿದ್ದ 'ವಿಮರ್ಶೆಯನ್ನು ಪಂಡಿತಮಾನ್ಯ ಚಟುವಟಿಕೆ' ಎಂಬ ಹಣೆಪಟ್ಟಿಯಿಂದ ಬಿಡುಗಡೆ ಮಾಡುವ ತುರ್ತು ಹೊಸ ತಲೆಮಾರಿನಲ್ಲಿ ಕಾಣಿಸಿಕೊಂಡಿದೆ. ಸಾಹಿತ್ಯದ ವಿಮರ್ಶೆಯನ್ನು ಬೌದ್ಧಿಕ ಅರ್ಥವ್ಯಾಖ್ಯಾನದಿಂದ ಸಾಹಿತ್ಯಕ ಅನುಸಂಧಾನವನ್ನಾಗಿ ಬದಲಾಯಿಸಿ ಹಳೆಯ ಸಾಹಿತ್ಯಿಕ ಚಟುವಟಿಕೆಗಳಾದ ಸಂಪಾದನೆ, ತಾಳಮದ್ದಲೆ, ಟೀಕು, ಗಮಕ, ಹರಿಕತೆ, ಕೇಳಿಕೆ, ಪಾರಾಯಣ, ಅಧ್ಯಯನ, ಪಠಣ ಇತ್ಯಾದಿಗಳಿಂದ ಸ್ಫೂರ್ತಿಗೊಂಡು ಇಂದಿನ

ಅಗತ್ಯಗಳಿಗೆ ತಕ್ಕಂತೆ ನವೀನ ಅನುಸಂಧಾನಗಳನ್ನು ವಿಮರ್ಶೆಯಲ್ಲಿ ಉಂಟುಮಾಡಿಕೊಳ್ಳಬೇಕೆಂಬ ಆಲೋಚನೆ ಜಾಗ್ರತವಾಗಿದೆ.

- ಕೆಳಜಾತಿಯ ದಲಿತ ಮತ್ತು ಮಹಿಳಾ ಸ್ತರಗಳಿಂದ ಬಂದವರು ಇಂದು ಹೆಚ್ಚಾಗಿ ವಿಮರ್ಶೆಯನ್ನು ಬರೆಯತೊಡಗಿದ್ದಾರೆ. ಇವರಿಗೆ ಸಾಹಿತ್ಯದ ಅಧ್ಯಯನ, ವಿಮರ್ಶಾ ತತ್ವಗಳ ಅರಿವು ಮುಖ್ಯವಾಗಿರುವ ಬದಲು, ಸಾಹಿತ್ಯವನ್ನು ನೋಡುವ ಸಾಂಪ್ರದಾಯಿಕ ದೃಷ್ಟಿಕೋನದ ಜತೆಗೆ ಭಿನ್ನಮತ, ತಮ್ಮನ್ನು ನಿರಾಕರಿಸುವ, ಅಪಮಾನಿಸುವ ಸಾಹಿತ್ಯ ಕೃತಿಗಳ ಅಥವಾ ಲೇಖಕರ ಸಾಹಿತ್ಯದ ಜತೆಗೆ ತಾತ್ವಿಕ ಜಗಳ ಮುಖ್ಯವಾಗಿವೆ.

- ಕನ್ನಡ ವಿಮರ್ಶೆಯಲ್ಲಿ ಬಲಪಂಥೀಯ ಮತೀಯವಾದವು ಹೊಸತಲೆಮಾರಿನ ಕೆಲವು ವಿಮರ್ಶಕರಲ್ಲಿ ಕಾಣಿಸಿಕೊಳ್ಳುತ್ತಿದೆ. ಈ ಲಕ್ಷಣವು ಬ್ರಾಹ್ಮಣ ಲೇಖಕರಲ್ಲಿಯೇ ಕಾಣಿಸಿಕೊಂಡಿರುವುದು ಸಾಮಾಜಿಕವಾಗಿ ಒಂದು ಗಮನಾರ್ಹ ಸಂಗತಿ. ಆದರೆ ಎಲ್ಲ ಬ್ರಾಹ್ಮಣ ಸಮುದಾಯದಿಂದ ಬಂದ ವಿಮರ್ಶಕರು ಈ ದಿಶೆಯಲ್ಲಿ ಕಾರ್ಯ ಪ್ರವೃತ್ತರಾಗಿಲ್ಲ. ಇದನ್ನು ಪ್ರಕಟಿಸುತ್ತಿರುವವರಲ್ಲಿ ಜಿ. ಬಿ. ಹರೀಶ್ ಹಾಗೂ ಗಿರೀಶಭಟ್ ಅಜಕ್ಕಳ ಅವರು ಮುಖ್ಯರು.

- ಕನ್ನಡದಲ್ಲಿ ಈಗ ಹೊಸತಲೆಮಾರಿನವರು ಅಂತರ್ಜಾಲದ ಪತ್ರಿಕೆಗಳಲ್ಲಿ ಮತ್ತು ಬ್ಲಾಗುಗಳಲ್ಲಿ ಸಾಹಿತ್ಯ ವಿಮರ್ಶೆ ಪ್ರಕಟಿಸುತ್ತಿದ್ದಾರೆ. ಇದು ಮಾಧ್ಯಮದ ಹೊಸತನದ ಪ್ರಶ್ನೆ ಮಾತ್ರವಾಗಿಲ್ಲ; ಮುದ್ರಿತ ಸಾಹಿತ್ಯವನ್ನು ಓದುವ ವರ್ಗಕ್ಕಿಂತ ಭಿನ್ನವಾದ, ತಂತ್ರಜ್ಞಾನದ ಮೇಲೆ ಹಿಡಿತ ಮತ್ತು ಸೌಲಭ್ಯ ಇರುವ ಹೊಸ ವರ್ಗಕ್ಕಾಗಿ ಬರೆಯುವ ವಿಮರ್ಶೆಯಾಗಿದೆ.

- ಮೂರು-ನಾಲ್ಕು ಸಾಹಿತ್ಯ ಪಂಥಗಳು ಒಟ್ಟೊಟ್ಟಿಗೆ ಪ್ರಚಲಿತವಿದ್ದಾಗ, ಆಯಾ ಪಂಥಗಳಿಗೆ ವಿಶಿಷ್ಟವಾದ ವಿಮರ್ಶಾ ಪರಂಪರೆ ರೂಪಗೊಳ್ಳುತ್ತದೆ. ಪ್ರತಿಯೊಂದು ಪಂಥಕ್ಕೆ ಅದರದ್ದೆ ಆದ ವಿಮರ್ಶಾ ಧೋರಣೆ, ಪರಿಭಾಷೆಗಳು, ಪರಿಕರಗಳು ಏರ್ಪಟ್ಟಿರುತ್ತವೆ. ಕೆಲಮಟ್ಟಿಗೆ ಈ ಪರಿಭಾಷೆಗಳೇ ಇವತ್ತಿನ ಕನ್ನಡ ವಿಮರ್ಶೆಯ ವಿವಿಧ ಪ್ರವೃತ್ತಿಗಳಾಗಿ ಪ್ರಕಟವಾಗುತ್ತಿವೆ.

- ಬರವಣಿಗೆಯು ಪಿತೃವ್ಯವಸ್ಥೆಯ ಚರ್ವಿತಚರ್ವಣವಾಗದಂತೆ ಎಚ್ಚರ ವಹಿಸಿ ಕೇವಲ ಅನುಭವ ಪ್ರಾಮಾಣ್ಯವನ್ನೆ ಆಶ್ರಯಿಸಿದ ಮಹಿಳಾ ವಿಮರ್ಶೆಯು ಕಳೆದ ದಶಕದಲ್ಲಿ ಪ್ರಾಚೀನ ಕೃತಿಗಳನ್ನು ಭಿನ್ನವಾಗಿ ಓದುವ ಮೂಲಕ, ವಚನಗಳನ್ನು ಹೊಸದಾಗಿ ಅನುಸಂಧಾನ ಮಾಡಿಕೊಳ್ಳುವ ಮೂಲಕ, ಜನಪದ ಸಾಹಿತ್ಯದಲ್ಲಿರುವ ಹೆಣ್ಣುಗುಣಗಳನ್ನು ಅನಾವರಣ ಮಾಡಿಕೊಳ್ಳುವ ಮೂಲಕ, ಕನ್ನಡ ಸಾಹಿತ್ಯದ ಪ್ರಧಾನ ಪಠ್ಯಗಳನ್ನು ಪುನರೋದಿಗೆ ಒಳಪಡಿಸಿ ಹೊಸ ನೆಲೆಯಲ್ಲಿ ಮಹಿಳಾ ಪಾತ್ರಗಳನ್ನು ತನ್ನ ತಾತ್ವಿಕ ಕಥನಗಳಲ್ಲಿ ಕಂಡಿರಿಸಿಕೊಳ್ಳಲು ಪ್ರಯತ್ನಿಸಿತು. ಆ ಮೂಲಕ ಇದುವರೆಗಿನ ಮಹಿಳಾ ವಿಮರ್ಶೆಗಿಂತ ಭಿನ್ನವಾಗಿ ರೂಪಾಂತರ ಹೊಂದಿ ಈ ದಶಕದಲ್ಲಿ ಮಹಿಳಾ ವಿಮರ್ಶೆ ಪ್ರಕಟಗೊಂಡಿತು.

- ದಲಿತ ವಿಮರ್ಶೆಯಲ್ಲಿ, ಸಾಹಿತ್ಯದಲ್ಲಿ ಪ್ರಕಟವಾಗಿರುವ ಅನುಭವ, ಲೋಕದೃಷ್ಟಿ ಮತ್ತು ಸಂವೇದನೆಗಳು ಮುಖ್ಯವಾಗಿ ಆದ್ಯತೆಯನ್ನು ಪಡೆದವು. ಆದರೆ ಇವುಗಳ ಭರದಲ್ಲಿ ಬರೆಹವು ಕಲಾಕೃತಿಯಾಗಿ ಹೇಗೆ ಅಭಿವ್ಯಕ್ತಿಗೊಂಡಿವೆ ಎಂಬ ರೂಪದ ಪ್ರಶ್ನೆಯು ಪ್ರಮುಖವಾಗಲಿಲ್ಲ. ಇದು ಕೃತಿಯ ಆಶಯ ಮತ್ತು ಧೋರಣೆಯನ್ನು ಪ್ರಧಾನವಾಗಿರಿಸಿಕೊಂಡ ಎಲ್ಲ ವಿಮರ್ಶೆಗಳ ಸಮಸ್ಯೆಯಾಗಿದೆ. ಈ ವಿಧಾನವು ಒಂದು ಬಗೆಯಲ್ಲಿ ಸಾಹಿತ್ಯ ವಿಮರ್ಶೆಯ ಪರಿಕರಗಳನ್ನು ಬಳಸುವುದಕ್ಕಿಂತಲೂ ಸಮಾಜಶಾಸ್ತ್ರದ ಪರಿಕರಗಳನ್ನು ಹೆಚ್ಚು ಬಳಸತೊಡಗಿತು. ಇದರ ಜತೆಗೆ ಲೇಖಕರ ಅಥವಾ ಅವರ ಬರೆಹದಲ್ಲಿರುವ ವರ್ಗದ ಪ್ರಶ್ನೆಗಳೂ ಮಿಳಿತವಾದವು.
- ಜನಪದ ಪಠ್ಯಗಳನ್ನು ಸಹ ಲೋಕದೃಷ್ಟಿಯ ಮಾದರಿಯಲ್ಲಿ ನೋಡುವುದು ಕಳೆದ ದಶಕದಲ್ಲಿ ನಡೆದಿದೆ. ಈ ಮಾದರಿಯಲ್ಲಿ ಅನೇಕ ಸಂವೇದನಶೀಲವಾದ ವಿಮರ್ಶೆಗಳು ಬಂದಿವೆ. ಆದರೆ ಸಾಹಿತ್ಯಕ ಸಂವೇದನೆಯನ್ನು ಕಳೆದುಕೊಂಡಿದ್ದ ಈ ಮಾದರಿಯು ಬಲು ಬೇಗ ಜಡತೆಯ ಜಾಡಿಗೆ ಬಿದ್ದಿತು. ಈ ನೆಲೆಯ ವಿಮರ್ಶೆಯು ಇನ್ನೂ ಹೊಸತಲೆಮಾರಿನಲ್ಲಿ ಮುಂದುವರೆಯುತ್ತಿದೆ. ಅದರಲ್ಲೂ ದಲಿತ ಮತ್ತು ಮಹಿಳೆಯರ ವಿಮರ್ಶೆಯಲ್ಲಿ ಇದು ಎದ್ದು ಕಾಣುವುದು. ಇದು ಬರೆಯುವ ಲೇಖಕರ, ಅವರು ಬರೆದ ಬರೆಹಕ್ಕೆ ಸಾಮಾಜಿಕವಾದ ರಿಯಾಯಿತಿಯನ್ನು ಕೇಳುವಂತೆ, ಸಾಂಸ್ಕೃತಿಕವಾಗಿ ಅದನ್ನು ಸಮರ್ಥಿಸುವ ಮಾದರಿಯಲ್ಲಿ ಹುಟ್ಟತೊಡಗಿದೆ.
- ಸಾಹಿತ್ಯದ ಓದು ಸಂಸ್ಕೃತಿ ವಿಮರ್ಶೆಯಾಗುವ ಪ್ರಕ್ರಿಯೆಯ ಹಿಂದೆ ಸ್ಥಳೀಯವಾದ ಮತ್ತು ಆಂತರಿಕ ಒತ್ತಡಗಳಿರುವಂತೆ ಜಾಗತಿಕವಾದ, ಬಾಹ್ಯವಾದ ಪ್ರೇರಣೆ ಮತ್ತು ಒತ್ತಡಗಳೆರಡೂ ಕೆಲಸ ಮಾಡಿರುವುದನ್ನು ಗಮನಿಸಬಹುದು. ಆಧುನಿಕೋತ್ತರ ಚಿಂತನೆಗಳು; ವಸಾಹತುಶಾಹಿ ಮತ್ತು ನವವಸಾಹತುಶಾಹಿಯ ದಾಳಿಗಳು; ಸಾಂಸ್ಕೃತಿಕ ವಿಮರ್ಶೆಗೆ ಒತ್ತಡಗಳನ್ನು ಮತ್ತು ಪ್ರೇರಣೆಗಳನ್ನು ನೀಡಿವೆ. ಆಂತರಿಕವಾಗಿ ಕೆಳವರ್ಗಗಳು, ದಲಿತರು, ಮಹಿಳೆಯರು, ಅಲ್ಪಸಂಖ್ಯಾತ ಸಮುದಾಯಗಳು ಶೈಕ್ಷಣಿಕ ವಲಯವನ್ನು ಪ್ರವೇಶಿಸಿದ ತರುವಾಯ ಈ ಸಮುದಾಯಗಳಿಗೆ ಹಳೆಯ ಚಿಂತನೆಗಳಿಂದ ಹೆಚ್ಚ ಪ್ರಯೋಜನವಿಲ್ಲವೆನಿಸಿತು. ಅಲ್ಲದೆ ಆ ಚಿಂತನೆಗಳಿಂದ ಸಮಾಜವನ್ನು ಅರಿಯಲು ಸಾದ್ಯವಿಲ್ಲವೆನಿಸಿದಾಗ ಹೊಸ ಹೊಸ ಚಿಂತನೆಗಳಿಗೆ, ವಿಧಾನಗಳಿಗೆ ತುಡಿದಾಗ ಸಾಂಸ್ಕೃತಿಕ ವಿಮರ್ಶೆ ಸೂಕ್ತದಾರಿಯಾಗಿ ಕಾಣಿಸಿಕೊಂಡಿತು.
- ಇವಿಷ್ಟಲ್ಲದೆ ಇನ್ನೂ ಹಲವು ಪ್ರವೃತ್ತಿಗಳು ಕಳೆದ ದಶಕದ ವಿಮರ್ಶೆಯಲ್ಲಿ ಕಾಣಿಸಿಕೊಂಡಿದ್ದು ಭಿನ್ನ ಬಗೆಯ ಅಧ್ಯಯನಗಳಿಂದ ಅವುಗಳನ್ನು ಶೋಧಿಸಬೇಕಾಗಿದೆ. ಮುಖ್ಯವಾಗಿ ಕಳೆದ ದಶಕದಲ್ಲಿ ಮೂಡಿಬಂದಿರುವ ಸೃಜನಶೀಲ ಸಾಹಿತ್ಯದ ಮೇಲೆ ಇನ್ನೂ ಗಂಭೀರವಾದ ವಿಮರ್ಶೆ ಹೆಚ್ಚಾಗಿ ಮೂಡಿಬಂದಿಲ್ಲ. ಬದಲಿಗೆ ಕಳೆದ ದಶಕದ ವಿಮರ್ಶೆ ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯವನ್ನು ಕುರಿತು ಬಂದಿರುವುದೇ ಹೆಚ್ಚು. ಆದ್ದರಿಂದ ಕಳೆದ ದಶಕದ ಸೃಜನಶೀಲ ಸಾಹಿತ್ಯದ ಮೇಲಿನ ವಿಮರ್ಶೆ, ಅದರಲ್ಲೂ ಹೊಸದಾಗಿ

ಬರವಣಿಗೆ ಆರಂಭಿಸಿರುವ ವಿಮರ್ಶಕರ ಬರಹಗಳನ್ನು ಅಧ್ಯಯನ ಮಾಡುವುದರಿಂದ ಹೊಸ ಒಳನೋಟಗಳನ್ನು, ಪ್ರವೃತ್ತಿಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ಉಪಸಂಹಾರ: ಗುರಿಯಿಲ್ಲದ ಹಿಂಸಾಪರತೆ, ಜಾಗತೀಕರಣ, ವ್ಯಾಪಾರೀಕರಣಗಳ ಅವಕಾಶವಾದ, ಹುಸಿ ಮತ್ತು ದಿಟಗಳ ನಡುವಿನ ಅಂತರವನ್ನೇ ಅಳಿಸಿಹಾಕಿರುವ ಕಲುಷಿತ ಅಲೋಚನಾಕ್ರಮ, ಸೂಕ್ಷ್ಮವಾಗಿ ಮೊಳಕೆ ಒಡೆಯುತ್ತಿರುವ ಜಾತೀಯತೆ, ಇವೆಲ್ಲ ಹುಟ್ಟಿಸುತ್ತಿರುವ ಆತಂಕ, ಕಳವಳ ಇವತ್ತಿನ ವಿಮರ್ಶಾ ಬರಹಗಳ ಹಿಂದಿದೆ. ಒಂದು ದೃಷ್ಟಿಯಲ್ಲಿ ವಿಮರ್ಶಕನೂ ಸೃಷ್ಟಿಶೀಲ ಸಾಹಿತಿಗಳ ದಾರಿಯಲ್ಲೇ ನಡೆಯುತ್ತಿರುವ ಪಯಣಿಗ. 'ವಿಮರ್ಶೆ ನಮ್ಮ ಸುತ್ತಲಿನ ಬದುಕು ಮತ್ತು ಸಮಾಜಗಳನ್ನು ಕಾಣುವ, ತಿಳಿದುಕೊಳ್ಳುವ, ಅದರ ಒಳಸುಳಿಗಳನ್ನು ಗ್ರಹಿಸುವ ಉಪಕರಣ'ವೆಂದು ತಿಳಿದು ವಿಮರ್ಶೆ ಬರೆಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸಮಾಜದ ಚಲನಶೀಲತೆಗೆ ಮತ್ತು ಬದುಕಿನ ವಿಕಾಸಕ್ಕೆ ಪೂರಕವಾಗುವ ಹಾಗೂ ಪ್ರೇರಕವಾಗುವ ಕ್ರಿಯೆಯಲ್ಲಿ ಸಾಹಿತ್ಯಕ್ಕಿರುವಷ್ಟೇ ಹೊಣೆ ಸಾಹಿತ್ಯ ವಿಮರ್ಶೆಗೂ ಉಂಟು. ಇಂಥ ಕ್ರಿಯೆಯಲ್ಲಿ ತನ್ನನ್ನು ಗುರುತಿಸಿಕೊಂಡಾಗಲೇ ವಿಮರ್ಶೆಗೆ ಹೊಸ ಶಕ್ತಿ ಮತ್ತು ಹೊಸ ಧೋರಣೆಗಳು ಸಂಚಯಿತವಾಗುತ್ತವೆ. ಮೌಲ್ಯ ಸಂಘರ್ಷಣೆಯ ಸಂದರ್ಭದಲ್ಲಿ ಶೋಷಣೆ ಮತ್ತು ಹೋರಾಟ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗುತ್ತದೆ. ಸಾಹಿತ್ಯ ವಿಮರ್ಶೆ ಇಂಥ ಘಟ್ಟದಲ್ಲಿ ಎರಡು ರೀತಿಯ ಕಾರ್ಯನಿರ್ವಹಣೆಯನ್ನು ಹೊತ್ತುಕೊಳ್ಳುತ್ತದೆ. ಒಂದು ಸಾಹಿತ್ಯಿಕ ವಿಚಾರಗಳಿಗೆ ಕಲಾತ್ಮಕ ನಿಲುವುಗಳಿಗೆ ಸಂಬಂಧಪಟ್ಟಂತೆ ಹಳೆಯ ಪರಿಕಲ್ಪನೆಗಳನ್ನು ಒಡೆದು ಅವುಗಳಲ್ಲಿ ಬದಲಾವಣೆಯನ್ನು ತರುವುದರ ಜೊತೆಗೆ ಜನ ಸಮುದಾಯದಲ್ಲಿ ಹೊಸ ಕಲಾತ್ಮಕ ಅಭಿರುಚಿಯನ್ನು ಬೆಳೆಸುವುದು, ಎರಡನೆಯದಾಗಿ, ಸಾಹಿತ್ಯ ವಿಮರ್ಶೆ ಸಾಂಸ್ಕೃತಿಕವಾಗಿ ಒಂದು ಸಾಧನವೂ ಆಗಿರುವುದರಿಂದ ಯಜಮಾನ ಸಂಸ್ಕೃತಿಯೊಳಗಿನ ಪ್ರತಿಗಾಮೀ ವಿಚಾರ–ಭಾವನೆಗಳ ವಿರುದ್ಧ ಹೋರಾಡುವುದರ ಜೊತೆಗೆ ಪ್ರಗತಿಪರ ಆಲೋಚನೆಗಳನ್ನು ಬಿತ್ತುತ್ತಾ ಹೋಗುವುದು. ಈ ಎರಡೂ ಕೆಲಸಗಳನ್ನು ಇವತ್ತಿನ ಕನ್ನಡ ವಿಮರ್ಶೆ ಜವಬ್ದಾರಿಯಿಂದ ನಿರ್ವಹಿಸಿಕೊಂಡು ಹೋಗುತ್ತಿದೆ.

ಪರಾಮರ್ಶನ ಗ್ರಂಥಗಳು

೧. ಅಕ್ಷರ ಕೆ. ವಿ., ಅಂತಃಪಠ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೧

೨. ಅನಂತಮೂರ್ತಿ ಯು. ಆರ್., ವಾಲ್ಮೀಕಿಯ ನೆವದಲ್ಲಿ, ಅಭಿನವ ಪ್ರಕಾಶನ ಬೆಂಗಳೂರು, ೨೦೦೬

೩. ಅನಂತಮೂರ್ತಿ ಯು. ಆರ್., ಋಜುವಾತು, ಅಭಿನವ ಪ್ರಕಾಶನ ಬೆಂಗಳೂರು, ೨೦೦೭

೪. ಅನಂತಮೂರ್ತಿ ಯು. ಆರ್., ಮಾತು ಸೋತ ಭಾರತ, ಅಭಿನವ ಪ್ರಕಾಶನ ಬೆಂಗಳೂರು, ೨೦೦೭

೫. ಅನಂತಮೂರ್ತಿ ಯು. ಆರ್., ಸದ್ಯ ಮತ್ತು ಶಾಶ್ವತ, ಅಂಕಿತ ಪುಸ್ತಕ, ಬೆಂಗಳೂರು, ೨೦೦೮

೬. ಅಮರೇಶ ನುಗಡೋಣಿ, ತತ್ವಪದ ಸಾಹಿತ್ಯ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೪

೭. ಅಮರೇಶ ನುಗಡೋಣಿ, ನುಡಿದಂದುಗ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೧.

೮. ಅರವಿಂದ ಮಾಲಗತ್ತಿ, (ಸಂ) ಕನ್ನಡ ವಿಮರ್ಶೆಯ ಮಾರ್ಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ೨೦೦೪

೯. ಅಶೋಕ ಟಿ. ಪಿ., ಸಾಹಿತ್ಯ ಸಂಬಂಧ, ವಸಂತ ಪ್ರಕಾಶನ, ಬೆಂಗಳೂರು, ೨೦೦೮.

೧೦.ಅಶೋಕ ಟಿ. ಪಿ., ಸಾಹಿತ್ಯ ಸಮೃದ್ಧಿ, ಅಂಕಿತ ಪುಸ್ತಕ, ಬೆಂಗಳೂರು, ೨೦೧೩

೧೧. ಅಶೋಕ ಟಿ. ಪಿ., ವೈದೇಹಿ ಕಥನ, ಅಕ್ಷರ ಪ್ರಕಾಶನ, ಶಿವಮೊಗ್ಗ, ೨೦೧೩

೧೨.ಅಶೋಕ ಟಿ. ಪಿ., ಪುಸ್ತಕ ಸನ್ನಿಧಿ, ವಸಂತ ಪ್ರಕಾಶನ, ಬೆಂಗಳೂರು, ೨೦೧೩

೧೩.ಅಲ್ಲಮಪ್ರಭು ಬೆಟ್ಟದೂರು, ಸಹಜ ವಿಮರ್ಶೆ, ಬಸವ ಪ್ರಕಾಶನ, ಗುಲಬಗಾ, ೨೦೧೧

೧೪.ಆಮೂರ ಜಿ.ಎಸ್., ಕಥನ ಶಾಸ್ತ್ರ , ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

೧೫. ಆಮೂರ ಜಿ.ಎಸ್., ಸೀಮೋಲ್ಲಂಘನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೨.

೧೬.ಆಮೂರ ಜಿ.ಎಸ್., ನಿಂದ ಹೆಜ್ಜೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೪.

೧೭.ಆಮೂರ ಜಿ.ಎಸ್., ಆಧುನಿಕ ಕನ್ನಡ ವಿಮರ್ಶೆ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೮.

೧೮.ಆಶಾದೇವಿ ಎಮ್. ಎಸ್. ಸ್ತ್ರೀಮತವನುತ್ತರಿಸಲಾಗದೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೬

೧೯.ಆಶಾದೇವಿ ಎಮ್. ಎಸ್., ನಡುವೆ ಸುಳಿವಾತ್ಮ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೧
೨೦.ಕವಿತಾ ರೈ, ಕಥನ ರಾಜಕಾರಣ, ದಶ ಪ್ರಕಾಶನ, ಬೆಂಗಳೂರು, ೨೦೧೬
೨೧.ಕಾಳೇಗೌಡ ನಾಗಾವಾರ, ಸೃಜನಶೀಲ ವೈಚಾರಿಕತೆ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೮
೧೯.ಕೀರ್ತಿನಾಥ ಕುರ್ತುಕೋಟಿ : ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೧
೨೦.ಕುಮುದ ಎನ್., ಕನ್ನಡ ನವೋದಯ ಕಾವ್ಯ ವಿಮರ್ಶೆಯ ಮೇಲೆ ಪಾಶ್ಚಾತ್ಯ ವಿಮರ್ಶೆಯ ಪ್ರಭಾವ, ಚೇತನ ಬುಕ್ ಹೌಸ್, ಮೈಸೂರು, ೨೦೦೬
೨೧.ಕೇಶವಶರ್ಮ ಕೆ., ನೀಲನಕ್ಷೆ (ಕನ್ನಡ ವಿಮರ್ಶೆ: ಇಟ್ಟ ಹೆಜ್ಜೆ ತೊಟ್ಟ ರೂಪ), ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೨
೨೨.ಕೇಶವಶರ್ಮ ಕೆ., ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮
೨೩.ಕೃಷ್ಣಮೂರ್ತಿ ಎಮ್. ಜಿ., ಕೃತಿ ಸಂಸ್ಕೃತಿ, ಋಜುವಾತು ಪ್ರಕಾಶನ, ಮೈಸೂರು, ೧೯೯೪
೨೪.ಗಣಪತಿ ಬಾಳುಗೋಡು, ಪ್ರಾಚೀನ ಕನ್ನಡ ಗದ್ಯ ಕೃತಿಗಳ ಸಾಂಸ್ಕೃತಿಕ ಅಧ್ಯಯನ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೧೦
೨೫.ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ ೧ ಮತ್ತು ೨ ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩
೨೬.ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ ೩ ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೨
೨೭.ಗಿರಡ್ಡಿ ಗೋವಿಂದರಾಜ, ಪ್ರಮಾಣು, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭
೨೮.ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ; ಸಣ್ಣಕತೆ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯
೨೯.ಗಿರಡ್ಡಿ ಗೋವಿಂದರಾಜ, ವಿಲಂಬಿತ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೭
೩೦.ಗಿರಡ್ಡಿ ಗೋವಿಂದರಾಜ, ಓದುವ ದಾರಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೨
೩೧.ಗೋವಿಂದರಾಜ ತಳಕೋಡ, ಕನ್ನಡ ಸಾಹಿತ್ಯ ವಿಮರ್ಶೆಗೆ ಡಾ. ಜಿ. ಎಸ್. ಆಮೂರವರ ಕೊಡುಗೆ, ಚಿನ್ಮಯ ಪ್ರಕಾಶನ, ಧಾರವಾಡ, ೨೦೧೧
೩೨.ಚಂದ್ರಶೇಖರ ಕಂಬಾರ, ದೇಶೀಯ ಚಿಂತನ, ಅಂಕಿತ ಪುಸ್ತಕ, ಬೆಂಗಳೂರು, ೨೦೦೪

೩೩.ಚಂದ್ರಶೇಖರ ಕಂಬಾರ, ತುದಿ ಇರದ ದಾರಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭.

೩೪.ಚಂದ್ರಶೇಖರ ನಂಗಲಿ, ಈಗಳೆ ಸಾಧ್ಯ, ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ, ಬೆಂಗಳೂರು, ೨೦೧೦

೩೫.ಚಂದ್ರಶೇಖರ ನಂಗಲಿ, ಮಾರ್ಕ್ಸ್‌ವಾದಿ ವಿಮರ್ಶೆ, ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೧೯೯೫

೩೬.ಚಲಪತಿ ಆರ್. ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೦

೩೭.ಚಲಪತಿ ಆರ್. ನಮ್ಮದೇ ತಿಳಿವಿನ ದಾರಿಯಲ್ಲಿ, ಪಲ್ಲವ ಪ್ರಕಾಶನ, ೨೦೧೨.

೩೮.ತಾರಿಣಿ ಶುಭದಾಯಿನಿ, ಹೆಡೆಯಂತಾಡುವ ಸೊಡರು, ರೂಪ ಪ್ರಕಾಶನ, ಮೈಸೂರು, ೨೦೧೧,

೩೯.ತಾರಿಣಿ ಶುಭದಾಯಿನಿ, ಗಳಿಗೆ ಬಟ್ಟಲು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೨

೪೦.ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ : ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಬೆಂಗಳೂರು ೧೯೯೪

೪೧.ದಂಡಪ್ಪ ಎಚ್. ಮತ್ತು ಬಿ. ಎನ್. ಸುಮಿತ್ರಾಬಾಯಿ (ಸಂ) : ಸುವರ್ಣ ಸಾಹಿತ್ಯ ವಿಮರ್ಶೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೦೬

೪೨.ದೇವನೂರು ಮಹಾದೇವ, ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೨

೪೩.ದೇವಯ್ಯ ಹರವೆ : ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೯೧

೪೪.ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪.

೪೫.ನಟರಾಜ್ ಹುಳಿಯಾರ್, ಗಾಳಿ ಬೆಳಕು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೧.

೪೬.ನಟರಾಜ್ ಹುಳಿಯಾರ್, ಇಂತಿ ನಮಸ್ಕಾರಗಳು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೪

೪೭.ನಾಗಭೂಷಣಸ್ವಾಮಿ ಓ. ಎಲ್. : ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ, ಬೆಂಗಳೂರು, ೧೯೯೮,

೪೮.ನಾಗರಾಜ ಡಿ. ಆರ್. ಸಂಸ್ಕೃತಿ ಕಥನ, ಅಗ್ರಹಾರ ಕೃಷ್ಣಮೂರ್ತಿ(ಸಂ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೪೯.ನಾಗಭೂಷಣ ಡಿ. ಎಸ್. ರೂಪರೂಪಗಳನು ದಾಟಿ, ನೆಲಮನೆ ಪ್ರಕಾಶನ, ೨೦೧೩

೫೦.ನಾಗರತ್ನಕುಮಾರಿ ಜಿ.ಎಸ್., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮

೫೧. ನಾಯಕ ಜಿ. ಎಚ್. ಸ್ಥಿತಿಪ್ರಜ್ಞೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭

೫೨.ನಾರಾಯಣ್ ಕೆ. ಕ್ಯಾಸಂಬಳ್ಳಿ (ಸಂ)., ಹಂಗಿಲ್ಲದ ಅಂಗಳದಲಿ, ಕಾಲುದಾರಿ ಪ್ರಕಾಶನ, ಬೆಂಗಳೂರು, ೨೦೧೪

೫೩.ನಾರಾಯಣ ಕೆ. ವಿ., ತೊಂಡುಮೇವು, ಕಂತೆ ೧, ೨ & ೩, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, ೨೦೧೦

೫೪.ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಪುಸ್ತಕ ಪ್ರಕಾಶನ, ಮೈಸೂರು. ೧೯೮೩

೫೫.ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು. ೨೦೦೯

೫೬.ಪೂರ್ಣಚಂದ್ರ ತೇಜಸ್ವಿ, ಹೊಸ ವಿಚಾರಗಳು, ಪುಸ್ತಕ ಪ್ರಕಾಶನ, ಮೈಸೂರು. ೨೦೧೧

೫೭.ಪೂರ್ಣಚಂದ್ರ ತೇಜಸ್ವಿ, ಮಾಯಾಲೋಕ, ಪುಸ್ತಕ ಪ್ರಕಾಶನ, ಮೈಸೂರು. ೧೯೮೩

೫೮.ಪ್ರಭುಸ್ವಾಮಿ ಮಠ ಸಿ. ವಿ., ವಿಮರ್ಶೆಯ ವಿನ್ಯಾಸ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೬

೫೯.ಬಸವರಾಜ ಕಲ್ಗುಡಿ, ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧

೬೦.ಬಸವರಾಜ ಕಲ್ಗುಡಿ, ಮೈಯೇ ಸೂರು ಮನವೇ ಮಾತು, ಅಭಿನವ ಪ್ರಕಾಶನ, ಬೆಂಗಳೂರು, ೨೦೧೩

೬೧.ಬಸವರಾಜ ಸಬರದ, ಕನ್ನಡ ಸಾಹಿತ್ಯ ವಿಮರ್ಶೆ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೬೨.ಬಂಜಗೆರೆ ಜಯಪ್ರಕಾಶ, ಪಿಳ್ಳಂಗೋವಿ, ಕಿಟಕಿ ಪ್ರಕಾಶನ, ಮೈಸೂರು, ೨೦೦೯

೬೩.ಮಣಿಪಾಲ ಆರ್. ಕೆ. ವಿಮರ್ಶೆಯ ಸವಾಲು, ಸಂವಾದ ಪ್ರಕಾಶನ, ಮಣಿಪಾಲ, ೨೦೦೬

೬೪.ಮನು ವಿ. ದೇವದೇವನ್, ಪೃಥ್ವಿಯಲ್ಲೊದಗಿದ ಘಟವು...ಕರ್ನಟಕದ ನಿನ್ನೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೯

೬೫.ಮನು ಚಕ್ರವರ್ತಿ ಎನ್. \ಅನು: ಎಲ್. ಈ. ಮೀರಾ, ಬಹುಮುಖ, ಡಿ. ಆರ್. ನಾಗರಾಜ್ ನೆನಪಿನ ಅಕ್ಷರ ಚಿಂತನ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೯

೬೬.ಮಲ್ಲಿಕಾ ಘಂಟಿ, ದಲಿತ ಸಾಹಿತ್ಯ ಚಳುವಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮.

೬೭.ಮಾಸ್ತಿ ವೆಂಕಟೇಶ ಅಯ್ಯಂಗಾರ್. ವಿಮರ್ಶೆ (ಸಮಗ್ರ ಸಂಪುಟ) ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು, ೧೯೨೬

೬೮.ಮೊಗಳ್ಳಿ ಗಣೇಶ್, ತಕರಾರು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೦೮

೬೯.ರಹಮತ್ ತರೀಕೆರೆ, ಇಲ್ಲಿ ಯಾರೂ ಮುಖ್ಯರಲ್ಲ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೭೦.ರಹಮತ್ ತರೀಕೆರೆ, ಕತ್ತಿಯಂಚಿನ ದಾರಿ. ಅಭಿನವ ಪ್ರಕಾಶನ, ಬೆಂಗಳೂರು, ೨೦೦೬

೭೧.ರಹಮತ್ ತರೀಕೆರೆ(ಸಂ), ಮಾತು ತಲೆಯೆತ್ತುವ ಬಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೭೨.ರಹಮತ್ ತರೀಕೆರೆ, (ಸಂ) ಹೊಸ ತಲೆಮಾರಿನ ತಲ್ಲಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೭೩.ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮

೭೪.ರಹಮತ್ ತರೀಕೆರೆ, ಕನ್ನಡ ಸಾಹಿತ್ಯ ವಾಗ್ವಾದಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

೭೫.ರಹಮತ್ ತರೀಕೆರೆ, ಚಿಂತನೆಯ ಪಾಡು, ಅಂಕಿತ ಪುಸ್ತಕ, ೨೦೧೦

೭೬.ರಹಮತ್ ತರೀಕೆರೆ, ನೇತುಬಿದ್ದ ನವಿಲು, ಲಂಕೇಶ್ ಪ್ರಕಾಶನ, ಬೆಂಗಳೂರು, ೨೦೧೩

೭೭.ರವಿಕುಮಾರ ನೀಹ, ನೆರಳಿಲ್ಲದ ಕಾಯ, ಕಿಟಕಿ ಪ್ರಕಾಶನ, ಮೈಸೂರು, ೨೦೧೩

೭೮.ರವಿಕುಮಾರ ನೀಹ, ಪುಸ್ತಕ ವಿಮರ್ಶಾ ಕಥನ, ಕಿಟಕಿ ಪ್ರಕಾಶನ, ಮೈಸೂರು, ೨೦೧೧

೭೯.ರವಿ ಚಲವಾದಿ, ಪ್ರಾಚೀನ ಕನ್ನಡ ಸಾಹಿತ್ಯ – ಸಂಘರ್ಷ, ದೇಶಿ ಪ್ರಕಾಶನ, ೨೦೦೯.

೮೦.ರಾಜೇಂದ್ರ ಚೆನ್ನಿ, ಅಸಮಗ್ರ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೦

೮೧.ರಾಜೇಂದ್ರ ಚೆನ್ನಿ, ಅರಿವಿನ ನೆಲೆಗಳು, ಲಡಾಯಿ ಪ್ರಕಾಶನ, ಗದಗ, ೨೦೧೭

೮೨.ರಾಜೇಂದ್ರ ಚೆನ್ನಿ, ಎಂದಿಗೂ ಹೊಸತು, ಅಭಿರುಚಿ ಪ್ರಕಾಶನ, ಮೈಸೂರು, ೨೦೧೪

೮೩.ರಾಜೇಂದ್ರ ಚೆನ್ನಿ, ಸದ್ಯದ ಹಂಗು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೩

೮೪.ರಾಮಚಂದ್ರನ್ ಸಿ. ಎನ್., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೨

೮೫.ರಾಮಚಂದ್ರನ್ ಸಿ. ಎನ್., ಪರಂಪರೆ–ಪ್ರತಿರೋಧ, ಮಲ್ಲಾಡಿಹಳ್ಳಿ ಪ್ರಕಾಶನ ೨೦೦೨

೮೬.ರಾಮಚಂದ್ರನ್ ಸಿ. ಎನ್, ಸಂವಾದ, ಪ್ರಿಯದರ್ಶಿನಿ ಪ್ರಕಾಶನ, ೨೦೦೪.

೮೭.ರಾಮಚಂದ್ರನ್ ಸಿ. ಎನ್., ಪ್ರಮಾಣ ಮತ್ತು ಪರಿಪ್ರೇಕ್ಷ್ಯ, ಸುಭಾಷ್ ಸ್ಟೋರ್, ಬೆಂಗಳೂರು, ೨೦೦೮.

೮೮.ರಾಮಚಂದ್ರನ್ ಸಿ. ಎನ್., ಹೊಸ ಮಡಿಯ ಮೇಲೆ ಚದುರಂಗ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೪

೮೯.ರಾಮಚಂದ್ರಪ್ಪ ಬರಗೂರು, ಸಾಹಿತ್ಯ ಮತ್ತು ರಾಜಕಾರಣ, ಸಮತಾ ಪ್ರಕಾಶನ, ಹುಬ್ಬಳ್ಳಿ, ೧೯೮೧

೯೦.ರಾಮಚಂದ್ರಪ್ಪ ಬರಗೂರು, ಅನುಸಂಧಾನ, ಅನುಸಂಧಾನ, ಅಂಕಿತ ಪ್ರಕಾಶನ, ೨೦೧೩

೯೧.ರಾಮಲಿಂಗಪ್ಪ ಟಿ. ಬೇಗೂರು, ಸಾಹಿತ್ಯ ವಿಮರ್ಶೆ–೨೦೧೭, ಕನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೧೭

೯೨.ರಂಗನಾಥ ಕಂಟನಕುಂಟೆ, ಓದಿನ ಜಾಡು, ಲಡಾಯಿ ಪ್ರಕಾಶನ, ಗದಗ, ೨೦೧೬

೯೩.ಲತಾ ಮೈಸೂರು, ಬಸವಣ್ಣನ ಕಲ್ಯಾಣ ಹುಡುಕುತ್ತಾ..., ಅಭಿನವ, ಬೆಂಗಳೂರು, ೨೦೧೧

೯೪.ಲಕ್ಷ್ಮಿನಾರಾಯಣ ಭಟ್ಟ ಎನ್. ಎಸ್, ಕನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, ೨೦೧೪

೯೫.ಲಿಂಗಪ್ಪ ಗೋನಾಳ, ಡಿ. ಆರ್. ನಾಗರಾಜರ ಸಾಹಿತ್ಯಿಕ ಚಿಂತನೆಗಳು, ಶರಣು ಪ್ರಕಾಶನ, ಗೋನಾಳ, ೨೦೧೦

೯೬.ವಿಜಯಾ, ರಂಗಸಾಂಗತ್ಯ, ಇಳಾ ಪ್ರಕಾಶನ, ಬೆಂಗಳೂರು, ೨೦೧೨

೯೭.ವಿಜಯಶಂಕರ ಎಸ್.ಆರ್., ಒಳದನಿ, ಸಾಗರ್ ಪ್ರಕಾಶನ, ಬೆಂಗಳೂರು, ೨೦೦೦

೯೮.ವಿಜಯಶಂಕರ ಎಸ್.ಆರ್. (ಸಂ), ಸಾಹಿತ್ಯ ವಿಮರ್ಶೆ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೨

೯೯.ವಿಜಯಶಂಕರ ಎಸ್.ಆರ್., ಅಪ್ರಮೇಯ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೫

೧೦೦. ವಿದ್ಯಾಶಂಕರ ಎಸ್. ಮತ್ತು ಡಾ. ಜಿ. ಎಂ. ಹೆಗಡೆ (ಸಂ) : ಸಹೃದಯ ಸಂವಾದ (ಕನ್ನಡ ವಿಮರ್ಶೆಯ ಪರಂಪರೆ) ಜಿ.ಎಸ್. ಅಮೂರ ಅಭಿನಂದನ ಗ್ರಂಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೫

೧೦೧. ವೀರಣ್ಣ ದಂಡೆ, ಜನಪದ ಕಾವ್ಯಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪

೧೦೨. ಶಂಕರ್ ಎಮ್. ಕನ್ನಡದಲ್ಲಿ ಪ್ರಾಯೋಗಿಕ ವಿಮರ್ಶೆಯ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

೧೦೩. ಶಾಂತಿನಾಥ ದೇಸಾಯಿ, ನವ್ಯ ಸಾಹಿತ್ಯ ದರ್ಶನ, ಸಪ್ನ ಬುಕ್ ಹೌಸ್,

ಬೆಂಗಳೂರು, ೨೦೦೪
೧೦೪. ಶಿವರಾಮ ಪಡಿಕ್ಕಲ್, ನಾಡು ನುಡಿಯ ರೂಪಕ, ಮಂಗಳೂರು ವಿಶ್ವವಿದ್ಯಾಲಯ, ೨೦೦೧.
೧೦೫. ಶಿವಾನಂದ ಎಸ್, ವಿಮರ್ಶೆಯ ಸವಾಲುಗಳು, ಚಿಂತನ ಪುಸ್ತಕ, ಬೆಂಗಳೂರು, ೨೦೧೧
೧೦೬. ಶೇಷಗಿರಿರಾವ್ ಎಲ್. ಎಸ್., (ಸಂ.) ದಶವಾರ್ಷಿಕ ವಿಮರ್ಶೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೬.
೧೦೭. ಶ್ರೀನಿವಾಸಮೂರ್ತಿ ಕಾ.ವೆಂ., ಕನ್ನಡ ಸಾಹಿತ್ಯ; ತತ್ವ ಮತ್ತು ವಿಮರ್ಸೆ ಕೆಲವು ನೆಲೆಗಳು, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು, ೨೦೧೦
೧೦೮. ಸತ್ಯನಾರಾಯಣ ಎಚ್. ಎಸ್., ಸಾಹಿತ್ಯ ವಿಮರ್ಶೆ–೨೦೧೬, ಕನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೧೭
೧೦೯. ಸಬಿಹಾ ಭೂಮಿಗೌಡ, ಮಹಿಳಾ ಸಾಹಿತ್ಯ, ಕನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೭.
೧೧೦. ಸುಮಿತ್ರಾಬಾಯಿ ಬಿ. ಎನ್., ವಿಚಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫
೧೧೧. ಸುಮಿತ್ರಾಬಾಯಿ ಬಿ. ಎನ್., ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯
೧೧೨. ಸುರೇಶ ನಾಗಲಮಡಿಕೆ, ತಕ್ಕ ಮಣ್ಣಿನ ತೇವಕ್ಕಾಗಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೫
೧೧೩. ಸುರೇಶ ನಾಗಲಮಡಿಕೆ, ಕಾಣ್ಕೆ ಕಣ್ಕಟ್ಟು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೫
೧೧೪. ಹಳ್ಳಿಕೇರಿ ಎಫ್.ಟಿ./ ರವೀಂದ್ರನಾಥ ಕೆ., ದಶಕದ ಕನ್ನಡ ಸಾಹಿತ್ಯ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨
೧೧೫. ಹಿರೇಮಠ ಆರ್.ಸಿ., ಸಾಹಿತ್ಯ ಸಂಸೃಷ್ಟಿ, ಶೋಭಾ ಗ್ರಂಥಮಾಲಾ, ಬೆಳಗಾವಿ, ೧೯೫೧,
೧೧೬. ಹೆಗಡೆ ಜಿ. ಎಂ., ವಿಮರ್ಶಾ ವಿಹಾರ, ರಂಜನಾ ಪ್ರಕಾಶನ, ನವೋದಯ ನಗರ, ಧಾರಾವಾಡ ೨೦೧೨
೧೧೭. ಹೆಗಡೆ ಜಿ. ಎಂ., ಸಾಹಿತ್ಯ ಮತ್ತು ಸಹೃದಯತೆ, ರಂಜನಾ ಪ್ರಕಾಶನ, ನವೋದಯ ನಗರ, ಧಾರಾವಾಡ ೧೯೯೬

ದಿನ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಅಂತರ್ಜಾಲ ತಾಣಗಳು

ದಿನ ಪತ್ರಿಕೆಗಳು

- ಪ್ರಜಾವಾಣಿ, ವಿಜಯಕರ್ನಾಟಕ, ಕನ್ನಡ ಪ್ರಭ, ವಿಜಯವಾಣಿ

ಮಾಸಪತ್ರಿಕೆಗಳು

- ಹೊಸತು, ಮಯೂರ, ಸಂವಾದ

ಸಾಹಿತ್ಯ ಪತ್ರಿಕೆಗಳು

- ಸಂಕ್ರಮಣ, ದೇಶಕಾಲ, ಅರುಹು-ಕುರುಹು, ಸಂಚಯ, ಶೋಧ, ಅಭಿವ್ಯಕ್ತಿ ಇತ್ಯಾದಿ

ಅಂತರ್ಜಾಲ ತಾಣಗಳು

- ಅವಧಿ, ಅನಿಕೇತನ, ಸಂಪದ, ಟಿಪ್ಪಣಿಪುಸ್ತಕ, ಕಣಜ, ಲಡಾಯಿಪ್ರಕಾಶನ, ನಮ್ಮಬನವಾಸಿ, ಜಾನಪದಲೋಕ, ಸಂಪಾದಕೀಯ, ನಿಲುಮೆ, ಓದು ಬಜಾರ್, ಸಖೀಗೀತ ಇತ್ಯಾದಿ